Karnataka State Archives,
(Departmental Library)
Accession No. 48.36 (B)
Date..............................

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE THIRTY-FOURTH DAY

OF THE

SEVENTH SESSION

FRIDAY, 25TH MARCH 1966

Vol. IV—No. 6

4836 (A)

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1966

Price: 25 Paise

CONTENTS

PAGES

Speaker's Statement *re*: the Questions in the List for the day ... 247

Starred Questions and Answers ... 247—255

Questions for answers on the day (but not taken up) ... 256—258

Leave of Absence to Sri M. Y. Ghorpade—(Granted) ... 258—259

Papers laid on the Table—

Notification No. HD 51 TMT 66, dated 16th February 1966 issued under the Mysore Motor Vehicles Taxation Act, 1957 ... 259

Member's Representation— ... 259—260

Budget Estimates for 1966-67—Demands for Grants—

Demand No.

14—25. Supplies and Disposals ...
16—27. Scientific Departments ...
24—35. Industries ...
44—96. Capital Outlay on Industrial and Economic Development ... (Voted) 260—316

4—11. Taxes on Vehicles ...
23—34. Co-operation ...
26—38. Labour and Employment ...
39—71. Miscellaneous —(Debate not concluded) ... 317—343

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-SIXTH DAY

OF THE

SEVENTH SESSION

MONDAY, 28TH MARCH 1966

Vol. IV—No. 8

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1966

Price: 25 Paise.

CONTENTS

	PAGES
Starred Questions and Answers ...	433—451
Questions for answers on the day (but not taken up) ...	451—452
Calling Attention to a matter of urgent public importances *re:* the Discussions held by the Chief Minister with the Central Minister regarding Construction of the Upper Krishna Project ...	452—453
Papers laid on the Table—	
Second List of Unstarred Questions and Answers ...	453
Unstarred Questions and Answers ...	453—473
Budget Estimates for 1966-67—Demands for Grants—	
Demand No.	
20—31. Agriculture ...	474—525
38—70. Forest ...	
51-119. Capital Outlay on Forests ... —(Debate not concluded)	

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-SEVENTH DAY

OF THE

SEVENTH SESSION

TUESDAY, 29TH MARCH 1966

Vol. IV—No. 9

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1966

Price: 25 Paise

CONTENTS

PAGES

Papers laid on the Table—

Third List of Unstarred Questions and Answers ... 527

Unstarred Questions and Answers ... 527—538

Letter from late Sri V. C. Pavate's son (Announcement)... 538

Member's Representation ... 538—540

Budget Estimates for 1966-67—Demands for Grants—

Demand No.			
20—31.	Agriculture ...	(Voted)	540—611
38—70.	Forest ...		
51—119.	Capital Outlay on Forests ...		
2—9.	Land Revenue ...		
7—14.	Stamps ...		
8—15.	Registration Fees ...		
22—33.	Animal Husbandry ...		
33—64.	Famine Relief ...		
42—92.	Payment of Compensation to Land-holders, etc., on the abolition of Zamindari System ...		

Mysore Stamp (Amendment) Bill, 1966 ...
Mysore Urban Development Boards Bill, 1966...
Mysore Industrial Areas Development Bill, 1966
Mysore Entertainment Tax (Amendment) Bill, 1966 ...
Mysore Motor Vehicles (Taxation on Passengers and Goods).(Amendment) Bill, 1966 ...
(Introduced) 575—576

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-EIGHTH DAY

OF THE

SEVENTH SESSION

WEDNESDAY, 30TH MARCH 1966

Vol. IV—No. 10

BANGALORE :

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1966

Price: 25 Paise.

CONTENTS

	PAGES
Starred Questions and Answers ...	613—634
Short Notice Question and Answer ...	634—636
Questions for answers on the day (but not taken up) ...	636—638
Condolence Reference *re*: the Demise of Sri B. M. Shamanna Gowda, Ex-M.L.A. and Sri Y. Dharmappa, Ex-M.L.C. ...	638
Calling Attention to a Matter of urgent Public Importance	638
Papers laid on the Table :—	
Fourth list of Unstarred Questions and Answers ...	639
Unstarred Questions and Answers ...	639—654
Mysore Appropriation (No. 4) Bill, 1966—(Introduced) ...	654
Business of the House ...	654
Mysore Appropriation (No. 4) Bill, 1966—(Passed) ...	655—673
Mysore Agricultural Produce Markets Bill, 1962 as reported by the J.S.C.—(Motion to consider—not concluded) ...	673—678

MYSORE LEGISLATIVE ASSEMBLY

Friday, 25th March 1966.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR SPEAKER (SRI B. VAIKUNTA BALIGA, B.A., B.L.) in the Chair.

Speaker's Statement *re:* Questions in the list for the Day

MR. SPEAKER.—Before I call upon Members to put the Questions, I want to suggest one thing. According to the practice prevailing in the House of Commons and perhaps also in the Lok Sabha, if a particular Member finds it not convenient to put his Question on any particular day on account of other pre-occupations, he is at liberty to make a request for its postponement because it is he that wants information. If a Question is put behind his back and information is furnished behind his back, perhaps he may not be able to clarify the position. One difficulty that arises is, we print questions and answers and circulate them. If a request comes after a Question is sent for being printed it cannot be taken out and I would therefore request the Members that if they know well in advance that they will not be present on a particular day, they may inform me in advance, so that I can have the question taken away from the Press even before it is printed. Even otherwise, that being an inherent right of the Member to have it postponed to suit his convenience, I have to respect that. That would also help me to see that a Question, which has become ripe after so much of pains and study, does not become frittered away by either the absence of the Member or on account of its lapsing, not being reached. That is a matter on which I would like all the Members to think over and tell me what should be done.

STARRED QUESTIONS

(to which oral answers were given)

MR. SPEAKER.—Now Question No. 3. Sri T. Madiah Gowda has pointed out to me that reply to (*b*) is 'Action has been taken to complete all the incomplete works'. He wants to know what kind of action.

† SRI ALUR HANUMANTHAPPA.—Action is taken to complete them on a phased programme.

MR. SPEAKER.—It could be more clear. It could be amplified. I am holding it over. Next question.

Steps taken to save Existing Crops

*Q.—107. SRI K. LAKKAPPA (Hebbur).—

Will the Government be pleased to state :—

(a) when the Government took the decision regarding saving of existing crops in the State to combat famine conditions ;

(b) the immediate action taken by the authorities to save the existing crops ;

(c) how much crops have been saved till now ?

A.—SRI S. NIJALINGAPPA (Chief Minister) [on behalf of SRI G. NARAYANA GOWDA (Minister for Agriculture)].—

(a) In October last.

(b) (1) Additional allotments were given to the Divisiona Commissioner, Director of Agriculture and the Mysore State Electricity Board for purchase and supply of pumpsets both Diesel and Electrical.

(2) Rules for the issue of pumpsets, both Diesel and Electrical, were simplified to avoid procedural delays in making available pumpsets to the ryots.

(c) Crops in about 2,200 acres have been saved.

ಶ್ರೀ ಕೆ. ಲಕ್ಕಪ್ಪ.—2200 ಎಕರೆ ಬೆಳೆಯನ್ನು ನೀವು ಉಳಿಸಿದ್ದೀರಿ ; ಇದಕ್ಕೆ ಎಷ್ಟು ಹಣವನ್ನು ಸರ್ಕಾರ ಖರ್ಚು ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೇ ಆ ವಿಷಯ ತಿಳಿಯುವುದು ಬಹಳ ಕಷ್ಟ. ಎಷ್ಟೆಷ್ಟು ಖರ್ಚು ಆಗಿದೆ ಎನ್ನತಕ್ಕಂಥಾದ್ದು ಇದು ಕಂಟಿನ್ಯೂಯಸ್ ಪ್ರೊಸೆಸ್ ಆದುದರಿಂದ ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಎಲೆಕ್ಟ್ರಿಕ್ ಪಂಪುಸೆಟ್ಸ್ ಡೀಸಲ್ ಪಂಪುಸೆಟ್ಸ್ ರಿಪೇರ್ಸ್ ಡೀಪನಿಂಗ್ ಆಫ್ ವೆಲ್ಸ್ ಇವುಗಳನ್ನೆಲ್ಲಾ ಬಳಸಲಾಗಿದೆ. ಇವಕ್ಕೆಲ್ಲ ಎಷ್ಟೆಷ್ಟು ಖರ್ಚಾಗಿದೆ ಎಂಬ ಲೆಕ್ಕಗಳ ತಪಶೀಲುಗಳು ಸರ್ಕಾರಕ್ಕೆ ಬರಬೇಕಾದರೆ ಇನ್ನು 2-3 ತಿಂಗಳು ಬೇಕು.

SRI K. LAKKAPPA.—Has it come to the notice of the Government that the decision of the Government has not been implemented in time in several districts such as Tumkur District to save the existing crops due to the dereliction of duty by Tahasildars and Assistant Commissioners ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಬಂದಿರುವ ವರ್ತಮಾನದ ಪ್ರಕಾರ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ, ಸಾಕಷ್ಟು ಫಸಲು ಉಳಿಸಿದ್ದಾರೆ. ತುಮಕೂರಿನಲ್ಲಿ ಅನೇಕ ಅಧಿಕಾರಿಗಳು ಕೆಲಸ ಮಾಡಿದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ.

---

† Indicates that the remarks or speeches have not been revised by the member concerned

Sri K. LAKKAPPA.—Has the Hon'ble Chief Minister visited Tumkur where derelication of duty was caused by the officials ? Even where wells were dug, rates have not been settled and coolies have not been paid. They are unable to settle even the small matter of giving suitable rates to the coolies. On account of that, the wells that have been dug have been wasted and they have been in a dilapidated condition, So the officers have not discharged their duties properly. Will the Hon'ble Chief Minister visit the spot immediatly ?

ಶ್ರೀ ಎಸ್. ನಿಜಲಿಂಗಪ್ಪ.—ಅಸೆಂಬ್ಲಿ ಸೆಷನ್ ಮುಗಿದ ತಕ್ಷಣ ಮಾನ್ಯ ಸದಸ್ಯರು ಕರೆದು ಕೊಂಡು ಯಾವ ಯಾವ ಸ್ಥಳ ತೋರಿಸುತ್ತಾರೋ ಅಲ್ಲಿಗೆ ಹೋಗುತ್ತೇವೆ.

Mr. SPEAKER.—The chair is not satisfied with the supplementary. Supplementaries are intended to elicit information. 'Will the Chief Minister pay a visit,' is not asking for any information.

Sri K. LAKKAPPA.—The Hon ble Chief Minister refuted the allegation that I have made. Because I have to prove, I asked the Chief Minister to visit the place. If the Chief Minister has got that impression from his officers, it is not correct. I would like to show him and if he sees that place, he would be impressed.

Mr. SPEAKER.—The Hon'ble Member is at liberty to invite him for tea or dinner but that cannot be done during Question Hour.

Sri S. NIJALINGAPPA.—Of course it does not arise as a supplementary. Because the Hon'ble Member was so anxious, I said I would visit.

ಶ್ರೀ ಸಿದ್ದಯ್ಯ ಕಾಶೀಮಠ್.—ರೈತರಿಗೆ ಕ್ರಿಮಿಕೀಟಗಳ ಬಾಧೆ ಹೆಚ್ಚಾಗಿರುವುದರಿಂದ ಔಷಧಿ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತಿರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ತಾಲ್ಲೂಕಿನಲ್ಲಿ ಆಯಿಲ್ ಇಂಜಿನ್ ಅಕ್ಸೆಸರೀಸ್ ಮತ್ತು ಸಣ್ಣ ಪುಟ್ಟ ಸಾಮಾನುಗಳು ಇಲ್ಲದೆ ಕೆಲವು ಸಮಯದಿಂದ ನಿಂತುಹೋಗಿದೆ. ಅದ್ದರಿಂದ 600 ಎಕರೆ ಮೇಲೆ ಇದ್ದ ಕಾರು ರಾಗಿ ಒಣಗಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದ ಗಮನಕ್ಕೆ ಬಂದಿಲ್ಲ. ಹಾಗೆ ಏನಾದರೂ ಮಾನ್ಯ ಸದಸ್ಯರು ಎರಡು ತಿಂಗಳ ಮುಂಚೆ ನನ್ನ ಗಮನಕ್ಕೆ ತಂದಿದ್ದರೆ ಸರಿಪಡಿಸಬಹುದಾಗಿತ್ತು.

ಶ್ರೀ ಎ. ಜೆ. ದೊಡ್ಡಮೇಟಿ.—2200 ಎಕರೆಗಳಲ್ಲಿ ಬೆಳೆ ರಕ್ಷಿಸಲಾಗಿದೆ, 2200 ಎಕರೆ ಬೆಳೆ ರಕ್ಷಿಸಿದ ವೆಚ್ಚ ಎಷ್ಟು ?

ಅಧ್ಯಕ್ಷರು.—ಆಗಲೇ ಅದಕ್ಕೆ ಉತ್ತರ ಹೇಳಿ ಆಯಿತು.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—2200 ಎಕರೆ ಬೆಳೆಯಲ್ಲಿ ಎಷ್ಟು ಕ್ವಿಂಟಾಲ್ ಧಾನ್ಯ ಸರ್ಕಾರಕ್ಕೆ ಬಂದಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಬಂದಿರುವ ವರ್ತಮಾನ ಪ್ರಕಾರ ಸುಮಾರು 600—700 ಟನ್ ಇರಬಹುದು.

ಶ್ರೀ ಎಸ್. ಗೋಪಾಲಗೌಡ.—2200 ಎಕರೆಗಳಲ್ಲಿ ಬೆಳೆಗಳನ್ನು ರಕ್ಷಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಯಾವ ಯಾವ ತಾಲ್ಲೂಕುಗಳಲ್ಲಿ ಗ್ರಾಮಗಳಲ್ಲಿ ಎನ್ನುವುದನ್ನು ಸಭೆಗೆ ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಬ್ರೇಕ್ ಅಪ್ ಫಿಗರ್ಸ್ ನನ್ನ ಹತ್ತಿರ ಇಲ್ಲ. ಇನ್ನೊಂದು ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಸ್ಕೇರ್ಸಿಟಿ ಕಂಡೀಷನ್ಸ್ ಬಂದಾಗ ಮಂತ್ರಿಗಳ ಭಾಷಣದಿಂದ, ಅಧಿಕಾರಿಗಳ ಪ್ರೋತ್ಸಾಹದಿಂದ ಮೈನರ್ ಟ್ಯಾಂಕ್ ಗಳಲ್ಲಿ ಅನೇಕ ಬಾವಿಗಳನ್ನು ತೆಗೆದು ಅನೇಕ ಬೆಳೆಗಳನ್ನು ರಕ್ಷಣೆ ಮಾಡಿಕೊಂಡರು. ಅಂತಹ ಬಾವಿಗಳು ಶಿಥಿಲ ವಾಗಿರುವ ಸಂದರ್ಭ ಬಂದಿರುವುದರಿಂದ ಈಗಲಾದರೂ ಕೂಡ ಅದಕ್ಕೆ ಕಲ್ಲು ಕಟ್ಟಡ ಕಟ್ಟಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಂತಹ ಪ್ರಸಂಗ ಉದ್ಭವವಾಗಿದ್ದೇ ಆದರೆ, ಅದು ಬಹಳ ಶೋಚನೀಯ. ಸರ್ಕಾರ ಆಲೋಚನೆ ಮಾಡಿ ಬಾವಿಗಳಿಗೆ ಶಾಶ್ವತವಾದ ರೂಪ ಕೊಡುವ ಹಾಗೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ತುರುವೇಕೆರೆ, ಕುಣಿಗಲ್ ಮತ್ತು ತುಮಕೂರು ಜಿಲ್ಲೆಯ ಅನೇಕ ಬಾವಿಗಳ ಸಹಾಯದಿಂದ ಸಾವಿರಾರು ಎಕರೆ ಫಸಲನ್ನು ಉಳಿಸಬೇಕಾದ ಸಂದರ್ಭ ಇದ್ದರೂ ಕೂಡ, ಡೀಸಲ್ ಎಲೆಕ್ಟ್ರಿಕ್ ಪಂಪುಸೆಟ್ಟುಗಳಿಗೆ 2-3 ತಿಂಗಳಿನಿಂದ ಅಕ್ಸೆಸರೀಸ್ ಇಲ್ಲದೆ ಅವು ಕೆಲಸ ಮಾಡಲು ಸಾಧ್ಯ ಇಲ್ಲದೆ ಇದ್ದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಸರ್ಕಾರ ತುಮಕೂರು ಜಿಲ್ಲೆಯಲ್ಲಿ ಏನು ಕೆಲಸ ಮಾಡಬೇಕಾಗಿತ್ತೋ, ಎಷ್ಟು ಫಸಲನ್ನು ಉಳಿಸಬೇಕಾಗಿತ್ತು ಅದನ್ನು ಉಳಿಸಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡತಕ್ಕಂಥ ಪ್ರಯತ್ನ ಮಾಡಲಾಗಿದೆ. ಆದರೆ ಎಲ್ಲರಿಗೂ ಒಂದೇ ಸಲ ಕೊಡಬೇಕಾಗಿ ಬಂದಿತು. ಮಳೆ ಹೋದಾಗ ಈ ಪ್ರಶ್ನೆ ಬರುತ್ತದೆ. ಮಳೆ ಬರದೇ ಹೋದಾಗ ತರಾತುರಿಯಿಂದ ಕೆಲಸ ಮಾಡಬೇಕಾಗಿ ಬಂತು. ಕೆಲವು ಕಡೆಗಳಲ್ಲಿ ಸ್ವಲ್ಪ ಕಷ್ಟ ಆಗಿರಬಹುದು. ಅದು ಸರ್ಕಾರದ ಅಭಿಮಾನದ ಅಭಾವದಿಂದ ಅಲ್ಲ, ಕಷ್ಟ ಇದೆ ಎಂದು ತಿಳಿದುಕೊಳ್ಳದೇ ಇರತಕ್ಕದ್ದೂ ಇಲ್ಲ. ಮೆಷಿನರಿಗಳನ್ನು ಕೂಡಲೇ ಸಪ್ಲೈ ಮಾಡುವುದಕ್ಕೆ ಆಗಿಲ್ಲ. ಕೆಲವು ಕಡೆ ತೊಂದರೆ ಆಗಿರಬಹುದು. ಬಹಳ ಕಡೆ ಸಹಾಯ ಮಾಡಲಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಈಗ ತಾವು ತುರ್ತು ಪರಿಸ್ಥಿತಿಯ ಮೇರೆಗೆ ಬೆಳೆ ಉಳಿಸುವುದಕ್ಕೆ ಕೊಟ್ಟಿರುವ ಕಡೆ ಡಿಸಿಲ್ ಇಂಜನ್ ಸ್ಪೇರ್ ಪಾರ್ಟ್ಸ್ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಮೊದಲು ಹೇಳಿದ್ದ ವಿಚಾರವನ್ನೇ ಕೇಳುತ್ತಿದ್ದೀರಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ಈಗ ಕೊಂಡಿರತಕ್ಕ ಆಯಿಲ್ ಇಂಜಿನ್ಸ್ ಹಳೆಯವಕ್ಕೆ ಬಣ್ಣ ಹಾಕಿ ಕೊಟ್ಟಿದ್ದಾರೆ, ಅದಕ್ಕೆ ಏನು ಕ್ರಮ ತಗದುಕೊಳ್ಳುತ್ತೀರಿ ?

ಅಧ್ಯಕ್ಷರು.—ಎಲ್ಲೆಲ್ಲಿ ಅಂತಹ ಕೇಸಸ್ ಇದೆಯೋ ಅದನ್ನು ಹೇಳಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಡೂರು ತಾಲ್ಲೂಕಿನಲ್ಲಿ ನಿರ್ಣಯ ಮಾಡಿ ಮಾನ್ಯ ಮುಖ್ಯಮಂತ್ರಿಯವರಿಗೆ ಕಳಿಸಿದ್ದಾರೆ, ಮತ್ತು ಎಲ್ಲಾ ಕಡೆಗೂ ಅಪೀಲ್ ಬರೆದಿದ್ದಾರೆ. ಇದಲ್ಲದೆ ಬಹಳ ದೂರು ಬರುತ್ತಾ ಇದೆ. ಅದಕ್ಕೆ ತಕ್ಕ ಸಾಮಾನುಗಳನ್ನು ಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೀರಾ ? ಹಿಂದೆ ಕೊಟ್ಟಿದ್ದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ನಾವು ತೆಗೆದುಕೊಳ್ಳುವುದಿಲ್ಲ. ರೈತರಿಗೆ ಎಲ್ಲಿ ಬೇಕೋ ಅಲ್ಲಿ ಕೊಡುತ್ತೇವೆ. ಮಾನ್ಯ ಸದಸ್ಯರಿಗೆ ಕಷ್ಟ ಏನಾದರೂ ಇದ್ದರೆ ತೋರಿಸಿ. ಕಡೂರು ತಾಲ್ಲೂಕಿನಿಂದ ಏನೂ ಪುಕಾರು ನನ್ನ ಗಮನಕ್ಕೆ ಬಂದಿಲ್ಲ.

Sri K. LAKKAPPA.—In many instances after the Government have taken decision, electric pumpsets have not been supplied on account of shortage of wire. The decision of the Government could not be implemented and crops that were existing were damaged in Tumkur District. Has it come to the notice of the Government? If so, why did not Government take steps in that respect?

ಶ್ರೀ ಎಸ್. ನಿಜಲಿಂಗಪ್ಪ.—ನಾವು ಕೇಳಿದಾಗ ಸಿಕ್ಕುವುದಿಲ್ಲ. ಸಿಕ್ಕಿದಾಗ ತೆಗೆದುಕೊಂಡು ಬರಬೇಕು. ನಾನು ಆವಾಗಲೇ ಹೇಳಿದ್ದೇನೆ. ಕೆಲವು ಕಡೆ ತಂತಿ ಇಲ್ಲದೆ ತೊಂದರೆಯಾಗಿದೆ. ನನ್ನ ಗಮನಕ್ಕೆ ಬೇರೆ ಯಾವುದೂ ಬಂದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಈಗ ಪಂಪ್ ಸೆಟ್‌ಗಳನ್ನು ರೈತರು ಕೊಂಡುಕೊಳ್ಳುವಹಾಗಿಲ್ಲ. ಆಫೀಸರ್ಸ್ ಕೊಂಡುಕೊಂಡು ಸಪ್ಲೈ ಮಾಡುತ್ತಾರೆ. ಕೆಲವು ಕೊಯಮತ್ತೂರಿನಿಂದ ಸಪ್ಲೈಯಾಗುವುದು ವಾಸ್ತವ. ರೈತರು ನೇರವಾಗಿ ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಅದಲ್ಲದೆ ಹಲವು ಭಾಗ ಪರ್‌ಸೆಂಟೇಜ್ ತೆಗೆದುಕೊಂಡು ಅಭಾವಪೀಡಿತ ಪ್ರದೇಶದಲ್ಲಿ ಬಾಡಿಗೆಗೆ ಕೊಡುತ್ತಾರೆ. ಅವರು ಸ್ಟ್ಯಾಂಡರ್ಡ್ ಕಂಪೆನಿಯಿಂದ ಸಪ್ಲೈ ಮಾಡುತ್ತಿಲ್ಲ. ಆದ್ದರಿಂದ ಇದನ್ನು ಬದಲಾಯಿಸಿ ನೇರವಾಗಿ ರೈತರಿಗೆ ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸರಿ, ನೋಡೋಣ.

Drinking Water Wells in Tumkur District.

**Q.*—154. Sri K. P. REVANNASIDDAPPA (Tiptur).—

Will the Government be pleased to state :—

(*a*) the number of drinking water wells taken up during the III Five Year Plan period in Tumkur District ;

(*b*) the number of villages that are without drinking water wells in the above district ;

(*c*) the number of wells that are in incomplete and from what date ;

(*d*) the reason for their incompletion ;

(*e*) what further action has been taken by Government to complete the incomplete wells without any further delay ?

A.—Sri Y. RAMACHANDRA (Deputy Minister for Municipal Administration).—

(*a*) 350.

(*b*) 444.

(*c*) 238.

(*d*) Non-availability of contractors to work with the old schedule of rates.

(*e*) Action is being taken to complete the wells by revising the rates of original estimates sanctioned and pursuing the contractors through local institutions and Taluk Boards.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ತಿಪಟೂರಿನಲ್ಲಿ ಕುಡಿಯುವ ನೀರಿನ ಬಾವಿಯ ಕೆಲಸವನ್ನು ನಿಲ್ಲಿಸಿ ಎಷ್ಟು ವರ್ಷವಾಗಿದೆ ?

ಅಧ್ಯಕ್ಷರು.—ತಿಪಟೂರು ಎಂದರೆ ತಾಲ್ಲೂಕೊ ಅಥವಾ ಜಿಲ್ಲೆಯೊ ?

ಶ್ರೀ ವೈ. ರಾಮಚಂದ್ರ.—ತಮ್ಮ ಜಿಲ್ಲೆಯಲ್ಲಿ ಇದುವರೆಗೆ ಕೆಲಸ ಪೂರ್ತಿ ಮಾಡದೆ ಇರುವ ಬಾವಿಗಳೆಷ್ಟುವೆಂದು ತಾವು ಕೇಳಿದ್ದೀರಿ. ಈಗ ತಾಲ್ಲೂಕಿನ ವಿಚಾರ ಕೇಳುತ್ತಿದ್ದೀರಿ, ಆದರೂ ಹೇಳುತ್ತೇನೆ. ತಿಪಟೂರು ತಾಲ್ಲೂಕಿನಲ್ಲಿ 16 ಬಾವಿ ಪೂರ್ತಿಯಾಗಿದೆ. 39 ಹಳ್ಳಿಗಳಲ್ಲಿ ಆಗಿಲ್ಲ. ಇನ್ನು 14 ಆಗುವುದರಲ್ಲಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ತೆಗೆದ ಬಾವಿಗಳಲ್ಲಿ ನೀರಿಲ್ಲದ ಬಾವಿಗಳ ಸಂಖ್ಯೆ ಎಷ್ಟು ?

ಶ್ರೀ ವೈ. ರಾಮಚಂದ್ರ.—ಅದಕ್ಕೆ ಬೇರೆ ಪ್ರಶ್ನೆ ಕೇಳಿ, ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಬಾವಿ ಶುರು ಮಾಡಿರುವುದು ಯಾವಾಗ ? 15 ವರ್ಷವಾದರೂ ಪೂರ್ತಿಯಾಗದಿರುವುದಕ್ಕೆ ಕಾರಣವೇನು ?

ಶ್ರೀ ವೈ. ರಾಮಚಂದ್ರ.—ಇಡೀ ಜಿಲ್ಲೆಗೆ ಸೇರಿದ ವಿಚಾರವನ್ನು ಹೇಳಬೇಕಾದರೆ ಬಹಳ ಜಾಸ್ತಿ ಸಮಯಬೇಕಾಗುತ್ತದೆ. ಈ ವಿಚಾರದ ಮಾಹಿತಿಯನ್ನು ಸಭೆಯ ಮುಂದೆ ಇಡಲಾಗುವುದು. ತಾವು ನೋಡಬಹುದು.

ಶ್ರೀ ಬಿ. ಬೈರಪ್ಪಜಿ.—ಸ್ವಾಮಿ, ಬಾವಿಗಳನ್ನು ಅಪೂರ್ಣ ಮಾಡಿರುವುದಕ್ಕೆ ಕಾರಣ 15 ವರ್ಷಗಳಲ್ಲಿ ಮಂಜೂರು ಮಾಡಿದಂತಹ ಅಂದಾಜು ಇನ್ನೂ ರಿವೈಸ್ ಮಾಡದೆ, ಕಂಟ್ರಾಕ್ಟರುಗಳಿಗೆ ಒತ್ತಾಯ ಮಾಡುವುದರಿಂದ ಅವರು ತಪ್ಪಿಸಿಕೊಳ್ಳುತ್ತಾರೆ. ಅದರಿಂದ ಈ ರೇಟ್‌ಗಳನ್ನು ಈಗಿನ ಕರೆಂಟ್ ರೇಟಿಗೆ ತಂದು ಬಾವಿಗಳನ್ನು ಆದಷ್ಟು ಬೇಗ ಮಾಡುವುದಕ್ಕೆ ಅನುಕೂಲ ಮಾಡುತ್ತೀರಾ ?

ಶ್ರೀ ವೈ. ರಾಮಚಂದ್ರ.—15 ವರ್ಷದಿಂದ ರಿವೈಸ್ ಮಾಡಲಿಲ್ಲ ಎನ್ನುವುದು ಸರಿಯಲ್ಲ. ಪ್ರತಿ ವರ್ಷ ಏಪ್ರಿಲ್‌ನಲ್ಲಿ ರಿವೈಸ್ ಮಾಡುತ್ತೇವೆ. ಈ ವರ್ಷದ್ದು ಕೂಡ ರಿವೈಸ್ ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸಚಿವರು ಹೇಳಿದರು ವರ್ಷೇ ವರ್ಷೇ ರಿವೈಸ್ ಮಾಡುತ್ತಾರೆ ಎಂದು. ನನಗೆ ತಿಳಿದಮಟ್ಟಿಗೆ ಹಾಗೆ ರಿವೈಸ್ ಮಾಡುತ್ತಾ ಇಲ್ಲ. ಹತ್ತು ವರ್ಷದ ಹಿಂದೆ ಮಂಜೂರು ಆದರೂ ಕೂಡ ಅದೇ ರೇಟಿಗೆ ಈಗ ಕೆಲಸಮಾಡಿ ಎಂದು ಒತ್ತಾಯಮಾಡುತ್ತಾರೆ. ಕರೆಂಟ್ ಷೆಡ್ಯೂಲ್ ರೇಟ್ ಕೊಡುತ್ತಾ ಇಲ್ಲ. ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಅವರು ಇದಕ್ಕೆ ಸರಿಯಾದ ಜವಾಬು ಕೊಟ್ಟಿದ್ದಾರೆ.

Sri K. LAKKAPPA.—The Hon'ble Minister said that 238 wells are not completed. Since how long these wells are not completed ? Why steps have not been taken to complete them?

ಶ್ರೀ ವೈ. ರಾಮಚಂದ್ರ.—ಈಗ 172 ಮಾತ್ರ ಒಂದು ವರ್ಷಕ್ಕೆ ಮೇಲ್ಪಟ್ಟದ್ದು ಉಳಿದು ದೆಲ್ಲಾ ಒಂದು ವರ್ಷದೊಳಗಿದ್ದದ್ದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಇದು ಎಷ್ಟು ಸಮಯದಿಂದ ಬಾಕಿ ಇದೆ ?

ಶ್ರೀ ವೈ. ರಾಮಚಂದ್ರ.—ನಾನು ಮೊದಲೇ ಹೇಳಿದೆ. ಮಾಹಿತಿ ನಂತರ ಒದಗಿಸ ಲಾಗುವುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸುಮಾರು 15 ವರ್ಷದಿಂದ ಈ ಕೆಲಸ ನಿಂತಿರುವುದರಿಂದ ಈ ಬಾವಿ ಕುಸಿದು ಎಲ್ಲಾ ಊರಿನವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿ ದೆಯೇ ? ಇದರಿಂದ ಅನೇಕ ದನಕರುಗಳು, ಚಿಕ್ಕಮಕ್ಕಳು ಬಿದ್ದು ಪ್ರಾಣ ಹಾನಿಯಾಗುವುದರಿಂದ ಈಗಲಾದರೂ ಸರ್ಕಾರದವರು ತಕ್ಷಣ ಇದನ್ನು ಪೂರ್ತಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ವೈ. ರಾಮಚಂದ್ರ.—ಸರ್ಕಾರದವರು ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಜಾಗ್ರತೆ ಆಗಬೇಕೆಂದು ಸ್ಥಳದ ಅಧಿಕಾರಿಗಳು ಗ್ರಾಮ ಪಂಚಾಯ್ತಿಯವರಿಗೆ ಮತ್ತು ಬೇರೆ ಸಂಸ್ಥೆಯವರನ್ನು ಬರಮಾಡಿಕೊಂಡು ಅವರಿಗೆ ಕೆಲಸವನ್ನು ವಹಿಸಿಕೊಡುತ್ತಿದ್ದಾರೆ.

Sri G. V. GOWDA.—There are nearly more than 7500 villages where there is no facility for drinking water. May I know whether the Government have got any programme to give drinking water wells to these villages and if so, within what period ?

ಶ್ರೀ ವೈ. ರಾಮಚಂದ್ರ.—ಸಾಕಷ್ಟು ಕಾರ್ಯಕ್ರಮ ನಾವು ತೆಗೆದುಕೊಂಡಿದ್ದೇವೆ. ಈ ವರ್ಷ ಸುಮಾರು 51 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಬಾವಿಗಳಿಗೋಸ್ಕರ ಬಿಡುಗಡೆ ಮಾಡಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಸ್ವಾಮಿ, ಕುಡಿಯುವ ನೀರು ಹಳ್ಳಿಗಲ್ಲಿ ಆಳವಾಗಿ ಅಗೆದರೂ ಸಿಕ್ಕದೆ ತೊಂದರೆಯಾಗಿದೆ. ನಾವು ಒಂದು ಮಾಡುತ್ತೇವೆ ನೀವು ಒಂದು ಮಾಡಿ ಎಂದು ಪಂಚಾಯ್ತಿಯವರಿಗೆ ಹೇಳಿದ್ದಾರೆ. ಒಂದೊಂದು ಪಂಚಾಯ್ತಿಗೆ 8—9 ಹಳ್ಳಿಗಳಿವೆ. ಇದರಿಂದ ತುಂಬಾ ತೊಂದರೆಯಾಗಿದೆ. ಆದ್ದರಿಂದ ತಕ್ಷಣ ಬಾವಿಗಳನ್ನು ಆಳ ಮಾಡುವುಧಕ್ಕೆ ಸರ್ಕಾರ ದವರು ನಿಗಾ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೈ. ರಾಮಚಂದ್ರ.—ಈ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಈಗ ಕೆಲಸವಾಗದೆ ನಿಂತಿರುವ ಕೆಲಸಗಳನ್ನು ತಕ್ಷಣ ತೆಗೆದುಕೊಳ್ಳುವಂತೆ ಲೋಕಲ್ ಆಫೀಸರ್ಸಿಗೆ, ಪಂಚಾಯಿತಿಗಳಿಗೆ ತಕ್ಷಣ ಆದೇಶ ಕೊಡುತ್ತೀರಾ ?

ಶ್ರೀ ವೈ. ರಾಮಚಂದ್ರ.—ನಾನು ಉತ್ತರದಲ್ಲಿ ಹೇಳಿದ್ದೇನೆ. ಇದನ್ನು ಆದಷ್ಟು ಬೇಗ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆದಷ್ಟು ಬೇಗ ಎಂದು ತಾವು ಹೇಳುತ್ತೀರಿ. ಆದಷ್ಟು ಬೇಗ ಎಂದರೆ ಅದಕ್ಕೆ ಕಾಲ ಮಿತಿ ಏನು ಸ್ವಾಮಿ ?

ಶ್ರೀ ವೈ. ರಾಮಚಂದ್ರ.—ಅದು ನನಗೆ ಗೊತ್ತು. ಬಹಳ ಜಾಗ್ರತೆ ಮಾಡುತ್ತೇವೆ.

—·—

Protection of the Temple of Neelamma.

*Q.—406. Sri MAHANTASWAMY (Shahapur).—

Will the Government be pleased to state :—

(a) whether the temple of Neelamma (wife of Sri Jagajyothi Basaveswara) would be submerged under the Upper Krishna Project ;

(b) the steps they have taken to protect the said temple which is a pilgrimage centre ;

(c) whether they intended to convert this as an island temple ;

(d) if so, the estimated cost of the same ?

A.—Sri S. NIJALINGAPPA (Chief Minister).—

(a) The temple of Neelamma at Thangadagi will not be submerged by the construction of Siddapur Dam Stage I but will be submerged under Stage III as proposed.

(b) At present only Stage I is sanctioned and work is in progress. Since Stages II and III are not yet sanctioned the question of protection does not arise at this stage.

(c) Do.

(d) Do.

ಶ್ರೀ ಮಹಂತಸ್ವಾಮಿ.—ಸಿದ್ಧಾಪುರ ಅಣೆಕಟ್ಟನ್ನು ಕಟ್ಟುವುದರಿಂದಾಗಿ ನೀಲಮ್ಮ ದೇವಸ್ಥಾನದ ರಕ್ಷಣೆಯಾಗುತ್ತದೆ. ಮುಳುಗಡೆಯಾಗುವುದಿಲ್ಲ ಎಂದು ಹೇಳುವಾಗ ಮೂರನೆ ಹಂತದಲ್ಲಿ ಈ ದೇವಸ್ಥಾನ ಮುಳುಗಡೆಯಾಗುತ್ತದೆ ಎಂದು ಹೇಳಿದ್ದೀರಿ. ಮೊದಲನೇ ಹಂತದಲ್ಲಿ ಏನೂ ತಡೆಯಾಗದೇ ಇರುವಾಗ ಈ ದೇವಸ್ಥಾನವನ್ನು ಹಾಗೇ ಬಿಡುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಏಕೆಂದರೆ 1607 ಅಡಿ ಎತ್ತರದವರೆಗೆ ಈ ದೇವಸ್ಥಾನದ ಎತ್ತರವೂ ಇದೆ. ಈಗಿರುವ ಸಿದ್ಧಾಪುರ ಯೋಜನೆಯಲ್ಲಿ ನೀರು ಅಷ್ಟು ಬರುವುದಿಲ್ಲ ಮತ್ತು ಅದರಿಂದ ಹೆಚ್ಚು ಅನಾನುಕೂಲವಾಗುವುದಿಲ್ಲ. ಇದರ ಮೂರನೇ ಸ್ಟೇಜಿನಲ್ಲಿ ಇದು ಮುಳುಗಡೆ ಯಾಗುತ್ತದೆಯೇ ಹೇಗೆ ಎನ್ನುವುದನ್ನು ಇನ್ನೂ ಯೋಚನೆ ಮಾಡುತ್ತಿದ್ದೇವೆ ಮತ್ತು ಯಾವ ರೀತಿ ಯಾಗುತ್ತದೆ ಮುಂದೆ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಮಹಂತಸ್ವಾಮಿ.—ಸಂಗಮೇಶ್ವರ ದೇವಸ್ಥಾನಕ್ಕೆ ಸೇರಿದಂತೆಯೇ ನೀಲಮ್ಮ ದೇವಸ್ಥಾನವೂ ಇರುವುದರಿಂದ ಈ ದೇವಸ್ಥಾನವೂ ನೀಲಮ್ಮನವರ ದೇವಸ್ಥಾನದಂತೆಯೇ ಮುಳುಗಡೆಯಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮೂರನೇ ಸ್ಟೇಜಿನಲ್ಲಿ ಸಂಗಮೇಶ್ವರ ದೇವಾಲಯ ಮುಳುಗಡೆ ಯಾಗುತ್ತದೆ. ಈ ದೇವಸ್ಥಾನವನ್ನು ಸರಿಯಾಗಿ ಕಟ್ಟಲು ತಕ್ಕ ಏರ್ಪಾಡು ಮಾಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಅತ್ಯಂತ ಪ್ರಶಸ್ತಿ ಪಡೆದಂತಹ ಈ ನೀಲಮ್ಮ ದೇವಾಲಯವನ್ನು ಮೂರನೇ ಹಂತದಲ್ಲಿ ಇಲ್ಲಿ ಅಣೆಕಟ್ಟುವಾಗ ಸುರಕ್ಷಿತವಾಗಿಡಲು ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸರಕಾರ ಅದನ್ನೇ ಯೋಚನೆ ಮಾಡುತ್ತಿದೆ.

Sri K. LAKKAPPA.—Is it not the duty of the Government to protect the feelings of the people in offering worship to that deity ? In accordance with the Government decision, at that stage, this will be submerged. Is it not opposed to the Constitution ? Does it not wound the feelings of the people there ? Will the Government stop that ?

ಶ್ರೀ ಎಸ್. ನಿಜಲಿಂಗಪ್ಪ.—ಜನಗಳ ಮನಸ್ಸಿನ ಪರಿಣಾಮವೇನೇ ಇರಲಿ ಇಂತಹ ಪವಿತ್ರವಾದ ದೇವಾಲಯಗಳನ್ನು ಉಳಿಸಿಕೊಂಡು ಬರಬೇಕು ಎನ್ನುವುದೇ ಸರಕಾರದ ಕರ್ತವ್ಯ ಎಂದು ತಮ್ಮಂತೆ ತಿಳಿದುಕೊಂಡಿದ್ದೇವೆ. ಹಾಗೇನಾದರೂ ತೊಂದರೆಯಾಗುವ ಸಂದರ್ಭ ಬಂದಲ್ಲಿ ಇದಕ್ಕಾಗಿ ಬೇರೆ ಕಡೆ ಏರ್ಪಾಡು ಮಾಡಬೇಕಾಗುತ್ತದೆ. ಯಾವ ಸ್ಥಳದಲ್ಲಿ ಕಟ್ಟಬೇಕು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಇದಕ್ಕೆ ಜಾಗ ಕೊಡಲು ಜನಗಳೇ ಮುಂದೆ ಬಂದಿದ್ದಾರೆ. ಇದನ್ನು ಸರಕಾರ ಪರ್ಯಾಲೋಚನೆ ಮಾಡುತ್ತಿದೆ. ಮಾನ್ಯ ಸದಸ್ಯರು ಕಾನ್‌ಸ್ಟಿಟ್ಯೂಷನ್‌ನ ಯಾವ ಆರ್ಟಿಕಲ್‌ನಲ್ಲಿ ಎನ್ನುವುದನ್ನು ತಿಳಿಸಿದರೆ ಅದನ್ನೂ ಅಭ್ಯಾಸ ಮಾಡಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇವಸ್ಥಾನ ಮುಳುಗಡೆಯಾದರೆ ಬೇರೆ ಕಡೆ ಕಟ್ಟುವ ಏರ್ಪಾಡು ಮಾಡಿದ್ದೇವೆ ಎಂದು ಹೇಳಿದಿರಿ. ಪುರಾತನ ಕಾಲದಲ್ಲಿ ಯಾರೋ ಪುಣ್ಯಾತ್ಮರು ಆ ಕಾಲವಲ್ಲಿ ಒಂದು ಒಳ್ಳೆಯ ದೇವಸ್ಥಾನವನ್ನು ಕಟ್ಟಿದ್ದರಿಂದ ಅದಕ್ಕೆ ಈಗ ಬಹಳ ಪಾವಿತ್ರ್ಯತೆ ಬಂದು ಚೆನ್ನಾಗಿದೆ. ಇಂತಹ ಪಾವಿತ್ರ್ಯತೆಯ ಹೆಸರನ್ನುಳಿಸಲು ಮತ್ತು ಹಿಂದೆ ಕಟ್ಟಿದಂತಹ ಪುಣ್ಯಾತ್ಮರ ಹೆಸರನ್ನೂ ಈಗ ಮುಂದುವರಿಸಿಕೊಂಡು ಬರುವ ವ್ಯವಸ್ಥೆ ಮಾಡುತ್ತೀರಾ ಹೇಗೆ ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ಯಾರ ಹೆಸರಿನಲ್ಲಿತ್ತೋ ಅವರ ಹೆಸರಿನಲ್ಲೇ ದೇವಾಲಯವನ್ನು ಕಟ್ಟುತ್ತೇವೆ. ಮತ್ತು ಅಲ್ಲಿರುವ ಜನಗಳೇ ಮುಂದೆ ಬಂದಿದ್ದಾರೆ ಮತ್ತು ಯಾವ ಜನಗಳಿಗೂ ತೊಂದರೆಯಾಗದಂತೆ ಇಲ್ಲಿ ಮಾಡಬೇಕೆಂದು ಮಾಡುತ್ತಿದ್ದೇವೆ. ಇದರಿಂದೇನು ತೊಂದರೆಯಾಗುತ್ತೋ ನನಗೇನೂ ಗೊತ್ತಿಲ್ಲ.

ಶ್ರೀ ಮಹಂತಸ್ವಾಮಿ.—ಉತ್ತರವಾಗಿ ಮೊದಲನೆ ಹಂತದ ಕೆಲಸಗಳು ಪ್ರಗತಿಯಲ್ಲಿವೆ ಎಂದಿದೆ ಅಲ್ಲಿ ಯಾವ ಕೆಲಸಗಳೂ ನಡೆದಿರುವುದು ಕಾಣಲಿಲ್ಲ. ಇದರ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ಮಾಡಬೇಕಾದ ಎಲ್ಲ ಕೆಲಸಗಳನ್ನೂ ಮಾಡಲು ಏರ್ಪಾಡುಗಳಾಗುತ್ತಿವೆ.

Sri K. LAKKAPPA.—The right of worship has been guaranteed under the Constitution. If the deity has to be submerged at the instance of the Government, does it not...

Mr. SPEAKER.—May I ask the Hon'ble Member under what article of the Constitution he is raising this question ?

Sri K. LAKKAPPA.—Article under the Fundamental Rights.

Mr. SPEAKER.—It is not asking for information, factual information. I will withhold that question. Then, we shall see. Right of worship is an incorporeal right which cannot be submerged. The temple may be submerged, submersion of the temple for a scheme ..

(*Interruption*)

I will clarify. Particular locale, particular deity, particular votary and particular time of worship—all these particulars...

(*Interruption*)

Next Question of Sri T. Madaiah Gowada, No. 388. He asked that it may be held over and regarding Question No. 458 of Sri A. J. Dodmeti, the Hon'ble Minister is absent. He has written to me that he is indisposed. So I will hold it over. Question No. 442 is also held over.

Next question of Sri Mahantaswamy may be taken up.

Submersion of Dharmar Math at Seethimani.

*Q.—407. Sri MAHANTHA SWAMY (Shahapur).—

Will the Government be pleased to state :—

(a) whether the Dharmar Math at Seethimani would be submerged under Almatti Project ;

(b) whether any steps have been taken to protect the said Math ;

(c) whether they intend to convert this as an Island temple ;

(d) whether they will pay any compensation to Sanyasinies of the said Math ;

(e) if so, how much ?

A.—Sri S. NIJALINGAPPA (Chief Minister).—

(a) Yes.

(b) Since the Math comes on the centre line of the dam, it cannot be protected.

(c) Does not arise in view of reply at (b).

(d) This is under examination.

(e) Do.

ಶ್ರೀ ಮಹಾಂತಸ್ವಾಮಿ.—ಆಲಮಟ್ಟಿ ಯೋಜನೆಯಲ್ಲಿ ಸೀತಿಮನಿಯಲ್ಲಿರುವ ಧರ್ಮರ ಮಠ ಮುಳುಗಡೆಯಾಗುವುದರಿಂದ ಅವರಿಗೆ ಬೇರೆ ಸ್ಥಳಗಳನ್ನು ಕೊಡಲು ಮತ್ತು ಅವರಿಗೇನಾದರೂ ಕಾಂಪೆನ್ಸೇಷನ್ನು ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಸರಕಾರದ ಯೋಚನೆಯಲ್ಲಿದೆ. ಅಲ್ಲದೆ ಈಗಾಗಲೇ ಅನೇಕ ಜನ ಹಳ್ಳಿಯ ಸುತ್ತಮುತ್ತ ಇರುವವರು ಬೇರೆ ಜಾಗ ಕೊಡುತ್ತೇವೆಂದು ಹೇಳಿ ಮುಂದೆ ಬರುತ್ತಿದ್ದಾರೆ. ಇದನ್ನು ಎಲ್ಲಿ ಕಟ್ಟಬೇಕು ಎನ್ನುವುದೂ ಸರಕಾರದ ಯೋಚನೆಯಲ್ಲಿದೆ.

ಶ್ರೀ ಮಹಾಂತಸ್ವಾಮಿ.—ಇಲ್ಲಿ ಎಷ್ಟು ಪರಿಹಾರವನ್ನು ಕೊಡಬೇಕು ಎನ್ನುವುದಕ್ಕೆ ಏನಾದರೂ ಸರ್ವೆ ಮಾಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದರಲ್ಲಿ ಎಷ್ಟು ಕೊಡಬೇಕು ಎನ್ನುವ ಪ್ರಶ್ನೆಯಿಲ್ಲ. ಸರಕಾರ ಕಟ್ಟಿಸುವುದಾದರೆ ಇದನ್ನು ಚೆನ್ನಾಗಿಯೇ ಕಟ್ಟಿಸಿಕೊಡುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ಮುಳುಗಡೆಯಾಗತಕ್ಕ ಮಠದ ಅಂದಾಜು ಎಷ್ಟು ಎನ್ನುವುದನ್ನು ಸರಕಾರ ತೀರ್ಮಾನ ಮಾಡಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದರ ಯಾವ ಅಂದಾಜನ್ನೂ ಮಾಡಿಲ್ಲ.

Sri K. LAKKAPPA.—How many sannyasinis are living in that math ?

Sri S. NIJALINCAPPA.—I have no idea.

Sri K. LAKKAPPA.—What are their duties and functions and rights ?

Sri S. NIAJALINGAPPA.—This question must be asked elsewhere.

Sri K. LAKAPPA.—Does it not affect the Constitution ?

Mr. SPEAKAR.—It is still under consideration. It is a very important topic and therefore requires deep consideration.

Now Question Hour is over.

QUESTIONS FOR ANSWERS ON THE DAY

(but not taken up)

Minor Irrigation Tanks and Pick-ups in Hosadurga Taluk.

*Q.—341. Sri G. T. RANGAPPA (Hosadurga).—

Will the Government be pleased to state :—

(*a*) the number of representations received for the construction of Minor Irrigation Tanks and Pick-ups in Hosadurga Taluk for the last three years ;

(*b*) how many of these works have been investigated ;

(*c*) in how many cases estimates have been prepared ;

(*d*) how many estimates have been sanctioned ?

A.—Sri ALUR HANUMANTHAPPA (Deputy Minister for Minor Irrigation).—

(*a*) Seven for new tanks and one for construction of pick-up.

(*b*), (*c*) & (*d*) Investigations are still in preliminary stages.

Vegetable Farm for South Kanara District.

*Q.—380. Sri DAYANAND R. KALLE (Karkal).—

Will the Government be pleased to state :—

(*a*) where a Vegetable Farm has been sanctioned for South Kanara District ;

(*b*) if so, the place or places where the farm is to be located ;

(*c*) the allotment made for the said farm during the current Financial year ;

(*d*) the total area of land to be acquired for the farm ;

(*e*) the cost likely to be incurred for acquiring land for the said farm ;

(*f*) whether any grant has been sanctioned for the said farm from the Central Government ;

(*g*) the number of acres of land that have been acquired by the Horticultural Department near Ramasamudram within the Karkal Panchayat (South Kanara) about two years ago (1962, 1963) ;

(*h*) the purpose for which land was acquired ;

(*i*) the Developmental works undertaken and the cost incurred for the works ;

(*j*) whether it is not a fact that some area adjoining the plot already acquired was also measured and plan prepared for extension of Horticulture operation ?

A.—SRI H. C. BORAIAH (Parliamentary Secretary to Minister for Agriculture).—

(*a*) Yes.
(*b*) Thumbe Village, Bantaval Taluk.
(*c*) Rs. 64,000.
(*d*) 75 acres.
(*e*) About Rs. 1,12,500
(*f*) No.
(*g*) 50.90 acres.
(*h*) For starting a Horticultural farm for production of vegetable seeds and Fruit Plants.
(*i*) About 1,400 Cashew Plants have been planted and pits have been dug for planting miscellaneous fruit plants. Cost incurred is about Rs. 1,500.
(*j*) Yes.

———

I. S. S. List of Supervisors of Survey, Settlement and Land Records Department.

**Q.*—484. SRI J. L. KABADI (Baradol).—

Will the Government be pleased to state :—

(*a*) whether they are aware that the inter-state seniority list of Supervisors of Survey, Settlement and Land Records Department has been published twice, by altogether omitting the names of persons from Belgaum and Hyderabad Divisions (*Vide* Gazette Notification dated 28th November 1963 and 25th November 1965);
(*b*) the number of representations received in this behalf ;
(*c*) if so, what action has been taken to rectify the omission ;
(*d*) if not, why the names are omitted ;
(*e*) whether it is not incumbent on Government to prepare the I. S. S. List of all persons of all divisions who are due for promotion to Statewide posts ?

A.—SRI S. NIJALINGAPPA (Chief Minister).—

(*a*) Yes. The names of the officials working in Gulbarga and Belgaum Divisions have not been included as the Cadre of Supervisors is a divisionwise cadre and no question of integration arises in Gulbarga and Belgaum Divisions because each of these divisions comprises only of officials of a single integrated area—officials of the former Bombay State in Belgaum Division and of former Hyderabad State in Gulbarga Division.
(*b*) 143.
(*c*) In view of reply to (*a*) above, the question of rectification of the omission does not arise.
(*d*) Does not arise in view of replies to (*a*) and (*c*).

(SRI S. NIJALINGAPPA)

(e) In view of reply to (a), it is not necessary to include officials of Belgaum and Gulbarga Divisions in the I. S. S. List of Supervisors as on 1st November 1956. However, while considering the question of promotion to Class II cadre, an integrated eligibility list comprising of officials of all divisions will be prepared.

Equation of posts in the Survey, Settlement and Land Records Department.

**Q.*—486. SRI J. L. KABADI (Baradol).—

Will the Government be pleased to state :—

(a) when the posts in the Survey, Settlement and Land Records Department are equated and Government orders issued ;

(b) whether the orders issued in Notification No. RD 36 SYS 57, dated 12th September 1961 published in *Mysore Government Gazette* dated 21st September 1961 are revised orders or original orders ;

(c) if they are revised orders, when the original orders were issued ;

(d) whether it has come to the notice of Government that the orders are interpreted to be revised orders and are being given effect from the date of order and not from 1st January 1957 as required by the States Reorganisation Act ;

(e) what action Government propose to take to set right the anomaly pointed out in clause (d) above ?

A.—SRI M. V. KRISHNAPPA (Minister for Revenue).—

(a) 12th September 1961.

(b) Revised orders.

(c) Original orders were issued in Government letter No. RD 236 SYS 57, dated 4th February 1958.

(d) No.

(e) Does not arise in view of reply to clause (d) above.

Leve of Absence to Sri M.Y. Ghorpade, M.L.A.

MR. SPEAKER.—I have received a letter from Sri N. Y. Ghorpade requesting for leave of absence from 12th March 1966 till the close of the current sittings of the Assembly, as he has to proceed to Delhi.

Is it the pleasure of the Assembly to grant leave of absence to Sri M. Y. Ghorpade from attending the rest of the sittings of the Assembly ?

HON'BLE MEMBERS.—Yes.

Mr. SPEAKER.—Permission to remain absent is granted.

PAPERS LAID ON THE TABLE.

Sri S. NIJALINGAPPA (Chief Minister).—Sir, on behalf of the Minister for Transport, I lay on the Table Notification No. HD.51 TMT 65 dated 16th February 1966, as required under sub-section (2) of section 16, of the Mysore Motor Vehicles Taxation Act, 1957.

Mr. SPEAKER.—Now we resume the debate......

Member's Representation.

Sri SIDDIAH KASHIMATH (Shirahatti).—Before that, I would like to draw the attention of the Chief Minister to a subject.

ಸ್ವಾಮಿ, ಧಾರವಾಡ ಜಿಲ್ಲೆಯಿಂದ ದನಕರುಗಳಿಗಾಗಿ ಹುಲ್ಲನ್ನು ಸರಬರಾಜು ಮಾಡುವುದಕ್ಕಾಗಿ ರೈಲು ಮೂಲಕ ಕಳುಹಿಸಬೇಕೆಂದು ಏರ್ಪಾಡು ಮಾಡಲಾಗಿತ್ತು. ಇದಕ್ಕಾಗಿ ವ್ಯಾಗನ್ನುಗಳನ್ನು ರೈಲಿನವರು ಕೊಡಲು ಸಹಾಯ ಮಾಡಬೇಕೆಂದು ಕೇಳಿದ್ದಕ್ಕೆ ಅವರೂ ಕೆಲವು ವ್ಯಾಗನ್ನುಗಳನ್ನು ಕೊಟ್ಟಿದ್ದರು. ಶಿರಹಟ್ಟಿಯಿಂದ ಚಿತ್ರದುರ್ಗಕ್ಕೆ ಸುಮಾರು ನಾಲ್ಕು ವ್ಯಾಗನ್ನುಗಳಷ್ಟು ಮಾತ್ರ ಕಳುಹಿಸಲು ಅನುಕೂಲವಾಯಿತು. ಇನ್ನೂ 8—10 ವ್ಯಾಗಳಷ್ಟು ಸಾಗಿಸಬೇಕೆಂದು ರೈಲಿನವರನ್ನು ಕೇಳಿದಾಗ ಡೀಸಲ್ ಎಣ್ಣೆ ಕೊರತೆ ಇದೆ ಇದರಿಂದ ಅನಾನುಕೂಲವಾಗಿದೆ ಎಂದು ತಿಳಿಯಬಂತು. ಇದರಿಂದಾಗಿ ದನಕರುಗಳಿಗೆ ಬೇಕಾಗುವ ಮೇವನ್ನು ಕಳುಹಿಸಲು ತೊಂದರೆಯಾಗುತ್ತಿದೆ. ಈ ಪರಿಸ್ಥಿತಿಯನ್ನು ಹಿಂದೆ ಕೂಡ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರು ಧಾರವಾಡದ ಕಡೆ ಬಂದಾಗ ತಿಳಿಸಿದ್ದೆ. ಇದರ ಬಗ್ಗೆ ಸರಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

9-00 A.M.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು)—ಈಗ ಹುಲ್ಲು ಎಲ್ಲೆಲ್ಲಿ ಇದೆಯೋ ಅಂತಹ ಭಾಗದಿಂದ ಹುಲ್ಲನ್ನು ತರಿಸುವುದಕ್ಕೆ ರೈತರಿಗೆ ಉಚಿತವಾಗಿ ಲಾರಿಗಳನ್ನು ಒದಗಿಸುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ ರೈತರಿಗೆ ಇದುವರೆಗೂ ಲಾರಿಯನ್ನು ಸರ್ಕಾರದವರು ಒದಗಿಸಿಲ್ಲ. ಈಗ ತುಮಕೂರಿನಲ್ಲಿ ಒಂದು ಪಬ್ಲಿಕ್ ವರ್ಕ್ಸ್ ಇಲಾಖೆಯ ಲಾರಿಯು ಮಾತ್ರ ಕೆಲಸ ಮಾಡುತ್ತಿದೆ. ಇದರಿಂದ ಅಲ್ಲಿ ಬಹಳ ತೊಂದರೆಯಾಗಿದೆ. ಧಾರವಾಡ ಜಿಲ್ಲೆಯಲ್ಲಿ ಶಿರಹಟ್ಟಿ ಮುಂತಾದ ಪ್ರದೇಶಗಳಲ್ಲಿ ಕೂಡಿ ಹಾಕಿರತಕ್ಕ ಹುಲ್ಲನ್ನು ರೈಲ್ವೆ ವ್ಯಾಗಿನ್‌ನಲ್ಲಿ ನೇರವಾಗಿ ತಿಪಟೂರು ಮತ್ತು ತುಮಕೂರು ಮುಂತಾದ ಪ್ರದೇಶಗಳಿಗೆ ತರುವುದಕ್ಕೆ ಅವಕಾಶವಿದೆ. ಆದ್ದರಿಂದ ರೈಲ್ವೆ ವ್ಯಾಗನ್ ಮೂಲಕ ಹುಲ್ಲನ್ನು ತರಿಸಿ ರೈತರಿಗೆ ಒದಗಿಸುವುದಕ್ಕೆ ಸರ್ಕಾರದವರು ಆದೇಶವನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಸರ್ಕಾರಕ್ಕೆ ಗೊತ್ತಿದೆ. ಧಾರವಾಡ ಜಿಲ್ಲೆಯಲ್ಲಿ ಜನಗಳು ಸುಮಾರು ನೂರು ಟ್ರಕ್‌ಗಳಷ್ಟು ಶಪ್ಪೆ ಹುಲ್ಲನ್ನು ಕೂಡಿ ಹಾಕಿದ್ದಾರೆ. ಅದನ್ನು ಲಾರಿಗಳಲ್ಲಿ ತರುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ಅದನ್ನು ರೈಲ್ವೆ ಮುಖಾಂತರ ತರಿಸುವುದಕ್ಕೆ ರೈಲ್ವೆ ಮಂತ್ರಿಗಳಿಗೆ ಬರೆದಿದ್ದೇವೆ. ಅವರು ರೈಲ್ವೆ ವ್ಯಾಗನ್‌ಗಳು ಎಷ್ಟು ಬೇಕಾದರೂ ಕೊಡುತ್ತೇವೆಂದು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಆಮೇಲೆ ಶ್ರೀಮಾನ್ ಸಿದ್ದಯ್ಯ ಕಾಶೀಮಠ್ ಅವರು ಡೀಸೆಲ್ ಎಣ್ಣೆಯ ತೊಂದರೆ ಇದೆಯೆಂದು ಹೇಳಿದರು. ಇನ್ನು ಎರಡು ಮೂರು ದಿನಗಳಲ್ಲಿ ಅದನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Mr. SPEAKER.—These are all matters about which members can meet the Minister in his chamber. Why should the floor of the House be used for small matters like this ?

Sri C. J. MUCKANNAPPA (Sira).—The matter is important.

Mr. SPEAKER.—I do not say that the matter is not important. That is why I did not object to the matter being raised in the first instance. But this is not a matter which disturb the even flow of the work of the House. The importance of the matter has been sufficiently emphasised and the matter will be attended to. Let this not be converted into a debate.

BUDGET ESTIMATES FOR 1966-67—DEMANDS FOR GRANTS

Demand Nos. 14, 16, 24 and 44

(Debate contd.)

Mr. SPEAKER.—Now, I suppose we shall close this demand by noon today.

Sri S. SIVAPPA (Sravanabelagola).—We can continue discussion on this dsmand till 3 p.m.; four hours may be allowed for discussion.

Mr. SPEAKER.—The debate will continue till 12-30 p.m. and the reply will be at 2 p.m. when the House re-assemble again. Sri Keshava Murthy will take five minutes.

Sri H. R. KESHAVA MURTHY (Gandasi).—Five minutes are not sufficient and I require ten minutes.

Mr SPEAKER.—He has already spoken for some time the previous day and so I will allow him only five minutes.

Sri H. R. KESHAVA MURTHY.—Then, I do not speak.

Mr SPEAKER.—Then, I call upon Sri K. P. Gadag to speak.

ಶ್ರೀ ಕೆ. ಪಿ. ಗದಗ್ (ಗದಗ್).—ಅಧ್ಯಕ್ಷರೇ, ಮಾನ್ಯ ಔದ್ಯೋಗಿಕ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಸಂಖ್ಯೆ 14, 16, 24, 44 ಇವುಗಳ ಬಗ್ಗೆ ನಾನು ನನ್ನ ಅನುಮತಿಯನ್ನು ಕೊಡುತ್ತೇನೆ. ಈ ಬೇಡಿಕೆಗಳಲ್ಲಿ 24 ಮತ್ತು 44 ನೇ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಿ ಅವುಗಳ ಬಗ್ಗೆ ನನ್ನ ಉಚಿತವಾದ ಸಲಹೆ ಮತ್ತು ಸೂಚನೆಗಳನ್ನು ಹೇಳಬಯಸುತ್ತೇನೆ. ಪ್ರಾಂತದ ಉದ್ಯಮದ ಬೆಳವಣಿಗೆಗೆ ಸರ್ಕಾರ ಸರಿಯಾಗಿ ಗಮನ ಕೊಡುತ್ತಿಲ್ಲ, ಅದರ ಬಗ್ಗೆ ಜಾಗರೂಕತೆಯಿಂದ ಇಲ್ಲ, ಉದಾಸೀನ ಧೋರಣೆಯನ್ನು ತಳೆದಿದೆ ಎನ್ನುವ ವಿಚಾರ ಈಗಾಗಲೇ ವಿರೋಧಪಕ್ಷದ ಮಾನ್ಯ ಸದಸ್ಯರಿಂದ ವ್ಯಕ್ತವಾಗಿದೆ. ಈ ಅಭಿಪ್ರಾಯ ಸಾಮಾನ್ಯವಾಗಿ ಈ ವಿಷಯದ ಬಗ್ಗೆ ವ್ಯಕ್ತವಾಗುವ ಸಂದರ್ಭ ಕಂಡುಬರುತ್ತಿದೆ. ಆದರೆ ಈ ವಿಚಾರಕ್ಕೆ ಅವರು ಕೊಟ್ಟ ಕಾರಣಗಳೇನೆಂದರೆ, ನೆರೆಯ ಪ್ರಾಂತಗಳಾದ ಮದ್ರಾಸು ಮತ್ತು ಆಂಧ್ರ, ಮಹಾರಾಷ್ಟ್ರ ದೇಶಗಳಲ್ಲಿರತಕ್ಕ ಉದ್ಯಮಗಳ ಬೆಳವಣಿಗೆಗೂ ನಮ್ಮ ಪ್ರಾಂತದ ಉದ್ಯಮಗಳ ಬೆಳವಣಿಗೆಗೂ ಹೋಲಿಸಿ ನೋಡಿದರೆ ನಮ್ಮ ಪ್ರಾಂತದಲ್ಲಿರತಕ್ಕ ಉದ್ಯಮಗಳ ಬೆಳವಣಿಗೆ ಅಷ್ಟೊಂದು ಪ್ರಗತಿದಾಯಕವಾಗಿ ಆಗಿಲ್ಲ ಎನ್ನುವ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಅವರು ವ್ಯಕ್ತ ಮಾಡಿದ್ದು ಆಗಿದೆ. ಆದರೆ ಈ ಅಭಿಪ್ರಾಯಕ್ಕೆ ಅವರು ಇದ್ದ ಪರಿಸ್ಥಿತಿಯನ್ನು ಕೆಲವು ಮಟ್ಟಿಗೆ ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಮದ್ರಾಸು ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ ಯಾವ ಸೌಲಭ್ಯ ಮತ್ತು ಅನುಕೂಲತೆಗಳು ಇವೆಯೋ ಆ ಸೌಲಭ್ಯ ಮತ್ತು ಅನುಕೂಲತೆಗಳು ಈ ಪ್ರಾಂತದಲ್ಲಿ ಇಲ್ಲದೆ ಇರುವುದರಿಂದ ಈ ಉದ್ಯಮಗಳ ಬೆಳವಣಿಗೆ, ಪ್ರಗತಿ ಇಲ್ಲಿ ಕುಂಠಿತವಾಗಿದೆ ಎಂಬ ಅಭಿಪ್ರಾಯವಿದೆ. ಈಗಿನ ಸಂದರ್ಭದಲ್ಲಿ ಉದ್ಯಮಗಳ ಬೆಳವಣಿಗೆಗೆ ಸಾಮಾನ್ಯವಾಗಿ ಎಕ್ಸ್‌ಪೋರ್ಟ್

ಮತ್ತು ಇಂಪೋರ್ಟ್ ವ್ಯವಹಾರ ಹೆಚ್ಚು ಮಹತ್ವ ಇದೆ. ಆದರೆ ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ವ್ಯವಹಾರಕ್ಕೆ ರೈಲ್ವೆ ಪೋರ್ಟ್ ಸೌಲಭ್ಯ ಅವಶ್ಯ ಉಂಟು. ಮಹಾರಾಷ್ಟ್ರ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಇದ್ದಂತಹ ಪೋರ್ಟ್ ಮತ್ತು ರೈಲ್ವೆ ಸೌಲಭ್ಯಗಳು ನಮ್ಮ ಪ್ರಾಂತದಲ್ಲಿ ಇಲ್ಲ, ಅದಕ್ಕೋಸ್ಕರ ನಮ್ಮ ಪ್ರಾಂತದಲ್ಲಿ ಉದ್ಯಮಗಳ ಬೆಳವಣಿಗೆ ಕುಂಠಿತವಾಗಿದೆ ಎನ್ನುವ ಅಭಿಪ್ರಾಯ ಸರಿಯಲ್ಲ. ಮದ್ರಾಸು ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ ಮೊದಲಿನಿಂದಲೂ ದೊಡ್ಡ ದೊಡ್ಡ ಉದ್ಯಮಗಳು ಇದ್ದವು. ಅದಕ್ಕೆ ತಕ್ಕಹಾಗೆ ಅನುಕೂಲತೆಗಳೂ ಇದ್ದುವು. ಆದ್ದರಿಂದ ಅಲ್ಲಿ ಉದ್ಯಮಗಳು ಹೆಚ್ಚು ಆದುವು. ಇದರ ಸಲುವಾಗಿ ಅಲ್ಲಿ ಉದ್ಯಮಗಳ ಒಂದು ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ಮತ್ತು ಅನುಕೂಲತೆಗಳು ಇದ್ದದ್ದರ ಮೂಲಕ ಕೆಲವು ಮಟ್ಟಿಗೆ ಅಲ್ಲಿ ಹೆಚ್ಚು ಉದ್ಯಮಗಳು ಆಗಿದ್ದರೂ ಆಗಿರಬಹುದು. ಆದ್ದರಿಂದ ಅಲ್ಲಿಯ ವಿಷಯಕ್ಕೆ ಸರ್ಕಾರದವರು ಗಮನ ಕೊಡುವುದಕ್ಕಾಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೆಲವರು ಪರಪ್ರಾಂತದವರು ನಮ್ಮ ಪ್ರಾಂತಕ್ಕೆ ಬಂದು ಕೆಲವು ಉದ್ಯಮಗಳನ್ನು ಸ್ಥಾಪನೆ ಮಾಡಿದ್ದಾರೆ. ಇಲ್ಲಿ ನಮ್ಮ ಪ್ರಾಂತದಲ್ಲಿ ಪರಪ್ರಾಂತದವರು ಬಂದು ಉದ್ಯಮಗಳನ್ನು ಸ್ಥಾಪನೆ ಮಾಡಬೇಕಾದರೆ ಇಲ್ಲಿ ಸೌಲಭ್ಯಗಳು ಇಲ್ಲದೆ ಇದ್ದರೆ ಅವರು ಇಲ್ಲಿ ಹೇಗೆ ಬಂದು ಉದ್ಯಮಗಳನ್ನು ಸ್ಥಾಪನೆ ಮಾಡುತ್ತಿದ್ದರು ! ಈಗ ದಾಂಡೇಲಿಯಲ್ಲಿರತಕ್ಕ ಕಾಗದ ಕಾರ್ಖಾನೆ ಮತ್ತು ಭಗಾಸ್ ಭಿಗಾಸಿಯಿಂದ ಕಾಗದ ತಯಾರಿಸುವ ಕಾರ್ಖಾನೆ, ಕಿರ್ಲೋಸ್ಕರ್ ಕಾರ್ಖಾನೆ, ಬೆಳಗಾಮಿನ ಅಲ್ಯೂಮಿನಿಯಂ ಕಾರ್ಖಾನೆ ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಪರಪ್ರಾಂತದವರು ನಮ್ಮ ಪ್ರಾಂತದಲ್ಲಿ ಬಂದು ಸ್ಥಾಪನೆ ಮಾಡಬೇಕಾದರೆ ಈ ಸರ್ಕಾರದವರು ಉದ್ಯಮಗಳ ಪ್ರಗತಿಗೆ ಸರಿಯಾಗಿ ಗಮನ ಕೊಡುತ್ತಿದ್ದಾರೆ ಎಂದು ಅರ್ಥವಾಗುತ್ತದೆ.

ಇನ್ನೊಂದು ವಿಷಯವನ್ನು ಹೇಳಬೇಕೆಂದರೆ, ಸಾಧಾರಣವಾಗಿ ನಮ್ಮ ಸರ್ಕಾರದವರು 71 ಉದ್ಯಮ ಕಂಪೆನಿಗಳಿಗೆ 10 ಕೋಟಿ ರೂಪಾಯಿಗಳ ಷೇರು ಬಂಡವಾಳವನ್ನು ಹಾಕಿದ್ದಾರೆ. ಅವರಿಗೆ ಲೋನು ವಗೈರೆ ಗ್ಯಾರಂಟಿಗಾಗಿ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ಮತ್ತು ಗಮನಕ್ಕೆ ತೆಗೆದುಕೊಳ್ಳಬೇಕಾದ ಇನ್ನೊಂದು ವಿಷಯವೇನೆಂದರೆ, ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಹೊಸ ಉದ್ಯಮಗಳ ಸಲುವಾಗಿ ಶಿಫಾರಸು ಮಾಡಿ ಕಳುಹಿಸಿದ 449 ಅರ್ಜಿಗಳ ಪೈಕಿ 151 ಅರ್ಜಿಗಳ ಸಂಬಂಧದಲ್ಲಿ ಲೈಸೆನ್ಸ್ ಕೊಟ್ಟಿದೆ. ಹೊಸ ಉದ್ಯಮಗಳ ಸಲುವಾಗಿ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಪ್ರಾಂತ ಸರ್ಕಾರ ಪ್ರಯತ್ನ ಮಾಡದ ಹೊರತು ಏನು ಸುಧಾರಣೆಯೂ ಆಗುವುದಿಲ್ಲ. ಆದ್ದರಿಂದ ಆ ಉದ್ಯಮಗಳಿಗೆ ಲೈಸೆನ್ಸ್ ಸಿಕ್ಕಿದೆ. ಅವರು ಆ ಉದ್ಯಮಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದರ ದೆಶೆಯಿಂದ ಉದ್ಯಮದ ಸಲುವಾಗಿ ಪರಪ್ರಾಂತದವರು ಮಾತ್ರ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ, ನಮ್ಮ ಪ್ರಾಂತದವರು ಅದಕ್ಕೆ ಗಮನ ಕೊಡುವುದಿಲ್ಲ ಎನ್ನುವ ಮಾತು ಸಿದ್ಧವಾಗುವುದಿಲ್ಲ.

ಇನ್ನೊಂದು ಸಂಗತಿ ನಾನು ಹೇಳಬಯಸುವುದು ಎಂದರೆ, ಕೆಲವು ಪ್ರಾಂತಗಳು 1965-66, 1966-67ರಲ್ಲಿ ಉದ್ಯಮಗಳ ಸಲುವಾಗಿ ಏನೇನು ಖರ್ಚು ಮಾಡಿವೆ ಎಂಬ ಬಗೆಗೆ ವಿವರಗಳನ್ನು ಕೊಟ್ಟಿದ್ದು ಆಗಿದೆ. ಅವುಗಳನ್ನು ನೋಡಿದರೆ ಎಲ್ಲಾ ಪ್ರಾಂತಗಳಿಗಿಂತ ಮೈಸೂರು ಪ್ರಾಂತ ಉದ್ಯಮಗಳಿಗಾಗಿ ಹೆಚ್ಚು ಖರ್ಚು ಮಾಡಿದೆ ಎಂಬುದು ಗೊತ್ತಾಗುತ್ತದೆ. 1961-62 ಮತ್ತು 1965-66ರ ಅವಧಿಯಲ್ಲಿ ಮೈಸೂರು ಪ್ರಾಂತ ಉದ್ಯಮಗಳ ಸಲುವಾಗಿ ಬಹಳ ಖರ್ಚು ಮಾಡಿರುವುದು ಉಲ್ಲೇಖ ಇದೆ. ಮೈಸೂರು ಸರ್ಕಾರ ಉಕ್ಕಿನ ಸಲುವಾಗಿ ಹೆಚ್ಚು ಖರ್ಚು ಮಾಡುವ ಆಲೋಚನೆ ಇದೆ. ಇದೆಲ್ಲಾ ಕಾರ್ಖಾನೆಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾದರೆ ಅಂಕಿ ಅಂಶಗಳ ಆಧಾರವನ್ನು ನಾವು ಮೂಲವಾಗಿಟ್ಟುಕೊಂಡು ಗಮನಿಸಬೇಕಾಗುತ್ತದೆ. ಮುಖ್ಯವಾಗಿ ನಮ್ಮ ಪ್ರಾಂತ ಸರ್ಕಾರದವರು ಸರ್ಕಾರದ ಉದ್ಯಮಗಳ ಪ್ರಗತಿಗೆ ಸರಿಯಾದ ಗಮನವನ್ನು ಕೊಟ್ಟಿಲ್ಲವೆಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಅದು ನನ್ನ ಮನಸ್ಸಿಗೆ ಅಷ್ಟೊಂದು ಸರಿಯಲ್ಲವೆಂದು ತೋರುತ್ತದೆ. ನಮ್ಮ ಸರ್ಕಾರದ ಆಡಳಿತದಲ್ಲಿರತಕ್ಕ ಅನೇಕ ಉದ್ಯಮಗಳು ಯಾವ ರೀತಿಯಲ್ಲಿ ಪ್ರಗತಿಯಾಗುತ್ತಿವೆ, ಅವುಗಳ ಆಡಳಿತ ಯಾವ ಪ್ರಕಾರ ನಡೆದಿದೆ ಎಂಬುದನ್ನು ನೋಡಿದರೆ ಇವರು ಅಷ್ಟು ಲಕ್ಷ್ಯ ಕೊಟ್ಟಿದ್ದಾರೆಯೋ ಇಲ್ಲವೋ ಎನ್ನುವುದನ್ನು ನಾವು ಈಗ ವಿಚಾರ ಮಾಡಬೇಕಾಗಿದೆ. ಅನೇಕ ಕಂಪೆನಿಗಳ ಆಡಳಿತ ಸರ್ಕಾರದ ಜವಾಬ್ದಾರಿಯಲ್ಲಿದೆ. ಇವುಗಳ ಬಗ್ಗೆ ಯಾವ್ಯಾವ ಕಂಪೆನಿಗಳ ಉತ್ಪತ್ತಿ ಏನು, ಅವುಗಳ ಕಾರ್ಯಕಲಾಪಗಳೇನು, ಎಂಬುದನ್ನು ಅನೇಕ ವರದಿಗಳ ರೂಪದಲ್ಲಿ ಕೊಟ್ಟಿದ್ದು ಆಗಿದೆ. ಇದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಪ್ರತಿಯೊಂದು ಕೈಗಾರಿಕೆಯಲ್ಲಿ ಸರ್ಕಾರದ ಆಡಳಿತದಲ್ಲಿ ಉತ್ಪತ್ತಿ ಹೆಚ್ಚಿದೆ ಎನ್ನುವುದು ಗೊತ್ತಾಗುತ್ತದೆ. ಈಗ ಸರ್ಕಾರದವರು ಕೊಟ್ಟಂಥ ಅಂಕಿ ಅಂಶಗಳಿಂದ ಅದು ಚೆನ್ನಾಗಿ ಗೊತ್ತಾಗಿದೆ. ಲಾಭ ಹೆಚ್ಚು ಹೆಚ್ಚು ಆಗಲಿಕ್ಕೆ ಹತ್ತಿದೆ. ಅದರಲ್ಲಿ ಕೆಲವು ಕಂಪೆನಿಗಳು ಬಹಳ ಪ್ರಶಂಸನೀಯವಾದುವು

(ಶ್ರೀ ಕೆ. ಪಿ. ಗದಗ್)

ಗಳಾಗಿವೆಯೆಂದು ಹೇಳಿದರೆ ಅದೇನು ತಪ್ಪಾಗಲಾರದು. ಅವುಗಳ ಪೈಕಿ ಕೆಲವುಟ್ಟಿಗೆ ಈ ಸಭಾ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಮುಖ್ಯವಾಗಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಒಂದು ಸಂಗತಿಯನ್ನು ಹೇಳಬೇಕಾಗಿದೆ. ಇದೊಂದು ಹೆಚ್ಚಿನ ಪ್ರಗತಿಪರವಾದುದು. ಆದರೆ ಇಂಟರ್ ನ್ಯಾಷನಲ್ ಮಾರ್ಕೆಟ್ಟಿನಲ್ಲಿ ಇದರ ಉತ್ಪತ್ತಿ ಬೇಡಿಕೆ ಇರುವಂಥಾದ್ದು ಅದರ ಹೆಚ್ಚಿನ ಪ್ರಗತಿಗೆ ಕಾರಣವೆಂಬುದಾಗಿದೆ. The company has taken up a scheme for conversion of the common steel production into alloy and special steels in technical collaboration with an Austrian Company ಎಂದೇನಿದೆ ಅದರಲ್ಲಿ ಬಹಳ ಮಹತ್ವ ಇದೆ. ಬಹಳ ಉತ್ತಮವಾದುದಾಗಿದೆ. ಅದೇ ಪ್ರಕಾರ ಸರ್ಕಾರದ ವಿದ್ಯುಚ್ಛಕ್ತಿ ಕಾರ್ಖಾನೆಗೂ ಕೊರ್‍ಪೊರೇಷನ್ ಇದೆ. ಅಲ್ಲಿ ಎಲೆಕ್ಟ್ರಿಕ್ ಟ್ರ್ಯಾನ್ಸ್‌ಫಾರ್ಮರ್ಸ್, ಮೋಟರ್ಸ್, ಎಲೆಕ್ಟ್ರಿಕಲ್ ಅಕ್ಸೆಸರೀಸ್—ಇವೆಲ್ಲವನ್ನೂ ಉತ್ಪಾದನೆ ಮಾಡುವಂತಹ ಒಂದು ಯೋಜನೆ ಇದೆ. ಇಂಟರ್ ನ್ಯಾಷನಲ್ ಮಾರ್ಕೆಟ್ಟಿನೊಳಗೆ ಇವುಗಳ ಬಗ್ಗೆ ಒಂದು ಕಂಪನಿಯಾಗುವುದರಿಂದ ಇದಕ್ಕೆ ಇನ್ನೂ ಒಂದು ಹೆಜ್ಜೆ ಮುಂದೆ ಪ್ರಗತಿ ಇದೆಯೆಂದು ನಾನು ಹೇಳುತ್ತೇನೆ. ಅದೇ ಪ್ರಕಾರ ಸಾಬೂನಿನ ಕಾರ್ಖಾನೆಯ ಉತ್ಪಾದನೆ ಈಗ 2,400 ಟನ್ನುಗಳಷ್ಟು ಆಗುವ ಮಟ್ಟಿಗೆ ಬಂದಿದೆ ಯೆಂದು ಸಾದರುಪಡಿಸಿದ್ದಾರೆ. Production of soap in this factory is expected to reach 2,400 tonnes by the end of this year. ಇದರಿಂದ ಅಲ್ಲಿ ಉತ್ಪತ್ತಿ ಹೆಚ್ಚು ಪ್ರಗತಿಪರವಾಗಿದೆಯೆಂಬುದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಇನ್ನು ಪಬ್ಲಿಕ್ ಸೆಕ್ಟರ್‌ನಲ್ಲಿರುವಂತಹ ಕಾರ್ಖಾನೆಗಳು ಏನಿವೆಯೋ ಅವು ಪ್ರೈವೇಟ್ ಸೆಕ್ಟರ್‌ನಲ್ಲಿ ನಡೆಯತಕ್ಕ ಕಾರ್ಖಾನೆಗಳಿಗಿಂತ ಲಾಭವನ್ನು ಕಡಮೆಯಾಗಿ ಗಳಿಸುತ್ತಿವೆ. ಆದರೆ ಅವುಗಳ ಆಡಳಿತದಲ್ಲಿ ಕೆಲವು ಅನಿವಾರ್ಯಗಳಿರುತ್ತವೆ. ಮಿನಿಮಂ ಶೇಕಡ 10 ರಷ್ಟಾದರೂ ಲಾಭ ಪಡೆಯಬೇಕು. ಈಗಿನ ಉದ್ಯಮ ಬೆಳವಣಿಗೆಯಲ್ಲಿ ಹೀಗೆ ಕೆಲವರು ಅಭಿಪ್ರಾಯ ವ್ಯಕ್ತಮಾಡುತ್ತಾರೆ. ಪಬ್ಲಿಕ್ ಸೆಕ್ಟರ್‌ನೊಳಗೆ ಇದು ಒಂದು ಅನಿವಾರ್ಯ ಇರುತ್ತದೆ. ಅಷ್ಟು ಅನುಕೂಲವಾಗಲಿಕ್ಕಿಲ್ಲ. ಆದರೆ ಸರ್ಕಾರದ ಆಡಳಿತದಲ್ಲಿರುವ ಉದ್ಯಮಗಳು ಪ್ರಗತಿಪರವಿದೆಯೆಂದು ಹೇಳುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಇದರ ಬಗ್ಗೆ ಕೆಲವು ಸಣ್ಣಪುಟ್ಟ ವಿಚಾರಗಳ ಸಲಹೆ ಮಾಡುವಂಥಾದ್ದು ಇರಬಹುದು. ಅವನ್ನು ಪರಿಶೀಲನೆ ಮಾಡಿ ಎಂದು ಹೇಳಿದರೆ ಸರ್ಕಾರದವರು ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಒಪ್ಪಬಹುದು. ಈ ವಿಚಾರವಾಗಿ ಒಂದು ಕಮಿಟಿಯನ್ನು ರಚನೆ ಮಾಡುತ್ತೇವೆಂದು ಸೂಚನೆ ಮಾಡಿದ್ದಾರೆ. ಅದನ್ನು ಸರ್ಕಾರದವರು ಜಾಗ್ರತೆಯಾಗಿ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಎಸ್‌ಟೇಟ್ಸ್ ಬಗ್ಗೆ ಅದರ ಅಂಕಿ ಅಂಶಗಳನ್ನು ನೋಡಿದರೆ A total number of 209 have been completed so far and another 42 sheds are under construction ಎಂಬುದಾಗಿ ವಿವರಣೆ ಕೊಟ್ಟಿದ್ದಾರೆ. ಆದರೆ ಇಂಡಸ್ಟ್ರಿಯಲ್ ಎಸ್‌ಟೇಟ್ಸ್ ಈ ಪ್ರಾಂತದಲ್ಲಿ ಎಷ್ಟು ಆಗಬೇಕೋ ಅಷ್ಟನ್ನು ಸರ್ಕಾರ ಪೂರೈಸಿಲ್ಲವೆಂದು ನನ್ನ ಅಭಿಪ್ರಾಯ. ಅದನ್ನು ಆದಷ್ಟು ಜಾಗ್ರತೆಯಾಗಿ ಪೂರೈಸಬೇಕೆಂದು ಹೇಳುತ್ತೇನೆ. ಇನ್ನೂ 17 ಇಂಡಸ್ಟ್ರಿಯಲ್ ಎಸ್ಟೇಟ್ಸ್ ಮಾಡಬೇಕಾದುದು ಇರಬಹುದು. ಆದರೆ ನಿಜವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸರ್ಕಾರದವರು ಹೆಚ್ಚಿನ ಉತ್ತೇಜನವನ್ನು ಕೊಡುವ ಅವಶ್ಯಕತೆ ಇದೆ. ಇವುಗಳ ಬೇಡಿಕೆ ಇತ್ತೀಚೆಗೆ ಬಹಳ ತೀಕ್ಷ್ಣ ಇದೆ. ಇವುಗಳ ಬಗ್ಗೆ ಹೆಚ್ಚಿನ ಜಾಗೃತಿ ಬೇಕು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ವರ್ಷ ಅಂದರೆ 1966-67 ನೇ ಇಸವಿಯಲ್ಲಿ ಇನ್ನೂ 20 ಇಂಡ್ರಸ್ಟ್ರಿಯಲ್ ಎಸ್ಟೇಟುಗಳನ್ನು ಸರ್ಕಾರದವರು ಮಾಡಬೇಕೆಂದು ಇದ್ದಾರೆಂದು ಹೇಳಿದರು. ಪ್ರಯಾರಿಟಿ ಬೇಸಿಸ್ ಮೇಲೆ ಎಲ್ಲಿ ಜಮೀನು ಸುಲಭವಾಗಿ ಸಿಗುತ್ತದೋ ಅಲ್ಲಿ ಇಂಡ್ರಸ್ಟ್ರಿಯಲ್ ಎಸ್ಟೇಟ್ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸರ್ಕಾರದವರು ಯಾವ ದಕ್ಷತೆಯಿಂದ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅಷ್ಟೇ ದಕ್ಷತೆಯಿಂದ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾನು ಹೇಳುತ್ತೇನೆ. ಎಲ್ಲಿ ಜಮೀನುಗಳು ಇವೆಯೆಂದು ಸಾರ್ವಜನಿಕರು ತೋರಿಸುತ್ತಾರೋ ಅಂತಹ ಜಮೀನನ್ನು ಇವರು ಸ್ವಾಧೀನಪಡಿಸಿಕೊಳ್ಳುವ ವಿಚಾರದಲ್ಲಿ 18 ವರ್ಷಗಳಾದರೂ ಪ್ರಗತಿಯಾಗಿಲ್ಲ. ಗದಗ್‌ನಲ್ಲಿ ಸುಮಾರು 2 ವರ್ಷಗಳಿಂದಲೂ ಲ್ಯಾಂಡ್ ಅಕ್ವಿಸಿಷನ್ ಕೆಲಸ ನಡೆದು ಒಂದು ರೀತಿಯಲ್ಲಿ ಒಂದು ಮಟ್ಟಕ್ಕೆ ಬಂದು ಅದರ ವ್ಯಾಲ್ಯುಯೇಷನ್ ಮಾಡಿ, ನೋಟೀಸ್ ತೆಗೆಯುವ ಸಂದರ್ಭ ಬಂದಿದೆ. ನನ್ನ ಗದಗ್ ಕ್ಷೇತ್ರದಲ್ಲಿ ಚಿಕ್ಕಪುಟ್ಟ ಉದ್ಯಮಗಳನ್ನು ಮಾಡಲು ಅಲ್ಲಿನ ಜನರು ತಯಾರು

ಇದ್ದಾರೆ. ಅಲ್ಲಿ ಕಚ್ಚಾಮಾಲುಗಳಿಗೆ ಏನೂ ಕುಂದಕೊರತೆ ಇಲ್ಲ. ಅದು ಬೇಕಾದಷ್ಟು ಇದೆ. ಇದನ್ನು ಉಪಯೋಗಿಸಲು ಅವಕಾಶ ಮಾಡುವ ಸಲುವಾಗಿ ಇಂಡಸ್ಟ್ರಿಯಲ್ ಎಸ್ಟೇಟನ್ನು ಬೇಗನೆ ಅಲ್ಲಿ ತೆರೆಯಬೇಕೆಂದು ಹೇಳುತ್ತೇನೆ.

ಇನ್ನು ನಾನ್-ಫೆರಸ್ ಮೆಟಲ್ಸ್‌ನಿಂದ ಬೇಕಾದಷ್ಟು ಉದ್ಯಮಗಳನ್ನು ನಮ್ಮ ದೇಶದಲ್ಲಿ ಅಭಿವೃದ್ಧಿಮಾಡಬೇಕೆಂಬುದಾಗಿ ವರ್ಷೇ ವರ್ಷೇ ಇಲ್ಲಿ ಹೇಳುತ್ತಿದ್ದರೂ ಅತ್ತ ಕಡೆ ಸರ್ಕಾರದ ಗಮನ ಹೋಗಿಲ್ಲ. ಆದರೆ ಅವುಗಳನ್ನು ಒಂದು ಉದ್ಯಮದಲ್ಲಿ ರೂಪಾಂತರಮಾಡುವುದಕ್ಕೆ ಬದಲಾಗಿ ಕಾಳಸಂತೆಯಲ್ಲಿ ಮಾರಾಟಮಾಡುವುದಕ್ಕೆ ಅವಕಾಶವಾಗುವುದನ್ನು ನಾನು ಒಪ್ಪುವುದಿಲ್ಲ.

[MR. DEPUTY SPEAKER in the Chair.]

ಇನ್ನು ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಮಾಡುವುದರ ಬಗ್ಗೆ ನಮ್ಮ ಗದಗ್ ತಾಲ್ಲೂಕಾದಲ್ಲಿ ಜಿನ್ ಸ್ಪೇರ್ ಪಾರ್ಟ್ಸ್‌ಮಾಡುವ ಉದ್ದಿಮೆದಾರರು, ಹತ್ತಿಯನ್ನು ಜಿನ್ ಮಾಡುವ ಕೆಲಸಗಾರರು ನಮ್ಮಲ್ಲಿ ಎರಡು ಮೂರು ಕಡೆಗಳಲ್ಲಿದ್ದಾರೆ. ಇದೂ ಅಲ್ಲದೆ ಗಾಡ್ರೆಜ್ ಸೇಫ್‌ಗಳನ್ನು ಮಾಡುವವರು ಇದ್ದಾರೆ. ಒಳ್ಳೆಯ ಸ್ಟೀಲ್ ಕಬ್ ಬೋರ್ಡುಗಳನ್ನು ಮಾಡುವ ಕೆಲಸಗಾರರು ನಮ್ಮಲ್ಲಿದ್ದಾರೆ, ಅಗ್ರಿಕಲ್‌ಚರ್ ಇಂಪ್ಲಿಮೆಂಟ್‌ಗಳನ್ನು ಮಾಡುವ ಕೆಲಸಗಾರರು ನಮ್ಮಲ್ಲಿದ್ದಾರೆ, ಸೂಯಿಂಗ್ ಮೆಷಿನ್ನುಗಳು ಎಂದರೆ ಹೊಲಿಗೆ ಯಂತ್ರಗಳನ್ನು ಮಾಡುವ ಯಾಂತ್ರಿಕರು ನಮ್ಮಲ್ಲಿದ್ದಾರೆ. ಇಂತಹ ವಿವಿಧ ಇಂಡಸ್ಟ್ರಿಗಳನ್ನು ಮಾಡಲು ಅನುಕೂಲವಾಗುವ ಹಾಗೆ ಇಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟು ಮಾಡಬೇಕೆನ್ನುವ ಬೇಡಿಕೆ ಸರಕಾರದ ಮುಂದೆ ಬಹಳ ದಿನಗಳಿಂದಲೂ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆದಷ್ಟು ತೀವ್ರಗಾಗಿ ಗಮನ ಕೊಟ್ಟು ಪರಿಶೀಲನೆ ಮಾಡುವುದು ಅವಶ್ಯವಿದೆ. ಇಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟು ಮಾಡಲು ಬೇಕಾಗುವ ಎಲ್ಲ ಉದ್ದಿಮೆದಾರರು ನಮ್ಮಲ್ಲಿ ಅನೇಕರು ಇದ್ದಾರೆ. ಇಲ್ಲಗೆ ಇಂಡಸ್ಟ್ರಿಯಲ್ ಎಸ್ಟೇಟಿನ ಅವಶ್ಯಕತೆ ಇದೆ, ಇದನ್ನು ಬೇಗನೆ ಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಇದಕ್ಕಾಗಿ ಹನ್ನೆರಡು ಎಕರೆಯಷ್ಟು ಭೂಮಿಯನ್ನು ಕೂಡ ತೆಗೆದುಕೊಳ್ಳಬೇಕು ಎನ್ನುವ ಪ್ರಯತ್ನವೂ ನಡೆದಿದೆ. ಇದು ಅತ್ಯಾವಶ್ಯಕ ವಾದುದು. ತೀವ್ರವಾಗಿ ಸರಕಾರ ತಕ್ಷಣದಲ್ಲೇ ಇದರ ಕೆಲಸಗಳನ್ನು ಮಾಡಲು ಪ್ರಾರಂಭ ಮಾಡ ಬೇಕು ಎಂದು ಇಲ್ಲಿ ಕೇಳಿಕೊಳ್ಳುತ್ತೇನೆ.

ರೂರಲ್ ಆರ್ಟಿಸಾನ್ ಇನ್‌ಸ್ಟಿಟ್ಯೂಟುಗಳು ಎಂದು ಕೆಲವು ಕಡೆಗಳಲ್ಲಿ ಕೆಲಸ ಮಾಡುತ್ತಿವೆ. ಇಂತಹ ಇನ್‌ಸ್ಟಿಟ್ಯೂಟುಗಳಾಗಲು ಹೆಚ್ಚು ಪ್ರೋತ್ಸಾಹಿಸಬೇಕು. ಅಲ್ಲದೆ ಚಿಕ್ಕ ಪುಟ್ಟ ಉದ್ಯಮ ಮಾಡುವಂತಹವರಿಗೆ ಸರಿಯಾದ ತರಬೇತಿ ಕೊಟ್ಟು ಮುಂದೆ ಅವರೇ ಒಂದು ಕಸಬನ್ನು ಮಾಡಿ ಕೊಂಡು ಹೋಗಲು ಅವರಿಗೆ ಆಸಕ್ತಿ ಉಂಟಾಗುತ್ತದೆ. ಆದುದರಿಂದ ರೂರಲ್ ಆರ್ಟಿಸಾನ್ ಇನ್‌ಸ್ಟಿಟ್ಯೂಟುಗಳು ಸರಿಯಾದ ರೀತಿಯಲ್ಲಿ ನಡೆಯಲು ಹೆಚ್ಚು ಪ್ರೋತ್ಸಾಹ ಕೊಡಬೇಕು ಎಂದು ಇಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲದೆ ರೂರಲ್ ಆರ್ಟಿಸಾನ್ ಇನ್‌ಸ್ಟಿಟ್ಯೂಷನ್ನುಗಳು ಎಂದು ಇಲ್ಲಿಯ ತನಕ ಮಾಡಿರುವ ಕಡೆಗಳಲ್ಲಿ ಅವಕ್ಕೆ ಸರಿಯಾದ ಕಟ್ಟಡಗಳೇ ಇಲ್ಲ. ಯಾವುದೋ ಹಳೆಯ ಮನೆ ಯಲ್ಲೋ ಇಲ್ಲವೇ ಧರ್ಮಶಾಲೆಗಳಲ್ಲೋ ಈ ಇನ್‌ಸ್ಟಿಟ್ಯೂಟುಗಳು ಕೆಲಸಮಾಡುತ್ತಿವೆ. ಇವು ಇದಕ್ಕೆ ಸರಿಯಾದ ಸ್ಥಳಗಳಲ್ಲ. ಇದರಿಂದ ಸರಿಯಾಗಿ ಇಲ್ಲಿ ಕೆಲಸಗಳನ್ನು ಮಾಡುವುದಕ್ಕಾಗು ವುದಿಲ್ಲ. ಇದರಿಂದ ಅನಾನುಕೂಲಗಳು ಜನರಿಗೆ ಆಗುತ್ತವೆ. ಯಾವುದಕ್ಕೂ ಸರಿಯಾದ ಎಸ್ಟಾಬ್ಲಿಷ್‌ಮೆಂಟು ಇದ್ದರೆ ಅದರಿಂದ ಕಾರ್ಯಕ್ರಮ ಉತ್ತಮವಾಗುತ್ತದೆ. ನಾನು ನೋಡಿದಂತೆ ಎಲ್ಲೂ ಇದಕ್ಕೆ ಅನುಕೂಲವಾಗುವ ಹಾಗೆ ಸರಿಯಾದ ಕಟ್ಟಡಗಳನ್ನು ಕಟ್ಟಿದಂತೆ ಕಾಣುತ್ತಿಲ್ಲ. ಇಂತಹ ರೂರಲ್ ಆರ್ಟಿಸಾನ್ ಇನ್‌ಸ್ಟಿಟ್ಯೂಟುಗಳು ಕೆಲಸ ಮಾಡಲು ಅನುಕೂಲವಾಗುವಂತೆ ಹೆಚ್ಚು ಪ್ರೋತ್ಸಾಹ ಮಾಡಬೇಕು. ಈಗ ರಾಜ್ಯದಲ್ಲಿ 22 ಸೆಂಟರುಗಳು ಎಂದು ಮಾಡಿದ್ದಾರೆ ಮತ್ತು ಒಂಬತ್ತು ಸಬ್ ಸೆಂಟರುಗಳು ಎಂದು ಮಾಡಿ ಈಗಾಗಲೇ ಏಳು ಸಾವಿರ ಜನರಿಗೆ ತರಬೇತಿಯನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಇದರ ಮೂಲಕ ಸುಮಾರು ಏಳು ಸಾವಿರ ಜನ ತರಬೇತಿ ಪಡೆದು ಹೋದಮೇಲೆ ಹಾಗೆ ಹೋಗಿರುವವರು ಏನಾದರೂ ಅವರೇ ಸ್ವಂತವಾಗಿ ಯಾವುದಾದರೂ ಉದ್ಯಮದಲ್ಲಿ ತೊಡಗಿದ್ದಾರೆಯೇ ಹೇಗೆ ಎನ್ನುವುದನ್ನು ಸರಕಾರ ಪರಿಶೀಲನೆ ಮಾಡಿ ದೆಯೇ? ತರಬೇತಿಯನ್ನು ವಿವಿಧ ಭಾಗದಲ್ಲಿ ಕೊಡಲಾಗುತ್ತಿದೆ. ಕಾರ್ಪೆಂಟರಿ, ಸ್ಮಿತಿ, ವೀವಿಂಗ್ ರೋಪ್‌ಮೇಕಿಂಗ್ ಹೀಗೆ ಯಾವ ಯಾವುದೋ ಭಾಗಗಳಲ್ಲಿ ತರಬೇತಿಯನ್ನು ಪಡೆದು ಹೋದವರು ಅವರೇನಾದರೂ ಸ್ವಂತವಾದ ಉದ್ಯಮವನ್ನು ಮಾಡಲು ಪ್ರಯತ್ನ ಮಾಡಿದ್ದಾರೆಯೇ ಎನ್ನುವುದನ್ನು ಸರಕಾರ ಸ್ವಲ್ಪ ಪರಿಶೀಲನೆ ಮಾಡಬೇಕು. ಹಾಗೆ ಮಾಡದೇ ಇದ್ದರೆ ಇಲ್ಲಿ ತರಬೇತಿ ಪಡೆದುದು ವ್ಯರ್ಥವಾಗುತ್ತದೆ ಮತ್ತು ನಿರುದ್ಯೋಗವೂ ಹೆಚ್ಚುತ್ತದೆ. ಯಾವುದಾದರೂ ಒಂದು ಮಟ್ಟಕ್ಕೆ

(ಶ್ರೀ ಕೆ. ಪಿ. ಗದಗ್)

ಇವರು ಬರದೇ ಹೋದರೆ ಸರಕಾರದವರು ಏನು ಗುರಿ ಇಟ್ಟುಕೊಂಡು ಇದ್ದಾರೋ ಅದನ್ನು ಮುಟ್ಟು ದಂತೆ ಆದರೆ ಅದರಿಂದೇನು ಉಪಯೋಗವಾಗುತ್ತದೆ ಎನ್ನುವುದನ್ನು ಸರಕಾರ ಸ್ವಲ್ಪ ಪರಿಶೀಲಿಸಿ ನೋಡಬೇಕೆಂದು ಕೇಳುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ಸಂಗತಿ ಇಲ್ಲಿ ಹೇಳಬೇಕಾಗಿದೆ ಈ ಅರ್ಟಿಸಾನ್ ಇನ್ಸ್ಟಿಟ್ಯೂಟು ಗಳಲ್ಲಿ ಸಾಮಾನ್ಯವಾಗಿ ಸೂಪರಿಂಟೆಂಡೆಂಟರುಗಳೆಂದು ಏನು ಇದ್ದಾರೆ ಅವರಲ್ಲಿ ಹೆಚ್ಚು ಜನರು ಗ್ರ್ಯಾಜುಯೇಟುಗಳಾಗಿರತಕ್ಕವರು. ಇವರೇ ಇಂಡಸ್ಟ್ರಿಯಲ್ ಇನ್ಸ್‌ಪೆಕ್ಟರುಗಳಾಗಿ ಕೆಲಸ ಮಾಡು ತ್ತಿದ್ದಾರೆ. ಇವರೆಲ್ಲರೂ ಪ್ರಾಯಶಃ ಬಿ.ಕಾಂ., ಬಿ.ಎಸ್.ಸಿ., ಅಥವಾ ಬಿ.ಎಸ್.ಸಿ. (ಟೆಕ್ಸ್‌ಟೈಲ್ಸ್) ಪರೀಕ್ಷೆಗಳನ್ನು ಪಾಸುಮಾಡಿದವರೇ ಇದ್ದಾರೆ. ಇವರ ಸಂಬಳದ ಸ್ಕೇಲು 150 ರೂಪಾಯಿಗಳಿಂದ 225ರ ವರೆಗೆ ಇದೆ. ಇವರ ರೆಸ್‌ಪಾನ್ಸ್‌ಬಿಲಿಟೀಸ್ ಬಹಳವಾಗಿವೆ ಮತ್ತು ಬಹಳ ಜವಾಬುದಾರಿಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಇಲ್ಲಿ ಜೂನಿಯರ್ ಇಂಡಸ್ಟ್ರಿಯಲ್ ಸೂಪರ್‌ವೈಸರ್ ಎಂದು ಇದ್ದಾರೆ. ಇವರೆಲ್ಲಾ ಎಸ್.ಎಸ್.ಎಲ್.ಸಿ. ಪಾಸು ಮಾಡಿದವರು ಹಾಗೂ ಫೇಲ್ ಆದವರೂ ಇದ್ದಾರೆ. ಇವರಿಗೆ ಯಾವ ತರಹದ ರೆಸ್‌ಪಾನ್‌ಸಿಬಿಲಿಟಿಗಳೂ ಇಲ್ಲ. ಇವರ ಸಂಬಳದ ಸ್ಕೇಲುಗಳು 50 ರೂಪಾಯಿಗಳಿಂದ 100 ರೂಪಾಯಿವರೆಗೆ ಇದೆ. ಆದರೆ ಇಲ್ಲಿ ಈಕ್ವೇಟು ಮಾಡುವಾಗ ಜೂನಿ ಯರು ಇನ್ಸ್‌ಪೆಕ್ಟರವರ ಜೊತೆಯಲ್ಲಿಯೇ ಸೂಪರಿಂಟೆಂಡರವರನ್ನೂ ಕೂಡ ಈಕ್ವೇಟು ಮಾಡಿದರೆ ಹೇಗೆ ? ಈ ರೀತಿ ಮಾಡಿರುವುದು ನಿಜವಾಗಿದ್ದರೆ ಇದು ಸರಿಯಲ್ಲ ಮತ್ತು ಯಾವ ಆಧಾರದ ಮೇಲೂ ಇದು ಸರಿ ಹೋಗುವುದಿಲ್ಲ. ಏನಾದರೂ ಇವರಲ್ಲಿ ಈಕ್ವೇಟು ಮಾಡಬೇಕಾಗಿದ್ದರೆ ಅವರ ಕ್ವಾಲಿ ಫಿಕೇಷನ್ನುಗಳೇನು, ಅವರ ಡ್ಯೂಟಿಗಳೇನು ಇವುಗಳನ್ನು ಸಾಮಾನ್ಯವಾಗಿ ಗಮನಕ್ಕೆ ತೆಗೆದುಕೊಂಡು ಸರಿ ಮಾಡದೇ ಇದ್ದರೆ ಅದು ಸರಿಯಾಗಿರುವುದಿಲ್ಲ. ಈ ಪ್ರಕಾರ ಈಗ ಮಾಡಿದೆ ಎಂದರೆ ಅದು ಪರಮಾವಧಿಯ ಅನ್ಯಾಯ ಎಂದು ಆಗ್ರಹಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ಹೇಳುತ್ತೇನೆ. ಇದನ್ನು ಸೂಕ್ತವಾಗಿ ಪರಿಶೀಲನೆ ಮಾಡಿ ಸರಿಮಾಡುವುದು ಅವಶ್ಯಕ ಎಂದು ಈ ಮೂಲಕ ಹೇಳಬಯಸುತ್ತೇನೆ.

ಇನ್ನು ನಮ್ಮ ಪ್ರಾಂತದಲ್ಲಿ ದೊಡ್ಡದಾದ ಉದ್ಯಮಗಳು ಬಹಳವಾಗುತ್ತಿವೆ. ಇದರ ಮುಖ್ಯ ಉದ್ದೇಶ ಪ್ರಾಂತದಲ್ಲಿರುವ ದಾರಿದ್ರ್ಯವನ್ನು ಅಳಿಯುವಂತೆ ಮಾಡಿ ಜನಕ್ಕೆ ಉದ್ಯೋಗಗಳನ್ನು ಕೊಡ ಬೇಕೆಂದು ಇದೆ. ಆದರೆ ಈಗ ಮಾಡುತ್ತಿರುವ ದೊಡ್ಡ ಉದ್ಯಮಗಳಿಂದ ದೇಶದಲ್ಲಿನ ದಾರಿದ್ರ್ಯ ಅಳಿಯುವಂತಿಲ್ಲ. ಏಕೆಂದರೆ ದೊಡ್ಡ ಉದ್ಯಮಗಳಾಗಲೀ ಹೆವಿ ಇಂಡಸ್ಟ್ರೀಸ್‌ಗಳಾಗಲೀ ಮಿಡಿಯಮ್ ಇಂಡಸ್ಟ್ರೀಗಳಾಗಲೀ ಹೆಚ್ಚು ಸರಕಾರದವರದೇ ಆಗಿ ಅಧಿಕ ಬಂಡವಾಳವನ್ನು ಹಾಕಿರುವ ಕಂಪನಿ ಗಳಾಗಿವೆ. ಇದರಲ್ಲಿ ಅಲ್ಪ ಸ್ವಲ್ಪ ಲಾಭ ಬಂದರೆ ಅದು ಕೆಲವು ವ್ಯಕ್ತಿ ಜನರಿಗೆ ಮತ್ತು ಸರ್ಕಾರಕ್ಕೆ ಹೋಗುತ್ತದೆ. ಈಗ ಆಗಿರುವ ಉದ್ಯಮಗಳಿಂದ ಹೆಚ್ಚು ಜನರಿಗೆ ಉದ್ಯೋಗಗಳು ಸಿಗುವುದಿಲ್ಲಾ ಮತ್ತು ಲಾಭ ಸಿಗುವುದಿಲ್ಲ. ಏಕೆಂದರೆ ಎಲ್ಲ ಉದ್ಯಮಗಳನ್ನೂ ಯಾಂತ್ರಿಕವಾಗಿ ಮಾಡಲು ಹೋದರೆ ಉದ್ಯೋಗಗಳನ್ನು ಕೊಡುವುದೂ ಕಡಿಮೆಯಾಗುತ್ತದೆ. ಬಹುಶಃ ಇದರಿಂದ ಜನಕ್ಕೆ ಉದ್ಯೋಗಗಳು ಸಿಗದಂತಹ ಪರಿಸ್ಥಿತಿ ಇದೆ ಈ ಸಮಸ್ಯೆಯನ್ನು ಯಾವ ರೀತಿಯಾಗಿ ಪರಿಹಾರ ಮಾಡಬೇಕು ಎನ್ನುವುದು ಬಹಳ ಗುರುತರವಾದ ಸಮಸ್ಯೆ. ಇದನ್ನು ಬಹಳ ಆಳವಾಗಿ ವಿಚಾರ ಮಾಡಬೇಕು. ಈಗಿನ ಯುಗ ಯಾಂತ್ರಿಕ ಯುಗ. ಯಂತ್ರಗಳನ್ನು ಬಿಡಬೇಕು ಎನ್ನುವುದು ನನ್ನ ಅಭಿಪ್ರಾಯವಲ್ಲ. ಈ ಪ್ರಶ್ನೆ ಹೇಗೆ ಬಿಡಿಸಬೇಕು ಎನ್ನುವುದನ್ನು ತಜ್ಞರು ಹೇಳಬೇಕು, ಬಲ್ಲವರು ಇದನ್ನು ವಿಚಾರ ಮಾಡಬೇಕು. ಇದರಲ್ಲಿ (Superficial idea) ಸೂಪರ್‌ಫಿಷಿಯಲ್ ಐಡಿಯಾಗಳೇ ಹೆಚ್ಚು. ನಮ್ಮಲ್ಲಿ ಅನೇಕ ತರಹದ ಉದ್ಯಮಗಳಿಗಾಗಿ ಬಹಳ ಹಣ ವೆಚ್ಚವಾಗುತ್ತಿದೆ. ಎಲ್ಲಿ ಉದ್ಯಮಗಳನ್ನು ಮಾಡಬಹುದೋ ಅಲ್ಲಿ ಯಾವ ಉದ್ಯಮಗಳನ್ನೂ ಮಾಡುತ್ತಿಲ್ಲ. ಅನಾವಶ್ಯಕವಾದ ಉದ್ಯಮಗಳನ್ನು ಮಾಡುತ್ತಿದ್ದಾರೆ.

9-30 A.M.

ಈಗ ಹಳ್ಳಿ ಉದ್ಯಮಗಳು ಎಂದರೆ ಟ್ರೆಡೀಷನಲ್ ಇಂಡಸ್ಟ್ರೀಸ್ (traditional industries) ನಶಿಸಿ ಹೋಗುತ್ತಾ ಇವೆ. ಇದನ್ನು ಉಚ್ಚ ಮಟ್ಟದಲ್ಲಿ ತಜ್ಞರು ವಿಚಾರ ಮಾಡಿ ಹೆಚ್ಚು ಜನರಿಗೆ ಉದ್ಯಮ ಸಿಕ್ಕುವಂತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಮಾನ್ಯ ಕೈಗಾರಿಕಾ ಸಚಿವರು ಮಂಡಿಸಿರತಕ್ಕ ಕೈಗಾರಿಕೆ ಮತ್ತು ಅದಕ್ಕೆ ಸಂಬಂಧಪಟ್ಟ ಡಿಮ್ಯಾಂಡುಗಳನ್ನು ನಾನು ಬಹಳ ತೀವ್ರವಾಗಿ ವಿರೋ ಧಿಸುತ್ತೇನೆ. ಸರ್ಕಾರದ ಕೈಗಾರಿಕಾ ನೀತಿಯ ವಿಫಲತೆಯನ್ನು ನಾವು ಇವತ್ತು ಎಲ್ಲಾ ಕಡೆಯಲ್ಲೂ

ನೋಡುತ್ತಾ ಇದ್ದೇವೆ. ಇಂಡಿಯಾ ದೇಶದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಯಾವ ಒಂದು ಉನ್ನತ ಸ್ಥಾನವನ್ನು ಪಡೆದಿತ್ತೋ ಅಂತಹ ಈ ಮೈಸೂರು ದೇಶ ಇವತ್ತಿನ ದಿವಸ ಈ ಕೈಗಾರಿಕಾ ಭೂಪಟ ದಲ್ಲಿ ಅದರ ಕೀರ್ತಿ ಕೆಟ್ಟು ಕೆಳ ಮಟ್ಟದಲ್ಲಿ ನಿಂತಿದೆ. ಏಕೆ ಇಂತಹ ದುಸ್ಥಿತಿಗೆ ಬಂತು ಎಂಬುದನ್ನು ಇವತ್ತು ನೀವು ನಿಮ್ಮ ಮನಸ್ಸಿನಲ್ಲಿ ನೀವೇ ಅಳತೆ ಮಾಡಿಕೊಳ್ಳಬೇಕು. ನಿಮ್ಮ ಹೃದಯವನ್ನು ನೀವೇ ಪರಿಶೋಧನೆ ಮಾಡಿಕೊಳ್ಳಬೇಕು. ಯಾವ ಕೈಗಾರಿಕೆಯ ಕೀರ್ತಿಯನ್ನು ದಿವಂಗತ ಪೂಜ್ಯ ವಿಶ್ವೇಶ್ವರಯ್ಯನವರು ಅವರ ಕಾಲದಲ್ಲಿ ಉನ್ನತ ಮಟ್ಟಕ್ಕೆ ತಂದು ನಿಲ್ಲಿಸಿದ್ದರೋ ಅದು ಇವತ್ತಿನ ದಿವಸ ಗಾಳೀಪಟ ಆಗಿದೆ. ಮೈಸೂರು ದೇಶದ ಆದಾಯ ಕೇವಲ 1-2 ಕೋಟಿ ರೂಪಾಯಿ ಇದ್ದಾಗ ಮೈಸೂರು ಸರ್ಕಾರ ತನ್ನಷ್ಟಕ್ಕೆ ತಾನೆ ತನ್ನ ಸ್ವಂತ ಬಂಡವಾಳದಿಂದ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿತು. ಅಂತಹ ದೂರದೃಷ್ಟಿ ಎಲ್ಲಿ? ಮೈಸೂರಿನ ವರಮಾನ ಸುಮಾರು 150 ಕೋಟಿ ರೂಪಾಯಿಗಳಾಗಿರತಕ್ಕ ಈ ಕಾಲದಲ್ಲಿ ಅವರಿಗೇನಾದರೂ ಇಂತಹ ಅವಕಾಶ ಸಿಕ್ಕಿದ್ದರೆ ಬಹುಶಃ ಚಿನ್ನದ ಭಂಡಾರವನ್ನೇ ಮಾಡುತ್ತಾ ಇದ್ದರೋ ಏನೋ! ಅದು ಇವತ್ತು ತಮ್ಮ ಕೈಯಲ್ಲಿ ಸಿಕ್ಕಿ ಕೆಳಕ್ಕೆ ಬಿದ್ದಿದೆ. ತಮ್ಮ ಕೈಗಾರಿಕಾ ನೀತಿಯ ಈ ವಿಫಲತೆ ಏನಿದೆ ಇದನ್ನು ಯೋಚನೆ ಮಾಡುತ್ತಾ ಹೋದರೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಮೈಸೂರು ದೇಶ ಬಹಳ ಪ್ರಾಮುಖ್ಯವಾದ ಚಿನ್ನದ ನಾಡಾಗಿತ್ತು. ಚಿನ್ನದ ಗಣಿ ಇದ್ದಂತಹ ನಾಡು ಇದು. ಗಂಧದ ನಾಡು. ರೇಷ್ಮೆಯನ್ನು ಹೊಂದಿದೆ. ಈಗ ಚಿನ್ನದ ಗಣಿಯನ್ನು ಮಾರಿಬಿಟ್ಟರಿ, ಕೇಂದ್ರದವರಿಗೆ. ಇದೇ ರೀತಿ ಯಾವ ಕೈಗಾರಿಕೆಗಳು ಕೀರ್ತಿಯನ್ನು ಪಡೆದಿದ್ದವೋ ಅವನ್ನು ಬೇರೆಯವರಿಗೆ ವಹಿಸುವ ನೀತಿಯನ್ನು ಹಿಡಿದು ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಮೈಸೂರು ದೇಶದ ಖನಿಜ ಸಂಪತ್ತು ಅರಣ್ಯಸಂಪತ್ತು ಮತ್ತು ವಿದ್ಯುಚ್ಛಕ್ತಿ ಸಂಪತ್ತು ಭಾರತ ದೇಶದಲ್ಲಿ ನಿಜವಾಗಿಯೂ ಉನ್ನತ ಸ್ಥಾನವನ್ನು ಪಡೆದಿದೆ. ಕೊಡಚಾದ್ರಿ, ಸಹ್ಯಾದ್ರಿ ಇವೆಲ್ಲಾ ಇವೆ, ಸಂಪತ್ತಿನ ಸಮುದ್ರ ಇರತಕ್ಕ ದೇಶ ಮೈಸೂರು ದೇಶ, ಇಂತಹ ದೇಶದಲ್ಲಿ ಇವತ್ತಿನ ದಿನ ಕೈಗಾರಿಕಾ ನೀತಿ ವಿಫಲವಾಗಿದೆ ಎಂದರೆ ಸರ್ಕಾರ ಏನಾದರೂ ಇದೆಯೇ? ಅಥವಾ ಸರ್ಕಾರದವರೆ ಏನಾದರೂ ಒಂದು ಪ್ಲಾಟ್ ಮಾಡಿ ಮೈಸೂರು ದೇಶದ ಕೈಗಾರಿಕೆಯನ್ನು ಭೂಪಟದಿಂದ ಅಳಿಸಿಬಿಡಬೇಕೆಂದು ಮನಸ್ಸು ಮಾಡಿದ್ದಾರೆಯೇ ಎಂದು ಸಂಶಯವಾಗುತ್ತಾ ಇದೆ. ಇಂತಹ ಪರಿಸ್ಥಿತಿಯನ್ನು ಉದ್ಭವ ಮಾಡಿರುವುದನ್ನು ತಾವು ಇವತ್ತು ಬಹಳ ಆಳವಾಗಿ ಯೋಚನೆ ಮಾಡಬೇಕಾಗಿದೆ. ಏಕೆ ಇಂತಹ ದುಸ್ಥಿತಿ ಬಂತು ? ನಮ್ಮ ದೇಶದಲ್ಲಿ ಹೇರಳವಾಗಿ ಖನಿಜ ಇದೆ. ಕಬ್ಬಿಣದ ಅದುರು, ಲೈಮ್‌ಸ್ಟೋನು, ಕ್ರೋಮೈಟು ಇದೆಲ್ಲಾ ಇದೆ. ಅರಣ್ಯ ಸಂಪತ್ತು ಇದೆ. ವಿದ್ಯುಚ್ಛಕ್ತಿ ಸಂಪತ್ತು ಇದೆ. ಇಷ್ಟೆಲ್ಲಾ ಇದ್ದರೂ ಕೂಡ ನಮ್ಮ ಕೈಗಾರಿಕೆಯ ಸ್ಥಾನವನ್ನು ನೋಡುವುದಾದರೆ, ನಮ್ಮ ನೆರೆ ಪ್ರಾಂತವಾದ ಮದ್ರಾಸು, ಆಂಧ್ರ, ಮಹಾರಾಷ್ಟ್ರ ಇವುಗಳೆಲ್ಲಕ್ಕಿಂತಲೂ ಕೆಳ ಮಟ್ಟದಲ್ಲಿ ಇದ್ದೇವೆ. ಇವತ್ತು ವಿದ್ಯುಚ್ಛಕ್ತಿಯ ಉಪಯೋಗ ಕೂಡ ಆಲ್ ಇಂಡಿಯಾ ಪರ್ ಕ್ಯಾಪಿಟಾ 50-60 ಇದ್ದರೆ ನಮ್ಮದು 38·6. ಇದು 63-64ರ ಅಂಕಿ ಅಂಶ. ಇವತ್ತು ಇದೇ ನಮ್ಮ ದೇಶದ ಅಳತೆಗೋಲು. ನಮ್ಮ ಕೈಗಾರಿಕೆ ಎಷ್ಟರಮಟ್ಟಿಗೆ ಅಭಿವೃದ್ಧಿ ಮಾಡಿದ್ದೇವೆ ಎಂಬುದನ್ನು ಅಳತೆ ಮಾಡಬೇಕಾದರೆ ವಿದ್ಯುಚ್ಛಕ್ತಿ ಯಾವ ಮಟ್ಟದಲ್ಲಿ ಉಪಯೋಗಿಸುತ್ತಾ ಇದ್ದೇವೆ ಎಂಬುದನ್ನು ಗಮನಿಸಿದರೆ ಗೊತ್ತಾಗುತ್ತದೆ. ಪರ್ ಕ್ಯಾಪಿಟಾ ಇನ್‌ಕಂ ಕೂಡ ಆಲ್ ಇಂಡಿಯಾ ಅವರೇಜ್ 334 ಇದ್ದರೆ ನಮ್ಮದು 304 ಇದೆ. ನಾವು ಎಲ್ಲಾ ರೀತಿಯಲ್ಲೂ ಕೂಡ ಆಲ್ ಇಂಡಿಯಾ ಲೆವೆಲ್‌ಗಿಂತಲೂ ಬಹಳ ಕಡಿಮೆ ಮಟ್ಟದಲ್ಲಿದ್ದೇವೆ. ಈ ರೀತಿ ತಾವು ಒಂದು ಪ್ಲಾಟ್ ಮಾಡಿಕೊಂಡು ಕೈಗಾರಿಕಾ ಭೂಪಟದಿಂದಲೇ ನಮ್ಮ ಕೈಗಾರಿಕೆಗಳ ಅಭಿವೃದ್ಧಿಯನ್ನು ತೆಗೆದುಹಾಕಬೇಕೆಂದು ಮನಸ್ಸು ಮಾಡಿದಂತೆ ಇರುವುದು ನಮ್ಮ ದುರಾದೃಷ್ಟ ಎಂದು ನಾನು ಭಾವನೆ ಮಾಡುತ್ತೇನೆ. ಇಂಡಿಯಾ ದೇಶದ ಮಟ್ಟಕ್ಕೆ ನಮ್ಮ ದೇಶದ ಕೈಗಾರಿಕೆಗಳನ್ನು ಏರಿಸಬೇಕಾಗಿದ್ದರೆ ಏನು ಮಾಡಬೇಕೆಂಬುದನ್ನು ತಾವು ಯೋಚನೆ ಮಾಡಿದ್ದೇ ಆದರೆ ಅನೇಕ ರೀತಿಯಲ್ಲಿ ಮುಂದುವರಿಸಲು ಅನುಕೂಲಗಳು ಇವೆ.

ಪ್ರಥಮವಾಗಿ ಮೆಟಲ್ ಇಂಡಸ್ಟ್ರೀಸ್, ಲೋಹಗಳ ಕೈಗಾರಿಕೆಗೆ ಬೇಕಾದದ್ದು ಬಹಳ ಹೇರಳವಾಗಿ ನಮ್ಮ ದೇಶದಲ್ಲಿ ಸಿಕ್ಕತಕ್ಕ ಸನ್ನಿವೇಶ ಇದೆ. ಕಬ್ಬಿಣದ ಅದುರು, ಮ್ಯಾಂಗನೀಸ್, ಕ್ರೋಮೈಟ್ ಲೈಮ್‌ಸ್ಟೋನ್, ಮೈಸೂರು ದೇಶದಲ್ಲಿ ಸಾವಿರದಿಂದ ಸಾವಿರದ ಇನ್ನೂರು ಮಿಲಿಯನ್ ಟನ್‌ನಷ್ಟು ಸಿಕ್ಕುತ್ತದೆ. ಕಬ್ಬಿಣದ ಅದುರು ಹೊಸಪೇಟೆ ಭಾಗದಲ್ಲಿ ಸಿಕ್ಕುತ್ತದೆ. ಇಂಡಿಯಾ ದೇಶದಲ್ಲೇ ಇದು ಬಹಳ ಉತ್ಕೃಷ್ಟವಾದ ಅದುರು ಎಂದು ಪರೀಕ್ಷೆ ಮಾಡಿ ಹೇಳಿದ್ದಾರೆ. ತಜ್ಞರು ಇದನ್ನು ಒಪ್ಪಿಕೊಂಡಿದ್ದಾರೆ. ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾದರೆ ಸುಮಾರು 300-400 ಕೋಟಿ ರೂಪಾಯಿ ಬೇಕಾಗುತ್ತದೆ. ಕೇಂದ್ರ ಸರ್ಕಾರದಮೇಲೆ ಒತ್ತಾಯ ಮಾಡಿ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ನಿವೇದನೆ ಮಾಡಬೇಕಾಗಿದೆ. ಇಂಡಿಯಾ ದೇಶದಲ್ಲಿ ಇವತ್ತು ಸುಮಾರು 12-13 ಮಿಲಿಯನ್ ಟನ್

(ಶ್ರೀ ಎಸ್. ಶಿವಪ್ಪ)

ಉಕ್ಕಿನ ಅವಶ್ಯಕತೆ ಇದೆ. ತಯಾರಾಗುವುದು ಸುಮಾರು 4-5 ಮಿಲಿಯನ್ ಟನ್ ಮಾತ್ರ. ದಕ್ಷಿಣ ಭಾರತದಲ್ಲಿ ಉಕ್ಕಿನ ಕಾರ್ಖಾನೆ ಅಷ್ಟು ಭಾರಿ ಪ್ರಮಾಣದ್ದು ಎಲ್ಲೂ ಕೂಡ ಇಲ್ಲ. ದಕ್ಷಿಣ ಇಂಡಿಯಾಕ್ಕೆ ಬೇಕಾಗಿರತಕ್ಕ 2 ಅಥವಾ 3 ಮಿಲಿಯನ್ ಟನ್ ಉಕ್ಕನ್ನು ಕಲ್ಕತ್ತಾ ಅಥವಾ ದುರ್ಗಾಪುರ, ಭಿಲಾಯ್ ಕಾರ್ಖಾನೆಗಳಿಂದ ತರಬೇಕಾಗಿದೆ. ಎಂದರೆ ಅದರ ಖರ್ಚು ಎಷ್ಟಾಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ತಜ್ಞರ ಕಮಿಟಿ ಮಾಡಿದ್ದರು. ಉಕ್ಕು ಹೊಸಪೇಟೆಯಲ್ಲಿ ತಯಾರಾಗುವುದಾದರೆ ಭಿಲಾಯ್ ಮತ್ತು ದುರ್ಗಾಪುರದಲ್ಲಿ ತಯಾರಾಗತಕ್ಕ ಉಕ್ಕಿಗೂ ಇಲ್ಲಿ ತಯಾರಾಗತಕ್ಕ ಉಕ್ಕಿಗೂ ಬೆಲೆ ಹೋಲಿಸಿ ನೋಡುವುದಾದರೆ ಅಲ್ಲಿ ಒಂದು ಟನ್‌ಗೆ 110 ರೂಪಾಯಿ ಆದರೆ ಇಲ್ಲಿ 107-108 ರೂಪಾಯಿ ಆಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಕೋಲ್ ಒಂದನ್ನು ಬಿಟ್ಟರೆ ಬಾಕಿ ಎಲ್ಲಾ ಸೌಕರ್ಯ ದಕ್ಷಿಣ ಇಂಡಿಯಾದಲ್ಲಿ ಇದೆ, ವಿದ್ಯುಚ್ಛಕ್ತಿಯೂ ಕೂಡ ಹೇರಳವಾಗಿ ಇದೆ. . ಆ ದೃಷ್ಟಿಯಿಂದ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದೇ ಆದರೆ ದಕ್ಷಿಣ ಇಂಡಿಯಾಕ್ಕೆ ಬೇಕಾಗತಕ್ಕ ಉಕ್ಕನ್ನು ಸಪ್ಲೈ ಮಾಡಬಹುದು ಮಾತ್ರವಲ್ಲದೇ ಬಹಳ ಕಡಿಮೆ ದರದಲ್ಲೂ ಕೂಡ ಒದಗಿಸಬಹುದು ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇವತ್ತು ಮೈಸೂರು ದೇಶದಲ್ಲಿ ಕೈಗಾರಿಕಾ ಪ್ರಗತಿ ಹಿಂದುಳಿಯುವುದಕ್ಕೆ ಕಾರಣವೇನು ಎಂಬುದನ್ನು ಯೋಚನೆ ಮಾಡುವುದಾದರೆ ಅದು ನಮ್ಮ ಸರ್ಕಾರದ ಒಂದು ವಿಫಲ ನೀತಿ. ಆ ನೀತಿ ಏನೆಂದರೆ ಎಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಮುಂದೆ ಬರುತ್ತಾರೆಯೋ ಅಂತಹವರಿಗೆ ಒತ್ತಾಸೆ ಇಲ್ಲ. ಕೈಗಾರಿಕೋದ್ಯಮಿಗಳಿಗೆ ಸರ್ಕಾರದವರು ಯಾವ ಒಂದು ಅನುಕೂಲವನ್ನು ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಯಾವನು ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಬರುತ್ತಾನೆಯೋ ಅವನಿಗೆ ಸ್ವಲ್ಪ ಸಾಮಾನ್ಯ ಸೌಕರ್ಯ ಸಿಕ್ಕುತ್ತಾ ಇಲ್ಲ, ಹಣದ ಕೊರತೆ ಬಹಳವಾಗಿ ಇದೆ. ಅಷ್ಟೇ ಅಲ್ಲದೆ ಅಧಿಕಾರಿಗಳಿಂದ ಕಿರುಕುಳ. ಈ ಮೂರೂ ಸೇರಿ ಯಾವ ಕೈಗಾರಿಕೆಯನ್ನೇ ಆಗಲಿ ಸ್ಥಾಪನೆ ಮಾಡಲಿಕ್ಕೂ ಕೂಡ ಸರ್ಕಾರ ಉತ್ತೇಜನವನ್ನು ಕೊಡಲು ಮುಂದೆ ಬರುತ್ತಾ ಇಲ್ಲ. ಇದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಯಾರೂ ಮುಂದೆ ಬರುತ್ತಾ ಇಲ್ಲ. ನೆರೆ ಪ್ರಾಂತವಾದ ಮಹಾರಾಷ್ಟ್ರ ಆಂಧ್ರ, ಮದರಾಸ್‌ಗಳಲ್ಲಿ ಯಾರಾದರೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಮುಂದೆ ಬಂದರೆ ಅವರಿಗೆ ಸರ್ಕಾರದವರು ಎಲ್ಲಾ ವಿಧವಾದ ಸೌಕರ್ಯಗಳನ್ನು ಸೌಲತ್ತುಗಳನ್ನು ಶೀಘ್ರವಾಗಿ, ಚುರುಕಾಗಿ ಮಾಡಿಕೊಡುತ್ತಾ ಇರತಕ್ಕ ಸನ್ನಿವೇಶವನ್ನು ನಾವು ನೋಡುತ್ತಾ ಇದ್ದೇವೆ. ಮೈಸೂರು ದೇಶದಲ್ಲಿ ಯಾರಾದರೂ ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದರೆ ನೀವು ಕೊಡುವ ಪ್ರೋತ್ಸಾಹವಾದರೂ ಏನು ? ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಹೇಳಿಕೊಂಡು ಜೀವನಮಾಡಬೇಕಾದ ಪರಿಸ್ಥಿತಿ ಇದೆ, ಅವರ ಧ್ಯೇಯ, ತತ್ವ ಮುಂತಾದುವುಗಳಿಗೆ ಸರಿಯಾಗಿ ಗಮನಕೊಡುತ್ತಿಲ್ಲ. ಅವರು ಕರ್ಮಯೋಗಿಗಳಾಗಿದ್ದರು, ಕರ್ತವ್ಯ ನಿಷ್ಠರಾಗಿದ್ದರು. ಅದೇ ಈ ದಿವಸ ಮೈಸೂರು ದೇಶದಲ್ಲಿ ಕರ್ತವ್ಯ ನಿಷ್ಠೆಯಿಲ್ಲ, ಒಂದು ಪರ್ಮಿಟ್ಟನ್ನು ತೆಗೆದು ಮಾರಾಟ ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಅನೇಕರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಲೈಸೆನ್ಸ್ ಕೊಟ್ಟಿದ್ದಾರೆ, ಆದರೆ ಲೈಸೆನ್ಸ್ ಪಡೆದವರು ಕೈಗಾರಿಕೆಗಳನ್ನು ಸ್ಥಾಪಿಸಿಲ್ಲ. ಅವರು ಪಡೆದ ರಾ ಮೆಟೀರಿಯಲ್ಸ್ ದುರುಪಯೋಗ ಮಾಡುತ್ತಿದ್ದಾರೆ. ಇದರಿಂದಾಗಿ ಉತ್ಪತ್ತಿ ಸಾಕಾದಷ್ಟಾಗುತ್ತಿಲ್ಲ. ಉತ್ಸಾಹವಿದ್ದರೂ ಕೂಡ ಕೈಗಾರಿಕೆಗಳು ಯಶಸ್ವಿಯಾಗಿ ನಡೆಯುತ್ತಿಲ್ಲ. ಇದೊಂದು ದೊಡ್ಡ ಲೋಪ. ಇದರಿಂದ ಸರಕಾರವೇ ನೇರವಾಗಿ ಕೈಗಾರಿಕೆ ಸ್ಥಾಪನೆಮಾಡಬೇಕಾದ ಸಂದರ್ಭ ಬರುತ್ತಿದೆ. ಸರಕಾರ ನಡೆಸುವ ಅನೇಕ ಕಾರ್ಖಾನೆಗಳಲ್ಲೂ ಕೂಡ ಆದಾಯವಿಲ್ಲದೆ ನಷ್ಟವಾಗುತ್ತಿದೆ, ಕೈಗಾರಿಕೆ ಬಜೆಟ್ ನೋಡಿದರೆ ಸುಮಾರು 10 ಕೋಟಿ ಒಂದು ಲಕ್ಷ ರೂಪಾಯಿ ನಮಗೆ ಬರುತ್ತಿದೆ, ನಾವು ಖರ್ಚುಮಾಡುವುದು 10 ಕೋಟಿ 75 ಲಕ್ಷ ರೂಪಾಯಿ. ಒಟ್ಟಿನಲ್ಲಿ ನಮ್ಮ ಸರಕಾರಿ ಕಾರ್ಖಾನೆಗಳಲ್ಲಿ ಕೆಲವನ್ನು ಬಿಟ್ಟರೆ ಉಳಿದವುಗಳಿಂದ ನಷ್ಟವಾಗುತ್ತಿದೆ. ಸೋಪು ಕಾರ್ಖಾನೆ, ಭದ್ರಾವತಿ ಕಾರ್ಖಾನೆ ಮುಂತಾದುವುಗಳಲ್ಲಿ ಲಾಭವಿದೆ. ಅವನ್ನು ಬಿಟ್ಟರೆ ಕಾರ್ಪೊರೇಷನ್‌ಗಳಲ್ಲಿ, ಖಾದಿ ಕೈಗಾರಿಕೆಯಲ್ಲಿ ಹತ್ತಾರು ಲಕ್ಷ ರೂಪಾಯಿ ನಷ್ಟವಾಗುತ್ತಿದೆ. ಇದಕ್ಕೆ ಯಾರು ಕಾರಣರೆಂಬುದನ್ನು ಕಂಡುಹಿಡಿದು ಸರಕಾರಿ ಹಣ ದುರುಪಯೋಗವಾಗಿದ್ದರೆ ಕಾರ್ಪೊರೇಷನ್ನಾಗಲಿ ಅಥವ ಬೇರೆ ಯಾವುದೇ ಕೈಗಾರಿಕೆಯಾಗಲಿ ತಪ್ಪಿತಸ್ತರಮೇಲೆ ಉಗ್ರ ಕ್ರಮ ಕೈಗೊಳ್ಳುವುದಾಗಿ ಇದೇ ಸಭೆಯಲ್ಲಿ ಹಿಂದೆ ಸರಕಾರದವರು ಭರವಸೆ ಕೊಟ್ಟಿದ್ದರು. ಅಂಥ ಸಂದರ್ಭಗಳಲ್ಲಿ ಹಣ ದುರುಪಯೋಗವಾಗಿರುವ ಕಡೆ ಸರಕಾರ ಏನು ಕ್ರಮ ಕೈಕೊಂಡಿದೆ ಎಂದು ಕೇಳಬೇಕಾಗಿದೆ. ಯಾರಾದರೂ ತಮ್ಮನ್ನು ಹೆದರಿಸಿ ಕ್ರಮ ಕೈಕೊಳ್ಳಲು ಅವಕಾಶವಿಲ್ಲದಂತೆ

ಮಾಡಿರಬಹುದೆಂದು ನನಗೆ ತೋರುತ್ತದೆ. ಏನೇ ಇದ್ದರೂ ಕೂಡ ಅದನ್ನೆಲ್ಲಾ ಪ್ರತಿಭಟಿಸಿ ಜನತೆಗೆ ನ್ಯಾಯ ದೊರಕಿಸಿಕೊಡಬೇಕು. ಯಾರೇ ಆಗಲಿ ತಪ್ಪುಮಾಡಿದರೆ ಅವರಮೇಲೆ ಉಗ್ರ ಕ್ರಮ ಕೈಕೊಳ್ಳಬೇಕು. ನಮ್ಮ ಕೈಗಾರಿಕೆ ಇಲಾಖೆಯಲ್ಲಿ ಈ ದಿವಸ ಏನು ಕೆಲಸವಾಗುತ್ತಿದೆಯೆಂದರೆ ಅಧಿಕಾರಿಗಳ ಸಂಖ್ಯೆ ಹೆಚ್ಚುತ್ತಿದೆ, ಪ್ರತಿ ವರ್ಷ ಕೆಲವು ಕೈಗಾರಿಕೆಗಳು ಸ್ಥಾಪನೆಯಾಗುತ್ತಿವೆ. ಆದರೆ ಅದರ ಫಲಿತಾಂಶವೇನು ? ಉತ್ಪತ್ತಿ ಎಷ್ಟಿದೆ, ಎಷ್ಟು ಜನರಿಗೆ ಕೆಲಸ ದೊರೆತಿದೆ ಎಂಬ ಅಂಕಿಅಂಶಗಳನ್ನು ಸಭೆಯಮುಂದಿಡಬೇಕು. ಪ್ರಗತಿ ಮನೋಭಾವ ದೇಶದಲ್ಲಿ ಮಾಯವಾಗಿದೆ. ಮಕ್ಸೂದಾಲಿಖಾನ್‌ರವರು ಸಣ್ಣ ಕೈಗಾರಿಕೆಗಳ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ, ಎಕನಾಮಿಕ್ ಸರ್ವೆ ಬಗ್ಗೆ ಒಂದು ವರದಿ ಇದೆ. ಈ ಎರಡನ್ನೂ ನೋಡಿದರೆ ಮೈಸೂರು ದೇಶದ ಕೈಗಾರಿಕಾ ನೀತಿಯಲ್ಲಿ ದೊಡ್ಡ ಲೋಪವಿದೆಯೆಂದು ಕಾಣುತ್ತದೆ. ಕ್ವಾಲಿಟಿ ಕಂಟ್ರೋಲ್, ಲೆಕ್ಕ ಇಡುವ ಪದ್ಧತಿ, ಜನರಿಗೆ ಹಣದ ಸಹಾಯ ಮತ್ತು ಟೆಕ್ನಿಕಲ್ ಅಸಿಸ್ಟೆನ್ಸ್, ಪ್ಲಾನಿಂಗ್ ಮುಂತಾದುವು ನಮ್ಮ ದೇಶದಲ್ಲಿಲ್ಲ. ಯಾರಾದರು ಮುಂದೆ ಬಂದು ಕೈಗಾರಿಕೆ ಸ್ಥಾಪಿಸುವುದಾಗಿ ಹೇಳಿದರೆ ಅವರಲ್ಲಿ ವಿಚಾರವಿನಿಮಯ ಮಾಡಿ, ಏನು ಸೌಲಭ್ಯ ಬೇಕೋ ಅದನ್ನು ಕೊಡುವುದಾಗಿ ಭರವಸೆ ನೀಡುತ್ತಿಲ್ಲ. ಕೈಗಾರಿಕಾ ಇಲಾಖೆಯಲ್ಲಿ ನಿಪುಣರಿಲ್ಲ. ಕೇವಲ ಅಧಿಕಾರಿಗಳಿದ್ದಾರೆ, ಇದರಿಂದ ಕೈಗಾರಿಕಾ ನೀತಿ ಅಧೋಗತಿಗೆ ಇಳಿಯುತ್ತಿದೆ. ಕೈಗಾರಿಕಾ ಇಲಾಖಾ ಅಧಿಕಾರಿಗಳು ಕೇವಲ ಮೇಜಿನಮುಂದೆ ಕುಳಿತು ಯಾರಾದರೂ ಅವರ ಬಳಿಗೆ ಹೋದರೆ ಅವರಿಂದ ಲಂಚ ಸ್ವೀಕಾರಮಾಡಲು ನೋಡುತ್ತಾರೆ. ಇದರಿಂದ ನಿಜವಾಗಿಯೂ ಕೂಡ ಕೆಲಸ ಸರಿಯಾಗಿ ಆಗುತ್ತಿಲ್ಲ. ಸಿವಿಲ್ ಸಪ್ಲೈಸ್ ಕಂಟ್ರೋಲರು ಅಥವ ಮಿನರಲ್ ಬೋರ್ಡಿನ ಡೈರೆಕ್ಟರೇನು ಮಾಡುತ್ತಿದ್ದಾರೆ ? ಅವರಿಂದ ಉತ್ಪತ್ತಿಗೇನು ಸಹಾಯವಾಗಿದೆ ? ಮೈಸೂರು ದೇಶದಲ್ಲಿ ಎಷ್ಟೋ ಮಿಲಿಯನ್ ಟನ್ನುಗಳಷ್ಟು ಖನಿಜವಿದೆ, ಅದನ್ನು ತೆಗೆದು ಉಪಯೋಗಿಸಲು ಏನು ಕ್ರಮ ತೆಗೆದುಕೊಡಿದ್ದಾರೆ ? ಈ ದಿವಸ ನೋಡುವುದಾದರೆ ನಮ್ಮಲ್ಲಿ 2,458 ರಿಜಿಸ್ಟರಾಗಿರುವ ಕಾರ್ಖಾನೆಗಳಿವೆ, ಅವುಗಳಲ್ಲಿ 2 ಲಕ್ಷ 75 ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ವೇಜ್‌ಸ್ಟ್ರಕ್ಚರ್ ನೋಡುವುದಾದರೆ ವೇಜ್ ಬೋರ್ಡಿದೆ, ನಮ್ಮಲ್ಲಿ ಕೊಡುವ ಹೆಚ್ಚಿನ ಕೂಲಿ ದರ 2.58, ಮದ್ರಾಸಿನಲ್ಲಿ 6.72, ಆಂಧ್ರದಲ್ಲಿ 5.36, ಮಹಾರಾಷ್ಟ್ರದಲ್ಲಿ 4.72 ಈ ಪ್ರಕಾರ ಇದೆ. ಇದರಿಂದ ಮೈಸೂರು, ಮದ್ರಾಸು, ಆಂಧ್ರ ಮತ್ತು ಮಹಾರಾಷ್ಟ್ರಕ್ಕೂ ಎಷ್ಟು ಅಜಗಜಾಂತರ ವೆತ್ಯಾಸವಿದೆ ಎಂಬುದನ್ನು ನೋಡಬಹುದು. ನಿಜವಾಗಿಯೂ ನಮ್ಮಲ್ಲಿ ಕೈಗಾರಿಕೆ ಹೆಚ್ಚಬೇಕೆಂದಿದ್ದರೆ ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ವಿಮರ್ಶೆ ಮಾಡಲು ಒಂದು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡನ್ನು ರಚಿಸಿ ಕೈಗಾರಿಕೆಗಳನ್ನು ಮಾಡುವವರಿಗೆ ಬೇಕಾದ ಎಕನಾಮಿಕ್ ಮತ್ತು ಟೆಕ್ನಿಕಲ್ ಅಸಿಸ್ಟೆನ್ಸ್, ಸರಕಾರದ ನಾನಾ ಫಾರ್ಮ್ಯಾಲಿಟೀಸ್‌ನಿಂದ ತೊಂದರೆಯಾಗದಂತೆ ನೋಡಿಕೊಳ್ಳುವುದು, ಇಂಡಸ್ಟ್ರಿಯಲ್ ಪ್ಲಾನಿಂಗ್ ವಿಚಾರದಲ್ಲಿ ಸಹಾಯಮಾಡುವುದು ಮುಂತಾದುವುಗಳಿಗೆ ವಿಶೇಷ ಗಮನಕೊಟ್ಟರೆ ಬಹಳ ಅನುಕೂಲವಾಗುತ್ತದೆಯೆಂಬ ಭಾವನೆ ಇದೆ. ಮೈಸೂರು ದೇಶದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಅವುಗಳನ್ನು ಮೂರು ಪಂಗಡಗಳನ್ನಾಗಿಮಾಡಬಹುದು, ಒಂದು ಅಗ್ರೋ ಬೇಸ್ಡ್ ಇಂಡಸ್ಟ್ರೀಸ್, ಇನ್ನೊಂದು ಇಂಡಸ್ಟ್ರೀಸ್ ಬೇಸ್ಡ್ ಆನ್ ಮಿನರಲ್ಸ್, ಮತ್ತೊಂದು ಇಂಡಸ್ಟ್ರೀಸ್ ಬೇಸ್ಡ್ ಆನ್ ಫಾರೆಸ್ಟ್ ವೆಲ್ತ್ ಎಂದು ಈ ಮೂರು ರೀತಿಯಲ್ಲಿ ವಿಂಗಡಿಸಿದರೆ ಅನುಕೂಲವಾಗುದೆ. ಹೇರಳವಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ನಮ್ಮ ದೇಶದಲ್ಲಿ ಅವಕಾಶವಿದೆ, ಆಗ್ರೋ ಬೇಸ್ಡ್ ಇಂಡಸ್ಟ್ರಿಯಲ್ಲಿ ಸಕ್ಕರೆ ಕಾರ್ಖಾನೆ ಮಾಡಬಹುದು. ಈಗ ಮೈಸೂರು ದೇಶದಲ್ಲಿ ಎಷ್ಟು ಉತ್ಪತ್ತಿಯಿದೆಯೋ ಅದರ ಎರಡುಮೂರರಷ್ಟು ಉತ್ಪತ್ತಿ ಮಾಡಲು ಅವಕಾಶವಿದೆ. ನಮ್ಮಲ್ಲಿ ತಯಾರಾಗುವ ಸಕ್ಕರೆ ಬಹಳ ರುಚಿಯಾಗಿ ಹೆಸರುವಾಸಿಯಾಗಿದೆ. ಇಲ್ಲಿ ಪರ್ ಕ್ಯಾಪಿಟಾ ಕ್ರಷಿಂಗ್ ಕೆಪ್ಯಾಸಿಟಿ ಬಹಳ ಚೆನ್ನಾಗಿದೆ. ಆದುದರಿಂದ 10-12 ಕಾರ್ಖಾನೆಗಳನ್ನು ಹೆಚ್ಚಾಗಿ ಸ್ಥಾಪಿಸಬಹುದು. ಇದೇ ರೀತಿಯಲ್ಲಿ ಕಾಗದದ ಕಾರ್ಖಾನೆಗಳಿಗೂ ಬಹಳ ಅವಕಾಶವಿದೆ, ಪಲ್ಪ್, ವುಡ್, ಬಗಾಸೆ, ಯೂಕಲಿಪ್ಟಸ್ ಮುಂತಾದುವುಗಳನ್ನು ಉಪಯೋಗಿಸಿ 2-3 ಕಾಗದದಕಾರ್ಖಾನೆ ಮಾಡಲು ಅವಕಾಶವಿದೆ. ಇದನ್ನು ಉಪಯೋಗಿಸಿಕೊಳ್ಳಬೇಕು. ಮಿನರಲ್ ವೇಸ್ಟಿನಲ್ಲಿ ಸಿಮೆಂಟನ್ನು ತಯಾರಿಸಬಹುದು, ನಮ್ಮಲ್ಲಿ 750 ಮಿಲಿಯನ್ ಟನ್ ಲೈಮ್ ಸ್ಟೋನ್ ಇದೆ. ಅದರಿಂದ ಈಗ ತಯಾರಿಸುವುದಕ್ಕಿಂತ 3-4 ರಷ್ಟು ಹೆಚ್ಚು ಸಿಮೆಂಟನ್ನು ತಯಾರಿಸಲು ನಮ್ಮಲ್ಲಿ ಅವಕಾಶವಿದೆ. ಇದನ್ನು ಗಮನಿಸಿ 4-5 ಸಿಮೆಂಟ್ ಕಾರ್ಖಾನೆಗಳನ್ನು ಹೊಸದಾಗಿ ಸ್ಥಾಪಿಸಬಹುದುದು.

ಇದೇ ರೀತಿಯಾಗಿ ಸಲ್‌ಫ್ಯೂರಿಕ್ ಆಸಿಡ್ ಚಿತ್ರದುರ್ಗ ಜಿಲ್ಲೆಯ ಹುಲಿಯೂರು ದುರ್ಗದಲ್ಲಿ ನೈಟ್ರೇಟ್ ಡಿಪಾಸಿಟ್ ಇವುಗಳ ಮುಖಾಂತರ ಫರ್ಟಿಲೈಸರ್ಸ್‌ನ್ನು ಜಾಸ್ತಿ ಮಾಡಬೇಕು. ಮಂಗಳೂರಿನಲ್ಲಿ ಒಂದು ಫರ್ಟಿಲೈಸರ್ಸ್ ಫ್ಯಾಕ್ಟರಿಯನ್ನು ಹಾಕಬೇಕೆಂದು ಹೇಳಿದ್ದೆ, ಅದು ಯಾವತ್ತು ಕಾರ್ಯಗತವಾಗುತ್ತದೆಯೋ ಗೊತ್ತಿಲ್ಲ. ಆಹಾರದ ಉತ್ಪನ್ನ ಹೆಚ್ಚಾಗ

(ಶ್ರೀ ಎಸ್. ಶಿವಪ್ಪ)

ಬೇಕೆನ್ನತಕ್ಕ ಈ ಕಾಲದಲ್ಲಿ ಕೆಮಿಕಲ್ ಫರ್ಟಿಲೈಸರ್ಸ್ ಅವಶ್ಯಕತೆ ಬಹಳವಾಗಿದೆ, ಅದು ಹೇರಳವಾಗಿ ತಯಾರಾಗಬೇಕು. ಮಂಗಳೂರಿನಲ್ಲಿ ಒಂದು ಮತ್ತು ಕಾರವಾರದಲ್ಲಿ ಒಂದು ಫರ್ಟಿಲೈಸರ್ಸ್ ಫ್ಯಾಕ್ಟರಿ ಮಾಡತಕ್ಕ ನಿರ್ಣಯವನ್ನು ಮಾಡಬೇಕು. ಮೈಸೂರು ದೇಶದಲ್ಲಿ ಇದೇ ರೀತಿ ಎರಡು ಅಥವಾ ಮೂರು ಫ್ಯಾಕ್ಟರಿಗಳನ್ನು ಮಾಡಬಹುದು. ಅದಕ್ಕೆ ಅಗತ್ಯವಾದ ಕಚ್ಚಾ ಮಾಲು ಹೇರಳವಾಗಿ ಇರುವುದರಿಂದ ಇದಕ್ಕೆ ಸೂಕ್ತ ಗಮನಕೊಡಬೇಕೆಂದು ಹೇಳುತ್ತೇನೆ. ಅಲ್ಯೂಮಿನಿಯಂ ಫ್ಯಾಕ್ಟರಿಗೆ ಬೇಕಾದ ಸೌಲತ್ತು ಎಂದರೆ ವಿದ್ಯುಚ್ಛಕ್ತಿ, ಇದು ನಮ್ಮ ದೇಶದಲ್ಲಿ ಹೇರಳವಾಗಿ ಸಿಕ್ಕುತ್ತದೆ. ವಿದ್ಯುಚ್ಛಕ್ತಿಯನ್ನು ಉಪಯೋಗಮಾಡಿಕೊಂಡು ಅಲ್ಯೂಮಿನಿಯಂ ಫ್ಯಾಕ್ಟರಿ, ಫರ್ಟಿಲೈಸರ್ಸ್ ಫ್ಯಾಕ್ಟರಿಗಳನ್ನು ಹಾಕಿದ್ದೇ ಆದರೆ ಅದರಿಂದ ಬರತಕ್ಕ ಉತ್ಪನ್ನವನ್ನು ದೇಶದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸಹಾಯವಾಗುವುದೂ ಅಲ್ಲದೆ ಕೆಲಸಗಾರರಿಗೂ ಕೂಡ ಹೆಚ್ಚಿನ ಕೆಲಸವನ್ನು ಕೊಡುವುದಕ್ಕೆ ಸಹಾಯಕವಾಗುತ್ತದೆ.

ದೇಶದಲ್ಲಿ ಟ್ರಾಕ್ಟರ್ಸ್‌ನ್ನು ತಯಾರುಮಾಡಲೇಬೇಕೆಂದು ಬಾಯಲ್ಲಿ ಹೇಳುತ್ತೀರಿ ಹೊರತು ಅದಕ್ಕೇನಾದರೂ ಒಂದು ಫ್ಯಾಕ್ಟರಿ ಬರಲಿದೆಯೇ ಎಂಬುದನ್ನು ಹೇಳುವುದಿಲ್ಲ. ಅದು ಯಾವಾಗ ಕಾರ್ಯಗತವಾಗುತ್ತದೆ ! ಎಲ್ಲಿ ಬರುತ್ತದೆ ಎಂಬುದನ್ನು ಹೇಳಬೇಕು. ತಮ್ಮ ಟೆಕ್ನೋಎಕನಾಮಿಕ್ ಸರ್ವೇ ಪ್ರಕಾರ ಒಂದು ಸಾವಿರದ ಒಂದು ನೂರು ಕೋಟಿ ರೂಪಾಯಿಗಳನ್ನು 15 ವರ್ಷಗಳಲ್ಲಿ ನಾವು ಕೈಗಾರಿಕೆಗಳಿಗೆ ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ. ಆ ರೀತಿ ಮಾಡಿ ನಮ್ಮ ದೇಶದ ಉತ್ಪನ್ನ ಇವತ್ತು ಏನಿದೆ ಅದಕ್ಕಿಂತಲೂ ಎರಡು ಮೂರು ಪಟ್ಟು ಹೊಂದುತ್ತೇವೆ ಎಂದು ಅಂದಾಜು ಮಾಡಿದ್ದೀರಿ. ಅದರ ಪ್ರಕಾರ 1975ನೇ ಇಸವಿಯಲ್ಲಿ ತಮ್ಮ ಅಂದಾಜಿನ ಪ್ರಕಾರ 302 ಕೋಟಿ ರೂಪಾಯಿ ನೆಟ್ ಔಟ್‌ಪುಟ್ ಬರುತ್ತದೆ. ಇದಕ್ಕೆ ಹಣವನ್ನು ಹೇಗೆ ಒದಗಿಸುತ್ತೀರಿ ? ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡುವುದು ಒಂದು ಕಡೆ ಅದಕ್ಕಿಂತ ಹೆಚ್ಚಾಗಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನ್ನು ಹೆಚ್ಚಾಗಿ ಮಾಡಿದರೆ ಅದರಿಂದ ಹೆಚ್ಚು ಜನಗಳಿಗೆ ಕೆಲಸ ಸಿಕ್ಕುತ್ತದೆ. ಹಣದ ಅವಶ್ಯಕತೆಯೂ ಕೂಡ ಕಡಿಮೆಯಾಗುತ್ತದೆ. ಸುಮಾರು ಒಂದು ನೂರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ನಮ್ಮ ದೇಶದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೇಕಾದಷ್ಟು ಮಾಡಬಹುದು. ಅದಕ್ಕೆ ಪ್ರಥಮ ಆದ್ಯತೆಯನ್ನು ಕೊಡಬೇಕು ಎಂದು ಹೇಳುತ್ತೇನೆ. ಅದೇ ರೀತಿಯಾಗಿ ಕಾಟೇಜ್ ಇಂಡಸ್ಟ್ರೀಸ್. ಇದು ಇವತ್ತು ನಮ್ಮ ದೇಶದಲ್ಲಿ ಮಾಯವಾಗುತ್ತಾ ಇವೆ. 5 ರಿಂದ 10 ಸಾವಿರ ರೂಪಾಯಿ ಹಣ ಅದಕ್ಕೆ ಬೇಕಾಗುತ್ತದೆ ಅಷ್ಟು ಹಣವನ್ನು ಯಾ ಮನುಷ್ಯ ಈ ಕೈಗಾರಿಕೆಯನ್ನು ಮಾಡುತ್ತಾನೋ ಅವನಿಗೆ ನೇರವಾಗಿ ಮತ್ತು ಶೀಘ್ರವಾಗಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಕೋ-ಆಪರೇಟೀವ್ ಸೆಕ್ಟರಿನಿಂದ ಮಾಡುತ್ತಾ ಇಲ್ಲವೇ ಎಂದು ಒಬ್ಬ ಸದಸ್ಯರು ಕೇಳುತ್ತಾರೆ, ನಿಮ್ಮ ಕೋ-ಆಪರೇಟೀವ್ ಸೆಕ್ಟರಿನಿಂದ ಆಗಿರತಕ್ಕ ಅನ್ಯಾಯ ನಮ್ಮ ದೇಶದಲ್ಲಿ ಮತ್ತಾವುದರಿಂದಲೂ ಆಗಿಲ್ಲ. ಇದು ನನ್ನ ಅಭಿಪ್ರಾಯ. ಕೈಗಾರಿಕೆಯ ಬಗ್ಗೆ ತಾವು ಒಂದು ಅಂಧಕಾರ ನೀತಿಯನ್ನು ಅನುಸರಿಸುತ್ತಾ ಇದ್ದೀರಿ ಇದರಿಂದ ಕೈಗಾರಿಕಾ ಪ್ರಗತಿ ಹಿಂದಕ್ಕೆ ಬೀಳುತ್ತಾ ಇದೆ. ತಮ್ಮ ನೀತಿಯನ್ನು ಕಾಲಕಾಲಕ್ಕೆ ಬದಲಾಯಿಸುತ್ತಾ ಇದ್ದೀರಿ. ತಮ್ಮಲ್ಲಿ 3 ವಿಧದ ಕೈಗಾರಿಕಾ ನೀತಿ ಇದೆ. ಒಂದು ಸರ್ಕಾರದವರೇ ನೇರವಾಗಿ ಕೈಗಾರಿಕೆಗಳನ್ನು ನಡೆಸುವುದು. ಎರಡನೆಯದು, ಕಾರ್ಪೊರೇಷನ್ ಅಥವಾ ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ನಡೆಸತಕ್ಕ ಕೈಗಾರಿಕೆಗಳು, ಮೂರನೆಯದು ಪ್ರೈವೇಟ್ ಎಂಟರ್ ಪ್ರೈಸ್‌ನಿಂದ ನಡೆಸತಕ್ಕ ಕೈಗಾರಿಕೆಗಳು ಈ ಮೂರು ವಿಧವಾದ ಮಿಕ್ಸೆಡ್ ಎಕಾನಮಿ ಇದೆ. ಇದರಿಂದ ಕೈಗಾರಿಕೆಗಳು ಬಹಳ ಕುಂಠಿತವಾಗಿ ನಡೆಯುತ್ತಾ ಇವೆ. ಇಡೀ ದೇಶದಲ್ಲಿರುವ ಎಲ್ಲಾ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂಬ ಒಂದು ಧೀರ ನಿಲುವನ್ನು ತೆಗೆದುಕೊಂಡು ಸರ್ಕಾರದವರೇ ಎಲ್ಲಾ ಕೈಗಾರಿಕೆಗಳನ್ನೂ ನಡೆಸಬೇಕು. ಇವತ್ತು ಸರ್ಕಾರದವರೇ ನೇರವಾಗಿ ನಡೆಸುತ್ತಾ ಇರತಕ್ಕ ಕೈಗಾರಿಕೆಗಳಲ್ಲಿ ನಷ್ಟಪಡುತ್ತಾ ಇರುವುದರಿಂದ—ಅವನ್ನು ಕೈ ಬಿಟ್ಟು ಖಾಸಗಿಯವರಿಗೆ ವಹಿಸಬೇಕೆಂದು ಯೋಚನೆಮಾಡತಕ್ಕ ದಿಕ್ಕಿನಲ್ಲಿ ಹೋಗುತ್ತಾ ಇದ್ದೀರಿ. ಇದರಿಂದಾಗಿ ತಮ್ಮ ನೀತಿಯಲ್ಲಿ ಒಂದು ಸರಿಯಾದ ನಿಲುವು ಇಲ್ಲದಂತಾಗಿದೆ. ಇದು ಹೀಗೆ ನಡೆಯುತ್ತಾ ಇದೆ ಎಂದರೆ ಅಲ್ಲಿರತಕ್ಕ ಅಧಿಕಾರಿಗಳು ಸೊಗಸಾಗಿ ವೇಷ ಭೂಷಣಗಳಿಂದ ಅಲಂಕೃತರಾಗಿ ಇದ್ದಾರೆಯೇ ಹೊರತು ಮೈಸೂರು ದೇಶದ ಕೈಗಾರಿಕೆಗಳು ಯಾವ ರೀತಿಯಲ್ಲೂ ಮುಂದುವರಿದಿಲ್ಲ. ಅವರು ಕೇವಲ ಪರ್ಮಿಟ್ ಹಂಚಿಕೆ, ಲೈಸೆನ್ಸ್ ಹಂಚಿಕೆ ಈ ಒಂದು ಸಣ್ಣ ಕೆಲಸದಲ್ಲಿ ನಿರತರಾಗಿದ್ದಾರೆ ಮೈಸೂರು ದೇಶದ ಕೈಗಾರಿಕೆಯನ್ನು ಮುಂದುವರಿಸಬೇಕೆಂಬ ನೀತಿಯಲ್ಲಿ ಅವರು ಉದ್ಯುಕ್ತರಾಗದೆ ಇರುವ ಕಾರಣ ಇವತ್ತು ನಮ್ಮ ದೇಶದ ಕೈಗಾರಿಕೆಗಳು ವಿಫಲವಾಗಿದೆ. ಈ ವಿಫಲತೆ ಸರಿಹೋಗದಿದ್ದರೆ,

ನಮ್ಮ ದೇಶದ ವಿದ್ಯುಚ್ಛಕ್ತಿಯನ್ನು ಖಂಡಿತವಾಗಿಯೂ ಕೂಡ ನಮ್ಮ ದೇಶದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಮ್ಮಲ್ಲಿ ಸಿಕ್ಕತಕ್ಕ ಹೇರಳವಾದ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿಕೊಳ್ಳತಕ್ಕ ದಿಶೆಯಲ್ಲಿ ನಮ್ಮ ಅಧಿಕಾರಿಗಳು ಮತ್ತು ನಮ್ಮ ಸರ್ಕಾರದವರು ಮನಸ್ಸು ಮಾಡಬೇಕು. ಆ ಒಂದು ಮನೋಭಾವ ಅವರಲ್ಲಿ ಬೆಳೆಯಬೇಕು. ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಶಕ್ತಿ ಸಾಲದು, ಅವರಿಗೆ ಕೈಗಾರಿಕಾ ಜ್ಞಾನ ಹೆಚ್ಚಾಗಿ ಇಲ್ಲ. ಕೇವಲ ಅಲಂಕಾರ ಪುರುಷರಾಗಿ ಇದ್ದುಕೊಂಡು ಅವರಿಂದಾಗಿ ಅನೇಕ ಕೋಟಿ, ಲಕ್ಷ ರೂಪಾಯಿಗಳ ಹಣ ವ್ಯಯವಾಗಿದೆ, ನಷ್ಟವಾಗಿದೆ. ಇಂತಹ ನೀತಿಯನ್ನು ದಯಮಾಡಿ ಬಿಟ್ಟುಬಿಡಬೇಕೆಂದು ಹೇಳುತ್ತೇನೆ. ಅವರಿಗೆ ಕೆಲಸ ಎಲ್ಲಾದರೂ ಕೊಡಬೇಕಾಗಿದ್ದರೆ ಕೈಗಾರಿಕಾ ಕಚೇರಿಯಲ್ಲಿ ಕೊಡಿ. ಕೋ ಆಪರೇಟೀವ್ ಸೆಕ್ರಟೆರಿಗಳಾಗಿ ಅಂತಹವರನ್ನು ಹಾಕುವುದರಿಂದ ಅಲ್ಲೆಲ್ಲಾ ರಾಜಕೀಯ ತುಂಬ ಕೈಗಾರಿಕಾ ನೀತಿಯೇ ಕಲಕಿ ಹೋಗಿ ಇವತ್ತಿನ ದಿವಸ ಕಹಿ ವಾತವರಣವನ್ನು ಮೈಸೂರು ದೇಶದಅವರುಲ್ಲಿ ಉಂಟುಮಾಡಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳದೇ ಹೋದರೆ ಖಂಡಿತವಾಗಿಯೂ ಮೈಸೂರು ದೇಶದ ಕೈಗಾರಿಕೆ ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳದಿದ್ದರೆ ಈ ಡಿಮ್ಯಾಂಡಿನಲ್ಲಿ ಅಡಕವಾಗಿರತಕ್ಕ ಹಣ ದುರುಪಯೋಗವಾಗತಕ್ಕ ಸಂದರ್ಭಬರುತ್ತದೆ ಎಂಬ ಸೂಚನೆಯನುಕೊಟ್ಟು ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

†SRI M. SRINIVASA NAIK (Mangalore I).—I rise to support the demands placed before this August House by the Hon'ble Minister for Industries. The Hon'ble Minister for Industries has taken every care to see that industries in the State are developed properly. But I would like to state that industries have sprung up in certain parts of the State only. I would suggest that the industries are developed properly on a uniform basis. There is a proposal to start a Fertilizer Factory in Mangalore.

SRI G. V. GOWDA (Palya).—The Hon'ble Member must know that the Fertilizer Factory is given to Cochin and Durgapur but not to Mysore.

SRI M. SRINIVASA NAIK.—The Government of India has a proposal to start a Fertilizer Factory in Ernakulam. The proposal of having a Fertilizer Factory at Ernakulam was decided only on the strength of Naptha a by-product, that is available from the Oil Refineries. This by-product will be made available to this Factory. This is a most important product required for the Fertilizer Factory. The Government of Mysore must try to start the Oil Refineries in Mangalore Port because the depth of the Port will be about 43′ and other Ports of the Country will be less than that. There is every case and every possibility of locating the oil Refinery in the Mangalore Harbour so that we will get the by-product of the refineries and make use of this for producing the fertilizer which is required greatly for agricultural purposes. I therefore request the Government of Mysore to make every effort to have a Fertilizer Factory in Mangalore, otherwise we will lose our case by default.

10-00 A.M.

Some years age, there was a proposal to locate a sugar factory in Mangalore. That question was dropped because economic conditions deteriorated. Now there is a good case for locating a sugar factory in Mangalore. There, we have got all facilities. Sugar cane is grown in abundance and our ryots are able to meet the needs of the factory.

(SRI M. SRINIVASA NAIK)

The Government of Mysore will have to set up a sugar factory in Mangalore either in the public sector or the private sector. It is better the Government gives due consideration to this request.

I would like to add that in South Kanara we have the largest area under plantation cultivation. We have been able to cultivate jack and other fruits in large areas. Therefore, there is need to have a fruit canning factory there. There are two fruit canning industries in South Kanara and there is need to have two more because the existing factories are not able to take the entire growth of fruits which are going to waste at present.

There is also need for a cold storage plant in South Kanara. I am told there is a proposal to have a cold storage plant in the Mysore State, and if it is so, the case for Mangalore is so great and genuine that the Government will do well to locate it in the District of South Kanara.

Though Mangalore is very near a cotton producing centre, there is no ginning and spinning mill. Once there was a proposal to have a spinning and ginning mill in South Kanara, when the District was in Madras State; but for want of adequate patronage, it was given up by the then Government. I now appeal to the Hon. Minister for Industries and Commerce to kindly help us to have a spinning and ginning mill located in South Kanara.

Firebricks are in great demand. In South Kanara we have got very fine clay with which we can manufacture firebricks. I think the Government of Mysore can also help us in putting up a firebricks factory in Mangulore.

The Kanara Workshop proposes to manufacture alloy steel; but the whole progress of the factory is being retarded for want of electrodes. The Government of India has been approached to grant a licence to import electrodes, but so far the requst has not been complied with by the Government of India. It is very necessary that our Government should persuade the Union Government to give them a licence to import electrodes. Otherwise the large scheme which the Workshop has undertaken will go to waste. Besides, the unit of alloy steel which is functioning in Mangalore will also be a waste, hereafter. The Hon. Minister for Industries has always taken keen interest in the development of industries all over the State. He should also give due consideration for the development of South Kanara as well in the matter of industries.

The Industrial Estate, which the Government has been good enough to locate in Mangalore, has yet to start functioning because electric power has not been provided for the functioning of the Industrial Estate. I request the Government to see that the electric current that is required for the industries to function, is made available immediately. There are other vacant lands and there are persons to locate industries. Therefore, my appeal to the Government is to make them available to those who come forward to run industrial establishments.

I conclude by thanking the Chair for giving me this opportunity to speak.

SRI K. S. SURYANARAYANA RAO (Mysore City).—Sir, If the Third Plan progress is a guide, I would like to proceed with the achievements under the Third Five-Year Plan; and if that would be a guide at least, the State Government should wake up. If they have gone to slumber so far, at least during the Fourth Plan they cannot fall back.

In the field of industry, two things we notice in the Plan—one, the public sector undertaking and the other, the private sector undertaking. In the public sector undertakings, there are again two branches: one is the Central Government and the other is State Government undertakings. When I quote figures here, I do not mean to say anything against the neighbouring State which has progressed very much; I am only taking a comparative view to say that we have not done anything. So, it is with that particular aspect, I would like to deal with the matter. Therefore, my reference either to Madras or to Maharashtra should be taken in that light. Those States have not been endowed with any extraordinary ingenuity; nor capacity. They have built their resources to get whatever they want; but the State of Mysore could not get anything out of either the Centre's share or the private sector. During the Third Plan, the Government of India have sponsored as many as 59 industries in the public sector. We are not able to get even one out of them. The only thing that has been done in Bangalore is the Machine Tools Factory for the manufacture of watches, and perhaps the latest technical training programme under the H. M. T. Programme.

Therefore, under the Plan which has been concluded the Government of India has not favoured the Mysore State with any of the industries. As a matter of fact, he who makes the loudest noise, perhaps gets favours. Unfortunately, our State has lacked in making the noise and nothing has happened. Where is the snag? This has to be found out. Is it due to lack of initiative or is it due to lack of influence with the Government of India? In Andhra Pradesh, they have not done much better in the private sector during the Third Plan because of agricultural programme. What they failed to achieve, they have made it up through the public sector undertakings. Madras has 7, Kerala has 4, while Mysore gets nothing. Therefore, so far as the Government of India is concerned, the State Government has practically done nothing.

So, the State Government possibly may find an explanation or offer an argument that we had neither resources nor perhaps the electric power. The argument comes down to this: 'ಮನೆಗೆ ಬೆಂಕಿ ಬಿದ್ದಾಗ ಬಾವಿ ತೆಗೆದರು ಅಂದ ಹಾಗೆ. The Government says: now that we have power, we have started thinking about industry. What I say is: we should have planned beforehand, prepared the ground and kept everything ready so that when power was generated we can implement them. We invested so much money for generating power, and when power is there, we have no schemes and

(SRI K. S. SURYANARAYANA RAO)

preparation for utilising it; so much so, it is going to waste so far as the State is concerned. We have every right to utilise the power we have generated. But the position now is, we have to content ourselves with the tariff got from the neighbouring States. We have not utilised the electric power we have generated; We did know that we would generate power. Therefore, nothing prevented the Government from undertaking and completing the civil engineering portion of the work, as also the training programme. In so far as taking the lead when the power becomes available is concerned, we did nothing. Take the example of the Electric Factory. What is the amount of money we have sunk on it? What is the loss incurred? What was the sort of planning we had? We have imported 32 specialists and we have not been able to make use of the entire staff. The Audit Report presented by the Accountant-General of Mysore is as follows: (in respect of the new Government Electric Factory.)

(The production is much less than what is targeted)

"According to the orginal programme of the factory, transformers of the value of Rs. 6 lakhs and switches of the value of Rs. 8 lakhs should have been produced in 1963-64. This target was revised in June 1963 to the producing of switch boards and switches worth Rs. 4·25 lakhs during the year. But the achievement during 1963-64 was only switches valued at Rs. 1·5 lakhs shown as works-in-progress at the end of March 1964......

Premature Recruitment and Training: In accordance with the agreement with the foreign firm, 38 trainees were deputed to Germany between August 1960 and August 1964. Two were called back in January 1961 and March 1963 due to lack of sufficient progress and two are yet to return. Out of the remaining 34, who have come back, three are engaged in the old Government Electric Factory and the others have been given sundry jobs, as they could not be found jobs suitable to their training since production has not started in many department of the factory."

This is how we train our personnel. Then we go further to the premature arrival of the foreign specialists. The man unfit for one job will be posted to some other place, because we have spent on him. This is the way we organise our industries. In any private enterprise, this would not have been the case. Passibly, if it were an enterprise in which the Hon'ble Minister was personally interested, he would have taken better interest and would have secured sufficient return for every pie that is spent. The State property is nobody's property! That is how things are happening. It says further:

"according to supplementary agreement, 25 foreign specialists had to be secured and a sum of Rs. 13 lakhs was incurred on their salaries alone."

This is how the electric factory which is said to be one of our biggest factories-it may become one of our biggest factories in the times to come-this is how it is managed. Is this the way I ask. My object in pointing this out is, at least if we find fault today, you may not commit the same error tomorrow.

Then one word about the Bhadravati Iron and Steel works. The quarterly statistics production given by the State Government if it is an indication, it shows a downward trend in production. On page 28 of this report, it is said : production of Iron and Steel works-Peak year production in 1958 was pig iron 86,685 metric tons. In June 1964, it is 6951 tons. Ferro-alloy the peak year was 1663, 16,383 tons. It has come down to 1451 tons. The performance of finished steel is not any way better. It may be that Bhadravathi is our biggest factory. The expansion is going on. A lot of employment potential is there. But what have the Government done ?

Take for example our cement factory. It is a matter of shame that we see a public enterprise producing sub-standard products. Whatever be the circumstances, it should not have produced sub-standard material. The cement factory produced 13,000 tons of sub-standard cement. It not only causes loss, but brings down the very reputation of the cement factory. It is a public enterprise. Why I am placing this fact is, though we have a few industries, they are not properly managed. We should have got many more industrial units to our State. We have made provision in the Budget, some money for expanding the existing units for which we need not take credit. It is not a new venture. I would like to point out one other item. Take for example Madras State. The Government of India statistics show a list of classified industries under various categories engineering industries, metallurgical industries, agri-industries. It is a matter of pride that Madras has never lagged behind in any branch. They lacked iron and steel. They have now 2-3 iron based industries started in the State. There is no branch of industry they have not touched, whether consumer industry, whether it is basic industry, whether public enterprise, or whether it is private enterprise. The only industry that is profitable in this country is the sugar industry. Possibly that is the only industry which will make a little profit. For agriculture based industry, we have not got the required number of pumps except Kirloskar. There is no other unit manufacturing pump sets. In Madras and other parts, whether it is pumps or tractors or auxiliy industries—even agricultural tools industry—we have not done much. Coimbatore is almost the centre.

SRI K. MALLAPPA (Minister for Industries and Commerce).—Who started in Coimbatore ?

SRI K. S. SURYANARAYANA RAO.—It is private enterprise. That is why I say, whether it is public or private enterprise—Madras is leading. So far as licence is concerned, our Government is very liberal in recommending licences. But the licence granted, we go on marketing. For one industry, a licence was secured, but later it was sold.

(SRI K. S. SURYANARAYANA RAO)

Government spokesmen should tell the industrialists to come to us, give them a cup of coffee. We must try to attract them. We must hold out inducement for industries to come up. You may draw up plans and ask the private enterprise to follow up. They will certainly associate themselves with your enterprise.

I am reminded of one more thing. We issued 11 to 12 textile mill licences. I would like to know how many of them are coming up.

Sri K. MALLAPPA.—Most of them.

Sri K. S. SURYANARAYANA RAO.—My information is, except two or three which I have seen, none of them is likely to come up. I will now ask you about the paper industry. How many licences were issued and how many of them were started, and why is it that are not doing it?

Sri B. RACHIAH (Minister for Forest and Fishery).—Private enterprise should take more interest. So far as Government is concerned, we have done all that is possible.

Sri K. S. SURYANARAYANA RAO.—Why the private man does not come and offer himself is, absolutely he does not get any response from the Government. Every time he looks at you with a discount rather than with a premium. Sir, I am reminded of various other things, about the Forest Minister. He was found to comment when Sri Kesava Murthy was speaking about the silk industry. Sir, today silk industry has failed to make profit and it does not become of the Minister to say who else can run it? What is the meaning of doling out lakhs of rupee for this industry? For how many years are you doling out money like that? If that industry is not able to stand on its own legs all these years, what is wrong? That is the constructive way in which you should think. If it is a failure, instead of running the industry like that, give them subsidy and let it run by whomsoever that comes forward. Let it not be said that we were the pioneers.

Sri B. RACHIAH.—Let the Hon'ble Member remember that on the recommendation of the members of the district, Government was pleased to take over the management of the filature industry. Private parties have failed to run the industry on a profitable basis.

Sri K. S. SURYANARAYANA RAO.—Then about REMCO water meters. I believe these meters are supplied by the REMCO: it is said that even if there is noflow of water, the meters run on mere air pressure. I was shown yesterday a bill of one individual in Chickpet who has only one tap. His bill was for Rs. 1,240 per quarter. It should have been normally, a nominal meter hire charges.

Sri K. MALLAPPA.—How do you say, it was the fault of the meter?

Sri K. S. SURYANARAYANA RAO.—I will be very happy if they are not meters manufactured by the REMCO. But on the other hand if they are proved to be REMCO water meters, it does not bring credit to the State Government. That is all I say.

Then we have textile Mills. We have not developed auxialliary units. Metallurgical tools, structural fabrications, mechanical tools, construction equipment—in none of these things, we have made any strides. At least there should have been sufficient enterprise shown by private interests in structural engineering industrial and mechanical engineering, structural fabrications, steel tubes. So far as Bhadravathi is concerned, there are figures available. But if we compare that with the All India Figures of other States—it me be very big for our state, but it is nothing but a drop in the ocean in the All India picture. When we are thinking of millions of tons, where are we ? Does it meet at the first year programme of the Fourth Plan ?

About our own industry at Hospet, we were unable to get. There is no question of the alluminium factory. We do not know what will happen in the Fourth Plan. Even at Mettur, they have an alluminum factory. You have not made efforts. Even now, if you give us an assurance that we will get, we will be happy. We are hearing thisfor the last so many years. We want you to get the refinary, we want you to get the fertiliser factory, the iron and steel factory at Sandoor, we want you to get the alluminum factory of one million tons at Belgaum. That was what you assured on the floor of this House.

Sri K. MALLAPPA.—I am sorry, I have never promised a factory of one million tons. I said, in the first stage 30,000 tons and the next stage it will be 70,000 tons, altogether one lakh tons ; and it will cost us one crore. I have never said one million tons. I request the Hon'ble Member to produce a copy of my statement where I have said one million tons.

Sri A. KRISHNA SHETTY (Mangalore-II).—What about the fertiliser factory at Mangalore ?

Sri K. S. SURYANARAYANA RAO.—The other point that I wish to mention is this. Even with regard to the investment, we have made, I only refer to two instances of State Government giving aid to industry. I welcome such a move to assist the industry. But what is the result ? Take for example our Gulbarga Mills. We have spent more than one crore of rupees. What is it that we have achieved. I believe it is three years since we have taken over. We have not yet put the mills into working order. I am speaking of Mahaboob Shahi Mills at Gulbarga. I believe in the present context, we could have started a new factory in the same area. With an amount of one crore spent on it, what is it that we have done ? We cannot even get the interest on the investment. Going to the asistance of labour or rehabilitating the industry is a good point. I said this at the very beginning. But your achievement for these three years is not good. A private man would not have allowed the mills to run under loss for three years continuously.

Take another example, the Co-operative Spinning Mills, Dharwar. What is the record of that mills ? It could not fulfilled the export programme that they undertook and as a matter of fact, they have paid the fine. But they have accumulated stocks of unwanted varieties which they will have to sell at reduced rates.

Sri K. MALLAPPA.—Every mill has accumulated stocks.

Sri K. S. SURYANARAYANA RAO.—Even now the position has not improved. They have manufactured sub-standard things which cannot move in the market. Therefore, they had to take expert opinion to reduce the cost and sell them. Co-operative industry return is said to be 1.2 per cent. If that is the return that we get, it hardly makes any impression. If this is the way private interest and co-operative interest should prosper, I am afraid things will not improve.

Then we have statutory bodies like the Khadi Board. Sri Shivappa mentioned it. I will tell you one more instance. They have deposited 8-10 lakhs of rupees in a private bank in current account. What is the meaning of keeping money in a private bank and not making use of it. Should they look to the common benefit or to the interest of a private bank ? Is it for the purpose of safeguarding the interest of a bank or is it in the interest of the State that the money is given ? Which of them should receive first attention ? The audited accounts of the Khadi Board have not yet been furinshed to this House. Till today, we have not got the audited statements.

Sri K. MALLAPPA—The Accountant General is doing it.

Sri K. S. SURYANARAYANA RAO.—My information is that the Accountant General is not able to reconcile the accounts because there are no accounts.

Sri K. MALLAPPA.—It is not correct Sir. Accounts have been brought up-to-date and they are ready for audit by the A.G. He is going to do it in a couple of months and the report will be placed before the House.

10-30 A.M.

Sri K. S. SURYANARAYANA RAO.—If my information is correct, accounts have not been finalised. Even in the Public Accounts Committee, they could not take the matter on hand because the accounts were not compiled or ready.

Mr. DEPUTY SPEAKER.—What transpired in the Public Accounts Committee need not be brought here.

Sri K. S. SURYANARAYANA RAO.—To strengthen my own argument the information I have is that. I do not go beyond that.

(*Interruption*)

I do not blame the Government for all that has happened during the Third Five Year Plan, because the Minister by himself cannot do anything except giving guidance. What I say is the department has not taken the initiative which it should have. I only appeal to the Government let them not take it as criticism of a negative aspect. We offer criticise as we want to see that we do better in the future. We will have to know what our short comings are. I would say let them be your guide and let them be before you as standing monuments of failure in the past. Let there not be any more failings in the future. Try to get as many industries as possible. Try to bring to bear

influence on the Government of India. Try to get one or two or three or as many industries as possible from the Government of India to Bangalore to Mysore State. Let them be located any where. I am not interested in their being located in any particular place. Let the Minister open a new chapter in inviting industrialists to come to Mysore. Let him assure them of all facilities. Why I say this is in the review of the working of industries, they have just said that they are making ground available. That is not the only requirement of industry. Ground is no doubt required. But something else is more necessary. Give them every facility they require and see that more industries come into the State at least during the Fourth Plan.

ಶ್ರೀ ಎಸ್. ಪಿ. ಫಾಯದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇರುವ 14, 16, 24, 44, ಈ ನಾಲ್ಕು ಬೇಡಿಕೆಗಳನ್ನು ಸ್ವಾಗತಿಸುತ್ತ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳಬಯಸುವುದೇನೆಂದರೆ, ಕೈಗಾರಿಕೆಗಳು ರಾಜ್ಯದ ಎಲ್ಲ ಕಡೆಗೂ ವೃದ್ಧಿಯಾಗಬೇಕು, ಒಂದೇ ಭಾಗದಲ್ಲಿ ಆದರೆ ಅದರ ಪ್ರಯೋಜನ ರಾಜ್ಯಕ್ಕೆ ಸಿಕ್ಕುವುದಿಲ್ಲ. ಆದುದರಿಂದ ನಾನು ಈಗ ಕಾರವಾರದ ಜಿಲ್ಲೆಯ ಬಗ್ಗೆ ಮಾತ್ರ ಕೆಲವು ವಿಚಾರಗಳನ್ನು ಹೇಳಲು ಬಯಸುತ್ತೇನೆ.

ಕಾರವಾರ ಜಿಲ್ಲೆಯಲ್ಲಿ ನೂರಕ್ಕೆ 84ರಷ್ಟು ಭಾಗ ಅರಣ್ಯವಿದೆ. ಆದರೆ ಅಲ್ಲಿ ಅರಣ್ಯ ಸಂಪತ್ತನ್ನು ರೂಢಿಸಲು ಯಾವ ಕೈಗಾರಿಕೆಯನ್ನೂ ತೆರೆಯಲಿಕ್ಕೆ ಪ್ರಯತ್ನ ಮಾಡಿಲ್ಲ. ಅಲ್ಲಿ ಸಾಕಷ್ಟು ಫಲವತ್ತಾದ ಭೂಮಿ ಇದ್ದು ಹಣ್ಣು ಹಂಪಲು ಬೆಳೆಯುತ್ತದೆ. ಈ ಹಣ್ಣು ಹಂಪಲುಗಳನ್ನು ಶೇಖರಿಸಿ ಉಪಯೋಗಿಸಲು ಅನುಕೂಲವಾಗುವಂತೆ ಫ್ರೂಟ್ ಕ್ಯಾನಿಂಗ್ ಫ್ಯಾಕ್ಟರಿಯನ್ನು ತೆರೆಯುವ ಬಗ್ಗೆಯೂ ಯೋಚನೆ ಮಾಡಿಲ್ಲ. ನಮಗೆ ದೈವದತ್ತವಾಗಿ ಸಿಕ್ಕುವಂಥ ಅನುಕೂಲತೆಗಳನ್ನು, ನಾವು ಯಾವುದೇ ಭಾಗದಲ್ಲಿರಲಿ, ಜನತೆಗೆ ಅವುಗಳ ಉಪಯೋಗವಾಗಬೇಕು ಎನ್ನುವ ದೃಷ್ಟಿಯಿಂದ ಇನ್ನುಮೇಲಾದರೂ ಸರ್ಕಾರದವರು ಇತ್ತ ಕಡೆಗೆ ಗಮನ ಕೊಟ್ಟು ಬೇಕಾದ ಕೈಗಾರಿಕೆಗಳನ್ನು ತೆರೆಯುವುದಲ್ಲದೆ ಹಣ್ಣು ಹಂಪಲುಗಳನ್ನು ಶೇಖರಿಸಿಡಲು ಒಂದು ಕೋಲ್ಡ್ ಸ್ಟೋರೇಜ್ ಪ್ಲಾಂಟನ್ನು ನಮ್ಮ ಭಾಗಕ್ಕೆ ಒದಗಿಸಿಕೊಡಬೇಕು ಎಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿ ಸಿಕ್ಕುವ ಸೇಕಡ ನಲವತ್ತರಷ್ಟು ಭಾಗ ಮಿನರಲ್ಸ್ ಕಾರವಾರ ಜಿಲ್ಲೆಯಲ್ಲಿ ಸಿಕ್ಕುತ್ತದೆ. ಅದರ ಉಪಯೋಗ ಮಾತ್ರ ಜನತೆಯೂ ಮತ್ತು ಸರ್ಕಾರವೂ ಮಾಡಿಕೊಳ್ಳಲಿಲ್ಲ. ಅದನ್ನು ಉಪಯೋಗ ಮಾಡಲು ಅಲ್ಲಿ ಕೈಗಾರಿಕೆಗಳನ್ನು ತೆರೆದರೆ ಅದರಿಂದ ಹೇರಳವಾದ ಉತ್ಪನ್ನ ಸರ್ಕಾರಕ್ಕೂ ಬರುತ್ತದೆ ಮತ್ತು ಆ ಭಾಗದಲ್ಲಿ ಕೈಗಾರಿಕೆ ಬರುವುದರಿಂದ ಅಲ್ಲಿನ ಜನರಿಗೂ ಅನುಕೂಲವಾಗುತ್ತದೆ.

ಹಿಂದೆ ಕಾರವಾರ ಜಿಲ್ಲೆಯಲ್ಲಿ ಅಲ್ಯೂಮಿನಿಯಂ ಕಾರ್ಖಾನೆಯನ್ನು ತೆರೆಯುತ್ತೇವೆಂದು ಇದೇ ಸಭೆಯಲ್ಲಿ ಆಶ್ವಾಸನೆಯನ್ನು ಕೊಡಲಾಗಿತ್ತು. ಆದರೆ ಅದು ಈಗ ಕಾರವಾರ ಜಿಲ್ಲೆಯಿಂದ ಬೇರೆ ಕಡೆಗೆ ಅಂದರೆ ಬೆಳಗಾಂ ಕಡೆಗೆ ಹೋಗುತ್ತಿದೆ. ಬೆಳಗಾಂ ಬಗ್ಗೆ ನನಗೆ ವಿರೋಧವೇನೂ ಇಲ್ಲ. ಆದರೆ ಯಾವ ಭಾಗದಲ್ಲಿ ಒಂದು ಕೈಗಾರಿಕೆಯೂ ಇಲ್ಲದೆ ಇರುತ್ತದೆಯೋ ಅಂಥ ಭಾಗದಲ್ಲಿ ಕೈಗಾರಿಕೆಗಳನ್ನು ತೆಗೆಯುವುದು ಒಳ್ಳೆಯದು. ಅಲ್ಯೂಮಿನಿಯಂ ಕಾರ್ಖಾನೆಗೆ ಬೇಕಾದ ಬಾಕ್ಸೈಟ್ ಅಂಕೋಲ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಹೇರಳವಾಗಿ ಸಿಕ್ಕುತ್ತದೆ. ಈ ಕಾರ್ಖಾನೆಯ ಬಗ್ಗೆ ಒಂದು ನಿರ್ಣಯಕ್ಕೆ ಬರುವಾಗ ಅದು ಯಾವ ಸ್ಥಳದಲ್ಲಿ ನಿಲ್ಲುತ್ತದೆ ಎಂದು ಗೊತ್ತಾಗಲಿಲ್ಲ.

ಯಲ್ಲಾಪುರ ತಾಲ್ಲೂಕು ಕಳಸೂರು ಎಂಬಲ್ಲಿ ಗ್ರೇಟರ್ ಮೈಸೂರು ರೇಯಾನ್ ಪಲ್ ಫ್ಯಾಕ್ಟರಿಗಾಗಿ ಈಗ ಆರು ವರ್ಷಗಳ ಹಿಂದೆ ಲೈಸೆನ್ಸ್ ಕೊಡಲಾಗಿದೆ. ಆ ಲಾಗಾಯ್ತು ಅಲ್ಲಿ ಫೌಂಡೇಷನ್ ಹಾಕುವುದಕ್ಕಾಗಿ ಅರಣ್ಯವನ್ನು ಕ್ಲಿಯರ್ ಮಾಡಿದ್ದಾರೆ. ಫೌಂಡೇಷನ್ ಸಹ ಹಾಕಿದ್ದಾರೆ. ಇನ್ನು ಯಾವ ತರಹ ಕೆಲಸವೂ ಅಲ್ಲಿ ಆಗಿಲ್ಲ. ನಾವು ಸಹನೆ ಮಾಡಬೇಕು, ವಿಳಂಬವಾಗುತ್ತಿದೆ, ನಿಜ. ಆದರೆ ಎಷ್ಟು ದಿವಸ ತಡೆಯಬೇಕು ಎನ್ನುವುದನ್ನು ಸರ್ಕಾರದವರು ಹೇಳಬೇಕು. ಒಬ್ಬ ಮನುಷ್ಯನ ಜೀವಮಾನದಲ್ಲಿ ಆರು ವರ್ಷ ಕಡಮೆಯಲ್ಲ. ಸರ್ಕಾರದವರು ಇದರ ಬಗ್ಗೆ ದಿಟ್ಟ ಹೆಜ್ಜೆಯನ್ನು ಇಟ್ಟು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಆ ಕಾರ್ಖಾನೆ ಬರಲಾರದ್ದರಿಂದ ಆ ಭಾಗದಲ್ಲಿ ಬೊಂಬು

(ಶ್ರೀ ಎಸ್. ಪಿ. ಫಾಯದೆ)

ಹೂವು ಬಿಟ್ಟು ನಷ್ಟವಾಗುತ್ತಿವೆ. ಆ ಕಾರ್ಖಾನೆಯವರಾಗಲೀ, ಬೇರೆ ಯಾರಾಗಲೀ ಬಿದರನ್ನು ಉಪಯೋಗ ಮಾಡಿಲ್ಲ. ಸರ್ಕಾರದವರೇ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶೀಘ್ರವಾಗಿ ಈ ಕಾರ್ಖಾನೆ ಕಾರ್ಯಪ್ರವೃತ್ತವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

[MR. SPEAKER in the Chair].

ಈ ಭಾಗದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಲ್ಲ. ಇದರ ಬಗ್ಗೆ ಸರ್ವೆ ಕೆಲಸ ಆಗಿದೆ. ಸಣ್ಣ ಕೈಗಾರಿಕೆಗಳನ್ನು ನಡೆಸುವ ಸಂಬಂಧದಲ್ಲಿ ನೂರಾರು ಅರ್ಜಿಗಳು ಬಂದಿವೆ. ಹಿಂದುಳಿದ ಭಾಗವಾದ ನಮ್ಮ ಜಿಲ್ಲೆಯಲ್ಲಿ ಕಚ್ಚಾ ಪದಾರ್ಥಗಳು ಸಾಕಷ್ಟು ಸಿಕ್ಕುತ್ತವೆ. ಆ ಭಾಗದಲ್ಲಿ ಕೆಲವು ಕೈಗಾರಿಕೆಗಳನ್ನು ತೆರೆಯಲು ಅನುಕೂಲವಾಗುವುದರಿಂದ ಅತ್ತಕಡೆ ಹೆಚ್ಚಿನ ಲಕ್ಷ್ಯ ಕೊಟ್ಟು ಪೂರೈಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾರ್ತ್ ಕೆನರಾ ಜಿಲ್ಲೆಯಲ್ಲಿ ಒಂದು ಇಂಡಸ್ಟ್ರಿಯಲ್ ಬ್ಯಾಂಕ್ ತೆರೆದಿದ್ದಾರೆ. ಅದು ತಕ್ಕ ಮಟ್ಟಿಗೆ ತನ್ನ ಕೆಲಸವನ್ನು ಮಾಡುತ್ತಿದೆ, ಈ ಬ್ಯಾಂಕಿನ ಅನುಕೂಲ ಎಲ್ಲರಿಗೂ ಸಿಕ್ಕಬೇಕಾದರೆ ಅದು ತಾಲ್ಲೂಕು ಮಟ್ಟದಲ್ಲಿ ಸಹ ಇರುವುದು ಒಳ್ಳೆಯದು. ಹಾಗೆ ಆದರೆ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಬೇಕಾದ ಹಣ ದೊರೆಯುತ್ತದೆ ಮತ್ತು ಬೇರೆ ರೀತಿಯಲ್ಲಿಯೂ ಅನುಕೂಲವಾಗುತ್ತದೆ. ಸರ್ಕಾರ ಇದಕ್ಕೆ ಲಕ್ಷ್ಯ ಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ತಾಲ್ಲೂಕು ಬೋರ್ಡುಗಳಲ್ಲಿ ಇಂಡಸ್ಟ್ರೀಸ್ ಎಕ್ಸ್‌ಟೆನ್‌ಷನ್ ಆಫೀಸರಿದ್ದಾರೆ. ಅವರಿಂದ ಯಾವ ಕೈಗಾರಿಕೆಗೂ ಅನುಕೂಲವಾಗಿರುವ ಹಾಗೆ ಕಾಣಿಸುವುದಿಲ್ಲ. ಈ ಅಧಿಕಾರಿಗಳು ಸ್ವಲ್ಪ ಪ್ರಯತ್ನ ಮಾಡಿ ಯಾವುದಕ್ಕೆ ಅನುಕೂಲತೆಯನ್ನು ಕೊಡಬಹುದೋ ಅಂಥ ಕೈಗಾರಿಕೆಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡಬೇಕು. ಸುಮ್ಮನೆ ಈ ಅಧಿಕಾರಿಗಳು ಇದ್ದ ಮಾತ್ರಕ್ಕೆ ಏನಾದರೂ ಕೆಲಸವಾಗುತ್ತದೆ ಎಂದು ಭಾವಿಸಲಿಕ್ಕೆ ಬರುವುದಿಲ್ಲ.

ರೈತಾಪಿ ಜನರಿಗೆ ಸಾಕಷ್ಟು ಕೆಲಸವಿರುವುದಿಲ್ಲ. ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಅವರಿಗೆ ಉಪಯೋಗವಾಗುತ್ತದೆ. ರೈತರ ಹಿತದೃಷ್ಟಿಯಿಂದಲಾದರೂ ಕೆಲವೊಂದು ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿ ಅನುಕೂಲ ಮಾಡಿ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ಈ...............

Mr. SPEAKER.—Let the Hon'ble Member Kindly speak in English, if he can. If it is embarassing, he need not do so.

ಶ್ರೀ ಎಸ್. ಎಂ. ಕೃಷ್ಣ.—ಈ ಶರಾವತಿಯ ಮುಂಬೆಳಕು ಬರಲಿಕ್ಕೆ ಪ್ರಾರಂಭವಾದ ಮೇಲೆ ನಮ್ಮ ರಾಜ್ಯದಲ್ಲಿ ಉದ್ದಿಮೆಗಳ ಸುಗ್ಗಿ ಪ್ರಾರಂಭವಾಗುತ್ತದೆ ಎಂದು ನಿರೀಕ್ಷಿಸಿಕೊಂಡಿದ್ದ ಎಲ್ಲರಿಗೂ ಕೂಡ ಈಗ ನಿರಾಸೆಯಾಗಿದೆ. ನಮ್ಮ ಉದ್ದಿಮೆಗಳ ಮಂತ್ರಿಗಳಿಗೆ, ವಯಸ್ಸಿಗೆ ಬಂದ ಹೆಣ್ಣು ಮಗಳು ಮದುವೆಗೆ ನಾಚಿದಂತೆ ಆಗಿದೆ ಎಂದು ನಾನು ಭಾವನೆ ಮಾಡುತ್ತೇನೆ;

ಕಳೆದ 18 ವರ್ಷಗಳಿಂದಲೂ ಮೈಸೂರು ರಾಜ್ಯದ ಉದ್ದಿಮೆಗಳ ಬಗ್ಗೆ ಏನು ಪ್ರಗತಿಯನ್ನು ಸಾಧಿಸಿದ್ದೆವೋ ಆ ಪ್ರಗತಿ ಮುಂದೆ ಹೆಚ್ಚುವರಿ ಪ್ರಗತಿಯಿಬನಾದಿ ಆಗದೆ ಹೋಗಿದೆ. ನಾವು ಉದ್ದಿಮೆಗಳ ದೃಷ್ಟಿಯಲ್ಲಿ ದಕ್ಷಿಣ ರಾಜ್ಯಗಳಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ ಎನ್ನುವುದನ್ನು ನಾವು ಮರೆಯಬಾರದು. ಈಗ ಆಶ್ವಾಸನೆಗಳನ್ನು ಮಾಡುವುದು ಸುಲಭ. ಆದರೆ ಅವನ್ನು ಕಾರ್ಯಗತ ಮಾಡುವುದರಲ್ಲಿ ಬಹಳ ಜವಾಬ್ದಾರಿ ಇದೆ. ಈಗ ಎಲ್ಲಕ್ಕಿಂತಲೂ ಮುಖ್ಯವಾಗಿ ಇಂತಹ ಒಂದು ಶೋಚನೀಯವಾದ ಸ್ಥಿತಿಗೆ ನಮ್ಮ ರಾಜ್ಯ ಬರಬೇಕಾದರೆ ಕಾರಣವೇನು ಎನ್ನುವುದನ್ನು ನಾವು ಹುಡುಕಬೇಕಾಗಿದೆ. ಆ ಕಾರಣಗಳನ್ನು ನಿವಾರಿಸಿಕೊಂಡು ನಾವು ಹೆಚ್ಚು ಅಭಿವೃದ್ಧಿಯನ್ನು ಮಾಡುವ ದೃಷ್ಟಿಯಲ್ಲಿ ಒಳ್ಳೆಯ ಹೆಜ್ಜೆಯನ್ನು ಇಡುವ ಸಮಯ ಬಂದಿದೆಯೆಂದು ನಾನು ಭಾವನೆ ಮಾಡುತ್ತಿದ್ದೇನೆ. ಮೈಸೂರು ರಾಜ್ಯಕ್ಕೇನು ಕಡಿಮೆ ಇದೆ, ನಮ್ಮಲ್ಲಿ ಸಾಕಾದಷ್ಟು ವಿದ್ಯುಚ್ಛಕ್ತಿ ಒದಗಿಬಂದಿದೆ, ಸಾಕಾದಷ್ಟು ಭೂಮಿ ಇದೆ, ನಮ್ಮಲಿ ಹೆಚ್ಚು ಉದ್ದಿಮೆಗಳನ್ನು ಮುಂದುವರಿಸುವುದಕ್ಕೆ ಬೇಕಾದಷ್ಟು ಅನುಕೂಲವಿದೆ. ಸಾಕಾದಷ್ಟು ಜನರೂ ಕೂಡ ತಾಂತ್ರಿಕ ಶಿಕ್ಷಣ ಪಡೆದಿರುವವರೂ ನಮ್ಮಲ್ಲಿ ಇದ್ದಾರೆ. ಆದರೆ ಹಣ ಇಟ್ಟುಕೊಂಡಿರುವ ಜನ ಮಾತ್ರ ಮುಂದೆ ಬಂದಿಲ್ಲವೆನ್ನು

ವುದು ಸರ್ಕಾರದ ಒಂದುವಾದ. ಆದರೆ ನಾನಾದರೂ ಒಂದು ಪ್ರಶ್ನೆ ಮಾಡಬಯಸುತ್ತೇನೆ. ಈ ರಾಜ್ಯದಲ್ಲಿ ನಮ್ಮಲ್ಲಿರುವ ಬಂಡವಾಳಷಾಹಿಗಳು ಹಾಗೂ ಹಣ ಇಟ್ಟಿರುವ ಜನ ಮುಂದೆ ಬಂದು ತಮ್ಮ ಒಂದು ಉದ್ದಿಮೆ ಅಥವಾ ಕೈಗಾರಿಕೆಗೋಸ್ಕರ ಹಣವನ್ನೂ ಇನ್‌ವೆಸ್ಟ್ ಮಾಡುವುದಕ್ಕೆ ಬಂದಿದ್ದರೂ ಅಂತಹವರಿಗೆ ಸಾಕಷ್ಟು ಪ್ರೋತ್ಸಾಹ ಕೊಡದೇ ಇರುವುದೇ ಈ ಕೈಗಾರಿಕೆ ಕ್ಷೇತ್ರದಲ್ಲಿ ಆಗತಕ್ಕ ಪ್ರಗತಿ ಕುಂಠಿತವಾಗುವುದಕ್ಕೆ ಕಾರಣವೆಂದು ನಾನು ಹೇಳಬೇಕಾಗುತ್ತದೆ. ಇದರಲ್ಲಿ ಒಂದು ಒಳ್ಳೆಯ ವಾತಾವರಣವನ್ನು ನಾವು ಉಂಟುಮಾಡಲಿಕ್ಕೆ ಇದುವರೆಗೂ ಸಫಲರಾಗಲಿಲ್ಲ ಎನ್ನುವುದು ನನ್ನ ನಿರ್ದಿಷ್ಟವಾದ ಭಾವನೆ. ಟೀಕೆ ಮಾಡಬೇಕೆಂಬ ಉದ್ದೇಶದಿಂದ ನಾನು ಆ ಮಾತನ್ನು ಹೇಳುತ್ತಿಲ್ಲ. ಬಹಳ ಸಂಕಟದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಅದರಲ್ಲೂ 1956ನೇ ಇಸವಿಯಲ್ಲಿ ವಿಸ್ತೃತ ಮೈಸೂರು ರಾಜ್ಯವಾದಾಗ ಈ ರಾಜ್ಯವನ್ನು ಸರ್ವಾಂಗ ಸುಂದರ ರಾಜ್ಯವನ್ನಾಗಿ ಮಾಡಬೇಕೆಂಬ ಹಂಬಲ ನಮ್ಮೆಲ್ಲರಿಗೂ ಇತ್ತು. ಆದರೆ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಈ ರಾಜ್ಯ ಪದೇ ಪದೇ ಎಡವಿ ಮುಗ್ಗರಿಸಿ ಬೀಳಲಿಕ್ಕೆ ಏನು ಕಾರಣ ಎಂಬುದಾಗಿ ನಾವು ಆಲೋಚನೆ ಮಾಡಬೇಕಾಗಿದೆ. ಈ ವಿಚಾರವನ್ನು ಮಾನ್ಯ ಶ್ರೀ ಶಿವಪ್ಪನವರೂ ಮತ್ತು ಶ್ರೀ ಸೂರ್ಯ ನಾರಾಯಣರಾವ್ ಅವರೂ ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ನಮ್ಮ ರಾಜ್ಯಸರ್ಕಾರದಲ್ಲಿ ಸಾಕಷ್ಟು ಶಕ್ತಿ ಇಲ್ಲ. ಕೇಂದ್ರದ ಮೇಲೆ ಪ್ರಭಾವ ಬೀರುವುದಾಗಲೀ, ಆ ರೀತಿ ಪ್ರಭಾವ ಬೀರಿ ಆದಷ್ಟು ಕೆಲಸಗಳನ್ನು ಇವರ ಒಂದು ಹೆಚ್ಚಿನ ಶಕ್ತಿಗಳಿಂದ ನ್ಯಾಯವಾಗಿ ನಮಗೆ ಸಲ್ಲುವುದನ್ನೂ ಕೂಡ ಪಡೆಯುವಂತಹ ವ್ಯವಸ್ಥೆ ಇಲ್ಲ. ಅಂತಹ ಒಂದು ಸೌಕರ್ಯವನ್ನು ನಮಗೆ ಕೇಂದ್ರ ಸರ್ಕಾರದವರು ದೊರಕಿಸಿಕೊಟ್ಟಿಲ್ಲವೆಂದು ಗಟ್ಟಿಯಾಗಿ ಹೇಳುವ ಒಂದು ಶಕ್ತಿಯನ್ನು ಕೂಡ ಈ ಸರ್ಕಾರ ಕಳೆದುಕೊಂಡಿದೆ. ಇವರ ಒಂದು ದುರ್ಬಲವಾದ ನಾಯಕತ್ವದಿಂದ ಈ ರಾಜ್ಯದ ಭವಿಷ್ಯವನ್ನೇ ಮಣ್ಣುಪಾಲು ಮಾಡತಕ್ಕ ಪರಿಸ್ಥಿತಿಯನ್ನು ನಾವು ತಂದುಕೊಂಡಿದ್ದೇವೆಂದು ನಾನು ಭಾವನೆ ಮಾಡುತ್ತೇನೆ. ಅಂತಹ ವಾತಾವರಣವನ್ನು ನಾವು ಕಲ್ಪಿಸಿದ್ದೇವೆ. ನಾನು ಇದನ್ನು ಪ್ರತಿ ಪಾದನೆ ಮಾಡುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಇಬ್ಬರು ಯುವಕರು ಜರ್ಮನಿಯಲ್ಲಿ ತರಪೇತು ಪಡೆದು ಸಾಕಾದಷ್ಟು ಹಣವನ್ನು ಪಡೆದುಕೊಂಡು ಬಂದು ಬೆಂಗಳೂರಿನಲ್ಲಿ ಒಂದು ಸಣ್ಣ ಕಾರ್ಖಾನೆಯನ್ನು ಸ್ಥಾಪನೆಮಾಡಬೇಕೆಂದು ಮುಂದೆ ಬಂದಾಗ ಇವರ ಸಣ್ಣ ಪ್ರಮಾಣದ ಕೈಗಾರಿಕೆಗಳ ಕಾನೂನುಗಳ ಪ್ರಕಾರ ಅವರು ರಿಜಿಸ್ಟ್ರೇಷನ್‌ಮಾಡಬೇಕಾಗಿ ಬಂತು. 1963ನೇ ಇಸವಿಯಲ್ಲಿ ಅವರು ಕೈಗಾರಿಕೆಯ ಇಲಾಖೆಗೆ ರೂಲ್ಸ್ ಪ್ರಕಾರ ರಿಜಿಸ್ಟರ್ ಮಾಡಿಕೊಡಬೇಕೆಂದು ಪತ್ರ ಬರೆದರೆ 1965ನೇ ಇಸವಿಯಲ್ಲಿ ಒಂದು ಮರು ಪತ್ರ ಬಂದಿದೆ. ಅದರಲ್ಲಿ ಈಗ ರಿಜಿಸ್ಟರ್ ಮಾಡಿಕೊಡುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ ಅದನ್ನು ವಾಪಸ್ ಮಾಡಿದೆ ಎಂಬುದಾಗಿ ಉತ್ತರ ಬಂತು. ಇಲ್ಲಿ ಅಂತಹ ಉದ್ದಿಮೆಗಳನ್ನು ಸ್ಥಾಪನೆಮಾಡುವುದಕ್ಕೆ ಇರಬೇಕಾದುದು ಇಂತಹ ಒಂದು ವಾತಾವರಣವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಸುಮಾರು ಎರಡು ವರ್ಷಗಳಾದ ಮೇಲೆ ಇಷ್ಟು ವಿಳಂಬವಾಗಿ ಇದು ಏಕೆ ಆಯಿತು, ಅಂತಹ ಒಂದು ಮಹತ್ತರವಾದ ಪ್ರಸಂಗವೇನಿತ್ತು? ಆ ಇಬ್ಬರು ಯುವಕರು 1965ನೇ ಕೊನೆಯ ಭಾಗದಲ್ಲಿ ಇವರ ಕಾಗದವೇನಾದರೂ ಬರದೇ ಹೋಗಿದ್ದರೆ ಮದ್ರಾಸಿನಲ್ಲಿ ಹೋಗಿ ಆ ಕಾರ್ಖಾನೆಯನ್ನು ಸ್ಥಾಪನೆಮಾಡ ಬೇಕೆಂದು ಇದ್ದರು. ಅನಂತರ ಅವರು ಇಂತಹ ಒಂದು ಉದ್ದಿಮೆಯನ್ನು ಈ ರಾಜ್ಯದಲ್ಲಿ ಸ್ಥಾಪನೆಮಾಡಬೇಕಾದರೆ ಹತ್ತಾರು ಅಡಚಣೆಗಳನ್ನು ದಾಟಿ ಮುಂದೆ ಹೋಗಬೇಕಾಗಿತ್ತು. ಅದಕ್ಕಾಗಿ ಬೇಕಾದಷ್ಟು ಅಡ್ಡಿ, ಅಡಚಣೆಗಳು, ಅಡ್ಡಿ ಆತಂಕಗಳು ಸಂಬಂಧಪಟ್ಟ ಇಲಾಖೆಗಳಿಂದ ಬರತಕ್ಕವುಗಳಾಗಿವೆ. ಎರಡನೆಯದು ಸ್ಥಳ. ಅವರು ಎಷ್ಟೋ ಕಷ್ಟಪಟ್ಟು ಸರ್ಜಾಪುರ ರಸ್ತೆಯಲ್ಲಿ ಬೆಂಗಳೂರಿಗೆ ಸುಮಾರು 4-5 ಮೈಲಿ ದೂರದಲ್ಲಿ 4 ಎಕರೆ. ಜಮೀನನ್ನು ಕೊಂಡು ಅಲ್ಲಿ ಕೈಗಾರಿಕೆಯನ್ನು ಸ್ಥಾಪನೆಮಾಡೋಣವೆಂದರೆ ಈಗ ಬೆಂಗಳೂರಿನಲ್ಲಿ ಜಮೀನಿನ ಬೆಲೆಗಳು ಗಗನಕ್ಕೇರಿ ಹೋಗಿವೆ. ಬೆಂಗಳೂರು ಬಹಳ ಮುಂದುವರಿಯುತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ 10 ಸಾವಿರ ರೂಪಾಯಿಗಳ ಬೆಲೆ ಇದ್ದುದು 25 ಸಾವಿರ ರೂಪಾಯಿಗಳಾಗಿದೆ. 25 ಸಾವಿರ ರೂಪಾಯಿಗಳಾದರೂ ಚಿಂತೆಇಲ್ಲ. ಅವರಿಗೆ ಎಲ್ಲಿ ಅನುಕೂಲವಿದೆಯೋ ಅಂತಹ ಸ್ಥಳದಲ್ಲಿ ಕೈಗಾರಿಕೆಯನ್ನು ಸ್ಥಾಪನೆಮಾಡೋಣವೆಂದು ನಿರ್ಧರಿಸಿದರು. ಈ ನಾಲ್ಕು ಎಕರೆ ಜಮೀನನ್ನು ಕೊಂಡುಕೊಳ್ಳಲು ಟ್ರಸ್ಟ್‌ಬೋರ್ಡಿನವರ ಅವಾಂತರ ಬೇರೆ, ಅದು ಕನ್‌ವರ್ಷನ್ ಆಗಬೇಕು. ಸರ್ಕಾರ ಒಪ್ಪಿದರೆ ಟ್ರಸ್ಟ್‌ಬೋರ್ಡ್ ಒಪ್ಪುತ್ತಿರಲಿಲ್ಲ. ಟ್ರಸ್ಟ್ ಬೋರ್ಡ್ ಒಪ್ಪಿದರೆ ಸರ್ಕಾರ ಒಪ್ಪುತ್ತಿರಲಿಲ್ಲ. ಈ ಮಧ್ಯೆ ಅವರು ಜರ್ಮನಿ ಕಂಪೆನಿಯ ಕೊಲಾಬೊರೇಷನ್ ಕೂಡ ಏರ್ಪಾಡು ಮಾಡಿಕೊಂಡಿದ್ದರು. ಟೆಕ್ನಿಕಲ್ ಕೊಲಾಬೊರೇಷನ್, ಫೈನಾನ್ಶಿಯಲ್ ಕೊಲಾಬೊರೇಷನ್—ಈ ಎರಡೂ ಆ ಯುವಕರಿಗೆ ಸಿಕ್ಕಿತ್ತು. ಆದರೆ ಆ ಯುವಕರು ಎಷ್ಟು ದಿವಸ ಇಲ್ಲಿ ಕಾದಾರು? ಎಷ್ಟು ದಿವಸಗಳವರೆಗೆ ಇಲ್ಲಿ ಕಾದುಕುಳಿತುಕೊಂಡಾರು? ಅವರು ಈ ಸರ್ಕಾರವನ್ನೂ ಮತ್ತು ಟ್ರಸ್ಟ್‌ಬೋರ್ಡಿನವರನ್ನೂ ಕೇಳಿ

(ಶ್ರೀ ಎಸ್. ಎಂ. ಕೃಷ್ಣ)

ಕೇಳಿ ಸಾಕಾಗಿ ಕೊನೆಗೆ ಆ ಜಮೀನಿನ ಮೇಲೆ ಕಟ್ಟಡ ಕಟ್ಟಿ ಆ ಕಾರ್ಖಾನೆಯನ್ನು ಪ್ರಾರಂಭಮಾಡುವುದಕ್ಕಾಗಲೇ ಇಲ್ಲ. ಕಾರಣ ಟ್ರಸ್ಟ್ ಬೋರ್ಡಿನವರು ಅವರಿಗೆ ಅನುಮತಿಯನ್ನು ಕೊಡಲಿಲ್ಲ. ಕೂಡಲೇ ಮದ್ರಾಸಿಗೆ ಹೋಗಿ ಅಲ್ಲಿ ಆ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಲು ನಿರ್ಧರಿಸಿದರು. ಆ ಯುವಕರೇ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ಮದ್ರಾಸ್, ಅವರಿಗೆ ಒಂದು ಕಾಗದ ಬರೆದು, ಅವರಿಗೆ ಫೈನಾನ್ಸಿಯಲ್ ಮತ್ತು ಟೆಕ್ನಿಕಲ್ ಕೊಲಾಬೊರೇಷನ್ ಸಿಕ್ಕಿದೆ ಎಂದು ಮದ್ರಾಸಿನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದಿದ್ದೇವೆಂದು ಅವರ ಕಾಗದದಲ್ಲಿ ತಿಳಿಸಿದುದನ್ನು ಕಂಡು ಮರು ಟಪಾಲಿನಲ್ಲಿಯೇ ಅವರಿಂದ ಈ ಯುವಕರು ಜಾಗ್ರತೆ ಬಂದು ಭೇಟಿಮಾಡಬೇಕೆಂಬ ಜವಾಬು ಬಂತು. ಆರೀತಿಯಾಗಿ ಇವರು ಭೇಟಿ ಮಾಡಿದ ನಂತರ ಅಲ್ಲಿನ ಒಂದು ಗಿಂಡಿ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಒಂದು ಷೆಡ್ಡನ್ನು 24 ಘಂಟೆಗಳಲ್ಲಿ ಬಾಡಿಗೆಗೆ ತೆಗೆದುಕೊಂಡು ಕಾರ್ಖಾನೆಯನ್ನು ಪ್ರಾರಂಭ ಮಾಡಿ, ಮುಂದೆ ಒಳ್ಳೆಯ ಸ್ಥಳವನ್ನು ಕೊಡಿಸುತ್ತೇವೆ, ಎಲ್ಲಾ ಇತರ ಸೌಕರ್ಯಗಳನ್ನೂ ಕೊಡಿಸುತ್ತೇವೆ, ಪವರ್ ಸಹ ಸಾಕಷ್ಟು ಕೊಡಿಸುತ್ತೇವೆಂದು ಹೇಳಿದರು. ಮದ್ರಾಸಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಇಲಾಖೆಯಲ್ಲಿ ಒಬ್ಬ ಸಣ್ಣ ಅಧಿಕಾರಿಯನ್ನು ಭೇಟಿ ಮಾಡಿದಾಗ ಅವರ ಕುಂದುಕೊರತೆಗಳನ್ನು ಕೇಳಿ ನಿವಾರಣೆ ಮಾಡಿ ಅವರಿಗೆ ಬೇಕಾದ ಸಹಾಯವನ್ನು ಕೂಡಲೇ ಕಲ್ಪಿಸಿದ ಹಾಗೆ ಇಲ್ಲಿ ಆ ಒಂದು ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಅಂತಹ ಒಂದು ಮನೋಭಾವವನ್ನು ತೋರಿಸುವ ಮನಸ್ಸು ಮಾಡದೇ ಇರುವುದು ಬಹಳ ಶೋಚನೀಯವಾದುದು. ಆದ್ದರಿಂದ ನಾನು ಹೇಳುವುದಿಷ್ಟೇ. ಒಳ್ಳೆಯ ವಾತಾವರಣವನ್ನು ಇವರು ನಿರ್ಮಿಸಿದರೆ ಯಾರು ಉದ್ದಿಮೆಗಳನ್ನು ಮಾಡಬೇಕು ಎಂಬುದಾಗಿ ಮನಸ್ಸು ಮಾಡುತ್ತಾರೋ, ಅದಕ್ಕಾಗಿ ಹಣವನ್ನು ಇಟ್ಟುಕೊಂಡಿರುತ್ತಾರೋ ಅವರೇ ಮುಂದೆ ಬರುತ್ತಾರೆ. ಏಕೆಂದರೆ, ಬೆಂಗಳೂರು ಬಹು ಸುಂದರವಾದ ಪಟ್ಟಣ. ಒಳ್ಳೆಯ ವಾಯುಗುಣ ಹೊಂದಿರತಕ್ಕ ಪಟ್ಟಣ. ಇಲ್ಲಿ ಬಹಳ ಹೆಚ್ಚಿನ ಮಟ್ಟದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಇದೆ, ಉತ್ಪನ್ನವೂ ಇದೆ. ಕಾವೇರಿ ಸ್ಕೀಂ ಏನಾದರೂ ಮುಗಿದರೆ ನಮಗೆ ಹೆಚ್ಚಿನ ನೀರಿನ ಸೌಕರ್ಯ ಸಿಗುತ್ತದೆ. ಆದ್ದರಿಂದಲೇ ಬೊಂಬಾಯಿ, ಮದ್ರಾಸ್, ದೆಹಲಿ, ಕಲ್ಕತ್ತಾದಲ್ಲಿರತಕ್ಕ ಉದ್ದಿಮೆಗಾರರು ಬೆಂಗಳೂರಿಗೆ ಬರುತ್ತಾರೆ. ಆದರೆ ಈ ರಾಜ್ಯದಲ್ಲಿ ಈಗ ಒಳ್ಳೆಯ ವಾತಾವರಣ ಇಲ್ಲದೇ ಇರುವುದರಿಂದಲೂ ಮತ್ತು ಸಹಕಾರ ವಾತಾವರಣ ಸಾಕಷ್ಟು ಇಲ್ಲದೆ ಇರುವುದರಿಂದಲೂ ಅನೇಕ ಉದ್ದಿಮೆಗಾರರು ಈ ದಿವಸ ಬೆಂಗಳೂರನ್ನು ಬಿಟ್ಟು ಮದ್ರಾಸ್, ಬೊಂಬಾಯಿ, ಕಲ್ಕತ್ತಾ, ಪೂನಾಕ್ಕೆ ಹೋಗುತ್ತಿದ್ದಾರೆ. ಬೆಂಗಳೂರಿಗೆ ಬರುವುದಕ್ಕೇ ಹಿಂದೇಟು ಹೊಡೆಯುತ್ತಿದ್ದಾರೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಏನಾಗಿದೆಯೆಂದರೆ, ಯಾರಾದರೂ ಕೆಲಸ ಮಾಡುವುದಕ್ಕೆ ಹೋದರೆ ಅವರು ಅವರ ಜವಾಬ್ದಾರಿಯನ್ನು ಬೇರೆಯವರಿಗೆ ಜಾರಿಸುವುದು. ಸರ್ಕಾರವನ್ನು ಕೇಳಿದರೆ ಟ್ರಸ್ಟ್ ಬೋರ್ಡನ್ನು ಕೇಳಿ ಎನ್ನುವುದು, ಟ್ರಸ್ಟ್ ಬೋರ್ಡನ್ನು ಕೇಳಿದರೆ ರೂರಲ್ ಡೆಪ್ಯುಟಿ ಕಮೀಷನರನ್ನು ಕೇಳಿ ಎನ್ನುವುದು. ಇದರಲ್ಲಿ ಪ್ರ್ಯಾಕ್ಟಿಕಲ್ ಡಿಫಿಕಲ್ಟೀಸ್ ಏನು ಎಂಬುದನ್ನು ಇವರು ಕಂಡುಹಿಡಿಯಬೇಕು. You put some sort of ceiling on their enthusiasm. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕೆಂದು ನಾನು ಈ ಸಮಯದಲ್ಲಿ ಹೇಳಲು ಇಷ್ಟಪಡುತ್ತೇನೆ. ನನ್ನ ಸ್ನೇಹಿತರು ಹೇಳಿದ ಹಾಗೆ ಕಳೆದ 4½ ವರ್ಷಗಳಿಂದ ನಮ್ಮ ಈ ರಾಜ್ಯದಲ್ಲಿ ನಾವು ಯಾವ ಯಾವ ಉದ್ದಿಮೆಗಳು ಬರುತ್ತವೆಂದು ಆಶೆ ಮಾಡಿದ್ದೆವೋ ಅವೆಲ್ಲವೂ ಕಂಡವರ ಪಾಲು ಆಗತಕ್ಕ ಸನ್ನಿವೇಶವನ್ನೇ ನಾವು ಹೆಚ್ಚು ಕಾಣುತ್ತಿದ್ದೇವೆ.

ನಮ್ಮ ರಾಜ್ಯ ಸರ್ಕಾರದವರು ಧೀರೋದಾತ್ತವಾದ ನಿಲುವನ್ನು ತೆಗೆದುಕೊಳ್ಳಬೇಕು. ಮದ್ರಾಸ್ ರಾಜ್ಯದೊಡನೆ ನಮ್ಮ ರಾಜ್ಯದ ಸ್ಥಿತಿಗತಿಗಳನ್ನು ಹೋಲಿಸಬೇಕಾಗುತ್ತದೆ. ಹಾಗೆ ಹೋಲಿಸುವಾಗ ನಮಗೆ ದುಃಖವಾಗುತ್ತದೆ. ಕಬ್ಬಿಣದ ಕಾರ್ಖಾನೆ, ಉಕ್ಕಿನ ಕಾರ್ಖಾನೆಯನ್ನು ನಮ್ಮ ದೇಶದಲ್ಲಿ ಸ್ಥಾಪನೆ ಮಾಡಬೇಕು ಎಂದರೆ ಕೇಂದ್ರ ಸರ್ಕಾರದವರು ಒಂದಲ್ಲ ಒಂದು ಕಾರಣಕ್ಕೋಸ್ಕರ ಅದನ್ನು ಪೆಂಡಿಂಗ್‌ನಲ್ಲಿ ಇಡುತ್ತಾರೆ. ಇವೊತ್ತಿನ ದಿವಸ ರಾಜಕೀಯ ಕಾರಣಕ್ಕೋಸ್ಕರ ದಕ್ಷಿಣದಲ್ಲಿ ಎಲ್ಲಿ ಉಕ್ಕಿನ ಕಾರ್ಖಾನೆಯನ್ನು ಹಾಕಬೇಕು ಎನ್ನುವ ಒಂದು ನಿಲುವನ್ನು ತೆಗೆದುಕೊಳ್ಳುವ ಕಾಲವನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಕೇಂದ್ರ ಸರ್ಕಾರದವರು ದಕ್ಷಿಣದ ಪ್ರಭಾವೀ ರಾಜಕಾರಣಿಗಳ ಹಿಡಿತಕ್ಕೆ ಸಿಕ್ಕಿ ಈ ದಿವಸ ಮೈಸೂರಿಗೆ ನ್ಯಾಯವನ್ನು ದೊರಕಿಸಿ ಕೊಡುವುದರಲ್ಲಿ ವಿಫಲರಾಗಿದ್ದಾರೆ ಎನ್ನುವ ಅಪಾದನೆಯನ್ನು ನಾನು ಮಾಡುತ್ತೇನೆ. ಈ ಅಪಾದನೆಯನ್ನು ಮಾಡುವಾಗ ನಮ್ಮ ರಾಜ್ಯ ಸರ್ಕಾರದವರ ನೀತಿಯನ್ನು

ಕೂಡ ನಾನು ಟೀಕೆ ಮಾಡುವುದಕ್ಕೆ ಇಚ್ಛಿಸುತ್ತೇನೆ. ಮದ್ರಾಸ್ ಸರ್ಕಾರದವರು ಸೇಲಂನಲ್ಲಿ ಒಂದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಅದಕ್ಕಾಗಿ ಅವರು ಕೇಂದ್ರ ಸರ್ಕಾರದ ಮುಂದೆ ಹೊಡೆದಾಡುತ್ತಿದ್ದಾರೆ. ಅಲ್ಲಿ ಅವರು ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಜಪಾನಿನ ಒಂದು ಕಂಪೆನಿಯವರ ಜೊತೆಯಲ್ಲಿ ಸಂಧಾನವನ್ನು ನಡೆಸುತ್ತಿದ್ದಾರೆ. ಮದ್ರಾಸಿನ ಉದ್ಯಮದ ಮಂತ್ರಿಗಳಾದ ಶ್ರೀ ವೆಂಕಟರಾಮನ್ ಅವರು ಮದ್ರಾಸಿನ ಶಾಸನ ಸಭೆಯಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ, ಕೇಂದ್ರ ಸರ್ಕಾರದವರು ಮದ್ರಾಸ್ ರಾಜ್ಯದಲ್ಲಿ ಉಕ್ಕಿನ ಕಾರ್ಖಾನೆಯನ್ನು ಮಾಡದೇ ಹೋದರೆ ನಾವೇ ನೇರವಾಗಿ ರಾಜ್ಯ ಸರ್ಕಾರದವರು ಉತ್ತಮ ರೀತಿಯಲ್ಲಿ ಒಂದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ: ನಾನು ಇದನ್ನು ದೃಢವಾದ ಹೆಜ್ಜೆ ಧೈರ್ಯವಾದ ಹೆಜ್ಜೆ ಎಂದು ಕರೆಯುತ್ತೇನೆ. ನಮ್ಮ ರಾಜ್ಯದಲ್ಲಿ ಮುಖ್ಯ ಮಂತ್ರಿಗಳೂ ಸೇರಿ ಒಬ್ಬರು ಮಂತ್ರಿಗಳಾದರೂ ಕೂಡ ಅಷ್ಟು ಧೈರ್ಯದ ಮಾತುಗಳನ್ನು ಆಡಿದ್ದರೆ ಬಹುಶಃ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಏನೇನು ನೆರವು ಸಿಕ್ಕಬೇಕಾಗಿತ್ತೋ ಅದೆಲ್ಲವನ್ನು ದೊರಕಿಸಿಕೊಂಡು ಬರುತ್ತಿದ್ದರು ಎಂದು ನಾನು ಹೇಳುತ್ತೇನೆ. ಕೇಂದ್ರದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಒಳ್ಳೆಯವರು ಎಂದು ಅವರಿಗೆ ಪಟ್ಟ ಕಟ್ಟಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು "Senior statesman of India" ಎಂದು ಹೇಳಿದ್ದಾರೆ. He is one of the senior statesmen of India by virtue of his age, by virtue of his sacrifice to the country and all that. But, how does it serve the purpose, serve the cause of Mysore? ಈ ಪಟ್ಟದ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಗಳ ತ್ಯಾಗ ಆಗಬೇಕು ಎಂದರೆ ಅದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ ಎಂದು ನಾನು ರಾಜ್ಯ ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ. ನೀವು ಧೈರ್ಯವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಹೋದರೆ, ಜನತೆ ನಿಮ್ಮನ್ನು ಮೆಚ್ಚುವುದಿಲ್ಲ. ಕೇಂದ್ರದಲ್ಲಿ ಧೈರ್ಯವಾಗಿ ನಿಷ್ಠೆಯಿಂದ ನೀವು ವಾದಮಾಡಿ ಮಾತನಾಡುವುದನ್ನು ಕಲಿಯದೇ ಹೋದರೆ, ಸಾಧ್ಯವಿಲ್ಲ. ಆದ್ದರಿಂದ ನೀವು ಧೈರ್ಯವಾಗಿ ನಿಷ್ಠೆಯಿಂದ ಮಾತನಾಡುವುದನ್ನು ಅಭ್ಯಾಸಮಾಡಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಮತಿ ನಾಗರತ್ನಮ್ಮನವರು ಹೇಳಿದಹಾಗೆ ಕಚ್ಚದೇ ಇದ್ದರೂ ಬುಸುಗುಟ್ಟುವುದನ್ನು ಕಲಿಯಬೇಕು. ಹಾಗೆ ನಮ್ಮ ಮಂತ್ರಿ ಮಂಡಲದವರು ಬುಸುಗುಟ್ಟುವುದನ್ನು ಕಲಿಯಬೇಕು. ಕೇಂದ್ರ ಸರ್ಕಾರದಲ್ಲಿ ನೀವು ಆ ರೀತಿ ಬುಸುಗುಟ್ಟುವುದಾದರೆ ನಮಗೆ ನ್ಯಾಯ ಸಿಕ್ಕುತ್ತದೆ. ಈ ದೃಷ್ಟಿಯಿಂದ ನಮ್ಮ ಮಂತ್ರಿ ಮಂಡಲದವರು ಬುಸುಗುಟ್ಟುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ನಾನು ಹೇಳುತ್ತಿದ್ದೇನೆ. ವಿರೋಧಪಕ್ಷದವರು ರಾಜ್ಯ ಸರಕಾರದ ಮೇಲೆ ಬುಸುಗುಟ್ಟುತ್ತಾರೆ. ರಾಜ್ಯ ಸರಕಾರದವರು ಕೇಂದ್ರ ಸರ್ಕಾರದವರ ಮೇಲೆ ಬುಸುಗುಟ್ಟಿ ಈಗ ಕೆಲಸಗಳನ್ನು ಮಾಡಿಸಬೇಕು ಎಂದು ನನಗೆ ಇಚ್ಛೆಇದೆ.

ಇನ್ನು ಸ್ವಾಮಿ, ಈಗ್ಗೆ ಸುಮಾರು 6-7 ತಿಂಗಳ ಕೆಳಗೆ ಬಾಗಲಕೋಟೆ ಸಿಮೆಂಟ್ ಕಂಪೆನಿ ಪಬ್ಲಿಕ್ ಲಿಮಿಟೆಡ್ ಇದರ ಬಗ್ಗೆ ಒಂದು ಅಪಾದನೆಯನ್ನು ಬಹಿರಂಗವಾಗಿ ಪತ್ರಿಕೆಯ ಹೇಳಿಕೆಯ ಮೂಲಕ ಮಾಡಿದೆ. ಸರ್ಕಾರದ ಮೇಲೆ ಪ್ರಜಾಪ್ರತಿನಿಧಿಗಳು ನೇರವಾಗಿ ಅಪಾದನೆಗಳನ್ನು ಮಾಡಿದಾಗ ಆ ಅಪಾದನೆಗಳಲ್ಲಿ ಸತ್ಯಾಂಶವಿದೆಯೇ, ಅಥವಾ ಇಲ್ಲವೇ ಎಂಬುದನ್ನು ನೋಡಿ ಇಲ್ಲದೇ ಹೋದರೆ ಅದು ಸತ್ಯಕ್ಕೆ ದೂರವಾದದ್ದು ಎನ್ನತಕ್ಕಂಥಾದ್ದನ್ನು ಹೇಳಿಕೆ ಕೊಡತಕ್ಕದ್ದು ಸಾಮಾನ್ಯವಾಗಿ ನಡೆಯ ತಕ್ಕ ರೀತಿ ಆಗಿದೆ. ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯಲ್ಲಿ ನಮ್ಮ ರಾಜ್ಯ ಸರ್ಕಾರದ ಷೇರುಗಳು ಇವೆಯೆಂದು ನಾನು ಭಾವನೆ ಮಾಡುತ್ತೇನೆ. ಹಿಂದೆ ಬೊಂಬಾಯಿ ಸರ್ಕಾರದವರು 10 ಲಕ್ಷ ರೂಪಾಯಿಗಳನ್ನು ಈ ಸಿಮೆಂಟ್ ಫ್ಯಾಕ್ಟರಿಯಲ್ಲಿ ಹಾಕಿದ್ದರು. ಅದು ಈಗ ಮೈಸೂರು ರಾಜ್ಯಕ್ಕೆ ವರ್ಗಾವಣೆಯಾಗಿದೆ. ಈ ಸಿಮೆಂಟ್ ಫ್ಯಾಕ್ಟರಿಯ ಬಗ್ಗೆ ಈ ರಾಜ್ಯದ ಮಲ್ಲೆನೆಯಲ್ಲಿ ಕೆಲವು ಟೀಕೆಗಳು ಬಂದಿವೆ. ಆ ಫ್ಯಾಕ್ಟರಿಯ ಮ್ಯಾನೇಜಿಂಗ್ ಏಜೆನ್ಸಿ ಯಾರ ಹೆಸರಿನಲ್ಲಿದೆಯೋ ಅವರು ಈಗ ವ್ಯವಹಾರವನ್ನು ಮಾಡುತ್ತಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ತನಿಖೆ ಆಗಬೇಕು ಎಂದು ಮೇಲ್ಮನೆಯಲ್ಲಿ ಕೆಲವು ಕಾಂಗ್ರೆಸ್ ಶಾಸನ ಸಭಾಸದಸ್ಯರು ಅಪಾದನೆ ಮಾಡಿದರು. ಅನಂತರ ಒಂದು ಎನ್‌ಕ್ವೈರಿ ನಡೆಯಿತು. ಆಮೇಲೆ ಸರ್ಕಾರದಿಂದ 32 ಕೇಸುಗಳನ್ನು ಮ್ಯಾನೇಜಿಂಗ್ ಏಜೆನ್ಸಿಮೇಲೆ ಹಾಕಲಾಯಿತು. ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ 89 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ರಾಜ್ಯ ಸರ್ಕಾರದಿಂದ ನನಗೆ ಬಂದಿರತಕ್ಕ ನಂಬಲರ್ಹವಾದ ವರದಿ. ಮ್ಯಾನೇಜಿಂಗ್ ಏಜೆನ್ಸಿಯವರು ಈ ಸಿಮೆಂಟ್ ಫ್ಯಾಕ್ಟರಿಯಲ್ಲಿ ಹಣದುರುಪಯೋಗ ಮಾಡಿರುವ ಬಗ್ಗೆ ತನಿಖೆ ಮಾಡುವುದಕ್ಕೆ 89 ಸಾವಿರ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಖರ್ಚು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿದಮೇಲೆ ಕೊನೆಗೆ ರಾಜ್ಯ ಸರ್ಕಾರ ಒಂದು ದಿವಸ ಆ ಮ್ಯಾನೇಜಿಂಗ್ ಏಜೆನ್ಸಿಯವರ ಮೇಲೆ ಹಾಕಿದ್ದ ಮೊಕದ್ದಮೆಗಳನ್ನು ವಾಪಸ್ಸು

(ಶ್ರೀ ಎಸ್. ಎಂ. ಕೃಷ್ಣ)

ತೆಗೆದುಕೊಂಡಿದೆ ಎಂದು ಪತ್ರಿಕೆಯಲ್ಲಿ ಪ್ರಕಟಿಸುವುದಕ್ಕೆ ಲೀಕ್ಸ್ ಕೊಟ್ಟಿದೆ. ಇದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇದರ ಬಗ್ಗೆ ನಾನು 3—4 ಪ್ರಶ್ನೆಗಳನ್ನು ಕೂಡ ಕಳುಹಿಸಿ ಕೊಟ್ಟಿದ್ದೇನೆ. ಇದುವರೆಗೂ ಆ ಪ್ರಶ್ನೆಗೆ ಉತ್ತರ ಬಂದಿಲ್ಲ. ಈ ದಿವಸ ರಾಜ್ಯ ಸರ್ಕಾರದವರು ಯಾರದೋ ದಾಕ್ಷಿಣ್ಯಕ್ಕೆ ಒಳಗಾಗಿ ಆ ಸಿಮೆಂಟ್ ಫ್ಯಾಕ್ಟರಿ ಮ್ಯಾನೇಜಿಂಗ್ ಏಜೆನ್ಸಿಯ ಮೇಲೆ ಹಾಕಿದ್ದ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಿದ್ದಾರೆ ಎಂದು ನಾನು ಬಹಳ ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ನನಗೆ ಒಂದು ಭಯ ಏನೆಂದರೆ, ಇದೇ ರೀತಿ ಉದ್ಯಮಗಳ ಹಗರಣಗಳು ನಡೆಯುವುದಕ್ಕೆ ಅವಕಾಶವನ್ನು ಕೊಟ್ಟರೆ ಉತ್ತರೋತ್ತರ ದೇಶದಲ್ಲಿ ರಾಷ್ಟ್ರೀಕೃತ ಉದ್ಯಮದ ಬಗ್ಗೆ ಜನಗಳಿಗೆ ಸಾಕಷ್ಟು ಅಲಕ್ಷ್ಯ ಬಂದು ಅನುಮಾನ ಬಂದು ಈ ಉದ್ಯಮಗಳ ಬಗ್ಗೆ ಸರ್ಕಾರದವರು ಏನೊಂದು ಕೆಲಸವನ್ನು ಸಾಧಿಸಬೇಕೆಂದು ಹೊರಟಿದ್ದಾರೆಯೋ ಅದಕ್ಕೆ ಊನ ಬರತಕ್ಕ ಸೂಚನೆಗಳು ಜಾಸ್ತಿ ಆಗುತ್ತಿವೆ.

ಇನ್ನು ಕಂಟ್ರೋಲ್ ಕಮಾಡಿಟೀಸ್‌ಗಳನ್ನು ವಿತರಣೆ ಮಾಡತಕ್ಕ ರೀತಿನೀತಿಗಳು ಮತ್ತು ಸ್ಟೈನ್‌ಲೆಸ್ ಸ್ಟೀಲ್, ಕಾಪರ್, ಅಲ್ಯೂಮಿನಿಯಂ ಇವುಗಳ ವಿತರಣೆಯ ವಿಷಯದಲ್ಲಿಯೂ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಸ್ವಭಾವತಃ ಒಳ್ಳೆಯವರು. ಅವರು ಒಳ್ಳೆಯ ಕೆಲಸಗಳನ್ನೂ ಸಹ ಮಾಡುತ್ತಿದ್ದಾರೆ. ಕೆಲಸಗಳನ್ನು ಮಾಡತಕ್ಕ ಶಕ್ತಿಯೂ ಕೂಡ ಅವರಲ್ಲಿ ಇದೆ. ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ವಿಷಯದಲ್ಲಿ ಹೇಳಬೇಕಾದರೆ, ಕೆಲವು ದಿವಸಗಳ ಕೆಳಗೆ ಅವರಿಗೆ ನಾನು ಒಂದು ಸೂಚನೆಯನ್ನು ಕೊಟ್ಟಿದ್ದೆ. ನಮ್ಮ ಮದ್ದೂರಿನಲ್ಲಿ ಒಂದು ಸ್ಟೈನ್‌ಲೆಸ್ ಸ್ಟೀಲ್ ಫ್ಯಾಕ್ಟರಿಗೆ ಪರ್ಮಿಟ್ ಕೊಡಬೇಕೆಂದು ಹೇಳಿದ್ದೆ. ಅದರಂತೆ ಅವರು ಕೊಟ್ಟಿದ್ದರು. ಆ ಪರ್ಮಿಟ್ ತೆಗೆದುಕೊಂಡು ಹೋದ ಮನುಷ್ಯ ಅದನ್ನು ಬೇರೆಯವರಿಗೆ ಮಾಡಿಕೊಳ್ಳುತ್ತಾನೆ ಅವನಿಗೆ ಇದನ್ನು ಕೊಡುವುದು ಸರಿಯಲ್ಲ, ಎಂದು ಅಲ್ಲಿನ ಕೆಲವು ಜನಗಳು ನನಗೆ ಬಂದು ಹೇಳಿದರು. ಅದಕ್ಕೋಸ್ಕರ ನಾನು ಆ ವಿಚಾರದ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಮಾನ್ಯ

11-00 A.M.

ಮಂತ್ರಿಗಳಿಗೆ ಹೇಳಿದೆ. ಆರು ತಿಂಗಳಾಯಿತು, ಎಂಟು ತಿಂಗಳಾಯಿತು. ನಾವು ಹೇಳಿದ ಮೇಲೆ ಎನ್‌ಕ್ವೈರಿಯಾಯಿತು ಈ ದಿವಸ ನಮಗೆ ಬಂದಿರುವ ವರದಿಗಳ ಪ್ರಕಾರ ನೂರರಲ್ಲಿ ಕನಿಷ್ಟಪಕ್ಷ ಅರವತ್ತರಷ್ಟು ಭಾಗ ಖೋಟಾ ಮ್ಯಾನುಫ್ಯಾಕ್ಚರರುಗಳೇ ಜಾಸ್ತಿಯಾಗಿದ್ದಾರೆ. ಇವರು ಕಳ್ಳಪೇಟೆಯಲ್ಲಿ ಮಾರುತ್ತಿದ್ದಾರೆ. ಲೈಸೆನ್ಸುಗಳನ್ನು ಬೇರೆಯವರ ಹೆಸರಿಗೆ ಮಾರಿಕೊಳ್ಳುತ್ತಿದ್ದಾರೆ. ಇವರು ಎಲ್ಲಿ ಇಂಡಸ್ಟ್ರಿ ಮಾಡುತ್ತಾರೆಂದರೆ, ನಾಲ್ಕು ಗೋಡೆಯ ಮಧ್ಯದಲ್ಲಿ ಹರಕು ಹೆಂಚುಗಳನ್ನು ಹೊದಿಸಿದ ಯಾವುದೋ ಮನೆಯಲ್ಲಿ ಕೈಗಾರಿಕೆ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಅದರೆ ಒಳಗೆ ಹೋಗಿ ನೋಡಿದರೆ ಅಲ್ಲೇನೂ ಇರುವುದಿಲ್ಲ. ಸರಕಾರ ಇಂತಹವರ ಬಗ್ಗೆ ಸ್ಪಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಒಬ್ಬ ಕಾರ್ಪೆಂಟರು ಮರದ ಕೆಲಸವನ್ನು ಮಾಡತಕ್ಕವರು ಕೂಡ ಸ್ಟೇನ್‌ಲೆಸ್ ಸ್ಟೀಲ್‌ನ ಕೋಟಾವಿಗಾಗಿ ಸ್ಟೀಲ್ ಫ್ಯಾಕ್ಟರಿ ಮಾಡಿದ್ದೇವೆಂದು ಹೇಳುತ್ತಾರೆ ಮತ್ತು ಅವರಿಗೆ ಲೈಸೆನ್ಸ್ ಕೂಡ ಸಿಕ್ಕಿದೆ. ಅವರನ್ನು ಎಲ್ಲಿ ಮಾಡಿದ್ದೀಯೆ ಎಂದು ಕೇಳಿದಾಗ ಅವರು ಈಗ ಫ್ಯಾಕ್ಟರಿ ತೆಗೆಯಬೇಕೆಂದಿದ್ದೇನೆ ಮತ್ತು ಈಗ ಲೈಸೆನ್ಸ್ ಕೋಟಾ ಮಾರುತ್ತಿದ್ದೇವೆ ಎನ್ನುತ್ತಾರೆ. ನಮ್ಮ ರಾಜ್ಯ ಸರಕಾರ ನಿಜವಾಗಿ ಯಾರು ಕೈಗಾರಿಕೆಯನ್ನು ಮಾಡುತ್ತಿದ್ದಾರೆ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಿ ಖೋಟಾ ಮ್ಯಾನುಫ್ಯಾಕ್ಚರರುಗಳ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದನ್ನು ತಡೆಗಟ್ಟಲು ಸರಿಯಾದ ಫ್ಲೈಯಿಂಗ್ ಸ್ಕ್ವಾಡ್ ಎಂದು ನಮ್ಮ ಸಾರಿಗೆ ಸಚಿವರು R. T. D. ನಲ್ಲಿ ಮಾಡಿರುವಂತೆ ಇಲ್ಲೂ ಮಾಡಿದರೆ ಸರಿಯಾಗುತ್ತದೆ. They keep most of the time flying in their jeep ;but nothing substantial has been done.

Sri D. DEVARAJ URS (Minister for Road Transport).—If they are stationary, how can they find out ? It is only when they move, they can find out something.

Sri S. M. KRISHNA.—I am wholly in favour. They should move and they should move fast. But, they keep on flying, doing nothing. ಇದಕ್ಕೋಸ್ಕರ ಫ್ಲೈಯಿಂಗ್ ಸ್ಕ್ವಾಡ್ ಎನ್ನುವಂತಹ ಒಂದು ಅಧಿಕಾರಗಳ ತಂಡ ಮಾಡಿ ಇದರ ಮೂಲಕ ಖೋಟಾ ಕೈಗಾರಿಕೆಗಾರರುಗಳನ್ನು ಪತ್ತೆ ಮಾಡಿದರೆ ಅನುಕೂಲವಾಗುತ್ತದೆ. ಮತ್ತು

ನಮ್ಮ ರಾಜ್ಯದ ಎಲ್ಲ ಉದ್ಯಮಗಳ ಭೂಪಟವು ಇನ್ನೂ ಉತ್ತಮವಾಗಬೇಕಾಗಿರುವ ಆವಶ್ಯಕತೆ ಬಹಳ ಇದೆ. ಕೈಗಾರಿಕೋದ್ಯಮಗಳ ಭೂಪಟ ಅಭಿವೃದ್ಧಿಯಾಗಬೇಕಾದರೆ ಇನ್ನೂ ಸ್ಪಷ್ಟವಾದ ಮತ್ತು ಸಂಪದ್ಭರಿತವಾದ ಹಲವಾರು ಉದ್ಯಮಗಳನ್ನು ಮಾಡಲು ರಾಜ್ಯ ಸರಕಾರ ತನ್ನ ಹೆಜ್ಜೆಯನ್ನು ಇನ್ನೂ ಮುಂದಿಡಬೇಕೆಂದು ಆಶಿಸಿ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಸ್ವಾಮೀ, ಈ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಇಂದು ನಮ್ಮ ಕೈಗಾರಿಕಾ ಖಾತೆಯಲ್ಲಿ ಬಹಳ ಬದಲಾವಣೆಯಾಗಬೇಕು ಎಂದು ಅನೇಕ ಮಹನೀಯರು ಈಗಾಗಲೇ ಇಲ್ಲಿ ಒತ್ತಿ ಹೇಳಿದ್ದಾರೆ. ಒಂದು ಕಾಲದಲ್ಲಿ ಮೈಸೂರು ರಾಜ್ಯ ಕೈಗಾರಿಕೆಯಲ್ಲಿ ಮುಂದೆ ಇದ್ದಂತಹುದು ಇವೊತ್ತು ಬಹಳ ಹಿಂದಿಳಿದಿದೆ ಎನ್ನತಕ್ಕದ್ದನ್ನು ನಾವು ಗಮನಿಸಬೇಕು. ನಾವು ಇಷ್ಟೆಲ್ಲಾ ಕೈಗಾರಿಕೆಗಳ ಅಭಿವೃದ್ಧಿಗಾಗೀ ಅನೇಕ ಕಾರ್ಯಕ್ರಮಗಳನ್ನು ಹಾಕಿದರೂ ಇವೊತ್ತು ನಮಗೆ ಸರಿಯಾದ ಫಲ ದೊರೆತಿಲ್ಲ. ಇದಕ್ಕೆ ಅನೇಕ ಕಾರಣಗಳು ಇರಬಹುದು. ನಮ್ಮಲ್ಲಿರುವ ಕೈಗಾರಿಕಾ ಅಧಿಕಾರ ವರ್ಗದವರು ಸ್ವಲ್ಪಮಟ್ಟಿಗೆ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಯಾರಾದರೂ ಕೈಗಾರಿಕೆಯನ್ನು ಇಲ್ಲಿ ಮಾಡಬೇಕು ಎಂದು ಬಂದಾಗ ಅವರಿಗೆ ಸರಿಯಾದ ಪ್ರೋತ್ಸಾಹಗಳನ್ನು ಕೊಡುತ್ತಿಲ್ಲ. ನಮ್ಮ ರಾಜ್ಯದಲ್ಲಿ ಮೈಸೂರಿನವರಿಗೇನೇ ಪ್ರೋತ್ಸಾಹ ಕೊಡಬೇಕೆಂಬುದೇನೋ ಸರಿ. ಒಂದು ವೇಳೆ ಮೈಸೂರಿನವರು ಯಾರೂ ಕೈಗಾರಿಕೆ ಮಾಡಲು ಮುಂದೆ ಬರದೇ ಹೋದರೆ ಹೊರಗಿನವರು ಯಾರಾದರೂ ಬಂದರೆ ಅವರಿಗೂ ಅವಕಾಶ ಕೊಡಬೇಕು. ಮೈಸೂರಿನ ಜನಕ್ಕೆ ಕೊಡಬೇಕು ಎನ್ನುವ ಮನೋಭಾವವೇನೋ ಒಳ್ಳೆಯದೇ. ಆದರೆ ಮೈಸೂರಿನ ಜನ ಬರದೇ ಇದ್ದ ಕಾಲದಲ್ಲಿ ಮೈಸೂರಿನಲ್ಲಿರುವ ಕಚ್ಚಾ ವಸ್ತುಗಳನ್ನು ಪಯೋಗಿಸಿಕೊಂಡು ಹೊರಗಿನವರು ಕೈಗಾರಿಕೆಗಳನ್ನು ಮಾಡಲು ಅವರಿಗೂ ಪ್ರೋತ್ಸಾಹ ಕೊಡುವುದು ಅಗತ್ಯ. ನಮ್ಮಲ್ಲಿ ಎಷ್ಟೋ ಜನ ತಾಂತ್ರಿಕ ಶಿಕ್ಷಣ ಪಡೆದವರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಅವರಿಗೆಲ್ಲಾ ಕೆಲಸಗಳನ್ನು ಒದಗಿಸಬೇಕಾದ್ದು ನಮ್ಮ ಕರ್ತವ್ಯ. ಉದ್ಯೋಗ ವಿನಿಮಯ ಕಚೇರಿಯಲ್ಲಿ ಇವರುಗಳು ರಿಜಿಸ್ಟರು ಮಾಡಿಸಿ ಎಷ್ಟೋ ವರ್ಷಗಳಿಂದ ಕಾಯುತ್ತ ನಿಂತಿದ್ದರೂ ಅವರಿಗೆ ಕೆಲಸಗಳು ಸಿಕ್ಕಿಲ್ಲ. ತರಬೇತಿ ಶಿಕ್ಷಣ ಪಡೆದಂತಹ ಪದವೀಧರರುಗಳಿಗೆ ಕೆಲಸ ಒದಗಿಸಲು ಸಾಧ್ಯವಾಗದೇ ಹೋದರೆ ಅವರನ್ನು ನೆರೆ ರಾಜ್ಯಗಳಿಗಾದರೂ ಕಳಿಸೋಣವೆಂದರೆ ಅಲ್ಲೂ ಅವರಿಗೆ ಕೆಲಸಗಳು ದೊರೆಯುತ್ತಿಲ್ಲ. ನಮ್ಮಲ್ಲಿರುವ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಿ ನಮ್ಮ ಜನರಿಗೆ ಕೆಲಸಗಳನ್ನು ಒದಗಿಸಲು ಸಾಧ್ಯವಾಗದೇ ಹೋದರೆ ತಾಂತ್ರಿಕ ಶಿಕ್ಷಣ ತರಬೇತಿ ಕೊಡುವುದು ಅಷ್ಟು ಒಳ್ಳೆಯದಲ್ಲ ಎಂದು ನನ್ನ ಭಾವನೆ. ಮೈಸೂರು ದೇಶದಲ್ಲಿ ಕಚ್ಚಾ ವಸ್ತುಗಳಿಗೆ ಯಾವ ವಿಧದಲ್ಲಿಯೂ ತೊಂದರೆ ಇಲ್ಲ. ಅನೇಕ ಕೈಗಾರಿಕೆಗಳನ್ನು ಇಲ್ಲಿ ಹಾಕುವುದಕ್ಕೆ ಸಾಕಷ್ಟು ಕಚ್ಚಾ ವಸ್ತುಗಳೂ ದೊರೆಯುತ್ತಿವೆ. ಶರಾವತಿಯಂತಹ ಯೋಜನೆಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ವೆಚ್ಚಮಾಡಿ ವಿದ್ಯುಚ್ಛಕ್ತಿಯನ್ನು ತೆಗೆಯುತ್ತಿದ್ದೇವೆ. ಆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಲು ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಹಾಕಲಿಲ್ಲ. ಶರಾವತಿಯ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಅನೇಕ ಹೊಸ ಕೈಗಾರಿಕೆಗಳು ಈಗಾಗಲೇ ಬರಬೇಕಾಗಿತ್ತು. ಇವೊತ್ತು ಶರಾವತಿ ಯೋಜನೆಗಾಗಿ ಖರ್ಚು ಮಾಡಿರುವ ಹಣದ ಬಡ್ಡಿಯೂ ಕೂಡ ದೊರಕುತ್ತದೋ ಇಲ್ಲವೋ ಅನುಮಾನವಾಗಿದೆ. ರಾಜ್ಯದ ಕೈಗಾರಿಕಾ ನೀತಿಯೊಳಗೆ ಅನೇಕ ಬದಲಾವಣೆಯಾಗಬೇಕು. ನಮ್ಮಲ್ಲಿರುವ ಕಚ್ಚಾ ವಸ್ತುಗಳನ್ನು ಉಪಯೋಗ ಮಾಡಲು ನಮ್ಮ ಜನ ಮುಂದೆ ಬರದಿದ್ದರೆ ಬೇರೆ ಯಾರಾದರೂ ಇಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರೆ ಅಂತಹವರಿಗೂ ಅವಕಾಶ ಕೊಡಬೇಕೆಂದು ನಾನು ಈ ಸಮಯದಲ್ಲ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಒಂದು ಉದಾಹರಣೆಯನ್ನು ಇಲ್ಲ ಹೇಳುತ್ತೇನೆ.

ನಾಲ್ಕುದಿನಗಳ ಹಿಂದೆ ಕೈಗಾರಿಕೆ ಇಲಾಖೆಯಲ್ಲಿರುವ ಜಾಯಿಂಟ್ ಡೈರೆಕ್ಟರನ್ನು ಯಾರೋ ಒಬ್ಬ ಮಹನೀಯರು ಕೈಗಾರಿಕೆ ಇಲ್ಲ ಸ್ಥಾಪನೆ ಮಾಡಬೇಕೆಂದು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿ ತೆರೆಯಲು ಲೈಸನ್ಸು ಪಡೆದು ಕಚ್ಚಾಮಾಲು ಮೆಷಿನರಿ ಇಟ್ಟುಕೊಂಡು ಸಲಹೆ ಮಾಡಬೇಕೆಂದು ಕೇಳಿದ್ದಕ್ಕೆ ಅವರು ನಮ್ಮಲ್ಲಿ ಈಗಾಗಲೇ 6000 ಅರ್ಜಿಗಳು pending ಇವೆ. ಹೊರಗಿನವರಿಗೆ ಹೇಗೆ ಕೊಡಲು ಸಾಧ್ಯ ಎಂದು ಹೇಳಿ ಯಾವ ತರಹದ ಅನುಕೂಲವನ್ನು ಕೊಡಲು ಸಾಧ್ಯವಿಲ್ಲ, ಬೇಕಾದರೆ ನಿಮಗೆ ಬೇರೆ ರಾಜ್ಯಕ್ಕೆ ಹೋಗಿ ಕೈಗಾರಿಕೆ ಹಾಕುವುದಾದರೆ ಪರ್ಮಿಷನ್ ಕೊಡುತ್ತೇವೆಂದು ಹೇಳಿದ್ದಾರೆ. ಸರಕಾರದವರು Report on the working of Government Departmentನಲ್ಲಿ ಇಲಾಖಾ ಕೈಗಾರಿಕೆಗಳ ಬಗ್ಗೆ ಕೊಟ್ಟಿರುವ ಒಂದು ವರದಿಯಲ್ಲಿ ಒಟ್ಟು ಕೈಗಾರಿಕೆಗಳಿಗಾಗಿ 449 ಅರ್ಜಿಗಳು ಬಂದಿವೆ. ಮೂರನೆ ಯೋಜನೆಯಲ್ಲಿ 151ಕ್ಕೆ ಲೈಸನ್ಸ್

(ಶ್ರೀ ಎಸ್. ಗೋಪಾಲಗೌಡ)

ಸ್ಥಗಿತವಾಗಿದೆ, ಹಿಂದಕ್ಕೆ ಹೋಗಿದೆ ಎಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ಹಣ ಕಾಸಿನ ಸಚಿವರು ಶರಾವತಿಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ಹೇಗೆ ಬಳಸಿಕೊಳ್ಳುತ್ತೇವೆ, ಕೆಲವು ಕೈಗಾರಿಕೆಗಳು ಎಷ್ಟೆಷ್ಟು ವಿದ್ಯುತ್ ಶಕ್ತಿ ಬಳಸುವ ಶಕ್ತಿ ಪಡೆದಿವೆ ಎಂಬುವಕ್ಕೆ ಅಂಕಿ ಅಂಶಗಳನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟರು. ಬಹುಶಃ ಈ ಕೈಗಾರಿಕೆ ಎಲ್ಲಾ ಲೈಸೆನ್ಸ್ ಪಡೆದು ನಡೆಯುತ್ತಿದೆಯೇ ಎಂದು ನನಗಾದರೂ ಆಶ್ಚರ್ಯವಾಯಿತು. ಆಮೇಲೆ ವಿಚಾರಮಾಡಲಾಗಿ ಏನೂ ಆಗಿರಲಿಲ್ಲ. ನಮ್ಮ ರಾಜ್ಯಸರಕಾರ ಈ ಯಾವ ಕೈಗಾರಿಕೆಗಳನ್ನು ಪಡೆಯುವುದಕ್ಕೂ ಪ್ರಯತ್ನಮಾಡಿಲ್ಲ. ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು, ಕೈಗಾರಿಕಾ ಸಚಿವರು ಹೊಸಪೇಟೆ ಉಕ್ಕಿನ ಕಾರ್ಖಾನೆ ಸ್ಥಾಪನೆ ಬಗ್ಗೆ ಈ ಸಭೆಯಮುಂದೆ ಬಹಳವಾಗಿ ಮಾತನಾಡಿದ್ದಾರೆ ಬಹಳ ಸಲ ಉದ್ರೇಕದಿಂದ ಹೇಳಿರುವುದುಂಟು, ಕೇಂದ್ರ ಸರ್ಕಾರದವರು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಅಲ್ಲಿ ಸ್ಥಾಪಿಸಲು ಅವಕಾಶ ಕೊಡದಿದ್ದರೆ ನಾವೇ ಒಂದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರವೂ ನಮ್ಮ ಮುಂದಿದೆ ಎಂದು ಸಹ ಹೇಳಿದ್ದಾರೆ. ಆದರೆ ವಸ್ತುತ: ಹಣಕಾಸು ಮತ್ತಿತರ ಸಿದ್ಧತೆ ಎಷ್ಟುಮಟ್ಟಿಗೆ ಆಗಿದೆ ಎಂಬುದನ್ನು ನೋಡಬಹುದು. ಭದ್ರಾವತಿಯ ಕಬ್ಬಿಣದ ಕಾರ್ಖಾನೆ ಎಷ್ಟು ಬೆಳೆದಿದೆ, ಅದರ ಕಡೆ ಎಷ್ಟು ಲಕ್ಷ ಕೊಟ್ಟಿದ್ದೀರಿ, ಅಲ್ಲಿ ಏನೇನು ಅಡ್ಡಿ ಆತಂಕವಿವೆ, ಅದನ್ನು ಹೇಗೆ ಬಗೆಹರಿಸುತ್ತಿದ್ದೀರಿ ಎಂದು ವಿಚಾರಮಾಡಿದರೆ ಆಗ ಸರಿಯಾಗಿ ನಿಮ್ಮ ನಿಷ್ಠೆಯೇನೆಂಬುದು ಅರ್ಥವಾಗುತ್ತದೆ, ನೀವೆಷ್ಟು ಸಾಧಿಸಬಲ್ಲಿರಿ ಎಂಬುದನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು. ಈಗ ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಸ್ಥಾಪನೆ ಮಾಡುವುದರ ಬಗ್ಗೆ ಆಂಗ್ಲೊ ಅಮೇರಿಕನ್ ತಜ್ಞರು ಬಂದಾಗ ನಮಗೆ ಗೊತ್ತಿರುವ ಹಾಗೆ ಜವಾಬ್ದಾರಿ ಹೊತ್ತಿರುವ ಮುಖ್ಯ ಮಂತ್ರಿಗಳಾಗಲಿ, ಹಣಕಾಸಿನ ಮಂತ್ರಿಗಳಾಗಲಿ ಅಥವಾ ಕೈಗಾರಿಕಾ ಮಂತ್ರಿಗಳಾಗಲಿ ಅವರ ಜೊತೆಯಲ್ಲಿ ಕುಳಿತು ಮಾತನಾಡಿ ವಿಚಾರ ವಿನಿಮಯಮಾಡಿ ಎಲ್ಲಾ ವಿಷಯಗಳನ್ನೂ ಅವರಿಗೆ ಮನದಟ್ಟು ಮಾಡಿಕೊಡಲಿಲ್ಲ ಎಂಬ ಆರೋಪ ಕೂಡ ಇದೆ. ಈಗ ತಮ್ಮ ಅಧಿಕಾರದ ಕೊನೆ ವರ್ಷದಲ್ಲಿದ್ದೀರಿ. ಈ ನಾಲ್ಕೂವರೆ ವರ್ಷದಲ್ಲಿ ತಮ್ಮಿಂದ ಏನನ್ನು ಸಾಧಿಸುವುದಕ್ಕೂ ಸಾಧ್ಯವಾಗಿಲ್ಲ. ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಬೇಕಾಗಿತ್ತೆಂದು ನಾನು ಹೇಳುವುದಿಲ್ಲ. ಕೊನೆಯಪಕ್ಷ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಐದನೆಯ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರದಮೇಲೆ ಪರಿಣಾಮವಾದರೂ ಮಾಡುವಂತೆ ಮಾಡಿ ಅದನ್ನು ಹೊಸಪೇಟೆಯಲ್ಲಿ ಸ್ಥಾಪಿಸುವಂತೆ ಏನಾದರೂ ಮಾಡಿರುವರೇ ಎಂದರೆ ಏನೂ ಕಾಣಲಿಲ್ಲ. ಬರೀ ಪೊಳ್ಳು ಆಶ್ವಾಸನೆ, ಹೇಳಿಕೊಡುತ್ತಾ ಕಾಲಹರಣ ಮಾಡುತ್ತಿದ್ದಾರೆ.

ಇನ್ನು ಅಲ್ಯೂಮಿನಿಯಂ ಕಾರ್ಖಾನೆ ಬಗ್ಗೆ ನಾಲ್ಕೂವರೆ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆಂದು ಮುಖ್ಯ ಮಂತ್ರಿಗಳು ಹೇಳಿದರು, ಬೆಳಗಾವಿ ಹತ್ತಿರ ಗದ್ದೆ ಅಕ್ವೈರ್ ಮಾಡಿಕೊಳ್ಳುವುದು ಮುಂತಾದುವುಗಳ ಬಗ್ಗೆ ಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದರು. ರಾಮಕೃಷ್ಣ ಹೆಗ್ಡೆಯವರು ಅದಕ್ಕೆ ವಿದ್ಯುಚ್ಛಕ್ತಿ ಎಷ್ಟು ಬೇಕೆಂಬುದನ್ನು ಹೇಳಿದರು. ಆದರೆ ವಾಸ್ತವವಾಗಿ ಈಗ ಬಹುಶ: ಈ ಕಾರ್ಖಾನೆ ಸ್ಥಾಪನೆ ಬಗ್ಗೆ ಕೂಡ ಕೇಂದ್ರ ಸರಕಾರ ಅನುಮತಿ ನೀಡಿಲ್ಲ. ಸರಕಾರ ಇದರ ಬಗ್ಗೆ ಇದರ ಸ್ಥಾಪನೆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದು ವಿಷಾದದಿಂದ ತಿಳಿಸಬೇಕಾಗಿದೆ.

ಫರ್ಟಿಲೈಜರ್ ಕಾರ್ಖಾನೆ ಕೊಚ್ಚಿನ್ನಿನಲ್ಲಿ ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರ ಅನುಮತಿ ನೀಡಿದೆಯೆಂದು ತಿಳಿದುಬಂದಿದೆ. ಮಂಗಳೂರಿಗೆ ಇದನ್ನು ತರುವುದು ಕೂಡ ಬಹಳ ಅನುಮಾನಾಸ್ಪದವಾದ ವಿಷಯವೇ ಆಗಿದೆ. ಇನ್ಯಾವ ಕಾರ್ಖಾನೆ ಸ್ಥಾಪನೆ ಮಾಡುವುದಿದೆ? ಆಯಿಲ್ ರಿಫೈನರಿ ಸ್ಪೇಲಂಗೆ ಹೋಯಿತು. ನಮ್ಮಲ್ಲಿ ಪ್ರಕೃತಿ ಸಂಪತ್ತು ಬಹಳವಾಗಿದ್ದರೂ ಅದನ್ನು ತೆಗೆಯಲು ಲೈಸೆನ್ಸ್ ಪಡೆದಿರುವವರಲ್ಲಿ ಸರಕಾರದವರ ಸಂಬಂಧೀಗಳೇ ಬಹಳ ಮಂದಿ ಇದ್ದಾರೆಂಬ ದೂರಿದೆ. ಅದರಿಂದ ಕೆಲವು ಹಣ ಸಂಪಾದನೆ ಮಾಡಲು ಸಾಧ್ಯವಾಗಬಹುದು.

ಇನ್ನೊಂದು ವಿಚಾರವನ್ನು ಈಗಾಗಲೇ ಮಾನ್ಯ ಕೃಷ್ಣರವರು ಪ್ರಸ್ತಾಪಮಾಡಿದ್ದಾರೆ. ನಾನು ಕೆಲವು ಫೋಟೋಸ್ಟಾ ನಿರ್ಣಯಗಳನ್ನು ಕಳಿಸಿದ್ದೇನೆ. ಅದರಲ್ಲಿ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಗೆ ಸಂಬಂಧಪಟ್ಟಿರುವುದೂ ಇದೆ. ಮುಖ್ಯಮಂತ್ರಿಗಳು ಇಲ್ಲದ್ದಾರೆ. ಅವರ ಮೇಲೆ ಒಂದು ಗಂಭೀರವಾದ ಆಪಾದನೆ ಮಾಡಬೇಕೆಂದಿದ್ದೇನೆ. ಅವರು ಯಾವಾಗಲು ಸಂಶಯಾತ್ಮ ವಿನಶ್ಯತಿ, ಯಾವುದರ ಬಗ್ಗೆ ಕೂಡ ಸಂದೇಹ ಪಡಬಾರದು, ನಂಬಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತಾರೆ.

ನಮ್ಮ ರಾಜ್ಯದ ಎಲ್ಲ ಉದ್ಯಮಗಳ ಭೂಪಟವು ಇನ್ನೂ ಉತ್ತಮವಾಗಬೇಕಾಗಿರುವ ಆವಶ್ಯಕತೆ ಬಹಳ ಇದೆ. ಕೈಗಾರಿಕೋದ್ಯಮಗಳ ಭೂಪಟ ಅಭಿವೃದ್ಧಿಯಾಗಬೇಕಾದರೆ ಇನ್ನೂ ಸ್ಪಷ್ಟವಾದ ಮತ್ತು ಸಂಪದ್ಭರಿತವಾದ ಹಲವಾರು ಉದ್ಯಮಗಳನ್ನು ಮಾಡಲು ರಾಜ್ಯ ಸರಕಾರ ತನ್ನ ಹೆಜ್ಜೆಯನ್ನು ಇನ್ನೂ ಮುಂದಿಡಬೇಕೆಂದು ಆಶಿಸಿ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಸ್ವಾಮಿ, ಈ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಇಂದು ನಮ್ಮ ಕೈಗಾರಿಕಾ ಖಾತೆಯಲ್ಲಿ ಬಹಳ ಬದಲಾಣೆಯಾಗಬೇಕು ಎಂದು ಅನೇಕ ಮಹನೀಯರು ಈಗಾಗಲೇ ಇಲ್ಲಿ ಒತ್ತಿ ಹೇಳಿದ್ದಾರೆ. ಒಂದು ಕಾಲದಲ್ಲಿ ಮೈಸೂರು ರಾಜ್ಯ ಕೈಗಾರಿಕೆಯಲ್ಲಿ ಮುಂದೆ ಇದ್ದಂತಹುದು ಇವೊತ್ತು ಬಹಳ ಹಿಂದಿಳಿದಿದೆ ಎನ್ನತಕ್ಕದ್ದನ್ನು ನಾವು ಗಮನಿಸಬೇಕು. ನಾವು ಇಷ್ಟೆಲ್ಲಾ ಕೈಗಾರಿಕೆಗಳ ಅಭಿವೃದ್ಧಿಗಾಗೀ ಅನೇಕ ಕಾರ್ಯಕ್ರಮಗಳನ್ನು ಹಾಕಿದರೂ ಇವೊತ್ತು ನಮಗೆ ಸರಿಯಾದ ಫಲ ದೊರೆತಿಲ್ಲ. ಇದಕ್ಕೆ ಅನೇಕ ಕಾರಣಗಳು ಇರಬಹುದು. ನಮ್ಮಲ್ಲಿರುವ ಕೈಗಾರಿಕಾ ಅಧಿಕಾರ ವರ್ಗದವರು ಸ್ವಲ್ಪಮಟ್ಟಿಗೆ ಕಾರಣ ಎಂದು ನಾನು ತಿಳದುಕೊಂಡಿದ್ದೇನೆ. ಯಾರಾದರೂ ಕೈಗಾರಿಕೆಯನ್ನು ಇಲ್ಲಿ ಮಾಡಬೇಕು ಎಂದು ಬಂದಾಗ ಅವರಿಗೆ ಸರಿಯಾದ ಪ್ರೋತ್ಸಾಹಗಳನ್ನು ಕೊಡುತ್ತಿಲ್ಲ. ನಮ್ಮ ರಾಜ್ಯದಲ್ಲಿ ಮೈಸೂರಿನವರಿಗೇನೇ ಪ್ರೋತ್ಸಾಹ ಕೊಡಬೇಕೆಂಬುದೇನೋ ಸರಿ. ಒಂದು ವೇಳೆ ಮೈಸೂರಿನವರು ಯಾರೂ ಕೈಗಾರಿಕೆ ಮಾಡಲು ಮುಂದೆ ಬರದೇ ಹೋದರೆ ಹೊರಗಿನವರು ಯಾರಾದರೂ ಬಂದರೆ ಅವರಿಗೂ ಅವಕಾಶ ಕೊಡಬೇಕು. ಮೈಸೂರಿನ ಜನಕ್ಕೆ ಕೊಡಬೇಕು ಎನ್ನುವ ಮನೋಭಾವವೇನೋ ಒಳ್ಳೆಯದೇ. ಆದರೆ ಮೈಸೂರಿನ ಜನ ಬರದೇ ಇದ್ದ ಕಾಲದಲ್ಲಿ ಮೈಸೂರಿನಲ್ಲಿರುವ ಕಚ್ಚಾ ವಸ್ತುಗಳನ್ನು ಪಯೋಗಿಸಿಕೊಂಡು ಹೊರಗಿನವರು ಕೈಗಾರಿಕೆಗಳನ್ನು ಮಾಡಲು ಅವರಿಗೂ ಪ್ರೋತ್ಸಾಹ ಕೊಡುವುದು ಅಗತ್ಯ. ನಮ್ಮಲ್ಲಿ ಎಷ್ಟೋ ಜನ ತಾಂತ್ರಿಕ ಶಿಕ್ಷಣ ಪಡೆದವರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಅವರಿಗೆಲ್ಲಾ ಕೆಲಸಗಳನ್ನು ಒದಗಿಸಬೇಕಾದ್ದು ನಮ್ಮ ಕರ್ತವ್ಯ. ಉದ್ಯೋಗ ವಿನಿಮಯ ಕಚೇರಿಯಲ್ಲಿ ಇವರುಗಳು ರಿಜಿಸ್ಟರು ಮಾಡಿಸಿ ಎಷ್ಟೋ ವರ್ಷಗಳಿಂದ ಕಾಯುತ್ತ ನಿಂತಿದ್ದರೂ ಅವರಿಗೆ ಕೆಲಸಗಳು ಸಿಕ್ಕಿಲ್ಲ. ತರಬೇತಿ ಶಿಕ್ಷಣ ಪಡೆದಂತಹ ಪದವೀಧರರುಗಳಿಗೆ ಕೆಲಸ ಒದಗಿಸಲು ಸಾಧ್ಯವಾಗದೇ ಹೋದರೆ ಅವರನ್ನು ನೆರೆ ರಾಜ್ಯಗಳಿಗಾದರೂ ಕಳಿಸೋಣವೆಂದರೆ ಅಲ್ಲೂ ಅವರಿಗೆ ಕೆಲಸಗಳು ದೊರೆಯುತ್ತಿಲ್ಲ. ನಮ್ಮಲ್ಲಿರುವ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಿ ನಮ್ಮ ಜನರಿಗೆ ಕೆಲಸಗಳನ್ನು ಒದಗಿಸಲು ಸಾಧ್ಯವಾಗದೇ ಹೋದರೆ ತಾಂತ್ರಿಕ ಶಿಕ್ಷಣ ತರಬೇತಿ ಕೊಡುವುದು ಅಷ್ಟು ಒಳ್ಳೆಯದಲ್ಲ ಎಂದು ನನ್ನ ಭಾವನೆ. ಮೈಸೂರು ದೇಶದಲ್ಲಿ ಕಚ್ಚಾ ವಸ್ತುಗಳಿಗೆ ಯಾವ ವಿಧದಲ್ಲಿಯೂ ತೊಂದರೆ ಇಲ್ಲ. ಅನೇಕ ಕೈಗಾರಿಕೆಗಳನ್ನು ಇಲ್ಲಿ ಹಾಕುವುದಕ್ಕೆ ಸಾಕಷ್ಟು ಕಚ್ಚಾ ವಸ್ತುಗಳೂ ದೊರೆಯುತ್ತವೆ. ಶರಾವತಿಯಂತಹ ಯೋಜನೆಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ವೆಚ್ಚಮಾಡಿ ವಿದ್ಯುಚ್ಛಕ್ತಿಯನ್ನು ತೆಗೆಯುತ್ತಿದ್ದೇವೆ. ಆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಲು ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಹಾಕಲಿಲ್ಲ. ಶರಾವತಿಯ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಅನೇಕ ಹೊಸ ಕೈಗಾರಿಕೆಗಳು ಈಗಾಗಲೇ ಬರಬೇಕಾಗಿತ್ತು. ಇವೊತ್ತು ಶರಾವತಿ ಯೋಜನೆಗಾಗಿ ಖರ್ಚು ಮಾಡಿರುವ ಹಣದ ಬಡ್ಡಿಯೂ ಕೂಡ ದೊರಕುತ್ತದೋ ಇಲ್ಲವೋ ಅನುಮಾನವಾಗಿದೆ. ರಾಜ್ಯದ ಕೈಗಾರಿಕಾ ನೀತಿಯೊಳಗೆ ಅನೇಕ ಬದಲಾವಣೆಯಾಗಬೇಕು. ನಮ್ಮಲ್ಲಿರುವ ಕಚ್ಚಾ ವಸ್ತುಗಳನ್ನು ಉಪಯೋಗ ಮಾಡಲು ನಮ್ಮ ಜನ ಮುಂದೆ ಬರದಿದ್ದರೆ ಬೇರೆ ಯಾರಾದರೂ ಇಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರೆ ಅಂತಹವರಿಗೂ ಅವಕಾಶ ಕೊಡಬೇಕೆಂದು ನಾನು ಈ ಸಮಯದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಒಂದು ಉದಾಹರಣೆಯನ್ನು ಇಲ್ಲಿ ಹೇಳುತ್ತೇನೆ.

ನಾಲ್ಕು ದಿನಗಳ ಹಿಂದೆ ಕೈಗಾರಿಕೆ ಇಲಾಖೆಯಲ್ಲಿರುವ ಜಾಯಿಂಟ್ ಡೈರೆಕ್ಟರನ್ನು ಯಾರೋ ಒಬ್ಬ ಮಹನೀಯರು ಕೈಗಾರಿಕೆ ಇಲ್ಲಿ ಸ್ಥಾಪನೆ ಮಾಡಬೇಕೆಂದು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿ ತೆರೆಯಲು ಲೈಸನ್ಸು ಪಡೆದು ಕಚ್ಚಾಮಾಲು ಮೆಷಿನರಿ ಇಟ್ಟುಕೊಂಡು ಸಲಹೆ ಮಾಡಬೇಕೆಂದು ಕೇಳಿದ್ದಕ್ಕೆ ಅವರು ನಮ್ಮಲ್ಲಿ ಈಗಾಗಲೇ 6000 ಅರ್ಜಿಗಳು pending ಇವೆ. ಹೊರಗಿನವರಿಗೆ ಹೇಗೆ ಕೊಡಲು ಸಾಧ್ಯ ಎಂದು ಹೇಳಿ ಯಾವ ತರಹದ ಅನುಕೂಲವನ್ನು ಕೊಡಲು ಸಾಧ್ಯವಿಲ್ಲ, ಬೇಕಾದರೆ ನಿಮಗೆ ಬೇರೆ ರಾಜ್ಯಕ್ಕೆ ಹೋಗಿ ಕೈಗಾರಿಕೆ ಹಾಕುವುದಾದರೆ ಪರ್ಮಿಷನ್ ಕೊಡುತ್ತೇವೆಂದು ಹೇಳಿದ್ದಾರೆ. ಸರಕಾರದವರು Report on the working of Government Departmentನಲ್ಲಿ ಇಲಾಖಾ ಕೈಗಾರಿಕೆಗಳ ಬಗ್ಗೆ ಕೊಟ್ಟಿರುವ ಒಂದು ವರದಿಯಲ್ಲಿ ಒಟ್ಟು ಕೈಗಾರಿಕೆಗಳಿಗಾಗಿ 449 ಅರ್ಜಿಗಳು ಬಂದಿವೆ. ಮೂರನೆ ಯೋಜನೆಯಲ್ಲಿ 151ಕ್ಕೆ ಲೈಸನ್ಸ್

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

ಗಳನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಇಲ್ಲಿ ಈಗ 6000 ಅರ್ಜಿಗಳು ಎಂದು ಹೇಳಿದರೆ. ಅವರಿಗೆ ಈ ಅರ್ಜಿಗಳೆಲ್ಲಾ ಹೇಗೆ ಬಂದವು? ಕೈಗಾರಿಕೆಗಳನ್ನು ಹಾಕಬೇಕೆಂದು ಜನ ಮುಂದೆ ಬಂದಾಗ ಇಲಾಖೆಯವರು ಹೊರಗಿನವರು ಬಂದರೆ ಕೊಡುವುದಿಲ್ಲ ಎಂದು ಹೇಳುವುದು ಯಾವ ದೃಷ್ಟಿಯಿಂದಲೂ ನ್ಯಾಯವಲ್ಲ. ಹೀಗೆ ಮಾಡಿದರೆ ದೇಶದ ದೃಷ್ಟಿಯಿಂದ ಅನ್ಯಾಯ ಮಾಡಿದಂತಾಗುತ್ತದೆ.

ನಮ್ಮ ರಾಜ್ಯದಲ್ಲಿ ವ್ಯವಸಾಯದ ಕೈಗಾರಿಕೆಗೂ ಬಹಳ ಪ್ರಾಶಸ್ತ್ಯ ಕೊಡಬೇಕಾದುದು ಅಗತ್ಯ. ವ್ಯವಸಾಯದ ಇಂಡಸ್ಟ್ರಿ ಬಗ್ಗೆ ವ್ಯವಸಾಯೋಪಕರಣಗಳ ಕಾರ್ಖಾನೆಗಳು ಬೆಳೆಯ ಬೇಕು. ಹಣ್ಣುಗಳ ಹಾಗೂ ಡೈರಿ ಪ್ರಾಡಕ್ಸ್ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆ ಹಾಕಲು ನಮ್ಮಲ್ಲಿ ದನಗಳು ಸಾಕಷ್ಟಿವೆ. ಮತ್ತು ಹಣ್ಣು ಬೆಳೆಯಲು ಸಾಕಷ್ಟು ಭೂಗುಣವಿದೆ ಇದನ್ನು ಮಾಡುವ ಉದ್ಯಮಿದಾರರಿಗೆ ಹೆಚ್ಚು ಆಸಕ್ತಿ ವಹಿಸಲು ಸಹಾಯ ಮಾಡಬೇಕು. ಕೈಗಾರಿಕಾ ಉದ್ಯಮಿಗಳು ಬಂದಾಗ ಕೈಗಾರಿಕೆಗಳನ್ನು ಎಲ್ಲೆಲ್ಲಿ ಹಾಕಬೇಕು ಎನ್ನುವುದರ ಬಗೆಗೆ ಸರಿಯಾದ ಪ್ರಚಾರಮಾಡಬೇಕು. ಕೈಗಾರಿಕಾ ಇಲಾಖೆಯಲ್ಲಿ ಸರಿಯಾಗಿ ಪ್ರಚಾರವಾಗದೆ ಇರುವುದರಿಂದಾಗಿ ಕೈಗಾರಿಕೆಗಳನ್ನು ಹಾಕಲು ಮುಂದೆ ಯಾರೂ ಬರುತ್ತಿಲ್ಲ. ಅಲ್ಲದೆ ಮೈಸೂರು ದೇಶದ ಜನ ಯಾರೂ ಮುಂದೆ ಬಾರದೇ ಇದ್ದರೆ ಹೊರಗಿನವರು ಬಂದಾಗ ಅವರಿಗೆ ಹಣ ಕೊಡದೇ ಹೋದರೂ ತಾಂತ್ರಿಕ ವಾಗಿ ಬೇಕಾಗುವ ಸಲಹೆಗಳನ್ನಾದರೂ ಕೊಟ್ಟು ಇಲ್ಲಿ ಕೈಗಾರಿಕೆಗಳು ಆಗುವಂತೆ ಮಾಡಬೇಕು. ಕೈಗಾರಿಕೆಯ ವಿಚಾರದಲ್ಲಿ ನಮ್ಮ ದೇಶ ಹಿಂದಕ್ಕೆ ಹೋಗಲು ಕಾರಣ ಇಲಾಖೆಯವರು ಜನರಲ್ಲಿ ಸರಿಯಾದ ಪ್ರಚಾರ ಕಾರ್ಯಕ್ರಮವನ್ನು ಕೈಗೊಳ್ಳದಿರುವುದೇ ಆಗಿದೆ. ಆದುದರಿಂದ ಜನಕ್ಕೆ ತಿಳುವಳಿಕೆ ಬರುವ ರೀತಿಯಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವ ರೀತಿಯಾದ ಕೈಗಾರಿಕೆಗಳು ಆಗಬೇಕು ಎನ್ನುವುದರ ಬಗ್ಗೆ ಇಲಾಖೆಯವರು ಸರಿಯಾದ ಪ್ರಚಾರ ಮಾಡಬೇಕು. ಅಲ್ಲದೆ ಮಲೆನಾಡು ಪ್ರದೇಶಗಳಲ್ಲಿ ಸಿಗುವಂತಹ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡರೆ ಅನೇಕ ಕೈಗಾರಿಕೆ ಗಳನ್ನು ಹಾಕಲು ಅನುಕೂಲವಾಗುತ್ತದೆ. ಇದನ್ನು ಸರಕಾರ ಆಲೋಚನೆ ಮಾಡಬೇಕು.

ಹಾಸನದಲ್ಲಿ ಇಂಪ್ಲಿಮೆಂಟು ಫ್ಯಾಕ್ಟರಿ ಮಾಡಲು ಸರಕಾರ ಬಹಳ ದುಡ್ಡನ್ನು ವೆಚ್ಚ ಮಾಡಿದೆ. ಆದರೆ ಅಲ್ಲಿಂದ ಬರುವ ವ್ಯವಸಾಯದ ಉಪಕರಣಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಇಲ್ಲಿ ತಯಾರಾಗುವ ಉಪಕರಣಗಳು ಬೇರೆ ಖಾಸಗಿ ಕಾರ್ಖಾನೆಗಳಲ್ಲಿ ತಯಾರಾಗುವ ಉಪಕರಣಗಳಿಗಿಂತ ಉತ್ತಮವಾದುದೇನೂ ಆಗಿಲ್ಲ. ಈ ಸಭೆಯಲ್ಲಿ ಅನೇಕ ವರ್ಷಗಳಿಂದ ಅನೇಕ ಸಂದರ್ಭಗಳಲ್ಲಿ ಈ ವಿಷಯ ಚರ್ಚೆಗೆ ಬಂದಿದೆ. ಆದುದರಿಂದ ಸರಕಾರ ಇದನ್ನು ಯೋಚನೆ ಮಾಡಬೇಕು. ಅಲ್ಲಿ ಒಳ್ಳೇ ಮಿಷಿನರಿ ಇದೆ. ಎತಕ್ಕೆ ಫಿನಿಶ್ಡ್ ಗುಡ್ಸ ಉತ್ತಮಗೊಳ್ಳುವುದಿಲ್ಲ ಎಂಬು ದನ್ನು ನೋಡಬೇಕು. ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದ ಮೇಲೆ ಒಳ್ಳೇ ಉಪಕರಣ ಒದಗಿಸದೇ ಹೋದರೆ ಏನು ಸಾರ್ಥಕವಾಗುತ್ತದೆ? ಎರಡು ವರ್ಷಗಳ ಹಿಂದೆ ಮಾನ್ಯ ಸದಸ್ಯರನ್ನು ಕರೆದು ಕೊಂಡು ಹೋಗಿ ಹೆಸರಗಟ್ಟದಲ್ಲಿ ಪವರ್ ಟಿಲ್ಲರ್ಸ್ ಬಗ್ಗೆ ಒಂದು ಡಿಮಾನ್ಸಟ್ರೇಷನ್ ತೋರಿಸಿದರು. ಇದನ್ನು ಒಂದು ವರ್ಷದಲ್ಲಿ ಏರ್ಪಾಡು ಮಾಡೋಣ ಎಂದು ಮುಖ್ಯ ಮಂತ್ರಿಗಳು ಆ ಸಂದರ್ಭದಲ್ಲಿ ಹೇಳಿದರು. ಇದರ ಬಗ್ಗೆ ಕೇಂದ್ರ ಸರಕಾರದೊಡನೆ ವ್ಯವಹರಿಸಿ ನಮ್ಮಲ್ಲಿ ಇರತಕ್ಕ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವಂತೆ ಈ ಪವರ್‌ಟಿಲ್ಲರ್ಸ್ ಯೋಜನೆ ಮಂಜೂರಾತಿಗೆ ಒತ್ತಾಯ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ವ್ಯವಸಾಯ ಕೈಗಾರಿಕೆಗಳಿಗೆ ಷೆಡ್ಯೂಲ್ ಬ್ಯಾಂಕಿನಿಂದ ಹಣ ಸಿಕ್ಕುವ ಹಾಗೆ ಮಾಡ ಬೇಕು. ವ್ಯವಸಾಯ ಕಚ್ಚಾಪದಾರ್ಥ ಹೆಚ್ಚಾಗಿ ಜನ ಬೆಳೆಯುವ ಹಾಗೆ ಮಾಡುವುದಕ್ಕೆ ಯಾವ ಪ್ರದೇಶದಲ್ಲಿ ಏನನ್ನು ಬೆಳೆಯ ಬೇಕು ಎಂಬ ಯೋಜನೆ ತಯಾರು ಮಾಡಬೇಕು. ಇದಲ್ಲದೆ ಷೆಡ್ಯೂಲ್ ಬ್ಯಾಂಕಿನಿಂದ ಆದಷ್ಟು ಹಣ ಸಹಾಯ ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ಸ್ಟಡಿಟೀಂ ರಿಪೋರ್ಟು on small scale industries ನಮ್ಮ ಮುಂದೆ ಇದೆ. ಇದರಲ್ಲಿ ನಮ್ಮ ನೆರೆ ರಾಜ್ಯವಾದ ಮದ್ರಾಸು ರಾಜ್ಯದ ಬಗ್ಗೆ ಬಹಳ ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ. ನಾವು ನಮ್ಮ ನೆರೆಯವರ ವಿಚಾರದಲ್ಲಿ ಮೆಚ್ಚಿಗೆ ವ್ಯಕ್ತ ಪಡಿಸುತ್ತಾ ಹೋಗದೆ ನಮ್ಮ ಬಗ್ಗೆ ಕೆಲಸ ಮಾಡತಕ್ಕದ್ದು ಅಗತ್ಯ. ಮದ್ರಾಸಿನಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ಸ ಚೆನ್ನಾಗಿ ನಡೆಯುತ್ತಿವೆ. ನಮ್ಮಲ್ಲಿ ನಡೆಯದಿರಲು ಕಾರಣವೇನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇದುವರೆಗೆ ನಮ್ಮ ರಾಜ್ಯದಲ್ಲಿ ಇದನ್ನು ಕಾರ್ಯಗತ ಮಾಡುವುದಕ್ಕಾಗಿಲ್ಲ. ಉದಾಹರಣೆ ಹೇಳುವುದಾದರೆ ಹಾಸನ ಮತ್ತು ಸಕಲೇಶಪುರದಲ್ಲಿ ಎರಡು ಇಂಡಸ್ಟ್ರಿಯಲ್ ಎಸ್ಟೇಟ್ ಮಂಜೂರಾಗಿವೆ. ಎಂಬುದನ್ನು ಮಾನ್ಯ ಕೈಗಾರಿಕಾ ಮಂತ್ರಿಗಳು

ನಾಲ್ಕು ವರ್ಷಗಳ ಹಿಂದೆ ಈ ಸಭೆಯಲ್ಲಿ ಹೇಳಿದರು. ಇವತ್ತಿನವರೆಗೆ ಇದಕ್ಕಾಗಿ ಜಮೀನುಕೂಡ ಅಕ್ವಿಜಿಷನ್ ಆಗಿಲ್ಲ. ಇದರ ಬಗ್ಗೆ ರಿಕಾರ್ಡು ನಡೆಯುತ್ತಿದೆ ಎಂದು ಹೇಳುತ್ತಾರೆ. ನಾಲ್ಕು ವರ್ಷದಿಂದ ಜಮೀನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹಾಗಾದರೆ ಈ ಕೈಗಾರಿಕೆ ಎಸ್ಟೇಟು ಪ್ರಾರಂಭಿಸಿ ಜನರಿಗೆ ಕೆಲಸ ಯಾವಾಗ ಒದಗಿಸುವುದು ಎಂಬುದನ್ನು ವಿಚಾರ ಮಾಡ ಬೇಕು. ಈ ರೀತಿ ಹೇಳಿ ನಾನು ಸರಕಾರವನ್ನು ದೂರುತ್ತಿಲ್ಲ. ಇದರ ಬಗ್ಗೆ ಸರಕಾರ ಸರ್ವ ವಿಧದಲ್ಲಿ ಪ್ರಯತ್ನ ಮಾಡುತ್ತಿದೆ. ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕಂಥವರಿಗೆ ಹೆಚ್ಚು ಆಸಕ್ತಿ ಬರಬೇಕು. ನಮ್ಮ ರಾಜ್ಯದಲ್ಲಿ ಇರತಕ್ಕ ಸಾಧನ ಸಂಪತ್ತನ್ನು ಉಪಯೋಗಿಸಿ ಜನರಿಗೆ ಕೆಲಸ ಒದಗಿಸಬೇಕು ಎಂಬ ಮನೋಭಾವ ಅವರಲ್ಲಿ ಬರಬೇಕು. ಕೇವಲ ನೆರೆ ರಾಜ್ಯ ಹೊಗಳಿ ನಮ್ಮ ರಾಜ್ಯ ಹಿಂದೆ ಬಿದ್ದರೆ ನಾವು ಏನೂ ಸಾಧಿಸಿದಂತಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Imported Goods ಕಂಟ್ರೋಲ್ ವಿಚಾರದಲ್ಲಿ ಬ್ಲ್ಯಾಕ್ ಮಾರ್ಕೆಟ್ ನಡೆಯುತ್ತಿದೆ ಎಂದು ಅನೇಕ ಸಾರಿ ಆ ಸಭೆಯಲ್ಲಿ ಚರ್ಚೆಯಾಗಿದೆ. ಸ್ಟೇನ್‌ಲೆಸ್ ಸ್ಟೀಲ್ ಮುಂತಾದ ಕೋಟಾಗಳ ವಿಚಾರದಲ್ಲಿ ಬ್ಲ್ಯಾಕ್ ಮಾರ್ಕೆಟ್ ಆಗುತ್ತದೆ ಅಂಥವರನ್ನು ಬಲಿ ಹಾಕಬೇಕು ಎಂದು ಅನೇಕ ಸಾರಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾವು ಸ್ವಾಗತಿಸುತ್ತೇವೆ. ಕೋಟಾ ಕೊಡುವುದನ್ನು ನಿಲ್ಲಿಸುವುದರಿಂದ ಬ್ಲ್ಯಾಕ್ ಮಾರ್ಕೆಟ್ ತಡೆಯುವುದಕ್ಕೆ ಸಾಧ್ಯವಿದೆ ಎಂದು ನಾನು ಭಾವಿಸುವುದಿಲ್ಲ. ಕೋಟಾ ಎಷ್ಟು ಕೊಡುವುದು ಎಷ್ಟು ಅದರಿಂದ ಉತ್ಪತ್ತಿಯಾಗತಕ್ಕ ಸಾಮಾನುಗಳ ಲೆಕ್ಕ ತೆಗೆದು ಕೊಂಡು ಬೆಲೆ ನಿಗದಿ ಮಾಡಿ ಇದಕ್ಕಾಗಿ ಒಂದು ಏಜೆನ್ಸಿ ಮಾಡಿ ಸರಕಾರ ಕೊಂಡು ಕೊಂಡು ಮಾರಾಟ ಮಾಡಿದರೆ ಬ್ಲ್ಯಾಕ್ ಮಾರ್ಕೆಟ್ ಆಗುವುದಿಲ್ಲ. ಫ್ಯಾಕ್ಟರಿ ಲೈಸೆನ್ಸ್ ಇಲ್ಲದೇ ಇರತಕ್ಕಂಥ ವರು ಸಿಕ್ಕಿ ಬೀಳುತ್ತಾರೆ. ಈ ಸಲಹೆ ಸರಕಾರ ವಿಚಾರ ಮಾಡಬೇಕು.

ಶರಾವತಿ ಯೋಜನೆಯಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುತ್ ಶಕ್ತಿ ನಾವು ಉಪಯೋಗಿಸಿ ಕೊಳ್ಳಲು ಪ್ರಯತ್ನ ಮಾಡಬೇಕು. ದೇಶದ ಹಿತ ದೃಷ್ಟಿಯಿಂದ ಸಾಧನ ಸಂಪತ್ತನ್ನು ಉಪಯೋಗಿಸಿ ಕೊಳ್ಳುವುದಕ್ಕೆ ನಾವು ಹೆಚ್ಚು ಕೈಗಾರಿಕೆಗಳನ್ನು ಪ್ರಾರಂಭಿಸಬೇಕು. ಇದಕ್ಕಾಗಿ ಹೆಚ್ಚು ಪ್ರಚಾರ ಮಾಡಬೇಕಾದುದು ಅಗತ್ಯ. ಕೈಗಾರಿಕೆಯ ವಿಚಾರದಲ್ಲಿ ಮುಂದೆ ಬಂದಂಥವರಿಗೆ ಎಲ್ಲ ವಿಧವಾದ ಸಹಕಾರ ವ್ಯವಸಾಯ ಇಲಾಖೆಯವರು ಕೊಡಬೇಕು. ಈ ಮೊದಲು ನಾನು ಹೇಳಿದ ಹಾಗೆ ಜಾಯಿಂಟ್ ಡೈರೆಕ್ಟರರು ಕೊಟ್ಟಂಥ ಉತ್ತರ ಕೊಟ್ಟರೆ ನಮ್ಮ ದೇಶದಲ್ಲಿ ಕೈಗಾರಿಕೆಗಳು ಮುಂದೆ ಬರುವುದಿಲ್ಲ. ಇದರಿಂದ ದೊಡ್ಡ ದೊಡ್ಡ ಉದ್ಯಮಗಳಿಗೆ ಪೆಟ್ಟು ಬೀಳುತ್ತದೆ ಎಂದು ಹೇಳುತ್ತೇನೆ. ಕೊನೆಯದಾಗಿ ನಾನು ಹೇಳುವುದೇನೆಂದರೆ, ಹೊಸಪೇಟೆಯಲ್ಲಿ ಉಕ್ಕಿನ ಕಾರಖಾನೆ ಪ್ರಾರಂಭಿ ಸುವುದಕ್ಕೆ ಮುಖ್ಯ ಮಂತ್ರಿಗಳು ಸರ್ವ ವಿಧವಾದ ಪ್ರಯತ್ನ ಮಾಡಬೇಕು ಮತ್ತು ಇದು ಕಾರ್ಯ ಗತವಾಗುವುದಕ್ಕೆ ಕೇಂದ್ರ ಸರಕಾರದಲ್ಲಿ ನಮ್ಮ ರಾಜ್ಯ ಸರಕಾರವು ಪ್ರಯತ್ನ ಮಾಡಬೇಕು ಎಂದು ಒತ್ತಿ ಹೇಳಿ ನನ್ನ ಈ ಎರಡು ಮಾತು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸರಕಾರದವರು ಸಭೆಯ ಮುಂದೆ ಮಂಡಿಸಿರುವ ಈ ಬೇಡಿಕೆಗಳನ್ನು ವಿರೋಧಿಸುತ್ತಾ, ಕೈಗಾರಿಕೆಗಳ ಬಗ್ಗೆ ಕೆಲವು ಮಾತು ಗಳನ್ನು ಹೇಳ ಬಯಸುತ್ತೇನೆ. ಸ್ವಾಮಿ, ಹಿಂದೆ ರಾಜರ ಆಡಳಿತದಲ್ಲಿ ಇದ್ದಂಥ ಈ ಹಳೇ ಮೈಸೂರು ಸಂಸ್ಥಾನವು ಒಂದು ಕೈಗಾರಿಕ ರಾಜ್ಯ ಆಗ ಬೇಕೆಂದು ಪ್ರಯತ್ನ ಮಾಡಿತು. ನಮ್ಮ ಸಾರ್ವಜನಿಕ ವಲಯದಲ್ಲಿ ಕೆಲವೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದುದನ್ನು ಪರಿಶೀಲನೆ ಮಾಡಿ ದರೆ ಗೊತ್ತಾಗುತ್ತದೆ. 1916ರಲ್ಲಿ ಮೈಸೂರು ನಗರದಲ್ಲಿ ಗಂಧದ ಎಣ್ಣೆಯ ಕಾರಖಾನೆ ಸ್ಥಾಪನೆ ಆಗಿದೆ. 1919ರಲ್ಲಿ ಸೋಪು ಫ್ಯಾಕ್ಟರಿ ಬೆಂಗಳೂರು ನಗರದಲ್ಲಿ ಸ್ಥಾಪನೆಯಾಗಿದೆ. 1923 ರಲ್ಲಿ ಭದ್ರಾವತಿ ಕಬ್ಬಿಣ ಕಾರಖಾನೆ ಸ್ಥಾಪನೆಯಾಯಿತು. 1932ರಲ್ಲಿ ಮೈಸೂರಿನಲ್ಲಿ ಗವರ್ಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಸ್ಥಾಪನೆಯಾಯಿತು. 1932ರಲ್ಲಿ ಬೆಂಗಳೂರು ನಗರದಲ್ಲಿ ಪೋರ್ಸಲೀನ ಫ್ಯಾಕ್ಟರಿ ಪ್ರಾರಂಭವಾಯಿತು. 1940ರಲ್ಲಿ ಹಾಸನದಲ್ಲಿ ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಸ್ಥಾಪನೆ ಯಾಯಿತು. 1881ರಲ್ಲಿ ಕೋಲಾರ ಗೋಲ್ಡ್ ಮೈನಿಂಗ್ ಇಂಡಸ್ಟ್ರೀ ಆಯಿತು. 1917ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕಶಾಪ್ ಸ್ಥಾಪನೆಯಾಯಿತು. 1944ರಲ್ಲಿ ಶಿವಮೊಗ್ಗದಲ್ಲಿ ಮತ್ತೊಂದು ಗಂಧದ ಎಣ್ಣೆ ಕಾರಖಾನೆ ಸ್ಥಾಪನೆಯಾಯಿತು. ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಅವರ ಸ್ನೇಹಿತರು ಅಧಿಕಾರಕ್ಕೆ ಬಂದ ಮೇಲೆ ಹೊಸದಾಗಿ ಪ್ರಾರಂಭ ಮಾಡಿದ್ದು ಯಾವ ಕಾರಖಾನೆ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಆಗ್ಗೆ ಸ್ಥಾಪನೆಯಾದಂಥ ಈ ಕೈಗಾರಿಕೆಗಳು ನಮಗೆ ಸ್ವಾತಂತ್ರ್ಯ ಬಂದ ನಂತರ ಎಷ್ಟು ಪ್ರಗತಿ ಸಾಧಿಸಿವೆ ? ಬೆಳವಣಿಗೆ ಅಭಿವೃದ್ಧಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ನೋಡಿದರೆ ನಾವು ಬಹಳ ವಿಷಾದದಿಂದ ಹೇಳ ಬೇಕಾಗುತ್ತದೆ. ಸ್ವಾತಂತ್ರ್ಯ ಪ್ರಾಪ್ತವಾದ ನಂತರ ರಾಜ್ಯದಲ್ಲಿ ಕೈಗಾರಿಕೆ ಪ್ರಗತಿ

(ಶ್ರೀ ಎಸ್. ಗೋಪಾಲಗೌಡ)

ಸ್ಥಗಿತವಾಗಿದೆ, ಹಿಂದಕ್ಕೆ ಹೋಗಿದೆ ಎಂಬುದನ್ನು ವಿಷಾದದಿಂದ ಮನಗಾಣಬೇಕಾಗುತ್ತದೆ. ಮಾನ್ಯ ಹಣ ಕಾಸಿನ ಸಚಿವರು ಶರಾವತಿಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ಹೇಗೆ ಬಳಸಿಕೊಳ್ಳುತ್ತೇವೆ, ಕೆಲವು ಕೈಗಾರಿಕೆಗಳು ಎಷ್ಟೆಷ್ಟು ವಿದ್ಯುತ್ ಶಕ್ತಿ ಬಳಸುವ ಶಕ್ತಿ ಪಡೆದಿವೆ ಎಂಬುವಕ್ಕೆ ಅಂಕಿ ಅಂಶಗಳನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟರು. ಬಹುಶಃ ಈ ಕೈಗಾರಿಕೆ ಎಲ್ಲಾ ಲೈಸೆನ್ಸ್ ಪಡೆದು ನಡೆಯುತ್ತಿದೆಯೇ ಎಂದು ನನಗಾದರೂ ಆಶ್ಚರ್ಯವಾಯಿತು. ಆಮೇಲೆ ವಿಚಾರಮಾಡಲಾಗಿ ಏನೂ ಆಗಿರಲಿಲ್ಲ. ನಮ್ಮ ರಾಜ್ಯಸರಕಾರ ಈ ಯಾವ ಕೈಗಾರಿಕೆಗಳನ್ನು ಪಡೆಯುವುದಕ್ಕೂ ಪ್ರಯತ್ನಮಾಡಿಲ್ಲ. ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು, ಕೈಗಾರಿಕಾ ಸಚಿವರು ಹೊಸಪೇಟೆ ಉಕ್ಕಿನ ಕಾರ್ಖಾನೆ ಸ್ಥಾಪನೆ ಬಗ್ಗೆ ಈ ಸಭೆಯ ಮುಂದೆ ಬಹಳವಾಗಿ ಮಾತನಾಡಿದ್ದಾರೆ ಬಹಳ ಸಲ ಉದ್ರೇಕದಿಂದ ಹೇಳಿರುವುದುಂಟು, ಕೇಂದ್ರ ಸರ್ಕಾರದವರು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಅಲ್ಲಿ ಸ್ಥಾಪಿಸಲು ಅವಕಾಶ ಕೊಡದಿದ್ದರೆ ನಾವೇ ಒಂದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರವೂ ನಮ್ಮ ಮುಂದಿದೆ ಎಂದು ಸಹ ಹೇಳಿದ್ದಾರೆ. ಆದರೆ ವಸ್ತುತ: ಹಣಕಾಸು ಮತ್ತಿತರ ಸಿದ್ಧತೆ ಎಷ್ಟುಮಟ್ಟಿಗೆ ಆಗಿದೆ ಎಂಬುದನ್ನು ನೋಡಬಹುದು. ಭದ್ರಾವತಿಯ ಕಬ್ಬಿಣದ ಕಾರ್ಖಾನೆ ಎಷ್ಟು ಬೆಳೆದಿದೆ, ಅದರ ಕಡೆ ಎಷ್ಟು ಲಕ್ಷ ಕೊಟ್ಟಿದ್ದೀರಿ, ಅಲ್ಲಿ ಏನೇನು ಅಡ್ಡಿ ಆತಂಕವಿದೆ, ಅದನ್ನು ಹೇಗೆ ಬಗೆಹರಿಸುತ್ತಿದ್ದೀರಿ ಎಂದು ವಿಚಾರಮಾಡಿದರೆ ಆಗ ಸರಿಯಾಗಿ ನಿಮ್ಮ ನಿಷ್ಠೆಯೇನೆಂಬುದು ಅರ್ಥವಾಗುತ್ತದೆ, ನೀವೆಷ್ಟು ಸಾಧಿಸಬಲ್ಲಿರಿ ಎಂಬುದನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು. ಈಗ ಉಕ್ಕಿನ ಕಾರ್ಖಾನೆಯನ್ನು ಹೊಸಪೇಟೆಯಲ್ಲಿ ಸ್ಥಾಪನೆ ಮಾಡುವುದರ ಬಗ್ಗೆ ಆಂಗ್ಲೊ ಅಮೇರಿಕನ್ ತಜ್ಞರು ಬಂದಾಗ ನಮಗೆ ಗೊತ್ತಿರುವ ಹಾಗೆ ಜವಾಬ್ದಾರಿ ಹೊತ್ತಿರುವ ಮುಖ್ಯ ಮಂತ್ರಿಗಳಾಗಲಿ, ಹಣಕಾಸಿನ ಮಂತ್ರಿಗಳಾಗಲಿ ಅಥವಾ ಕೈಗಾರಿಕಾ ಮಂತ್ರಿಗಳಾಗಲಿ ಅವರ ಜೊತೆಯಲ್ಲಿ ಕುಳಿತು ಮಾತನಾಡಿ ವಿಚಾರ ವಿನಿಮಯಮಾಡಿ ಎಲ್ಲಾ ವಿಷಯಗಳನ್ನೂ ಅವರಿಗೆ ಮನದಟ್ಟು ಮಾಡಿಕೊಡಲಿಲ್ಲ ಎಂಬ ಆರೋಪ ಕೂಡ ಇದೆ. ಈಗ ತಮ್ಮ ಅಧಿಕಾರದ ಕೊನೆ ವರ್ಷದಲ್ಲಿದ್ದೀರಿ. ಈ ನಾಲ್ಕೂವರೆ ವರ್ಷದಲ್ಲಿ ತಮ್ಮಿಂದ ಏನನ್ನು ಸಾಧಿಸುವುದಕ್ಕೂ ಸಾಧ್ಯವಾಗಿಲ್ಲ. ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಬೇಕಾಗಿತ್ತೆಂದು ನಾನು ಹೇಳುವುದಿಲ್ಲ. ಕೊನೆಯಪಕ್ಷ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಐದನೆಯ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರದಮೇಲೆ ಪರಿಣಾಮವಾದರೂ ಮಾಡುವಂತೆ ಮಾಡಿ ಅದನ್ನು ಹೊಸಪೇಟೆಯಲ್ಲಿ ಸ್ಥಾಪಿಸುವಂತೆ ಏನಾದರೂ ಮಾಡಿರುವರೇ ಎಂದರೆ ಏನೂ ಕಾಣಲಿಲ್ಲ. ಬರೀ ಪೊಳ್ಳು ಆಶ್ವಾಸನೆ, ಹೇಳಿಕೊಡುತ್ತಾ ಕಾಲಹರಣ ಮಾಡುತ್ತಿದ್ದಾರೆ.

ಇನ್ನು ಅಲ್ಯೂಮಿನಿಯಂ ಕಾರ್ಖಾನೆ ಬಗ್ಗೆ ನಾಲ್ಕೂವರೆ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆಂದು ಮುಖ್ಯ ಮಂತ್ರಿಗಳು ಹೇಳಿದರು, ಬೆಳಗಾವಿ ಹತ್ತಿರ ಗದ್ದೆ ಅಕ್ವೈರ್ ಮಾಡಿಕೊಳ್ಳುವುದು ಮುಂತಾದುವುಗಳ ಬಗ್ಗೆ ಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದರು. ರಾಮಕೃಷ್ಣ ಹೆಗ್ಡೆಯವರು ಅದಕ್ಕೆ ವಿದ್ಯುಚ್ಛಕ್ತಿ ಎಷ್ಟು ಬೇಕೆಂಬುದನ್ನು ಹೇಳಿದರು. ಆದರೆ ವಾಸ್ತವವಾಗಿ ಈಗ ಬಹುಶ: ಈ ಕಾರ್ಖಾನೆ ಸ್ಥಾಪನೆ ಬಗ್ಗೆ ಕೂಡ ಕೇಂದ್ರ ಸರಕಾರ ಅನುಮತಿ ನೀಡಿಲ್ಲ. ಸರಕಾರ ಇವರ ಬಗ್ಗೆ ಇದರ ಸ್ಥಾಪನೆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎಂದು ವಿಷಾದದಿಂದ ತಿಳಿಸಬೇಕಾಗಿದೆ.

ಫರ್ಟಿಲೈಜರ್ ಕಾರ್ಖಾನೆ ಕೊಚ್ಚಿನ್ನಿನಲ್ಲಿ ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರ ಅನುಮತಿ ನೀಡಿದೆಯೆಂದು ತಿಳಿದುಬಂದಿದೆ. ಮಂಗಳೂರಿಗೆ ಇದನ್ನು ತರುವುದು ಕೂಡ ಬಹಳ ಅನುಮಾನಾಸ್ಪದವಾದ ವಿಷಯವೇ ಆಗಿದೆ. ಇನ್ಯಾವ ಕಾರ್ಖಾನೆ ಸ್ಥಾಪನೆ ಮಾಡುವುದಿದೆ? ಆಯಿಲ್ ರಿಫೈನರಿ ಸಿಲೋಂಗೆ ಹೋಯಿತು. ನಮ್ಮಲ್ಲಿ ಪ್ರಕೃತಿ ಸಂಪತ್ತು ಬಹಳವಾಗಿದ್ದರೂ ಅದನ್ನು ತೆಗೆಯಲು ಲೈಸೆನ್ಸ್ ಪಡೆದಿರುವವರಲ್ಲಿ ಸರಕಾರದವರ ಸಂಬಂಧೀಗಳೇ ಬಹಳ ಮಂದಿ ಇದ್ದಾರೆಂಬ ದೂರಿದೆ. ಅದರಿಂದ ಕೆಲವು ಹಣ ಸಂಪಾದನೆ ಮಾಡಲು ಸಾಧ್ಯವಾಗಬಹುದು.

ಇನ್ನೊಂದು ವಿಚಾರವನ್ನು ಈಗಾಗಲೇ ಮಾನ್ಯ ಕೃಷ್ಣರವರು ಪ್ರಸ್ತಾಪಮಾಡಿದ್ದಾರೆ. ನಾನು ಕೆಲವು ಪ್ರೋತ್ಸಾ ನಿರ್ಣಯಗಳನ್ನು ಕಳಿಸಿದ್ದೇನೆ. ಅದರಲ್ಲಿ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಗೆ ಸಂಬಂಧಪಟ್ಟಿರುವುದೂ ಇದೆ. ಮುಖ್ಯಮಂತ್ರಿಗಳು ಇಲ್ಲದ್ದಾರೆ. ಅವರ ಮೇಲೆ ಒಂದು ಗಂಭೀರವಾದ ಆಪಾದನೆ ಮಾಡಬೇಕೆಂದಿದ್ದೇನೆ. ಅವರು ಯಾವಾಗಲು ಸಂಶಯಾತ್ಮ ವಿನಶ್ಯತಿ, ಯಾವುದರ ಬಗ್ಗೆ ಕೂಡ ಸಂದೇಹ ಪಡಬಾರದು, ನಂಬಿದರೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತಾರೆ.

ವೈಯುಕ್ತಿಕವಾಗಿ ನಾನು ಅವರ ಬುದ್ಧಿವಾದವನ್ನು ಅಥವಾ ಬೋಧನೆಯನ್ನು ಕೇಳಲು ಸಿದ್ಧವಾಗಿದ್ದರೂ ರಾಜ್ಯದ ಹಿತಾಸಕ್ತಿಯಿಂದ ನ್ಯಾಯನಿಷ್ಠೆಯಿಂದ ಈ ಸಭೆಯ ಸದಸ್ಯನಾಗಿ ಸಾರ್ವಜನಿಕರ ಬಗ್ಗೆ ಕರ್ತವ್ಯ ಪರಿಪಾಲನೆ ಮಾಡಲು ಆದೇಶ ಮತ್ತು ಅಣತಿಯನ್ನು ನಾನು ಪಡೆದಿರುವಾಗ ನಾನು ಕೆಲವು ಕೆಲಸಗಳನ್ನು ಮಾಡದಿದ್ದರೆ ಕರ್ತವ್ಯಲೋಪವಾಗುತ್ತದೆ. ಕರ್ತವ್ಯ ನೆರವೇರಿಸಿದಂತಾಗುವುದಿಲ್ಲ. ಬಾಗಲಕೋಟೆಯಿಂದ ನಿಜಲಿಂಗಪ್ಪನವರು ಎರಡನೆಯ ಸಾರಿ ಚುನಾವಣೆಯಿಲ್ಲದೆ ಆರಿಸಿಬಂದರು. ಈಗ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯವರು ನಿಜಲಿಂಗಪ್ಪ-ರಸ್ತೆ ಎಂದು ಒಂದು ರಸ್ತೆ ಮಾಡಿರುವುದು ಸಂತೋಷದ ವಿಚಾರ. ಈ ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯ ವ್ಯವಹಾರಗಳು ಚೆನ್ನಾಗಿಲ್ಲ, ಭ್ರಷ್ಟಾಚಾರ ನಡೆದಿದೆ, ಸುಮಾರು 2 ಲಕ್ಷ 80 ಸಾವಿರ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ, ಮ್ಯಾನೇಜಿಂಗ್ ಏಜೆಂಟರು ಮತ್ತು ಮ್ಯಾನೇಜಿಂಗ್ ಡೈರೆಕ್ಟರು ಈ ಕಂಪೆನಿಯ ಆಸ್ತಿಪಾಸ್ತಿ, ಹಣ ಮೊದಲಾದುವನ್ನು ದುರುಪಯೋಗಮಾಡಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದನ್ನು ಬಹಳ ಪ್ರಖ್ಯಾತರಾದ ಛಾರ್ಟರ್ಡ್ ಅಕೌಂಟೆಂಟ್ ದಲಾಲ್ ಅಂಡ್ ಷಾ ಎಂಬುವರು 19-4-62 ರಲ್ಲಿ ಸಂಪೂರ್ಣವಾಗಿ ತನಿಖೆಮಾಡಿ ಅವರು ಫೈಂಡಿಂಗ್ಸ್ ಕೊಟ್ಟಿದ್ದಾರೆ. ಅದರಲ್ಲಿ ಹೀಗೆ ಹೇಳುತ್ತಾರೆ.

> "The above findings clearly indicate that irregularities mainly involve use of materials, equipment and labour and have been committed......with the knowledge of the staff of the Company. Such irregularities, in the absence of any tangible proof, are difficult to pinpoint even in an investigation let alone an audit. Detection is rendered more difficult when requisition notes describing the issue of materials for use in Company's own production and gate passes with inadequate particulars are prepared.
>
> The whole inquiry had, therefore, to be conducted mainly on the evidence of some of the employees of the Company and records (which do not form part of the Accounts Records) revealed during the inquiry."

ಅದಾದಮೇಲೆ ಕಂಪೆನಿಯವರು ಒಂದು ಷೇರ್ ಹೋಲ್ಡರುಗಳ ಸಮಿತಿಯನ್ನು ನೇಮಕ ಮಾಡಿದ್ದರು, ಅದಕ್ಕೆ ಎನ್. ಕೆ. ಪಟ್ಟಿಗಾರ್ ಕಮಿಟಿ ಎಂದು ಹೆಸರು. ಆ ಸಮಿತಿಯ ವರದಿಯೂ ಇದೆ. ಅದು 5 ಜನರ ಸಮಿತಿ. ಸೇಠಿ ಎನ್ನುವವರು ಡಿಸೆಂಟಿಂಗ್ ನೋಟ್ ಕೊಟ್ಟಿದ್ದಾರೆ. 2 ಲಕ್ಷ 80 ಸಾವಿರ ರೂಪಾಯಿಗಳನ್ನು ವಾಪಸು ಕೊಡುತ್ತೇವೆ, ಅದನ್ನು ಬಳಸಿರುವುದು ನಿಜ ಎಂದು ಹೇಳಿದಮೇಲೆ ದುರುದ್ದೇಶವಿರಲಿಲ್ಲ, ಕಂಪೆನಿಯ ಹಣ ಹಾಳುಮಾಡುವ ಉದ್ದೇಶವಿರಲಿಲ್ಲ, ಆದುದರಿಂದ ಅವರನ್ನು ಬಿಟ್ಟುಬಿಡಬಹುದು, ಅವರನ್ನು ಮುಂದುವರೆಸಬಹುದು ಎಂಬ ಅಭಿಪ್ರಾಯ ಸೂಚಿಸಿದ್ದಾರೆ. ಆದರೆ ಸೇಠಿ ಎನ್ನುವವರು ತಮ್ಮ ಡಿಸೆಂಟಿಂಗ್ ನೋಟಿನಲ್ಲಿ ಈ ರೀತಿ ಬರೆದಿದ್ದಾರೆ.

> "Therefore basing my conviction on the facts stated above, I have to say that Dr. A. G. Tendulkar, the Managing Agent, has misused his powers and has not exercised proper responsibility in the affairs of the Bagalkot Cement Company Ltd., and I cannot reconcile myself to the point that the acts of the Managing Agents be described as "honest" or "*bona fide*."

11-30 A.M.

ಈ ಆಡಿಟರ್ ರಿಪೋರ್ಟ್ ಉಪಯೋಗಿಸಿಕೊಂಡು ಈ ಬಗ್ಗೆ ವಿಚಾರಣೆಯಾಗಬೇಕು ಎಂದು ಡಿಸ್ಸೆಂಟಿಂಗ್ ನೋಟಿನಲ್ಲಿ ತಿಳಿಸಿದ್ದಾರೆ. ಅದು ಆದಮೇಲೆ ಪ್ರಖ್ಯಾತ ವಕೀಲರಾದ ಶ್ರೀ ಆರ್. ಎ. ಜಹಗೀರದಾರ ಅವರು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ.

> "The Managing Agents admit that they had used without any authority Company's stores, equipment, labour, and

(ಶ್ರೀ ಎಸ್. ಗೋಪಾಲ ಗೌಡ)

funds for their aluminium and cement projects at Ambagadh and Vani respectively as well as their Belgundi and Bombay houses during the year 1959 to 1961. The total value of such stores, etc., utilised by the Managing Agents amount to Rs. 2,08,919."

ಸ್ಟೇಟ್ಸ್ ರಿ-ಆರ್ಗನೈಸೇಷನ್ ಆದಮೇಲೆ ಮುಂಬಯಿ ರಾಜ್ಯದಲ್ಲಿದ್ದ ಈ ಸಿಮೆಂಟ್ ಕಂಪನಿಯು 1956 ರಲ್ಲಿ ನಮ್ಮ ರಾಜ್ಯಕ್ಕೆ ಬಂದಿದೆ. ಈಗ ರಾಜ್ಯ ಸರಕಾರದವರು ಪೋಲೀಸ್ ಮೂಲಕ ವಿಚಾರಣೆ ಮಾಡಿ 33 ಪೋಲೀಸ್ ಕೇಸುಗಳನ್ನು ಈ ಕಂಪನಿ ಮ್ಯಾನೇಜಿಂಗ್ ಡೈರೆಕ್ಟರ್ ಮೇಲೆ ಹಾಕಿದ್ದಾರೆ. ಎರಡು ಕೇಸುಗಳು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯಾಗಿ ಸೆಷನ್ಸ್ ಕೋರ್ಟಿಗೆ ಕಮಿಟ್ ಆಗಿವೆ. ಇದರಲ್ಲಿ ಸೆಷನ್ಸಿಗೆ ಕಮಿಟ್ ಮಾಡಿದ ಒಂದು ಕೇಸಿನ ವಿವರ ಹೀಗೆ ಇದೆ :

"P. R. Case No. 11 of 1964.

Complainant:—State by Deputy Superintendent of Police, Criminal Branch, C. I. D., Bangalore.

Vs.

Accused:—(1) Ganapat Narayan Tendulkar and
(2) Parappa Sangappa Shettar, both of Bagalkot, District Bijapur,

The Magistrate says :—

"In this view of the matter, I have no hesitation whatever to come to a conclusion that the accused should be put to a trial only before the Court of Session and therefore, accordingly order under section 207 (10), Cr. P. C., that both the accused be committed to take trial before the Court of Sessions of Bijapur Division sitting at Bijapur."

ಮಾನ್ಯ ನಿಜಲಿಂಗಪ್ಪನವರಿಗೆ ನಾನು ಒಂದು ಪ್ರಶ್ನೆ ಮಾಡುತ್ತೇನೆ. ಈ ರೀತಿ ಇನ್‌ವೆಸ್ಟಿಗೇಷನ ಮಾಡಿಸಿ, ಇಷ್ಟೆಲ್ಲಾ ಫ್ಯಾಕ್ಟ್ಸ್ ಹುಡುಕಿ ತೆಗೆದು ಆದ ಮೇಲೆ, ಕೇಸು ಹಾಕಿದ ಮೇಲೆ, ಸೆಷನ್ಸ್ ಕೋರ್ಟಿಗೆ ಕಮಿಟ್ ಆದ ಮೇಲೆ, ಕ್ಯಾಬಿನೆಟ್ಟಿನಲ್ಲಿ ವಿಚಾರ ಮಾಡಿ ಇಬ್ಬರು ಕ್ಯಾಬಿನೆಟ್ ಮಂತ್ರಿಗಳು ವಿರೋಧವಾಗಿದ್ದರೂ ಕೂಡ ತಾವು ಈ ಕೇಸು ವಾಪಸ್ಸು ತೆಗೆದುಕೊಳ್ಳುವ ನಿರ್ಧಾರಕ್ಕೆ ಬರುವುದಕ್ಕೆ ಇದ್ದಂಥ ಬಲವಾದ ಒತ್ತಾಯ ಏನು ? ತಮ್ಮ ಮೇಲೆ ಕೇಂದ್ರದ ಪ್ರಭಾವಶಾಲಿ ಮಂತ್ರಿಗಳು ಪದೇ ಪದೇ ಒತ್ತಾಯ ತಂದಿರುವುದರ ಬಗ್ಗೆ ಸಾಕಷ್ಟು ಎವಿಡೆನ್ಸ್ ಇದೆ. ಮ್ಯಾನೇಜಿಂಗ್ ಡೈರೆಕ್ಟರರು ಸ್ವಹಸ್ತಾಕ್ಷರದಿಂದ ಬರೆದ ಡೈರಿ ಕೋರ್ಟಿನ ಮುಂದೆ ಹಾಜರ್ ಆಗಿದೆ. ಅದರಲ್ಲಿರುವ ಆಶ್ಚರ್ಯಕಾರಕ ವಿಷಯ ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ನನಗಿಂತ ಹೆಚ್ಚು ವಿಷಯ ನಿಮಗೆ ಗೊತ್ತು ಇರಲಿಕ್ಕೆ ಬೇಕು. ವಿರೋಧ ಪಕ್ಷದ ಸದಸ್ಯರ ಪ್ರಾಮಾಣಿಕತೆಯನ್ನು ಪ್ರಶ್ನಿಸಿ ತಾವು ಸತ್ಯ ಸಂಧರು ಧರ್ಮರಾಯರು ಎಂಬ ಭಾವನೆ ಇಟ್ಟುಕೊಂಡು ಏನೇನೋ ಹೇಳುತ್ತೀರಿ. ಸಂತೋಷ. ನಾವು ಅದನ್ನು ಖಂಡಿಸುವುದಿಲ್ಲ. ಕೆಲವರು ಅಪ್ರಾಮಾಣಿಕರು ಇರಬಹುದು. ಆ ಪ್ರಶ್ನೆ ಮುಖ್ಯ ಅಲ್ಲ. ಬಾಗಲಕೋಟೆ ಸಿಮೆಂಟ್ ಕಂಪನಿ ವಿಚಾರಣೆ ಸಂಬಂಧದಲ್ಲಿ ತಾವು ಕೃತಿಯಲ್ಲಿ ಏನು ಮಾಡಿದ್ದೀರಿ ? ಮ್ಯಾನೇಜಿಂಗ್ ಏಜೆಂಟರಿಗೂ ತಮಗೂ ಇರತಕ್ಕಂಥ ಸಂಬಂಧ ಏನು ? ಮುಂಧ್ರಾ ಮತ್ತು ಡಾಲ್ಮಿಯಾ ಪ್ರಕರಣದಲ್ಲಿ ನಡೆದಂಥ ಕೆಟ್ಟ ವ್ಯವಹಾರ ಈ ಕಂಪನಿಯಲ್ಲಿ ನಡೆದಿದೆ. ಇದಕ್ಕೆ ಸಾಕ್ಷಿ ಇದೆ. ಇದು ಹುಟ್ಟಿಸಿ ಹೇಳತಕ್ಕಂಥ ಮಾತಲ್ಲ. ತಮ್ಮನ್ನು ಬಹು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದು ಅಂದರೆ, ಸೆಷನ್ಸ್ ಮುಂದೆ ಇರತಕ್ಕ ಈ ಪ್ರಕರಣ ಹಿಂದೆ ತೆಗೆದುಕೊಳ್ಳಬೇಕೆಂಬ ಇಲಾಖೆಯ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಸರಕಾರದ ಮೊದಲನೆಯ ತೀರ್ಮಾನದಂತೆ ಈ ವ್ಯವಹಾರದ ಬಗ್ಗೆ ಸಂಪೂರ್ಣವಾಗಿ ನ್ಯಾಯಾಲಯದಲ್ಲಿ

ವಿಚಾರಣೆಯಾಗಬೇಕು. ಇಂಥ ಕಂಪನಿಯ ವಿಚಾರದಲ್ಲಿ ಸಾರ್ವಜನಿಕ ವಿಚಾರಣೆ ನಡೆಯಬೇಕು. ಮುಂಧ್ರಾ ಹಾಗೂ ಡಾಲ್ಮಿಯಾ ಪ್ರಕರಣಗಳನ್ನು ಕಾನೂನಿನ ಶಿಸ್ತಿಗೆ ಒಳಪಡಿಸಿದಂತೆ ಬಾಗಲಕೋಟೆ ಸಿಮೆಂಟ್ ಕಂಪನಿಯ ಮ್ಯಾನೇಜಿಂಗ್ ಏಜಂಟರ ತಪ್ಪು ನ್ಯಾಯಾಲಯದಲ್ಲಿ ಸಾಬೀತಾದರೆ ಅವರು ಶಿಕ್ಷೆಗೆ ಗುರಿಯಾಗಬೇಕು. ಆಗ ಸಾರ್ವಜನಿಕರಲ್ಲಿ ಪ್ರಾಮಾಣಿಕತೆ ಉಂಟಾಗುತ್ತದೆ. ಈ ಪ್ರಕರಣವನ್ನು ಇಷ್ಟಕ್ಕೇ ಬಿಡುತ್ತೇನೆ.

ಇನ್ನು ಕೈಗಾರಿಕಾ ಪ್ರಗತಿ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಸ್ಥಾಪನೆ ಮಾಡಿ 25 ಕೋಟಿ ರೂಪಾಯಿ ಆಸ್ತಿ ಕೊಟ್ಟಿದೆ. ಮುಂಬಾಯಿ ಪ್ರಾಂತದಲ್ಲಿ ಮುರಾರಜಿ ದೇಸಾಯಿಯವರು—ಇವರನ್ನು ನೀವು ಬಲ ಪಕ್ಷ ಎಂದು ಆಪಾದನೆ ಮಾಡುತ್ತೀರಿ ನೀವು ಎಡ ಪಕ್ಷದವರು ಎಂದು ಹೇಳುತ್ತೀರಿ—ರೋಡ್ ಟ್ರಾನ್ಸ್‌ಪೋರ್ಟ್ ನ್ಯಾಷನಲೈಸ್ ಮಾಡಿದರು, ಭೂ ಸುಧಾರಣೆ ಇಂಡಿಯಾ ದೇಶದಲ್ಲಿ ಪ್ರಗತಿಪರವಾದುದನ್ನು ಜಾರಿಗೆ ತಂದು ಬಿಟ್ಟರು. ಇಂಥವರು ಬಲಪಕ್ಷದವರು ಪ್ರತಿಗಾಮಿಗಳು. ಇಂಥ ಆಪಾದನೆ ಮಾಡತಕ್ಕಂಥವರು ಈ ಸ್ಟೇಟಿನಲ್ಲಿ ಶ್ರೀಮಾನ್ ಹನುಮಂತಯ್ಯನವರು......

ಶ್ರೀ ಡಿ. ದೇವರಾಜ ಅರಸ್.—ನಾವು ಆ ರೀತಿ ಆಪಾದನೆ ಮಾಡುತ್ತೇವೆಂದು ಪ್ರಿಸಂಪಷನ್ ಮಾಡಿಕೊಂಡು ಊಹಿಸಿಕೊಂಡು ಮಾತನಾಡುತ್ತಿದ್ದೀರಿ. ಇದು ಸರಿಯಲ್ಲ.

ಶ್ರೀ ಎಸ್. ಗೋಪಾಲಗೌಡ.—ಶ್ರೀ ಹನುಮಂತಯ್ಯನವರು ಬಹಳ ಪ್ರತಿಗಾಮಿ, ಹಣ ಹಾಳು ಮಾಡಿದರು ಎಂದು ಹೇಳುತ್ತೇವೆ. ನಾನು ಸಹ ಇಷ್ಟು ದೊಡ್ಡ ವಿಧಾನಸೌಧ ಬೇಕಾಗಿರಲಿಲ್ಲ ಎಂದು ಹೇಳಿದೆ. ಶ್ರೀಮಾನ್ ನಿಜಲಿಂಗಪ್ಪನವರು ಇದೊಂದು ವಿಷಾದಸೌಧ ಎಂದು ಸ್ವತಃ ಹೇಳಿದರು. ಅವರ ವಿಚಾರಣೆಯನ್ನು ಸರಿಯಾಗಿ ಮಾಡಿ ರಿಪೋರ್ಟನ್ನು ಪ್ರಕಟನೆ ಮಾಡಿ ಎಂದು ಹೇಳುತ್ತಲೇ ಇದ್ದೇವೆ. ಆದರೆ ಇನ್ನೂ ಬೆಳಕಿಗೆ ಬಂದಿಲ್ಲ. ಈ ಬಿ.ಟಿ.ಸಿ. ಕಂಪನಿಯನ್ನು ನ್ಯಾಷನಲೈಸ್ ಮಾಡಿದ್ದಾರೆ. ಶ್ರೀ ದೇವರಾಜ್ ಅರಸ್ ಅವರಿಗೆ ನಾನು ಹೇಳುವುದೇನೆಂದರೆ, ನ್ಯಾಷನಲೈಸ್ ಆಗಿರುವ ರೂಟ್‌ಗಳಲ್ಲಿ ತಮ್ಮ ಒಂದು ಭಾಗಗಳ ಒತ್ತಾಯವನ್ನು ತಂದು, ಈ ಪ್ರೈವೇಟ್ ರೂಟ್‌ಗಳನ್ನು ನ್ಯಾಷನಲೈಸ್ ಮಾಡುವುದಕ್ಕೆ ಹೊರಟಿದ್ದಾರೆ ಎಂದು. ಈ ರೋಡ್ ಟ್ರಾನ್ಸ್‌ಪೋರ್ಟ್ ಕೈಗಾರಿಕೆ ಏನು ಇದೆ, ಇದು ಆದಾಯವಿಲ್ಲದೆ ಜನರಿಗೆ ಸೇವೆ ಮಾಡಬೇಕೆಂದು ಕಾರ್ಪೋರೇಷನ್ ಎಂದು ಮಾಡಿದ್ದಾರೆ. ಈ ಕಾರ್ಪೊರೇಷನ್ ಲಾಭದಾಯಕವಾಗಿ ನಡೆಯದಿದ್ದರೂ ಜನರಿಗೆ ಹೆಚ್ಚಿನ ಸೇವೆ ಕೊಡುವಂತೆ ಮಾಡುವುದು ಶ್ರೀ ದೇವರಾಜ ಅರಸ್‌ರವರ ಜವಾಬ್ದಾರಿಯಾಗಿದೆ. ಇದು ಲಾಭದಾಯಕವಾಗಿ ನಡೆಯುವುದಿಲ್ಲ ಎಂದು ಹೊರಗಡೆ ಒಪ್ಪಿದರು, ಮಾನ್ಯ ಸಭೆಯಲ್ಲಿ ಒಪ್ಪುವುದಿಲ್ಲ. ಈಗ ನಡೆಸುತ್ತಿರುವುದರಲ್ಲಿ ಲೋಪದೋಷಗಳನ್ನು ಮನಗಾಣುತ್ತಿದ್ದಾರೆ. ಈ ಲೋಪದೋಷಗಳನ್ನು ಸರಿಮಾಡದೆ ಉಳಿದಿರುವ ರೂಟ್ಸ್‌ಗಳನ್ನು ನ್ಯಾಷನಲೈಸ್ ಮಾಡಿದ್ದೇ ಆದರೆ ಇನ್ನು ಕೆಲವೇ ದಿವಸಗಳಲ್ಲಿ ನಿಮ್ಮ ಎಲ್ಲಾ ಲೈನ್‌ಗಳನ್ನು ನಿಲ್ಲಿಸಿ ಖಾಸಗೀಯವರಿಗೇ ಪುನಃ ಕೊಡುವ ಒಂದು ದುಸ್ಥಿತಿ ಬರಬಹುದು ಎಂಬ ಭಯವನ್ನು ಈ ಸಂದರ್ಭದಲ್ಲಿ ಕೈಗಾರಿಕೆಯ ಬಗ್ಗೆ ವ್ಯಕ್ತಪಡಿಸುತ್ತೇನೆ.

ವಿದ್ಯುಚ್ಛಕ್ತಿ ನಮ್ಮಲ್ಲಿ ಬಳಕೆಯಾಗುತ್ತಿದೆ. ಬೇಕಾದಷ್ಟು ಉತ್ಪಾದನೆಯಾಗುತ್ತಿದೆ. ಕೆಲವರು ಕಾಳಿ ನದಿ ಯೋಜನೆಯ ಪ್ರಸ್ತಾಪ ಮಾಡಿದರು, ವರಾಹಿ ನದಿಯ ಯೋಜನೆಯ ಪ್ರಸ್ತಾಪ ಮಾಡಿದರು. ಮಾನ್ಯ ಸಚಿವರಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ವಿದ್ಯುಚ್ಛಕ್ತಿಯನ್ನು ಮಾರಿ ಲಾಭ ಪಡೆಯುವುದರಲ್ಲಿ ಏನೂ ತೊಂದರೆಯಿಲ್ಲ ಎಂದು ಹೇಳಿದರು. ಬಹಳ ಸಂತೋಷದ ವಿಷಯ. ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಸುಲಭವಾಗಿ ಉತ್ಪಾದನೆ ಮಾಡಬಹುದು ಎಂದು ತಿಳಿದುಕೊಂಡು ನೂರಾರು ಕೋಟಿ ರೂಪಾಯಿಗಳನ್ನು ಹೊರಗಡೆಯಿಂದ ಸಾಲ ತಂದು ಇದಕ್ಕಾಗಿ ಬಳಸಿದಿರಿ. ಆದರೆ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಬಳಕೆ ಮಾಡಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರದವರು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನುವುದರ ಬಗ್ಗೆ ನಮಗೆ ಸಮಂಜಸವಾದ ಉತ್ತರವನ್ನು ಕೊಡಲಿಲ್ಲ. ಇದಕ್ಕೆ ಉತ್ತರವನ್ನು ಒದಗಿಸಬೇಕು ಎಂದು ಕೇಳಿದಾಗಲೆಲ್ಲಾ ಸರ್ಕಾರದವರು ನಮ್ಮಲ್ಲಿ ಬಂಡವಾಳ ಇಲ್ಲಾ, ಬಂಡವಾಳಗಾರರು ಮುಂದೆ ಬರುವುದಿಲ್ಲ ಎಂದು ಹೇಳುತ್ತಾರೆ. ಬಂಡವಾಳಗಾರರು ಮುಂದೆ ಬರಲು ನೀವು ಏನೇನು ಆಕರ್ಷಣೆಗಳನ್ನು ತೋರಿಸಿದ್ದೀರಿ, ಏನೇನು ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಎಂದು ಕೇಳಬೇಕಾಗುತ್ತದೆ. ಖಾಸಗೀಯವರು ಕೈಗಾರಿಕೆಗಳನ್ನು ಸ್ಥಾಪಿಸಬೇಕೆನ್ನುವುದನ್ನು ತತ್ವಶಃ ಎಲ್ಲರೂ ಒಪ್ಪಿದ್ದಾರೆ. 1956ನೇ ಇಸವಿಯಲ್ಲಿ ಇದರಬಗ್ಗೆ ಒಂದು ಪಾಲಿಸಿಯನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದರಪ್ರಕಾರ ನೀವು ಖಾಸಗೀ ಹಾಗೂ ಸಾರ್ವಜನಿಕ ವಲಯಗಳಲ್ಲಿ ಕೈಗಾರಿಕೆಗಳಲ್ಲಿ ಹೊಂದಾಣಿಕೆ ಉಂಟುಮಾಡುವುದಕ್ಕೆ ಪ್ರಯತ್ನ ಪಡಿದ್ದೀರಾ ಎಂದು ಕೇಳುತ್ತೇನೆ.

(ಶ್ರೀ ಎಸ್. ಗೋಪಾಲ ಗೌಡ)

ನಮ್ಮ ರಾಜ್ಯದಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ನೀವು ಕೇಂದ್ರಸರ್ಕಾರದವರಲ್ಲಿ ಕೇಳಿದರೆ, ಅವರು ಬೆಂಗಳೂರಿನಲ್ಲಿ ಎಚ್.ಎ.ಎಲ್., ಎಚ್.ಎಂ.ಟಿ., ಐ.ಟಿ.ಐ. ಮುಂತಾದ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿ, ಉತ್ತರ ಪ್ರದೇಶದ ಹಿಮಾಚಲ ಪ್ರದೇಶಕ್ಕೆ ಮೈಸೂರು ರಾಜ್ಯವನ್ನು ಹೋಲಿಸಿ ಅಲ್ಲಿಗಿಂತ ಮೈಸೂರು ರಾಜ್ಯದಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಸ್ಥಾಪಿಸಿದ್ದೇವೆ ಎಂದು ಅಂಕಿಅಂಶಗಳನ್ನು ಕೊಟ್ಟು ಹೇಳುತ್ತಾರೆ. ಆದರೆ ಇವುಗಳೆಲ್ಲಾ ಮೊದಲೇ ಸ್ಥಾಪನೆಯಾದುವು. ದಿವಂಗತ ಮೋಕ್ಷಗೊಂಡಂ ವಿಶ್ವೇಶ್ವರಯ್ಯನವರು, ಅನೇಕ ಜನ ದಾರ್ಶನೀಕರು, ಅನೇಕ ಜನ ಶಿಲ್ಪಿಗಳು, ಕೈಗಾರಿಕಾ ಉದ್ಯಮಿಗಳು ಮೈಸೂರು ರಾಜ್ಯದಲ್ಲಿ ಹೇರಳವಾದ ಪ್ರಕೃತಿ ಸಂಪತ್ತು ಇದೆ, ಅದನ್ನು ಅಳವಡಿಸಿಕೊಳ್ಳಬೇಕು, ಬೆಳಸಿಕೊಳ್ಳಬೇಕು ಎಂದು 1947 ರ ಹಿಂದೆಯೇ ಈ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರು, ಅನೇಕ ವಿದ್ಯುಚ್ಛಕ್ತಿ ಯೋಜನೆಗಳನ್ನು ಮಾಡಿದರು. ಆದರೆ ಸ್ವಾತಂತ್ರ್ಯಾನಂತರದಲ್ಲಿ ನಾವು ಹೆಚ್ಚಾಗಿ ರಾಜಕೀಯ ಕೈಗಾರಿಕೆಯನ್ನು ನೋಡುತ್ತೇವೆಯೇ ಹೊರತು, ವಾಸ್ತವವಾದ ಕೈಗಾರಿಕೆಗಳು ಒಂದೂ ಬರಲಿಲ್ಲ, ಮೊದಲಿದ್ದ ಕೈಗಾರಿಕೆಗಳು ಊರ್ಜಿತವಾಗಲಿಲ್ಲ. ಅವುಗಳಿಗೆ ನಾವು ಹಾಕಿದ ಬಂಡವಾಳದಲ್ಲಿ ಆರು ಪರ್ಸೆಂಟ್ ರಿಟರ್ನ್ ಕೂಡ ಕೊಡುತ್ತಿಲ್ಲ. ಖಾಸಗೀ ಉದ್ಯಮಿಗಳು ಕಾಸ್ಟ್ ಅಕೌಂಟಿಂಗ್ ಇಟ್ಟುಕೊಂಡು, ಪ್ರೈಸ್ ಪಾಲಿಸಿ ಇಟ್ಟುಕೊಂಡು, ಮಾರ್ಕೆಟಿಂಗ್ ಮಾಡತಕ್ಕಂಥ ವಿಷಯದಲ್ಲಿ ಯಾವ ಒಂದು ತತ್ವವನ್ನು ಅನುಸರಿಸುತ್ತಾರೋ ಆ ತತ್ವವನ್ನು ನಾವು ಸಹ ಅನುಸರಿಸಿಕೊಂಡು ಹೋಗಬೇಕು ಎಂದು ರಷ್ಯಾದಂತಹ ಮುಂದುವರೆದ ರಾಷ್ಟ್ರಗಳು ತಿಳಿದಿವೆ. ಲಾಭ ನಷ್ಟವಿಲ್ಲದೆ ಕೈಗಾರಿಕೆಗಳನ್ನು ನಡೆಸಬೇಕು ಸಾಲದ ಹಣದಿಂದ ಕೈಗಾರಿಕೆಗಳನ್ನು ನಡೆಸಬಾರದು, ಬರೀ ಸಂಬಳ ತಿನ್ನುವ ಜನ ಆಗಬಾರದು, ಎಂಬ ತತ್ವವನ್ನು ಆಧುನಿಕ ಜಗತ್ತಿನಲ್ಲಿ ಎಲ್ಲರೂ ಒಪ್ಪುವ ಮಾತಾಗಿದೆ. ಆದರೆ ನಾವು ಒಂದು ಸಂಪ್ರದಾಯದ ಪ್ರಕಾರ ಇದನ್ನು ಬ್ಯುರೋಕ್ರಾಟಗಳಿಗೆ ವಹಿಸಿದ್ದೇವೆ. ಇವತ್ತು ಹೊಸದಾಗಿ ಇವರ ಜೊತೆಗೆ ಟೆಕ್ನೋಕ್ರಾಟಗಳು ಬೇರೆ ಬಂದಿದ್ದಾರೆ. ಅವರ ಮಟ್ಟಿಗೆ ಮಾತನಾಡುವುದಕ್ಕೆ ನನಗೆ ಅಪೇಕ್ಷೆ ಇಲ್ಲ, ಏಕೆಂದರೆ ಅವರು ಟೆಕ್ನಿಕಲ್ ಆಗಿ ಉತ್ತರ ಕೊಡುತ್ತಾರೆ. ಇವರುಗಳು ಯಾವ ರೀತಿ ಈ ಪ್ರಜಾಪ್ರಭುತ್ವದ ಆಶೋತ್ತರಗಳನ್ನು ಮತ್ತು ಕೈಗಾರಿಕಾ ಪ್ರಗತಿಯನ್ನು ಸಾಧಿಸುತ್ತಾರೆ ? ಇವರುಗಳು ಯಾವುದೋ ಒಂದು ದೃಷ್ಟಿಕೋನದಿಂದ ಹೋಗುತ್ತಾರೆ. ಇವರಿಗೆ ಸಮಾಜವಾದದ ಬಗ್ಗೆ ಎಷ್ಟರಮಟ್ಟಿನ ಒಂದು ಆಸಕ್ತಿ, ಎಷ್ಟರಮಟ್ಟಿನ ಒಂದು ತಿಳುವಳಿಕೆ ಬಂದಿದೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕು. ಕೈಗಾರಿಕೆಗಳನ್ನು ನಡೆಸತಕ್ಕಂಥ ಎಷ್ಟೋ ಜನ ದೊಡ್ಡ ದೊಡ್ಡ ಹುದ್ದೇದಾರರು ಜಪಾನ್, ಜರ್ಮನಿಗೆ ಹೋಗಿ ಬಂದಿದ್ದಾರೆ. ಕೆಲವರು ಸರ್ಕಾರದ ಖರ್ಚಿನಲ್ಲಿ ಹೋಗಿ ಬಂದಿದ್ದಾರೆ. ಅವಶ್ಯಕತೆಗಿಂತ ಹೆಚ್ಚು ಸಲ ಹೋಗಿಬಂದವರಿದ್ದಾರೆ. ಜಕೋಸ್ಲೋವೋಕಿಯಾ, ಸ್ವಿಡ್ಜರ್‌ಲೆಂಡ್ ಕಡೆಯಿಂದ ಅನೇಕ ಜನರು ನಮ್ಮ ದೇಶದ ಜನರಿಗೆ ಕೈಗಾರಿಕೆಗಳನ್ನು ಹೇಳಿಕೊಡಲು ಬಂದಿದ್ದಾರೆ. ಭಾಷೆಯು ಒಂದು ತೊಂದರೆಯಿಂದ, ಅವರ ಕೆಲಸವನ್ನು ಅವರು ಮಾಡಿಕೊಂಡು ಹೋಗುತ್ತಾರೆ. ಅವರು ಮಾಡುವುದನ್ನು ನೋಡಿಯೇ ಕಲಿಯಬೇಕು, ಅವರಾಗಿ ಏನನ್ನೂ ಕಲಿಸುವುದಿಲ್ಲ. ಅದೇ ಜಪಾನಿನವರು ತಮ್ಮ ಕೈಗಾರಿಕಾ ಪ್ರಗತಿಯನ್ನು ಯಾವ ರೀತಿ ಸಾಧಿಸಿದರು ಎಂದು ನೋಡಿದರೆ ಅವರು ಬೇರೆ ದೇಶಗಳಿಗೆ ಹೋಗಿ ತಮ್ಮ ಭಾಷೆಯಲ್ಲಿ ತಿಳಿದುಕೊಂಡು ತಾವೇ ಕೈಗಾರಿಕೆಗಳನ್ನು ನೇರವಾಗಿ ನಡೆಸುವುದಕ್ಕೆ ಹೊರಟರು. ಹೆಚ್ಚಾಗಿ ಅವರು ಬರೀ ತಂತ್ರಜ್ಞರ ಆಧಾರದ ಮೇಲೆ ನಿಂತುಕೊಳ್ಳಲಿಲ್ಲ. ರೋಲೆಕ್ಸ್ ವಾಚ್ ಕಂಪನಿ ಮಾಡಿದ ಹಾಗೆ ಎಂದು ನಾನು ಹೇಳುತ್ತಿಲ್ಲ. ಕೈಗಾರಿಕಾ ಅಭಿವೃದ್ಧಿ ಬಗ್ಗೆ ಕೇಳುವಾಗ ಜಪಾನಿನಲ್ಲಿ ಯಾವ ರೀತಿ ನೀತಿ ಅನುಸರಿಸಿದರೋ ಅದೇ ರೀತಿ ನೀತಿಗಳನ್ನು ನಾವು ಅನುಸರಿಸಬೇಕು ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಹೆಚ್ಚು ಜನರು ಇರುವುದರಿಂದ ಆಟೋಮೇಷನ್ ಮಿಷನ್‌ಗಳನ್ನು ಉಪಯೋಗಿಸಿದರೆ ಎಲ್ಲರಿಗೂ ಕೆಲಸ ಸಿಗುವುದಿಲ್ಲ. ಏಕೆಂದರೆ ಎಲ್ಲಾ ಕೆಲಸಗಳನ್ನೂ ಯಂತ್ರಗಳೇ ಮಾಡುತ್ತವೆ. ಇದರಿಂದ ಜನಗಳಿಗೆ ಕೆಲಸ ಸಿಗುವ ಅವಕಾಶವಿರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಆಟೋಮೇಷನ್ ಯಂತ್ರಗಳನ್ನೂ ಉಪಯೋಗಿಸುವುದರಿಂದ ಹೆಚ್ಚು ಜನರಿಗೆ ಕೆಲಸ ಸಿಗುವುದಿಲ್ಲ ಎನ್ನುವ ಶಂಕೆ ಮಾನ್ಯ ಸ್ನೇಹಿತರಿಗೆ ಇದೆ ಎಂದು ಹೇಳುತ್ತಿದ್ದಾರೆ. ನಮಗೆ ಯು. ಎಸ್. ಎಸ್. ಆರ್. ನಿಂದ ಒಂದು ನೋಟ್ ಕಳಿಸಿದ್ದಾರೆ. ಅದನ್ನು ತಾವು ಓದಿದರೆ ಗೊತ್ತಾಗುತ್ತದೆ. ಆಟೋಮೇಷನ್ ಯಂತ್ರಗಳ ಬಳಕೆಯಿಂದ ಕೈಗಾರಿಕಾ ಕ್ಷೇತ್ರದಲ್ಲಿ ಜನರಿಗೆ ಕೆಲಸ ಸಿಗದೆ ಇರುವುದಿಲ್ಲ, ಮೊದಲಿನ ರೀತಿ ಕೆಲಸ ಸಿಕ್ಕೇ ಸಿಗುತ್ತದೆ. ಈ ನೋಟನ್ನು ಯು. ಎಸ್. ಎಸ್. ಆರ್. ನ ಸ್ಟಡೀ ಟೀಮ್‌ನವರು ತಯಾರು ಮಾಡಿದ್ದಾರೆ.

V-31N66
N66.4.6-10
(B) 48386

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಕಾರ್ಮಿಕ ಸಚಿವರಿಗೆ ಬಹಳ ಕೃತಜ್ಞನಾಗಿದ್ದೇನೆ. ಅವರ ನೋಟನ್ನು ನಾನು ಓದುತ್ತೇನೆ. ಪ್ರಪಂಚದಲ್ಲಿ ಅತ್ಯಂತ ಶ್ರೀಮಂತ ದೇಶವಾದ ಅಮೇರಿಕಾದ ಪ್ರೆಸಿಡೆಂಟ್ ಜಾನ್‌ಸನ್ ಆಟೋಮೇಷನ್ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಅವರು ಓದಲಿ.

Sri D. DEVARAJ URS.—This has come from a socialist country; and it is written by a socialist country about its economy.

ಶ್ರೀ ಎಸ್. ಗೋಪಾಲಗೌಡ.—ಬಂಡವಾಳ ಶಾಹಿಯಲ್ಲಿ ಅಗ್ರಗಣ್ಯ ಸ್ಥಾನವಾದ ಅಮೇರಿಕಾ ಪ್ರಸಿಡೆಂಟರು ಆಟೋಮೇಷನ್ ಹಾವಳಿ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡುವುದು ಒಳ್ಳೆಯದು. ನಿರುದ್ಯೋಗಿಗಳು ಬಹಳ ಸಂಖ್ಯೆಯಲ್ಲಿ ಇರುವ ದೇಶದಲ್ಲಿ, ಹೆಚ್ಚು ಕೈಗಾರಿಕೆಗಳು ಸ್ಥಾಪಿತವಾಗಬೇಕು. ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರದವರು ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವ ಕೆಲಸದಲ್ಲಿ ಬಹಳ ಹಿಂದೆ ಬಿದ್ದಿದ್ದಾರೆ ವಿಷಾದಕರವಾದ ರೀತಿಯಲ್ಲಿ ವಿಫಲರಾಗಿದ್ದಾರೆ ಎಂದು ಅವರ ಅಂಕಿಸಂಖ್ಯೆಗಳೇ ಹೇಳುತ್ತವೆ. ಲಕ್ಷಾನುಗಟ್ಟಲೆ ಜನರು ನಿರುದ್ಯೋಗಿಗಳ ದೇಶದಲ್ಲಿ ಅಲೆಯುತ್ತಿದ್ದಾರೆ. ಅವರಿಗೆ ಕೆಲಸ ಕೊಡುವ ರೀತಿಯಲ್ಲಿ ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಆಗಿಲ್ಲ. ಸರ್ಕಾರದ ಮುಂದೆ ಎರಡು ಕಾನ್‌ಫ್ಲಿಕ್ಟ್ ಇದೆ. ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಏನೋ ಮಾಡುವುದಕ್ಕೆ ಹೋಗುತ್ತಾರೆ. ಅವರನ್ನು ಪೂರ್ತಿಯಾಗಿ ತಿಳಿದುಕೊಂಡು, ಅನುಕರಣೆ ಮಾಡದೆ ಬೇಸಿಕ್ ಎಜುಕೇಷನ್ ತಂದರು. ಚರಕದಲ್ಲಿ ನೂಲು ತೆಗೆಯಿರಿ, ಅಂಬರ್ ಚರಕ ಬಂದಿದೆ, ಅದರಲ್ಲಿ ನೂಲು ತೆಗೆಯಿರಿ ಎಂದು ಹೇಳಿ ಖಾದಿಬೋರ್ಡ್ ಮಾಡಿ ಪ್ರಚಾರಕ್ಕಾಗಿ ಅದನ್ನು ಇಟ್ಟುಕೊಂಡರು. ಇವೊತ್ತು ಅದರಲ್ಲಿ ಸಾಕಷ್ಟು ಕೇಂದ್ರ ಹಾಗೂ ರಾಜ್ಯ ಸರ್ಕಾರದವರು ಕೊಟ್ಟಿರತಕ್ಕ ಹಣದಲ್ಲಿ ದುರುಪಯೋಗ ಆಗಿರುವುದು ಎಲ್ಲರ ಗಮನಕ್ಕೆ ಬಂದಿದೆ. ಮಾನ್ಯ ಕೈಗಾರಿಕಾ ಸಚಿವರು ಅವರೇ ಇದನ್ನು ಮನಗಂಡು ಈ ಸಭೆಯ ಮುಂದೆ ರೋಷಾವೇಶದಿಂದ ಹೇಳಿಕೆಯೊಂದನ್ನು ಕೊಟ್ಟರು. ಶಿಕ್ಷೆ ಆಗುತ್ತದೆ, ಬಂಧನ ಆಗುತ್ತದೆ ನಾವೆಲ್ಲಾ ಸರಿಮಾಡುತ್ತೇವೆ ತಪಾಸಣೆ ಆಗುತ್ತದೆ ಎಂದು ಹೇಳಿದರು. ಆಮೇಲೆ ನಮ್ಮ ಊರಿನ ಒಬ್ಬರನ್ನು ಪ್ರಸಿಡೆಂಟ್ ಮಾಡಿ ಕೂಡಿಸಿಬಿಟ್ಟರು. ಈಗ ಹೇಳುತ್ತಾರೆ. "In a couple of months report will be ready" ಎಂದು. ಇನ್ನು ಕೆಲವು ತಿಂಗಳಲ್ಲಿ ಓಟಿನ ಭಿಕ್ಷೆಗೆ ಹೋಗುವ ಪರಿಸ್ಥಿತಿ ಬರುತ್ತದೆ. ಟಿಕೆಟ್ ತೆಗೆದುಕೊಳ್ಳಬೇಕು. ತಾವು ಈ ಕಡೆ ಗಮನ ಕೊಡುತ್ತೀರಿ, ಇಂತಹ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ, ಸಾರ್ವಜನಿಕ ಅಪಾದನೆಗಳು ಬಂದಾಗ ನಮ್ಮ ದೇಶದ ದೃಷ್ಟಿಯಿಂದ ಸಾರ್ವಜನಿಕ ಹಿತದೃಷ್ಟಿಯಿಂದ ವಿಚಾರಣೆ ಮಾಡಬೇಕು. ಶಿಕ್ಷೆ ಕಡಿಮೆ ಕೊಡಿ. ಒಂದೇ ಪೈಸಾ ಜುರ್ಮಾನೆ ಹಾಕಿ. ಮುಂದೆ ಇಂಥಾ ಹುದ್ದೆಗೆ ಅನರ್ಹರು ಎಂದು ಬರೆಸಿಬಿಡಿ. ಹೊಸ ಪ್ರಯೋಗ ಮಾಡಿ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ತರಬೇಕು ಎಂದು ಇದ್ದೇವೆ. ಯಾರೇ ಆಗಲಿ, ನೆಂಟರಾಗಲಿ, ಸಂಬಂಧಿಕರಾಗಲೀ, ಎಷ್ಟೇ ದೊಡ್ಡ ಪ್ರಭಾವಶಾಲಿಗಳಾಗಲಿ, ಹಣವಂತರಾಗಲಿ ದೇಶದಲ್ಲಿರತಕ್ಕ ಕಾನೂನು ಕಾಯಿದೆಗಳನ್ನು ನಿರ್ಲಕ್ಷಿಸಿ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಬಾರದು ಎಂದು ಹೇಳುವ ಸಲುವಾಗಿ ಪದೇ ಪದೇ ಸರ್ಕಾರದವರಿಗೆ ಈ ವಿಚಾರವಾಗಿ ಒತ್ತಾಯವಾಗಿ ಹೇಳುತ್ತೇನೆ. ಸರ್ಕಾರದವರು ನ್ಯಾಯ ಪರಿಪಾಲನೆ ಮಾಡತಕ್ಕ ಮನೋಭಾವನೆ ತೋರಿಸುತ್ತಾ ಇಲ್ಲ. ಅದಕ್ಕಾಗಿ ನಾನು ವಿಷಾದ ಪಡಬೇಕಾಗುತ್ತದೆ. ರಾಜ್ಯದಲ್ಲಿ ಕೈಗಾರಿಕಾ ಪ್ರಗತಿಯನ್ನು ನಾವು ಬೆಳೆಸಬೇಕಾದರೆ, ನಮ್ಮಲ್ಲಿ ಇರತಕ್ಕ ಪ್ರಾಕೃತಿಕ ಸಂಪತ್ತನ್ನು ಹಾಗೂ ಒಂದು ಮಾನವ ಶಕ್ತಿ ಏನು ಇದೆ ಅದನ್ನು ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಹೆಚ್ಚು ಬಂಡವಾಳವನ್ನು ನಾವು ಹಾಕುವುದಕ್ಕೆ ಶಕ್ತಿ ಇಲ್ಲ ಎನ್ನುವ ಕಾರಣಕ್ಕಾಗಿ ಮುಖ್ಯ ಮುಖ್ಯವಾದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಬೇರೆ ಬೇರೆ ಬಂಡವಾಳಶಾಹೀ ಜನಕ್ಕೆ ಅವಕಾಶ ಕೊಡುತ್ತಿದ್ದೀರಿ. ಆದರೆ ಈಗ ನೀವು ಆ ರೀತಿ ಸವಲತ್ತುಗಳನ್ನೂ ವಿದ್ಯುಚ್ಛಕ್ತಿಯನ್ನೂ ಕೊಡುತ್ತೇವೆ, ಭೂಮಿ ಕೊಡುತ್ತೇವೆ, ನೀರು ಕೊಡುತ್ತೇವೆ ಎಂದು ಹೇಳಿಯಾದರೂ ಹೊರಗಿನಿಂದ ಕೈಗಾರಿಕೋದ್ಯಮಿಗಳನ್ನು ತಂದು ಈ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕ ಹವ್ಯಾಸವನ್ನು ಕೂಡ ಮಾಡುತ್ತಿಲ್ಲ. ರಾಜ್ಯದ ಪೊಟೆನ್‌ಷಿಯಲ್ ಏನು ಇದೆ ಕೈಗಾರಿಕೆಗಳಿಗೆ ಇರತಕ್ಕ ಪೊಟೆನ್‌ಷಿಯಲ್ ಏನು ಇಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ಒಟ್ಟು ದೇಶದ ಹಿತ ಹೇಗೆ ಸಾಧನೆ ಆಗುತ್ತದೆ; ಇಲ್ಲಿ ಎಷ್ಟು ಹಣವನ್ನು ಇನ್‌ವೆಸ್ಟ್ ಮಾಡಬೇಕು, ಈ ವಿಷಯವನ್ನು ಕೇಂದ್ರ ಸರ್ಕಾರದವರಿಗೆ ಮತ್ತು ಬೇರೆ ದೇಶದ ಸರ್ಕಾರಗಳಿಗೆ ತಾವು ಮನದಟ್ಟು ಮಾಡಿಕೊಟ್ಟು ನಮ್ಮಲ್ಲಿರತಕ್ಕ ಸಾಧನಸಂಪತ್ತುಗಳಿಂದ ಏನೇನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೋ ಅದರ ಬಗ್ಗೆ ಒಂದು ಬ್ಲೂ ಪ್ರಿಂಟ್ ತಯಾರು ಮಾಡಬೇಕು. ಹಿಂದೆ ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿಯವರದಿಗೆ ಶ್ರೀ ಬೋರಾಪಂತ್ ಅವರು ಅನೆಕ್ಸ್‌ಚರ್ ಕೊಟ್ಟಿದ್ದಾರೆ. ಅಂತಹವರ

(ಶ್ರೀ ಎಸ್. ಗೋಪಾಲ ಗೌಡ)

ಮಾತುಗಳನ್ನು ಕೈಗಾರಿಕೆಗಳ ಮ್ಯಾನೇಜ್‌ಮೆಂಟಿನಲ್ಲಿ ಇರತಕ್ಕವರು ಎಲ್ಲರೂ ಪರಿಶೀಲನೆ ಮಾಡಿ ಅವರಿಗೆ ಹೆಚ್ಚು ಅಧಿಕಾರ ಕೊಟ್ಟು, ಒಳ್ಳೆಯ ರೀತಿಯಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಪಡಿಸಿದ ಈ ಬೇಡಿಕೆಯನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೇ, ಸಭೆಯ ಮುಂದಿರತಕ್ಕ ಬೇಡಿಕೆಗಳನ್ನು ವಿರೋಧ ಮಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಾಗುತ್ತಾ ಇದ್ದು ನೈಸರ್ಗಿಕ ಖನಿಜ ಸಂಪತ್ತು ಸ್ವಲ್ಪ ಖರ್ಚಿನಲ್ಲಿ ದೊರಕಿದರೂ ಸಹ ಕೈಗಾರಿಕಾ ಅಭಿವೃದ್ಧಿ ಆಗದೇ ಇರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಪ್ರಗತಿ ಬಹಳ ನಿಧಾನವಾಗಿ ಆಗುತ್ತಾ ಇರುವುದು ಬಹಳ ವ್ಯಸನಕರವಾದ ಸಂಗತಿ ಎಂದು ನಾನಾದರೂ ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದೆರಡು ಸಲಹೆಗಳನ್ನು ನಾನು ಮಾಡಬಯಸುತ್ತೇವೆ. ನಮ್ಮ ರಾಜ್ಯದಲ್ಲಿ ಹೊಸದಾಗಿ ಯಾವುದೇ ದೊಡ್ಡದಾದಂಥ ಫ್ಯಾಕ್ಟರಿಗಳನ್ನು ತೆಗೆಯದೇ ಇದ್ದರೂ ಇದ್ದಂಥ ಪೋರ್ಸಿಲೈನ್ ಫ್ಯಾಕ್ಟರಿ, ಭದ್ರಾವತಿ ಕಬ್ಬಿಣ ಕಾರ್ಖಾನೆ ಮುಂತಾದುವನ್ನು ಬಡಾಯಿಸಿ ಅದರ ಮುಖಾಂತರ ಹೆಚ್ಚಿನ ಉತ್ಪಾದನೆ ಮಾಡತಕ್ಕದ್ದು ಬಹಳ ಶ್ಲಾಘನೀಯವಾದುದು. ಅದೇ ರೀತಿ ತಾವು ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಕೂಡ ಸಾಕಾದಷ್ಟು ತೆರೆದಿದ್ದೀರಿ. ನಾನಾದರೂ ಹೇಳುತ್ತೇನೆ, ರಾಜ್ಯದಲ್ಲಿ ಮುಖ್ಯವಾಗಿ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚಿನ ಆದ್ಯತೆ ಸಿಕ್ಕುತ್ತಾ ಬಂದಿದೆ. ರೈತರೂ ಕೂಡ ಹೆಚ್ಚಿನ ರೀತಿಯಲ್ಲಿ ಕಬ್ಬನ್ನು ಬೆಳೆದು ಅದರ ಮುಖಾಂತರ ಹೆಚ್ಚಿನ ಉತ್ಪತ್ತಿ ಮಾಡುವುದಕ್ಕೆ ಇವೊತ್ತಿನ ದಿವಸ ಮುಂದೆ ಬಂದಿದ್ದಾರೆ. ಅದಕ್ಕಾಗಿ ಧಾರವಾಡ ಹಾನಗಲ್‌ನಲ್ಲಿ 2-3 ಹೆಚ್ಚಿಗೆ ಸಕ್ಕರೆ ಕಾರ್ಖಾನೆಯನ್ನು ತೆರೆಯುವ ಸಲುವಾಗಿ ಅದಕ್ಕೆ ಲೈಸನ್ಸ್ ಕೂಡ ದೊರಕಿದೆ. ಶೀಘ್ರದಲ್ಲೇ ಅದನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಇಲ್ಲಿ ಹತ್ತಾರು ಸಾವಿರ ಎಕರೆ ಕಬ್ಬು ಬೆಳೆದುಕೊಂಡು ಬಂದಿದ್ದಾರೆ. ಆದರೆ ಕಾರ್ಖಾನೆ ಇಲ್ಲದೆ ಬೆಲ್ಲ ತಯಾರು ಮಾಡುತ್ತಿದ್ದಾರೆ. ಅದಕ್ಕೋಸ್ಕರ ಸಕ್ಕರೆ ಕಾರ್ಖಾನೆಗೆ ಆದ್ಯತೆ ಕೊಟ್ಟು ಅದನ್ನು ಅಲ್ಲಿ ತೆರೆಯಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಷಯ ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಇರತಕ್ಕ ಕಾರ್ಖಾನೆಗಳಲ್ಲಿ ಆದಷ್ಟು ಮಟ್ಟಿಗೆ ಮೈಸೂರಿನವರಲ್ಲದೇ ಇರತಕ್ಕವರನ್ನು ತಂದಿದ್ದಾರೆ. ಇಂಜನೀಯರಿಂದ ಹಿಡಿದು ಸಣ್ಣ ನೌಕರರವರೆಗೆ ಕನ್ನಡಿಗರಿಗೆ ಬಹಳ ಕಡಿಮೆ ರೀತಿಯಲ್ಲಿ ಪ್ರಾಶಸ್ತ್ಯ ಸಿಕ್ಕುತ್ತಿದೆ. ಹೆಚ್ಚಿನದಾಗಿ ತೆಲುಗರು ಮತ್ತು ತಮಿಳರಿಗೆ ಪ್ರಾಶಸ್ತ್ಯ ಕೊಟ್ಟು ನಮ್ಮ ರಾಜ್ಯದಲ್ಲಿ ನಮ್ಮವರಿಗೆ ಪ್ರಾಶಸ್ತ್ಯವನ್ನು ಕೊಡದೆ ನಿರುದ್ಯೋಗ ತನದಿಂದ ತಿರುಗಾಡುವುದಕ್ಕೆ ಒಂದು ಆಸ್ಪದ ಕೊಡುತ್ತಾ ಇದ್ದಾರೆ. ಅದಕ್ಕಾಗಿ ಸರ್ಕಾರದವರು ಇನ್ನು ಮುಂದೆ ತೆರೆಯತಕ್ಕ ಫ್ಯಾಕ್ಟರಿಗಳಲ್ಲಿ ಮತ್ತು ಈಗ ಖಾಲಿ ಬಿದ್ದ ಸ್ಥಾನಗಳಿಗೆ ಮೊಟ್ಟ ಮೊದಲನೆಯದಾಗಿ ನಮ್ಮ ರಾಜ್ಯದವರಿಗೆ ಪ್ರಾಶಸ್ತ್ಯ ಕೊಟ್ಟು ಆಮೇಲೆ ಉಳಿದವರನ್ನು ತೆಗೆದು ಕೊಳ್ಳಲು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಡಸ್ಟ್ರಿಯಲ್ ಎಸ್ಟೇಟ್ ಬಗ್ಗೆ ಹೇಳಬೇಕು ಎಂದರೆ, ತಾವು ಇವೊತ್ತಿನ ದಿವಸ ಬೇಕಾದಷ್ಟು ಷೆಡ್‌ಗಳನ್ನು ಹಾಕುತ್ತಾ ಇದ್ದೀರಿ. ಹೆಚ್ಚು ಹೆಚ್ಚಾಗಿ ಇಂಡಸ್ಟ್ರಿಯಲ್ ಎಸ್ಟೇಟ್ಸ್ ತೆರೆಯಬೇಕು ಅದರ ಮುಖಾಂತರ ಔದ್ಯೋಗಿಕ ಪ್ರಗತಿ ನಡೆಸಬೇಕು ಎಂದು ಎಸ್ಟೇಟುಗಳಲ್ಲಿ ಷೆಡ್ಡುಗಳನ್ನು ನಿರ್ಮಾಣ ಮಾಡಿದ್ದೀರಿ. ಕೆಲವು ಇಂಡಸ್ಟ್ರಿಯಲ್ ಎಸ್ಟೇಟ್ಸ್ ನೋಡಿದಾಗ, ಅಲ್ಲಿ ಕೇವಲ ನಟನೆಗಾಗಿ ಮೆಷಿನರಿಗಳಿದ್ದು ಅವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡದೆ ದುರುಪಯೋಗ ಮಾಡುವ ಸಂಗತಿ ಇದೆ. ಈ ಇಲಾಖೆಯಲ್ಲಿ ಸಾಕಾದಷ್ಟು ಸಿಬ್ಬಂದಿ ಇದೆ. ಸಿಬ್ಬಂದಿ ಬಗ್ಗೆ ಬೇರೆ ರಾಜ್ಯವನ್ನು ಹೋಲಿಸಿ ನೋಡಿದರೆ, ನಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ದೊಡ್ಡದಾಗಿ ಇದೆ. ಪ್ರಾಮುಖ್ಯವಾಗಿ ಹೇಳಬೇಕು ಎಂದರೆ, ಈ ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದಷ್ಟು ಐ. ಎ. ಎಸ್. ಆಫೀಸರ್ಸ್ ಬೇರೆ ಯಾವ ಡಿಪಾರ್ಟ್‌ಮೆಂಟಿನಲ್ಲಿಯೂ ಇಲ್ಲ. ಒಬ್ಬ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ಸ್, ಅದೇ ರೀತಿ ಜಾಯಿಂಟ್ ಡೈರೆಕ್ಟರ್, ಅಸಿಸ್ಟೆಂಟ್ ಡೈರೆಕ್ಟರ್ಸ್ ಮಿತಿಮೀರಿ ಸಂಖ್ಯೆಯಲ್ಲಿ ಇದ್ದು ಕೆಲಸ ಕಡಿಮೆ ಇರತಕ್ಕ ಪರಿಸ್ಥಿತಿ ಇಂದು ಕಾಣುತ್ತಿದೆ.

12-00 NOON.

ನಾನಾದರೂ ಹೇಳುತ್ತೇನೆ ಇದನ್ನು ಸರಿಯಾದ ರೀತಿಯಲ್ಲಿ, ಅಚ್ಚುಕಟ್ಟಾಗಿ ಮಾಡದಿದ್ದರೆ ಸಾಧ್ಯವಿಲ್ಲ. ಮತ್ತು ಈಗ ಜಾಸ್ತಿಯಾಗಿದ್ದಂತಹ ಐ.ಎ.ಎಸ್. ಆಫೀಸರ್‌ಗಳನ್ನು ಕಡಿಮೆ ಮಾಡಬೇಕು.

ಇಂಡಸ್ಟ್ರಿಯಲ್ ಎಸ್ಟೇಟ್ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಇವತ್ತು ಅಲ್ಲಿ ಬಾಡಿಗೆಗಳನ್ನು ವಸೂಲು ಮಾಡುವುದೇ ವಿನಾ ಅಲ್ಲಿ ಏನು ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ? 7-12-15 ಸ್ಕ್ವೇರ್ ಯಾರ್ಡಿಗೆ ಬಾಡಿಗೆ ವಸೂಲು ಮಾಡುತ್ತಿದ್ದಾರೆಯೇ ಹೊರತು ಅಲ್ಲಿ ಸೌಕರ್ಯಗಳೇನನ್ನೂ ಒದಗಿಸಿಲ್ಲ. ಅದರಿಂದ ಅಲ್ಲಿ ಬೇಕಾದ ಸೌಕರ್ಯಗಳನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಯಾವ ಕೈಗಾರಿಕೆಗಳಿಗೂ ಸವಲತ್ತುಗಳನ್ನು ಒದಗಿಸದೆ ಹೋದರೆ ಅದು ಅಭಿವೃದ್ಧಿಗೊಳ್ಳಲಾರದು ಎಂದು ನಾನಾದರೂ ಹೇಳುತ್ತೇನೆ.

ಇನ್ನು ಖೋಟಾ ಪದ್ಧತಿಯ ವಿಚಾರ ಹೇಳುವುದಾದರೆ, ಇವತ್ತು ನಮ್ಮ ರಾಜ್ಯಕ್ಕೆ ಸೆಪ್ಟಂಬರ್ 1964ರಲ್ಲಿ ದೊರಕಿದಂತಹ 400 ಟನ್ ತಾಮ್ರವನ್ನು ಮತ್ತು ಅಕ್ಟೋಬರ್ ಮಾರ್ಚ್‌ನಲ್ಲಿ ದೊರೆತ 200 ಟನ್ ತಾಮ್ರವನ್ನು ಸರಿಯಾದ ಸಮಯಕ್ಕೆ ಲಿಫ್ಟ್ ಮಾಡದಿರುವುದರಿಂದ ಲ್ಯಾಪ್ಸ್ ಆಗಿದೆ. ಇದು ಈ ರೀತಿಯಾಗಲು ಕಾರಣರು ಯಾರು? ಅವರ ಮೇಲೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ಎಂದು ನಾನಾದರೂ ಕೇಳುತ್ತೇನೆ. ಅದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ ಈ ರೀತಿ ಒಟ್ಟು 600 ಟನ್ ತಾಮ್ರ ಲ್ಯಾಪ್ಸ್ ಆಗಿದೆ. ಆದರೆ ಇದು ಸರಿಯಾದ ಕಾಲಕ್ಕೆ ಕ್ರಮ ತೆಗೆದುಕೊಳ್ಳದ ಕಾರಣ ಈ ರೀತಿ ಯಾಯಿತು. ಬರೇ ಕಾರ್ಪೊರೇಶನ್ ಇದೆ, ಸೊಸೈಟಿಗಳು ಇವೆ ಎಂಬ ಭಾವನೆ ಇಟ್ಟುಕೊಂಡಿದ್ದಾರೆಯೇ ಹೊರತು ಅದನ್ನು ಸರಿಯಾಗಿ ಕಾರ್ಯ ನಡೆಸುವಾಗ ಮಾಡುತ್ತಾ ಇಲ್ಲ.

ಇನ್ನೊಂದು ವಿಚಾರ. ಈಗ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಅಡ್ಮಿನಿಸ್ಟ್ರೇಟಿವ್ ಆಫೀಸರ್ ಎಂದು ತಾವು ನೇಮಕ ಮಾಡಿದ್ದೀರಿ. ಆದರೆ ಇವರ ಕರ್ತವ್ಯಗಳೇನು, ಎಂಬುದು ಯಾರಿಗೂ ಗೊತ್ತಿಲ್ಲ. ಪ್ರತಿ ಜಿಲ್ಲೆಯಲ್ಲಿ ಒಬ್ಬ ಅಸಿಸ್ಟೆಂಟ್ ಡೈರೆಕ್ಟರಿದ್ದಾರೆ. ಎನ್.ಇ.ಎಸ್. ಆಫೀಸರ್ ಇದ್ದಾರೆ. ಇವರ ಡ್ಯೂಟಿ ಏನು? ಏನೊಂದು ವಿಷಯವನ್ನು ಕೂಡ ಇವರು ಅಸಿಸ್ಟೆಂಟ್ ಡೈರೆಕ್ಟರ ಮೂಲಕ ಕಳಿಸ ಬೇಕು. ಅವರಿಗೆ ಬರೇ ರೆಂಟ್ ವಸೂಲು ಮಾಡತಕ್ಕ ಕೆಲಸ ಎಂದು ಹೇಳುತ್ತಾರೆ. ಇದಕ್ಕೋಸ್ಕರ ಈ ಸಿಬ್ಬಂದಿ ವೆಚ್ಚಗಳನ್ನು ಎಷ್ಟು ಮಾಡುತ್ತಾರೆ ಎಂಬುದನ್ನು ಇಲ್ಲಿ ಆಲೋಚನೆ ಮಾಡುವುದು ಸೂಕ್ತ ಎಂದು ನಾನಾದರೂ ಇಲ್ಲಿ ತಿಳಿಸುತ್ತೇನೆ; ಇದರಿಂದಾಗಿ ನನ್ನ ಸಲಹೆ ಏನೆಂದರೆ, ಈ ಅಡ್ಮಿನಿಸ್ಟ್ರೇಟಿವ್ ಆಫೀಸರ್ಸ್ ಏನಿದ್ದಾರೆ ಅವರನ್ನೆಲ್ಲಾ ತೆಗೆದುಹಾಕಬೇಕು. ಮತ್ತು ಇಂಡಸ್ಟ್ರಿಯಲ್ ಇಲಾಖೆಯಲ್ಲಿ ಈ ಅನ್ಯಾವಶ್ಯಕ ವೆಚ್ಚಗಳನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ಈ ಇಲಾಖೆಯಲ್ಲಿ ಅನೇಕ ಬೋರ್ಡುಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಇದರಿಂದ ಏನಾಗಿದೆ ಎಂದರೆ ಅವರು ಬರೇ ಮೀಟಿಂಗ್‌ಗಳನ್ನು ಮಾಡಿಕೊಂಡು ದುಡ್ಡು ಖರ್ಚು ಮಾಡುತ್ತಾರೆಯೇ ಹೊರತು ಏನೂ ಇದರಿಂದ ಪ್ರಯೋಜನವಾಗುತ್ತಿಲ್ಲ. ಇವತ್ತು ಮೈಸೂರು ಖಾದಿ ಇಂಡಸ್ಟ್ರಿಯಲ್ ಬೋರ್ಡು, ಇದಕ್ಕೆ ಪ್ರತಿ ವರ್ಷ 10 ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಆದರೆ ಇಲ್ಲಿ ಆಗತಕ್ಕ ವ್ಯವಹಾರ ನೋಡಿದರೆ, ಇಲ್ಲಿ ಆಗುವಂತಹ ದುರುಪಯೋಗಗಳನ್ನು ನೋಡಿದರೆ, ಇದು ಖಾದಿಯ ಪವಿತ್ರತೆಯನ್ನು ಕಡಿಮೆ ಮಾಡುತ್ತದೆ. ಈ ಬೋರ್ಡಿಗೆ ಏಕೆ ಈ ತರಹ ಹಣ ಕೊಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ಮತ್ತು ಹಿಂದೆ ನಡೆದಂತಹ ದುರುಪಯೋಗಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡು ವಾಗ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅವರನ್ನು ಶಿಕ್ಷಿಸುತ್ತೇವೆ ಎಂದು ಹೇಳಿದ್ದರು. ನಾನಾದರೂ ಕೇಳುತ್ತೇನೆ ನಾಲ್ಕು ವರ್ಷವಾದರೂ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಾವು ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿಯಾಗಿ ಕಾಯರ್ ಬೋರ್ಡ್, ಇಂಡಸ್ಟ್ರೀಸ್ ಅಡ್ವೈಸರಿ ಬೋರ್ಡು ಹ್ಯಾಂಡಿಕ್ರಾಫ್ಟ್ ಅಡ್ವೈಸರಿ ಬೋರ್ಡ್, ಈ ರೀತಿಯಾಗಿ ಸಾಕಷ್ಟು ಬೋರ್ಡುಗಳನ್ನು ನಿರ್ಮಾಣಮಾಡಿಕೊಂಡಿದ್ದಾರೆ. ನಾನಾದರೂ ಹೇಳುತ್ತೇನೆ, ನಮ್ಮ ಇಂಡಸ್ಟ್ರಿಯಲ್ ತಜ್ಞರಿರುವಾಗ ಈ ಬೋರ್ಡುಗಳೆಲ್ಲಾ ಅನಾವಶ್ಯಕ ಮತ್ತು ಈ ಬೋರ್ಡುಗಳನ್ನು ಎಲ್ಲಾ ತೆಗೆದುಹಾಕಿದರೆ, ಅದರಿಂದ ಸುಮಾರು 15-16 ಲಕ್ಷ ರೂಪಾಯಿ ಉಳಿಯುತ್ತದೆ. ಅದನ್ನು ಬೇರೆ ಅಗತ್ಯವಿದ್ದ ಕಡೆ ಉಪಯೋಗಿಸಬಹುದು. ಇದನ್ನೆಲ್ಲಾ ಸರಿಪಡಿಸಬೇಕೆಂದು ನಾನಾದರೂ ಸಲಹೆ ಮಾಡುತ್ತೇನೆ.

ಇನ್ನು ಎನ್.ಇ.ಎಸ್. ಮತ್ತು ಸಿ.ಡಿ. ಬ್ಲಾಕ್‌ಗಳಿಗೆ ಲಕ್ಷಗಟ್ಟಲೆ ಹಣವನ್ನು ಖರ್ಚುಮಾಡುತ್ತಿದ್ದಾರೆ. ಈಗ ಇಂಡಸ್ಟ್ರಿಯಲ್ ಸೆಂಟರ್ ಇದೆ. ಇವರ ಕರ್ತವ್ಯವೇನು? ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಈ ಎಕ್ಸ್‌ಟೆನ್‌ಶನ್ ಆಫೀಸರ್ಸ್ ಇದ್ದಾರೆ. ಇದು ಕೂಡ ಅನ್ಯಾವಶ್ಯಕ ವೆಂದು ನಾನು ಹೇಳುತ್ತೇನೆ. ಇದಕ್ಕೆ ನೀವು ಎಲ್ಲಾ ಬ್ಲಾಕುಗಳ ಆಫೀಸರ್ಸ್‌ಗಳನ್ನು ವಾಪಸ್ಸು ತಮ್ಮ ಇಲಾಖೆಗೆ ಕರೆಸಿಕೊಂಡು, ಅಲ್ಲಿಯ ಕೆಲಸವನ್ನು ಇಲಾಖೆಯಿಂದಲೇ ಬೇರೆ ಯೋಗ್ಯವಾದ ರೀತಿಯಲ್ಲಿ ನಡೆಸಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಸಿದ್ದಯ್ಯ ಕಾಶೀಮಠ್)

ಈಗ ಹ್ಯಾಂಡ್‌ಲೂಮ್ ಇಂಡಸ್ಟ್ರೀಸ್ ಬಗ್ಗೆ ತಾವು ಪವರ್ ಲೂಮ್ಸ್‌ಗಳನ್ನು ಒದಗಿಸುತ್ತಿದ್ದೀರಿ. ನಮ್ಮಲ್ಲಿ ಒಂದನೇ ಪಂಚವಾರ್ಷಿಕ ಯೋಜನೆಯಲ್ಲಿ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಾವಿರಾರು ಪವರ್ ಲೂಮ್‌ಗಳನ್ನು ಕೊಟ್ಟಿದ್ದೀರಿ. ಈ ಪವರ್ ಲೂಮ್‌ಗಳಿಂದ ಇವತ್ತು ಎಷ್ಟರ ಮಟ್ಟಿಗೆ ಕೆಲಸವಾಗುತ್ತದೆ, ಅದು ಯಾವ ಸ್ಥಿತಿಯಲ್ಲಿದೆ ಎಂಬುದಕ್ಕೆ ಏನಾದರೂ ನಿಮಗೆ ಅಧಿಕಾರಿಗಳಿಂದ ವರದಿ ಬಂದಿದೆಯೋ ಎಂದು ನಾನಾದರೂ ಕೇಳುತ್ತೇನೆ. ಉದಾಹರಣೆಗೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಸ್ಥಾಪಿಸಿರತಕ್ಕ ಎಷ್ಟೋ ಪವರ್ ಲೂಮ್‌ಗಳಿಗೆ ತುಕ್ಕು ಹಿಡಿದಿರತಕ್ಕ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ನೀವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ! ಅಧಿಕಾರಿಗಳಿಂದ ಏನು ವರದಿಯನ್ನು ತರಿಸಿಕೊಂಡಿದ್ದೀರಿ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಕೆಲವು ಸೊಸೈಟಿಗಳಿಗೆ ತಾವು ಒದಗಿಸಿದ್ದೀರಿ. ಆ ಸೊಸೈಟಿಗಳವರು ಅದನ್ನು ಮಾರಿ ದುರುಪಯೋಗಪಡಿಸಿಕೊಂಡಿದ್ದಾರೆ. ಅದು ಸರಿಯಾಗಿ ವಿತರಣೆಯಾಗುತ್ತಿಲ್ಲ. ಇವತ್ತಿನದಿವಸ ವೀವರ್ಸ್‌ಗೆ ಕೊಟ್ಟದ್ದು ಅನುಕೂಲ; ಅವರು ಬಡವರು, ಅವರಿಗೆ ಕೊಡತಕ್ಕದ್ದು ಸೂಕ್ತ. ಆದರೆ ಈ ಪವರ್ ಲೂಮ್ಸ್‌ಗಳು ಎಲ್ಲೆಲ್ಲಿ ಸರಿಯಾಗಿ ಹಂಚಿಕೆಯಾಗುವುದಿಲ್ಲವೋ ಅವನ್ನು ಸರಿಪಡಿಸುವುದಕ್ಕೋಸ್ಕರ ಒಂದು ಸ್ಪೆಶಲ್ ಕಮಿಟಿ ನೇಮಿಸಿ, ಇದರ ಇವಾಲ್ಯುವೇಶನ್ ತೆಗೆದು, ಇದಕ್ಕೆ ಯಾರು ಜವಾಬ್ದಾರರು ಅವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನಾದರೂ ಸಲಹೆ ಮಾಡುತ್ತೇನೆ.

ಇನ್ನು ಖನಿಜ ಸಂಪತ್ತಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕಪತಗುಡ್ಡೆಯಲ್ಲಿ ನಾನಾ ತರವಾದ ಖನಿಜಗಳು ಸಿಕ್ಕುತ್ತವೆ. ಅಲ್ಲಿ ಬಂಗಾರ ಅದುರು ಕೂಡ ಸಿಕ್ಕುತ್ತದೆ. ಅದನ್ನು ಡೆಪ್ಯೂಟಿ ಮಿನಿಸ್ಟರು ನೋಡಿದ್ದಾರೆ. ಆದರೆ ಪರ್‌ಸೆಂಟೇಜ್ ಬಹಳ ಕಡಿಮೆ ಬರುತ್ತದೆ ಎಂದು ಹೇಳಿದರು. ಅಲ್ಲಿ ಇದಲ್ಲದೆ ಕಬ್ಬಿಣದ ಅದುರು, ಲೈಮ್ಸ್ ಮೊದಲಾದುವುಗಳು ಸಿಗುತ್ತದೆ ಎಂಬುದನ್ನೆಲ್ಲಾ ಇನ್ನಷ್ಟು ತನಿಖೆ ನಡೆಸಿ ಈ ಖನಿಜ ಸಂಪತ್ತನ್ನು ಹೆಚ್ಚಾಗಿ ಉಪಯೋಗಿಸಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಚಾರವೆಂದರೆ, ಇಂದು ನಮ್ಮ ರಾಜ್ಯದಲ್ಲಿರತಕ್ಕಂತಹ ಗುಡಿ ಗುಂಡಾರಗಳ ಕೆತ್ತನೆ ಕೆಲಸದ ಮೂರ್ತಿಗಳು ಇತ್ಯಾದಿ ಇಂದು ನಾಶವಾಗುತ್ತಾ ಹೋಗುತ್ತದೆ. ಇದಕ್ಕೆ ಸರಿಯಾದ ಆಸಕ್ತಿಯನ್ನು ಸಂಬಂಧಪಟ್ಟ ಇಲಾಖೆಯವರು ಆಸಕ್ತಿ ವಹಿಸುತ್ತಿಲ್ಲ. ಇದರಿಂದಾಗಿ ನಮ್ಮ ಹಳೆಯ ಕಾಲದ ಕೆತ್ತನೆ ಮೂರ್ತಿಗಳನ್ನೆಲ್ಲಾ ತಂದು ಒಂದು ಮ್ಯೂಸಿಯಂನಲ್ಲಿಟ್ಟು ಅದರ ಉಪಯೋಗವನ್ನು ಜನರಿಗೆ ಮಾಡಿಕೊಡಬೇಕೆಂದು ಈ ಸಂಧರ್ಭದಲ್ಲಿ ಹೇಳಬಯಸುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಲಕ್ಷ್ಮೇಶ್ವರ ದೊಡ್ಡ ಪಟ್ಟಣವಾಗಿದ್ದು, ಅಲ್ಲಿ 20–30 ಸಾವಿರ ಜನ ಸಂಖ್ಯೆ ಇದೆ. ಅಲ್ಲಿ ಹೆಚ್ಚಿನ ವಿದ್ಯುತ್ ಪೂರೈಕೆ ಇದೆ, ಹೆಚ್ಚಿನ ಖನಿಜ ಸಂಪತ್ತೂ ಇದೆ. ನಾಲ್ಕನೆಯ ಯೋಜನೆಯಲ್ಲಿ ಆದರೂ ಕೂಡ ಒಂದು ಕೈಗಾರಿಕಾ ಎಸ್ಟೇಟನ್ನು ಲಕ್ಷ್ಮೇಶ್ವರಕ್ಕೆ ಕೊಡಬೇಕೆಂದು ಬಿನ್ನೈಸಿಕೊಂಡು ಅದಷ್ಟು ಮಟ್ಟಿಗೂ ಕೂಡ ರಾಜ್ಯದಲ್ಲಿ ಯಾವುದೇ ತರಹ ಸ್ಥಳವಿರಲಿ ಅಲ್ಲಿ ವಿದ್ಯುತ್ತನ್ನು ಹೆಚ್ಚು ಪೂರವಣಿ ಮಾಡಿ, ಖನಿಜ ಸಂಪತ್ತನ್ನು ಉಪಯೋಗಪಡಿಸಿಕೊಳ್ಳುವಂತೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಬೇಕು ಎಂದು ಬಿನ್ನೈಸಿಕೊಳ್ಳುತ್ತೇನೆ.

ಕೈಗಾರಿಕೆಗಳಲ್ಲಿ ತರಪೇತಿ ಪಡೆಯುವ ಆರ್ಟಿಸಾನ್ಸ್‌ಗೆ ತಿಂಗಳಿಗೆ ಕೇವಲ 40 ರೂಪಾಯಿ ಸ್ಟೈಪೆಂಡ್ ಕೊಡುತ್ತಿರುವುದು ಸಾಲದು. ಅಲ್ಲಿ ಕಲಿಯತಕ್ಕ ಅಕ್ಕಸಾಲಿಗರು, ಬಡಗಿಗಳು ಇವರುಗಳಿಗೆ ಕೊಡುವ 40 ರೂಪಾಯಿನಲ್ಲಿ ಅವರ ಹೊಟ್ಟೆ ತುಂಬದೆ ಅವರು ಅರ್ಧದಲ್ಲಿಯೇ ಕಲಿಯುವುದನ್ನು ಬಿಟ್ಟು ಬರುತ್ತಿದ್ದಾರೆ. ಸರ್ಕಾರದವರು ಅದಷ್ಟು ಮಟ್ಟಿಗೂ ಇವರಿಗೆ ಕೊಡುವ ಸ್ಟೈಪೆಂಡನ್ನು ಹೆಚ್ಚು ಮಾಡಬೇಕೆಂದು ಸಲಹೆ ಮಾಡುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಮೈಸೂರು ಸಂಸ್ಥಾನದ ಕೈಗಾರಿಕೆ ಯಾವ ರೀತಿಯಲ್ಲಿ ಬೆಳೆದಿದೆ ಎಂದು ಯೋಚನೆ ಮಾಡಿದರೆ ಹಣಕಾಸಿನ ಸಚಿವರು ಹೇಳಿದ್ದಾರೆ. ಕೈಗಾರಿಕಾ ಕ್ಷೇತ್ರದಲ್ಲಿ ಮೈಸೂರಿನ ಚಿತ್ರ ಅಳಿಸಿಬಿಟ್ಟಿದೆ ಎಂದು. ಆದರೆ ಕೈಗಾರಿಕಾ ಸಚಿವರು ಹೇಳುತ್ತಾರೆ, ನಾನು ಎಲ್ಲ ರಾಜ್ಯಗಳಿಗಿಂತಲೂ ಹೆಚ್ಚಿನ ಸಾಧನೆಯನ್ನು ಮಾಡಿದ್ದೇನೆ ಎಂದು. ಮಂತ್ರಿಮಂಡಲದಲ್ಲಿರತಕ್ಕ ಹಣಕಾಸಿನ ಸಚಿವರು ಮತ್ತು ಕೈಗಾರಿಕಾ ಸಚಿವರು ಹೇಳಿರುವ ಎರಡು ಹೇಳಿಕೆಗಳ ಮೇಲೆ ಮೈಸೂರು ರಾಜ್ಯ ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿದಿಯೇ ಎಂದು ಲೆಕ್ಕ ಹಾಕಿದರೆ ಇವರಿಬ್ಬರ ವ್ಯಾಖ್ಯದಲ್ಲಿ ಮೈಸೂರು ಕೈಗಾರಿಕಾ ಕ್ಷೇತ್ರದಲ್ಲಿ ಏನು ಸಾಧನೆ ಮಾಡಬೇಕಾಗಿತ್ತೋ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲದೆ ನಾವು ಹಿಂದೆ ಬಿದ್ದಿದ್ದೇವೆ ಅಕ್ಕಪಕ್ಕದ

ರಾಜ್ಯಗಳಿಗಿಂತ ಎಂದು ತಾನೇ ತಾನಾಗಿ ಸೂಚಿಸುತ್ತದೆ ಎಂದು ಹೇಳುತ್ತೇನೆ. ಇವತ್ತು ಅಸೆಂಬ್ಲಿ ಅಧಿವೇಶನ ಹತ್ತಿರ ಬರುತ್ತಿದೆ ಎನ್ನುವಾಗ ಮೈಸೂರು ಸಂಸ್ಥಾನದಲ್ಲಿ ತಾಮ್ರ ಸಿಕ್ಕುತ್ತದೆ, ಗಂಧಕ ಸಿಕ್ಕುತ್ತದೆ, ಬಂಗಾರ ಸಿಕ್ಕುತ್ತದೆ ಎಂದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಕೈಗಾರಿಕಾ ಸಚಿವರು ಕೊಡುವ ಹೇಳಿಕೆ ಪತ್ರಿಕೆಗಳಲ್ಲಿ ಬರುತ್ತದೆ, ಆ ಹೇಳಿಕೆಯನ್ನು ನೋಡಿ ನಾವು ಆನಂದ ಪಡಬೇಕಾಗುತ್ತದೆ.

ಶ್ರೀ ಕೆ. ಮಲ್ಲಪ್ಪ.—ನಮ್ಮಲ್ಲಿ ತಾನು ಇವೆಲ್ಲ ಸಿಕ್ಕುವುದು ಸುಳ್ಳೇನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಳ್ಳು ಎಂದು ನಾನು ಹೇಳಿಲ್ಲ. ಅಸೆಂಬ್ಲಿ ಅಧಿವೇಶನ ಹತ್ತಿರ ಬರುತ್ತಿದೆ, ಬಜೆಟ್ ಚರ್ಚೆಗೆ ಬರುತ್ತದೆ ಎನ್ನುವಾಗ ಈ ನಿಧಿನಿಕ್ಷೇಪಗಳೆಲ್ಲ ಕಣ್ಣಿಗೆ ಕಾಣುತ್ತವೆ. ಅಧಿವೇಶನ ಮುಗಿದಂತೆ ಇವೂ ಕಣ್ಮರೆಯಾಗುತ್ತವೆ. ಇದು ನಮ್ಮ ದೇಶದ ದುರ್ದೈವ ಎಂದು ಹೇಳಬೇಕಾಗಿದೆ.

ನ್ಯೂ ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಒಂದು ಭುಜಕೀರ್ತಿಯನ್ನಾಗಿ ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಇನ್ನೊಂದು ಭುಜಕೀರ್ತಿಯಾಗಿಟ್ಟುಕೊಂಡು ದೇಶಾದ್ಯಂತ ಮೆರೆಸುತ್ತಾರೆ, ಬಹಳ ಸಾಧನೆ ಮಾಡಿದ್ದೇವೆ, ಬಹಳ ಪ್ರಗತಿಯನ್ನು ಹೊಂದಿದ್ದೇವೆ ಎಂದು. ಆದರೆ ನನಗಾದರೂ ಅನ್ನಿಸುತ್ತದೆ ಈ ಐದು ವರ್ಷಗಳಲ್ಲಿ ಈ ಸರ್ಕಾರಕ್ಕೆ ಏನೇನೂ ಸಾಧನೆ ಮಾಡುವುದಕ್ಕೆ ಆಗಿಲ್ಲ, ಇವತ್ತು ಕೈಗಾರಿಕೆಗಳನ್ನು ಕುಂಠಿತ ಮಾಡಿದ್ದಾರೆ, ಮತ್ತು ಈ ರೀತಿ ಆಗುವುದಕ್ಕೆ ಇವರಲ್ಲಿರುವ ಒಳಜಗಳವೇ ಕಾರಣ ಎಂದು ಹೇಳಬೇಕಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಒಳಜಗಳ ಎಂದರೆ.........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೋ-ಆಪರೇಟಿವ್ ಇಂಡಸ್ಟ್ರೀಸ್ ಅನ್ನು ನನಗೇ ಕೊಡಬೇಕೆಂದು ಸಹಕಾರ ಮಂತ್ರಿಗಳು ಕೇಳಿದಾಗ ಮುಖ್ಯ ಮಂತ್ರಿಗಳು ಆರು ತಿಂಗಳು ತೆಗೆದುಕೊಂಡರು ಅದನ್ನು ತೀರ್ಮಾನ ಮಾಡುವುದಕ್ಕೆ. ಈಚೆಗೆ ಖಾತೆಗಳ ಪುನರ್ಹಂಚಿಕೆ ಆದಾಗ ಮತ್ತೆ ಕೈಗಾರಿಕಾ ಮಂತ್ರಿಗಳಿಗೇ ಅದನ್ನು ಕೊಟ್ಟರು. ಈಗಿನ ಸಹಕಾರ ಮಂತ್ರಿಗಳಿಗೇ ಅದಕ್ಕೆ ನಕಾರ ಹೇಳಿದರು. ಮಂತ್ರಿ ಮಂಡಲದಲ್ಲಿ ಒಂದು ಹೊಂದಾಣಿಕೆ ಇಲ್ಲ, ಕೋ-ಆರ್ಡಿನೇಷನ್ ಇಲ್ಲ, ಕೋ-ಆಪರೇಷನ್ ಇಲ್ಲ. ಸರ್ಕಾರದಲ್ಲಿ congenial atmosphere ಇಲ್ಲ. ಇದರಿಂದ ಕೈಗಾರಿಕೆಗಳ ಅಭಿವೃದ್ಧಿಯಾಗಿಲ್ಲ. ಇದು ದೇಶದ ದುರ್ದೈವವೋ, ನಿಮ್ಮ ದುರ್ದೈವವೋ, ಆಡಳಿತ ಹಿಡಿದಿರತಕ್ಕ ಪಕ್ಷದ ದುರ್ದೈವವೋ ಎನ್ನುವುದನ್ನು ಜಗತ್ತು ಮತ್ತು ಮೈಸೂರಿನ ಜನತೆ ನಿರ್ಣಯ ಮಾಡಬೇಕೆಂದು ಹೇಳುತ್ತಿದ್ದೇನೆ.

ಮುಖ್ಯಮಂತ್ರಿಗಳು ಹೇಳುತ್ತಾರೆ, ಐದು ಸಾವಿರ ರೂಪಾಯಿಗಳಿಗೆ ಕಾರುಗಳು ಎಲ್ಲರಿಗೂ ಸಿಕ್ಕುವ ಹಾಗೆ ಮಾಡುತ್ತೇವೆ ಎಂದು. ಈ ಮಾತುಗಳು ಗಾಳಿಯಲ್ಲಿ ತೇಲಾಡುತ್ತಿವೆಯೋ, ಇದಕ್ಕೆ ಏನಾದರೂ ಪ್ರಾಜೆಕ್ಟ್ ತಯಾರಾಗಿದೆಯೋ ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ, ಯಾರಾದರೂ ತಜ್ಞರು 'ಟೆಕ್ನಿಕಲ್ ನೋ ಹೌ' ಹೊಂದಿದ್ದಾರೆಯೇ, ಎನ್ನುವುದನ್ನು ಈ ಸಭೆಯಲ್ಲಿ ಮುಖ್ಯಮಂತ್ರಿಗಳಾಗಲೀ, ಹಣಕಾಸಿನ ಸಚಿವರಾಗಲೀ ಅಥವಾ ಕೈಗಾರಿಕಾ ಸಚಿವರಾಗಲೀ ಹೇಳಿಲ್ಲ. ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಎಲ್ಲಿಯಾದರೂ ಹೂವಿನ ಹಾರ ಹಾಕಿದಾಗ ಜನತೆಯನ್ನು ಮಂಕು ಮಾಡುವುದಕ್ಕೆ ಅಥವಾ ಜನತೆಯ ಕಣ್ಣಿಗೆ ಮಣ್ಣು ಎರಚುವುದಕ್ಕಾಗಿ ಹೇಳುವ ಮಾತುಗಳೋ ಏನೋ ಎಂದು ನನಗೆ ಅನಿಸುತ್ತದೆ. Programme of Industrial Development from 1961—66 ಇದರಲ್ಲಿ ಇಂಡಿಯಾ ದೇಶಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳಿವೆ. ಅದನ್ನು ನಾನು ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಸಣ್ಣ ಕಾರುಗಳನ್ನು ತಯಾರು ಮಾಡುತ್ತೇವೆಂದು ಹೇಳಿದರಲ್ಲ, ಅವರು ಚನ್ನಪಟ್ಟಣದ ಕಾರು ತಯಾರು ಮಾಡುತ್ತಾರೆಯೋ ಅಥವಾ ಕಾರಿಗೆ ಪೆಟ್ರೋಲ್ ಹಾಕಿ, ಡೀಸೆಲ್ ಹಾಕಿ ಸ್ಟೇರಿಂಗ್ ಇಟ್ಟು ಜನ ಕುಳಿತು ಓಡಾಡುವ ಕಾರನ್ನು ಮಾಡುತ್ತಾರೆಯೋ ನಮಗೆ ಗೊತ್ತಿಲ್ಲ. ಆದರೆ ನಾನು ಒಂದು ವಿಷಯವನ್ನು ಮಾತ್ರ ಸರ್ಕಾರಕ್ಕೆ ಹೇಳುತ್ತೇನೆ, ಯಾವುದೇ ರೀತಿಯ ಕಾರನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿಲ್ಲ, ನಿಮಗೆ ಶಕ್ಯವಿಲ್ಲ ; ಪಾಂಡ್ ಕಮಿಟಿ ರಿಪೋರ್ಟಿನಲ್ಲಿ 186–187ನೇ ಪುಟಗಳಲ್ಲಿ ಪ್ರೋಗ್ರಾಂ ಫಾರ್ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟಿನಲ್ಲಿ ಹೀಗೆ ಹೇಳಿದ್ದಾರೆ :—

> "The Pande Committee in its report have come to the conclusion that the feasibility of manufacturing a low cost car at the ex-factory price of nearly Rs. 5,000 is no longer a doubt if the production of the vehicle is visualised on the basis of 50,000 units per year......The physical programme included under the Third Five-Year Plan do not cover this project."

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸ್ವಾಮಿ, ಮೂರನೇ ಯೋಜನೆಯಲ್ಲಿ ಈ ಪ್ರಾಜೆಕ್ಟನ್ನು ಕವರ್ ಮಾಡದೆ ಇದ್ದರೆ ಮೂರನೆಯ ಯೋಜನೆಯಲ್ಲಿ ಈ ಪ್ರಾಜೆಕ್ಟ್ ಮಾಡಬೇಕೆಂದು ಇಂಡಿಯಾ ಸರ್ಕಾರದವರಿಗೂ ರಾಜ್ಯ ಸರ್ಕಾರ ದವರಿಗೂ ಇಚ್ಛೆ ಇಲ್ಲದೆ ಹೋದರೆ ನಾಲ್ಕನೆಯ ಯೋಜನೆಯಲ್ಲಿ ಮಾಡಬೇಕೆಂದಿದ್ದೇವೆ. ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಇದನ್ನು ಮಾಡಬೇಕು ಎಂದು ಇದ್ದೇನೆ ಎಂದು ಒಬ್ಬ ಮಂತ್ರಿಗಳು ಹೇಳಿದರು. ಇದು ಬರೀ ಗಾಳಿ ಮಾತು, ಮೈಸೂರು ಸರ್ಕಾರವಾಗಲೀ, ಇಂಡಿಯಾ ಸರ್ಕಾರವಾಗಲೀ ಐದು ಸಾವಿರ ರೂಪಾಯಿ ಬೆಲೆ ಒಳಗೆ ಒಂದು ಕಾರನ್ನು ಜನತೆಗೆ ಕೊಡುತ್ತೇವೆ ಎಂದು ಹೇಳುವ ಮಾತು, ಹುಸಿಮಾತು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಮದ್ರಾಸಿನಲ್ಲಿರುವ ಸ್ಟ್ಯಾಂಡರ್ಡ್ ಕಂಪೆನಿಯವರಿಗೆ ಫಾರೆನ್ ಎಕ್ಸ್‌ಚೇಂಜ್ ಸಿಕ್ಕುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿರುವ ಟೆಕ್ನಿಕಲ್ ನೊ ಹೌ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಸಿಕಲಿಲ್ಲ ಎಂದರೆ ಕೇಂದ್ರ ಸರ್ಕಾರ ಮತ್ತು ಮೈಸೂರು ಸರ್ಕಾರ ಮಾಡುತ್ತೇವೆಂದು ಹೇಳಿಕೊಂಡು ನಮ್ಮನ್ನು ಅಲ್ಲಗಳೆಯುವುದಕ್ಕೆ ತಮಾಷೆ ಮಾಡುತ್ತಿದ್ದಾರೆಯೇ ? ಹೀಗೆ ತಮಾಷೆ ಮಾಡತಕ್ಕ ಜನ ಮೈಸೂರು ಆಡಳಿತದಲ್ಲಿ ರಾಜ್ಯ ಭಾರ ಮಾಡುವುದಕ್ಕೆ ಲಾಯಖ್ ಅಲ್ಲ ಎಂದು ಹೇಳುತ್ತೇವೆ. ಇಂಥ ಹಾಸ್ಯಾಸ್ಪದಕ್ಕೆ ಒಳಗಾಗಬೇಡಿ ಎಂದು ಹೇಳುತ್ತಿದ್ದೇನೆ.

ಮಿನರಲ್ ಡೆವೆಲಪ್‌ಮೆಂಟ್ ಬೋರ್ಡ್‌ನದು ದೊಡ್ಡ ಕಥೆ. ಈ ಬೋರ್ಡನ್ನು ತೆಗೆದು ಕೊಂಡರೆ ಅವರಿಗೆ 90 ಲಕ್ಷ ರೂಪಾಯಿ ಆದಾಯ ಬರುತ್ತದೆ. 90 ಲಕ್ಷ ರೂಪಾಯಿ ಆದಾಯ ಬಂದರೆ ಸಾಕು ಎಂದು ಹೇಳುತ್ತಾರೆ. 1964ರಲ್ಲಿ 1, 37, 63, 147 ರೂಪಾಯಿ ಖಾಸಗಿಯವರು ಸಂಪಾದನೆ ಮಾಡಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಅವರು ಒಂದು ಕೋಟಿ ರೂಪಾಯಿನಷ್ಟು ಮಾರಾಟ ಮಾಡಿರುವುದು. ಅದರಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಸೇರಿದೆ, ಕಾಸ್ಟ್ ಆಫ್ ಟ್ರಾನ್ಸ್‌ಪೋರ್ಟೇಷನ್ ಎಲ್ಲ ಸೇರಿದೆ. ಅದು ಲಾಭವಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವರಮಾನವೆಷ್ಟು, ಕೊಟ್ಟಂಥ ಅದುರು ಎಷ್ಟು, ಅದರ ಮೌಲ್ಯ ವೆಷ್ಟು ಎನ್ನುವುದನ್ನು ಅರ್ಥಮಾಡಿಕೊಂಡು ಹೇಳುತ್ತಿದ್ದೇನೆ. ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ 90 ಲಕ್ಷ ರೂಪಾಯಿ ಆದಾಯ ಬರುತ್ತದೆ ಎಂದು ಅಪ್ಪಣೆ ಕೊಡಿಸಿದರು. ಎರಡರಿಂದಲೂ ಸುಮಾರು ಎರಡೂ ಮುಕ್ಕಾಲು, ಮೂರು ಕೋಟಿ ರೂಪಾಯಿನಷ್ಟು ಕಬ್ಬಿಣದ ಅದುರನ್ನು ತೆಗೆದರೆ, ಒಂದು ಕೋಟಿ ರೂಪಾಯಿನಷ್ಟು ಅವರಿಗೆ ಎಲ್ಲ ಖರ್ಚುಗಳಿಗೆ ಕೊಟ್ಟರೂ ಕೂಡ ಎರಡು ಕೋಟಿ ರೂಪಾಯಿ ಸರ್ಕಾರಕ್ಕೆ ಉಳಿಯತಕ್ಕದ್ದು ಇದೆ. ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನವರು ತಮ್ಮದೇ ಆದ ಗಾಡಿಗಳನ್ನು ಇಟ್ಟುಕೊಂಡು ಅದುರನ್ನು ಸಾಗಾಣಿಕೆ ಮಾಡುತ್ತಿದ್ದರು. ಲಾಭ ಬರಲಿಲ್ಲ ಎಂದು ಅದನ್ನು ಮಾರಾಟ ಮಾಡಿದರು. ಇದರಿಂದ ಏನು ತೋರಿಸುತ್ತದೆ ಎಂದರೆ ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ದಕ್ಷವಾಗಿ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಆದರೂ ಸಹ ತಾವು ಒಂದು ಕಾರ್ಪೊರೇಷನ್ ಮಾಡಿದ್ದೀರಿ. ಈ ಕಾರ್ಪೊರೇಷನ್ ಮುಖಾಂತರ ಅವರು ಮೈಸೂರು ಸಂಸ್ಥಾನಕ್ಕೆ ಕೊಟ್ಟಂಥ ಹಣವನ್ನು ತುಂಬುವುದಕ್ಕೆ ಕಾರ್ಪೊರೇಷನ್ ಮಾಡಿ ನಡೆಸಬೇಕಾಗಿದೆಯೇ ಹೊರತು ಖಾಸಗಿ ಕಂಪನಿಯವರಿಗೆ ಕೊಡಕೂಡದು. ಬೇರೆಯವರಿಗೆ ಕೆಲಸ ಮಾಡುವ ಹಕ್ಕನ್ನು ಕೊಡಬಾರದು ಎಂದು ಸರ್ಕಾರದವರಿಗೆ ಹೇಳುತ್ತಿದ್ದೇನೆ. ಇದನ್ನು ಕೈಗಾರಿಕಾ ಮಂತ್ರಿಗಳು ಸ್ವಲ್ಪ ಯೋಚನೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಬಿ. ಎಂ. ಡಿ. (Board of Mineral Development)ಯಲ್ಲಿ ಇದುವರೆಗೂ ನಡೆದಿರುವ ಆಡಳಿತದ ಅಂಕಿ ಅಂಶಗಳನ್ನು ವಿವರವಾಗಿ ಲೆಕ್ಕ ಹಾಕಿದರೆ ಅದರಲ್ಲಿ ಎಷ್ಟು ಆಶಾದಾಯಕವಾಗಿ ಪ್ರಗತಿಯಾಗಬೇಕಾಗಿತ್ತೋ ಅಷ್ಟು ಆಶಾದಾಯಕವಾಗಿ ಪ್ರಗತಿಯಾಗಿಲ್ಲ, ಆ ಇಲಾಖೆ ಪ್ರಗತಿದಾಯಕವಾಗಿ ಕೆಲಸ ಮಾಡಲಿಲ್ಲವೆಂದು ಹೇಳಬಹುದು. ಇದಕ್ಕೆ ಕಾರಣರು ಯಾರೋ ಅಂತಹವರ ಮೇಲೆ ತಕ್ಕ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಒಂದು ಹೊಸ ಕಾರ್ಖಾನೆಯನ್ನು ಈ ರಾಜ್ಯದಲ್ಲಿ ತೆರೆಯಲಿಲ್ಲ. ಯಾವ ಒಂದು ಹೊಸ ಕಾರ್ಖಾನೆಯನ್ನೂ ಮಾಡುತ್ತೇವೆಂದು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲ. 1961ರಿಂದ 1966ರವರೆಗೂ ಇವರು ಏನೇನೂ ಹೇಳಿದರೋ ಅವೆಲ್ಲವೂ ಗಾಳಿಯಲ್ಲಿ ಹೋಯಿತು. ಅಲ್ಯೂಮಿನಿಯಂ ಕಾರ್ಖಾನೆಯನ್ನು ತೆರೆಯುವ ಒಂದು ಘಟ್ಟವನ್ನು ಮುಟ್ಟುತ್ತಿದ್ದೇವೆಂದು ಹೇಳುತ್ತಾರೆ. ಇದರಲ್ಲಿ ಮೈಸೂರಿನ ಜನತೆಗೆ ಸ್ವಲ್ಪಮಟ್ಟಿಗೆ ಅನುಮಾನವಾಗುತ್ತಿದೆ. ಏಕೆಂದರೆ ಇನ್ನೂ ಇಂಡಸ್ಟ್ರಿಯಲ್ potentiality ಇಲ್ಲಿ ಹುಟ್ಟಿಲ್ಲ. ಇಕಾನಮಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಕೈಗಾರಿಕೆಯ ಕ್ಷೇತ್ರದಲ್ಲಿ ಇವರಿಗೆ

ಸಾಧ್ಯವಾಗಿಲ್ಲ. ಇದರಲ್ಲಿ ಇವರಿಗೆ ಅಪಜಯವೆಂಬುದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿಯುತ್ತೇನೆ.

ಇನ್ನು ಫರ್ಟಿಲೈಸರ್ ಫ್ಯಾಕ್ಟರಿ ಕೊಚಿನ್‌ಗೆ ಹೋಯಿತು, ದುರ್ಗಾಪುರಕ್ಕೆ ಹೋಯಿತು ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ನನಗೆ ಇರತಕ್ಕ ಅನುಮಾನವನ್ನು ಪರಿಹಾರ ಮಾಡುವುದು ಸರ್ಕಾರದವರ ಕರ್ತವ್ಯ. ಆದ್ದರಿಂದ ಇವರಿಗೆ ಬರತಕ್ಕ ಫರ್ಟಿಲೈಜರ್ ಫ್ಯಾಕ್ಟರಿಯನ್ನು ಮಂಗಳೂರಿನಲ್ಲಿ ಯಾವಾಗ ಸ್ಥಾಪನೆ ಮಾಡುತ್ತಾರೆ, ಅದರಿಂದ ಎಷ್ಟು ದಿವಸಗಳಲ್ಲಿ ಉತ್ಪಾದನೆ ಬರುತ್ತದೆಂದು ನಾನು ಕೇಳುತ್ತೇನೆ. ಪತ್ರಿಕೆಗಳ ಮೂಲಕ ಫರ್ಟಿಲೈಜರ್ ಫ್ಯಾಕ್ಟರಿ ಒಂದು ಕೊಚ್ಚಿನ್‌ಗೆ ಹೋಯಿತು, ಇನ್ನೊಂದು ದುರ್ಗಾಪುರಕ್ಕೆ ಹೋಯಿತು, ಆ ರೀತಿ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆಂದು ಕೇಳಿದೆ. ಪ್ರಧಾನ ಮಂತ್ರಿಗಳೂ ಸಹ ಅಮೇರಿಕಾಕ್ಕೆ ಹೋಗುವುದಕ್ಕೆ ಮುಂಚೆ ಆ ರೀತಿ ಅಭಿಪ್ರಾಯ ಕೊಟ್ಟಿರುವರೆಂಬ ಸಮಾಚಾರವನ್ನೂ ಸಹ ನಾನು ಕೇಳಿದ್ದೇನೆ. ಆದ್ದರಿಂದ ಈ ಬಗ್ಗೆ ನನಗೆ ಇರತಕ್ಕ ಅನುಮಾನವನ್ನು ದೂರ ಮಾಡಬೇಕೆಂದು ನಾನು ಕೇಳುತ್ತೇನೆ.

ಇನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಹೆಚ್ಚಿನ ಪ್ರಗತಿಯನ್ನುಂಟುಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನಗಳಿಗೆ ಅದರಲ್ಲೂ ನಿರುದ್ಯೋಗಿಗಳಿಗೆ ಕೆಲಸಗಳನ್ನು ಒದಗಿಸುತ್ತೇವೆಂದು ಹೇಳಿದ್ದರು. 20 ಸಾವಿರ, 40 ಸಾವಿರ, 1 ಲಕ್ಷ, 2 ಲಕ್ಷ-ಹೀಗೆ ಕೈಗಾರಿಕೆಗೋಸ್ಕರ ಇವರು ಸಾಲದ ರೂಪದಲ್ಲಿ ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ಆದರೆ ಆ ಹಣವನ್ನು ಅನೇಕ ಕಂಪೆನಿಗಳಲ್ಲಿ ದುರ್ವಿನಿಯೋಗ ಮಾಡುತ್ತಿದ್ದಾರೆ. ಇದನ್ನು ಸರ್ಕಾರದವರು ವಿಚಾರ ಮಾಡಬೇಕು. ಈ ವಿಷಯದ ಬಗ್ಗೆ ನಾನು ಹೋದ ಸಾರಿಯೂ ಹೇಳಿದ್ದೇನೆ. ಆದರೂ ಸರ್ಕಾರ ಅದರ ಬಗ್ಗೆ ಇದುವರೆಗೂ ನಿಗಾ ಕೊಟ್ಟಿಲ್ಲ. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ನಡೆಸತಕ್ಕವರಲ್ಲಿ ಕೆಲವರು ಜನತೆ ಕಣ್ಣಿಗೆ ಮಣ್ಣನ್ನು ಎರಚಿ ಕೈಗಾರಿಕೆಗಳಿಗೋಸ್ಕರ ಕೊಟ್ಟಿರತಕ್ಕ ದುಡ್ಡನ್ನು ಉಪಯೋಗಿಸದೆ ಇರತಕ್ಕವರ ಮೇಲೆ ಸರ್ಕಾರ ಹೆಚ್ಚಿಗೆ ನಿಗಾ ಕೊಡಬೇಕು, ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ.

ಇನ್ನು ಕೊ-ಆಪರೇಟಿವ್ ಇಂಡಿಸ್ಟ್ರೀಸ್ ವಿಚಾರದ ಬಗ್ಗೆ ಕೊ-ಆಪರೇಷನ್ ಬೇಡಿಕೆ ಬಂದಾಗ ಹೇಳುತ್ತೇನೆ. ಈಗ ತಾಮ್ರ, ಗಂಧಕ, ಚಿನ್ನದ ರಾಶಿಯನ್ನು ಪತ್ತೆ ಹಚ್ಚಿದ್ದೇವೆಂದು ಹೇಳಿದ್ದಾರೆ. ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿರತಕ್ಕ ಚಿನ್ನವನ್ನು ನೋಡಿ ಹೆಚ್ಚಿಗೆ ಚಿನ್ನವನ್ನು ಪತ್ತೆ ಮಾಡಿದ್ದೇವೆಂದು ಇವರು ಹೇಳುವ ನೀತಿ ಸರಿಯೇ ಎಂದು ನಾನು ಕೇಳುತ್ತೇನೆ. ಈ ವಿಚಾರದಲ್ಲಿ ಇವರು ಗಳಿಸಿರತಕ್ಕ ಮೊಮೆಂಟಂ ಏನಿದೆಯೋ ಅದನ್ನು ಉಳಿಸಿಕೊಂಡು ಹೋಗಬೇಕೆಂದು ನಾನು ಸರ್ಕಾರದವರಿಗೆ ಹೇಳುತ್ತೇನೆ.

ಇನ್ನು ನ್ಯೂಸ್‌ಪ್ರಿಂಟಿಗೋಸ್ಕರವಾಗಿ ಮೊನ್ನೆ ವಾರ್ತಾ ಸಚಿವರಿಗೆ ಈ ಸಾರಿ 15 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಅಲ್ಲದೆ ಒಂದೂವರೆ ದಶಲಕ್ಷ ರೂಪಾಯಿಗಳನ್ನೂ ಸಹ ಹೊರಗಿನಿಂದ ತರಿಸಲು ಪ್ರಯತ್ನಿಸಿದ್ದೇವೆಂದು ಮೊನ್ನೆ ತಾನೇ ಬಂಧುಗಳು ಶ್ರೀ ರಾಜಬಹದ್ದೂರ್ ಅವರು ಹೇಳಿದ್ದಾರೆ. ಇಲ್ಲಿ ಇನ್ನೊಂದು ನ್ಯೂಸ್‌ಪ್ರಿಂಟ್ ತಯಾರುಮಾಡತಕ್ಕ ಕಾರ್ಖಾನೆಯನ್ನು ನಮ್ಮಲ್ಲಿರುವ ಕಚ್ಚಾಮಾಲುಗಳನ್ನು ಉಪಯೋಗಿಸಿಕೊಂಡು ಸ್ಥಾಪನೆ ಮಾಡಲು ಸರ್ಕಾರದವರು ಕೂಡಲೇ ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಎಲ್ಲಾ ನಿರುದ್ಯೋಗಿಗಳಿಗೆ ಎಲ್ಲಿ ಲೇಬರ್ ಸಿಗುತ್ತದೋ, ಎಲ್ಲಿ ಕಚ್ಚಾಮಾಲುಗಳು ಸಿಗುತ್ತದೋ, ಎಲ್ಲಿ ಜನಗಳು ಕೆಲಸವಿಲ್ಲದೆ ಇರುತ್ತಾರೋ ಅಂತಹ ಕಡೆಗಳಲ್ಲಿ ಕೆಲಸಗಳನ್ನು ಕೊಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಅಂತಹ ಇಂಡಸ್ಟ್ರಿಯಲ್ ಎಸ್ಟೇಟನ್ನು ತೆರೆಯುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಈ ಕೈಗಾರಿಕೆಗಳನ್ನು ಮ್ಯಾನೇಜ್ ಮಾಡತಕ್ಕಂಥ ಅಧಿಕಾರಿಗಳ ವಿಷಯವಾಗಿ ಹೇಳುವುದಾದರೆ ಕೈಗಾರಿಕೆಯಲ್ಲಿ ಅನುಭವ ಇಲ್ಲದೇ ಇರುವವರನ್ನು ಮತ್ತು ಅದರ ಟೆಕ್ನಿಕ್ ಗೊತ್ತಿಲ್ಲದೇ ಇರುವವರನ್ನು ಸರ್ಕಾರದವರು ನೇಮಿಸಬಾರದೆಂದು ನಾನು ಸಲಹೆಮಾಡುತ್ತೇನೆ. ಆ ರೀತಿ ಇರುವವರನ್ನು ನೇಮಿಸುವುದರಿಂದ ಈ ಕೈಗಾರಿಕೆಗಳು ಕುಂಠಿತವಾಗುವುದಕ್ಕೆ ಕಾರಣವಾಗಿದೆ. ಕೈಗಾರಿಕೆಯಲ್ಲಿ ಪ್ರಗತಿಯನ್ನು ಕಾಣಬೇಕಾದರೆ ಅನುಭವಸ್ಥರನ್ನು ಅಲ್ಲಿಗೆ ಹಾಕಬೇಕು. ಆಗ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆ ಹೆಚ್ಚುತ್ತದೆ. ಕೈಗಾರಿಕೆ ಸಚಿವರಿಗೆ ಏನೊಂದು ಡೈನಾಮಿಕ್ ಪರ್ಸನಾಲಿಟಿ ಇದೆಯೋ ಅದನ್ನು ಜನಗಳಿಗೆ ತೋರಿಸಿ ಕೊಡಬೇಕು. ಅದನ್ನು ಮಾಡಿದ್ದೇನೆ, ಇದನ್ನು ಮಾಡಿದ್ದೇನೆಂದು ಅವರು ಬರೀ ಮಾತಿನಲ್ಲಿ ಅದನ್ನು ತೋರಿಸಬಾರದು. ಭೀಮ ಭುಜ ತಟ್ಟಿಕೊಂಡಂತೆ ಆಗಬಾರದು. ಅಂತಹ ಭೀಮ ಇವರು ಆಗಬಾರದು. ಹೊಸ ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿ ಕೈಗಾರಿಕೆಯ ಸಚಿವರು ನಿಜವಾದ ಭೀಮನೆಂದೆನಿಸಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರತಕ್ಕ ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಕಳೆದ 7-8 ತಿಂಗಳಲ್ಲಿ ಮಾನ್ಯ ಕೈಗಾರಿಕೆಯ ಸಚಿವರು ಒಂದು ಕಡೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಆ ನಮ್ಮ ಮಂತ್ರಿಗಳ ಮಾತನ್ನು ಕೇಂದ್ರ ಸರ್ಕಾರ ಲಕ್ಷ್ಯದಲ್ಲಿಟ್ಟುಕೊಂಡಿಲ್ಲ. ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಲ್ಲಿ ಕೇಂದ್ರ ಸರ್ಕಾರ ಬಹಳವಾಗಿ ಆಸ್ಥೆಯನ್ನು ವಹಿಸಿಲ್ಲವೆಂದು ಒಂದು ಕಡೆ ನಮ್ಮ ಮಂತ್ರಿಗಳು ಮಾತನಾಡಿರುವುದನ್ನು ನಾವು ಪತ್ರಿಕೆಗಳ ಮೂಲಕ ಓದಿದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ಮೈಸೂರಿನ ಕಡೆಗೆ ಅಷ್ಟಾಗಿ ಲಕ್ಷ್ಯ ಕೊಟ್ಟಿಲ್ಲ, ಇವರ ಮಾತಿಗೆ ಪುರಸ್ಕಾರವಿಲ್ಲವೆನ್ನುವುದನ್ನು ಮಂತ್ರಿಮಂಡಲದ ಸದಸ್ಯರೊಬ್ಬರು ಹೇಳಿದ್ದನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಜ್ಞಾಪಕಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಇಚ್ಛೆಪಡುತ್ತೇನೆ. ಬೊಂಬಾಯಿನವರು ಒಬ್ಬರು ಇಲ್ಲಿಗೆ ಬಂದು ಒಂದು ಕೈಗಾರಿಕೆಯನ್ನು ಪ್ರಾರಂಭ ಮಾಡುತ್ತೇವೆಂದು ಅನೇಕ ತಿಂಗಳುಗಳ ಕಾಲ ಅಲೆದು ಆ ಕಾರ್ಯವಾಗದೆ ಹಿಂದಕ್ಕೆ ಹೋದರು. ಅವರಿಗೆ ಈ ಸರ್ಕಾರದಲ್ಲಿ ಪುರಸ್ಕಾರ ದೊರೆಯಲಿಲ್ಲ. ರೋಲಿಂಗ್ ಮಿಲ್ಲಿನವರು ಮಾನ್ಯ ಮುಖ್ಯ ಮಂತ್ರಿಗಳನ್ನೂ, ಕೈಗಾರಿಕಾ ಸಚಿವರನ್ನೂ ಮತ್ತು ಕೈಗಾರಿಕೆ ಇಲಾಖೆಯ ಡೈರೆಕ್ಟರ್ ಅವರನ್ನೂ ಭೇಟಿ ಮಾಡಿ ಅವರ ಒಂದು ಯೋಜನೆಯನ್ನು ಅವರ ಮುಂದೆ ಇಟ್ಟರು. ಆದರೆ ಇಲ್ಲಿಯವರೆಗೂ ಅವರ ಕೆಲಸ ಕಾರ್ಯಗತವಾಗಿಲ್ಲ. ಆದ್ದರಿಂದ ಈ ದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಹಾಗೂ ಕೈಗಾರಿಕೆಗಳ ಸ್ಥಾಪನೆಗೆ ಇವರು ಎಷ್ಟರಮಟ್ಟಿಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ, ನಮಗೆ ಕೇಂದ್ರದಿಂದ ಪ್ರಾಶಸ್ತ್ಯ ಆ ಬಗ್ಗೆ ಎಷ್ಟರಮಟ್ಟಿಗೆ ದೊರೆಯುತ್ತಾ ಇದೆ ಎಂಬುದು ಈಗ ಮನನೊಂದು ಹಿಂದಕ್ಕೆ ಹೋದಂಥ ಉದ್ದಿಮೆಗಾರರಿಂದ ಚೆನ್ನಾಗಿ ಮನಗಾಣುತ್ತದೆ. ಅಂತಹ ನಿದರ್ಶನಗಳು ಇಲ್ಲಿ ಬೇಕಾದಷ್ಟಿವೆ. ಹಾಗೆಯೇ ಹೊಸದುರ್ಗದಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ತೆರೆಯಬೇಕೆಂದು ಕಳೆದ ಎರಡು ವರ್ಷಗಳಿಂದಲೂ ಒಂದು ಕಂಪೆನಿ ಇಲ್ಲಿಗೆ ಬಂದು ಸರ್ಕಾರದವರನ್ನು ಪದೇ ಪದೇ ಕೇಳುತ್ತಿದ್ದರೂ ಅವರಿಗೆ ರಹದಾರಿಯನ್ನಾಗಲೀ ಅಥವಾ ಯಾವ ರೀತಿಯಾದ ಪ್ರೋತ್ಸಾಹವನ್ನಾಗಲೀ ಈ ಸರ್ಕಾರ ಕೊಡುವುದಕ್ಕೆ ಮುಂದೆ ಬರಲಿಲ್ಲ. ಈ ರೀತಿಯಾಗಿ ಕೈಗಾರಿಕೆಗಳನ್ನು ಇಲ್ಲಿ ಸ್ಥಾಪನೆ ಮಾಡಬೇಕು, ಕೈಗಾರಿಕೆಗಳ ಪ್ರಗತಿ ಮುಂದೆ ಬರಬೇಕು ಎನ್ನುವ ಆಶೆಯನ್ನು ಇಟ್ಟುಕೊಂಡು ಬಂದಂಥ ಜನರಿಗೆ ಇಲ್ಲಿ ದೊರೆಯುತ್ತಾ ಇರತಕ್ಕ ಪ್ರೋತ್ಸಾಹವನ್ನು ನೋಡಿದರೆ ಅದು ತುಂಬಾ ಶೋಚನೀಯವಾದ ಪರಿಸ್ಥಿತಿಯಾಗಿದೆ. ಆದ್ದರಿಂದ ಸರ್ಕಾರದವರು ಈ ವಿಚಾರದ ಕಡೆಗೆ ಹೆಚ್ಚಿನ ನಿಗಾವನ್ನು ಕೊಟ್ಟು ಕೈಗಾರಿಕೆಗಳ ಸ್ಥಾಪನೆ ಮಾಡುತ್ತೇವೆಂದು ಮುಂದೆ ಬರುವವರಿಗೆ ಎಲ್ಲಾ ವಿಧವಾದ ನೆರವನ್ನು ಕೊಡುವುದು ಸರ್ಕಾರದ ಕರ್ತವ್ಯ.

ಈ ಕೈಗಾರಿಕೆ ಇಲಾಖೆಯಲ್ಲಿ ನೇಮಕವಾಗತಕ್ಕವರೂ ಸಹ ಈ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ. ನನ್ನ ತಾಲ್ಲೂಕಿಗೆ ಒಂದು ಕೈಗಾರಿಕೆ ಎಸ್ಟೇಟು ಬೇಕೆಂದು ಒಂದು ಪತ್ರವನ್ನು ಕೈಗಾರಿಕೆಯ ಡೈರೆಕ್ಟರ್ ಅವರಿಗೆ ಬರೆದೆ. ಆ ಪತ್ರ ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ, ಒಬ್ಬರಿಗೊಬ್ಬರು ಆಫೀಸರುಗಳು ಡೈರೆಕ್ಟ್ ಮಾಡುವುದು, ರೆಫರ್ ಮಾಡುವುದು-ಹೀಗಾಗಿ ಮಂತ್ರಿಗಳಿಂದ ಹಿಡಿದು ಕೊನೆಯ ಅಧಿಕಾರಿಗಳ ತನಕ ಆ ಕಾಗದ ಇನ್ನೂ ಓಡಾಡುತ್ತಲೇ ಇದೆ. ಅದಕ್ಕೆ ಸರಿಯಾದ ಉತ್ತರ ಇದುವರೆಗೂ ದೊರಕುತ್ತಾ ಇಲ್ಲ. ಈ ರೀತಿಯಾಗಿ ಬರೀ ಪತ್ರ ವ್ಯವಹಾರವೇ ನಡೆಯುತ್ತಲಿದೆ. ಸರ್ಕಾರದಲ್ಲಿ ಯಾವುದನ್ನಾದರೂ ಸಾಧಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವೇ ಎಂಬುದಾಗಿ ನಾನು ಕೈಗಾರಿಕೆಯ ಸಚಿವರಲ್ಲಿ ಕೇಳುತ್ತೇನೆ. ಈಗಲಾದರೂ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿಗೆ ಒಂದು ಹೊಸದಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ತುಮಕೂರಿನಲ್ಲಿ ಇಂಡಸ್ಟ್ರಿಯಲ್ ಪೊಟೆನ್ಷಿಯಾಲಟೀಸ್ ಮತ್ತು ಬೇಕಾದಷ್ಟು ಕಚ್ಚಾ ಮಾಲುಗಳು ಅಂದರೆ, ತೆಂಗಿನ ನಾರು, ತೆಂಗಿನ ಚಿಪ್ಪು, ಸುಣ್ಣದ ಕಲ್ಲು ಹೇರಳವಾಗಿ ಸಿಗುವುದರಿಂದ ಅಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ತಕ್ಕ ಸೌಕರ್ಯಗಳಿವೆ. ಕಳೆದ 2-3 ವರ್ಷಗಳಿಂದಲೂ ಇಲ್ಲಿ ಸರ್ವೆ ಮಾಡಿಸಿ ಅದರ ಬಗ್ಗೆ ಒಂದು ವರದಿಯನ್ನು ಪುಸ್ತಕದಲ್ಲಿ ಬರೆದಿಟ್ಟಿದ್ದಾರೆ. ಅದನ್ನು ಕಾರ್ಯಗತ ಮಾಡುವ ಒಂದು ಕೆಲಸದಲ್ಲಿ ಈ ಸರ್ಕಾರ ಕೊಂಚವಾದರೂ ಮುಂದುವರಿಯಲಿಲ್ಲ. ಇದು ನಮ್ಮ ದೇಶದ ದುರ್ದೈವವೋ ಏನೋ ಎಂದು ಈ ಸರ್ಕಾರಕ್ಕೆ ಸೂಚನೆ ಕೊಡುತ್ತೇನೆ.

12-30 P.M.

ಸ್ವಾಮಿ, ರೇಷ್ಮೆ ಕೈಗಾರಿಕೆಯ ವಿಷಯದಲ್ಲಿ ಹೇಳಬೇಕಾಗಿದ್ದರೆ, ಇದು ಬಹಳ ಮುಖ್ಯವಾದ ಕೈಗಾರಿಕೆ. ಮಾನ್ಯ ಸಚಿವರು ಇಬ್ಬರೂ ಕೂಡ ಪರದೇಶಕ್ಕೆ ಹೋಗಿ, ಜಪಾನ್ ದೇಶದಲ್ಲಿ ಈ ಕೈಗಾ

ರಿಕೆಯ ಬಗ್ಗೆ ಮಾಡತಕ್ಕಂಥ ರೀತಿ ನೀತಿಗಳು. ಅಲ್ಲಿ ಇದು ಅಭಿವೃದ್ಧಿ ಹೊಂದಿರತಕ್ಕ ಬಗೆಗೆ ಅವರ ಅನುಭವವನ್ನು ಪಡೆದುಕೊಂಡು ಬಂದಿದ್ದಾರೆ. ಆದ್ದರಿಂದ ಅವರು ಈ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಯಬಗ್ಗೆ ಸಂಪೂರ್ಣವಾಗಿ ಅವರ ಅನುಭವವನ್ನು ನೀಡಿ ತನ್ಮೂಲಕ ಈ ಕೈಗಾರಿಕೆಯನ್ನು ಕೈಗೊಂಡರೆ ಜನಗಳಿಗೆ ಅದರ ಉಪಯೋಗವುಸಿಕ್ಕಬಹುದು ಎಂದು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಈ ಕೈಗಾರಿಕೆಯು ಬಡವನ ಕೈಗಾರಿಕೆ. ನಮ್ಮಲ್ಲಿ ಒಬ್ಬ ಹರಿಜನ ಮನುಷ್ಯ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆಬಂದು ಒಂದು ಕಡೆ 10 ಗುಂಟೆ ಜಾಗದಲ್ಲಿ ಹಿಪ್ಪನೇರಳೆ ಬೆಳೆಯನ್ನಿಟ್ಟು ರೇಷ್ಮೆ ಕೈಗಾರಿಕೆಯನ್ನು ಪ್ರಾರಂಭ ಮಾಡಿದನು. ಅವನು ಮೊನ್ನೆ ಹೇಳಿದ ನಾನು ಈ ಕೈಗಾರಿಕೆಯನ್ನು ಪ್ರಾರಂಭ ಮಾಡಿದ ಮೇಲೆ ಅದರಿಂದ ಬಂದಹಣದಿಂದ ಎರಡು ಹೊತ್ತು ಊಟ ಮಾಡಿ ಹಣವನ್ನು ಉಳಿಸಿ ಅದನ್ನೂ ನನ್ನ ಅಕ್ಕ ಪಕ್ಕದಲ್ಲಿರುವವರಿಗೆ ಕೊಡುತ್ತಿದ್ದೇನೆ. ಅದರಿಂದ ವಿಶೇಷ ಕಷ್ಟದಲ್ಲಿರುವವರಿಗೆ ನೆರವು ಆಗುತ್ತಿದೆ ಎಂದು ಹೇಳಿದೆ. ಅಂದ ಮೇಲೆ ಈ ಕೈಗಾರಿಕೆಯಿಂದ ಬಡವರಿಗೆ ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಈ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರದವರು ಅನುಕೂಲವನ್ನು ಕಲ್ಪಿಸಿಕೊಡಬೇಕು. ಮಾತ್ತು ಕಾಟೇಜ್ ಇಂಡಸ್ಟ್ರಿ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು. ಇದರಬಗ್ಗೆ ಸಾಕಷ್ಟು ಪ್ರಚಾರಮಾಡಿ ಇದನ್ನು ಮುಂದೆ ತರತಕ್ಕ ದ್ದಾರಿಯಲ್ಲಿ ಸರ್ಕಾರದವರು ಮುಂದುವರಿಯಬೇಕು ಎಂದು ನಾನು ಸರ್ಕಾರಕ್ಕೆ ಹೇಳಬಿಚ್ಛಿಸುತ್ತೇನೆ.

ಇನ್ನು ಕಕೂನ್ ಮಾರ್ಕೆಟ್ ವಿಷಯದಲ್ಲಿ ಹೇಳುವುದಾದರೆ ಈ ಕೈಗಾರಿಕೆಯಿಂದ ಉತ್ಪಾದನೆ ಮಾಡಿದಂತಹ ಕಕೂನ್‌ಗಳನ್ನು ಕೊಂಡು ಕೊಳ್ಳುವಂತಹ ಕೇಂದ್ರಗಳನ್ನು ಸರ್ಕಾರದವರು ಸರಿಯಾಗಿ ವ್ಯವಸ್ಥೆ ಮಾಡಿಲ್ಲ. ಈಗಿನ ವ್ಯವಸ್ಥೆಯ ಪ್ರಕಾರ ಕಕೂನ್‌ಗಳನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋದರೆ ಅಲ್ಲಿರತಕ್ಕ ವ್ಯಾಪಾರಸ್ಥರು ಒಬ್ಬೊಬರು ಮಾತನಾಡಿಕೊಂಡು ಅದನ್ನು ಕಡಿಮೆ ಬೆಲೆಗೆ, ರೈತರಿಗೆ ಸರಿಯಾದ ಬೇಲೆಸಿಕ್ಕದ ಹಾಗೆ ಹರಾಜು ಮಾಡುತ್ತಾರೆ. ಅದು ತಪ್ಪಬೇಕು. ಎಲ್ಲಾ ಕಡೆಯೂ ಕೂಡ ಕಕೂನ್ ಮಾರ್ಕೆಟ್ ಆಗಬೇಕು, ಸೊಸೈಟಿಗಳು ಆಗಬೇಕು. ಸೊಸೈಟಿಗಳ ಮೂಲಕ ಈ ಕಕೂನ್‌ಗಳನ್ನು ಕೊಂಡುಕೊಳ್ಳುವ ವ್ಯವಸ್ಥೆ ಇರಬೇಕು. ಈ ಕೈಗಾರಿಕೆಯನ್ನು ಮಾಡತಕ್ಕ ರೈತನಿಗೆ ಸರಿಯಾದ ನೆರವನ್ನು ಕೊಡಬೇಕು. ಮತ್ತು ಕಕೂನ್‌ಗಳಿಗೆ ಸರಿಯಾದ ಬೆಲೆಸಿಕ್ಕುವಹಾಗೆ ವ್ಯವಸ್ಥೆ ಮಾಡಬೇಕು. ಈ ದೆಶೆಯಲ್ಲಿ ಸರ್ಕಾರ ಯೋಚನೆ ಮಾಡಬೇಕು. ಈ ಕೈಗಾರಿಕೆಗೆ ಬೇಕಾದ ಬಿತ್ತನೆ ಬೀಜವನ್ನು ಒದಗಿಸತಕ್ಕ ಬೀಜದ ಕೇಂದ್ರಗಳನ್ನು ಎಲ್ಲಾ ಕಡಿಯೂ ಕೂಡ ಕನಿಷ್ಟಪಕ್ಷ ಜಿಲ್ಲೆಗೆ 5–6 ಕೇಂದ್ರಗಳಂತಾದರೂ ತೆರೆದು ರೈತರಿಗೆ ಸರಿಯಾಗಿ ಬಿತ್ತನೆಬೀಜ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು. ಹೆಚ್ಚುಕಾಲಾವಕಾಶ ಇಲ್ಲದೆ ಇರುವುದರಿಂದ ಇಷ್ಟು ಹೇಳಿ ನಾನು ಈ ಬೇಡಿಕೆಯನ್ನು ವಿರೋಧಿಸಿ ನಾನು ನನ್ನ ಮಾತನ್ನು ಮುಗಿಸುತ್ತೇತೆ.

Mr. SPEAKER.—There is one more speaker. Seven minutes are left over. Shall we give him a chance now and then adjourn or shall we have him in the afternoon ?

HON'BLE MEMBERS.—In the afternoon, Sir.

Mr. SPEAKER.—The House will now adjourn and reassemble at 2-00 P.M.

The House adjourned for Recess at Thirty-five Minutes past Twelve of the Clock and reassembled at Ten Minutes past Two of the Clock.

[MR. SPEAKER in the Chair.]

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಕೈಗಾರಿಕೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಮಾತನಾಡತಕ್ಕ ಕಾಲದಲ್ಲಿ ನಾನು ಸರ್ಕಾರದ ಧೋರಣೆಯನ್ನು ಮಾತ್ರ ತಿಳಿಸಿ ನನ್ನ ಮಾತನ್ನು ಪೂರೈಸುತ್ತೇನೆ. ಸ್ವಾಮಿ, ಈ ದಿವಸ ದೇಶದಲ್ಲಿ ಕೈಗಾರಿಕೆಗಳ ಮೇಲೆ ಖರ್ಚು ಮಾಡತಕ್ಕ ಹಣ ಸುಮಾರು 4 ಕೋಟಿ ರೂಪಾಯಿಗಳು. ಕೈಗಾರಿಕೆಗಳ ಪ್ರಗತಿಯನ್ನು ನೋಡುವುದಾದರೆ ನನಗಾದರು ಅನಿಸುತ್ತದೆ, ಕೈಗಾರಿಕೆ, ವ್ಯವಸಾಯ ಮತ್ತು ವಿದ್ಯಾಭ್ಯಾಸ ಈ

(ಶ್ರೀ ಎಚ್. ಡಿ. ದೇವೇಗೌಡ)

ಮೂರು ರಂಗದಲ್ಲಿ ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲವೇನೋ ಎಂದು ನನಗೆ ಭಾಸವಾಗುತ್ತಾ ಇದೆ. ಏಕೆಂದರೆ ಇವತ್ತು ಕೈಗಾರಿಕೆ, ವ್ಯವಸಾಯ ಹಾಗೂ ವಿದ್ಯಾಭ್ಯಾಸ ಇವಕ್ಕೆ ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲದೇ ಹೋದರೆ ಪ್ರಾಯಶಃ ದೇಶದ ಪ್ರಗತಿ ಅಷ್ಟೊಂದು ಉತ್ತಮವಾದ ರೀತಿಯಲ್ಲಿ ಆಗಲಾರದು ಎಂಬ ಶಂಕೆಯನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಇವತ್ತು ನಮ್ಮ ಕೈಗಾರಿಕೆ ಯಾವ ಒಂದು ಸ್ವರೂಪದಲ್ಲಿ ಯಾವ ಒಂದು ಸಮಾಜದ ಏಳಿಗೆಗೆ ಅದರ ಆರ್ಥಿಕ ಪ್ರಗತಿಗೆ ಯಾವ ಹಂತದಲ್ಲಿ ಕೆಲಸ ಮಾಡಬೇಕು, ಯಾವ ನೀತಿ ಧೋರಣೆ ಪಾಲಿಸ ಬೇಕೆಂಬ ಬಗ್ಗೆ ಒಂದು ಜಟಾಪಟ ಇದೆ ಎಂಬುದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಾ ಇದ್ದೇನೆ. ನಮ್ಮ ಕೈಗಾರಿಕಾ ನೀತಿ ನಮ್ಮ ಸಮಾಜದ ಹೆಚ್ಚಿನ ಒಂದು ಪ್ರಗತಿಗೆ ಅನುಕೂಲಕರವಾದ ರೀತಿಯಲ್ಲಿ ಹೋಗಬೇಕೆಂಬ ವಿಷಯವನ್ನು ಪ್ರಸ್ತಾಪಿಸಿ ನಾನು ಕೇವಲ ಇಂಡಸ್ಟ್ರಿಯಲ್ ಕೋ ಆಪರೇಟೀವ್ಸ್ ಬಗ್ಗೆ ಮಾತ್ರ ಮಾತನಾಡಲು ಬಯಸುತ್ತೇನೆ. 1964-65 ರಲ್ಲಿ ಮೈಸೂರು ರಾಜ್ಯದ ಹತ್ತಿ ಕೈಗಾರಿಕಾ ಸಹಕಾರ ಸಂಘದ ಆಡಳಿತ ವರದಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ಬಗ್ಗೆ ಇಂಟರ್‌ಪೆಲೇಷನ್ ಹಾಕಿದ್ದೆ ಆವರೆ ಸಾಕಾದಷ್ಟು ಉತ್ತರಗಳನ್ನು ಪಡೆಯಲಿಕ್ಕೆ ಆಗಲಿಲ್ಲ. ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದ್ದೆ ಅದೇನೇ ಇರಲಿ. ಈ ಸಂದರ್ಭದಲ್ಲಿ ನನ್ನಲ್ಲಿರ ತಕ್ಕ ಅಂಕಿ ಅಂಶಗಳನ್ನು ತಿಳಿಸಲಿಕ್ಕೆ ಬಯಸುತ್ತೇನೆ. 1964-65ರ ಸಾಲು ಒಂದರಲ್ಲೇ ಸುಮಾರು 4 ಲಕ್ಷ ರೂಪಾಯಿಗಳು ಅಲ್ಲಿ ನಷ್ಟವಾಗಿದೆ. ಅದನ್ನು ಆಡಿಟ್ ರಿಪೋರ್ಟ್ ಡಿಸ್‌ಕ್ಲೋಸ್ ಮಾಡುತ್ತದೆ. ಅದರ ಜೊತೆಗೆ ಒಂದು ಲಕ್ಷ ಎಂಭತ್ತು ಮೂರು ಸಾವಿರ ರೂಪಾಯಿಗಳ ಮಿಸ್ ಅಪ್ರೊಪ್ರಿಯೇಷನ್ ಆಗಿದೆ ಅದನ್ನೂ ಕೂಡ ಆಡಿಟ್ ರಿಪೋರ್ಟ್ಸ್‌ನಲ್ಲಿ ತಿಳಿಸಿದ್ದಾರೆ. ಮೊನ್ನೆ ಈ ಬಗ್ಗೆ ಉತ್ತರ ಕೊಡುವಾಗ 64ನೇ ಇಸವಿಯಲ್ಲಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟೀಸ್ ಅವರ ಒಂದು ಅಭಿಪ್ರಾಯದ ಮೇಲೆ ಒಬ್ಬರು ಎನ್‌ಕ್ವೈರಿ ಆಫೀಸರನ್ನು ನೇಮಕ ಮಾಡಿದರು. 64 ರಿಂದ 66ನೇ ಮಾರ್ಚ್‌ವರೆಗೂ ಕೇವಲ ಒಂದು ಒಂದೂಕಾಲು ವರ್ಷದ ಅವಧಿಯಲ್ಲಿ ಆ ಎನ್‌ಕ್ವೈರಿ ಆಫೀಸರು ಏನೂ ಕೆಲಸ ಮಾಡಿದರು ಎಂಬುದು ಅರ್ಥವಾಗುವುದಿಲ್ಲ. 66 ಫೆಬ್ರುವರಿಯಲ್ಲಿ ಹೈಕೋರ್ಟಿನಲ್ಲಿ ಈ ವಿಷಯದ ಬಗ್ಗೆ ಒಂದು ಸ್ಟೇ ಆಗಿದೆ. ಅದರ ವಿವರಣೆಗೆ ನಾನು ಹೋಗುವುದಿಲ್ಲ. ಅಂದರೆ ಒಂದು ವರ್ಷದ ನಾಲ್ಕು ಅಥವಾ ಆರು ತಿಂಗಳು ರಾಜ್ಯ ಸರ್ಕಾರದ ಅಧಿಕಾರಿ ಅವರು ಯಾರೇ ಆಗಿರಲಿ ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ಸರ್ಕಾರ ಯಾವ ಉದ್ದೇಶಕ್ಕೆ ಅವರನ್ನು ನೇಮಕ ಮಾಡಿತ್ತೊ ಆ ಉದ್ದೇಶವನ್ನು ಈಡೇರಿಸುವ ದಿಶೆಯಲ್ಲಿ ತನ್ನ ಕೆಲಸವನ್ನು ಮಾಡಲಿಲ್ಲ ಎಂಬುದು ವೇದ್ಯವಾಗುತ್ತದೆ. ಯಾವ ಕಾರಣದಿಂದ ತನ್ನ ಡ್ಯೂಟೀಸ್‌ನ್ನು ಡಿಸ್‌ಚಾರ್ಜ್ ಮಾಡಲಿಲ್ಲ ತಮ್ಮ ಸರ್ಕಾರದ ಹುಕುಂನ್ನು ಜಾರಿ ಮಾಡಲಿಲ್ಲ ಎಂಬ ಪ್ರಶ್ನೆಯನ್ನು ನಾನು ತಮಗೆ ಕೇಳುತ್ತೇನೆ. ಎನ್‌ಕ್ವೈರಿ ಆಗುವುದರ ಬಗ್ಗೆ ಯಾರಿಂದಲೋ ತಮ್ಮ ಕಡೆಯಿಂದ ಏನೋ ಅಡಚಣೆ ಬಂದಿದೆ ಎಂದು ಹೇಳಿ ನನಗ ಸಂಶಯವಾಗುತ್ತಾ ಇದೆ. ರಾಮಕೃಷ್ಣ ಹೆಗ್ಗಡೆಯವರ ಅಧೀನದಲ್ಲಿದ್ದಾಗ ಅವರು ಎನ್‌ಕ್ವೈರಿ ಅಗುವುದರಬಗ್ಗೆ ಸಾಕಾದಷ್ಟು ಆಸಕ್ತಿ ವಹಿಸಲಿಲ್ಲ. ಎಂದರೆ ಇದಕ್ಕೆ ಕಾರಣ ವೇನು? ಇಂತಹ ವಿಷಯಗಳನ್ನು ಸುಮಾರು ನಾಲ್ಕೂವರೆ ವರ್ಷದಿಂದ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಸರ್ಕಾರ ಒಂದು ಸಹಕಾರ ಸಂಘದ ಮೇಲೆ ತನ್ನ ಹಿಡಿತ ಇಟ್ಟುಕೊಳ್ಳುವುದಕ್ಕೆ ಶಕ್ತಿ ಇಲ್ಲ ಎಂದರೆ ಇದಕ್ಕಿಂತ ಹೇಯವಾದ ವಿಷಯ ಬೇರೊಂದಿಲ್ಲ ಎಂದು ಹೇಳಬೇಕಾಗುತ್ತದೆ. ಅಕ್ಯೂಮಲೇಟೆಡ್ ಲಾಸ್ 16 ರಿಂದ 18 ಲಕ್ಷ ರೂಪಾಯಿ ಆಗಿದೆ. ಆದಕ್ಕೆ ಸ್ಟಾಕ್‌ವೇರಿಫಿಕೇಷನ್ ಇಟ್ಟಿಲ್ಲ ಎಂದರೆ ಖಾಸಗಿ ವ್ಯಕ್ತಿಗಳ ಮೇಲೆ ಸರ್ಕಾರ ತನ್ನ ಹತೋಟಿ ಇಟ್ಟುಕೊಳ್ಳುವುದಕ್ಕೆ ಶಕ್ತಿ ಇಲ್ಲ ಎಂದರೆ ನಿಜವಾಗಿಯೂ ಸರ್ಕಾರ ಇದೆಯೇ ಎಂಬುದು ಅನುಮಾನವಾಗುತ್ತಾ ಇದೆ. ಇವತ್ತು ಆಡಿಟ್ ರಿಪೋರ್ಟ್‌ನಲ್ಲಿ ಬರೆಯುತ್ತಾರೆ, ಸ್ಟಾಕ್‌ವೇರಿಫಿಕೇಷನ್‌ಗೆ ಯಾವ ಅಧಿಕಾರಿಯನ್ನು ಹಾಕುತ್ತಾರೆ ಅವರು ಅಂದರೆ ಸಂಘದ ಆಡಳಿತ ಮಂಡಳಿಯವರು ಅವಕಾಶ ಕೊಡುವುದಿಲ್ಲ ಎಂದರೆ ಮಂತ್ರಿಗಳು ಅಥವಾ ಸರ್ಕಾರದ ಉನ್ನತ ಮಟ್ಟದಲ್ಲಿ ಆ ಅಧಿಕಾರಿಗೆ ಆಶ್ರಯವಿಲ್ಲದೇ ಇದ್ದರೆ ಅದು ಸಾಧ್ಯವಿಲ್ಲ. ಸರ್ಕಾರದಿಂದಲೇ ಈ ಒಂದು ಕೆಳಮಟ್ಟದ ವ್ಯವಹಾರ ಮಾಡುವುದು ದೇಶಕ್ಕೆ ಗೌರವ ಬರುವುದಿಲ್ಲ, ಆಡಳಿತಕ್ಕೆ ಗೌರವ ಬರುವುದಿಲ್ಲ ಎಂಬುದನ್ನು ತಮಗೆ ತಿಳಿಸಲು ಇಷ್ಟಪಡುತ್ತೇನೆ. 2,000 ಪವರ್ ಲೂಮ್ಸ್ ಕೊಟ್ಟಿದ್ದೀರಿ. 62 ಲಕ್ಷ ರೂಪಾಯಿಗಳ ಹಣವನ್ನು ಅದರಮೇಲೆ ವೆಚ್ಚ ಮಾಡಿದ್ದೀರಿ. ಅದರ ಪರಿಸ್ಥಿತಿ ಏನಾಗಿದೆ ? ಎಷ್ಟು ಲೂಂಸ್ ಕೆಲಸ ಮಾಡುತ್ತಾ ಇವೆ? ಯಾವ ಯಾವ ಮಟೀರಿಯಲ್ಸ್ ಯಾವ ರೀತಿ ಕೊಟ್ಟಿದ್ದಾರೆ ಎಂಬುದನ್ನೂ ಇದುವರೆಗೂ ಯಾರೂ ತನಿಖೆಮಾಡಿಲ್ಲ, ಅವರು ಯಾರೇ ಆಗಿರಲಿ. ನಾನು ಯಾರ ಮೇಲೂ ವೈಯಕ್ತಿಕವಾಗಿ ಆರೋಪಣೆ ಮಾಡುತ್ತಾ ಇಲ್ಲ ಯಾರು ಹಣ ದುರುಪಯೋಗ ಮಾಡಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಕ್ರಮ ತೆಗೆದುಕೊಳ್ಳದೇ ತಾವೇ ಅಡಚಣೆ ಬಂದು ಇವುಗಳ ಕೆಲಸಕಾರ್ಯಗಳು ಕುಂಠಿತವಾಗುತ್ತಾ ಇದೆ ಎಂದು

ಹೇಳಿ ನನಗೆ ಸಂಶಯವಾಗುತ್ತಾ ಇದೆ. ಹೈಕೋರ್ಟ್‌ನಲ್ಲಿ ಕೇಸು ಇರುವುದರಿಂದ ನಾನು ಆ ವಿಷಯಕ್ಕೆ ಹೆಚ್ಚು ಹೋಗುವುದಿಲ್ಲ. ಈ ರೀತಿ ಹಣವನ್ನು ಸ್ಕ್ಯಾಂಡರ್ ಮಾಡುವುದಕ್ಕೆ ಅವಕಾಶವನ್ನು ಕೊಡ ಬಾರದು ಎಂದು ಹೇಳುತ್ತೇನೆ.

ಸಿಮೆಂಟ್ ಡೀ ಕಂಟ್ರೋಲ್ ಮಾಡಿದ್ದೀರಿ. ಬಳಕೆದಾರರಿಗೆ ಬಹಳ ಸುಲಭವಾಗಿ ದೊರೆಯು ತ್ತದೆ ಎಂದು ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿರಿ. 8 ರೂಪಾಯಿ ಇದ್ದದ್ದು ಮಾರ್ಕೆಟ್‌ನಲ್ಲಿ ಇವತ್ತು 18 ರೂಪಾಯಿಗಳ ವರೆಗೂ ಮಾರಾಟವಾಗುತ್ತಾ ಇದೆ. ಬಳಕೆದಾರರಿಗೆ ಬಹಳ ಸರಳವಾಗಿ ಸುಲಭವಾಗಿ ದೊರೆಯಬೇಕೆಂಬ ಸರ್ಕಾರದ ಉದ್ದೇಶ ಏನಿತ್ತೋ ಅದು ಸಫಲವಾಗದ ಹಾಗೆ ಆಗಿದೆ. ಮನಸ್ಸಿಗೆ ಬಂದ ಹಾಗೆ ವ್ಯಾಪಾರ ಮಾಡುತ್ತಾ ಇದ್ದಾರೆ. ಆದ್ದರಿಂದ ಇದನ್ನು ವಿತರಣೆ ಮಾಡು ವುದರ ಬಗ್ಗೆ ಎಚ್ಚರಿಕೆ ವಹಿಸಿ ಸರಿಪಡಿಸುವುದಕ್ಕೆ ಏನು ಅಡಚಣೆ ಇದೆ ಎಂಬುದನ್ನು ಪ್ರಶ್ನೆ ಮಾಡು ತ್ತೇನೆ. ಬಹಳ ಶೀಘ್ರವಾಗಿ ವ್ಯವಸ್ಥೆ ಮಾಡದೇ ಹೋದರೆ ನಿಜವಾಗಿಯೂ ಬಳಕೆದಾರರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಯಾವುದೇ ರೀತಿಯಿಂದಲೂ ಉಪಕಾರ ಮಾಡಿದ ಹಾಗೆ ಆಗುವುದಿಲ್ಲ. ಇದರಿಂದ ಬಳಕೆದಾರರಿಗೆ ಕೆಟ್ಟಪರಿಣಾಮವಾಗಿದೆ ಎಂಬುದನ್ನು ಹೇಳಬಯಸುತ್ತೇನೆ.

ಹಾಸನ ಜಿಲ್ಲೆಯಲ್ಲಿ ಹೇಮಾವತಿ ಪ್ರಾಜೆಕ್ಟಿನಿಂದ ನಾಲ್ಕು ತಾಲ್ಲೂಕುಗಳಲ್ಲಿ 60 ಸಾವಿರ ಎಕ ರೆಗೆ ನೀರಾವರಿಯಾಗಲು ಅವಕಾಶವಿದೆ. 4 ಪಂಚವಾರ್ಷಿಕ ಯೋಜನೆಯಲ್ಲಿ ತಮ್ಮ ಪ್ಲಾನ್ ಪ್ರೋಗ್ರಾಂಮ್ ಏನಿದೆ ಅದರಲ್ಲಿ ಹಾಸನ ಜಿಲ್ಲೆಗೆ ಒಂದು ಷುಗರ್ ಫ್ಯಾಕ್ಟರಿ ಕೊಡಬೇಕೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಕೊಡತಕ್ಕ ಪ್ಲಾನ್‌ನಲ್ಲಿ ಇನ್‌ಕ್ಲೂಡ್ ಮಾಡಬೇಕೆಂದು ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI K. MALLAPPA.—Sir, many hon'ble members particularly from the Opposition side have participated in the debate on these demands. Some have given very useful suggestions. I have noted them down for action. Some have made criticisms, sometimes very strong criticism too, against the working of the Department of Industries.

These criticisms could be summarised under three heads. The first is that the industrial progress in the State has received a set back. The second is that the public sector industries have not been working profitably and the third relates to several miscellaneous items. I propose to deal with these criticisms in the order in which I have indicated them.

The public-sector industries in this State were started some years ago. Many of them have become non-viable. In many of them the installed machinery has become obselete. In almost all of them the technology has become out of date. Therefore, the Department has now taken up the work of expanding and modernising all these industrial concerns. I will give a brief note of the various expansion and modernisation programmes taken up by the Department.

The Government Porcelain Factory: The present capacity of the factory is about 2,500 tons and most of it is low tension insulators. Now, we have taken up the programme to expand the production to 7,500 tons insulators of high tension. The estimated cost will be about Rs. 96.50 lakhs. The work has been taken up and it has made very good progress.

The Mysore Implements Factory, Hassan: This is manufacturing implements and tools required for our farmers and this is proposed to be expanded by investing a further sum of Rs. 30 lakhs during the Fourth Plan. Arrangements have already been made and we have already placed orders for machinery. Sri Lakshmaniah while speaking about the quality of the implements produced in this factory, stated that

(SRI K. MALLAPPA)

they were not of the standard of the implements produced by private industrialists. I should like to take this opportunity to state that the implements manufactured at the Government Factory are certainly not in any way inferior to any other production in this country; they are very good and the demand has been going up day by day and it has become impossible for the factory to meet the growing demand.

Soap Factory: The present licensed capacity is about 1,500 tons per year. Now, we have secured a licence for producing 6,000 tons per annum. A scheme of modernisation and expansion of this factory has been taken up at an estimated cost of Rs. 33.7 lakhs and we have already secured machinery from Italy for the Synthetic Detergent Plant and a refining and Hydrogenation Plant at a cost of Rs. 20.15 lakhs.

Old Government Electric Factory: To meet the growing demand for transformers and scientific survey instruments produced in this factory, it will be expanded at an estimated cost of Rs. 30 lakhs.

The Sandal Oil Factory: To meet the increased demand for sandal oil, an expansion will soon be taken up at a cost of Rs. 25 lakhs for modernising the Factories at Mysore and Shimoga by replacement of old boilees, etc.

The Central Industrial Workshop, Bangalore: An expansion scheme has been taken up for the production of stone crushers and road rollers. Fabrication equipment for asphalt mixer and concrete mixer has been purchased at a total cost of Rs. 25 lakhs. We are already producing road rollers and a few have been put on the road.

The Tungabhadra Steel Products Ltd.: It is a joint venture of the Government of Mysore and Andhra Government. It is proposed to expand this factory. The Government of India has offered its capital participation. In April next we are going to receive Rs. 21 lakhs from the Government of India. After the financial participation, we have been making arrangements for technical collaboration and financial participation by some German firm. After this participation is accomplished, the Government of India will be making a further investment of one crore of rupees in this concern.

The Mysore Iron and Steel Ltd., Bhadravati: The company has an expansion programme to expand its pig iron production from the present level of 80,000 tons to 2 lakh tons per annum. The production of ferro-silicon has been expanded to 20,000 tons per annum and arrangements are being made to increase it further by 15,000 tons. I should like to point out in this context that this is the only concern which has been producing ferro-silicon in the country. The capacity for production of cast iron pipes has been expanded by installing spun pipe plant of annual capacity of 17,000 tons. A sintering plant with a capacity of 80,000 tons per annum has been installed. The company has undertaken a scheme for conversion of mild steel into alloy and special steel in technical collaboration with an Austrian Company and this expansion programme will cost Rs. 20 crores.

The company has also a scheme to expand cement production from the present level of 280 tons per day to 800 tons per day. Plans are being made to produce such ferro alloys as low carbon ferro-manganese and ferro-chrome. Success has been achieved in producing the low carbon ferro-manganese and trials are being conducted for the production of low carbon ferro-chrome.

While criticising the progress of Bhadravati Factory, Sri Suryanarayana Rao quoted some figures to show that our production has been going down in the factory. I do not know from where he got the figures. I read the figures from the Quarterly Bulletin of Statistics.

2-30 P.M.

During 1955 the production was 55,111 tons.

„ 1961 it was 84,376 tons.

„ 1963 it was 83,336 tons.

Perhaps my friend has read only the production of the previous year.

It is again on monthly production basis :

During 1963-64	in April	the production was	6,965	Tons.
„	in May	„	6,968	„
„	in June	„	6,668	„
„	in July	„	7,221	„
„	in August	„	7,209	„
„	in September	„	6,816	„
„	in October	„	7,209	„
„	in November	„	7,026	„
„	in December	„	6,842	„
„	in January 1964	„	7,126	„
„	in February „	„	7,119	„
„	in March „	„	7,855	„

Up to end of March 1964 the total production was 85,000 tons.

SRI K. S. SURYANARAYANA RAO.—Please turn to page 5 in the same book where it is given the output of finished and unfinished steel.

SRI K. MALLAPPA.—In some items it goes up and in some items it goes down. I have given the total figures. He should not have given the misleading figures. He has quoted the figures for the year 1963-64. He has quoted the figures of one month during 1964-65. It is true the production has come down in that particular item.

Mysore Paper Mills : It had a capacity of 25 tons per day and now it has been expanded to 75 tons a day. Similarly we have taken the expansion of Hatti Gold Mines. It is producing 400 tons per day

(SRI K. MALLAPPA)

and by about this time next year the production will be about 1,000 tons per day. The total estimated cost of the expansion and development will be Rs. 3 crores. This is in brief the programme of expansion, modernisation of the old Factories. Some works will spill over to 4th Plan and will be continued in the next plan period.

New Industries.

The Government Electric Factory: This was run as a Departmental Concern and it has been converted in to a Public Limited Company. This Factory produces Transformers, Motors, Switch-gears, Switch boards. The total investment will be about Rs. 10 crores. Sri Suryanarayana Rao has referred to some observations of the Accountant General in his report. It is true that some experts who are trained in Germany came. There was delay in the construction of some other works. As such the delay was inevitable especially when there was shortage of cement and steel. But these experts who came to the Factory were not allowed to be idle. Their services were utilised for installation of the machinery which arrived at the Factory site and services of one or two of them were utilised at the Government old Electric Factory which is now as I have already stated being modernised. Therefore, there is no question of wasting the talents of these persons which is being properly utilised.

Coming back to the new Industries, the Mysore State Industrial Investment and Development Corporation, which was incorporated recently, has finalised the plans to set up a Textile Mill at Hassan and Asbestos Cement Plan at Holenarasipur, and a Cosmetic Plant at Bangalore, The cement Corporation of India have been licensed to set up a Cement Plant with a capacity of Rs. 4,00,000 tons at Sedam in Gulbarga District.

With regard to the Private Sector and Joint Sector, I will make a brief statement about the progress recorded.

Cement: There are 4 Cement Factories in the State. Recently two Cement Factories were set up, namely, A.C.C. at Wadi and Mysore Cements at Ammasandra. In addition to A.C.C. and Cement Corporation of India there are two more parties holding letters of intent for Cement Factories namely Nagargalli Cement Company Ltd., Hubli, and Seth Lakshmandas & Sons, Hyderabad.

There are 8 Sugar Factories in the State. A Sugar Factory is coming up at Gowribidanur. A letter of intent has been granted for a Sugar Factory at Bidar and three more Factories at Hiriyur, M. K. Hubli and Kollegal will be started shortly. Necessary plans have been given for granting licence in this regard. There is a proposal to establish a public sector Sugar Factory for export of Sugar in the Thungabhadra Atchkat area. My friend Sri Deve Gowda has suggested that a

Sugar Factory should be established in Hassan in view of the fact that Hassan is going to get irrigation facilities from Hemavathi. This will be borne in mind and similarly Sri Siddaiah Kashimath has suggested that a Sugar Factory should be established at Hanagal. We have prepared a report in which the prospective sites have been noted and in due time action will be taken and recommendation will be made to Government of India. It must be borne in mind that Factories cannot be started as we wish. We have to obtain licence from the Government of India and assure the Hon'ble Members that we will do our best to place the various cases for Sugar Factories before the Government of India and press the Government of India to issue licences.

Textiles: 19 new Units in Textile Industry have been sanctioned for the State during the Third Plan. They are all under various stage of implementation. Of course in Bangalore two or three are coming up and in Chitaldrug two or three are coming up. I assure the House that in almost all the cases, action is being taken up and they are in various stages of implementation.

The Indian Aluminium Company: They are establishing an aluminium factory near Belgaum with an initial capacity of 30 thousand tons. It is proposed to increase the capacity by about 70,000 tons at the second stage. Some other Members expressed doubt about this factory coming into being. I want to tell those sceptic Members not to entertain any pessimistic attitude regarding this aluminium factory; it is going to be established. On the 26th, there will be a public function at which an agreement for the supply of power will be signed between the Company and the Mysore Electricity Board.

SRI C. J. MUCKANNAPPA.—But it is not going to be of the capacity assured.

SRI K. MALLAPPA.—There is absolutely no change. It was never assured that to start with, it will be a factory with a capacity of 2 million tons. It is impossible, to produce one million tons initially. I have never said so. I have always said that a factory with a capacity of 1 lakh tons will be installed; to begin with 35,000 tons and ultimately 100 thousand tons, that is, one lakh tons. Of course, it will be in the private sector.

Fertilisers: Of course, it has two parties, namely, Messrs. Kamani Engineering Corporation and Messrs. Dugal Enterprises have applied for establishing fertiliser factory of a capacity on one lakh tons and 6,62,000 tons respectively. It is at Mangalore, as I already said. Messrs. Fact. of Alwaye have also submitted a project report in this connection to the Government of India. It is being examined. We are prepared to implement it. I have no doubt in my mind whatsoever that it is not going to be established. Of course, there are some difficulties. These difficulties have to be overcome. Without a port, it is not possible to establish a fertiliser factory because we will have to import rock

(SRI K. MALLAPPA)

phosphate and naptha. To import these materials, a port is absolutely necessary. Every day, 3-4 lakh tons of cargo has to be handled. Now, the construction of the port at Mangalore is so planned that one berth will be ready by the time the fertiliser factory comes up. Now everything has been set according to this programme. The construction of the harbour is so phased that at the first stage a berth will be ready for the fertiliser factory to handle cargo. My friends expressed some doubt about the fertiliser factory ever coming up at Mangalore, merely because the fertiliser factories for Cochin and Durgapur have been announced. Our requirements of the nitrogenous fertiliser during the Fourth Plan will be of the order of 204 lakh tons; that is, it will be about 24 million tons. We have hardly touched the fringe of it. Therefore, there is scope for many more factories. Durgapur and Cochin may be producing 4 lakh tons of Nitrogenous fertiliser; our requirement will be 2.4 million, that is 204 lakh tons. Therefore, it cannot be argued that there is no scope at all for the fertiliser plant at Mangalore. Mangalore and many other places will have to have fertiliser factories set up as early as possible, and in any case, before the end of the Fourth Plan.

SRI C. J. MUCKANNAPPA.—Who has come forward?

SRI K. MALLAPPA.—There are two parties. Messrs. Fact of Alwaye have sent up a feasible report. Messrs. Kamani Engineering Corporation have made an application. Messrs. Dugal Enterprises have applied for a license. We have these two applications before the Government of India.

The Mysore Acetates and Chemicals, Ltd. is an individual factory. They are implementing a scheme costing about Rs. 5 lakhs for production of cellulose Triacetate, Secondary Acetate, Moulding compounds, Plasticiders, Acetic Acid, Acetic Anhydride, etc., which are used for film, plastic and rayon industries; and the factory is coming up near Mandya. It will come into production possibly within one year.

It is not as easy to start industries as one desires. There are many difficulties. in the way. Sri Gadag has touched various difficulties that we have in the State.

SRI C. J. MUCKANNAPPA.—How are other States managing?

SRI K. MALLAPPA.—Others have got certain advantages. We have no port, no proper railways. If we had a port, the fertiliser factory would not have been a problem at all. It would have been started here much earlier than the factories eslewhere. Even refineries could be started. We have the best case for Hospet; it is a very very sound case. But in the Anglo-American Consortium Report, Vizag has scored over Hospet, just because Vizag has got a port and Hospet has not got a port. Therefore, we will try to build Mangalore port. Mangalore port is going to be build; similarly, Karwar Port is going to be built. These disadvantages are not found in Madras or in Maharashtra State.

Then, till now we had power shortage in this State. It was only about the beginning of last year, that is in 1965, this difficulty was removed. With the generation of power at Sharavathi, it is expected that the industrial progress will gain its momentum. It is hardly one year since we g t the power and we cannot do any miracles. We have to go through the hard way and the long way.

Of course, another difficulty is the shortage of capital in this country. Capital market is very shy and unless pepole come forward to invest in industries, we connot hope to achieve very quick results.

We have been encouraging even people from outside to come and invest. Some members observed that we have not encouraged people from outside, and we have tried to harass them. It is not correct. I ssure the Hon'ble Members, whether capital is from outside or from our own state every possible assistance, every possible encouragement will be given to the investors to invest and start industries in the State. The third difficulty is about the capital goods. Big industries require a lot of capital goods and they have to be imported from foreign countries. We have foreign exchange shortage. In spite of these difficulties, we have been able to make some achievements which can by no means be called small. We were able to get a loan of about Rs. 10 crores from German Credit Bank and we expect Messrs. NGK, Japan and AEG from Germany to participate in equity in the Government Porcelain Factory and New Government Electric Factory. Not only have we been trying to get loans from outside, but we are also trying to invite and persuade foreign investors to come and make investments in this country. A licence has been given to have a caustic soda plant started here. That licence was given to Mysore Chemicals and Fertilisers and arrangement is being made to register a Company shortly and take up production of caustic soda in the State. Some members referred to power tiller plant. Two years ago when I had been to Japan I contacted one of the best manufacturers in that country. They have agreed to give not only technical collaboration but take part in capital participation also. But unfortunately the matter is held up with the Government of India. I would like to tell the House that the Government of India has almost cleared it and soon there will be a power tiller plant. Of course, Punjab also may have a power tiller plant. But I assure the House that ere long there will be a power tiller plant in this State with the collaboration of Mitzu Bichi, one of the popular producers of power tillers in Japan.

Sri S. SIVAPPA.—When it will be done ?

Sri K. MALLAPPA.—We are going to have it soon; within the next year, The plant is going to be established and within about 2 years we may be able to produce some parts and within the next five years, every part of the power tiller will be manufactured and made available to the farmers here. Then about the working of our industrial concerns, Members criticised that our industrial concerns have not been making profit at all.

Sri C. J. MUCKANNAPPA.—What about small car project?

Sri K. MALLAPPA.—There was an interpellation about that and I have in that connection given a satisfactory answer. We are making arrangements for the production of small cars here. We have not been resting on our oars and efforts will be made to see that the Factory is established in the State. About the working of our Government Industrial concerns, the New Government Electric Factory has started producing according to schedule switch-gears and transformers. About the Government Porcelain, capital invested is Rs. 194.89 lakhs; it has earned a profit of Rs. 31.74 lakhs; Mysore Implements Factory, capital invested is Rs. 41.43 lakhs and profit earned is Rs. 11.84 lakhs; this is for the year 1964-65; Reports have been placed before the House and from them you can get these figures. I have collected them and I am reading them for the benefit of the Members. Now about the Government Soap Factory, Investment is Rs. 80.40 lakhs and the profit is Rs. 41.68 lakhs; Government Electric Factory; capital invested is Rs. 154.69 lakhs; profit is Rs. 22.98 lakhs; Sandal Oil Factory, capital invested is Rs. 33.50 lakhs; profit earned is Rs. 23.19 lakhs; Central Industrial Workshop, Bangalore, capital invested Rs. 46.19 lakhs profit earned is Rs. 8.26 lakhs; Tungabhadra Steel Products Ltd., capital is Rs. 50 lakhs, Rs 25 lakhs Mysore and Rs. 25 lakhs Mysore and Rs. 25 lakhs Andhra Government; profit earned is Rs. 10.59 lakhs; Mysore Iron Works Ltd., capital invested is Rs. 400 lakhs and the profit is Rs. 68.78 lakhs; Mysore Sugar Company, capital nvested is Rs. 38.50 lakhs and profit earned is Rs. 6.70 lakhs.

Sri S. SIVAPPA.—Does it tally with the Budget you have given?

Sri K. MALLAPPA.—It should tally. Perhaps you quoted figures iwhich include not only working expenditure but also investment. This is as regards profit after meeting the working expenditure; part of it will go as interest to the State and the rest will go as dividend. We have not deducted interest payable to Government. In the case of Government concerns, there is no question of interest or dividend. Whatever is saved is profit and it goes to Government. Then about criticism regarding the various other individual items; Sri Gopala Gowda and Sri Krishna referred to Bagalkot Cement Company. It is a Shareholders' Company and the Government holds a minority share in that Company. It is true that there were some irregularities. Shareholders appointed a Committee at their general body meeting and the Committee went into the accounts maintained by the Managing Agency and found certain irregularities.

Mr. SPEAKER.—The best thing is to leave it at that. I am told it is *sub judice*.

3-00 P.M.

I think a couple of days back the Hon'ble Member Sri Sanjeevanath Aikala was putting a question and this matter was referred to. It is pending before the court.

Sri G. V. GOWDA (Palya).—But we are informed that the case has been withdrawn.

Sri S. NIJALINGAPPA.—The fact of withdrawal itself is *sub judice*. Therefore, no reference need be made.

Mr. SPEAKER.—It may be left at that. It does not mean that the august House will not have an opportunity to discuss when *lis pendens* is over.

Sri C. J. MUCKANNAPPA.—The Chief Minister was pleased to observe that the withdrawal has been *sub judice*. How is it *sub judice*, Sir? You are a better judge. After the withdrawal, will it mean *sub judice*?

Mr. SPEAKER.—After the withdrawal has taken place effectually, when no matter is pending before the court, it is not *sub judice*. But if somebody orders to withdraw that order by itself will not take away the matter from the jurisdiction of the court. It is a matter pending before the court. If the matter is pending before any court, any order passed does not result in withdrawal and effectually taking it away from the court and its being made beyond the operation of the doctrine of *sub-judice*. The matter appears to be that the Government has arrived at a conclusion to withdraw. It is an executive order which does not bind a court. The application has to be filed before the court. Persons are entitled to oppose. It is said it is being opposed so that the result is, the case has not been effectually withdrawn. Hence it is better to simply leave it at that. Let it not be made worse for anybody.

Sri K. MALLAPPA.—Reference was made by some Hon'ble Members as regards the Central Public Sector industries in the State. They argued that most of the Public Sector industries were given away to other States and Mysore was not given any industry in the Public Sector. It is not correct. It is true that there were some public sector industries in the State and their number has not been increased. But they have beeen expanded. The HAL for instance started with 10 crores, now it is approximately 18 crores. The investment is 18 crores. The ITI started with 4 crores. The present investment is 8 crores. Almost double. The HMT also has been expanded. Every State expects the Centre to start a public sector industry. Our factories have been expauded and on that score we have absolutely no grouse whatever. ಆದರೆ ತಾವು ಹೇಳಿದ್ದೀರಿ, ಸರ್ಕಾರದವರು ಹೊಸ ಕಾರ್ಖಾನೆಗಳನ್ನು ಏನೂ ಮಾಡಿಲ್ಲ ಎಂದು., ಆದರೆ ಹಳೆಯ ಕಾರ್ಖಾನೆಗಳನ್ನು ದೊಡ್ಡದು ಮಾಡಿದ್ದಾರೆ.

Mr. SPEAKER.—The public sector of the Central Government does not come in here.

Sri K. MALLAPPA.—The HMT began with one unit; Now there are two units and in addition there is a watch company. The BEL capacity has been doubled. The Central Machine Toll Institute has been started new with Czechoslovakian collaboration. It is entirely new. Bharat Heavy Earth Movers is a new unit. In that way, we have been able to get new unit and the capacity of the existing units have been enlarged and in some cases have been doubled also.

(SRI K. MALLAPPA)

So, there is no basis to say that the State has not been treated well in this respect. I say that the State has been given a fair deal in this matter.

Regarding Khadi Board, the old accounts have been compiled up-to-date. They are kept ready for the A.G. to inspect and a request has been made to the A.G. to inspect. As soon as the inspection is made, a report will be placed before this House when there will be full opportunities for the Members to express their views on the matter. I assure that it will be as early as possible. Perhaps, at the next meeting the report will be placed.

Wherever cases of misappropriation and falsification of accounts have been detected, action has been taken and complaints have been filed. Every month I, the I.G.P. and the Registrar of Co-operative Societies and the President of the Khadi Board sit at a meeting to review the progress of the accounts and also to review the progress of prosecutions that have been launched. So I say tnat every action that is necessary has been taken and we have not been indifferent so far as matters relating to Khadi Board are concerned.

Then about Industrial estates. We have a programme to have two industrial estates at least in every district. So far we have completed about 18 industrial estates and the remaining industrial estates will be taken up during the next plan period and they will be completed. Of course, there are some difficulties. Where land is easily available, it is very easy to take them and complete them. Where land is difficult to get, we have to take acquisition proceedings and it is within the experience of every Hon'ble Member of this House how acquisition proceedings take a long time. Nevertheless, we will try to expedite as much as possible the acquisition proceedings and take possession of the land and construct industrial estates.

There is a very large demand for industrial estates from all the districts. With our limited financial resources, it may not be possible for meeting the large demand from the various districts. Therefore, we have planned to encourage industrial co-operative societies as much as possible. Or, even if companies, private or public, were to organise, we have tried to help them. We have already dedicted to form a statutory board for acquiring land. Soon, a Bill will be placed before this House. With the formation of the Statutory Board, land will be acquired in various places of potential industrial development and land taken will be developed for industrial purposes and such developed land will be made available for such purpose.

My friend Sri Kashimath did not want industrial administrators in the industrial estates. They have got a definite function to perform. They have not only to collect rent from the sheds, but they have to maintain industrial estates also. In some places we are going to have raw material godowns and these will be run by them. In every industrial estate, there will be a common facility centre for the use and

benefit of the industrialists in the area and such common facility centres will have to be run by somebody. We are now trying to have two grades of industrial estate administrative officers—one junior and another senior grade. In bigger places like Bangalore and Hubli, senior grade officers will be appointed. In small places like Mercara, Tumkur and other places, junior administrative officers will be appointed. Now, I hope the Hon'ble Member will feel it necessary to have industrial administrative officers and I hope that I am able to convince him about the necessity of such officers.

About the rent in industrial estates referred to by my friend Sri Kashimath, till now, there were some concessional rates. But this cannot be allowed to continue for long. As an encouragement, it was given. Now the time has come when we have to collect the normal rent. But, even so, the normal rent, when compared to market rent should be said as concession. In Bangalore, from 12 Paise, it has been raised to 13 Paise this year and it is going to be progressively raised till we get the level of economic rent. In Hubli, it was 9 Paise and this year, it has been raised to 11 Paise. So we are now progressively trying to raise the concessional rent to the economic rent. So, there cannot be any complaint on the ground that the rent is going to be excessive.

About the Hospet Steel Plant, enough has been said on the floor of the House. Questions has been answered. We have a very good case, and I want to repeat that we have a very good case. We have made very strong representations to the Central Government for a Plant at Hospet and I hope that the justice of our case will be recognised by the Government of India and the Plant given to the State at Hospet.

Sir, I do not think I have much to say. I have attempted to answer many of the criticisms raised.

SRI S. M. KRISHNA.—What happened to the small car project ?

SRI K. MALLAPPA.—It is being considered. We are trying to manufacture.

MR. SPEAKER.—It does not come under this general Budget.

SRI K. MALLAPPA.—I have answered the question. It will be prepared when we try our proto-types and developed a model.

SRI K. P. GADAG.—In my speech I had raised the question of the equation of Junior Industrial inspectors...........

MR. SPEAKER.—This is under General Administration.

SRI K. MALLAPPA.—It is being examined, Sir.

ಶ್ರೀ ಎಸ್. ಪಿ. ಘಾಟುದೆ.—ಗ್ರೇಟರ್ ಮೈಸೂರು ರೇಯಾನ್ ಪಲ್ಪ್ ಫ್ಯಾಕ್ಟರಿ ವಿಚಾರವಾಗಿ ನಾನು ಕೇಳಿದ್ದೆ. ಅದಕ್ಕೆ ಏನೂ ಹೇಳಲಿಲ್ಲ.

SRI K. MALLAPPA.—The licence was cancelled once. But the licensee assured that he would implement it. So, the licence has been renewed to him. It is hoped that he will take action for implementation. In case he fails to do so, the licence will be cancelled and other arrangements made.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇಂದ್ರದವರು ಪರ್ಮಿಷನ್ ಕೊಡದೆ ಇದ್ದರೆ ನಾವೇ ಉಕ್ಕಿನ ಕಾರ್ಖಾನೆಯನ್ನು ಮಾಡಿಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಒಂದು ಸಾರಿ ಹೇಳಿದ್ದರು. ಏನಾದರೂ ಆಗಲಿ ನಾವು ಮಾಡಿಯೇ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಸರ್ಕಾರದವರು ಇಂಥ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಒಂದು ಅವಕಾಶವಿದೆ. ಮೂರನೆಯ ಯೋಜನೆಯಲ್ಲಿ ಒರಿಸ್ಸಾ ಸರ್ಕಾರದವರು ಒಂದು ಉದ್ದಿಮೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದುದರಿಂದ ಒಂದು ಪ್ರೈವೇಟ್ ಎಂಟರ್‌ಪ್ರೈಸ್‌ಗೆ ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ಕೇಂದ್ರ ಸರ್ಕಾರದವರು ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ನಮ್ಮ ಸರ್ಕಾರದವರು ಹಾಕುವುದಕ್ಕೆ ಅನುಕೂಲವಾಗಿ ಇಲ್ಲದೆ ಇದ್ದರೆ ನಮ್ಮ ಸರ್ಕಾರದವರೂ ಕೂಡ ಖಾಸಗಿ ಕ್ಷೇತ್ರದಲ್ಲಿ ಇದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಿದೆ ಇದರ ಬಗ್ಗೆ ಸರ್ಕಾರದ ನಿಲುವು ಏನು ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಅನೇಕ ಸಂದರ್ಭದಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಸರ್ಕಾರದ ನಿಲುವು ಏನು ಎನ್ನುವುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಕೇಂದ್ರ ಸರ್ಕಾರದವರು ಈ ಕಾರ್ಖಾನೆ ಆಗುವುದಿಲ್ಲ ಎಂದು ಹೇಳಿಲ್ಲ. ಒಂದು ವೇಳೆ ಉಕ್ಕಿನ ಕಾರ್ಖಾನೆ ಬೇರೆ ಕಡೆಗೆ ಹೋಗುವುದಾದರೆ ಪಿಗ್ ಐರನ್ ಕಾಂಪ್ಲೆಕ್ಸ್ ಆಗುತ್ತದೆ ಎನ್ನುವ ನಿರೀಕ್ಷೆ ಇದೆ. ಈ ಬಗ್ಗೆ ಇನ್ನೂ ಅಂತಿಮವಾಗಿ ತೀರ್ಮಾನವಾಗಿಲ್ಲ. ಇದು ಯಾವುದೂ ಸಾಧ್ಯವಿಲ್ಲದೆ ಇದ್ದರೆ ರಾಜ್ಯ ಸರ್ಕಾರ ಏನು ಮಾಡಬೇಕೋ ಅದನ್ನು ಮಾಡಿಯೇ ಮಾಡುತ್ತದೆ.

ಶ್ರೀ ಬಿ. ವಿ. ಮಾಗಾವಿ (ಹಾವೇರಿ).—ಪ್ರೈವೇಟ್ ಸೆಕ್ಟರ್‌ನಲ್ಲಿ ಟೆಕ್ಸ್‌ಟೈಲ್ ಮಿಲ್ಲನ್ನು ಮಾಡುವುದಕ್ಕೆ ಕೆಲವರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಆ ಮಿಲ್‌ಗಳನ್ನು ಪ್ರಾರಂಭ ಮಾಡುವುದಕ್ಕೇನಾದರೂ ಟೈಂ ರಿಸ್ಟ್ರಿಕ್‌ಷನ್ಸ್ ಹಾಕಿಲ್ಲವೇ ?

ಅಧ್ಯಕ್ಷರು.—ಯಾವ ಪ್ರಾವಿಷನ್ನಿನಲ್ಲಿ, ಯಾವ ಸ್ಕೀಂನಲ್ಲಿ ಅದು ಬರುತ್ತದೆ ?

ಶ್ರೀ ಕೆ. ಮಲ್ಲಪ್ಪ.—ಹಾವೇರಿ ಟೆಕ್ಸ್‌ಟೈಲ್ ಮಿಲ್ಸ್ ವಿಷಯವನ್ನು ಮಾನ್ಯ ಸದಸ್ಯರು ಎತ್ತಿರಬಹುದು. ಅವರು ತಕ್ಕ ಕ್ರಮ ತೆಗೆದುಕೊಳ್ಳದಿದ್ದರೆ ಹಾವೇರಿಯಲ್ಲಿ ಬೇರೆ ಯಾರಾದರೂ ಪ್ರಾರಂಭಮಾಡುವವರು ಇದ್ದರೆ ಅವರಿಗೆ ಲೈಸನ್ಸ್ ಕೊಡುತ್ತೇವೆ. ಕೆಲವರು ಹಾವೇರಿಯಲ್ಲಿಯೇ ಆ ಮಿಲ್ಲನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯಪಡಿಸುತ್ತಿದ್ದಾರೆ. ಅದರಿಂದ ಈಗಿನವರು ಅದನ್ನು ಪ್ರಾರಂಭಮಾಡದಿದ್ದರೆ, ಬೇರೆಯವರು ಯಾರಾದರೂ ಪ್ರಾರಂಭಮಾಡುತ್ತೇವೆಂದು ಬಂದರೆ ಅವರಿಗೆ ಲೈಸನ್ಸ್ ಕೊಡಲಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಹುಬ್ಬಳ್ಳಿಯಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿನ ಉದ್ಯಮದಾರರು ಅಲ್ಲಿ ಕಚ್ಚಾಮಾಲು ಬೇಕಾದಷ್ಟು ಸಿಗುತ್ತದೆ. ಅದನ್ನು ಇಲ್ಲಿ ಸಾಕಷ್ಟು ಉಪಯೋಗಮಾಡದೆ ಇದೆಯೆಂದು ಹೇಳಿದ್ದಾರೆ. ಆದ್ದರಿಂದ ಎಲ್ಲಾ ಕಾನೂನುಗಳನ್ನು ಬಂದ್ ಮಾಡಿ ಹೊರಗೆ ಹೋಗದಹಾಗೆ ತಡೆಹಿಡಿದು ಇವತ್ತಿನವರೆಗೆ ನಮ್ಮಲ್ಲಿ ಸಿಗುವಷ್ಟು ಎಲ್ಲಾ ಕಚ್ಚಾಮಾಲು ನಮ್ಮ ದೇಶದಲ್ಲಿಯೇ ಉಪಯೋಗವಾಗುವಂತೆ ವ್ಯವಸ್ಥೆಮಾಡುತ್ತಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಕಚ್ಚಾಮಾಲು ನಮಗೆ ಎಷ್ಟು ಸಿಗುತ್ತದೋ ಅಷ್ಟನ್ನು ಕೊಡುತ್ತೇವೆ. ಅಲ್ಲಿ ನಾನ್‌ಫೆರಸ್ ಮೆಟಲ್ಸ್‌ಗೆ ಕಚ್ಚಾಮಾಲನ್ನು ಕೇಳಿದ್ದಾರೆ. ತಾಮ್ರ, ಸತುವು ನಮ್ಮ ರಾಜ್ಯಕ್ಕೆ ಬರುವುದು ಬಹಳ ಕಡಮೆ. ಹೆಚ್ಚಿನ ಪ್ರಮಾಣದಲ್ಲಿ ಅವು ಸಿಗುವುದಿಲ್ಲ. ಇರತಕ್ಕ ಪ್ರಮಾಣವನ್ನು ಹಂಚುತ್ತಿದ್ದೇವೆ. ಮಾನ್ಯ ಸದಸ್ಯರ ಕೋರಿಕೆಯಂತೆ ಅವರಿಗೆ ಪೂರೈಕೆಯಾಗುವಷ್ಟು ನಮಲ್ಲಿಲ್ಲ. ಅದು ಅಷ್ಟಾಗಿ ಇಂಪೋರ್ಟ್ ಆಗುತ್ತಿಲ್ಲ. ತಾಮ್ರದ ಉತ್ಪತ್ತಿ ನಮ್ಮಲ್ಲಿ ಬಹಳ ಕಡಮೆ. ಅಲ್ಪ ಪ್ರಮಾಣದಲ್ಲಿ ಕಚ್ಚಾಮಾಲು ನಾನ್‌ಫೆರಸ್ ಮೆಟಲ್‌ಗೆ ಸಿಗುತ್ತದೆ. ಸಿಕ್ಕುವಷ್ಟನ್ನು ಸಮರ್ಪಕವಾದ ರೀತಿಯಲ್ಲಿ ಎಲ್ಲರಿಗೂ ಹಂಚುತ್ತೇವೆ. ಮಾನ್ಯ ಸದಸ್ಯರು ಕೇಳುವಷ್ಟು ಕಚ್ಚಾ ಮಾಲು ಸಿಗುವುದಿಲ್ಲ. ಇಂಡಸ್ಟ್ರಿಯಲ್ ಎಸ್ಟೇಟ ಕೈಗಾರಿಕೆಗಳನ್ನು ನಡೆಸುವವರು ಪರದೇಶದ ಕಚ್ಚಾ ಮಾಲುಗಳನ್ನು ಅವಲಂಬಿಸದೆ ಸ್ವದೇಶದ ಕಚ್ಚಾಮಾಲುಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ಬೆಳೆಸುವುದು ಅದೊಂದು ಸರಿಯಾದ ಮಾರ್ಗ. ಹಾಗೆಯೇ ಅವರು ಪ್ರಯತ್ನ ಮಾಡಬೇಕು.

ಶ್ರೀ ಎಸ್. ಎ. ಕರಲಿಂಗಣ್ಣನವರ್ (ಗೋಕಾಕ್ I).—ಗೋಕಾಕ್ ತಾಲ್ಲೂಕಿನಲ್ಲಿ ಸಿಮೆಂಟ್ ಕಾರ್ಖಾನೆಯನ್ನೂ, ಘಟಪ್ರಭಾದಲ್ಲಿ ಸಕ್ಕರೆ ಕಾರ್ಖಾನೆಯನ್ನೂ ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಕೆ. ಮಲ್ಲಪ್ಪ.—ಸಹಕಾರ ಸಂಸ್ಥೆಗಳವರು ಅಲ್ಲಿ ಯಾರಾದರೂ ಬಂದರೆ ಅವರಿಗೆ ಲೈಸೆನ್ಸ್ ಕೊಡಬಹುದು. ಇತರ ಸಂಸ್ಥೆಗಳವರಿಗೂ ಸಹ ಲೈಸೆನ್ಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಹೊಸದುರ್ಗದಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತೇವೆಂದು ಆ ಊರಿನವರಿಂದ ಕೋರಿಕೆ ಸರ್ಕಾರಕ್ಕೆ ಬಂದಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕೋರಿಕೆಯೇನೂ ಬಂದಿಲ್ಲ. ಅದನ್ನು ಮಾಡಬೇಕೆಂದು ಅಭಿಪ್ರಾಯ ಪಟ್ಟಿರುವವರನ್ನು ನಾವೇ ಕರೆಸಿ ಕೇಳಿದ್ದಾಯಿತು. ಅವರಲ್ಲಿ ಎಷ್ಟು ಹಣವಿದೆ, ಯಾವ ರೀತಿಯಲ್ಲಿ ಸ್ಥಾಪನೆ ಮಾಡುತ್ತೀರಿ, ಅದರ ವಿವರಗಳನ್ನು ಕೊಡಿ ಎಂದು ಕೇಳಿದ್ದರೂ ಅವರೇ ಇದುವರೆಗೆ ಬರಲಿಲ್ಲ.

SRI R. DAYANANDA SAGAR (Deputy Minister for Sericulture).—Mr. Speaker, four Hon'ble Members of the Opposition who spoke on silk industry stated that all the Government silk industry concerns are incurring a heavy loss. It is not a fact. Under sericulture industrial concerns, we have the Spun Silk Mills at Channapatna, Government Weaving Factory at Mysore and three filature units scattered at three different places in Kollegal, Mysore and Kanakapura. So far as the Government Spun Silk Mills at Channapatna is concerned, it was formerly running as a joint stock concern and it went into liquidation. The Government acquired it in the year 1960 and it went into operation from 1961. Since then it has been working profitably and I may say that this year it has made a profit of over Rs. 4 lakhs. The Government Weaving Factory at Mysore has always been running on profit and this year it has made a profit of 1·50 lakhs. The Hon'ble Member Sri K. S. Suryanarayana Rao stated that the silk industry has totally failed.

SRI G. V. GOWDA.—What is the rate at which raw silk is supplied to the Weaving factory ?

SRI R. DAYANANDA SAGAR.—So far as filatures are concerned, it is an industry which during the Second World War alone yielded profits. Afterwards no filature has yielded any profit. To-day we can see there exists no private filature in the State and it remains almost as a monopoly of Government. You may ask then why the Government is interested in an industry which constantly incurs losses. The sericulture industry is an important Indian Industry giving employment to two lakhs families and nearly ten lakhs of persons are directly or indirectly engaged in this industry. Therefore it has becom obligatory on the part of the Government to see that this very big rural industry exists with a view to see that the numbers of people engaged in this industry survive. The reason for the losses in the Government industrial concerns, namely, filatures is because we are paying reasonably high rates of wages to the workmen according to the regulations of the Factories Act. The cost of cocoons have always been high and the part of the Government we are happy because the prices of cocoons are high. As a matter of fact if the prices of cocoons are high the farmers engaged in this industry get reasonable price for their produce. Supposing we close the filature industry, what should happen ? The moment we close the filature industry, the cost of cocoons will come down in which case the

(SRI R. DAYANANDA SAGAR)

ryot who is engaged in this industry will have no incentive to grow silk at all. What would happen then ? To-day India is the fourth largest country in the world producing silk. Out of the total quantity of silk produced in India we produce nearly 80 per cent of the total production. So, if we do not give encouragement to the sericulturists not only the farmers engaged in this industry go out of the picture but India itself will go out of silk production. Therefore, it has become obligatory on the part of the Government to see that this industry survives for the benefit of those farmers who are engaged in this industry. To-day if we go round the country we see the rains have failed and people are facing great difficulties. It is only in sericulture areas that we can see some green patches of land where there is good hope for the sericulturists. There fore there is absolutely no point in stating that the silk industry has failed. As a matter of fact it has progressed. The Hon'ble Leader of the Opposition stated that once upon a time Mysore was silk land and to-day it is almost a barren land. It is not a fact. It has progressed and progressed very well. The area under mulberry cultivation in 1955-56 was 1.25 lakh acres and to-day the area under mulberry has increased to two lakh acres. Production of raw silk in 1955-56 was 16.00 lakhs pounds, but to day it has increased to 24.00 lakhs pounds. Production of filature raw silk in 1955-56 was .60 lakhs pounds and today it has increased to 3.00 lakhs pounds. The number of Government Grainages in 1955-56 were only 25, but to day we have 52. The number of licence seed preparers and aided grainers in 1955-56 were 180, now we have 500. The number of filature basins working in 1955-56 was 400 as against 1,250 now working. The number of domestic basins were only 100 in 1955-56, but today they have been increased to 3,000. The number of Chaki-Reeling centres were nil during 1955-56, but we have 107 today. This goes to show that the Silk industry in Mysore State has always been progressive.

Reading the Spun Silk Mills at Channapatna and the Government Silk Weaving Factory in Mysore, we have taken up the work of expending and modernising the machinery there and we have set apart Rs. 25 lakhs for channapatna Spun Silk Mills and about Rs. 8 to Rs. 10 lakhs for Mysore Government Silk weaving Factory. Imported machineries are expected to arrive by the end of April. Therefore, I would submit that the Silk Industrial concerns and sericulture has been making tremendous progress. I may also mention here that the Research Department has evolved a race called the Mysore Princes, which has equalled itself to that of the Japanese Silk Cocoon, yielding double the quantity of Silk. Of course, it has got some defect, the Pabrine disease, which is a problem posed to our Research scholars to eliminate the difficulties. So for as the 'Tasar' is concerned, it is a new discovery of our Government. This new find is available in the forests of Karwar and Belgaum we have posted a special officer to develop this tasar silk industry in this area available. We are trying to domesticate this industry also on the

lines of Mulberry cultivation. We will be in a position to export this very good quality of silk to European contries and we are likely to get very good foreign exchange.

Thak you, Sir.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೊಳ್ಳೇಗಾಲದಲ್ಲಿ ಮತ್ತು ಮಾಂಬಳ್ಳಿಯಲ್ಲಿ ಕಕೂನ್‌ಗಳನ್ನು ಸ್ಟೋರೇಜ್ ಮಾಡುವುದಕ್ಕೋಸ್ಕರ ಕೆಲವು ಕಟ್ಟಡಗಳನ್ನು ಸರ್ಕಾರದವರು ಕಟ್ಟಿಸಿದ್ದರು ಅವು ಇದು ವರೆಗೂ ಹಾಗೆಯೇ ಖಾಲಿ ಬಿದ್ದಿವೆ. ಅವುಗಳನ್ನು ತಾವು ಯಾವಾಗಲಾದರೂ ತನಿಖೆ ಮಾಡಿದ್ದೀರಾ?

Sri R. DAYANANDA SAGAR.—We have inspected the stores number of times and it is quite all right.

Sri C. J. MUCKANNAPPA.—The Public Accounts Committee inspected the Mamballi stores, and I can say that it is not made use of. It is a rat-proof storage. I want to know how it is utilised.

Sri R. DAYANANDA SAGAR.—On account of failure of rains, there have not been enough cocoons to store. This is the difficulty. When we have enough rains and when the demand is great, we will utilise the godowns.

ಶ್ರೀ ಎಸ್. ವಿ. ಅಗ್ನಿಹೊತ್ರಿ.—ಜಪಾನ್ ದೇಶದಲ್ಲಿ ನಮಗಿಂತ ಎರಡು ಪಟ್ಟು ಜಾಸ್ತಿ ರೇಷ್ಮೆಯನ್ನು ಉತ್ಪಾದನೆ ಮಾಡುತ್ತಾರೆಂದು ಹೇಳುತ್ತಾರೆ ಆದ್ದರಿಂದ ಇನ್ನು ಮುಂದಾದರೂ ನಮ್ಮ ದೇಶದಲ್ಲಿ ಉತ್ತಮವಾದ ಹೆಚ್ಚಿನ ರೇಷ್ಮೆಯನ್ನು ಉತ್ಪಾದನೆ ಮಾಡುವುದಕ್ಕೆ ಸರ್ಕಾರದವರು ದಯ ವಿಟ್ಟು ಪ್ರಯತ್ನ ಮಾಡುತ್ತೀರಾ ?

Sri R. DAYANANDA SAGAR.—Our silk worms are called multi-voltine and the available Japanese worms are called uni-voltine, which are a special variety. We have been trying to import this variety and we have been trying experiments. We have evolved a race called the Mysore Princes which is equal to the Japanese silk cocons.

Sri G. V. GOWDA.—Hardly the Government Filatures consume 10 to 15 per cent of the production in cocoons. How do you say that the Government has monopolised the trade and how do you account for the continued losses ?

Sri R. DAYANANDA SAGAR.—There are no private filatures. Private persons connot run filatures and stand losses. All the filatures are owned by the Government for the benefit of the farmers.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಬಿಜಾಪುರ ಸ್ಪಿನ್ನಿಂಗ್ ಮಿಲ್ಲಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿಲ್ಲ. ಮತ್ತು ಅಲ್ಲಿ ಕೈಗಾರಿಕೆಗಳಿಗೆ ಬೇಕಾದ ರಾ ಮೆಟೀರಿಯಲ್ಸ್ ಸಿಕ್ಕುವುದು ಬಹಳ ಕಷ್ಟವಾಗಿದೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಸರ್ಕಾರದವರು ಗಮನ ಕೊಡುತ್ತೀರಾ ?

Mr. SPEAKER.—The suggestion made by the Hon'ble lady member will receive the utmost attention.

ಶ್ರೀ ಎಸ್. ಗೋಪಾಲ ಗೌಡ.—ರೇಷ್ಮೆ ಹುಳುಗಳನ್ನು ಸಾಯಿಸಿದ ಮೇಲೆ ಸುಮ್ಮನೆ ಅವುಗಳನ್ನು ಬಿಸಾಡುತ್ತಾರೆ. ಗೊಬ್ಬರಕ್ಕೆ ಕೆಲವರು ಉಪಯೋಗಿಸುತ್ತಾರೆ. ಇದರ ಬಗ್ಗೆ ಸರ್ಕಾರದವರೇನಾದರೂ ರಿಸರ್ಚ್ ಮಾಡಿದ್ದಾರೆಯೇ ? ಈ ರೇಷ್ಮೆ ಹುಳುಗಳು ಮೀನುಗಳಿಗೆ ಆಹಾರವಾಗುತ್ತದೆ. ಇದರಿಂದ ಫೌಲ್ಟ್ರಿ ಫಾರಮ್‌ಗಳಿಗೆ ಅನುಕೂಲವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ಇದರ ಬಗ್ಗೆ ಸರ್ಕಾರದವರು ಇದುವರೆಗೂ ರಿಸರ್ಚ್ ಮಾಡಿದ ಹಾಗೆ ಕಾಣುವುದಿಲ್ಲ. ಇದು ವೇಸ್ಟ್ ಆಗುತ್ತಿದೆ. ಇದನ್ನು ಉಪಯುಕ್ತವಾಗಿ ಮಾಡಬೇಕು. ಮತ್ತು ಈ ರೇಷ್ಮೆ ಕೈಗಾರಿಕೆಯ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಮಾನ್ಯ ಮಂತ್ರಿಗಳಿಬ್ಬರೂ ಜಪಾನಿಗೆ ಹೋಗಿ ಬಂದಿದ್ದಾರೆ. ಆದ್ದರಿಂದ ಅವರು ಈ ಕೈಗಾರಿಕೆಯನ್ನು ಬದುಕಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ?

Sri R. DAYANANDA SAGAR.—It is now being used as a very good manure.

Mr. SPEAKER.—He wants it to be used as a good poultry and fish feed.

Sri R. DAYANANDA SAGAR.—It can be a good poultry feed. It is up to the poultry owners to buy from us; we are ready to sell it.

Mr. SPEAKER.—The question is:

"That the respective sums not exceeding the amounts mentioned in the Demands Nos. 14, 16, 24 and 44 be granted to Government to defray the charges which will come in course of payment during the financial year ending 31st day of March 1967."

The motion was adopted.

As ordered by the Speaker the motion for Demands for Grants adopted by the House, are reproduced below :—

DEMAND No. 14—SUPPLIES AND DISPOSALS.

25. Supplies and Disposals.

"That a sum not exceeding Rs. 1,04,97,000 be granted to the Government to defray the charges which will come in course of payment during the financial year for the period ending 31st day of March 1967, in respect of 'Supplies and Disposals'."

DEMAND No. 16—SCIENTIFIC DEPARTMENTS.

27. Scientific Departments.

"That a sum not exceeding Rs. 17,84,000 be granted to the Government to defray the charges which will come in course of payment during the financial year for the period ending 31st day of March 1967, in respect of 'Scientific Departments'."

DEMAND No. 24—INDUSTRIES INCLUDING SERICULTURE.

35. Industries.

"That a sum not exceeding Rs. 12,52,51,000 be granted to the Government to defray the charges which will come in course of payment during the financial year for the period ending 31st day of March 1967, in respect of 'Industries'."

DEMAND No. 44.—INDUSTRIAL AND ECONOMIC DEVELOPMENT.

96. Capital Outlay on Industrial and Economic Development.

"That a sum not exceeding Rs. 4,02,86,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Industrial and Economic Development'."

DEMANDS FOR GRANTS

DEMAND Nos. 4, 23, 26 and 39

SRI D. DEVARAJ URS (Minister for Transport and Tourism).—Sir, on the recommendation of the Governor of Mysore, I beg to move:

"That a sum not exceeding Rs. 18,43,000 be granted to the Government to defray the charges which will come in course of payment during the financial year for the period ending 31st day of March 1967 in respect of 'Taxes on Vehicles'."

MR. SPEAKER.—Motion moved:

"That on the recommendation of the Governor of Mysore a sum not exceeding Rs. 18,43,000 be granted to the Government to defray the charges which will come in course of payment during the financial year for the period ending 31st day of March 1967 in respect of "Taxes on Vehicles'."

SRI D. DEVARAJ URS.—Sir, on the recommendation of the Governor of Mysore, I beg to move:

"That a sum not exceeding Rs. 1,25,68,000 be granted to the Government to defray the charges which will come in course of payment during the financial year for the period ending 31st day of March 1967 in respect of 'Labour and Employment'."

MR. SPEAKER.—Motion moved:

"That on the recommendation of the Governor of Mysore a sum not exceeding Rs. 1,25,68,000 be granted to the Government to defray the charges which will come in course of payment during the financial year for the period ending 31st day of March 1967 in respect of 'Labour and Employment."

SRI K. PUTTASWAMY (Minister for Co-operation and Housing).—Sir, on behalf of the Minister for Development, Panchayat Raj and Municipal Administration, and on the recommendation of the Governor of Mysore I beg to move:

"That a sum not exceeding Rs. 5,24,34,000 be granted to the Government to defray the charges which will come in course of payment during the financial year for the period ending 31st day of March 1967, in respect of 'Miscellaneous'."

MR. SPEAKER.—Motion moved:

"That on the recommendation of the Governor of Mysore a sum not exceeding Rs. 5,24,34,000 be granted to the Government to defray the charges which will come in course of payment during the financial year for the period ending 31st day of March 1967, in respect of 'Miscellaneous'."

Sri K. PUTTASWAMY.—Sir, on behalf of the Minister for Development, Panchayat Raj and Municipal Administration, on the recommendation of the Governor of Mysore, I also move:

"That a sum not exceeding Rs. 1,73,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Co-operation'."

Mr. SPEAKER.—Motion moved:

"That on the recommendation of the Governor of Mysore, a sum not exceeding Rs. 1,73,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Co-operation'."

Now, we shall finish this to-day.

Sri C. J. MUCKANNAPPA.—No, Sir; we may take up tomorrow also.

Mr. SPEAKER.—How much time the Hon. Ministers require?

Sri D. DEVARAJ URS.—Half-an-hour, Sir.

Sri K. PUTTASWAMY.—I may also require half-an hour.

Mr. SPEAKER.—Now, the Demands will be open for debate till the evening, we will sit as long as we like and the reply would be tomorrow.

Sri S. SIVAPPA.—Sir, as you suggested, the reply may be tomorrow and debate may go on this evening.

Sri B. BHASKAR SHETTY (Koup).—Sir, tomorrow also this may be discussed for one hour.

Mr. SPEAKER.—The hon. Member may come and meet me in my Chamber. The Debate will now commence and Sri K. Lakkappa will speak.

[MR. DEPUTY SPEAKER in the Chair]

†ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ಬೇಡಿಕೆಗಳನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ನಾಲ್ಕು ವರ್ಷಗಳ ಅವಧಿಯಲ್ಲಿ ಈ ಸಹಕಾರ ಇಲಾಖೆ ಈಗಿನ ಅರ್ಥ ಸಚಿವರಾದ ಶ್ರೀ ರಾಮಕೃಷ್ಣಹೆಗಡೆಯವರ ಕೈಯ್ಯಲ್ಲಿತ್ತು. ಈಗ ನಾಲ್ಕು ವರ್ಷಗಳಿಂದ ಕೆಟ್ಟು ಶಿಥಿಲವಾಗಿರತಕ್ಕ ಈ ಇಲಾಖೆಯನ್ನು ರಿಪೇರಿ ಮಾಡತಕ್ಕ ಜವಾಬ್ದಾರಿಯನ್ನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರು ಹೊಸದಾಗಿ ಸಹಕಾರ ಇಲಾಖೆಯನ್ನು ವಹಿಸಿ ಕೊಂಡಿದ್ದಾರೆ. ಅವರು ಬಹುಶಃ ಅವರ ದುರದೃಷ್ಟದಿಂದಲೋ ಏನೋ ಈ ಇಲಾಖೆಯನ್ನು ಹಿಡಿದಿದ್ದಾರೆ. ಸಹಕಾರ ಇಲಾಖೆ ಕೆಲಸ ಮಾಡುವುದರಲ್ಲಿ ನೋಡಿದರೆ ಈಗ್ಗೆ ನಾಲ್ಕು ವರ್ಷಗಳಿಂದಲೂ ಪದೇ ಪದೇ ಈ ಖಾತೆಯ ಸಚಿವರು ಸಹಕಾರ ಸಂಘಗಳಲ್ಲಿ ಕಾಂಗ್ರೆಸ್ಸಿನವರಿಂದಲೇ ರಾಜಕೀಯ ಪ್ರವೇಶ ಮಾಡತಕ್ಕ ಸಂದರ್ಭದಲ್ಲಿ ಎಲ್ಲಿ ಕಾಂಗ್ರೆಸ್ಸು ಟಿಕೆಟ್ಟು ಸಿಗಲಿಲ್ಲವೋ ಅಂತಹವರುಗಳಿಗೆ ತೃಪ್ತಿ ಮಾಡಲು ಮೈಸೂರು ದೇಶದಲ್ಲಿ ಸಹಕಾರ ಸಂಘಗಳನ್ನು ಸೃಷ್ಟಿಮಾಡಿದ್ದಾರೆ. ಮೈಸೂರು ದೇಶದಲ್ಲಿರುವ ಸಹಕಾರ ಸಂಘಗಳ ವಿಚಿತ್ರ ರೀತಿನೀತಿಗಳನ್ನು ನಾವು ನೋಡುವುದಾದರೆ, ಸುಮಾರು 55 ಭಾಗ ಸಹಕಾರ ಸಂಘಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಹರಡಿ ಎಲ್ಲಾ ಹಳ್ಳಿಗಳಲ್ಲಿಯೂ ಮತ್ತು

ಇತರ ಸಣ್ಣ ಸಣ್ಣ ಹಳ್ಳಿಗಳಲ್ಲೂ ಹರಡಿವೆ. ಸಣ್ಣ ಹಳ್ಳಿಗಳಲ್ಲಿ ಸಹಕಾರ ಸಂಘಗಳು, ತಾಲ್ಲೂಕಾ ಮಟ್ಟದಲ್ಲಿ ತಾಲ್ಲೂಕಾ ಮಾರ್ಕೆಟಿಂಗು ಸಹಕಾರ ಸಂಘಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರ ಸಂಘಗಳು ರಾಜ್ಯದ ಮಟ್ಟದಲ್ಲಿ ಸ್ಟೇಟು ಮಾರ್ಕೆಟಿಂಗು ಸಹಕಾರ ಸಂಘಗಳು ಎಂದು ಇವೆ. 19 ಜಿಲ್ಲೆಗಳಲ್ಲಿಯೂ ಇರುವ ಸಹಕಾರ ಸಂಘಗಳು ಸರಿಯಾಗಿ ಹಾಗೂ ತೃಪ್ತಿಕರವಾಗಿ ಕೆಲಸ ಮಾಡುತ್ತಿದೆಯೇ ಎನ್ನುವ ವಿಚಾರವನ್ನು ಪರಿಶೀಲನೆ ಮಾಡಿದರೆ ಬಹುಶಃ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರು ಈ ಇಲಾಖೆಯನ್ನು ಬಿಟ್ಟು ಕೈಕಳಚಿಕೊಂಡು ಹೋಗಬೇಕಾಗುತ್ತದೆ ಎಂದು ಕಾಣುತ್ತದೆ. ಏಕೆಂದರೆ, ಈ ಸಭೆಯಲ್ಲೇ ಈ ವರ್ಷ ನಾನು ಅಂದಾಜು ಮಾಡಿರುವ ಹಾಗೆ 17 ಪ್ರಶ್ನೆಗಳನ್ನು ಹಾಕಿದ್ದೆ. 17 ಪ್ರಶ್ನೆಗಳಿಗೂ ಬಹುಶಃ ಸಹಕಾರ ಸಂಘಗಳ ಬಗ್ಗೆ ಉತ್ತರ ಕೊಟ್ಟಾಗ ಎಲ್ಲ ಸಹಕಾರ ಸಂಘಗಳೂ ತೃಪ್ತಿಕರವಾಗಿ ಕೆಲಸ ಮಾಡದೇ ಹಣವನ್ನು ದುರುಪಯೋಗ ಪಡಿಸಿರತಕ್ಕ ರೀತಿ ನೀತಿಯ ಬಗ್ಗೆ ಇಲ್ಲಿ ಉತ್ತರ ಕೊಟ್ಟಿದ್ದಾರೆ. ಇದೇ ರೀತಿ ನಾನು ಕೆಲವು ವಿಷಯಗಳನ್ನು ಇಲ್ಲಿ ಸಂಗ್ರಹ ಮಾಡಿದ್ದೇವೆ. ಈ ಸಭೆಗೆ ಪೂರ್ತಿಯಾದ ಅಂಕೆ ಅಂಶಗಳನ್ನು ಸಹಕಾರ ಸಂಘಗಳ ಬಗ್ಗೆ ಹಣವನ್ನು ಹೇರಳವಾಗಿ ಗ್ರ್ಯಾಂಟುಗಳ ಮೂಲಕ ಕೊಟ್ಟು ಆ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿದ್ದಾರೆಯೇ ಇಲ್ಲವೇ ಮತ್ತು ಈ ಸಂಘಗಳಿಗಾಗಿ ಹಣವನ್ನು ಕೊಟ್ಟಿದ್ದರಲ್ಲಿ ಎಷ್ಟು ಉಪಯೋಗವಾದವು ಎನ್ನುವುದರ ಬಗ್ಗೆ ಎಲ್ಲ ಸಹಕಾರ ಸಂಘಗಳ ಪಟ್ಟಿಯನ್ನೂ ಹಾಗೂ ದುರುಪಯೋಗ ಮಾಡಿರುವುದರ ವಿವರಗಳನ್ನೂ ತಯಾರು ಮಾಡಿ ಈ ಸಭೆಯ ಮುಂದೆ ಇಟ್ಟಿದ್ದರೆ ಬಹುಶಃ ನಾವು ಮುಂದೆ ಅದಕ್ಕೆ ಯಾವ ತರಹ ಸೂಚನೆಗಳನ್ನು ಕೊಡಬಹುದು ಎನ್ನುವುದನ್ನು ಯೋಚನೆ ಮಾಡಬಹುದಾಗಿತ್ತು. ಮತ್ತು ಇದರಿಂದ ಅನುಕೂಲವೂ ಆಗುತ್ತಿತ್ತು.

ನಾನು ಸಂಗ್ರಹಿಸಿರತಕ್ಕ ಅಂಶದಲ್ಲಿ ಲಕ್ಷ ಲಕ್ಷಗಟ್ಟಲೆ ಹಣ ದುರುಪಯೋಗವಾಗಿರತಕ್ಕದ್ದು. ಈ ಸರ್ಕಾರದ ಗಮನಕ್ಕೆ ಎಲ್ಲ ಸಹಕಾರ ಸಂಘಗಳಲ್ಲಿ ಹಣವನ್ನು ಬಹಳ ಗುರುತರವಾದ ಜವಾಬುದಾರಿಯುತವಾದ ಆಪಾದನೆಗಳನ್ನು ತಂದಿದ್ದರೂ ಅದರ ಬಗ್ಗೆ ಸರಕಾರ ಮೂಕ ನೀತಿಯನ್ನು ವ್ಯಕ್ತಪಡಿಸಿರುವ ಐದಾರು ನಿದರ್ಶನಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಗುಡಿಬಂಡಾ ತಾಲ್ಲೂಕಾ ಮಾರ್ಕೆಟಿಂಗು ಸೊಸೈಟಿಯಲ್ಲಿ ಬಹುಶಃ ಎರಡು ಲಕ್ಷ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ ಎಂದು ಹೇಳಿದ್ದಕ್ಕೆ ಇಲ್ಲಿ 30-40 ಸಹಸ್ರ ರೂಪಾಯಿಗಳಷ್ಟು ದುರುಪಯೋಗವಾಗಿದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಹಾಗೇ ಸಿರಾ ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳಲ್ಲಿ ಎರಡು ಲಕ್ಷ ರೂಪಾಯಿಗಳಷ್ಟು ದುರುಪಯೋಗವಾಗಿದೆ. ಸ್ಟೇಟು ಮಾರ್ಕೆಟಿಂಗು ಸೊಸೈಟಿಯಲ್ಲಿ ಹತ್ತು ಲಕ್ಷಕ್ಕಿಂತಲೂ ಜಾಸ್ತಿ ಹಣ ದುರುಪಯೋಗವಾಗಿದೆ ಮತ್ತು ಅಲ್ಲಿ ಕಳ್ಳ ಸಾಗಾಣಿಕೆ ಮಾಡಿರತಕ್ಕದ್ದು, ಕಳ್ಳ ವ್ಯಾಪಾರ ಮಾಡಿರತಕ್ಕದ್ದಕ್ಕೆ ಕಾರಣ ಆಡಳಿತದಲ್ಲಿ ಪ್ರಭಾವಶಾಲಿಯಾದ ಒಬ್ಬ ಅಧ್ಯಕ್ಷರು ಇದ್ದಾರೆ. ಇವರು ಆಂಧ್ರದಲ್ಲಿ ಹಾಗೂ ಒರಿಸ್ಸಾದಲ್ಲಿ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು ಒದಗಿದಾಗ ಅದನ್ನು ಬಗೆಹರಿಸಲು ಹೋಗುವಂತಹ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾರೆ. ಇದರ ಬಗ್ಗೆ ಪ್ರಶ್ನೆ ಕೇಳಿದಾಗ ಈ ಮಾನ್ಯ ಸಭೆಯಲ್ಲಿ ಉತ್ತರ ಏನು ಹೇಳಿದ್ದಾರೆಂದರೆ, 23 ಲಕ್ಷದಷ್ಟು ಹಣ ಇಲ್ಲಿ ದುರ್ವಿನಿಯೋಗವಾಗಿದೆ, ಇದರಲ್ಲಿ 8 ಲಕ್ಷದಷ್ಟು ಹಣ ಆಲೂಗೆಡ್ಡೆ ವ್ಯಾಪಾರದಲ್ಲಿ ನಷ್ಟವಾಗಿದೆ ಮತ್ತು 15 ಲಕ್ಷದಷ್ಟು ಹಣ ಗೊಬ್ಬರದಲ್ಲಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಈ ರೀತಿ ಜನರಿಂದ ಹೆಚ್ಚು ಹೊರೆ ಹಾಕಿ ತೆರಿಗೆಯಿಂದ ಬಂದ ಹಣವನ್ನು ತಮ್ಮಲ್ಲಿರತಕ್ಕ ಜೇಲಾಗಳು ದುರುಪಯೋಗ ಮಾಡುತ್ತಿದ್ದಾರೆ ಇದರಲ್ಲಿ ಯಾವ ಸಹಕಾರ ನೀತಿ ಇದೆ? ಮತ್ತು ಸಹಕಾರ ತತ್ವಕ್ಕೆ ಏನು ಫಲ ದೊರೆದಂತಾಗುತ್ತದೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ತುಮಕೂರಿನಲ್ಲಿ 85 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ವ್ಯಾಪಾರ ಮಾಡುತ್ತೇವೆ, ಅಕ್ಕಿ, ಗೋಧಿಯನ್ನು ತರಿಸುತ್ತೇವೆ ಎಂದು ಹೇಳಿ ತಾಲ್ಲೂಕು ಮಾರ್ಕೆಟಿಂಗ್ ಸಹಕಾರ ಸಂಘದಲ್ಲಿ ಮೂರು ನಾಲ್ಕು ತಿಂಗಳಿನಿಂದ ಹಣವನ್ನು ದುರುಪಯೋಗ ಪಡಿಸಿದ್ದಾರೆ ಅಲ್ಲಿನ ಅಧ್ಯಕ್ಷರು. ಅವರು ಆ ಹಣವನ್ನು ಬೇರೆ ವ್ಯಾಪಾರದಲ್ಲಿ ಹಾಕಿ ಮತ್ತೆ ಹಣವನ್ನು ಅದೇ ಸಹಕಾರ ಸಂಘಕ್ಕೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಬಂದ ಕಾಲದಲ್ಲಿ ತುಂಬುತ್ತಾ ಇದ್ದಾರೆ. ನಾನು ಈ ವಿಷಯವಾಗಿ 30-40 ಕಟ್ ಮೋಷನ್‌ಗಳನ್ನೂ ಕೂಡ ಕಳುಹಿಸಿದ್ದೇನೆ. ಇದೇ ರೀತಿ ಡಿಸ್ಟ್ರಿಕ್ಟ್ ಬ್ಯಾಂಕ್‌ನಲ್ಲಿ ಒಂದು ಸಾರಿ ಎರಡು ಲಕ್ಷ ರೂಪಾಯಿ ದುರುಪಯೋಗವಾಗಿದೆ. ಅದನ್ನು ಮೂರು ವರ್ಷದಿಂದ ಒಂದೇ ಸಮನೆ ಹೇಳುತ್ತಾ ಬಂದಿದ್ದೇನೆ. 3 ಎಫ್ ಐ ಆರ್ ಗಳನ್ನು ಕಳುಹಿಸಿದ್ದಾರೆ. ಅದನ್ನು ವಾಪಸು ತಾಕಿಸಿದ್ದಾರೆ ಸರ್ಕಾರದ ಪ್ರಭಾವದಿಂದ ಅವರನ್ನು ಅಲ್ಲೇ ಕೆಲಸಕ್ಕೆ ನೇಮಕ ಮಾಡಿಕೊಂಡು ಈಗ ಅವರು ದುರುಪಯೋಗ ಮಾಡಿಕೊಂಡಿರುವ ಹಣವನ್ನು ತುಂಬಬೇಕೆಂದು ಹೇಳಿ ತುಂಬಿಸಿದ್ದಾರೆ, ಅದು ಅಲ್ಲಿಗೇ ನಿಂತು ಹೋಗಿದೆ. ಎಂದರೆ ಯಾವ ಕೆಟ್ಟ ಕೆಲಸವನ್ನು ಮಾಡಿದರೂ ಕೂಡ ಅವರಿಗೆ ತಾವು ಬೆಂಬಲವನ್ನು ಕೊಡುತ್ತಾ ಇರುವುದು ಇದು ಸರ್ಕಾರದ ನೀತಿಯೇ? ಯಾರು ಹಣವನ್ನು ದುರುಪಯೋಗ ಮಾಡಿದರು? ಯಾವ ತಾರೀಖಿನಲ್ಲಿ ಮಾಡಿದರು? ಎಷ್ಟು ಹಣವನ್ನು

(ಶ್ರೀ ಕೆ. ಲಕ್ಕಪ್ಪ)

ದುರುಪಯೋಗ ಮಾಡಿದ್ದಾರೆ, ಯಾವ ತಿಂಗಳಿನಲ್ಲಿ ಹಣವನ್ನು ಖಜಾನೆಗೆ ತುಂಬಬೇಕಾಗಿತ್ತು ಎಂಬ ಅಂಶಗಳನ್ನೆಲ್ಲಾ ಸಂಗ್ರಹಿಸಿ ಎಫ್ ಐ ಆರ್ ಕಳುಹಿಸಿದ್ದರು ಅದನ್ನು ತಾವು ವಿಚಾರ ಮಾಡಿದರೆ ಗೊತ್ತಾಗುತ್ತದೆ. ಹರಿಹರದಲ್ಲಿ 4 ಲಕ್ಷ ರೂಪಾಯಿ ಹಣ ದುರುಪಯೋಗವಾಗಿದೆ, ಮಂಗಳೂರಿನಲ್ಲಿ 70 ಸಾವಿರ ಚೀಲ ಗೊಬ್ಬರ ಕಳ್ಳ ಸಾಗಾಣಿಕೆ ಮಾಡಿದ್ದಾರೆ. ಸರ್ಕಾರದ ಮೇಲೆ ಪ್ರಭಾವ ಬೀರತಕ್ಕ ವ್ಯಕ್ತಿಗಳು ನಮ್ಮ ಜಿಲ್ಲೆಯಲ್ಲಿ ಇದ್ದು ತಾಲ್ಲೂಕು ಸಹಕಾರ ಸಂಘಗಳನ್ನು ನಡೆಸುತ್ತಾ ಇದ್ದಾರೆ. ಅವರು ಹಣ ದುರುಪಯೋಗ ಮಾಡಿರತಕ್ಕ ಅಂಶವನ್ನು ಅಧಿಕಾರಿಗಳ ಗಮನಕ್ಕೆ ತಂದರೆ ಬಹುಶಃ ಅಧಿಕಾರಿಗಳು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ ಕೂಡ ಬಹಳ ಕಷ್ಟವಾಗಬಹುದು. ಎಷ್ಟೇ ಹಣ ಹೋದರೂ ಚಿಂತೆ ಇಲ್ಲ ಅವರುಗಳು ಇರಬೇಕೆನ್ನುವುದೇ ಈ ಸರ್ಕಾರದ ನೀತಿಯಾಗಿದೆ.

ಕುಣಿಗಲ್ ತಾಲ್ಲೂಕಿನಲ್ಲಿ ಎರಡು ಲಕ್ಷ ರೂಪಾಯಿ ದುರುಪಯೋಗವಾಗಿದೆ. ರಿಜಿಸ್ಟ್ರಾರ್ ಅವರು ಸೂಪರ್‌ಸೀಡ್ ಮಾಡಿ ಪರಿಶೀಲನೆ ಮಾಡಬೇಕು ಎಂದು ಹೇಳಿದರು. ಅದನ್ನು ಸ್ವಾಗತಿಸುತ್ತೇನೆ. ಇದೇ ಜಿಲ್ಲೆಯಲ್ಲಿ ಸಹಕಾರ ಸಂಘಗಳು ಹಣ ದುರುಪಯೋಗ ಮಾಡುವುದು, ಕಳ್ಳ ಸಾಗಾಣಿಕೆ ಮಾಡುವುದು, ಕಳ್ಳ ವ್ಯಾಪರ ಮಾಡುವುದು, ಸರ್ಕಾರದ ಗ್ರ್ಯಾಂಟ್‌ನ್ನು ತಮ್ಮ ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳುವುದು ಈ ರೀತಿಯ ಬೇಜವಾಬ್ದಾರಿಯುತವಾದ ಕೆಲಸ ಕಾರ್ಯಗಳನ್ನು ಮಾಡತಕ್ಕ ಜನ ಸಹಕಾರ ಸಂಘಗಳಲ್ಲಿ ಇರುವುದನ್ನು ಸರ್ಕಾರದವರ ಗಮನಕ್ಕೆ ತಂದರೂ ಕೂಡ ಸರ್ಕಾರ ಯಾವ ವಿಚಾರಣೆಯನ್ನಾಗಲಿ ತನಿಖೆಯನ್ನಾಗಲಿ ಮಾಡದೇ ಇರಲಿಕ್ಕೆ ಕಾರಣವೇನು ಎಂಬ ಪ್ರಶ್ನೆಯನ್ನು ಮಾಡಬೇಕಾಗಿದೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಕಟ್ಟಡ ಕಟ್ಟಸಬೇಕಾದ ಸಂದರ್ಭದಲ್ಲಿ ಪೂರ್ವದ ಕಡೆ ಒಂದು ದೊಡ್ಡ ಬಾಗಿಲು ಇಟ್ಟರು, ಪಶ್ಚಿಮದ ಕಡೆ ಒಂದು ಸಣ್ಣ ಬಾಗಿಲನ್ನು ಇಡಿಸಿದರು, ಅಲ್ಲಿ ಒಂದು ಗಲ್ಲಿ ಇದೆ. ಈ ಬಾಗಿಲು ಏಕೆ ಗೊತ್ತೇ? ಕಳ್ಳತನದಲ್ಲಿ ಈ ಬಾಗಿಲಿನಿಂದ ಸಾಮಾನುಗಳು ಹೋಗುತ್ತವೆ. ಜಟಕಾದಲ್ಲಿ ಒಂದೊಂದು ಮೂಟೆಯನ್ನೇ ಸಾಗಿಸುತ್ತಾರೆ. ಆಹಾರದ ಅಭಾವ ಇದೆ, ಆಹಾರ ಇಲ್ಲದೇ ಅನೇಕ ಜನ ಸಾಯುತ್ತಾ ಇದ್ದಾರೆ. ಇಂತಹ ಸಂದರ್ಭದಲ್ಲಿ ಅಂತಹ ಕಳ್ಳ ವ್ಯಾಪಾರವನ್ನು ಮಾಡತಕ್ಕ ಸಹಕಾರಿ ಸಂಘಗಳನ್ನು ನಿರ್ಮಾಣ ಮಾಡಿದ್ದೀರಿ. ಮತ್ತು ಅವಕ್ಕೆ ಪ್ರೋತ್ಸಾಹವನ್ನು ಕೊಡುತ್ತಾ ಇದ್ದೀರಿ. ತುಮಕೂರು ಜಿಲ್ಲೆಯಲ್ಲಿರತಕ್ಕ ಇಂಡಸ್ಟ್ರಿಯಲ್ ಬ್ಯಾಂಕು ಎಷ್ಟುಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅಲ್ಲಿರತಕ್ಕ ಅಧ್ಯಕ್ಷರು ಯಾರು? ಅವರಿಗೆ ಇರತಕ್ಕ ಅರ್ಹತೆ ಏನು? ಯಾವ ಇಂಡಸ್ಟ್ರಿಯನ್ನು ಅವರು ನಡೆಸುತ್ತಾ ಇದ್ದಾರೆ? ಸರ್ಕಾರ ಯಾವ ಆಧಾರದ ಮೇಲೆ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದರು ಇಂತಹ ನಿದರ್ಶನಗಳು ಬೇರ ಯಾವುದಾದರೂ ಇದೆಯೇ ಎಂದು ಹೇಳಿ ನಾನು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ. ಮತ್ತು ಅವರು ಯಾವ ಉತ್ತರವನ್ನು ಹೇಳುತ್ತಾರೆ ಎಂಬುದನ್ನು ಕಾದು ನೋಡುತ್ತಾ ಇದ್ದೇನೆ! ಸಹಕಾರ ಸಂಘಗಳ ಮೂಲಕ ಇಂಡಸ್ಟ್ರಿಯಲ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಿ ಅಲ್ಲಿ ಹಣ ವಿತರಣೆಯಾಗತಕ್ಕ ರೀತಿ ನೀತಿ, ಅಲ್ಲಿ ನಡೆಯತಕ್ಕ ಅವ್ಯವಹಾರಗಳು ಇವುಗಳನ್ನು ಪದೇ ಪದೇ ಹೇಳುತ್ತಾ ಇದ್ದರೂ ಏಕೆ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ.

ಕುಣಿಗಲ್ ತಾಲ್ಲೂಕಿನಲ್ಲಿ ಕೂಡೊಕ್ಕಲು ಸಹಕಾರ ಸಂಘ ಇದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲೂ ಕೂಡ ಈ ವಿಷಯ ಬಂದಿದೆ. ಚಾಮರಾಜನಗರದಲ್ಲಿ 40 ಸಾವಿರ ರೂಪಾಯಿ ಕೊಟ್ಟಂಥ ಹಣ ಪತ್ತೆ ಇಲ್ಲದಂತಾಗಿದೆ. ಇದನ್ನು ಅಧಿಕಾರಿಗಳು ಪತ್ತೆ ಮಾಡುತ್ತೇವೆ ಎಂದು ಹೇಳಿದರು. ಈ ರೀತಿ ದುರುಪಯೋಗ ಪಡಿಸಿಕೊಂಡಿರತಕ್ಕ ನಿದರ್ಶನಗಳು ಸಹಸ್ರಾರು ಇವೆ. ತಮ್ಮ ಪ್ರಭಾವವನ್ನು ಸಹಕಾರ ಸಂಘಗಳ ಅಧ್ಯಕ್ಷರ ಮೇಲೆ ಬೀರಬೇಕು, ಆ ಮೂಲಕ ತಮ್ಮ ಓಟಿನ ಆಸೆಯನ್ನು ಆಕಾಂಕ್ಷೆಯನ್ನು ತೀರಿಸಿಕೊಳ್ಳಬೇಕು ಎಂಬ ಒಂದು ಉದ್ದೇಶವನ್ನು ಬಿಟ್ಟರೆ ತಮ್ಮ ಉದ್ದೇಶ ಬೇರೆ ಏನಾದರೂ ಇದೆಯೇ? ನಮ್ಮ ದೇಶದಲ್ಲಿ ಸಹಕಾರ ಸಂಘ, ನಡೆಸಬೇಕು ಅದು ಯಶಸ್ವಿಯಾಗಿ ನಡೆಯಬೇಕೆಂದು ತಮಗೆ ಖಂಡಿತವಾಗಿಯೂ ಮನಸ್ಸಿನಲ್ಲಿ ಇದ್ದ ಹಾಗೆ ನನಗಂತೂ ಕಾಣುತ್ತಾ ಇಲ್ಲ. ಹಣ ದುರುಪಯೋಗ ಮಾಡಿರತಕ್ಕ ನೂರಾರು ಸಹಕಾರ ಸಂಘಗಳ ಅಂಕಿಅಂಶ ಸರ್ಕಾರದಲ್ಲಿ ಇದೆ. ಅದನ್ನು ಸರ್ಕಾರ ಬಯಲಿಗೆ ಬಿಡುತ್ತಾ ಇಲ್ಲ, ಆ ಅಂಕಿಅಂಶಗಳನ್ನು ಈ ಸಭೆಯಲ್ಲಿ ಇಡಿ. ಅನೇಕ ಸಹಕಾರ ಸಂಘಗಳಲ್ಲಿ ಲೆಕ್ಕಗಳನ್ನೆಲ್ಲಾ ತಿದ್ದಿ, ಫೋರ್ಜ್ ಮಾಡಿ, ಆಡಿಟ್ ಆಗದೇ ನಡೆಯುತ್ತಾ ಇವೆ. ಇಂತಹ ಸಂಘಗಳು ಶೇಕಡ 2 ಇವೆ. ಅನೇಕ ಸಹಕಾರ ಸಂಘಗಳು ನಡೆಯುತ್ತಲೇ ಇಲ್ಲ, ಸಾಲ ಕೊಟ್ಟು ಅದನ್ನು ವಸೂಲು ಮಾಡದೇ ವಸೂಲು ಮಾಡಿದ್ದರೂ ಫೋರ್ಜ್ ಮಾಡಿ ಹಣವನ್ನು ದುರುಪಯೋಗ ಪಡಿಸಿ ಅಂತಹ ಸಹಕಾರ ಸಂಘಗಳ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಇರುವುದು ನೂರಕ್ಕೆ 25 ಭಾಗ ದೇಶವ್ಯಾದ್ಯಂತ ಇದೆ. ಉಣ್ಣೆ ಸಹಕಾರ ಸಂಘ ಅಂತ ಇದೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಗ್ರ್ಯಾಂಟ್ ಕೊಟ್ಟಿದ್ದಾರೆ, ನಮ್ಮ ಸರ್ಕಾರದವರೂ ಕೂಡ ಗ್ರ್ಯಾಂಟ್ ಕೊಟ್ಟಿದ್ದಾರೆ. ಅಲ್ಲಿ ಬಹಳ ವಿಚಿತ್ರವಾದ ಕೆಲಸ ನಡೆ

ಯುತ್ತಾ ಇದೆ. ಬೇರೆ ತಾಲ್ಲೂಕಿನಲ್ಲಿ ಉಣ್ಣೆಯ ಕೆಲಸವನ್ನು ಮಾಡತಕ್ಕ ಜನ ಬೆಂಗಳೂರಿಗೆ ಬಂದು ಈ ಸಹಕಾರ ಸಹಕಾರ ಸಂಘಕ್ಕೆ ಸದಸ್ಯರಾಗಬೇಕು ಎಂದು ಅರ್ಜಿ ಕೊಟ್ಟರೂ ಕೂಡ ಅವರು ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಅವರೆಲ್ಲಾದರೂ ಬಂದು ಈ ಸಹಕಾರ ಸಂಘವನ್ನು ಉರುಳಿಸಿ ನಮಗೆ ಬರತಕ್ಕ ಆದಾಯವನ್ನು ಪಡೆದುಕೊಂಡು ಬಿಟ್ಟಾರು ಎಂಬ ಭಯವೋ ಅಥವಾ ನಮ್ಮಲ್ಲಿರತಕ್ಕ ಗುಟ್ಟು ಬಯಲಾಗುತ್ತದೆ ಎಂತಲೋ ಗೊತ್ತಿಲ್ಲ. ಯಾರು ಸಹಕಾರ ಸಂಘಗಳ ಆಕ್ಟ್ ಪ್ರಕಾರ ಕ್ರಮಬದ್ಧವಾಗಿ, ನ್ಯಾಯ ಬದ್ಧವಾಗಿ ಹಕ್ಕು ಪಡೆದಿದ್ದಾರೋ ಅವರು ಆ ಹಕ್ಕನ್ನು ಚಲಾವಣೆ ಮಾಡುವುದಕ್ಕೂ ಕೂಡ ಅವಕಾಶ ಇಲ್ಲದ ರೀತಿಯಲ್ಲಿ ಈ ಸಂಘಗಳು ನಡೆಯುತ್ತಾ ಇವೆ. ಎಷ್ಟು ಸಂಘಗಳು ನಡೆಯುತ್ತಾ ಇಲ್ಲ, ಎಷ್ಟು ಹಣ ದುರುಪಯೋಗವಾಗಿದೆ ಎಂಬ ಅಂಶವನ್ನು ಈ ಸಭೆಗೆ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಹೇಳುತ್ತೇನೆ.

ಹೈಕೋರ್ಟ್ ಮಟ್ಟದಲ್ಲಿರತಕ್ಕ ನ್ಯಾಯಾಧೀಶರನ್ನೊಳಗೊಂಡ ಒಂದು ವಿಚಾರಣಾ ಸಮಿತಿಯನ್ನು ಈ ಸಹಕಾರ ಸಂಘಗಳ ಬಗ್ಗೆ ಶೀಘ್ರವಾಗಿ ನೇಮಕ ಮಾಡಬೇಕೆಂದು ಹೇಳುತ್ತೇನೆ. ಕೋ-ಆಪರೇಟೀವ್ ಟ್ರಿಬ್ಯೂನಲ್‌ನಲ್ಲಿ ಯಾವುದೇ ಕೇಸುಗಳೂ ಕೂಡ ಇತ್ಯರ್ಥವಾಗುವುದಿಲ್ಲ. ಅಲ್ಲಿ ಅರ್ಬಿಟ್ರೇಟರುಗಳು ಇದ್ದಾರೆ. ಮೊನ್ನೆ ಒಂದು ಪ್ರಶ್ನೆಯನ್ನು ಹಾಕಿದ್ದೆ, ತುಮಕೂರು ಜಿಲ್ಲೆಯಲ್ಲಿರತಕ್ಕ ಅರ್ಬಿಟ್ರೇಟರು ಯಾರು ?

4-00 P.M.

ಸರಕಾರ 8-10 ಹೆಸರುಗಳನ್ನು ತಿಳಿಸಿ ಅವರೆಲ್ಲರೂ ಅಡ್ವೋಕೇಟರುಗಳೆಂದು ಹೇಳಿದ್ದಾಗಿದೆ. ಆ ವಿಚಾರದಲ್ಲಿ ಪ್ರಶ್ನೆ ಚರ್ಚೆಗೆ ಬಂದ ದಿನ ನಾನು ಸಭೆಗೆ ಬಂದು ಉಪಪ್ರಶ್ನೆಗಳನ್ನು ಹಾಕಲು ಸಾಧ್ಯವಾಗಲಿಲ್ಲ. ಸರಕಾರ ತಿಳಿಸಿರುವಂತೆ ಅವರಲ್ಲಿ ಎಷ್ಟು ಜನ ಅಡ್ವೊಕೇಟರುಗಳಲ್ಲ, ಪುಡಾರಿಗಳು ಎಷ್ಟು ಜನ ಇದ್ದಾರೆ ಎಂಬುದನ್ನು ಪರಿಶೀಲಿಸಿ ತಿಳಿಸಬೇಕು. ಇದನ್ನು ನೋಡಿದರೆ ಈ ಸಭೆಗೆ ಸತ್ಯಕ್ಕೆ ದೂರವಾದ ಅಂಕಿಅಂಶ ಕೊಡುವುದು ವ್ಯಕ್ತವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದರಲ್ಲಿ ಸ್ವಲ್ಪ ತಪ್ಪಿತ್ತು, ಮಾನ್ಯ ಸದಸ್ಯರು ಪ್ರಶ್ನೆ ಬಂದ ದಿನ ಹಾಜರಿದ್ದರೆ ಅದನ್ನು ಹೇಳಬಹುದಾಗಿತ್ತು. ಬೇಕಾದರೆ ನಾನು ಉತ್ತರ ಹೇಳುವಾಗ ತಿಳಿಸಬಹುದು.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ತಪ್ಪನ್ನು ಒಪ್ಪಿಕೊಂಡಿರುವುದು ಸಂತೋಷದ ವಿಷಯ. ಈ ಅರ್ಬಿಟ್ರೇಟರುಗಳಿಗೆ ಎಷ್ಟು ಜನ ಸಹಕಾರ ಸಂಘದ ಅಧಿಕಾರಿಗಳು ಫ್ರೇರೇಪಣೆ ಮಾಡಿ ಎಷ್ಟು ಆದಾಯ ಬರುವ ಕೇಸುಗಳನ್ನು ಕಳಿಸಿದ್ದಾರೆ, ಅವರಿಗೆ ಇರುವ ಅರ್ಹತೆಯೇನು, ಎಷ್ಟು ಕೇಸುಗಳನ್ನು ಕಾಲಕ್ಕೆ ಸರಿಯಾಗಿ ತೀರ್ಮಾನ ಮಾಡಿದ್ದಾರೆ ಎಂಬುದನ್ನು ಗಮನಿಸಬೇಕು. ಒಬ್ಬೊಬ್ಬರು ಅರ್ಬಿಟ್ರೇಟರುಗಳಿಗೆ ಜೀವನೋಪಾಯ ಕಲ್ಪಿಸುವುದಕ್ಕಾಗಿ ಕೇಸುಗಳನ್ನು ಅವರಿಗೆ ವಹಿಸಿದ್ದೀರಾ ಅಥವ ಎಲ್ಲರಿಗೂ ಸಮನಾಗಿ ಕೇಸುಗಳನ್ನು ಹಂಚಿದ್ದೀರಾ, ಕಾಲಕ್ಕೆ ಸರಿಯಾಗಿ ತೀರ್ಮಾನ ಮಾಡಬೇಕೆಂದು ಆದೇಶ ಕೊಟ್ಟಿದ್ದೀರಾ ಎಂಬುದನ್ನು ತಿಳಿಸಬೇಕು ಮತ್ತು ಆ ರೀತಿ ಮಾಡಬೇಕು. ಯಾರು ಅಬ್ರಿಟ್ರೇಟರುಗಳನ್ನು ನೇಮಿಸಿದ್ದಾರೆ, ಅಬ್ರಿಟ್ರೇಟರುಗಳ ಹೆಸರು, ಹುದ್ದೆ, ಅವರು ಜೀವನಮಾಡುವ ರೀತಿನೀತಿ, ಸಮಾಜದಲ್ಲಿ ಅವರಿಗಿರುವ ಸ್ಥಾನಮಾನ ಎಲ್ಲಾ ವಿಚಾರಿಸಿ ಈ ಬಗ್ಗೆ ಕೂಡಲೆ ತನಿಖೆ ಏರ್ಪಾಡು ಮಾಡಬೇಕು. ನಾಮಿನೇಷನ್ ಮಾಡುವಾಗ ಅಬ್ರಿಟ್ರೇಟರುಗಳನ್ನು ಯಾವ ಆಧಾರದಮೇಲೆ ತೆಗೆದುಕೊಳ್ಳುತ್ತೀರಿ, ದೇಶಾದ್ಯಂತ ತೆಗೆದುಕೊಳ್ಳುವಾಗ ಅವರಿಗೆ ಯಾವ ಅರ್ಹತೆ ಇರಬೇಕು ಎಂಬುದನ್ನು ಈ ಸಭೆಗೆ ತಿಳಿಸಬೇಕು. ಕಾಂಗ್ರೆಸ್ ಆಫೀಸಿನಿಂದ ಕಳಿಸುವ ಹೆಸರುಗಳ ಆಧಾರದ ಮೇಲೆ ತಾವು ನೇಮಕ ಮಾಡುವುದಾದರೆ ಅದೇ ಒಂದು ನೀತಿ ಎಂದು ತೀರ್ಮಾನ ಮಾಡಬೇಕು, ನಾವು ಅದಕ್ಕೆ ಆಕ್ಷೇಪಣೆ ಮಾಡುವುದಿಲ್ಲ ಅದರ ಬಗ್ಗೆ ಬಹಿರಂಗವಾಗಿ ಹೇಳಿಕೆ ಕೊಡಿ, ಈ ರೀತಿ ಮಾಡುತ್ತೇವೆಂದು ಹೇಳಿ. ಆಗ ನಾವು ಕಾಂಗ್ರೆಸ್ ಸರಕಾರ ತನಗೆ ಬೇಕಾದಹಾಗೆ ಮಾಡುತ್ತದೆ ಎಂದಾದರೂ ತಿಳಿದುಕೊಳ್ಳಬಹುದು. ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗುವುದನ್ನು ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ವ್ಯವಸ್ಥೆ ಇದೆ ? ಸಂಚಾರಿ ವಾಹನವನ್ನೊಳಗೊಂಡ ಒಂದು ನ್ಯಾಯಾಲಯವನ್ನು ಸ್ಥಾಪಿಸಿದರೆ ಅದು ಸಂಚಾರಮಾಡುವಾಗಲೇ ತನಿಖೆಮಾಡಿ ಅಲ್ಲೇ ಶಿಕ್ಷೆ ಕೊಡಬಹುದು. ಇಲ್ಲದಿದ್ದರೆ ಜಾಗ್ರತೆ ಕ್ರಮ ತೆಗೆದುಕೊಳ್ಳಲು ಎಲ್ಲಿ ಸಾಧ್ಯ ? ಬೇಕಾದರೆ ಗೃಹಮಂತ್ರಿಗಳನ್ನು ಕೇಳಿ ಪೋಲೀಸಿನವರಿಗೆ ಸಂಪೂರ್ಣ ಅಧಿಕಾರ ಕೊಡಲು ಕಾನೂನನ್ನು ತಿದ್ದುಪಡಿ ಮಾಡಿ. ನಾನ್ ಅಫಿಷಿಯಲ್ ಆಗಿದ್ದರೂ ಜವಾಬ್ದಾರಿ ಅವನಮೇಲೆ ಹೊರಿಸಿದಾಗ ಸೂಕ್ತಕ್ರಮ ತೆಗೆದುಕೊಳ್ಳಲು ಪೋಲೀಸರಿಗೆ ಅವಕಾಶವಿರಬೇಕು. ಹಿಂದೆ ಚನ್ನಬಸಪ್ಪನವರು ಅಧಿಕಾರದಲ್ಲಿದ್ದಾಗ ಅರಳೂರು ಸಹಕಾರ ಸಂಘದ ಪ್ರಕರಣವನ್ನು ಅವರ ಗಮನಕ್ಕೆ ತಂದಾಗ ನಾನು ಈ ಸಭೆ ಸದಸ್ಯನಲ್ಲದಿದ್ದರೂ ಕೂಡ ನನ್ನ ಜೊತೆಯಲ್ಲಿ ಒಬ್ಬ ಹಿರಿಯ ಅಧಿಕಾರಿಯನ್ನು ಕಳಿಸಿದರು, ಆ ಅಧಿಕಾರಿ ಧಾಳಿ ಮಾಡಿ ಅಧ್ಯಕ್ಷರನ್ನು ಅರೆಸ್ಟ್ ಮಾಡಿ

(ಶ್ರೀ ಕೆ. ಲಕ್ಕಪ್ಪ)

ದರು, ಆ ಸಹಕಾರ ಸಂಘಕ್ಕೆ ಸಂಬಂಧಪಟ್ಟ ಅಸಿಸ್ಟೆಂಟ್ ರಿಜಿಸ್ಟ್ರಾರರ ಆಫೀಸಿನಲ್ಲಿ ಸ್ವಲ್ಪ ಕಾಲ
ಇಟ್ಟುಕೊಂಡಿದ್ದರು. ಜನಸೇವೆ ಮಾಡುವುದಾಗಿ ಹೇಳಿ ಮೋಸ ಮಾಡುವವರಿಗೆ ಅವಕಾಶ ಕೊಡು
ವುದಾದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇದರಿಂದ ಸರಕಾರದವರು ಅಪಪ್ರಚಾರಕ್ಕೆ, ದೂಷ
ಣೆಗೆ ಒಳಗಾಗುತ್ತಾರೆ, ಇದಕ್ಕೆ ಅವಕಾಶವಿರಬಾರದು. ಸಹಕಾರ ಸಂಘಗಳ ಲೋಪದೋಷ
ಗಳನ್ನು ಸರಿಪಡಿಸಲು ಒಂದು ಉನ್ನತಮಟ್ಟದ ನ್ಯಾಯಾಂಗ ತನಿಖೆ ಮಾಡುವ ಒಂದು ಸಮಿತಿಯನ್ನು
ಅತಿ ಜಾಗ್ರತೆಯಾಗಿ ರಚಿಸಬೇಕು. ನಾನು ಕಳಿಸಿರುವ ಶ್ರೋತಾ ಸೂಚನೆಗಳ ಬಗ್ಗೆ ಸಂಪೂರ್ಣ
ವಿವರಣೆ ಕೊಡಬೇಕು. ಯಾವ ಸಂಘವು ಸರಿಯಾಗಿ ನಡೆಯುತ್ತಿಲ್ಲವೋ ಅದನ್ನು ರದ್ದುಮಾಡಿ,
ಅಂಥವುಗಳ ಒಂದು ಪಟ್ಟಿಮಾಡಿ ಚೆನ್ನಾಗಿ ಕೆಲಸಮಾಡುವುದನ್ನು ಚುರುಕಾಗಿ ಧರ್ಮದಿಂದ ನಡೆಯು
ವಂತೆ ಪರಿವರ್ತನೆ ಮಾಡಲು ಒಂದು ಹೊಸ ಚಳುವಳಿ ಹೂಡಬೇಕು. ಇಲ್ಲದಿದ್ದರೆ ಸಹಕಾರ ಸಂಘ
ಗಳ ಕೆಲಸವು ಚೆನ್ನಾಗಿ ನಡೆಯುವುದಿಲ್ಲ. ಅಧಿಕಾರದಲ್ಲಿರುವ ಜನರು ಸಹಕಾರ ಸಂಘಗಳಲ್ಲಿ ಕೆಲಸ
ಮಾಡುವವರು ಸರಿಯಾಗಿ ಕೆಲಸ ಮಾಡದಿದ್ದರೆ ಅವರ ನ್ಯಾಯವನ್ನು ಜನರು ಖಂಡಿಸಲು ಪ್ರಾರಂಭಿ
ಸುತ್ತಾರೆ. ಅಧ್ಯಕ್ಷರು, ಕಾರ್ಯದರ್ಶಿಗಳು, ಮ್ಯಾನೇಜ್‌ಮೆಂಟಿನವರು ತಪ್ಪು ಮಾಡಿದಾಗ ಕ್ರಮ
ತೆಗೆದುಕೊಳ್ಳಲು ಏನು ಅವಕಾಶವಿದೆ? ರಿಜಿಸ್ಟ್ರಾರರು ಕೆಲವು ಸಂಘಗಳಿಗೆ ಸ್ಟೇ ಆರ್ಡರು ಕೊಟ್ಟು
ಕೆಲಸವನ್ನು ಸೂಪರ್‌ಸೀಡ್ ಮಾಡುತ್ತಾರೆ, ಸರಿಯಾಗಿ ಕೆಲಸ ಮಾಡದಿರುವ ಸಂಘಗಳು ಕೆಲವು
ಹಾಗೆಯೇ ನಡೆಯುತ್ತಿರುತ್ತವೆ. ಒಂದೊಂದು ಕಡೆ ಒಂದೊಂದು ನೀತಿಯನ್ನನುಸರಿಸುವುದು ಸರಿ
ಯಲ್ಲ. ಸಹಕಾರ ಸಂಘಗಳಲ್ಲಿ 4-5 ವರ್ಷಗಳು ಸರಿಯಾಗಿ ಕೆಲಸಮಾಡದೆ ಕೆಟ್ಟ ಹೆಸರು ಬಂದರೆ
ಅದಕ್ಕೆ ಕಾರಣರಾದ ಅಧ್ಯಕ್ಷರ ಪಟ್ಟಿಮಾಡಿ ಅದನ್ನು ಬಹಿರಂಗವಾಗಿ ಸಂತೆ ಮತ್ತು ಪತ್ರಿಕೆಗಳಲ್ಲಿ
ಪ್ರಕಟಿಸಿದರೆ ಸಾಕು, ಅವರಿಗೆ ಬೇರೆ ಶಿಕ್ಷೆ ಮಾಡಬೇಕಾಗಿಲ್ಲ. ಜನರು ತಿಳಿಯುವಂತೆ ಟಾಂಟಾ
ಮಾಡಿದರೆ ಅವರ ಮರ್ಯಾದೆ ಉಳಿಯುವುದಿಲ್ಲ. ಇಲ್ಲದಿದ್ದರೆ ಸಹಕಾರ ಸಂಘಗಳಲ್ಲಿ ಅಧ್ಯಕ್ಷರಾಗಿರು
ವವರು ರಾಷ್ಟ್ರಾಧ್ಯಕ್ಷರ ಪದವಿಯನ್ನಾದರೂ ತಿರಸ್ಕಾರಮಾಡಿ ಅಧ್ಯಕ್ಷರಾಗಿ ಉಳಿಯಲು ಬಯಸು
ವರೇ ವಿನಾ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡುವುದಿಲ್ಲ. ಸಹಕಾರ ಸಂಘದ ಅಧ್ಯಕ್ಷ ಪದವಿ
ಸಿಕ್ಕಿದರೆ ಮಂತ್ರಿ ಕೆಲಸ ಸಹ ಬೇಡವೆಂದು ಹೇಳುತ್ತಾರೆ. ದೇಶಾದ್ಯಂತ ಸರಿಯಾಗಿ ನಡೆಯದಿರುವ
ಸಹಕಾರ ಸಂಘಗಳ ಪಟ್ಟಿಮಾಡಿ ತನಿಖೆಮಾಡಿ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡದಿದ್ದರೆ
ಸಂಘಗಳೂ ಸರಿಯಾಗಿ ನಡೆಯುವುದಿಲ್ಲ ಮತ್ತು ಸರಕಾರಕ್ಕೂ ಗೌರವ ಬರುವುದಿಲ್ಲ. ಅಮೇರಿಕಾ,
ಇಂಗ್ಲೆಂಡುಗಳಲ್ಲಿ ಸಹಕಾರ ಸಂಘಗಳಿರುವ ರೀತಿನೀತಿಯನ್ನು ನೋಡಬಹುದು, ಆ ರೀತಿಯ ಸಂಘ
ಗಳು ಇಲ್ಲಿಲ್ಲ. ಇಂಗ್ಲೆಂಡಿನಲ್ಲಿ ಕನ್‌ಸ್ಯೂಮರ್ ಕೋ-ಆಪರೇಟಿವ್ ಸೊಸೈಟಿಗಳು ಮಾತ್ರ ಇವೆ. ಈ
ರೀತಿ ಸಹಕಾರ ಸಂಘಗಳ ನೀತಿ ನಮ್ಮಲ್ಲಿದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಈ ಬಗ್ಗೆ ಪರಿ
ಶೀಲನೆ ತುರ್ತಾಗಿ ಮಾಡಿ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಉತ್ತರ ಹೇಳಬೇಕು
ಎಂದು ಮನವಿ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಸನ್ಮಾನ್ಯ ಅಧ್ಯಕ್ಷರೆ, ಸಹಕಾರ ಚಳವಳಿಯು
ದೀನ ದಲಿತರ, ಜನ ಸಾಮಾನ್ಯರ ಬಡ ವ್ಯವಸಾಯಗಾರರ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಅವರ
ಅಭ್ಯುದಯಕ್ಕಾಗಿ ಹುಟ್ಟಿದಂಥ ಚಳವಳಿಯಾಗಿದೆ. ಇದರಲ್ಲಿ ಅಲ್ಲಲ್ಲಿ ಕೆಲವು ದೋಷಗಳು
ಇರಬಹುದು. ಇಂಥ ದೋಷಗಳನ್ನು ಬೃಹದಾಕಾರವಾಗಿ ಚಿತ್ರಿಸಿ ಅಲ್ಲದ ಸಲ್ಲದ ಆರೋಪ ಮಾಡಿ
ಈ ಸಹಕಾರ ಚಳವಳಿಗೆ ಒಂದು ಕೆಟ್ಟ ಹೆಸರು ಕೊಡುವುದು ಸರಿಯಲ್ಲ ಎಂದು ಈ ಸಭೆಯಲ್ಲಿ ಹೇಳ
ಬಯಸುತ್ತೇನೆ. ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಲಕ್ಕಪ್ಪನವರು ಸಹಕಾರ ಸಂಘಗಳ ಸಂಬಂಧ
ದಲ್ಲಿ ಮೇಲಿಂದ ಮೇಲೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ತುಮಕೂರು ಜಿಲ್ಲೆಯ ಸಹಕಾರ
ಸಂಘಗಳ ಚಳವಳಿಯಲ್ಲಿ ಕೆಲವು ದೋಷಗಳಿರುವುದನ್ನು ಅನೇಕ ಸಲ ಈ ಸಭೆಯ ಮುಂದೆ ಇಟ್ಟಿ
ದ್ದಾರೆ. ತುಮಕೂರು ಜಿಲ್ಲೆಯಲ್ಲಿಯ ಒಂದೆರಡು ಉದಾಹರಣೆಗಳ ಆಧಾರದ ಮೇಲೆ ಇದು ದೇಶಾ
ದ್ಯಂತ ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳುತ್ತಾ ಸಹಕಾರ ಸಂಘಗಳಿಗೆ ಒಂದು ಕೆಟ್ಟ ಹೆಸರು
ಕೊಡುವುದು ಸರಿಯಲ್ಲ. ಯಾವರೀತಿ ಈ ಸಹಕಾರ ಚಳವಳಿಯು ಉತ್ತಮ ಪ್ರಗತಿ ಸಾಧಿಸಿದೆ
ಎಂಬುದಕ್ಕೆ ಅಂಕಿಅಂಶಗಳಿಂದ ತಿಳಿದುಕೊಳ್ಳಲಿಕ್ಕೆ ಅವರು ಪ್ರಯತ್ನ ಮಾಡಬೇಕು ಎಂದು ಹೇಳು
ತ್ತೇನೆ. ಒಂದೆರಡು ಉದಾಹರಣೆ ಹಿಡಿದು ಸಹಕಾರ ಚಳವಳಿಯೇ ಕೆಟ್ಟು ಹೋಗಿದೆ ಎಂದು ಹೇಳು
ವುದು ಎಷ್ಟುಮಾತ್ರವೂ ಸರಿಯಲ್ಲ. ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಪ್ರಗತಿ ಸಾಧನೆಯಾಗಿದೆ
ಎಂಬುದಕ್ಕೆ ಈ ಮಾನ್ಯ ಸಭೆಯಲ್ಲಿ ಅಂಕಿ ಅಂಶಗಳನ್ನು ಇಡುವುದಕ್ಕೆ ಬಯಸುತ್ತೇನೆ.

ಮೊದಲನೆಯದಾಗಿ ಈ ಸಹಕಾರ ಚಳವಳಿಯಿಂದ ವ್ಯವಸಾಯಗಾರರಲ್ಲಿ ಪತ್ತು ಬೆಳೆದಿದೆ
ಎಂಬುದು ಬಹು ಮುಖ್ಯವಾದುದು. ಆದುದರಿಂದ ವ್ಯವಸಾಯ ಸಹಕಾರಕ್ಕೆ ಯಾವರೀತಿ ಸಹಾಯ
ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕಾದುದು ಅಗತ್ಯ. ನಮ್ಮ ದೇಶದಲ್ಲಿ ನೂರಕ್ಕೆ ಐವತ್ತು

ರಷ್ಟು ಆದಾಯ ವ್ಯವಸಾಯದಿಂದ ಇದೆ. ಹಳೇ ಮೈಸೂರಿನಲ್ಲಿ ರಾಜ್ಯ ಪುನರ್ ವಿಂಗಡಣೆಯ ಮೊದಲು ಸಹಕಾರಸಂಘಗಳನ್ನು ಅಧಿಕಾರಿಗಳು ತಮ್ಮ ಆಡಳಿತದಲ್ಲಿ ನಡೆಸಿಕೊಂಡು ಹೋಗುತ್ತಿದ್ದರು. ಆದುದರಿಂದ ಇದು ಅಧಿಕಾರಿಗಳಿಗೆ ಸಂಬಂಧಪಟ್ಟ ಚಳವಳಿಯಾಗಿತ್ತು. ಆದರೆ ಇದು ಪ್ರಜಾಪ್ರಭುತ್ವ ತತ್ವದ ತಳಹದಿಯ ಮೇಲೆ ಸಾಮಾನ್ಯವಾಗಿ ಇರಬೇಕಾದದ್ದು ಆಗಿದೆ. ಸಹಕಾರ ಸಂಸ್ಥೆಗಳನ್ನು ಜನಸಾಮಾನ್ಯರು ನಡೆಸುತ್ತಾರೆ. ಜನಸಾಮಾನ್ಯರ ಆಡಳಿತದಲ್ಲಿರತಕ್ಕಂಥ ಈ ಸಹಕಾರ ಸಂಸ್ಥೆಗಳಲ್ಲಿ ಅಲ್ಲಲ್ಲಿ ಕೆಲವು ತಪ್ಪುಮಾಡಿದ್ದುಉಂಟು. ಅವುಗಳನ್ನು ತಿದ್ದುಪಡಿಮಾಡಿ ಆಡಳಿತ ಸುಧಾರಿಸುವುದು ನಮ್ಮೆಲ್ಲರ ಆಧ್ಯ ಕರ್ತವ್ಯವಾಗಿದೆ ಎಂದು ಎಲ್ಲರೂ ತಿಳಿದುಕೊಳ್ಳಬೇಕು. ಕೆಲವೇ ವರ್ಷಗಳಲ್ಲಿ ಈ ಸಂಸ್ಥೆಗಳ ಮೂಲಕ ಅಲ್ಪಾವಧಿ ಸಾಲ ದೀರ್ಘಾವಧಿ ಸಾಲ ಮಧ್ಯಮ ಅವಧಿ ಸಾಲ ಹೀಗೆ ಎಷ್ಟು ರೀತಿಯಿಂದ ವ್ಯವಸಾಯಗಾರರಿಗೆ ಸಹಾಯಮಾಡಿದ್ದಾರೆ ಎಂಬುದನ್ನು ನೋಡಬೇಕು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾನ್ಯ ರೈತನ ಅಭ್ಯುದಯಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿದೆ. ಈಗ ರಿಜರ್ವ್ ಬ್ಯಾಂಕಿನವರು ಒಂದು ಯೋಜನೆ ತಯಾರುಮಾಡಿ ರೈತನಿಗೆ ಸಾಲ ಅಥವಾ ಒಕ್ಕಲತನಕ್ಕೆ ಬೇಕಾಗುವ ಪದಾರ್ಥಗಳ ಬಗ್ಗೆ ಅನುಕೂಲ ಒದಗಿಸಿಕೊಟ್ಟಿದ್ದಾರೆ. ಇಂಥ ಒಂದು ಅವಕಾಶ ಉಂಟುಮಾಡಿ ರೈತನಿಗೆ ಯೋಗ್ಯ ಫಲ ದೊರೆಯುವಂತೆ ವ್ಯವಸ್ಥೆಮಾಡಿದೆ. ಇದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಇರಬೇಕು. ಸರಕಾರಿ ಅಧಿಕಾರಿಗಳು ಈ ಚಳವಳಿಯಲ್ಲಿ ಕೈವಾಡ ನಡೆಸಬಾರದು. ಇದು ಮುಖ್ಯ. ಈ ಸಹಕಾರ ಚಳವಳಿಯ ಬಗ್ಗೆ ಪಂಡಿತ ಜವಾಹರಲಾಲ ನೆಹರು ಅವರು ಈ ರೀತಿ ಹೇಳಿದ್ದಾರೆ:

> "Co-operation shoud not be under Governmental control. If there is any gevernmental control, good or bad, it is not co-operation, whatever else it may be. Government control means it is an embrace of death. I dislike the association of Government in Co-operation except as an agency helping with funds and so on. I want a co-operative in every village serving the economic needs of the people and teaching the co-operative way of life and mental habit."

ಗ್ರಾಮಾಂತರ ಪ್ರದೇಶದಲ್ಲಿರುವ ರೈತನಿಗೆ ಹಣದ ಸೌಕರ್ಯ ಒದಗಿಸಿ ಕೊಡುವುದಕ್ಕಾಗಿ ವ್ಯವಸಾಯಕ್ಕೆ ಅನುಕೂಲಮಾಡಿ ಕೊಡುವುದಕ್ಕಾಗಿ ಈ ಸಹಕಾರ ಚಳವಳಿಯನ್ನು ಪ್ರಾರಂಭ ಮಾಡಿದ್ದುಂಟು. ಮುಖ್ಯವಾಗಿ ನಮ್ಮ ಮೈಸೂರು ರಾಜ್ಯದಲ್ಲಿ ಈ ಸಹಕಾರ ಚಳವಳಿಯು ಹೆಚ್ಚು ಪ್ರಗತಿಪರವಾಗಿದೆ. ಇದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಶೇರ್ ಕ್ಯಾಪಿಟಲ್ ವಿಚಾರದಲ್ಲಿ ಅಖಂಡಭಾರತ ಸರಾಸರಿ ಆವರೇಜು 4,885 ಇದ್ದರೆ ನಮ್ಮ ಮೈಸೂರಿನಲ್ಲಿ 7,656 ಶೇರ್ ಕ್ಯಾಪಿಟಲ್ ಇದೆ. ಡಿಪಾಜಿಟ್ ವಿಚಾರದಲ್ಲಿ ಅಖಂಡಭಾರತ ಆವರೇಜು 1,529 ಇದ್ದರೆ ನಮ್ಮ ರಾಜ್ಯದಲ್ಲಿ 1,890 ಇದೆ. ನಮ್ಮದು ವ್ಯಾಕ್ಸಿಮಂ ಡಿಪಾಜಿಟ್ಟು ಇದೆ ಎಂಬುದು ಇದರಿಂದ ಕಂಡುಬರುತ್ತದೆ. ಲೋನ್ಸ ಅಡ್ವಾನ್ಸ್ ಪರ್ ಸೊಸೈಟಿ 15,660 ಆಲ್ ಇಂಡಿಯಾ ಆವರೇಜು ಇದ್ದರೆ ನಮ್ಮದು 18,954 ಇದೆ. ಮೆಂಬರ್‌ಷಿಪ್ ಪ್ರತಿಯೊಂದು ಸೊಸೈಟಿಯಲ್ಲಿ ಆಲ್ ಇಂಡಿಯಾ ಆವರೇಜು 125 ಇದ್ದರೆ ನಮ್ಮದು 178 ಇದೆ. ಈ ಅಂಕಿಅಂಶಗಳನ್ನು ಸರಿಯಾಗಿ ಕೂಲಂಕಷವಾಗಿ ವಿಚಾರಮಾಡಿ ನೋಡಬೇಕು. ಇದಲ್ಲದೆ ಪ್ರತಿಯೊಬ್ಬ ವ್ಯಕ್ತಿಗೂ ಸಾಕಷ್ಟು ಸೌಕರ್ಯ ದೊರಕಿದೆ. ಇದರ ಬಗ್ಗೆ ಕೆಲವು ಅಂಕಿಅಂಶಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ.

ಆಲ್ ಇಂಡಿಯಾ ಷೇರ್ ಕ್ಯಾಪಿಟಲ್ ಪರ್ ಮೆಂಬರ್	29
ನಮ್ಮದು	43.1
ಆಲ್ ಇಂಡಿಯಾ ಡಿಪಾಜಿಟ್ ಆವರೇಜು ಪರ್ ಮೆಂಬರ್	12.3
ನಮ್ಮದು	10.6
ಲೋನ್ಸ ಅಡ್ವಾನ್ಸ್ ಪರ್ ಬಾರೋಇಂಗ್ ಮೆಂಬರ್	262
ಆಲ್ ಇಂಡಿಯಾ ಆವರೇಜು	
ಹೋದವರ್ಷ ನಮ್ಮದು	240
ಟೋಟಲ್ ಸೊಸೈಟೀಜ ನಮ್ಮಲ್ಲಿ	9,000
ಆಲ್ ಇಂಡಿಯಾ ಆವರೇಜು	18,000

34 ಲಕ್ಷ ಜನರು ಸಹಕಾರ ಸಂಘಗಳೊಳಗೆ ಬರುತ್ತಾರೆ. ಆದರೆ ವ್ಯವಸಾಯಗಾರರು ಮೆಂಬರ್ಸ್ ಆದವರು 16 ಲಕ್ಷಕ್ಕಿಂತ ಹೆಚ್ಚಾಗಿಲ್ಲ. ಇನ್ನು ಲೋನ್ಸ್ ಕೊಡುವ ವಿಚಾರದಲ್ಲಿ ಸಾಕಷ್ಟು ವ್ಯವಸ್ಥೆ

(ಶ್ರೀ ಎ. ಎಸ್. ಪಾಟೀಲ್)

ಮಾಡಿದ್ದಾರೆ. ಸುಮಾರು 18 ಕೋಟಿ ರೂಪಾಯಿ ಸಾಲಕೊಟ್ಟಿದೆ. ಒಟ್ಟಿನಲ್ಲಿ ನಮ್ಮ ಸಹಕಾರ ಸಂಘಗಳಲ್ಲಿ ವ್ಯವಸಾಯಗಾರರಿಗೆ ಬೇಕಾಗುವ ಸಲಕರಣೆ ಹಾಗೂ ಇತರ ಬೇಡಿಕೆಗಳನ್ನು ಪೂರೈಸುವುದಕ್ಕೆ ಸಾಕಷ್ಟು ವ್ಯವಸ್ಥೆ ಮಾಡಿದೆ. ರೈತನಿಗೆ ಬೇಕಾದ ಗರ್ಜುಗಳು ಮತ್ತು ಕಾಂಪೋನೆಂಟ್‌ಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಹಕಾರ ಸಂಘಗಳ ಮೂಲಕ ಕೊಡಬೇಕೆನ್ನುವ ಯೋಚನೆಯನ್ನು ರಿಜರ್ವ್ ಬ್ಯಾಂಕಿನವರು ಈಗಾಗಲೇ ಕೈಗೊಂಡಿದ್ದಾರೆ. ಹೈಬ್ರಿಡ್‌ಗಳನ್ನು ತರಿಸಿಕೊಡುವುದರಿಂದ ಜೋಳದ ಉತ್ಪತ್ತಿ ಹೆಚ್ಚಾಗುತ್ತಿದೆ. ಒಂದು ಎಕರೆಗೆ 30—40 ರೂಪಾಯಿಗಳನ್ನು ಖರ್ಚುಮಾಡಿದರೂ ಸಹಿತ 200 ರೂಪಾಯಿಗಳವರೆಗೆ ವರಮಾನ ಸಿಗುತ್ತದೆ. ಇದಕ್ಕಾಗಿ ರೈತನಿಗೆ ಸಾಕಷ್ಟು ಸಾಲದ ವ್ಯವಸ್ಥೆಯೂ ಇದೆ. ಒಟ್ಟಿನಮೇಲೆ ಸಹಕಾರ ಸಂಘಗಳು ಈ 3 ವರ್ಷದಲ್ಲಿ ಬಹಳ ಉತ್ತಮ ರೀತಿಯಿಂದ ಕೆಲಸವನ್ನು ಮಾಡಿಕೊಂಡು ಹೋಗುತ್ತಿವೆ. ಕೆಲವು ಅಫೆಕ್ಸ್ ಇನ್ಸ್‌ಟಿಟ್ಯೂಷನ್‌ಗಳು ಉತ್ತಮ ರೀತಿಯಿಂದ ಕೆಲಸ ಮಾಡುತ್ತಿವೆ. ಅಫೆಕ್ಸ್ ಬ್ಯಾಂಕ್ 1956ನೇ ಇಸವಿಯಲ್ಲಿ ಸರ್ಕಾರದಿಂದ ತೆಗೆದುಕೊಂಡು 5 ಲಕ್ಷ ರೂಪಾಯಿಗಳಿಂದ ವ್ಯವಹಾರ ನಡೆಸಿ ಇವತ್ತಿನ ದಿವಸ 16 ಲಕ್ಷ ರೂಪಾಯಿಗಳ ಲಾಭ ಮಾಡಿದೆ. ಇಡೀ ಹಿಂದೂಸ್ಥಾನದಲ್ಲಿಯೇ ಈ ಬ್ಯಾಂಕ್ ಹಿಂದುಳಿದಿಲ್ಲ. ಬಹಳ ಮುಂದುವರೆದ ಬ್ಯಾಂಕ್ ಆಗಿದೆ. ತಾವುಗಳು ಅದರ ಅಂಕಿಅಂಶಗಳನ್ನು ಪರಾಂಬರಿಸಿ ನೋಡಿದರೆ ಉತ್ತಮ ರೀತಿಯಿಂದ ಕೆಲಸಮಾಡುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದೇ ಬ್ಯಾಂಕ್ ಮುಂದಿನ ವರ್ಷ ಜುಬಿಲಿಯನ್ನು ಆಚರಿಸಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಇದೇ ರೀತಿ ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್. ಈ ಬ್ಯಾಂಕ್‌ನವರು ಮೊನ್ನೆ ಮಹಾರಾಷ್ಟ್ರದ ಮಾದರಿಯಂತೆ ಕೆಲವು ಅಮೆಂಡ್‌ಮೆಂಟ್‌ಗಳನ್ನು ಮಾಡಿದ್ದಾರೆ. ಸಹಕಾರದ ಕಾಯಿದೆಯೊಳಗೆ ಉತ್ತಮವಾದಂತಹ ಅಂಶಗಳನ್ನು ಒಳಗೊಂಡ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಎಷ್ಟೋ ಮಂದಿ ಇದರ ಬಗ್ಗೆ ಟೀಕೆಮಾಡಿದ್ದಾರೆ. ಅರ್ಜಿಕೊಟ್ಟು 2 ವರ್ಷವಾದರೂ ಸಹ ಸಾಲ ಸಿಗುವುದಿಲ್ಲವೆಂದು. ಆದರೆ ಈಗ ಆ ರೀತಿಯಾಗುತ್ತಿಲ್ಲ. ಈಗ ಪ್ರತಿಯೊಂದು ಅಧಿಕಾರವೂ ವಿಕೇಂದ್ರೀಕರಣವಾಗಿದೆ. ತಾಲ್ಲೂಕ್ ಲೆವಲ್‌ನಲ್ಲಿರುವ ಸೊಸೈಟಿಗಳು 5 ಸಾವಿರದವರೆಗೆ ಸಾಲಕೊಡುವುದಕ್ಕೆ ಶಕ್ಯ ಹೊಂದಿವೆ. ಇನ್ನು 4 ತಿಂಗಳೊಳಗೆ ರೈತರಿಗೆ ಬೇಕಾಗುವ ಹಣದ ಸಾಲ, ದರ್ದು ಗರ್ಜಿಗಳನ್ನು ಕೊಡಲು ವ್ಯವಸ್ಥೆಮಾಡುತ್ತಿದ್ದಾರೆ. ಈ ವರ್ಷ ನಮ್ಮ ದೇಶದಲ್ಲಿ ನೀರಾವರಿ ಕಾಮಗಾರಿಗಳು ಬಹಳ ಕಡಿಮೆಯಾಗಿವೆ. ಇದಕ್ಕೆ ಕಾರಣವಾದರೂ ಸಹ ಕೃಷ್ಣ ಗೋದಾವರಿ ನದಿಗಳ ಜಗಳವನ್ನು ಬಗೆ ಹರಿಸುವುದಕ್ಕೆ ಆಗದಿರುವುದು. ಇನ್ನಾದರೂ ಸಹ ತೀವ್ರಗತಿಯಿಂದ ನೀರಾವರಿ ಆಸರೆಯಿಂದ ಸೌಲಭ್ಯ ದೊರೆಯುವಂತೆ ಮಾಡಬೇಕು. ಈಗ ವೆಲ್ ಸ್ಕೀಮ್ ಏನು ಇದೆ, ರೆವಿನ್ಯೂ ಪಾರಿಪತ್‌ನಲ್ಲಿ ಕೊಡುವ ಪರಿಪಾಟು ಏನು ಇದೆ ಅದರ ಏರ್ಪಾಡು ಸರಿಯಲ್ಲವೆಂದು ಶ್ರೀ ಬಿ. ಪಿ. ಪಾಟೀಲ್ ಅವರ ರಿಪೋರ್ಟ್ ಆಧಾರದ ಮೇಲೆ ವೆಲ್ ಸ್ಕೀಮನ್ನು ಕೇಂದ್ರದ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆಕೊಟ್ಟಿದೆ. ಈಗಾಗಲೇ ಎರಡು ತಿಂಗಳೊಳಗೆ 3,002 ಬಾವಿಗಳನ್ನು ಮಂಜೂರು ಮಾಡಿ, ಕೋಟಿಗಟ್ಟಲೆ ಹಣವನ್ನು ಕೊಟ್ಟಿದ್ದಾರೆ. ಮತ್ತೆ ಎರಡು ತಿಂಗಳಲ್ಲಿ ನಾಲ್ಕು ಸಾವಿರ ಬಾವಿಗಳಿಗೆ ಹಣ ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆಯು ಬರಗಾಲ ಪೀಡಿತವಾದ ಪ್ರದೇಶ. ಆ ಪ್ರದೇಶವನ್ನು ಸಾಕಷ್ಟು ಪ್ರಗತಿ ಮಾಡಲಿಕ್ಕೆ, ಹೆಚ್ಚಿನ ಹಿಡುವಳಿ ತೆಗೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಒಂದು ಯೋಗ್ಯವಾದಂತಹ ಚಳುವಳಿಯು ನಡೆಯುತ್ತಿದೆ. ಕೆಲವರು ಇದರ ಬಗ್ಗೆ ತಪ್ಪು ಟೀಕೆ ಮಾಡಿದರೆ ಕೆಲಸ ಮಾಡುವಂತಹ ಜನರಿಗೆ, ಚಳುವಳಿ ಮಾಡುವ ಜನರಿಗೆ ಒಂದು ನೋವನ್ನು ಮಾಡಿದಂತಾಗುತ್ತದೆ ಎಂದು ತಿಳಿದುಕೊಳ್ಳಬೇಕು. ಈ ಸ್ಟೇಟ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಇವತ್ತಿನವರೆಗೆ 3,002 ಬಾವಿಗಳನ್ನು ಮಂಜೂರು ಮಾಡಿದ್ದಾರೆ. ಇನ್ನು 5–6 ದಿವಸಗಳೊಳಗೆ ನಾಲ್ಕು ಸಾವಿರದ ಒಂದು ಟಾರ್‌ಗೆಟ್ ಮುಟ್ಟತಕ್ಕಂಥ ಸಾಧ್ಯತೆ ಇದೆ ಎಂದು ಹೇಳಬಯಸುತ್ತೇನೆ. ಬಡರೈತನಿಗೆ, ವ್ಯವಸಾಯಗಾರನಿಗೆ ಬೇಕಾಗುವ ಎಲ್ಲಾ ರೀತಿಯ ಸಹಾಯವನ್ನೂ, ಅಂದರೆ ಅಲ್ಪಾವಧಿ ಸಾಲವಾಗಲಿ, ಮಧ್ಯಮಾವಧಿ ಸಾಲವಾಗಲಿ, ದೀರ್ಘಾವಧಿ ಸಾಲವಾಗಲಿ ಕೊಡಲು ವ್ಯವಸ್ಥೆ ಮಾಡುತ್ತಿರುವುದು ಕಂಡುಬಂದಿದೆ. ಈಗ ಕೆಲವೊಂದು ಅಂಶಗಳನ್ನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದವರು ವ್ಯವಸಾಯದ ಬಾಬಗಾಗಿ 400 ಕೋಟಿ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದ್ದರು. ಇದರಲ್ಲಿ 326 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇನ್ನೂ ಹೆಚ್ಚು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗ ಬೆಳೆಯುವುದಕ್ಕಿಂತ ಮೂರು ಪಟ್ಟು ಹೆಚ್ಚು ಬೆಳೆಯುವುದಕ್ಕಾಗಿ ಬಡ ರೈತನ ಗರ್ಜಿಗೆ ಸಾಕಷ್ಟು ಹಣ ದೊರೆಯುತ್ತದೆ ಎಂದು ತಿಳಿದುಕೊಂಡಿದ್ದೇನೆ. ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಹಣವನ್ನು ಉಳುವವನಿಗಾಗಿ ಇಟ್ಟಿದ್ದಾರೆ.

ಫುರ್ ಫೈನಾನ್ಸ್ ಸ್ಕೀಮ್ ಎಂದು ಮಾಡಿದ್ದಾರೆ. ಅದರೊಳಗೆ ರೈತರಿಗೆ ಬೀಜ, ಗೊಬ್ಬರ, ಕಾಳು ಕಡ್ಡಿ ಎಲ್ಲವನ್ನೂ ಕೊಟ್ಟು ಸರಿಯಾಗಿ ಬೆಳೆ ತೆಗೆಯುವ ಏರ್ಪಾಡು ಮಾಡುತ್ತಿದ್ದಾರೆ. ಮುಂದಿನ ಭವಿಷ್ಯ ಫಲಪ್ರದವಾಗುತ್ತದೆಯೆಂದು ನಾವುಗಳೆಲ್ಲಾ ತಿಳಿದುಕೊಳ್ಳಬೇಕು. ವ್ಯವಸಾಯದ ಬಾಬಿಗೆ ಸಂಬಂಧಪಟ್ಟ ಸೊಸೈಟಿಗಳ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳುತ್ತೇನೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಗೊಬ್ಬರ ಬೀಜವನ್ನು ರೈತರಿಗೆ ವಿತರಣೆ ಮಾಡುವುದಕ್ಕಾಗಿ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯವರಿಗೆ ಕಳಿಸಿಕೊಡುತಾರೆ. ಕೆಲವರು ಹೇಳುತ್ತಾರೆ, ಈ ಸೊಸೈಟಿಯವರು ಸರಿಯಾಗಿ ಹಂಚುವುದಿಲ್ಲ, ಸರಿಯಾಗಿ ಲೆಕ್ಕವಿಡುವುದಿಲ್ಲ ಹಣವನ್ನು ತಿಂದು ಬಿಡುತ್ತಾರೆ ಎಂದು. ಇದು ಬಹಳ ತಪ್ಪು, ಹಣವನ್ನು ತಿಂದರೆ, ತಪ್ಪು ಮಾಡಿದ್ದು ನಿಜವಿದ್ದರೆ, ಆಡಿಟರ್‌ಗಳು ತನಿಖೆ ಮಾಡುತ್ತಾರೆ, ಪೋಲೀಸ್ ಖಾತೆಯವರು ತನಿಖೆ ಮಾಡುತ್ತಾರೆ. ಸರ್ಕಾರದವರು ಸಹ ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆ. ಅಲ್ಲದೆ ಮಂತ್ರಿಗಳು ಇದ್ದಾರೆ, ಅವರ ಬಳಿ ದೂರು ಹೋದರೆ, ಅವರು ಸಹ ಪೋಲೀಸ್ ಖಾತೆ ಮೂಲಕ ತನಿಖೆ ನಡೆಸಲು ಏರ್ಪಾಡು ಮಾಡುತ್ತಾರೆ. ಆದ್ದರಿಂದ ಅಂಕಿಅಂಶಗಳನ್ನು ಸರಿಯಾಗಿ ನೋಡದೆ 2 ಲಕ್ಷ ಹಣ ತಿಂದಿದ್ದಾರೆ 3 ಲಕ್ಷ ತಿಂದಿದ್ದಾರೆ ಎಂದು ಟೀಕೆ ಮಾಡುವುದು ಸರಿಯಲ್ಲ. ನಮ್ಮ ಉತ್ತರ ಕರ್ನಾಟಕದೊಳಗೆ ಮಾರಾಟ ಸಂಘಗಳು ಹೋದ ವರ್ಷ ಮಾಡಿದಂತಹ ಕೆಲಸಕಾರ್ಯಗಳನ್ನು ನೋಡಿದರೆ, ಅವರು ಏನು ಲಾಭ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಗದಗ್‌ನಲ್ಲಿರುವ ಕೋ-ಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿಯವರು 3 ಲಕ್ಷ ರೂಪಾಯಿಗಳವರೆಗೆ ಲಾಭ ಮಾಡಿಕೊಂಡಿದ್ದಾರೆ. ಸಣ್ಣ ಸಣ್ಣ ತಾಲ್ಲೂಕ್ ಸೊಸೈಟಿಗಳು 50 ಸಾವಿರದವರೆಗೆ ಲಾಭ ಮಾಡಿವೆ. ಒಟ್ಟಿನಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಮತ್ತು ತಾಲ್ಲೂಕ್ ಸೊಸೈಟಿಯವರು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಯಶಸ್ವಿಯಾಗಿ ನಡೆದುಕೊಂಡು ಹೋಗುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಕೆಲವರು ಅವಹೇಳನ ಮಾಡುವುದು ಸರಿಯಲ್ಲ. ನಮ್ಮ ರಾಜ್ಯದಲ್ಲಿ ಸಿಗದಿದ್ದ ಬೀಜಗಳನ್ನು, ಗೊಬ್ಬರಗಳನ್ನು ಪಂಜಾಬ್ ಮತ್ತು ಒರಿಸ್ಸಾಗಳಿಂದ ತರಿಸಿ ವಿತರಣೆ ಮಾಡುತ್ತಿದ್ದಾರೆ. ರೈತರುಗಳಿಗೆ ಎಲ್ಲಾ ರೀತಿಯ ಉತ್ತೇಜನವನ್ನು ಕೊಡುತ್ತಿದ್ದಾರೆ. ಫೆಡರೇಷನ್ ಸೊಸೈಟಿಯವರು ಸಹ ಉತ್ತಮ ರೀತಿಯಿಂದ ಕೆಲಸ ಮಾಡಿ 6–7 ಲಕ್ಷ ರೂಪಾಯಿಗಳವರೆಗೆ ಲಾಭ ಮಾಡಿಕೊಂಡಿದ್ದಾರೆ. ನಾವು ಟೀಕೆ ಮಾಡಿದರೆ, ಸರಿಯಾಗಿ ಕೆಲಸ ಮಾಡುವವರಿಗೆ ಉತ್ತೇಜನ ಕೊಟ್ಟ ಹಾಗೆ ಆಗುವುದಿಲ್ಲ.

ಗೃಹ ನಿರ್ಮಾಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಗೃಹ ನಿರ್ಮಾಣವನ್ನು ಇನ್ನೂ ಹೆಚ್ಚುಹೆಚ್ಚಾಗಿ ಮಾಡಬೇಕು. ಮೈಸೂರು ಸ್ಟೇಟ್ ಕೋ-ಆಪರೇಟೀವ್ ಹೌಸಿಂಗ್ ಕಾರ್ಪೊರೇಷನ್ ಅವರಿಗೆ ಒಂದೆರಡು ವರ್ಷಗಳಿಂದ ಹೆಚ್ಚು ಕೆಲಸ ಸಿಗುತ್ತಿದೆ. ಇದನ್ನು ನೋಡಿದರೆ ಇದು ಒಂದು ಸ್ಟಡೀ ಟೀಮ್ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿ ವಿಚಾರದಲ್ಲಿ ಮಾಡಿರುವ ಶಿಫಾರಸುಗಳನ್ನು ಜಾರಿಯಲ್ಲಿ ತರುವುದು ಅವಶ್ಯವಿದೆ. ಇದನ್ನು ನಮ್ಮ ಸರ್ಕಾರದವರು ತಪ್ಪದೆ ತರುತ್ತಾರೆ ಎಂದು ನಂಬಿದ್ದೇನೆ.

4-30 P.M.

ಕೇಂದ್ರ ಸರ್ಕಾರದವರು ಹೌಸಿಂಗ್‌ಗೆ ಎಷ್ಟು ಹಣ ಕೊಡುತ್ತಾರೋ ಅದರೊಳಗೆ 25 ಪರ್ಸೆಂಟು ತಕ್ಷಣ ತಪ್ಪದೆ ಗೃಹ ನಿರ್ಮಾಣ ಕಾರ್ಪೊರೇಷನ್‌ಗೆ ಕೊಡಬೇಕು. ಅನೇಕ ಕಡೆ ಕೆಲವು ತೊಂದರೆಗಳು ಬರುತ್ತಾ ಇವೆ. ಅವುಗಳನ್ನು ಯಾವರೀತಿಯಿಂದ ಸಿಂಪ್ಲಿಫೈ ಮಾಡಬೇಕು ಅದನ್ನು ಹಾಗೆ ವ್ಯವಸ್ಥೆ ಮಾಡಬೇಕು ಎಂದು ಮಾನ್ಯ ಮಂತ್ರಿವರ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಕೆಲವೊಂದು ವಿಚಾರದೊಳಗೆ ಮೈಸೂರು ರಾಜ್ಯದಲ್ಲಿ ಸಹಕಾರಿ ಚಳುವಳಿ ಸುಭದ್ರವಾಗಿ ನಡೆದಿದೆ. ಮತ್ತು ಇಡೀ ಇಂಡಿಯಾ ದೇಶದೊಳಗೆ ಉತ್ತಮವಾದ ಸ್ಥಾನ ಪಡೆದಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮಲ್ಲಿರುವ ಪ್ರಾಪಗಾಂಡ ಟ್ರೈನಿಂಗ್ ಎಜುಕೇಷನ್‌ದೊಳಗೆ ಇಡೀ ಹಿಂದೂಸ್ಥಾನದೊಳಗೆ ಉತ್ತಮ ಮತ್ತು ಪ್ರಗತಿಪರವಾದ ಮಹಾರಾಷ್ಟ್ರ ಮತ್ತು ಗುಜರಾತ್ ಅವುಗಳಷ್ಟೇ ಮುನ್ನಡೆದಿದೆ. ಇಲ್ಲಿ ರೀಜನಲ್ ಇನ್‌ಸ್ಟಿಟ್ಯೂಟ್ ಇದೆ. ಈ ಇನ್‌ಸ್ಟಿಟ್ಯೂಟ್‌ಗೆ ಪರದೇಶದಿಂದ ಟ್ರೈನಿಂಗಿಗಾಗಿ ಬರುತ್ತಾರೆ. ಇಲ್ಲಿ ಉತ್ತಮವಾದ ಪ್ರೊಫೆಸರ್ಸ್ ಇದ್ದಾರೆ. ಪರದೇಶ ಎಂದರೆ ಇಥಿಯೋಪಿಯಾ, ಸಿಲೋನ್, ಟಾಂಗನೀಕಾ ಮುಂತಾದ ದೇಶಗಳಿಂದ ಟ್ರೈನೀಸ್ ಇಲ್ಲಿಗೆ ಬಂದು ಅಭ್ಯಾಸ ಮಾಡಿ ಹೋಗುವ ನಿದರ್ಶನ ನಮ್ಮ ಎದುರಿಗೆ ಇದೆ. ಅದು ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಸಹಕಾರೀ ಶಿಕ್ಷಣದಲ್ಲಿ ಚೆನ್ನಾಗಿ ಕೆಲಸ ನಡೆದಿದೆ. ಆರು ಶಾಲೆಗಳನ್ನು ತೆರೆದು ಸಹಕಾರೀ ಶಿಕ್ಷಣದ ಬಗ್ಗೆ ಬಹಳ ಮುತುವರ್ಜಿ ವಹಿಸಿ ಯೋಗ್ಯ ಶಿಕ್ಷಣ ಒದಗಿಸಲು ವ್ಯವಸ್ಥೆ ಮಾಡಿದ್ದಾರೆ. ಒಂದೊಂದು ಶಾಲೆಗೂ 20 ಸಾವಿರ ಹಣ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಅಲ್ಲಿ ಕೆಲಸ ಸರಿಯಾಗಿ ನಡೆದಿದೆ ಎಂದು ತಮ್ಮ ಮುಂದೆ ಇಡುತ್ತಾರೆ. ಅದನ್ನು ಯಾರುಬೇಕಾದರೂ ನೋಡಿಕೊಂಡು

(ಶ್ರೀ ಎ. ಎಸ್. ಪಾಟೀಲ್)

ಬರಬಹುದು. ಚೆನ್ನಾಗಿ ಇದ್ದರೆ ಶ್ರೀ ಲಕ್ಕಪ್ಪನವರೇ ಆಗಲಿ, ಬೇರೆಯವರೇ ಆಗಲಿ, ಆ ಸಂಸ್ಥೆಗಳನ್ನು ಒಳಹೊಕ್ಕು ನೋಡಬಹುದು. ಸಹಕಾರ ಚಳುವಳಿ ಕುಸಿದು ಬಿದ್ದಿದೆ ಇನ್ನು ಏನು ಮಾಡಬೇಕು, ಎನ್ನುವ ವಿಚಾರ ಇಂತಹ ದೊಡ್ಡ ಸಭೆಯೊಳಗೆ ಗದ್ದಲ ಮಾಡುವುದು ಸರಿಯಲ್ಲ. ಒಂದು ಅಂಕಿಸಂಖ್ಯೆಗಳನ್ನು ಜನಕ್ಕೆ ಒಪ್ಪುವಂತೆ ಕೊಡಬೇಕು ಎನ್ನುವ ಉದ್ದೇಶದಿಂದ ಇದನ್ನು ಹೇಳುತ್ತಿದ್ದೇನೆ. ಇಷ್ಟು ವೇಳೆ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER in the Chair]

† SRI ANNA RAO GANAMUKHI (Afzalpur).—Mr. Speaker, Sir, I was hearing Sir, so far the thoughts expressed by the Hon'ble Member, the President of the Union of Co-operative Education. Perhaps he is under the notion that there are few members who have studied at close quarters the statistics pertaining to the co-operative Department. Let me say, Sir, we have developed only statistics and nothing else. We know, the share capital had increased in the Second Plan period and during the Third Plan, the membership and the share capital have increased. Is it because these shares are as attractive to the public as other shares? It is not that. Our farmers are in need of credit. There is no alternative source left for them. Therefore they have perforce to become members of the co-operative societies and so this increase has takan place. Let me tell you that the societies have no basis whatsoever. We know that right from the top from the Registrar's level down to the bottom, they are trying to buttress the District Apex Banks and not societies. We know the whole share capital of the village society is owned by the Bank as their capital and some amount is advanced to these societies charging about 9 per cent. If the share capital of those societies were left with the village societies, they could have advanced loans to the Members of the Societies. We have multiplied the borrowers at the lower level. They have not become sound and economically they have become wrecks. May I submit Sir, that at least as far as our District is concerned, not a single village society has been able to distribute a single pie of profit during this decade. Has any Co-operation Department Officer said on their behalf that the societies have distributed any profit? In spite of this, you assert that the Membership has increased by now. They are taking more loans; their borrowing has increased. But there is no working capital left with them. Now, I want to say Sir that the Reserve Bank and the Government of India are anxious to help the farmers by giving loans at low rate of interest. Recently after the rise in the rate of interest by one per cent, they are advancing loans to the Apex Bank at about 3½ per cent. What is the percentage of interest at which the villager gets or farmer gets at the hands of these co-operative societies? He has to give at least 9 to 10 per cent of interest for Rs. 100. I want to ask whether this rate of interest is at all fair? Reserve Bank is advancing money at 3½ per cent. Should it multiply to the extent

I mentioned ? Therefore, Sir, I am definitely of opinion that this stereotyped 3 tior system should be completely overhauled. What is after all the business of the Apex Bank ? What is after all the business of the Central Bank ? They are at the most agents of the Reserve Bank and nothing more than that. They are taking credit from the Reserve Bank and channeling this money by taking a commission of 2½ per cent at each of the two levels. What is the multiplication of the rate of interest ? Can we not reduce these levels ? Just as in the case of Land Mortgage Banks, where there are only two levels, can we not reduce it atleast to two levels ? I think the Department is concentrating more on deepening and widening the basis of borrowing and not creating any sound economic basis for them.

Now, Sir, we learn from the Papers that the Government of India is creating another Corporation for short-term loans, known as Co-operative Corporation of Shost-term loans.

If the Government of India thinks that these present agencies, the Apex Bank, the DCC Banks and the village societies all these are catering effectively to the needs of the farmers, why should they think of creating another agricultural credit corporation at the Centre which will cater to the needs of the farmers ? Is it not a duplication ? I know it for certain, Sir, that the Reserve Bank of India had appointed a committee and that committee recommended the establishment of such a corporation to meet the needs of the farmers. In fact, we know that the Reserve Bank of India is supplying more credit through the apex banks. In spite of this, if they want to create a corporation at the Central level, then they know full well that the Apex Banks at the State level, the DCC Banks at the district level and village societies are a failure and they cannot provide the farmers with the necessary wherewithal. After the season, they provide some money and then, even that not for productive purpose. We know the gram panchayet which functions is having one secretary and every case is properly scrutnised. Here the co-operative officers put their signature and go somewhereelse. There is no one even to look into the affairs of the society. It is very strange. That is why many of the co-operators have said that this 60 year old baby to which all the co-operators and all this paraphernalia of directors, joint directors, registrars and joint registrars, deputy registrars are looking after, they are not effectively contributing to the upliftment of the farmer. It has become ineffective. Let me state, Sir, the State Bank is going to have one man bank which will be a mobile bunk travelling in villages and, mobilise the savings of the farmers. Whereas not a single person has come forward to deposit any of his savings in the villa e societies. What is the reason after all ? Confidence is not there. There is a crisis of confidence. Monies are misappropriated. The co-operative movement is bad. It is best only when we have right kind of people and at the right time, we must supply credit. What is being done now is we measure our success or failure with the membership. How many Members

(SRI ANNA RAO GANAMUKHI)

have become society members? How many societies have been opened at the village level? We know what sort of societies they are, what is the type of accounts and how accounts are maintained. Even at the DCC level, let me state from a reading of the Review of the Working of the Government Department: even the Central Co-operative Bank to which your co-operative officers are very much after to help them in season and out of season, who want every pie of the society, must be kept at the Bank and every society whether the DCC will help them or not, it must be with the DCC bank. The share capital of the societies is kept with the DCC bank and that Bank at the end of 1965, it is said:

> "their working capital was 38.43 crores and they earned a net profit of 42·72 lakhs."

It maans hardly 1½ per cent. What is this? When we are providing share capital to the DCC, they are not able to earn even 5 or 6 per cent which is the permissible limit under the Act. It is because you have created so many funds at the district level—credit stabilisation fund, reserve fund—and I do not know what other funds will be created when the Reserve Bank will apply the Company Regulation; on the 1st March this Act has come into existence. If we see the working of these, what is the need to supply them with so much share capital? I understand when the Government decided to participate in the share capital, the whole thing has become reversed. The working has become less. Your nominees are on the working committees wherever Government has taken a share but tdey are not effective at all. We know that politicians are at the base of all these things. In one report, Sir, I read—a report on certain aspects of the Co-operative movement in India, by Sir Malcolm Darling, a publication of the Government of India Planning Commission there it is said that nominations are governed by the political consid ·rations and in that paragraph they have said that politicians have become white-ants in the co-operative movement. That is what they say? Wherever nominations have been there, it is ordered on political considerations. It is very bad. If you want the co-operative movement should prosper, then have good people. I do not mean only Congress people shoul be nominated. Let good people be taken. Then only this 60-year old baby will grow. Otherwise, this 60-year old baby will remain a baby; even at 70 or 100 years, the same state of affaris will continue. In these days every one thinks that the Government sector and the public sector should not have the upper hand in the economy of the country, the private should not have the upper-hand in the economy of the country, then in between, the co-operative sector should function effectively. And that is the reason why the co-operative movement should grow in our country. Sir, there was some emphasis even from the beginning that the saving and thrift even from the beginning should be emphasised. What we are doing is, we are emphasising only on credit. Just now our friend Sri A. S. Patil was saying that we have taken more

loans and more members. Is it a qualification? If you do away with loans, if you create good conditions, conditions in which people do not take loans, if they save and invest in the co-operative department, then I think everything will be all right. Otherwise this anomaly will continue to the last. Unless you take into your head that this movement should be put into a proper gear and placed into a proper perspective, they will not be successful. What we should now take care to see that we start at once to withdraw investing Government money in these institutions. Every one is becoming a member because, there is Government assistance and money is coming from the Government. If Government assistance is available, every one will come. But if there is any storm in the co-operative movement, if there is economic depression, nobody will improve the condtions there. We should take care to see that at the village level it should be put on a proper footing. Instead of giving subsidy to various processing societies, sakkare karkhanas, consumers' societies, etc.,—why should you give subsidy at all to a society which is trading? Is there any reason behind it? I think, in doing so, Government has lost all reason. So far as Secretaries are concerned at the village level, at the panchayat level, give them three-fourths of their salary from Government as subsidy. Instead of doing that, you are extending your benefits to all kinds of societies. I read somewhere that if such assistance is made available, even cinema stars and others will come and form societies and seek the assistance of the Government. That is the pitch to which we have come so far.

As far as these co-operative unions are concerned, they are not properly doing their work. The union should educate the members. That education is not imparted at the proper time and at the proper place. We do not know whether they are spending from their own pockets. Statutorily, there is a provision in the Co-operative Act that so much of percentage should be compulsorily given to the Union. Then, what is the benefit they are giving to the people? They have given figures. But I do not know whether those figures are correct or not. Any how, they have not created any impression in the mind of the people. Although, your shares are not marketable—but nobody goes to purchase your share, unless compelled to get some loan. If one is not in need of loan, he never comes to you and deposits and neither does he purchase shares from the co-operative society. Unless you stabilise the societies at the lower level, don't go to the D. C. C. bank. If you want to strengthen them, ask them to rely on their own share capital If you create facililies for more borrowing, you won't be doing any good to the people. If you want the village societies, service societies, multi-purpose societies and large societies to function well, then create conditions for them to create their own capital, and let them have one secretary, and subsidise his pay fully, so that he may function well. Otherwise, take it from me that your co-operative societies will remain 60-year or seventy-year or even hundred year old babies.

† ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸನ್ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇಟ್ಟಿರತಕ್ಕ ಈ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಈಗಾಗಲೇ ನಮ್ಮ ಸ್ನೇಹಿತರು ಸಹಕಾರದ ವಿಷಯದಲ್ಲಿ ಹೇಳಿದ್ದಾರೆ. ಈಗ ನಮಗೆ ಬಹಳ ಮುಖ್ಯವಾಗಿ ಪ್ರಾಥಮಿಕ ಸೊಸೈಟಿಗಳಿವೆ. ಅವು ಬೆಳೆಯಬೇಕು, ಅವು ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಎಲ್ಲರೂ ಹೇಳುವಂಥ ಮಾತು. ಸಾಧಾರಣವಾಗಿ ಪ್ರತಿಯೊಂದು ಗ್ರೂಪ್ ಪಂಚಾಯಿತಿಗೂ ಒಂದು ಸರ್ವಿಸ್ ಕೋ-ಆಪರೇಟಿವ್ ಸೊಸೈಟಿ ಇರಬೇಕು ಎನ್ನುವ ನಿಯಮಾವಳಿಯ ಪ್ರಕಾರ ದೇಶದಾದ್ಯಂತ ಇವುಗಳನ್ನು ಸ್ಥಾಪನೆ ಮಾಡಿದ್ದರೂ ಅವುಗಳ ಕೆಲಸ ಕಾರ್ಯಗಳ ಬಗ್ಗೆ ಸ್ವಲ್ಪಮಟ್ಟಿಗೆ ಆಲೋಚನೆ ಮಾಡಬೇಕಾಗಿದೆ. ಉತ್ಸಾಹಿ ಜನತೆ ಈ ಕಾರ್ಯದಲ್ಲಿ ತೊಡಗಿದ್ದರೂ ಸಹ ಅಲ್ಲಿರತಕ್ಕ ಆರ್ಥಿಕ ಪರಿಸ್ಥಿತಿ, ಅಲ್ಲಿರತಕ್ಕ ಅನುಕೂಲಗಳಿಂದ ಅವು ಕೆಲಸ ಮಾಡುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಹಿಂದೆ ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ. ಈಗಲೂ ಅದರ ಬಗ್ಗೆ ಹೇಳಬೇಕೆಂದಿದ್ದೇನೆ. ಇಲ್ಲಿಯವರೆಗೆ ನಮ್ಮ ಪ್ರಾಥಮಿಕ ಸೊಸೈಟಿಗಳು, ಒಂದು ಪಂಚಾಯಿತಿಗೆ ಒಂದು ಸರ್ವಿಸ್ ಕೋ-ಆಪರೇಟಿವ್ ಸೊಸೈಟಿ ಇದೆ. ಇವುಗಳನ್ನು ಸ್ವಲ್ಪಮಟ್ಟಿಗೆ ಲಾರ್ಜ್ ಸ್ಕೇಲ್ ಸೊಸೈಟಿ ಮಾಡಿ, ಎರಡು ಮೂರು ಪಂಚಾಯಿತಿಗಳನ್ನು ಸೇರಿಸಿ ಒಂದು ಸೊಸೈಟಿ ಮಾಡಿ, ಅದಕ್ಕೆ ಒಬ್ಬ ಪೇಡ್ ಸೆಕ್ರೆಟರಿಯನ್ನು ನೇಮಕ ಮಾಡಿ ಸರಿಯಾದ ವ್ಯವಸ್ಥೆಯಿಂದ ಕೆಲಸ ಮಾಡಿದರೆ ಈ ಪ್ರಾಥಮಿಕ ಸೊಸೈಟಿಗಳು ಕೆಲಸ ಮಾಡುವುದಕ್ಕೆ ಏನೂ ತೊಂದರೆ ಇಲ್ಲ ಎನ್ನುವುದು ನಮ್ಮ ಅನುಭವಕ್ಕೆ ಬಂದಿದೆ. ನಮ್ಮ ಜಿಲ್ಲೆಯಲ್ಲಿ ಹತ್ತಾರು ಸೊಸೈಟಿಗಳನ್ನು ನೋಡಿದ್ದೇನೆ. ಎಲ್ಲ ಕಡೆಯೂ ಈ ಕೊರತೆ ಎದ್ದು ಕಾಣುತ್ತಿದೆ. ಅವು ನಿರಂತರವಾಗಿ ಕೆಲಸ ಮಾಡಿ ಒಬ್ಬ ಸೆಕ್ರೆಟರಿಯನ್ನು ನೇಮಕ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಬಂಡವಾಳ ಇರುವುದಿಲ್ಲ. ಈಗ ದುರ್ದೈವದಿಂದ ಆಹಾರಾಭಾವ ಬಂದಿದೆ. ಈ ಸಂದರ್ಭದಲ್ಲಿ ಎಲ್ಲ ಕಡೆಯೂ ಸೊಸೈಟಿಗಳು ಕೆಲಸ ಮಾಡುವುದಕ್ಕೆ ಬಹಳ ಆಸಕ್ತಿ ಹುಟ್ಟಿದೆ. ಒಳ್ಳೆಯ ಕಾಲ ಬಂದಾಗ, ನಮ್ಮ ಅನುಭವದಿಂದ ಹೇಳುವುದಾದರೆ, ಕೆಲವು ಕಾಲಗಳಲ್ಲಿ ಬಿಟ್ಟರೆ ಉಳಿದ ಕಾಲದಲ್ಲಿ ಅವು ಕೆಲಸ ಮಾಡುವುದಿಲ್ಲ.

ಲೇವಾದೇವಿಯ ವಿಷಯ, ಬಹಳ ಸ್ನೇಹಿತರು ಹೇಳಿದ ಹಾಗೆ ಮೊದಲು ಉತ್ಸಾಹದಿಂದ ಎಲ್ಲರೂ ಸಾಲ ತೆಗೆದುಕೊಳ್ಳುತ್ತಾರೆ. ಅದನ್ನು ಮರುಪಾವತಿ ಮಾಡುವ ಸಂದರ್ಭದಲ್ಲಿ ಎಲ್ಲ ಕಡೆಯೂ ತೊಂದರೆಯಾಗುತ್ತದೆ. ಎಷ್ಟೋ ಸೊಸೈಟಿಗಳು ಹಣವನ್ನು ಸಾಲವಾಗಿ ತಂದಿರುವ ಜಿಲ್ಲಾ ಬ್ಯಾಂಕುಗಳಿಗೆ ಪಾವತಿ ಮಾಡದೆ ಡೀಫಂಕ್ಟ್ ಆಗಿರುವುದು ಗೊತ್ತಿದೆ. ಸುಮಾರು 50 ಭಾಗಕ್ಕಿಂತ ಹೆಚ್ಚು ಸೊಸೈಟಿಗಳು ಈ ರೀತಿ ಬಾಕಿ ಉಳಿಸಿಕೊಂಡಿವೆ. ಈ ಸೊಸೈಟಿಗಳಲ್ಲಿ ಖಾಸಗಿ ಜನರು ಕೆಲಸ ಮಾಡುವುದರಿಂದ ನೇರವಾಗಿ ಸಾಲ ಕೊಟ್ಟಿರುವ ಹಣವನ್ನು ವಸೂಲ್ಮಾಡು ವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಇದಕ್ಕೆ ಒಬ್ಬ ಪೇಡ್ ಸೆಕ್ರೆಟರಿ ಇದ್ದರೆ ಆತನು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ತನ್ನ ಕರ್ತವ್ಯ ದೃಷ್ಟಿಯಿಂದ ಸೊಸೈಟಿಯಿಂದ ಯಾರು ಸಾಲವನ್ನು ತೆಗೆದುಕೊಂಡಿರುತ್ತಾರೆ ಆ ಜನರಮೇಲೆ ಸಾಲ ವಸೂಲ್ಮಾಡುವ ಕ್ರಮ ತೆಗೆದುಕೊಳ್ಳುತ್ತಾನೆ. ಸಾಲ ತೆಗೆದುಕೊಂಡಿರುವವರಿಗೆ ಅದನ್ನು ಕೊಡಲು ಸಾಧ್ಯವಿಲ್ಲದೆ ಹೋದರೆ ಬಾಕಿ ಇತರ ಕ್ರಮ ಗಳನ್ನು ಏನು ತೆಗೆದುಕೊಳ್ಳಬೇಕೋ, ದಾವಾ ಹಾಕುವುದು ವಗೈರೆ ಕ್ರಮಗಳನ್ನು ತೆಗೆದುಕೊಳ್ಳು ವುದಕ್ಕೆ ಪ್ರಯತ್ನಪಡುತ್ತಾನೆ. ಇದರ ಕಡೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಸೆಂಟ್ರಲ್ ಬ್ಯಾಂಕ್, ತಾಲ್ಲೂಕು ಸೊಸೈಟಿ ಮತ್ತು ಪ್ರೈಮರಿ ಸೊಸೈಟಿಗಳಿಗೆ ಲಾಭದ ಹಂಚಿಕೆ ಏನಿದೆ ಅದರಲ್ಲಿ ಪ್ರೈಮರಿ ಸೊಸೈಟಿಗಳಿಗೆ ಲಾಭ ಬರತಕ್ಕ ಬಾಬತ್ತನ್ನು ಹೆಚ್ಚು ಮಾಡಿದರೆ ಒಳ್ಳೆಯದು ಎಂದು ಕಾಣುತ್ತದೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ವ್ಯಾಪಾರ ಮಾಡುವುದರಲ್ಲಿ ಅದಕ್ಕೆ ಹೆಚ್ಚು ಲಾಭವನ್ನು ಕೊಡತಕ್ಕ ಸನ್ನಿವೇಶವಿದೆ. ಅದನ್ನು ತಪ್ಪಿಸಿ ಕೆಳಗಿನಿಂದ ಜಾಸ್ತಿ ಲಾಭ ಕೊಡುವುದಕ್ಕೆ ಪ್ರಯತ್ನ ಮಾಡುವುದು ಉತ್ತಮ ಎಂದು ಕಾಣುತ್ತದೆ.

ಬಾವಿಗಳಿಗೆ ಹಣವನ್ನು ಕೊಡುವುದನ್ನು ಸಹಕಾರ ಸಂಘಗಳ ಮುಖಾಂತರ ಹಂಚುವುದಕ್ಕೆ ಪ್ರಾರಂಭ ಮಾಡಿರುವುದು ಬಹಳ ಆಶಾದಾಯಕವಾಗಿದೆ. ಎಲ್ಲಿ ನೋಡಿದರೂ ಜನರು ಆತುರರಾಗಿ ಬಂದು ಅವರವರ ಪಾಲು ಪಡೆಯುತ್ತ, ಬಾವಿಗಳ ಕೆಲಸವನ್ನು ಮಾಡಿಸಿದ್ದಾರೆ. ಇವತ್ತು ಬಯಲು ಜಿಲ್ಲೆಗಳಾದ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ವಗೈರೆ ಜಿಲ್ಲೆಗಳಲ್ಲಿ ಬೇರೆ ಯಾವ ನೀರಾವರಿ ಯೋಜನೆಗಳನ್ನು ಮಾಡಲೂ ಸಾಧ್ಯವಿಲ್ಲ. ಬಾವಿಗಳನ್ನು ತೋಡುವಂಥ ಒಂದು ಕೆಲಸವನ್ನು ಬಿಟ್ಟರೆ ವ್ಯವಸಾಯಗಾರನಿಗೆ ಬೇರೆ ಮಾರ್ಗವೇ ಇಲ್ಲ. ವ್ಯವಸಾಯಗಾರನ ಪರಿಸ್ಥಿತಿ ಮತ್ತು ದೇಶದ ಆಹಾರ ಪರಿಸ್ಥಿತಿ ಉತ್ತಮವಾಗಬೇಕಾದರೆ ಬಾವಿಗಳನ್ನು ತೋಡುವುದು

V-31/M66
M66.4.6-10
(B) 4836

ಒಂದೇ ಮಾರ್ಗ ಎಂದು ಕಾಣುತ್ತದೆ. ಇವತ್ತಿನ ದಿವಸ ಸಹಸ್ರಾರು ಅರ್ಜಿಗಳು ಪ್ರತಿಯೊಂದು ಜಿಲ್ಲೆಯಿಂದಲೂ ಬಂದಿವೆ. ಬೆಂಗಳೂರು ಉತ್ತರ ತಾಲ್ಲೂಕು ಒಂದರಿಂದಲೇ 150 ಅರ್ಜಿಗಳು ತಯಾರಾಗಿ ಕೇಂದ್ರ ಬ್ಯಾಂಕಿಗೆ ಹೋಗಿವೆ. ಅವುಗಳಲ್ಲಿ 40 ಬಾವಿಗಳಿಗೆ ಕೊಟ್ಟಿದ್ದಾರೆ, ಉಳಿದ 110 ಜನ ಕಾಯುತ್ತ ಕುಳಿತಿದ್ದಾರೆ. ಎಲ್ಲ ಕಡೆಯೂ ಹೀಗೆಯೇ ಇದೆ ಎಂದು ಗೊತ್ತಾಗುತ್ತದೆ. ಇದಕ್ಕಾಗಿ ಕೊಟ್ಟಿರುವ ಹಣ ಸಾಲುವುದಿಲ್ಲ. ಆದುದರಿಂದ ಎಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವೋ ಅಷ್ಟು ಹಣವನ್ನು ಕೊಟ್ಟು ಬಾವಿಗಳ ಕಾರ್ಯವನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಿ ಕಂಗಾಲಾದ ಜನಗಳಿಗೆ ಹೆಚ್ಚಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಹೆಚ್ಚು ಸಾಲವನ್ನು ಕೊಡುವುದರಿಂದ ಪ್ರತಿಯೊಬ್ಬ ರೈತನೂ ಸಹ ಬಾವಿಯ ಆಶ್ರಯವಿದ್ದರೆ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ತಿಳಿದು ಅರ್ಜಿಗಳನ್ನು ಹಾಕಿರುತ್ತಾನೆ.

5-00 P.M.

ಇವರು ಯಾವುದಾದರೂ ಒಂದು ಆದೇಶವನ್ನು ಕೊಟ್ಟರೆ ಅದು ರೈತನಾದವನು ಸುಲಭವಾಗಿ ಪರಿಪಾಲಿಸುವಂತೆ ಇರಬೇಕು. ಇಲ್ಲದಿದ್ದರೆ ಪ್ರತಿಯೊಬ್ಬ ರೈತನಿಗೆ ಅರ್ಜಿ ತಯಾರು ಮಾಡಬೇಕಾದರೆ 50 ರೂಪಾಯಿಗಳನ್ನು ಖರ್ಚುಮಾಡಬೇಕಾಗಿ ಬರುತ್ತದೆ. ಅವನು ಏನೋ ಹಣದ ನಿರೀಕ್ಷಣೆ ಇಟ್ಟುಕೊಂಡಿರುತ್ತಾನೆ. ಒಂದು ವೇಳೆ ಅವನಿಗೆ ಆ ಪ್ರಕಾರ ಸಾಲ ದೊರೆಯದೆ ಹೋದರೆ ಬಹಳ ಕಷ್ಟವಾಗುತ್ತದೆ.

ಈ ದೇಶದಲ್ಲಿ ಅನೇಕ ಜನಗಳು ಲೇವಾದೇವಿ ಮಾಡುತ್ತಾ ಇದ್ದಾರೆ ಕೆಲವರು ಈಗಾಗಲೇ ನಿಲ್ಲಿಸಿದ್ದಾರೆ. ಗ್ರಾಮಾಂತರ ವಾಸಿಗಳು ಸಹಕಾರ ತತ್ವವನ್ನು ಅನುಸರಿಸಿ ಸಹಕಾರ ಬ್ಯಾಂಕುಗಳಲ್ಲಿ ಹಣ ಸಾಲವಾಗಿ ಪಡೆಯದೇ ಹೋದರೆ ಆಗ ಲೇವಾದೇವಿ ಮಾಡತಕ್ಕವರಲ್ಲಿ ವಿಶೇಷವಾಗಿ ಹಣವನ್ನು ಸಾಲದ ರೂಪವಾಗಿ ಪಡೆದು ಮುಂದೆ ಅದನ್ನು ತೀರಿಸುವುದಕ್ಕೆ ಕಷ್ಟವಾಗಿ ತೊಂದರೆ ಪಡುತ್ತಾರೆ. ಆದ್ದರಿಂದ ಖಾಸಗೀ ಜನಗಳು ಕೊಡತಕ್ಕ ಲೇವಾದೇವಿಗಳನ್ನು ಕೂಡಲೇ ನಿಲ್ಲಿಸಿ. ಅಲ್ಲದೆ ಸಹಕಾರ ಸಂಘಗಳೂ ಸಹ ಬ್ಯಾಂಕುಗಳಲ್ಲಿ ಪಡೆಯತಕ್ಕ ಸಾಲದ ಹಣವನ್ನು ಸಾಧ್ಯವಾದಷ್ಟು ಕಡಮೆ ಮಾಡಬೇಕು. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ನಿಗಾ ಇಡಬೇಕು.

ಇನ್ನು ಅಪೆಕ್ಸ್ ಬ್ಯಾಂಕ್‌ನಲ್ಲಿ ಕೆಲವು ಖಾಸಗೀ ಜನರು ಕೆಲಸ ಮಾಡುತ್ತಾ ಇದ್ದಾರೆ. ಅವರು ಟಿ. ಎ. ಮತ್ತು ಇತರೇ ಖರ್ಚುಗಳನ್ನು ಸ್ವಲ್ಪಮಟ್ಟಿಗೆ ದುಂದು ಮಾಡುತ್ತಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಆದಷ್ಟುಮಟ್ಟಿಗೆ ಆ ಖರ್ಚನ್ನು ಕಡಿಮೆಮಾಡಿಸುವುದಕ್ಕಾಗಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು. ಅವಶ್ಯಕವಾದ ಖರ್ಚನ್ನು ಅವರು ಮಾಡಬಹುದು. ಅಪೆಕ್ಸ್ ಬ್ಯಾಂಕಿನಲ್ಲಿ ಸ್ವಾಭಾವಿಕವಾಗಿ ಆಗಿರತಕ್ಕ ಖರ್ಚುಗಳನ್ನು ತೆಗೆದು ನೋಡಿದ ಕಾಲದಲ್ಲಿ ಬಹುಶಃ ಈ ಮಾನ್ಯ ಸಭೆಯ ಸದಸ್ಯರು ಈ ಸಭೆಯಲ್ಲಿ ತೆಗೆದುಕೊಳ್ಳುವ ಖರ್ಚಿಗಿಂತ ಹೆಚ್ಚಾಗಿ ಅಲ್ಲಿನ ನಮ್ಮ ಸ್ನೇಹಿತರು ತಗೆದುಕೊಳ್ಳುತ್ತಿದ್ದಾರೆಂಬುದು ನಮಗೆ ಎದ್ದು ಕಾಣುತ್ತಿದೆ. ಇನ್ನು ಈ ಅಪೆಕ್ಸ್ ಬ್ಯಾಂಕಿನ ರಜತ ಮಹೋತ್ಸವಕ್ಕಾಗಿ ನಮ್ಮ ಬಡ್ಜೆಟ್ಟಿನಲ್ಲಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆಂದು ಹೇಳಿದ್ದಾರೆ. ಇಷ್ಟು ಹಣವನ್ನು ಇಂತಹ ದುರ್ಭರ ಸ್ಥಿತಿಯಲ್ಲಿ ಏಕೆ ಖರ್ಚು ಮಾಡಬೇಕು ? ಎಷ್ಟು ಖರ್ಚು ಮಾಡಿದರೂ ಆ ಕಾರ್ಯ ನಡೆಯುತ್ತದೆ. ಒಂದು ಮಿತಿ ಇಲ್ಲದೆ ಖರ್ಚು ಮಾಡುವುದು ಸರಿಯಾದ ನೀತಿಯಲ್ಲ. ಈ ವಿಷಯದಲ್ಲಿ ಸರ್ಕಾರ ಹೆಚ್ಚು ಗಮನ ಕೊಡಬೇಕು.

ಇನ್ನು ಹಾಲಿನ ಸಹಕಾರ ಸಂಘಗಳನ್ನು ಮಾಡಬೇಕೆಂದು ಈಗಾಗಲೇ ಬೆಂಗಳೂರಿನಲ್ಲಿ ಒಂದು ಹಾಲಿನ ಉತ್ಪಾದಕರ ಡೈರಿ ಇದೆ. ಅದು ಒಂದು ಉತ್ತಮ ಡೈರಿ ಪ್ರಾಜೆಕ್ಟ್ ಆಗಿದೆ. ಅಲ್ಲಿ ಉತ್ಪಾದನೆಯಾಗತಕ್ಕ ಹಾಲನ್ನು ಸಹಕಾರ ಸಂಘಗಳ ಮೂಲಕ ಕೊಡುವಂತೆ ತನ್ಮೂಲಕ ಬೆಂಗಳೂರು ನಗರ ವಾಸಿಗಳು ಪಡೆಯುವಂತೆ ವ್ಯವಸ್ಥೆ ಮಾಡಬೇಕು ಆಗ ಜನಗಳಿಗೆ ಅದರಿಂದ ಪ್ರತಿಫಲ ದೊರೆಯುತ್ತದೆ. ಹಾಲನ್ನು ಹೆಚ್ಚಾಗಿ ಸೊಸೈಟಿಗಳಿಗೇ ಕೊಡಬೇಕು. ಬೆಂಗಳೂರಿನ ಹಾಲಿನ ಡೈರಿ ಪ್ರಾಜೆಕ್ಟ್ ಮೂಲಕ ಹಾಲಿನ ಸರಬರಾಜು ಆಗಬೇಕು. ಬೆಂಗಳೂರಿನ ನಿವಾಸಿಗಳು ವಿಶೇಷವಾಗಿ ಇತ್ತೀಚೆಗೆ ಖಾಸಗೀ ಜನಗಳಿಂದ ಹಾಲನ್ನು ಹೆಚ್ಚಾಗಿ ಪಡೆಯುತ್ತಿದ್ದಾರೆ. ಇದು ಸರಿಯಾದ ನೀತಿಯಲ್ಲ. ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಅವುಗಳ ಮುಖಾಂತರ ಹಾಲನ್ನು ತರಬೇಕೇ ಹೊರತು ಖಾಸಗೀ ಜನಗಳ ಮೂಲಕ ಹಾಲನ್ನು ತೆಗೆದುಕೊಳ್ಳುವುದು ಉತ್ತಮ ಮಾರ್ಗವಲ್ಲ. ರೈತನ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕು. ಸಹಕಾರ ಸಂಘಗಳಿಗೆ ಹೆಚ್ಚಿನ ಹಣವನ್ನು

(ಶ್ರೀ ಕೆ. ವಿ. ಬೈರೇಗೌಡ)

ಸರ್ಕಾರದವರು ಕೊಡಬೇಕು. ಸಹಕಾರ ಸಂಘಗಳಿಗೆ ಈ ರೀತಿ ಉತ್ತೇಜನ ಕೊಟ್ಟು ಅಲ್ಲಿಂದ ಹಾಲನ್ನು ಜನಗಳಿಗೆ ಕೊಡುವ ನೀತಿ ಉತ್ತಮವಾದುದು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪ್ರೈಮರಿ ಸೊಸೈಟಿಗಳ ಆಡಳಿತದ ವಿಷಯ. ಈಗ ಪ್ರತಿ ವರ್ಷವೂ ಜನರಲ್ ಬಾಡಿ ಮೀಟಿಂಗ್ ಆಗಬೇಕೆಂದು ಹೇಳುತ್ತಾರೆ. ಪ್ರಾಯಶಃ ಸೇಕಡ 90 ರಷ್ಟು ಸೊಸೈಟಿಗಳಲ್ಲಿ ಆಡಿಟ್ ಆಗಿರುತ್ತೆ. ಕೆಲವು ಸೊಸೈಟಿಗಳಲ್ಲಿ ಜನರಲ್ ಬಾಡಿ ಮೀಟಿಂಗ್ ದಿವಸದ ಹೊತ್ತಿಗೆ ಆಡಿಟ್ ಆಗದೇ ಇದ್ದರೂ ಚಿಂತಿಲ್ಲ. ಜನರಲ್ ಬಾಡಿ ಮೀಟಿಂಗ್ ಮಾತ್ರ ಆಗಲೇಬೇಕು. ಇದು ಕಾನೂನು ಇದೆ. ಯಾರು ಸಮಾಜ ಘಾತುಕರು ಇದ್ದಾರೆ ಅಂತಹವರು ಈ ಸಂಘಗಳಲ್ಲಿದ್ದರೆ, ಅವರು ಇದರ ಆಡಳಿತ ವನ್ನು ಕೆಡಿಸಿ ಅವರೂ ಕೆಟ್ಟು ಹೋಗುವುದರ ಜೊತೆಗೆ ಸಂಘಕ್ಕೆ ಒಂದು ಕೆಟ್ಟ ಹೆಸರನ್ನು ತಂದು ಆಚೆ ಹೋಗುತ್ತಾರೆ. ಜನರಲ್ ಬಾಡಿ ಮೀಟಿಂಗಿಗೆ ಆಡಿಟ್ ವರದಿ ಇದ್ದೇ ತೀರಬೇಕು. ಅದರಿಂದ ಸಂಘದ ಲೋಪದೋಷಗಳು, ಆಡಳಿತ ವರ್ಗದವರು ಮಾಡಿರತಕ್ಕ ಉತ್ತಮ ಕೆಲಸ ಕಾರ್ಯಗಳನ್ನು ಜನರಲ್ ಬಾಡಿಯಲ್ಲಿ ಪರೀಕ್ಷೆ ಮಾಡಬಹುದು. ಅವರು ಚೆನ್ನಾಗಿ ಕೆಲಸ ಮಾಡಿದ್ದರೆ ಅವರನ್ನೇ ಮುಂದೆಯೂ ಇಡುತ್ತಾರೆ. ಇಲ್ಲದಿದ್ದರೆ ಜನರಲ್ ಬಾಡಿಯವರೇ ಬದಲಾವಣೆ ಮಾಡುತ್ತಾರೆ. ಜನರಲ್ ಬಾಡಿ ಮೀಟಿಂಗ್ ಆಗುವುದಕ್ಕೆ ಮುಂಚಿತವಾಗಿ ಆಡಿಟ್ ವರದಿಯನ್ನು ಪರಿಶೀಲನೆ ಮಾಡಲು ಜನರಲ್ ಬಾಡಿ ಮುಂದೆ ಇಡುವುದು ಉತ್ತಮ. ಆ ರೀತಿ ಮಾಡದಿದ್ದರೆ ಅದರಲ್ಲಿರತಕ್ಕ ಲೋಪ ದೋಷಗಳು ಏನೆಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಸೊಸೈಟಿಗಳ ಲೆಕ್ಕಪತ್ರಗಳನ್ನು ಮುಂಚಿತವಾಗಿ ಆಡಿಟ್ ಮಾಡಬೇಕೆಂದು ಹೇಳಿ ಇನ್ನು ಹೆಚ್ಚಿಗೆ ಈ ಸಭೆಯ ಕಾಲವನ್ನು ತೆಗೆದು ಕೊಳ್ಳದೆ ನನ್ನ ಮಾತನ್ನು ಮುಗಿಸುತ್ತೇನೆ.

†Sri S. RAJAGOPAL (Kolar Gold Fields).—Mr. Speaker, I would like to speak on Demand No. 26, Labour and Employment, and wish to offer a few remarks. First of all I would like to take up the Minimum Wages Act. The Government in 19 0 itself have accepted to have a revision but unfortunately even though nearly six years have elapsed no action seems to have been taken. The Minimum Wages Act covers nearly 23 industries but in our State but it has covered so far just 18 industries. I request the Government to bring the other industries also under the purview of this Act and see the provisions of the Act are implemented properly.

As far as the Cost of living index is concerned, during the Second Plan period the Government accepted to constitute a committee to rectify mistakes in striking out the cost of living index. States like Gujarat, Maharashtra and Delhi have constituted such committee and the workers have been given the benefits. But, so far our Government has not taken any action in this regard with the result that a worker in Bombay where the index figure is nearly 540 gets Rs. 140 as D.A. while in a place like Bangalore which is considered to have the highest cost of living index, an industrial worker gets hardly Rs. 118. This is a very sad state of affairs particularly when it is said that the index figure in Bangalore is as high as 698 while in Bombay it is only 540. So, I request the Government to constitute a committee immediately to go into this question.

Formerly collection of statistics was done by the Labour Department and now it is vested in the Statistics Department and there is no co-ordination. The Statistics Department carry on work in their own way and the Labour Department is not at all consulted. The Govern-

ment should reconsider this question and entrust the work to the Labour Department itself so that they can find out the cost of living index figures and other details correctly.

Regarding the Employees State Insurance scheme I may say that it is not at all working satisfactorily. Previously there used to be an appellate court and in 1962 it was abolished. Recently I am given to understand that the Government have reconstituted it. Because of the absence of court for some years, the workers have been put to a lot of hardship and I request the Minister to give reasons for cancellation of those courts and again reconstituting them.

Regarding industrial disputes, mostly the delay is much in this Department, because, as far as my knowledge goes, the Labour Commissioner has been loaded with more work and responsibility. Last time, when I spoke on this Demand, I pleaded that the Labour Commissioner should not be changed at least for 3 to 4 years. Frequent changes of Commissioners have led to unsatisfactory work of this Department. I thank the Hon'ble Labour Minister and the Government for continuing the same Labour Commissioner at least for two years, which has improved the work of the Labour Department. The Labour Commissioner is loaded with lot of work ; he is in charge of registration of trade unions, in charge of Chief Inspectors of Factories, he is the Conciliation Officer, he is the President of the Consumer Co-operative Society and a member of several State Committees. On account of this he is unable to sit for 75 per cent of the days in a month in the office and attend to conciliation proceedings and other important things. Conciliation proceedings and other important works could not be decided earlier, on account of which many disputes are pending and there is dissatisfaction amongst the workers. So, I suggest that the authority or the power may be spread over to his subordinates to avoid delay and to achieve good results.

Government have not taken steps to implement the Transport Workers Act no doubt the Act is good. Its non-implementation has not only put the workers to hardship, but the Government also is losing lot of revenue on this account, by way of registration fee. Government can get thousands of rupees by way of registration fee.

In the Shops and Establishments Act, there is no provision to go in an appeal. The workers should be given the right to go in an appeal and the Act may be amended suitably. In the case of Hotels and other establishments, even though Inspectors have been appointed, there are still lot of loopholes and the same have to be set right. I request the Government to tighten the machinery and to see that this Act is implemented properly.

Regarding the Bonus Act, no action has been taken by the Government to implement the Act. I want to know the steps taken by the Government to implement this Act and how many workers have been benefited by this Act.

(SRI S. RAJAGOPAL)

The Labour Court and Tribunal needs permanent staff. In Bangalore and Hubli, Tribunals are there. We know what sort of impression or implications it will have without the permanent staff. If permanent staff is there, it will definitely improve the standard of work.

A few days back, in this august House, the Labour Welfare Fund Bill was passed. But, it has not been put into action so far. I cannot understand why there has been so much delay in its implementation. The Registration fee has not been taken into account under the 'Labour Head.' It is accounted under the 'Miscellaneous Head.' It is a loss to the Labour Department and the Department is not in a position to improve the standard of registration. If this amount is given to the Labour Department, it can appoint some more Inspectors to have proper check and the work of the Department can improve.

The Code of Discipline needs more attention, because we are in Emergency. So far, out of 123 managements, only 109 managements have implemented this Code of Discipline and the rest have not cared to implement it. I am unable to understand the reason. I do not know whether the Government is not taking any firm stand to compell the managements to implement it, whether they are lenient towards the managements or whether the Government themselves are not eager to implement it, I would like to know from the Government. Under the same Code of Discipline, the Procedure Committees to take note of the grievance have to be constituted. Only 67 managements have constituted such committee. As a policy matter, the constitution of Joint Management councils was accepted to create good atmosphere between the labour and management and to increase production. But the Government, have not cared to implement it so far properly. I can say that it has yielded poor results even from the start.

Every management with a labour of more than hundred is bound to have a Workers' Committee, which gives more fillip to workers, to increase production and which will create cordial relationship between the management and the labourers. As per the figures available, only 139 industrial establishments are having these Workers Committees and the rest 229 industrial establishments do not have these committees. It shows clearly that though the policy has been accepted long ago, neither the Government nor the management are capable of implementing this scheme. I very much doubt, why the Government have not taken serious action in this behalf.

Definitely we have to encourage production due to Emergency and the industries have been asked to increase production. According to the figures available, only 99 industrial establishments are having Industrial Production Committees and the rest do not have. These Committees should be consituted to improve the standard of production and to have a good relationship between the labour and the management.

To check the price line and to control the consumer commodities, it was accepted by the Government, at the All-India level as well as at the State level, to organise consumer co-opeative societies for the benefit of workers. Last year also, we dealt with the same problem. The achievement in this regard is meagre. Particularly, when we are not in a position to check up the price line, it is very important to see that the labour class are provided with consumer goods at reasonable rates.

Lastly, regarding Industrial Training Centres. Sir, this is a very good scheme, particularly, weare having our educational system in a different way. But, even though we have people who have studied up to S. S. L. C. we are not diverting them to these schemes. We need industrial labour trained. The Government felt the need and they are increasing the Industrial Estates and the Industrial Training Centres. This is a great relief to our workers to get absorbed in these industrial establishments. Our Government had planned for 2,736 trained workers but so far the achievement shows only 1,816 trained workers. The reasons are well known to all. There is lack of buildings and lack of Inspectors and so on. Because of these difficulties, we should not keep our eyes closed to the problem. Whatever may be the difficulty, training must be given to these people who have completed their middle school or high school education. This will give a great incentive to produce more industrially trained people.

Regarding Labour Gazette, Government assured in the last session also that they will try to publish the Labour Gazette in the interest of the labour as well as the general public. Till now, it is not done. I want to know the reason for the delay and what made this Government to stop it and what happened to the assurance given by the Hon'ble Minister in this respect ? With these words, I thank you Sir.

SRI R. S. HEGDE (Honnavar).—Mr. Speaker, Sir, while supporting this Demand, I will confine myself mostly to co-operation. Though the co-operative movement in the State in particular and the country generally, is more or less 60 years old, it is only in the post-independent era, more particularly since the beginning of the Second Plan in 1956, it has started making a worthwhile impact in the economy of the State. Sir, the Rural Survey Committee, constituted by the Reserve Bank of India, 1954, submitted its report in 1954 and it pointed out that till 1954 or so, co-operation attracted only 3 per cent of the agriculture credit and the rest being still met with by money lenders. Sir, Indian co-operative movement has received the greatest patronage, the greatest incentive from our late Prime Minister, Panditji, though he was not actually, physically, in the field of co-operation. Sri Patil has already quoted the quotation of Panditji, but I will once again quote to be in a different context. He said : "Co-operation is not governmental control. Nothing can be more fatal than governmental control over the movement which is the embrace of death. If it is governmental control, good or bad, it is not co-operation".

(SRI R. S. HEGDE)

He has again said: "I dislike the association of government in co-operation, except as an agency for helping it by way of funds, supervision, etc".

He further said : "I want the co-operative in every village, serving the economic needs of the villagers, the people and teaching co-operative way of life and making it a mental habit".

Now, taking this broad ideal, we have to see how far the State Government has realised in giving expression to the ideal of the late Prime Minister, Panditji. Further, the Second Five Year Plan observes in its preamble on co-operation :

> "Economic development along democratic lines offers a vast field for the application of co-operation in its infinitely varying forms. Our socialist pattern of society implies the creation of large numbers of decentralised units, both in agriculture and in industry. These small units can obtain the advantages of scale and organisation mainly by coming together. The character of economic development in India with its emphasis on social change, therefore, provides a great deal of scope for the organisation of co-operative activity. The building up of a co-operative sector as part of the scheme of planned development is, thus one of the central aims of national policy".

Sir, the Third Five Year Plan in Preamble stresses :

> "In a planned economy pledged to the values of socialism and democracy, co-operation should become progressively the principal basis of organisation in many branches of economic life, notably in agriculture and minor irrigation, small industry and processing, marketing, distribution. supplies, rural electrification, housing and construction, and the provision of essential amenities for local communities. Even in medium and large industries and in transport, an increasing range of activities can be undertaken on co-operative lines."

Sir, the most significant progress in the co-operative field in the last decade has been achievement in the sphere of economic activity. The greatest weakness of the co-operative movement in the pre-independent era was. it was credit dominated and no worth while attempt was made to apply the co-operative principles to other spheres of economic activity. Also, it was mainly the biggest and strongest section of the community which were benefited by their operation. In the planned era, though the bigger land owning sections in the villages still continue to reap the larger benefits of the movement, there is a shift both in the planning and in the implementation of the schemes directed to help the weaker sections of the community. Sir, thus, the movement is being progressively used to serve the basic purpose. It must always be understood that so long as the co-operatives are charged with the

primary task of providing finances for the agricultural production, bigger peasants are bound to receive the bulk of the credit. However, in so far as the granting of loans to smaller peasants are concerned, I am sure, this Government has already accepted the recommendation of the V. L. Mehta Committee report that loans should be advanced not only on the credit-worthines but also taking into consideration the purpose-worthiness. Keeping this broad basis in view, we have to see how far the Co-operation Department in the State has been able to realise its objective enshrined in the Second and the Third Plans.

Sir, in order to realise the dream of our late Panditji, the Mysore Act is properly amended. Nomination have been replaced by elections. Even at the very initial stage, there is absolutely no nomination at all.

5-30 P.M.

The Government are not represented in a society where the share capital is less than Rs. 1 lakh and even where the share capital is more than Rs. 1 lakh the representation of the Government is restricted. There is least governmental interference in the administration of societies provided the society conducts itself within the framework of the Act and the co-operative policy enunciated by Government from time to time. I do not absolutely understand the grievance of my friend Sri Lakkappa when he said that the photo of a person who commits fraud must be displayed at a very conspicuous place and Chairmen of such co-operative societies should be blacklised. That only shows he has not read properly the various provisions of the Co-operative Societies Act. Wherever a President commits mistake there is provision in the Act to take action against him both by the Registrar and by the Registrar through the regular Indian Penal Code also. So if a Chairman misbehaves or if there is misapplication of funds. by the members, the Act is not blunt because the Registrar can even surcharge the Board of Directors to compensate the Society for the loss it has sustained.

Then, Sir, we have also to see how far the State Government and the Department of Co-operation have been able to realise the ideals enshrined in the second and the third five year plans. We are in an era of co-operation and at the same time we are in a stage of transition. The co-operative spirit has intruded into every branch of human activity. Our State stands second in the line of States, in the co-operative movement Maharashtra, Gujarat and Madras being in the first line, with Mysore coming in the second line of States. Therefore the co-operative movement, has developed a good deal in this State.

Now, if we see the various statistics given by the Department itself, in the first plan we had about 3,000 service co-operative societies and now it has risen to 9,000. Before the plan began agricultural credit was only 3 per cent but now it has risen to 35 per cent to that extent excluding the moneylenders. Then there is the State Marketing Society with 257 taluka marketing societies as members. For distribution of

(SRI R.S. HEGDE)

finance we have got the Apex Bank at the State level, the District Central Bank at the district level and the various primary societies at the rural level. Thus this three-tier system which was opposed by Mr. Ganamukhi is absolutely essential. It is impossible for the State Apex Bank to cater to the needs of all the 10,000 to 12,000 primary societies direct. The Apex Bank caters to the needs of the District Central Bank which in turn caters to the needs of the primary societies which are within the reach of the primary societies.

Then he said that the service co-operatives do not pay any dividend. The whole basis of service co-operatives is service. If a service co-operative society gives finance in time or seeds and manure in time, then the purpose of the society is more than fulfilled. A service co-operative must not be viewed from a commercial point of view. It does not exist for the sake of profit, but it exists for the sake of rendering service and if it does that service I think the very purpose for which the society is formed is fulfilled.

Then he questioned about the reserve fund. Reserve fund is absolutely essential. If a society goes into liquidation it is the reserve fund which will come to its rescue to compensate the shareholders. The reserve fund is always to be kept with the District Central Bank and it can be drawn at any time. It is a special type of fund which cannot be equated with other deposits. If it is kept in current account, the rate of interest is only 1/2% because the money is given whenever demanded unlike fixed deposits which are given only at the expiry of the fixed period.

On the whole, Sir, we have been doing very well in the co-operative field.

Then a question was raised about consumers' co-operative societies also and it was asked why should subsidy be given. Consumers' co-operatives are necessary to give to the agriculturists articles at competitive and cheap rates. The State gives this subsidy only for 3 years and from the 4th year no subsidy is given.

In conclusion, while supporting the demands I congratulate the Minister on the performance of our co-operatives.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ನಮ್ಮ ಮುಂದೆ ಇರತಕ್ಕ ಈ ಸಹಕಾರ, ವೆಹಿಕಲ್ ಟ್ಯಾಕ್ಸಸ್, ಮತ್ತು ಲೇಬರ್ ಈ ಡಿಮ್ಯಾಂಡ್‌ಗಳ ಮೇಲೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಇವತ್ತು ಸಹಕಾರ ಕ್ಷೇತ್ರದಿಂದ ಈ ರಾಜ್ಯವನ್ನು ಕಟ್ಟಬೇಕೆಂಬ ಧ್ಯೇಯ ಮತ್ತು ಉದ್ದೇಶ ಬಹಳ ಒಳ್ಳೆಯದೇ ಆದರೂ ಕೂಡ ಅದು ನಡೆಯುತ್ತಾ ಇರತಕ್ಕ ರೀತಿ ನೋಡಿ ಅದು ಬರೀ ರಾಜಕೀಯ ಒಂದರಿಂದಲೇ ನಡೆಯುತ್ತಾ ಇದೆ ಎಂದು ಹೇಳುವುದಕ್ಕೆ ನಾನು ಬಹಳ ವ್ಯಸನ ಪಡುತ್ತೇನೆ. ಹಿಂದೆ 1949ರಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳ ಯೋಜನೆಯನ್ನು ಹಾಕಿದವರು ಶ್ರೀಮಾನ್ ಮರಿಯಪ್ಪನವರು, ಅವರ ಉದ್ದೇಶ ಹೋಬಳಿಗೆ ಒಂದೊಂದು ಸೊಸೈಟಿ ಇರಬೇಕು ಆ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡಬೇಕು ಎಂದು ಹೇಳಿ ಇತ್ತು. ಒಂದೊಂದು ಸರ್ಕಾರ ಬದಲಾವಣೆಯಾದಾಗ ಆಯಾಯಾ ಮಂತ್ರಿಗಳ ಖುಷಿ ಬಂದ

ಹಾಗೆ ಹಿಂದಿನ ಪದ್ಧತಿಯನ್ನು ಬದಲಾವಣೆ ಮಾಡಿಕೊಂಡು ಹೋಗುತ್ತಾ ಇದ್ದಾರೆ. ಆದ್ದರಿಂದ ಇವತ್ತು ನಾವು ಬಹಳ ತೊಂದರೆಯನ್ನು ಅನುಭವಿಸುತ್ತಾ ಇದ್ದೇವೆ. ಪ್ರತಿಯೊಂದು ಗ್ರಾಮ ಪಂಚಾಯ್ತಿಗೂ ಒಂದೊಂದು ಸೊಸೈಟಿ ಇರಬೇಕೆಂದು ನಿಗದಿ ಮಾಡಿದ್ದಾರೆ. ಅನೇಕ ಸೊಸೈಟಿಗಳು ಇವೆ. ಇವತ್ತು ನಮ್ಮಲ್ಲಿ ಪ್ರಾಮಾಣಿಕವಾಗಿ, ಸತ್ಯಸಂಧರಾಗಿ, ಕೆಲಸ ಮಾಡತಕ್ಕ ಕೆಲಸಗಾರರ ಅಭಾವ ದೇಶದಲ್ಲಿ ತುಂಬಿದೆ. ನಮ್ಮ ಸ್ವಾರ್ಥಕ್ಕಾಗಿ, ನಮಗೆ ಚುನಾವಣೆಗಳಲ್ಲಿ ಕ್ಯಾನ್‌ವಾಸ್ ಮಾಡುವುದಕ್ಕೆ ಏಜೆಂಟುಗಳು ಬೇಕು. ಅದಕ್ಕಾಗಿ ಎಲ್ಲೆಲ್ಲೂ ಏಜೆಂಟುಗಳನ್ನು ಗೊತ್ತು ಮಾಡಿ ಅವರಿಗೆ ಒಂದು ಜಾಗ ಕೊಡಬೇಕೆಂದು ಸಹಕಾರ ಸಂಘಗಳನ್ನು ಇವತ್ತು ಉಪಯೋಗಿಸಿಕೊಂಡಿದ್ದೀರಿ ಎಂದರೆ ಇದು ಉತ್ಪ್ರೇಕ್ಷೆಗಾಗಿ ಹೇಳುತ್ತಾ ಇರತಕ್ಕ ಮಾತಲ್ಲ. ಅಥವಾ ರಾಜಕೀಯ ಭಾವನೆಯಿಂದಲೂ ಕೂಡ ನಾನು ಹೇಳುತ್ತಾ ಇಲ್ಲ. ಇದು ಸತ್ಯವಾದ ಮಾತು ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಷಾರ್ಟ್ ಟರ್ಮ್, ಮೀಡಿಯಂ ಟರ್ಮ್, ಲಾಂಗ್ ಟರ್ಮ್ ಈ ರೀತಿ ಎಲ್ಲಾ ಸಾಲಗಳನ್ನೂ ಹೊಂದಿಸುತ್ತಾ ಇದ್ದೀರಿ. ಇದು ಜನಕ್ಕೆ ಎಷ್ಟುಮಟ್ಟಿಗೆ ಸಿಕ್ಕುತ್ತಾ ಇದೆ ಎಂಬುದನ್ನು ನೋಡಬೇಕು. ಈ ಸೊಸೈಟಿಗಳ ಆಡಳಿತವನ್ನು ನಡೆಸುತ್ತಾ ಇರತಕ್ಕ ಜನ ಅವರಿಗೆ ಬೇಕಾದವರಿಗೆ ಸಾಲ ಕೊಡುತ್ತಾ ಇದ್ದಾರೆ. ಈ ಒಂದು ಕಾರಣದಿಂದ ಬಡ ಬಗ್ಗರಿಗೆ ಸಾಲ ಸೋಲಗಳು ಸಿಕ್ಕದಂತಾಗಿದೆ. ಇವತ್ತು ಒಂದು ಮಾತನ್ನು ಹೇಳುತ್ತೇವೆ. ಸರ್ಕಾರದವರು ಅಧಿಕಾರಗಳ ವಿಕೇಂದ್ರೀಕರಣ ಮಾಡಬೇಕು, ಜನರಿಂದ ಚುನಾಯಿತರಾದ ಜನ ಎಲ್ಲಾ ಅಧಿಕಾರ ಸ್ಥಾನಗಳಲ್ಲಿ ಬರಬೇಕೆಂಬ ವಾದವನ್ನು ನಾನು ಒಪ್ಪುತ್ತೇನೆ. ಆದರೆ ಸಾರ್ವಜನಿಕರು ಇವತ್ತು ಆ ದಾರಿಯಲ್ಲಿ ಎಷ್ಟುಮಟ್ಟಿಗೆ ತಯಾರಾಗಿದ್ದಾರೆ ಅವರಿಗೆ ಎಷ್ಟುಮಟ್ಟಿಗೆ ಅಧಿಕಾರವನ್ನು ವಹಿಸಬಹುದು ಎಂಬುದನ್ನು ತಾವು ವಿಮರ್ಶೆ ಮಾಡಿದ ಹಾಗೆ ಕಾಣುವುದಿಲ್ಲ. ಈ ಇಲಾಖೆಗೆ ಮುಖ್ಯ ಅಧಿಕಾರಿಗಳು ರಿಜಿಸ್ಟ್ರಾರ್‌ರವರು ಇದ್ದಾರೆ. ರಿಜಿಸ್ಟ್ರಾರ್ ಅವರು ಕಟ್ಟುನಿಟ್ಟಾಗಿ ಕೆಲಸ ಮಾಡುವುದಕ್ಕೆ ಅವರಿಗೆ ತಕ್ಕ ಬೆಂಬಲ, ಪ್ರೋತ್ಸಾಹ ಸಿಕ್ಕುತ್ತಾ ಇಲ್ಲ. ಏಕೆಂದರೆ, ಈ ಜನ ನಾವೇನು ತಪ್ಪು ಮಾಡಿದರೂ ಮಂತ್ರಿಗಳು ಸುಲಭದಲ್ಲಿ ಸಿಕ್ಕುವುದರಿಂದ ಅವರ ಪ್ರಭಾವ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅಧಿಕಾರಿಗಳು ಕಟ್ಟುನಿಟ್ಟಾಗಿ ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ಮಾಡುವುದಕ್ಕೆ ಅವಕಾಶವಾಗಿಲ್ಲ ಎಂದು ನಾನಾದರೂ ಬಹಳ ವ್ಯಸನದಿಂದ ಹೇಳುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಡಿಪಾರ್ಟ್‌ಮೆಂಟಲ್ಲಾಗಿ ಕೇಸು ತೆಗೆದುಕೊಳ್ಳಬೇಕೆಂದು ನೋಟೀಸು ಇಷ್ಯೂ ಮಾಡಿದ್ದಾರೆ. ಆದರೆ ಇಂಥ ನೋಟೀಸುಗಳಿಗೆ ಯಾರು ಹೆದರುತ್ತಾರೆ? ಯಾರೋ ತಿಮ್ಮಪ್ಪಗೌಡರದೋ ಅಥವಾ ಬೇರೆಯವರದೋ ಶಿಫಾರಸು ಇದೆ ಎಂದು ಹೆದರಿರುವಾಗ ಅಂಥವರು ಸರಿಯಾಗಿ ಕೆಲಸಮಾಡುವುದಿಲ್ಲ ಎಂಬುದನ್ನು ಕೂಡ ಯೋಚನೆಮಾಡಬೇಕು.

ಇನ್ನು ಸರ್ಕಲ್ ಸೊಸೈಟಿಗೆ ಮಾರ್ಜಿನ್ ಆಫ್ ಪ್ರಾಫಿಟ್ ಬಹಳ ಕಡಮೆ ಇದೆ, ಅದೇ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಹೆಚ್ಚು ಲಾಭವಿದೆ, ಇದು ಹೋಗಬೇಕು. ನಫೆ ಹಂಚಿಕೆ ಸರಿಯಾಗಿ ವಿಲೇವಾರಿಯಾಗಬೇಕು. ಹೆಚ್ಚು ಸೊಸೈಟಿಗಳನ್ನು ತೆರೆಯುವ ಹಾಗೆ ಸೂಪರ್‌ವಿಷನ್, ಚೆಕಿಂಗ್, ಆಡಿಟ್ ಮುಂತಾದ್ದು ಸರಿಯಾಗಿ ಆಗುತ್ತಿಲ್ಲ. ಬ್ಲಾಕುಗಳಿಗೆ ಎಕ್ಸ್‌ಟೆನ್‌ಷನ್ ಆಫೀಸರನ್ನು ಕೊಟ್ಟಿದ್ದಾರೆ. ಆದರೆ ಅವರು ತಾಲ್ಲೂಕುಬೋರ್ಡು ಪ್ರೆಸಿಡೆಂಟರು ಮತ್ತು ಸಂಬಂಧಪಟ್ಟವರು ಹೇಳಿದಹಾಗೆ ಮಾಡುತ್ತಾರೆಯೇ ವಿನಾ ಸೊಸೈಟಿ ಕಡೆ ಹೋಗಿ ಸರಿಯಾಗಿ ನೋಡುವುದಿಲ್ಲ. ಯಾವುದಾದರೂ ಒಂದು ಸೊಸೈಟಿಯಲ್ಲಿ ಹಣ ದುರುಪಯೋಗವಾಗಿದೆಯೆಂದರೆ, ಅಲ್ಲಿಗೆ ರಿಜಿಸ್ಟ್ರಾರರು ಅಥವ ಅಸಿಸ್ಟೆಂಟ್ ರಿಜಿಸ್ಟ್ರಾರರು ಬರುತ್ತಾರೆಂದರೆ ಬಿ.ಡಿ.ಒ. ಅಲ್ಲಿಗೆ ಹೋಗಿರುತ್ತಾರೆ, ಬಿತ್ತನೆ ಬೀಜ ಕೊಡಬೇಕಾದರೆ ಅವರು ಹೋಗುತ್ತಾರೆ. ಹೀಗಾದರೆ ಸೊಸೈಟಿ ಕೆಲಸ ಚೆನ್ನಾಗಿ ನಡೆಯುವುದು ಹೇಗೆ? ಪ್ರತಿ ತಾಲ್ಲೂಕಿನಲ್ಲೂ ಇರುವ ಸೊಸೈಟಿಯ ಆಡಿಟ್ಟು ಮುಂತಾದ್ದನ್ನು ನೋಡಿಕೊಳ್ಳಲು ರಿಜಿಸ್ಟ್ರಾರರನ್ನು ಬಿಟ್ಟು ಇತರರು ಯಾರಿಗೂ ಅಧೀನವಾಗಿಲ್ಲದಿರುವ ಒಬ್ಬ ಅಧಿಕಾರಿಯನ್ನು ಪ್ರತಿ ತಾಲ್ಲೂಕಿಗೂ ಕೊಟ್ಟರೆ ಎಷ್ಟೋ ಲೋಪದೋಷ ಕಡಮೆಯಾಗುತ್ತದೆ.

ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳ ಚುನಾವಣೆ ಇದುವರೆಗೆ ನಡೆಯಬೇಕಾಗಿತ್ತು, ನಡೆದು ಎರಡು ವರ್ಷವಾಗಬೇಕಾಗಿತ್ತು. ಜರೂರು ಪರಿಸ್ಥಿತಿ ಇದೆಯೆಂದು ಅದನ್ನು ಸರಕಾರ ಮುಂದುವರೆಸುತ್ತಿದೆ. ಇನ್ನು ಹಾಗೆ ಮುಂದುವರೆಸದೆ ಆದಷ್ಟು ಬೇಗ ನಡೆಸಬೇಕು.

ಸಹಕಾರ ಇಲಾಖೆ ವಿಚಾರ ಬೇಕಾದಷ್ಟು ಹೇಳಬೇಕಾಗಿದೆ. ಆ ಇಲಾಖೆಯ ಸಚಿವರಾದ ಪುಟ್ಟಸ್ವಾಮಿಯವರು ದಿವಂಗತ ಮರಿಯಪ್ಪನವರ ಖಾಸಾ ಶಿಷ್ಯರು, ಮರಿಯಪ್ಪನವರೆಷ್ಟು ಈ ಇಲಾಖೆ ವಿಷಯದಲ್ಲಿ ಆಸಕ್ತಿ ವಹಿಸುತ್ತಿದ್ದರೆಂಬುದು ಅವರಿಗೆ ಗೊತ್ತಿದೆ. ಆದುದರಿಂದ ಅವರು ಮುತವರ್ಜಿ ವಹಿಸಿ ಕೆಲಸಮಾಡುತ್ತಾರೆಂದು ಆಶಿಸುತ್ತೇನೆ.

(ಶ್ರೀ ಟಿ. ಎನ್. ಮಾದಪ್ಪ ಗೌಡ)

ರೋಡ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣ ಇದುವರೆಗೆ ಎಷ್ಟಾಗಿದೆಯೋ ಅದನ್ನು ಸರಿಯಾಗಿ ನಡೆಸಬೇಕು, ಹೊಸದಾಗಿ ಮನಾಪಲಿ ಮಾಡುವುದು ಬೇಡ, ಸರಕಾರದ ಕೈಲಿ ಸರಿಯಾಗಿ ನಡೆಸುವುದು ಆಗದ ಕೆಲಸ, ಈಗಾಗಲೇ ಬೇಕಾದಷ್ಟು ದೋಷಗಳಿವೆ, ಆದುದರಿಂದ ಖಾಸಗಿಯವರಿಗೆ ಅವಕಾಶವಿರುವುದು ಒಳ್ಳೆಯದು. ಸರಕಾರಕ್ಕೆ ಹಣ ಬೇಕು, ಅದಕ್ಕಾಗಿ ಸೆಸ್ ಹಾಕುತ್ತಾರೆ, ಅದನ್ನು ಕೊಡಲು ತಯಾರಿದ್ದಾರೆ, ಒಂದೆರಡು ರೂಟುಗಳು ಚೆನ್ನಾಗಿ ನಡೆಯುತ್ತಿವೆ. ನಮ್ಮ ಊರಿಗೆ ಒಂದು ಎಕ್ಸ್‌ಪ್ರೆಸ್ ಸರ್ವಿಸ್ ಹಾಕಿದ್ದಾರೆ, ಅದು ಬೆಂಗಳೂರಿನಿಂದ 5 ಗಂಟೆಗೆ ಹೊರಟರೆ ರಾತ್ರಿ 12 ಗಂಟೆಗೆ 80 ಮೈಲಿ ಹೋಗುವುದು. ನನಗೆ ಅನುಭವವಿರುವಂತೆ ಒಂದೊಂದು ದಿವಸ 3–4 ಬಸ್ಸುಗಳನ್ನು ಬದಲಾಯಿಸುತ್ತಾರೆ. ಹೀಗೆ ನಡೆಸುವುದು ಸರಿಯಲ್ಲ, ಹೀಗಾದರೆ ಹಾಕಿರುವ ಬಂಡವಾಳಕ್ಕೆ ಸರಿಯಾದ ಉತ್ಪತ್ತಿ ಬರುವುದಿಲ್ಲ. ಆದುದರಿಂದ ಖಾಸಗಿ ಜನರನ್ನು ಕಳೆದುಕೊಳ್ಳಬಾರದು, ಎಲ್ಲೋ ಮನಾಪಲಿ ಮಾಡಲಿ ಸರಕಾರ ಸರಿಯಾಗಿ ನಡೆಸುವುದು ಸಾಧ್ಯವಿಲ್ಲದ ಕೆಲಸ. ಆದುದರಿಂದ ಇರತಕ್ಕ ರೂಟುಗಳನ್ನು ಸರಿಯಾಗಿ ನಡೆಸುವುದಾದರೆ ಸರಕಾರ ಇಟ್ಟುಕೊಳ್ಳಬಹುದು. ಅದು ಸಾಧ್ಯವಿಲ್ಲದಿದ್ದರೆ ಖಾಸಗಿಯವರಿಗೆ ಕೊಡಬೇಕು ಎಂದು ಹೇಳಲಿಚ್ಛಪಡುತ್ತೇನೆ.

ಬಾವಿಗಳಿಗೆ ಸಾಲ ಕೊಡುವ ವಿಚಾರದಲ್ಲಿ ಎರಡು ಮಾತನ್ನು ಹೇಳುತ್ತೇನೆ. ಇದನ್ನು ಎಲ್ಲಾ ತಾಲ್ಲೂಕುಗಳಿಗೂ ಸಮನಾಗಿ ಹಂಚುತ್ತಿದ್ದಾರೆ. ಕೆಲವು ಪ್ರದೇಶಗಳಲ್ಲಿ ನಾಲೆ ವಗೈರೆ ನೀರಾವರಿ ಸೌಕರ್ಯವಿದೆ, ಮಳೆಬೆಳೆ ಚೆನ್ನಾಗಿದೆ. ಹಾಗಿರುವಾಗ ಯಾವಾಗಲೂ ಕ್ಷಾಮಕ್ಕೆ ತುತ್ತಾಗುವ ಪ್ರದೇಶಗಳಿಗೂ ಕೂಡ ಒಂದೇ ಪ್ರಮಾಣದಲ್ಲಿ ಹಂಚುವುದನ್ನು ಒಪ್ಪುವುದಕ್ಕಾಗುವುದಿಲ್ಲ, ದಯೆಯಿಟ್ಟು ಪದೇ ಪದೇ ಕ್ಷಾಮಕ್ಕೆ ತುತ್ತಾಗುವ ಪ್ರದೇಶಗಳಿಗೆ ಹೆಚ್ಚು ಬಾವಿಗಳಿಗೆ ಸಹಾಯಮಾಡುವ ಏರ್ಪಾಡುಮಾಡಬೇಕು. ಯಾರೋ ಕೆಲವು ಸದಸ್ಯರ ಒತ್ತಾಯಕ್ಕೆ ಮಣಿದು ಎಲ್ಲರಿಗೂ ಸಮನಾಗಿ ಹಂಚುತ್ತೇವೆಂಬ ಮನೋಭಾವವನ್ನು ಬಿಡುವುದು ಒಳ್ಳೆಯದು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ರೋಡ್ ಟ್ರಾನ್ಸ್‌ಪೋರ್ಟ್ ಸರ್ಕಾರ ನಡೆಸುತ್ತಿದೆ. ಮದ್ರಾಸು ಮತ್ತು ಕೇರಳ ಸರ್ಕಾರಗಳೂ ಕೂಡ ನಡೆಸುತ್ತಿವೆ. ಅಲ್ಲಿಗೆ ಸರ್ಕಾರಿ ಅಧಿಕಾರಿಗಳನ್ನು ಕಳಿಸಿ ಹೇಗೆ ಅಲ್ಲಿ ನಡೆಯುತ್ತಿದೆ ಲಂಚದ ಹಾವಳಿ ಅಲ್ಲಿ ಹೇಗಿದೆ ಎಂದು ತಿಳಿದುಕೊಂಡು ಇಲ್ಲೂ ಕೂಡ ಅದೇ ರೀತಿ ದಕ್ಷತೆಯಿಂದ ನಡೆಸುವುದಕ್ಕೆ ಸರಕಾರಕ್ಕೆ ಶಕ್ತಿಯಿಲ್ಲ. ಇಲ್ಲಿಯೂ ಸೇಕಡ 30ರಷ್ಟು ಲೀಕೇಜ್ ಇದೆ, ಅದೇ ಮದ್ರಾಸ್ ಮತ್ತು ಕೇರಳಗಳಲ್ಲಿ ಸೇಕಡ ಒಂದು ಕೂಡ ಲೀಕೇಜ್ ಇಲ್ಲ, ಮತ್ತು ಓವರ್ ಲೋಡಿಂಗ್ ಕೂಡ ಇಲ್ಲ. ಇಲ್ಲಿ 30 ದಿವಸಗಳಲ್ಲಿ ಒಂದು ರಷ್ಟು ದಿನ ಕಂಡಕ್ಟರು ಹಣ ಲಂಚದ ರೂಪದಲ್ಲಿ ಪಡೆದು ಬೇಕಾದವರಿಗೆ ಕೊಡದಿದ್ದರೆ ಮಾರನೇ ದಿವಸ ಅವನಿಗೆ ರೆಗ್ಯುಲರ್ ಲೈನ್ ಸಿಕ್ಕುವುದಿಲ್ಲ. ಅವನು ಹಣವನ್ನು ಮೋಸದಿಂದ ಪಡೆದು ಹಂಚಬೇಕಾದವರಿಗೆ ಹಂಚದಿದ್ದರೆ ವೈಟಿಂಗ್ ಲಿಸ್ಟಿನಲ್ಲಿ ಕಾಯಬೇಕು. ಇತ್ತೀಚೆಗೆ ಮನಾಪಲಿ ಮಾಡಿರುವ ಆನೇಕಲ್—ಸರ್ಜಾಪುರ—ಬೆಂಗಳೂರು ಲೈನಿನಲ್ಲಿ 5 ಜನ ಖಾಸಗಿ ಬಸ್ಸಿನವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಹೀಗಾದರೆ ಮನಾಪಲಿ ಎಂಬುದರ ಅರ್ಥವೇನು ? ಹೇಗೆ ಮನಾಪಲಿ ರೂಟಿನಲ್ಲಿ ಖಾಸಗಿಯವರಿಗೆ ಅವಕಾಶ ಕೊಡಲಾಯಿತು ಎಂಬುದಕ್ಕೆ ಉತ್ತರ ಹೇಳಬೇಕು. ಸರಕಾರದ ಕೈಲಿ ಬಸ್ಸುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅದನ್ನು ಖಾಸಗಿಯವರಿಗೇ ವಹಿಸಿದರೆ ಚೆನ್ನಾಗಿ ನಡೆಸುತ್ತಾರೆ, ಕಾಲಕ್ಕೆ ಸರಿಯಾಗಿ ಬಸ್ಸುಗಳನ್ನು ಓಡಿಸುತ್ತಾರೆ. ಮೊನ್ನೆ 6 ಗಂಟೆಗಳಲ್ಲಿ ಹೋಗುವ ಬಸ್ಸು ಊರು ತಲಪಲು 24 ಗಂಟೆ ತೆಗೆದುಕೊಂಡಿತೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಹೀಗಾದರೆ ಪ್ರಯಾಣಿಕರ ಗತಿಯೇನು ? ಹೀಗೆ ದೇಶದ ಹಣವನ್ನು ವಿನಿಯೋಗಿಸಿ ಜನತೆಗೆ ಅನಾನುಕೂಲ ಮಾಡುವುದಕ್ಕೆ ಬದಲಾಗಿ ಖಾಸಗಿಯವರಿಗೆ ಮೊದಲಿನಂತೆ ಬಸ್ಸು ಲೈನುಗಳನ್ನು ಕೊಟ್ಟು ಇದಕ್ಕೆ ಹಾಕಿರುವ ಬಂಡವಾಳವನ್ನು ಬೇರೆ ಕೆಲಸಕ್ಕೆ ಉಪಯೋಗಮಾಡುವುದು ಸೂಕ್ತ. ಸರ್ಕಾರಕ್ಕೆ ಕೈಲಾದರೆ ಸರಿಯಾಗಿ ನಡೆಸಬೇಕು, ಇಲ್ಲದಿದ್ದರೆ ಖಾಸಗಿಯವರಿಗಾದರೂ ಬಿಡಬೇಕು. ಹಾಗೆ ಮಾಡಿದರೂ ಕೂಡ ಸರ್ಕಾರಕ್ಕೆ ಬರಬೇಕಾದ ತೆರಿಗೆ, ಆದಾಯ ಬರುತ್ತದೆ. ಜನರಿಗೂ ಕೂಡ ಅನುಕೂಲವಾಗುತ್ತದೆ. ಕಾಲಕ್ಕೆ ಸರಿಯಾಗಿ ಖಾಸಗಿಯವರು ಬಸ್ಸುಗಳನ್ನು ನಡೆಸಿ ಪ್ರಯಾಣಿಕರಿಗೆ ಸೌಕರ್ಯ ಕಲ್ಪಿಸುತ್ತಾರೆ. ಹಾಗಾದರೂ ಮಾಡದೆ ಜನರಿಗೇಕೆ ಕಿರುಕುಳ ಕೊಡುತ್ತೀರಿ ! ಈ ಕಿರುಕುಳವನ್ನು ತಕ್ಷಣ ತಪ್ಪಿಸಿ ಪ್ರೈವೇಟ್ ಆಪರೇಟರುಗಳಿಗೆ ಬಿಟ್ಟರೆ ಬಸ್‌ಗಳಿಂದ ಹೆಚ್ಚು ತೆರಿಗೆ ಸರ್ಕಾರಕ್ಕೆ ಬರುವುದಲ್ಲದೆ ಜನಗಳಿಗೂ ಅನುಕೂಲವಾಗುತ್ತದೆ.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇದೆ, ಬಹುಶಃ ಕೇಂದ್ರ ಸರ್ಕಾರಕ್ಕೆ ಅಂಕಿಅಂಶಗಳನ್ನು ಒದಗಿಸುವುದಕ್ಕೆ ಇದನ್ನು ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಇಷ್ಟು ಜನ ಕೆಲಸಕ್ಕೆ ರಿಜಿಸ್ಟರ್ ಮಾಡಿಸಿಕೊಂಡಿದ್ದರು, ಇಷ್ಟು ಜನಗಳಿಗೆ ಉದ್ಯೋಗವನ್ನು ಒದಗಿಸಿದ್ದೇವೆಂದು ಅಂಕಿ ಅಂಶಗಳನ್ನು ಕೊಡುವುದಕ್ಕೆ ಮಾತ್ರ ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಯಾರಾದರೂ ಕೆಲಸ ಬೇಕಾಗಿದ್ದರೆ ಇಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಯಾವುದಾದರೂ ಇಲಾಖೆಯಲ್ಲಿ ಅಥವಾ ಸಂಸ್ಥೆಗಳಲ್ಲಿ ಒಂದು ಹೊಸ ಕೆಲಸ ಖಾಲಿ ಬಿದ್ದರೆ ಉದ್ಯೋಗ ವಿನಿಮಯ ಕೇಂದ್ರಕ್ಕೆ ಬರೆಯಬೇಕು. ಇದರಲ್ಲಿ ಬಹಳ ತೊಡಕುಗಳಿವೆ, ಮತ್ತು ವಿಶೇಷ ಸಿಬ್ಬಂದಿ ವರ್ಗವಿದೆ. ಇದಕ್ಕೆ ಆಗುವ ಖರ್ಚನ್ನು ತಪ್ಪಿಸಿ ಕೇಂದ್ರಕ್ಕೆ ಅಂಕಿ ಅಂಶಗಳನ್ನು ಕೊಡಬೇಕಾದರೆ, ಈ ಕಾರ್ಯವನ್ನು ಲೇಬರ್ ಕಮೀಷನರಿಗೆ ವಹಿಸಬಹುದು ಎಂದು ಹೇಳುತ್ತೇನೆ.

ಸಹಕಾರ ಇಲಾಖೆಯಲ್ಲಿ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಮತ್ತು ಹೇರಳವಾಗಿ ಅಧಿಕಾರಿಗಳಿದ್ದರೂ ಜನರಲ್ಲಿ ಸಹಕಾರ ತತ್ವ ಬೆಳೆಯಲು, ಕೋ-ಆಪರೇಟಿವ್ ಮೈಂಡ್ ಡೆವಲಪ್ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವುದನ್ನು ಸಸ್ಪೆಂಡ್ ಮಾಡಬೇಕು, ಯಾವುದನ್ನು ಆಡಿಟ್ ಮಾಡಿಸಬೇಕು, ಯಾವುದನ್ನು ಆಡಿಟ್ ಮಾಡಿಸಬಾರದು ಎಂದು ನೋಡುತ್ತಾರೆ. ಸಹಕಾರ ಚಳುವಳಿಯು ಒಂದು ರಾಜಕೀಯವಾಗಿದೆ. ಇದರಿಂದ ಜನಗಳಿಗೆ ಎಷ್ಟು ಮಾತ್ರವೂ ಉಪಕಾರವಾಗಿಲ್ಲ. ಸರ್ಕಾರ ಆರೇಳು ಕೋಟಿ ರೂಪಾಯಿ ಷೇರು ಬಂಡವಾಳವನ್ನು ಈ ಸಹಕಾರ ಸಂಘಗಳಲ್ಲಿ ಹಾಕಿದ್ದರೂ ಯಾವುದರಿಂದರಾದರೂ ಡಿವಿಡೆಂಡ್ ಬಂದಿದೆಯೇ ಎಂದರೆ ಏನೂ ಬಂದಿಲ್ಲ. ರಿಸರ್ವ್ ಬ್ಯಾಂಕಿನಿಂದ ಸೇಕಡ ಮೂರು ರೂಪಾಯಿಗಳ ಪ್ರಕಾರ ಬಡ್ಡಿಗೆ ತೆಗೆದುಕೊಂಡು, ಅದರ ಮೇಲೆ ಜಿಲ್ಲಾ ಬ್ಯಾಂಕುಗಳು, ಅಪೆಕ್ಸ್ ಬ್ಯಾಂಕುಗಳು ಎರಡು ಮೂರು ಪರ್ಸೆಂಟ್ ಮಾರ್ಜಿನ್ ಇಟ್ಟುಕೊಂಡು ಪ್ರೈಮರಿ ಸೊಸೈಟಿಗಳಿಗೆ ಕೊಡುತ್ತಾರೆ. ಅವರು ಜನರಿಗೆ ಸೇಕಡ 9 ರಂತೆ ಬಡ್ಡಿಗೆ ಹಣವನ್ನು ಕೊಡುತ್ತಾರೆ. ರಿಸರ್ವ್ ಬ್ಯಾಂಕಿನಿಂದ ಸೇಕಡ ಮೂರರಂತೆ ಸಿಕ್ಕುವ ಹಣಕ್ಕೆ ಮಧ್ಯವರ್ತಿ ಜನಗಳು ಸೇಕಡ ಆರರಷ್ಟು ಲಾಭವನ್ನು ಸಂಪಾದನೆ ಮಾಡುತ್ತಾರೆ. ಅಪೆಕ್ಸ್ ಬ್ಯಾಂಕಿನಲ್ಲಿ ಅಧ್ಯಕ್ಷರ ಛೇಂಬರ್, ಮಲಗುವ ಕೊಠಡಿ ಇವುಗಳನ್ನು ನೋಡಿದರೆ ಮಂತ್ರಿಗಳ ಕೊಠಡಿಗಳಿಗಿಂತಲೂ ಉತ್ತಮವಾಗಿದೆ. ಇದಕ್ಕೆಲ್ಲ ದುಡ್ಡು ಎಲ್ಲಿಂದ ಬಂತು ? ಇವೆಲ್ಲ ರೈತನ ದುಡ್ಡಿನಿಂದರೇ ಆಗಿದೆ. ರಿಸರ್ವ್ ಬ್ಯಾಂಕಿನಿಂದ ಸೇಕಡ ಮೂರರಂತೆ ತೆಗೆದುಕೊಂಡ ಹಣವನ್ನು ಸೇಕಡ ಒಂಬತ್ತರಂತೆ ರೈತನಿಗೆ ಕೊಟ್ಟು ಅದರಿಂದ ಬರುವ ಆರು ಪರ್ಸೆಂಟಿನಿಂದ ಮಜಾ ಮಾಡುತ್ತಾರೆ. ಇದಲ್ಲದೆ ರಿಸರ್ವ್ ಬ್ಯಾಂಕಿನಿಂದ ತೆಗೆದುಕೊಂಡ ಹಣವನ್ನು ಕೊಡುವುದರಲ್ಲಿ ತಾರತಮ್ಯವುಂಟಾಗಿ ವ್ಯಾಪಾರ ದೃಷ್ಟಿಯಿಂದ ಕೆಲಸ ಮಾಡುವ ಸಹಕಾರ ಸಂಘಗಳಿಗೆ ಎಲ್ಲ ಅನುಕೂಲತೆಗಳೂ ದೊರೆತು ಕಾರುಗಳು, ಟ್ಯಾಕ್ಸಿಗಳು ಮತ್ತು ಇತರೆ ವ್ಯವಹಾರಗಳುಳ್ಳ ಸೊಸೈಟಿಗಳಿಗೆ ಪಟ್ಟಣಗಳಲ್ಲಿ ದುಡ್ಡನ್ನು ಕೊಟ್ಟು, ಜಿಲ್ಲಾ ಬ್ಯಾಂಕುಗಳು ವ್ಯಾನುಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿವೆ, ಇದನ್ನೆಲ್ಲ ನೋಡಿದರೆ ಈ ಸಂಸ್ಥೆಗಳಿಗೆ ವ್ಯವಸಾಯಗಾರನ ಅಭಿವೃದ್ಧಿ ಎಂದು ಹೇಳಿದರೆ ತಪ್ಪಾಗುತ್ತದೆ. ಅದಕ್ಕೆ ಕಮರ್ಷಿಯಲ್ ಬ್ಯಾಂಕ್ ಎಂಬ ಹೆಸರನ್ನು ಇಡಬೇಕು ಎಂದು ಹೇಳುತ್ತೇನೆ.

ತಾಲ್ಲೂಕು ಮಲ್ಟಿ ಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳು ಮತ್ತು ಇತರ ಕೆಲವು ಸೊಸೈಟಿಗಳಿಗೆ ಕಂಟ್ರೋಲ್ ಆಗಿರುವ ಪದಾರ್ಥಗಳನ್ನು ಹಂಚುವ ಕೆಲಸವನ್ನು ಕೊಟ್ಟು ಅವುಗಳನ್ನು ರಕ್ಷಣೆ ಮಾಡದೆ ಅವು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವಂತೆ ಮಾಡಬೇಕು. ಈಗ ಕಂಟ್ರೋಲ್ ಆದ ಪದಾರ್ಥಗಳ ವ್ಯಾಪಾರ ಮಾತ್ರ ಸೊಸೈಟಿಗಳಿಂದ ನಡೆಯುತ್ತಿದೆ. ಈ ಸೊಸೈಟಿಗಳಿಂದ ರೈತರಿಗೆ ಅನುಕೂಲವಾಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೇ ಹೊರತು ಕಂಟ್ರೋಲ್ ಆದ ಪದಾರ್ಥಗಳನ್ನು ಮಾರಿ ಮನಾಫಲ ಮಾಡಿರುವ ಪದಾರ್ಥಗಳನ್ನು ಕೊಂಡು, ಮಾರಾಟ ಮಾಡಿ, ಅದರಿಂದ ಲಾಭ ಪಡೆಯುವಂತೆ ಮಾಡಿ ಎಲ್ಲ ಅನುಕೂಲಗಳನ್ನೂ ಕಲ್ಪಿಸಿದ್ದೇವೆ, ಎಂದು ಏನೇನೋ ಹೇಳುವುದು ಸರಿಯಲ್ಲ. ಮೊನ್ನೆಯ ದಿನ ಆಹಾರ ಮಂತ್ರಿಗಳು ಒಂದು ಸಂದರ್ಭದಲ್ಲಿ ಹೇಳಿದರು, ಆಹಾರ ಪದಾರ್ಥಗಳನ್ನು ಕೊಂಡು, ಮಾರಾಟ ಮಾಡುವುದರಲ್ಲಿ 22 ರೂಪಾಯಿ ಖರ್ಚು ಬೀಳುತ್ತದೆ ಎಂದು. ಒಂದು ಕ್ವಿಂಟಾಲ್ ಧಾನ್ಯಕ್ಕೆ 22 ರೂಪಾಯಿ ಲಾಭ ಎಂದರೆ ಏನಾಯಿತು, ಈ ರೀತಿಯಾಗಿ ಸೊಸೈಟಿಗಳಿಗೆ ಎಷ್ಟು ಕಾಲ ಸಹಾಯ ಮಾಡಬಲ್ಲರು, ಇದು ಎಷ್ಟು ದಿವಸ ನಡೆದೀತು ಎನ್ನುವುದನ್ನು ಯೋಚನೆ ಮಾಡಿ ಸೊಸೈಟಿಗಳು ತಮ್ಮ ಕಾಲಮೇಲೆ ತಾವು ನಿಂತು ಕೆಲಸ ಮಾಡುವಂತೆ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—22 ರೂಪಾಯಿನಲ್ಲಿ 11 ರೂಪಾಯಿ ಸಾಗಾಣಿಕೆ ಖರ್ಚು ಆಗುತ್ತದೆ.

ಶ್ರೀ ಬಿ. ಚನ್ನಬೈರೇ ಗೌಡ.—ಉಳಿದ 11 ರೂಪಾಯಿಗಳಾದರೂ ಸೊಸೈಟಿಗಳಿಗೇ ಹೋಗುತ್ತಿದೆ.

ರಿಸರ್ವ್ ಬ್ಯಾಂಕಿನಿಂದ ಸೇಕಡ 2 ಅಥವಾ 3ರಂತೆ ಬಡ್ಡಿ ತೆಗೆದುಕೊಳ್ಳುವ ಹಣವನ್ನು ಸೇಕಡ 5 ಅಥವಾ 6ರಂತೆ ಬಡ್ಡಿಗೆ ರೈತನಿಗೆ ಸಿಕ್ಕುವಂತೆ ಮಾಡಿದರೆ ಅವನ ಸ್ಥಿತಿ ಎಷ್ಟೋ ಉತ್ತಮವಾಗುತ್ತದೆ. ಆದರೆ ಸರ್ಕಾರದವರು ಈಗ ಸೇಕಡ 9 ರಂತೆ ಬಡ್ಡಿ ವಸೂಲ್ ಮಾಡುತ್ತಿದ್ದಾರೆ. ಇಷ್ಟು ಹೆಚ್ಚು ದರದಲ್ಲಿ ಬಡ್ಡಿಯನ್ನು ಕೊಟ್ಟು ರೈತನಾದವನು ಬಡ್ಡಿಯ ಮಗನಾಗುತ್ತಿದ್ದಾನೆ. ಜಿಲ್ಲಾ ಬ್ಯಾಂಕ್, ಕೇಂದ್ರ ಬ್ಯಾಂಕ್, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಎಂಬ ಅನೇಕ ಮಧ್ಯವರ್ತಿ ಸೊಸೈಟಿಗಳನ್ನು ಮಾಡಿರುವುದರಿಂದ ಹೆಚ್ಚು ಬಡ್ಡಿ ರೈತನ ಮೇಲೆ ಬೀಳುವಂತಾಗಿದೆ. ಈ ಅವ್ಯವಸ್ಥೆಯನ್ನು ತಪ್ಪಿಸಿ ರೈತನಿಗೆ ಅನುಕೂಲವಾಗುವ ರೀತಿಯಲ್ಲಿ ಸಹಕಾರ ಸಂಘಗಳನ್ನು ಬೆಳೆಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ರೋಡ್ ಟ್ರಾನ್ಸ್‌ಪೋರ್ಟ್ ವಿಷಯ ಮೊದಲು ಮಾತನಾಡುತ್ತೇನೆ. ಆ ಮೇಲೆ ಸಹಕಾರಕ್ಕೆ ಹೋಗುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳು ಹೇಗಿವೆ ಎಂದರೆ, 1967 ಚುನಾವಣೆಗಳು ಬಂದಾಗ ಸರ್ಕಾರ ಹೇಗೆ ಇದೆ ಎಂದು ಕೇಳಿದರೆ, ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ತೋರಿಸಿ ಅವು ಹೇಗೆ ಹೇಗೆ ಇವೆಯೋ ಹಾಗೆಯೇ ಸರ್ಕಾರವೂ ಇದೆ ಎಂದು ಹೇಳಿದರೆ ಜನಗಳಿಗೆ ತುಂಬ ಚೆನ್ನಾಗಿ ಅರ್ಥವಾಗುತ್ತದೆ. ಅವರು ಈ ಬಸ್ಸುಗಳಲ್ಲಿ ಸಂಚಾರ ಮಾಡಿಲ್ಲ ಎಂದು ಕಾಣುತ್ತದೆ. ಅವರೇನಾದರೂ ಸಂಚಾರ ಮಾಡಿದ್ದರೆ ಅವರಿಗೆ ಗೊತ್ತಾಗುತ್ತಿತ್ತು. ಈ ಬಸ್ಸುಗಳಲ್ಲಿ ಕೆಲವು ಪದಾರ್ಥಗಳಿರುತ್ತವೆ, ನಿಜವಾಗಿಯೂ ಕೂಡ ಅವರಲ್ಲಿ ಕುಳಿತುಕೊಳ್ಳುವವರು ಮೂಗು ಮುಚ್ಚಿ ಕುಳಿತುಕೊಳ್ಳಬೇಕಾಗುತ್ತದೆ. ಕೆಲವರಿಗೆ ಬಸ್ ಮಾರ್ಗಗಳ ಲೈಸೆನ್ಸ್ ಕೊಟ್ಟಿದ್ದಾರೆ. ಅವರು ತಿಂಗಳಿಗೆ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಾರೆ. ಅವರು ಮಂತ್ರಿಗಳ ಬಳಿ ಬರಬೇಕಾದರೆ ಗವರ್ನರ್ ಬಂದ ಹಾಗೆ ಬರುತ್ತಾರೆ. ಅವರು ಇಟ್ಟುಕೊಂಡಿರುವುದು ನಾಲ್ಕೈದು ಮಾರ್ಗಗಳು ಮಾತ್ರ. ಆದರೆ ಕೋಟ್ಯಂತರ ರೂಪಾಯಿ ಬಂಡವಾಳವನ್ನು ಹಾಕಿರುವ ಸರ್ಕಾರ, ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿಯೂ ನಷ್ಟದಲ್ಲಿ ನಡೆಯುತ್ತಿದೆ ಎಂದು ಹೇಳುತ್ತಾರೆ. ಖಾಸಗಿ ಬಸ್ ಮಾಲೀಕರು ಮಾತ್ರ ವಿಶೇಷವಾಗಿ ಸಂಪಾದನೆ ಮಾಡುತ್ತಿದ್ದಾರೆ. ಇದಕ್ಕೆ ಕಾರಣವಾದರೂ ಏನು ಎನ್ನುವುದನ್ನು ಕಂಡು ಹಿಡಿಯಬೇಕು.

ಸರ್ಕಾರಿ ಬಸ್ಸುಗಳಲ್ಲಿ ಕಂಡಕ್ಟರುಗಳು ಒಂದು ಕೋಲನ್ನು ಇಟ್ಟುಕೊಂಡಿರುತ್ತಾರೆ. ಬಸ್ ಹೊರಡಬೇಕಾದರೆ ಡಬ್ಬ ಹೊಡೆದ ಹಾಗೆ ಎರಡು ಸಲ ಹೊಡೆದು ಬಸ್ ಹೊರಡಬಹುದು ಎಂದು ಹೇಳುತ್ತಾನೆ. ಅನಂತರ ಡ್ರೈವರಿಗೂ ಕಂಡಕ್ಟರಿಗೂ ಸ್ವಲ್ಪ ಸಂಭಾಷಣೆ ಆದ ಮೇಲೆ ಬಸ್ ಮುಂದೆ ಹೋಗುತ್ತದೆ. ಈ ಬಸ್ಸುಗಳಿಗೆ ಮೊದಲು ಬೆಲ್‌ಗಳನ್ನು ಹಾಕಿದ್ದರು. ಅವೆಲ್ಲ ಎಲ್ಲಿ ಹೋದುವೋ ಗೊತ್ತಿಲ್ಲ. ಇವರ ಜೊತೆಗೆ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ನಿನವರು ಜನಗಳಿಗೆ ಏನು ಸೌಕರ್ಯವನ್ನು ಮಾಡಿಕೊಡುತ್ತಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ತಿಪಟೂರಿನಿಂದ ಚನ್ನರಾಯಪಟ್ಟಣ, ನುಗ್ಗೇಹಳ್ಳಿ ಮಾರ್ಗವಾಗಿ 7 ಬಸ್ಸುಗಳು ಸಂಚಾರ ಮಾಡುತ್ತಿದ್ದುವು. ಇವರಲ್ಲಿ ಐದು ಬಸ್ಸುಗಳನ್ನು ತೆಗೆದು ಹಾಕಿದರು. ಕಾರಣವೇನು ಎಂದು ಕೇಳಿದರೆ ಕಲೆಕ್ಷನ್ ಇಲ್ಲ ಎಂದು ಹೇಳಿದರು. ಕಂಡಕ್ಟರನಾದವನು ತಾನು ಸ್ವಲ್ಪ ಹಣವನ್ನು ಸಂಪಾದನೆ ಮಾಡಿಕೊಂಡು, ಚೆಕಿಂಗ್ ಬರುವವರೆಗೆಲ್ಲ ತನ್ನ ಸಂಪಾದನೆಯಲ್ಲಿ ಕೊಟ್ಟು, ಉಳಿದುದನ್ನು ತಾನು ತೆಗೆದುಕೊಳ್ಳಬೇಕು. ಈ ರೀತಿ ನಡೆಯುವುದನ್ನು ಪರೀಕ್ಷೆ ಮಾಡಬೇಕೆಂದು ನಾವು ಒಂದೆರಡು ಸಾರಿ ರಸ್ತೆಯಲ್ಲಿ ನಿಂತುಕೊಂಡು ಬಸ್ ನಿಲ್ಲಿಸಬೇಕೆಂದು ಕೈ ತೋರಿಸಿದಾಗ ನಿಲ್ಲಿಸಲಿಲ್ಲ. ಯಾರಾದರೂ ಬೆಳ್ಳಗೆ ಬಟ್ಟೆ ಹಾಕಿಕೊಂಡಿದ್ದರೆ ಬಸ್ಸನ್ನು ನಿಲ್ಲಿಸುವುದಿಲ್ಲ. ಹೀಗಾದರೆ ಬಸ್‌ಗಳಲ್ಲಿ ಕಲೆಕ್ಷನ್ ಉತ್ತಮವಾಗುವುದು ಹೇಗೆ ಎನ್ನುವುದು ಗೊತ್ತಾಗುವುದಿಲ್ಲ. ಮಂತ್ರಿಗಳಾಗಲೀ ಅಥವಾ ಸಂಬಂಧಪಟ್ಟ ಅಧಿಕಾರಿಗಳಾಗಲೀ ಅಲ್ಲಲ್ಲಿ ಚೆಕಿಂಗ್ ನಡೆಸಿ ಬಸ್‌ಗಳಲ್ಲಿ ಸೋರಿ ಹೋಗುತ್ತಿರುವ ವಸೂಲಿಯನ್ನು ತಡೆಗಟ್ಟಬೇಕು. ನುಗ್ಗೇಹಳ್ಳಿ, ಗಂಡಸಿ ಸಂತೆಗಳು ನಡೆಯುವಾಗ ಒಂದು ದಿವಸಕ್ಕೆ ಸುಮಾರು 8–9 ಟ್ಯಾಕ್ಸಿಗಳು ಜನರನ್ನು ತುಂಬಿಕೊಂಡು ಜನಗಳನ್ನು ಸಾಗಾಣಿಕೆ ಮಾಡುತ್ತಿದ್ದಾರೆ. ಹೀಗಿದ್ದರೂ ಸರ್ಕಾರದ ಬಸ್‌ಗಳಿಗೆ ಏಕೆ ಕಲೆಕ್ಷನ್ ಆಗುವುದಿಲ್ಲ ಎನ್ನುವುದನ್ನು ಕಂಡು ಹಿಡಿಯಲು ಪ್ರಯತ್ನ ಮಾಡಬೇಕು.

6-00 P.M.

ಈ ಲೋಪದೋಷಗಳಿಗೆ ಕಾರಣ ಸಾಮಾನ್ಯ ಮನುಷ್ಯನಾದ ಕಂಡಕ್ಟರ್ ಅಲ್ಲ, ಪಾಪ ಅವನೇನು ಮಾಡಬಲ್ಲ; ಅವನ ಒಬ್ಬನ ದೋಷವಲ್ಲ. ಮೆಜೆಸ್ಟಿಕ್‌ಗೆ ಬಸ್ ಬಂದು ನಿಂತಾಗ ಕೆಟ್ಟು ಹೋಗಿದೆ, ಮುಂದೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ನಂತರ ಬೇರೆ ಬಸ್ಸಿನಲ್ಲಿ ಹೋಗಬೇಕು, ಇದನ್ನೆಲ್ಲಾ ಸದಸ್ಯರಾದ ನಾವುಗಳು ಅನುಭವಿಸಿದ್ದೇವೆ. ಒಳ್ಳೆಯ ಬಸ್ ಒಳ್ಳೆಯ ಲೈನ್ ಸಿಗಬೇಕಾದರೆ ಆಫೀಸಿನಲ್ಲಿ ಕೆಲವರನ್ನು ನೋಡಿಕೊಳ್ಳಬೇಕಾಗುತ್ತದೆ. 700 ರೂಪಾಯಿ ಕಲೆಕ್ಷನ್ ಆಗುವುದಿದ್ದರೆ ಒಳ್ಳೆಯ ಬಸ್ ಕೊಡುತ್ತಾರೆ. ಇವತ್ತು ಇದ್ದ ಬಸ್ ಡ್ರೈವರ್ ಕಂಡಕ್ಟರ್‌ಗಳು ನಾಳೆ ಇರುವುದಿಲ್ಲ, ಬೇರೆ ಲೈನಿಗೆ ಹೋಗುತ್ತಾರೆ. ಏನಾದರೂ ಬಸ್ ಕೆಟ್ಟು ಹೋಗಿದ್ದರೆ, ಅದರ ತಪ್ಪನ್ನು ಯಾರ ಮೇಲೂ ಹಾಕುವುದಕ್ಕಾಗುವುದಿಲ್ಲ. ಈ ರೀತಿ ಇರಬಾರದು. ಒಂದು ಆರು ತಿಂಗಳವರೆಗೆ ಅಥವಾ ಒಂದು ವರ್ಷದ ವರೆಗೆ ಒಂದು ಲೈನ್‌ಗೆ ಒಂದೇ ಬಸ್, ಮತ್ತು ಕಂಡಕ್ಟರ್ ಮತ್ತು ಡ್ರೈವರ್‌ಗಳು ಅವರೇ ಇರಬೇಕು. ಒಂದು ಸಾರಿ ತಿಪಟೂರಿನಿಂದ ಬೆಂಗಳೂರಿಗೆ ಹೊರಟಾಗ, ತುಮಕೂರಿಗೆ ಬಂದಾಗ ಬಸ್ ಕೆಟ್ಟಿದೆ, ಬೇರೆ ಬಸ್ಸಿಗೆ ಹತ್ತಿ ಎಂದು ಹೇಳಿದರು. ಬೇರೆ ಯಾರೋ ಆ ಬಸ್ಸನ್ನು ನೋಡಿ ಏನೋ ಸ್ವಲ್ಪ ಕೆಟ್ಟಿದೆ, ರಿಪೇರಿ ಮಾಡಬಹುದು ಎಂದು ಹೇಳಿದರು. ಅದರ ಮೇಲೆ ಡ್ರೈವರ್—ಸರಿ ಮಾಡಿ ಮತ್ತೆ ಒಂದು ಗಂಟೆಯಾದ ಮೇಲೆ ಅದೇ ಬಸ್ಸನ್ನು ಹೊರಡಿಸಿದ.

MR. SPEAKER.—The House will now rise and meet tomorrow at 8-30 A.M.

The House adjourned at Two Minutes past Six of the Clock to meet again at Thirty Minutes past Eight of the Clock on Saturday, the 26th March 1966.

WD 6690—GPB—500—25-6-1966.

MYSORE LEGISLATIVE ASSEMBLY

Monday, 28th March 1966.

The House met in the Assembly Chamber, Vidhana Soudha Bangalore, at One of the Clock.

Mr. SPEAKER [SRI B. VAIKUNTA BALIGA, B.A., B.L. in the Chair]

STARRED QUESTIONS

(to which oral answers were given)

Facilities provided to Ryots in Tumkur District to save the existing crops.

*Q.—106. Sri K. LAKKAPPA (Hebbur).—

Will the Government be pleased to state :—

(*a*) the steps the Government has taken to save existing crops in several Taluks including Tumkur Taluk, Tumkur District;

(*b*) the crops that have been saved up to date by providing immediate facilities such as electricity pumpsets and sinking of wells and the extent saved ?

A.—Sri H. C. BORAIAH (Parliamentary Secretary to Minister for Agriculture).—

(*a*) Adequate funds were placed at the disposal of Divisional Commissioners and Deputy Commissioners for the purchase of irrigation pumpsets for being hired out to farmers to have their standing crops.

(*b*)

Crop		*Extent saved in acres*
Paddy	...	3,154
Ragi	...	3,695
Rabi Jowar	...	1,700
Bengalgram	...	2,800
Vegetables	...	150
		11,499

Sri K. LAKKAPPA.—You have stated that adequate funds have been allotted to the Divisional Commissioner and Deputy Commissioner. What were the demands put forth by the Deputy Commissioners and what were the amounts alloeted ?

Mr. SPEAKER.—If it is a long list, it may be placed on the Table. If it is a short one, it can be read.

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರದವರು ಒಂದೊಂದು ಡಿವಿಜನ್ನಿಗೂ ಇಷ್ಟಿಷ್ಟು ಹಣ ಎಂದು ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ತಮಗೆ ಎಷ್ಟು ಹಣ ಬೇಕು ಎಂದು ಡಿವಿಜನಲ್ ಕಮಿಷನರಿಗೆ ಬರೆದು ತರಿಸಿಕೊಂಡಿದ್ದಾರೆ. ಆ ಪ್ರಕಾರವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಯಾವ ಯಾವ ಡಿವಿಜನ್ನಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದೆ ಎಂಬುದಕ್ಕೆ ಸಂಬಂಧಪಟ್ಟ ಆರ್ಡರುಗಳನ್ನು ಬೇಕಾದರೆ ಸಭೆಯ ಮುಂದೆ ಇಡುವುದಕ್ಕೆ ಸಿದ್ಧನಾಗಿದ್ದೇನೆ.

Sri K. LAKKAPPA.—On account of delay in providing funds to save existing crops, the full crops that were on the verge, they have not been saved, due to the inefficiency of the Government and in not providing funds at proper times to purchase oil engines and electric pumpsets and to dig wells. Is it not a fact ?

ಶ್ರೀ ಎಚ್. ಸಿ. ಬೋರಯ್ಯ.—ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ಪರಿಶೀಲಿಸಿದರೆ ಮಾನ್ಯ ಸದಸ್ಯರಿಗೇ ಅರ್ಥವಾಗುತ್ತದೆ. 11,499 ಎಕರೆಯಲ್ಲಿ ಇದ್ದಂಥ ಫಸಲನ್ನು ರಕ್ಷಿಸುವುದಕ್ಕೆ ಸಾಧ್ಯವಾಗಿದೆ. ಜಿಲ್ಲಾಧಿಕಾರಿಗಳು 110 ಪಂಪ್‌ಸೆಟ್‌ಗಳನ್ನು ಕೊಂಡುಕೊಂಡಿದ್ದಾರೆ. ಅದೇ ರೀತಿ ತಾಲ್ಲೂಕು ಬೋರ್ಡಿನವರು 10 ಪಂಪ್‌ಸೆಟ್‌ಗಳನ್ನು ಕೊಂಡುಕೊಂಡಿದ್ದಾರೆ. ಇವುಗಳನ್ನು ಬಾಡಿಗೆಗೆ ರೈತರಿಗೆ ಹಂಚಿದ್ದಾರೆ. ಇದಲ್ಲದೆ ಅಲ್ಲಿ ಅಪೂರ್ಣವಾಗಿದ್ದ 410 ಬಾವಿಗಳನ್ನು ಪೂರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇದರ ಜೊತೆಗೆ ಸುಮಾರು 2,100 ಐ. ಪಿ. ಸೆಟ್‌ಗಳು ಮತ್ತು 36 ಡೀಸೆಲ್ ಆಯಿಲ್ ಸೆಟ್‌ಗಳನ್ನು ರೈತರಿಗೆ ಮುಂಜೂರು ಮಾಡಿದ್ದೇವೆ. ವಿದ್ಯುಚ್ಛಕ್ತಿ ಇಲಾಖೆಯವರು ಸುಮಾರು 754 ಐ. ಪಿ. ಸೆಟ್‌ಗಳಿಗೆ ಸರ್ವಿಸ್ ಮಾಡಿದ್ದಾರೆ. ಅಂದ ಮೇಲೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳು ಎಷ್ಟು ಅಗಾಧವಾಗಿವೆ ಎನ್ನುವುದು ಗೊತ್ತಾಗುತ್ತದೆ.

Sri K. LAKKAPPA.—Has it not come to the notice of the Government that even at the time Government passed orders, the crops were withering away and that orders of Government were passed to save them ? But those crops have not been saved till today and no action has been taken in several places in the Tumkur District.

Mr. SPEAKER.—Are the crops still there ?

Sri K. LAKKAPPA.—They did not save the crops, and no action has been taken to raise the second crop even. Till today such cases are there.

ಶ್ರೀ ಎಚ್. ಸಿ. ಬೋರಯ್ಯ.—ಬಹುಶಃ ಮಾನ್ಯ ಸದಸ್ಯರು ಸತ್ಯಕ್ಕೆ ದೂರವಾದ ವಿಷಯಗಳನ್ನು ಹೇಳುತ್ತಿದ್ದಾರೆ. ನಮಗೆ ವಿಶದವಾದ ಒಂದು ರಿಪೋರ್ಟ್ ಬಂದಿದೆ. ಜಿಲ್ಲಾಧಿಕಾರಿಗಳು ಕೈಕೊಂಡಿರತಕ್ಕ ಕ್ರಮಗಳನ್ನೆಲ್ಲ ನೋಡಿದರೆ ಸರ್ಕಾರದಿಂದ ಏನು ನಿರೀಕ್ಷಣೆ ಮಾಡಬಹುದಾಗಿತ್ತೋ ಅದಕ್ಕಿಂತಲೂ ಹೆಚ್ಚಿಗೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದು ವ್ಯಕ್ತವಾಗುತ್ತದೆ.

Sri K. LAKKAPPA.—What were the demands of the public to the Deputy Commissioner for the supply of pumpsets, etc., and how many are from the Tumkur District and taluk ? Please give details.

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳನ್ನು ಕೊಡುವುದು ಸ್ವಲ್ಪ ಕಷ್ಟವಾಗುತ್ತದೆ. ಜಿಲ್ಲಾಧಿಕಾರಿಗಳು ಏನೇನು ಕೇಳುತ್ತಾರೆಯೋ ಅಷ್ಟನ್ನೂ ಕೂಡ ನೆರವೇರಿಸಿಕೊಡುವುದಕ್ಕೆ ಅಥವಾ ತರಿಸಿಕೊಡುವುದಕ್ಕೆ ಸರ್ಕಾರ ಆಜ್ಞೆ ಮಾಡಿದೆ. ಅದೇ ಪ್ರಕಾರವಾಗಿ ಒಂದು ಸಾರಿ 45 ಲಕ್ಷ ರೂಪಾಯಿ, ಇನ್ನೊಂದು ಸಾರಿ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಆದ್ದರಿಂದ ದುಡ್ಡಿನ ವಿಚಾರದಲ್ಲಿ ಅಭಾವವಿರಲಿಲ್ಲ. ಸರ್ಕಾರ ಹಣ ಕೊಡುವುದಕ್ಕೆ ಸಿದ್ಧನಾಗಿದ್ದು, ಹಣವನ್ನು ಕೊಡುತ್ತಿತ್ತು ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಸರ್ಕಾರದವರು ಬಾಡಿಗೆಗೆ ಕೊಟ್ಟಿರುವ ಆಯಿಲ್ ಇಂಜಿನ್‌ಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಸರ್ಕಾರದವರು ನೋಡದೇ ಇರುವುದರಿಂದ ಆ ಇಂಜಿನ್‌ಗಳನ್ನು ಅರ್ಧ ಬೆಲೆಗೆ ರೈತರಿಗೇ ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇದು ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಪ್ರಶ್ನೆ. ಅಲ್ಲಿ 110 ಪಂಪ್‌ಸೆಟ್‌ಗಳನ್ನು ತೆಗೆದುಕೊಂಡಿದ್ದೇವೆ. ಈಗ ಇರುವ ಕಷ್ಟ ಪೂರೈಸಿದ ಮೇಲೆ ಅವುಗಳನ್ನು ಯಾವ ರೀತಿ ವಿಲೇವಾರಿ ಮಾಡಬೇಕು ಎನ್ನುವುದನ್ನು ಮುಂದೆ ಸರ್ಕಾರದವರು ಯೋಚನೆ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಯಿಲ್ ಇಂಜಿನ್‌ಗಳನ್ನು ಕಳುಹಿಸಿದಿರಿ. ಇದಾದ ಎಷ್ಟು ದಿವಸಕ್ಕೆ ಅದಕ್ಕೆ ಬೇಕಾದ ಉಪಕರಣಗಳನ್ನು ತರಿಸಲಾಯಿತು, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಯಾವ ಯಾವ ಜಿಲ್ಲಾಧಿಕಾರಿಗಳು ಹಣ ಬೇಕು ಎಂದು ಅಪೇಕ್ಷೆ ಪಟ್ಟರೋ ಅವರಿಗೆ ಹಣವನ್ನು ಕೊಟ್ಟೆವು. ಆ ಪ್ರಕಾರವಾಗಿ ಅವರು ಇಂಜಿನ್‌ಗಳನ್ನು ತರಿಸಿ ಕೊಂಡಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಯಿಲ್ ಇಂಜಿನ್ನುಗಳು ಬಂದಮೇಲೆ ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್‌ಗಳು ಬರದೆ ಎರಡು ತಿಂಗಳು ಈ ಯಂತ್ರಗಳು ತಾಲ್ಲೂಕು ಆಫೀಸು ಮತ್ತು ಜಿಲ್ಲಾಧಿಕಾರಿಗಳ ಆಫೀಸು ಮುಂದೆ ಬಿದ್ದಿದ್ದುವು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅಂಥ ಪುಕಾರುಗಳು ಬಹಶಃ ಇಲ್ಲಿಯವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇಂಜಿನ್‌ಗಳು ಯಾವಾಗ ಬಂತು ? ಅದಕ್ಕೆ ಬೇಕಾದ ಸ್ಪೇರ್ ಪಾರ್ಟುಗಳು ಯಾವಾಗ ಬಂತು ಎನ್ನುವುದು ರಿಕಾರ್ಡ್‌ನಲ್ಲಿದೆ. ಈ ಬಗ್ಗೆ ನಾವು ಟೆಲಿಗ್ರಾಂ ಕೊಟ್ಟು, ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದೇವೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಜಿಲ್ಲೆಯಲ್ಲಿ ರಕ್ಷಣೆ ಮಾಡಿರುವ ಬೆಳೆಯನ್ನು ಗಮನದಲ್ಲಿಟ್ಟು ಕೊಳ್ಳುವುದಾದರೆ 120 ಪಂಪ್‌ಸೆಟ್‌ಗಳ ಹಂಚಿಕೆ ಮತ್ತು ಇತರ ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುವುದನ್ನು ನೋಡಿದರೆ, ಸಾಮಾನುಗಳು ಬರುವುದಕ್ಕೆ ತಡವಾಗಿರಲಾರದು ಎಂದು ತಿಳಿದುಕೊಳ್ಳಬಹುದಾಗಿದೆ.

Sites Allotted to the Charitable and Educational Institutions in Bangalore.

*Q.—288. Smt. NAGARATHNAMMA HIREMATH (Gandhinagar).—

Will the Government be pleased to state :—

(a) the number of sites allotted to the Charitable and Educational Institutions in Bangalore, since 1962, by the City Improvement Trust Board, Bangalore free of cost, at concessional rates and on stipulated lease basis ;

(b) the names of such institutions of various communities to which sites have been allotted by the City Improvement Trust Board free of cost, at concessional rates and on stipulated lease basis ;

(c) the names of organisers, or Dharmadarshies of the above institutions who have so secured the sites ?

A.—Sri Y. RAMACHANDRA (Deputy Minister for Municipal Administration).—

(a) Total number of sites so allotted are 55 in all the Extensions of the Board.

Free of Cost	Nil
Concessional rates	4
Stipulated lease basis	46
Upset price	5

(SRI Y. RAMACHANDR)

ಇನ್ನು ಮೈನರ್ ಇರ್ರಿಗೇಷನ್ ವಿಷಯ. ಈ ಯೋಜನೆಯಲ್ಲಿ ಸುಮಾರು 79 ಲಕ್ಷರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಸುಮಾರು 15 ಲಕ್ಷ 20 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಬೆಳೆಗಳಿಗೆ ಪ್ರೊಟೆಕ್ಷನ್ ತಂದಿದ್ದಾರೆ. ಆದರೂ ಇದು ಸಾಲದು. ಶ್ರೀಮಾನ್ ಕೂಂದೂರು ರುದ್ರಪ್ಪನವರು ಬೆಳೆಗಳಿಗೆ ಬೀಳತಕ್ಕ ರೋಗಗಳನ್ನು ನಿವಾರಣೆಮಾಡುವುದಕ್ಕೆ ಸಾಕಷ್ಟು ಔಷಧಿಗಳು ಸಿಗುತ್ತಾ ಇಲ್ಲವೆಂದು ಹೇಳಿದರು. ನಾನು ಅದನ್ನು ಸಮರ್ಥನೆಮಾಡುತ್ತಾ ಈ ವಿಚಾರದಲ್ಲಿ ಹಾಗೂ ಕೆಲವು ಕ್ರ್ಯಾಷ್ ಪ್ರೋಗ್ರಾಂಗಳಿಗೆ ಸರ್ಕಾರದವರು ಹೆಚ್ಚು ಹಣ ಕೊಟ್ಟು ಸಂಬಂಧಪಟ್ಟ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚು ಮಾಡುವುದರ ಮೂಲಕ ಇಲಾಖೆಗಳ ಕೆಲಸವನ್ನು ಚೆನ್ನಾಗಿ ಮಾಡಿಕೊಂಡರೆ ಒಳ್ಳೆಯದು.

ಇನ್ನು ಅನಿಮಲ್ ಹಸ್ಬೆಂಡ್ರಿ ಇಲಾಖೆಗೆ ಸರ್ಕಾರದವರು ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ. ನಿಜವಾಗಿ ಈ ಇಲಾಖೆಗೆ ಎಷ್ಟು ಹಣವನ್ನು ಕೊಟ್ಟಿತ್ತೋ ಅದೆಲ್ಲವನ್ನೂ ಖರ್ಚುಮಾಡಿದ್ದಾರೆ. ಅದಕ್ಕಿಂತಲೂ ಹೆಚ್ಚಿಗೆ ಖರ್ಚುಮಾಡಿದ್ದಾರೆಂದು ಹೇಳಬಹುದು. ಕೇಂದ್ರ ಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂಗಳಿಗೆ ಕೊಟ್ಟಿದ್ದಂಥ ಹಣವನ್ನು ನಮ್ಮ ಇಲಾಖೆಯವರು ಖರ್ಚುಮಾಡಿ ಅನೇಕ ಯೋಜನೆಗಳನ್ನು ಕಾರ್ಯಗತಮಾಡುತ್ತಿದ್ದಾರೆ. ಆದರೆ ಇಷ್ಟೇ ಸಾಕು ಎಂಬುದಾಗಿ ತೃಪ್ತಿಪಟ್ಟುಕೊಂಡು ಸರ್ಕಾರದವರನ್ನು ಶಹಬಾಸುಗಿರಿ ಮಾಡುವುದಿಲ್ಲ.

ಇನ್ನು ಆಹಾರ ಕೊರತೆಯನ್ನು ಸರ್ವ ಪ್ರಯತ್ನಮಾಡಿ ನೀಗಿಸಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ರಾಗಿಯ ಕೊರತೆ ಇಲ್ಲ. ಅಕ್ಕಿ ನಮಗೆ ಕಡಮೆ ಬಂದಿದೆ. ಅದು ಸ್ವಲ್ಪ ದಿನ ಇದೇ ದಾಟಿಯಲ್ಲಿ ಹೋಗಿ ಮುಂದೆ ಹೆಚ್ಚುಹೆಚ್ಚು ಬೆಳೆಯುವುದಕ್ಕೆ ಪ್ರಯತ್ನಮಾಡಬೇಕು. ಸರ್ಕಾರದವರು ರೈತರಿಗೆ ಗೊಬ್ಬರ, ಬೀಜಗಳನ್ನು ಕೊಡುವುದಲ್ಲದೆ ಹೆಚ್ಚಿಗೆ ಹಣ ಸಹಾಯವನ್ನು ಮಾಡಿದರೆ ಬಹುಶಃ ಈಗಿರತಕ್ಕ ಆಹಾರ ಕೊರತೆಯನ್ನು ನೀಗಿ ಪರರಾಜ್ಯಗಳಿಗೆ ನಾವು ಸಹ ಆಹಾರವನ್ನು ಕಳುಹಿಸಬಹುದು. ಆದರೆ ಆಂಧ್ರ, ಮದ್ರಾಸ್ ರಾಜ್ಯಗಳು ಬಹಳ ಅಡ್ವಾಂಟೇಜಿಯಸ್ ಪೊಜಿಷನ್ನಿನಲ್ಲಿದೆ. ಆ ರೀತಿಯಾದಂಥ ಪೊಜಿಷನ್ ಮೈಸೂರಿನಲ್ಲಿಯೂ ಒಂದೆರಡು ವರ್ಷಗಳಲ್ಲಿ ಬರಬಹುದು. ಅದರಲ್ಲಿ ಯಾವ ಸಂದೇಹವು ಇಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಮೀನು ಸಂಪತ್ತಿನ ವಿಷಯವಾಗಿ ಹೇಳಬೇಕಾದರೆ ನಾನು ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ನೋಡಿದೆ. ಬಹಳ ಚೆನ್ನಾಗಿ ಕೆಲಸಗಳು ನಡೆದಿವೆ. ಕ್ರ್ಯಾಷ್ ಪ್ರೋಗ್ರಾಂನಲ್ಲಿ ಎಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರೋ ಎಲ್ಲಾ ಹಣವನ್ನೂ ಪೂರ್ತಿಯಾಗಿ ಖರ್ಚುಮಾಡಿದ್ದಾರೆ. ತುಂಗಭದ್ರಾ ಅಣೆಕಟ್ಟಿನ ಕೆಳಗೆ.........

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮೀನಿನ ವಿಷಯವನ್ನು ಮಾನ್ಯ ಶ್ರೀ ಗಾಂಜಿ ವೀರಪ್ಪನವರು ಮಂಗಳೂರಿಗೆ ಹೋಗಿ ಬಂದು ಚೆನ್ನಾಗಿ ತಿಳಿದಿದ್ದೇನೆಂದು ಹೇಳಿದರು. ಅದರಲ್ಲಿ ಅವರಿಗೆ ಅನುಭವವಿದೆಯೇ !

ಶ್ರೀ ಗಾಂಜಿ ವೀರಪ್ಪ.—ಮೀನು ತಿಂದರೇನೇ ಮೀನು ಇಲಾಖೆಯ ಅನುಭವ ಇರುತ್ತದೆಂದು ಮಾನ್ಯ ಸದಸ್ಯರು ಹೇಳಬಹುದು. ಆದರೆ ನಾನು ಮೀನು ತಿನ್ನುವುದಿಲ್ಲ. ಈ ಮೀನಿನ ಅಭಿವೃದ್ಧಿ ಬಗ್ಗೆ ಸಾಕಷ್ಟು ಮಾಹಿತಿಯನ್ನು ತಿಳಿಯಲಿಕ್ಕೆ ಪ್ರಯತ್ನಮಾಡಿದ್ದೇನೆ. ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿ ಹೆಚ್ಚು ಹಣ್ಣುಗಳನ್ನು ಬೆಳೆಯುವುದಕ್ಕೆ ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕಾಗಿದೆ. ಇದು ಈಗಿನ ಆಹಾರ ಕೊರತೆಯನ್ನು ನೀಗಲಿಕ್ಕೆ ಸಹಕಾರಿಯಾಗಿರುತ್ತದೆ. ಹಾಗೆಯೇ ಹೆಚ್ಚಿಗೆ ಮೀನಿನ ಉತ್ಪತ್ತಿಯೂ ಆಗಬೇಕಾಗಿದೆ. ಮೀನು ಬಹಳ ಒಳ್ಳೆಯ ಆಹಾರ. ಸಮುದ್ರತೀರದಲ್ಲಿ ವಾಸಿಸುವವರು ಬರೀ ಮೀನನ್ನೇ ಬಯಸುತ್ತಾರೆ. ಇದು ಬಹಳ ಪುಷ್ಟಿಕರವಾದ ಆಹಾರ. ಮೀನು ತಿಂದವರು ಬಹಳ ಬುದ್ಧಿವಂತರಾಗಿರುತ್ತಾರೆ. ಏಕೆಂದರೆ ಅದರಲ್ಲಿ ಎಲ್ಲಾ ಆಹಾರಾಂಶಗಳು ಒಳಗೊಂಡಿರುತ್ತವೆ. ಅದರಿಂದಲೇ ಮೀನಿನ ಸಂಪತ್ತಿನ ಬಗ್ಗೆ ಹೆಚ್ಚು ಮಾಹಿತಿಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಿದ್ದೇನೆ. ಈ ವಿಚಾರದಲ್ಲಿ ಸರ್ಕಾರದವರು ಇನ್ನೂ ಹೆಚ್ಚಿಗೆ ಹಣವನ್ನೊದಗಿಸಿ ಮೀನಿನ ಅಭಿವೃದ್ಧಿಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ತುಂಗ

ಭದ್ರಾಕ್ಕೆ ಹೋದರೆ ಅಲ್ಲಿ ಒಂದ ದೊಡ್ಡಏರಿಯಾದಲ್ಲಿ ಮೀನು ಬೆಳೆಸಲಿಕ್ಕೆ ಅನುಕೂಲವಾಗಿದೆ. ಸುಮಾರು 146 ಚದುರಮೈಲಿಗಳಷ್ಟು ಏರಿಯಾದಲ್ಲಿ ತುಂಗಭದ್ರಾ ಡ್ಯಾಂ ಹತ್ತಿರ ಮೀನನ್ನು ಬೆಳೆಸ ಬಹುದು. ಒಂದು ಯೋಜನೆಯನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಬೇಕಾಗಿದೆ. ಕಲ್ಕತ್ತಾ ಮತ್ತು ಇತರ ಕಡೆಗಳಲ್ಲಿ ಸಣ್ಣಸಣ್ಣ ಬೀಜದ ಮೀನುಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ ನಾವು ಯಾವ ರೀತಿಯಲ್ಲಿ ಇಂಪ್ರೂವ್ಡ್ ಸೀಡ್ಸ್‌ನಿಂದ ಹೈಬ್ರಿಡ್ ಜೋವರ್ ಮುಂತಾದುವನ್ನು ಬೆಳೆಸುತ್ತೇವೋ ಹಾಗೆ ಈ ಮೀನುಗಳನ್ನು ಒಳನಾಡಿನಲ್ಲಿರತಕ್ಕ ಸಣ್ಣ ಸಣ್ಣ ಕೆರೆಗಳಲ್ಲಿ ಬೆಳೆಸಿದರೆ ಸಮುದ್ರ ತೀರದಲ್ಲಿರುವವರು ಮೀನು ತಿಂದು ಸುಖವಾಗಿ ಜೀವನಮಾಡುವುದಕ್ಕೆ ಅನುಕೂಲವಾಗುತ್ತದೆ. ಸಣ್ಣಸಣ್ಣ ನದಿಗಳಲ್ಲಿ ಮತ್ತು ಕೆರೆಗಳಲ್ಲಿ ಇರತಕ್ಕ ಮೀನನ್ನು ಹಿಡಿದುಕೊಂಡು ಬಂದು ತಿನ್ನುವ ಅಪೇಕ್ಷೆ ಇರುವ ಜನರಿಗೆ ಅದರಿಂದ ಅನುಕೂಲವಾಗುತ್ತದೆ. ಆಹಾರದ ಕೊರತೆಯೂ ಕೂಡ ಕಡಮೆ ಯಾಗುತ್ತದೆ. ಮೀನನ್ನು ಬೆಳೆಯುವ ಯೋಜನೆಯನ್ನು ಮೀನಿನ ಇಲಾಖೆಯವರು ಇನ್ನೂ ಹೆಚ್ಚಿಗೆ ಮಾಡಿದರೆ ಅದರಿಂದ ಪ್ರಯೋಜನವಾಗುತ್ತದೆ. ಇನ್ನು ಹೆಚ್ಚು ಅಂಕಿಅಂಶಗಳನ್ನು ಕೊಡುವ ಉದ್ದೇಶ ನನಗಿಲ್ಲ. ಕೇಂದ್ರ ಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂಗೆ ಕೊಟ್ಟಿರತಕ್ಕ ಹಣವನ್ನು ನಮ್ಮ ಸರ್ಕಾರದವರು ಪೂರ್ತಿಯಾಗಿ ಖರ್ಚುಮಾಡಿದ್ದಾರೆ,

ಇನ್ನು ನಮ್ಮ ವ್ಯವಸಾಯ ಇಲಾಖೆಯವರ ಮೇಲೆ ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿದ್ದರಿಂದ ಅನೇಕ ಸ್ಥಾನಗಳನ್ನು ಭರ್ತಿಮಾಡಲಿಲ್ಲ. ಆ ಅಡಚಣೆ ನಿವಾರಣೆಯಾದ ತಕ್ಷಣ ಎಲ್ಲಾ ಹುದ್ದೆಗಳನ್ನೂ ನ್ಯಾಯವಾಗಿ ಭರ್ತಿಮಾಡುತ್ತಾರೆ. ಅದಕ್ಕೋಸ್ಕರ ಸರ್ಕಾರದವರು ಈ ಇಲಾಖೆಯಲ್ಲಿ ಇನ್ನೂ ಹುದ್ದೆಗಳನ್ನು ಭರ್ತಿಮಾಡಲಿಲ್ಲ. ಅವರ ದೌರ್ಬಲ್ಯವನ್ನು ತೋರಿಸಲಿಲ್ಲ. ಕಾನೂನು ಅಡಚಣೆ ಇದ್ದುದರಿಂದ ಮಾಡಲಿಲ್ಲ. ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ ಇರತಕ್ಕ ತೊಡಕುಗಳನ್ನು ಬಗೆಹರಿಸಿದ್ದಾರೆ. ಒಟ್ಟಿನಲ್ಲಿ ವ್ಯವಸಾಯ ಇಲಾಖೆ ಬಹಳ ತಿಳುವಳಿಕೆಯಿಂದ ಕೆಲಸಮಾಡಿದೆ. ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ನಗದು ರೂಪವಾಗಿ ರೈತರಿಗೆ ವ್ಯವಸಾಯ ಸಾಮಗ್ರಿಗಳನ್ನು ಕೊಡುವುದು ಅಷ್ಟೇ ಅಲ್ಲ, ಅವನ್ನು ಹೈರ್ ಪರ್ಚೇಜ್ ಸಿಸ್ಟಂನಲ್ಲಿ ಕೊಡುವುದು ಒಳ್ಳೆಯದು. ಪುಕ್ಕಟೆಯಾಗಿ ಬೀಜಗಳನ್ನು ರೈತರಿಗೆ ಒದಗಿಸುವುದು ಒಂದು ಒಳ್ಳೆಯ ವ್ಯವಸ್ಥೆ. ಸುಮಾರು 10 ಅಥವಾ 20 ಎಕರೆಗಳಲ್ಲಿ ಸಣ್ಣಸಣ್ಣ ಯಂತ್ರಗಳನ್ನು ಉಪಯೋಗಿಸಿ ವ್ಯವಸಾಯ ಮಾಡಿದರ ಹೆಚ್ಚು ಆಹಾರವನ್ನು ಬೆಳೆಯಬಹುದು. ಇತ್ತೀಚೆಗೆ ವ್ಯವಸಾಯಕ್ಕನುಕೂಲವಾಗುವಂತಹ ಸಣ್ಣಸಣ್ಣ ಟ್ರ್ಯಾಕ್ಟರುಗಳನ್ನು ಪರದೇಶದವರು ಮಾಡಿದ್ದಾರೆ. ಇಲ್ಲಿಯೂ ಅದೇ ರೀತಿಯಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡುತ್ತೇವೆಂಬ ಯೋಚನೆ ನಮ್ಮ ಸರ್ಕಾರಕ್ಕೆ ಇದೆಯೆಂಬ ಅಂಶವನ್ನು ನಾನು ಪತ್ರಿಕೆಗಳಲ್ಲಿ ನೋಡಿದೆ. ಬೆಂಗಳೂರಿನ ಹತ್ತಿರ ಪವರ್ ಟಿಲ್ಲರ್ಸ್ ಮಾಡುವಂತಹ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡುತ್ತೇವೆಂದು ಹೇಳಿದರು. ಬಹಳ ಸಂತೋಷ. ಆದ್ದರಿಂದ ಈ ವ್ಯವಸಾಯ ಇಲಾಖೆಯನ್ನು ಹೆಚ್ಚು ಪ್ರಗತಿಗೆ ತಂದು ರೈತರಿಗೆ ಹೆಚ್ಚು ಸೌಕರ್ಯಗಳನ್ನುಂಟುಮಾಡಿ, ರೈತರು ಬೆಳೆದಂತಹ ಆಹಾರಪದಾರ್ಥಗಳ ಧಾರಣೆ ಒಂದೂ ಕಡಮೆಯಾಗದಂತೆ ರೈತರಿಗೆ ಒಂದು ಪ್ರೊಟೆಕ್ಷನ್ ಕೊಟ್ಟರೆ ರೈತರು ಹೆಚ್ಚಿಗೆ ಆಹಾರವನ್ನು ಬೆಳೆಯುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದೇ ರೀತಿಯಲ್ಲಿ ಕೆಲಸಕಾರ್ಯಗಳು ತ್ವರಿತವಾಗಿ ನಡೆದು ದೇಶದಲ್ಲಿ ಈಗಿರತಕ್ಕ ಆಹಾರದ ಕೊರತೆ ಜಾಗ್ರತೆ ನೀಗಲಿ ಎಂದು ಹೇಳಿ ಈ ಬೇಡಿಕೆಯನ್ನು ನಾನು ಸಂತೋಷದಿಂದ ಅನುಮೋದಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ ಇರತಕ್ಕ ವ್ಯವಸಾಯ ಬೇಡಿಕೆ ಮತ್ತು ಇತರ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಅಪೇಕ್ಷೆ ಪಡುತ್ತೇನೆ. ಇದುವರೆಗೆ ರಾಯಚೂರು ಜಿಲ್ಲೆಯಲ್ಲಿ ಅದರಲ್ಲೂ ತುಂಗಭದ್ರಾ ಏರಿಯಾದಲ್ಲಿ ಈ ವಿಚಾರದಲ್ಲಿ ಏನೇನೂ ಅಭಿವೃದ್ಧಿಯಾಗಿಲ್ಲ. ನೀರು ಸುಮ್ಮನೆ ಹೋಗುತ್ತಿದೆ. ರೈತರು ಇರ್ರಿಗೇಟೆಡ್ ಮೈಂಡ್‌ನಲ್ಲಿಲ್ಲ. ಈ ಬಗ್ಗೆ ಎಲ್ಲಾ ಕಡೆಗಳಿಂದಲೂ ಟೀಕೆಗಳು ಬಂದಿವೆ. ಆದ್ದರಿಂದ ಇವತ್ತು ಅಲ್ಲಿರತಕ್ಕ ನ್ಯೂನತೆಗಳನ್ನು ಹೆಚ್ಚಿನಮಟ್ಟಿಗೆ ಹೋಗಲಾಡಿಸಿ ಅಲ್ಲಿನ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಅತಿ ತ್ವರಿತವಾಗಿ ವ್ಯವಸ್ಥೆ ಮಾಡಬೇಕು. ಅಲ್ಲಿ ಬಹುಮಟ್ಟಿಗೆ ಮೊಟ್ಟಮೊದಲನೆಯದಾಗಿ ರೊಕ್ಕದ ಅಡಚಣೆ ಇತ್ತು. ಇವತ್ತು ಫೈನಾನ್ಸಿಂಗ್ ಕಾರ್ಪೋರೇಷನ್ನಿನವರು ಸುಮಾರು ಎಂಟೂವರೆ ಕೋಟಿ ರೂಪಾಯಿಗಳನ್ನು ಅಲ್ಲಿನ ಅಭಿವೃದ್ಧಿ ಸಲುವಾಗಿ ಕೊಟ್ಟಿದ್ದಾರೆ. ಇದು ಮಾನ್ಯ ಮುಖ್ಯ ಮಂತ್ರಿಗಳ ಸಹಾಯದಿಂದ ಆಯಿತು ಎಂದು ಹೇಳಿದರೆ ತಪ್ಪಾಗಲಾರದು. ಇದರ ಪೈಕಿ 6 ಕೋಟಿ ರೂಪಾಯಿಗಳ ಅಂದಾಜುಮಾಡಿ ಅದನ್ನು ಅಲ್ಲಿತಕ್ಕ ಜಮೀನುಗಳನ್ನು ಲೆವೆಲ್ ಮಾಡುವುದಕ್ಕೋಸ್ಕರ ಮೀಸಲಾಗಿಟ್ಟಿದ್ದಾರೆಂಬುದಾಗಿ ನನಗೆ ತಿಳಿದು ಬಂದಿದೆ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಮೆಷಿನರಿಗಳನ್ನು ತ್ವರಿತವಾಗಿ ತರಿಸಿ ಈ ಒಂದು

(ಶ್ರೀಮತಿ ಬಸವರಾಜೇಶ್ವರಿ)

ಯೋಜನೆಯನ್ನು ಆದಷ್ಟು ಜಾಗ್ರತೆ ಮಂಜೂರುಮಾಡಿ ಆ ಜಮೀನುಗಳನ್ನು ಲೆವೆಲ್ ಮಾಡಿದರೆ ವ್ಯವಸಾಯಾಭಿವೃದ್ಧಿ ಬಹಳ ತ್ವರಿತವಾಗಿ ನಡೆಯುತ್ತದೆ.

ಎರಡನೆಯದಾಗಿ, ಆಕ್ಸ್‌ಫಾಮ್ ಪ್ರೋಗ್ರಾಂ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಆಹಾರವನ್ನು ನಾವು ಹೆಚ್ಚು ಬೆಳೆಯುತ್ತೇವೆ ಪ್ರತಿಯೊಂದು ಜಮೀನನ್ನು ಉಪಯೋಗಿಸುತ್ತೇವೆಂದು ಹೇಳಿದಾಗ ಮತ್ತು ಅದಕ್ಕೆ ಬೇಕಾದಂಥ ಫರ್ಟಿಲೈಜರ್ಸ್ ಸಹಾಯ ಮಾಡಬೇಕೆಂದು ಕೇಳಿದಾಗ, ಅದರ ಬಗ್ಗೆ ಒಂದು ದೂರ ವಿಚಾರವನ್ನು ಇಟ್ಟುಕೊಂಡು ಜೋನಕ್ಕೆ ಕರೆಸ್‌ಪಾಂಡಾಗಿರತಕ್ಕ ಹೈಬ್ರಿಡ್ ಮೆಯ್ಜ್ ಬೆಳೆಯತಕ್ಕ ರೈತರಿಗೆ ಫರ್ಟಿಲೈಜರ್ಸ್ ಮತ್ತು ಬೀಜಗಳನ್ನು ನಮಗೆ ಸರಬರಾಜು ಮಾಡಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಯೂನಿವರ್ಸಿಟಿ ಆಫ್ ಅಗ್ರಿಕಲ್‌ಚರಲ್ ಸೈನ್ಸ್ ಅವರಿಗೆ ಆ ರೀತಿ ಸರಬರಾಜು ಮಾಡಿದಂತಹ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ನಮ್ಮ ದೇಶದ ರೈತರಿಗೆ ಹೈಬ್ರಿಡ್ ಮೇಯ್ಜ್ ಬೆಳೆಯುವುದಕೋಸ್ಕರ ಬೀಜಗಳು ಮತ್ತು ಗೊಬ್ಬರವನ್ನು ಒದಗಿಸಿದ್ದಕ್ಕಾಗಿ ನಾನು ನನ್ನ ಕ್ಷೇತ್ರದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ

3-00 P.M.

ಮತ್ತು ಅದರ ಜೊತೆಗೆ ಹೈಬ್ರಿಡ್ ಸೀಡ್ಸ್ ಫಾರಮ್ ಮಾಡಬೇಕೆಂದು ಜನಗಳು ಮುಂದೆ ಬಂದಾಗ ಇಲಾಖೆಯವರು ಹೆಚ್ಚು ಆಸಕ್ತಿ ವಹಿಸಿ ತುಂಗಭದ್ರಾ ಏರಿಯಾದಲ್ಲಿ ಅದನ್ನು ಸ್ಥಾಪಿಸಲು ಸಹಾಯ ಮಾಡುವುದು ಅಗತ್ಯ. ಅಲ್ಲಿ ಸುಮಾರು 6-7 ಲಕ್ಷ ಎಕರೆ ಜಮೀನು ನೀರಾವರಿ ಆಗುತ್ತದೆ. ಆದ್ದರಿಂದ ಆ ಪ್ರದೇಶದಲ್ಲಿ ಹೈಬ್ರಿಡ್ ಸೀಡ್ಸ್ ಬೆಳೆಯುವುದಕ್ಕೆ ಸರ್ಕಾರದವರು ಅನುಕೂಲ ಮಾಡಬೇಕು. ಅದರಲ್ಲಿ 3-3½ ಲಕ್ಷ ಎಕರೆ ಡ್ರೈ ಕಂ ವೆಟ್ ಏರಿಯಾ ಆಗುತ್ತದೆ. ಅದರಲ್ಲಿ ಜೋಳ ಮುಸುಕಿನ ಜೋಳ, ಮತ್ತು ಇತರ ಆಹಾರ ಪದಾರ್ಥಗಳನ್ನು ಬೆಳೆಯಬಹುದು. ಅದರಲ್ಲಿ 400 ಎಕರೆಯಲ್ಲಿ ಜೋಳ, 200 ಎಕರೆಯಲ್ಲಿ ಗೌನ್ ಜೋಳ 50-60 ಎಕರೆಯಲ್ಲಿ ಸಜ್ಜೆಯನ್ನು ಬೆಳೆಯಬೇಕೆಂದು ಒಂದು ಪ್ರೋಗ್ರಾಮನ್ನು ಹಾಕಿಕೊಂಡಿದ್ದೆವು. ಅದಕ್ಕೆ ನ್ಯಾಷನಲ್ ಸೀಡ್ ಕಾರ್ಪೋರೇಷನ್‌ನವರು ಬೀಜಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ವಿನಂತಿಯನ್ನು ತಿಳಿಸಬೇಕಾಗಿದೆ. ಆ ರೀತಿ ನಾವು ಪ್ರೋಗ್ರಾಮ್ ಹಾಕಿಕೊಂಡು ಬೆಳೆಯನ್ನು ಬೆಳೆಯಬೇಕೆಂದು ಹೊರಟಾಗ ತುಂಗಭದ್ರಾ ಮೈನ್ ಕೆನಾಲ್ ಬ್ರೀಚ್ ಆದಾಗ ನಮ್ಮ ಪ್ರೋಗ್ರಾಂ ಎಲ್ಲಾ ಪಲ್ಲಟವಾಯಿತು. 400 ಎಕರೆಯಲ್ಲಿ ಜೋಳವನ್ನು ಹಾಕಬೇಕೆಂದು ಪ್ರೋಗ್ರಾಮ್ ಹಾಕಿಕೊಂಡದ್ದಕ್ಕೆ ಕೇವಲ 50-60 ಎಕರೆಯಲ್ಲಿ ಮಾತ್ರ ಬೀಜವನ್ನು ಹಾಕುವುದಕ್ಕೆ ಸಾಧ್ಯವಾಯಿತು. ಉಳಿದಂತಹ ಬೀಜವೆಲ್ಲಾ ಹಾಗೆಯೇ ಇದೆ. ಜೂನ್ ತಿಂಗಳಿನಲ್ಲಿ ಅದನ್ನು ಹಾಕುತ್ತೇವೆ. ಈ ರೀತಿ ಕೆನಾಲ್‌ಗಳು ಬ್ರೀಚ್ ಆದಾಗ ಎಮರ್ಜೆನ್ಸಿ ಸ್ಕ್ವಾಡ್ ಅನ್ನು ಇಟ್ಟು ಬೇಗ ಆ ಕೆನಾಲ್ ಅನ್ನು ರಿಪೇರಿ ಮಾಡದಿದ್ದರೆ ರೈತರ ಗತಿ ಏನು ! ರೈತರು ಎಷ್ಟೋ ದುಡ್ಡನ್ನು ಖರ್ಚುಮಾಡಿ ವ್ಯವಸಾಯವನ್ನು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಅವರಿಗೆ ಸರ್ಕಾರದವರು ಸಹಾಯ ಮಾಡದಿದ್ದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಅದಕ್ಕೋಸ್ಕರ ಸರ್ಕಾರದವರು ಒಂದು ಎಮರ್‌ಜೆನ್ಸಿ ಸ್ಕ್ವಾಡನ್ನು ಇಟ್ಟು, ಅರ್ತ್ ಮೂವಿಂಗ್ ಮೆಷನ್ ಮತ್ತು ಲಾರಿಗಳನ್ನು ಇಟ್ಟು ಕನಿಷ್ಠ ಪಕ್ಷ 7-8 ದಿವಸಗಳಲ್ಲಿ ಬ್ರೀಚಾಗಿರತಕ್ಕ ಕೆನಾಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ರೈತರಿಗೆ ವಿಪರೀತವಾದ ಹಾನಿಯುಂಟಾಗುತ್ತದೆ. ತುಂಗಭದ್ರಾ ಪ್ರಾಜೆಕ್ಟಾಗಲೀ, ಅಥವಾ ಬೇರೆ ಯಾವ ಪ್ರಾಜೆಕ್ಟ್ ಆಗಲೀ ಬ್ರೀಚಾಗಿ ಅನಾನುಕೂಲಗಳು ಆದಾಗ ಆದಷ್ಟುಮಟ್ಟಿಗೆ ತೀವ್ರವಾಗಿ ರಿಪೇರಿ ಮಾಡಿಕೊಡಬೇಕು. ಈಗ ಅದನ್ನು ರಿಪೇರಿ ಮಾಡುವುದಕ್ಕೆ 20-25 ದಿವಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಇದು ಸರಿಯಲ್ಲ. ಆದಷ್ಟು ಜಾಗ್ರತೆ ರಿಪೇರಿ ಮಾಡಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಹೈಬ್ರಿಡ್ ಸೀಡ್ ಫಾರಮ್‌ನಲ್ಲಿ 400-500 ಎಕರೆಯಲ್ಲಿ ಬೆಳೆಯನ್ನು ಬೆಳೆಯಬೇಕೆಂದು ನಾವು ಪ್ರೋಗ್ರಾಮ್ ಹಾಕಿಕೊಂಡಿದ್ದೆವು, ಅದಕ್ಕೆ ಬೇಕಾದ ಬೀಜಗಳೇನೋ ಸಿಕ್ಕಿದವು, ಆದರೆ ಅದಕ್ಕೆ ಸಂಬಂಧಪಟ್ಟ ಇನ್‌ಸೆಕ್ಟಿಸೈಡ್ಸ್ ಸಿಕ್ಕಲಿಲ್ಲ. ಇದರಿಂದ ಅಲ್ಲಿ ರೈತರಿಗೆ ತುಂಬಾ ಅನಾನುಕೂಲವಾಯಿತು. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ನಿಗಾ ಕೊಡಬೇಕು. ಇಲಾಖೆಯವರು ರಿಸರ್ಚ್ ಮಾಡಬೇಕು, ಬೆಳೆಗಳಿಗೆ ಯಾವ ಯಾವ ರೋಗ ಬರುತ್ತದೆ ಎಂಬುದನ್ನು ಕಂಡುಹಿಡಿದು ಅದಕ್ಕೆ ಬೇಕಾದಂತಹ ಔಷಧಿಯನ್ನು ಸಕಾಲದಲ್ಲಿ ರೈತರಿಗೆ ಒದಗಿಸಿಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಅಲ್ಲಿ ರೈತರು ಜಾಗ್ರತೆಯಾಗಿ ಹೆಚ್ಚು ಹೆಚ್ಚಾಗಿ ಬೆಳೆಯತಕ್ಕ ಬಿತ್ತನೆ ಬೀಜಗಳನ್ನು ಕೊಯುಮತ್ತೂರು

ಮುಂತಾದ ಪ್ರದೇಶಗಳಿಂದ ಒಂದು ಕೆ.ಜಿ.ಗೆ 15 ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡು ಬಂದು ನವಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಬಿತ್ತನೆ ಮಾಡಿದ್ದಾರೆ. ಆದರೆ ಆ ಬೆಳೆಯೆಲ್ಲಾ ಹಾಳಾಗಿ ಹೋಯಿತು. ಸೀಡ್ ಫಾರಮ್‌ಗಳಲ್ಲಿ ಒಬ್ಬೊಬ್ಬರು ಒಂದೊಂದು ತರಹ ಬೀಜಗಳನ್ನು ಬೆಳೆಯುತ್ತಾರೆ. ಅದನ್ನು ಹೇಗೆ ಬೆಳೆಯಬೇಕು, ಯಾವ ರೋಗ ಬಂದರೆ ಯಾವ ಔಷಧಿಯನ್ನು ಹಾಕಬೇಕು, ಯಾವುದನ್ನು ಉಪಯೋಗಿಸಿದರೆ ರೋಗವು ಕಂಪ್ಲೀಟಾಗಿ ಕ್ಯೂರ್ ಆಗುತ್ತದೆ ಎಂಬುದು ರೈತರಿಗೆ ಕಂಡುಬರುವುದಿಲ್ಲ. ಆದ್ದರಿಂದ ಅದನ್ನು ರಿಸರ್ಚ್ ಮಾಡಬೇಕಾದ್ದು ಅಗತ್ಯ. ಮತ್ತು ಬೆಳೆಗಳಿಗೆ ರೋಗ ಬಂದಾಗ ಯಾವ ಔಷಧಿಯನ್ನು ಹೇಗೆ ಎಷ್ಟು ಪ್ರಮಾಣದಲ್ಲಿ ಹೊಡೆಯಬೇಕು, ಎನ್ನುವ ಬಗ್ಗೆ ರೈತರಿಗೆ ತಿಳುವಳಿಕೆಯನ್ನು ಕೊಡಬೇಕು. ಅವರು ವ್ಯವಸಾಯಕ್ಕೆ ಬೇಕಾದಷ್ಟು ದುಡ್ಡನ್ನು ಇನ್‌ವೆಸ್ಟ್ ಮಾಡಿರುತ್ತಾರೆ. ಒಂದು ವೇಳೆ ಬೆಳೆ ಏನಾದರೂ ಕೆಟ್ಟು ಹೋದರೆ ಅವರಿಗೆ ತೊಂದರೆಯಾಗುತ್ತದೆ. ಹೈಬ್ರಿಡ್ ಸೀಡ್ಸ್‌ಗೆ ಪ್ರೊಸೆಸಿಂಗ್ ಯೂನಿಟ್ ಬೇಕಾಗಿದೆ. ನಾವು ಬೆಳೆಯುವ ಬೀಜಗಳಿಗೆ ಸರ್ಟಿಫಿಕೇಟ್ ಸಿಕ್ಕದೇ ಇದ್ದರೆ ಬೀಜಗಳನ್ನು ಹಂಚುವುದಕ್ಕೆ ಅನಾನುಕೂಲವಾಗುತ್ತದೆ ಎಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಎರಡು ಪ್ರೊಸೆಸಿಂಗ್ ಯೂನಿಟ್‌ಗಳು ಬೇಕಾಗುತ್ತದೆ. ಆದ್ದರಿಂದ ಅವುಗಳನ್ನು ಕಾಲಕ್ಕೆ ಸರಿಯಾಗಿ ತರಿಸಿ ಕೊಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ತುಂಗಭದ್ರಾ ಏರಿಯಾದಲ್ಲಿ ಕೆಲಸ ಮಾಡುವುದಕ್ಕೋಸ್ಕರ 30 ಟ್ರ್ಯಾಕ್ಟರುಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಈಗ ಟ್ರ್ಯಾಕ್ಟರುಗಳನ್ನು ನಡೆಸುವುದಕ್ಕೆ ಫುಲ್‌ಟೈಂ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗ ಇಲ್ಲ. ಪ್ರೈವೇಟ್ ಏಜೆನ್ಸಿಯವರು ಇಟ್ಟಿರತಕ್ಕ ಟ್ರ್ಯಾಕ್ಟರುಗಳಿಂದ 8 ರಿಂದ 12 ಗಂಟೆಗಳ ಕಾಲ ಕೆಲಸವನ್ನು ಮಾಡುತ್ತಾರೆ. ಸರ್ಕಾರಕ್ಕೆ ಸಂಬಂಧಪಟ್ಟ ಟ್ರ್ಯಾಕ್ಟರುಗಳಲ್ಲಿ ಫುಲ್‌ಟೈಮ್ ಕೆಲಸ ಮಾಡತಕ್ಕವರು ಇಲ್ಲದೆ ಇರುವುದರಿಂದ 5-6 ಗಂಟೆಗಳಕಾಲ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತುಂಗಭದ್ರಾ ಏರಿಯಾಕ್ಕೆ ಸರ್ಕಾರದವರು 30 ಟ್ರ್ಯಾಕ್ಟರುಗಳನ್ನೇನು ಮಂಜೂರು ಮಾಡಿದ್ದಾರೆ ಅವುಗಳಿಗೆ ಸಂಬಂಧಪಟ್ಟ ಹಾಗೆ ಫುಲ್‌ಟೈಮ್ ಕೆಲಸ ಮಾಡತಕ್ಕ ಸಿಬ್ಬಂದಿಯನ್ನು ನೇಮಕ ಮಾಡುವುದಕ್ಕೆ ಸರ್ಕಾರದವರು ಮಂಜೂರು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಟ್ರ್ಯಾಕ್ಟರುಗಳು ಎಲ್ಲಾ ಸಂಪೂರ್ಣವಾಗಿ ಕೆಲಸ ಮಾಡುವಂತಾಗಬೇಕು. ಕೆಲವು ಸಂದರ್ಭಗಳಲ್ಲಿ ಟ್ರ್ಯಾಕ್ಟರುಗಳಿಗೆ ಬೇಕಾದಂತಹ ಸಣ್ಣ ಸಣ್ಣ ಸಾಮಾನುಗಳು ಇಲ್ಲದೆ ಟ್ರಾಕ್ಟರುಗಳು ನಿಲ್ಲುತ್ತವೆ. ಆದ್ದರಿಂದ ಆ ತುಂಗಭದ್ರಾ ಏರಿಯಾದಲ್ಲಿ ಒಂದು ಸರ್ವೀಸ್ ಸ್ಟೇಷನ್ ಮಾಡುವುದು ಅಗತ್ಯ ಇದೆ. ಅದರ ಸಲುವಾಗಿ ಡಿಪಾರ್ಟ್‌ಮೆಂಟ್ ವತಿಯಿಂದ ಆಧುನಿಕ ಪದ್ಧತಿಯ ಪ್ರಕಾರ ಒಂದು ಸರ್ವೀಸ್ ಸ್ಟೇಷನ್ ಅನ್ನು ಪ್ರಾರಂಭ ಮಾಡಬೇಕು. ಅದನ್ನು ಮಾಡುವುದರಿಂದ ಸರ್ಕಾರದ ಟ್ರ್ಯಾಕ್ಟರುಗಳನ್ನೂ ರಿಪೇರಿ ಮಾಡಬಹುದು ಮತ್ತು ಪ್ರೈವೇಟ್ ಆಗಿರತಕ್ಕ ಟ್ರ್ಯಾಕ್ಟರುಗಳನ್ನು ರಿಪೇರಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು Supply of improved seeds ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನ್ಯಾಷನಲ್ ಸೀಡ್ಸ್ ಕಾರ್ಪೋರೇಷನ್‌ನವರು ಸ್ವಲ್ಪ ಇಂಪ್ರೂವ್ಡ್ ಸೀಡ್‌ಗಳನ್ನು ಒದಗಿಸುತ್ತಿದ್ದಾರೆ. ಹೈಬ್ರಿಡ್ ಜೋಳ, ಮೆಕ್ಕೆ ಜೋಳ, ಗೋಧಿ ಮುಂತಾದ ಉತ್ತಮವಾದ ಬೀಜಗಳು ಅವರ ಹತ್ತಿರ ಇದೆಯೆಂದು ಹೇಳಿಬರುತ್ತದೆ. ಈಗ ಅಲ್ಲಿಂದ ಎರಡು ಜಿಲ್ಲೆಗಳಿಗೆ ಮಾತ್ರ ಬೀಜ ಸಿಕ್ಕುತ್ತಿದೆ. ಆ ಏರಿಯಾದಲ್ಲಿ ಗೋಧಿ ಬಹಳ ಚೆನ್ನಾಗಿ ಬೆಳೆಯುತ್ತದೆ. ಆ ತರಹ ಬೀಜಗಳು ಸಿಕ್ಕುವುದಾದರೆ ಗೋಧಿ ಬೆಳೆಯನ್ನು ಎರಡು ಬೆಳೆ ಬೆಳೆಯಬಹುದು. ಮತ್ತು ಬೆಂಡೆ, ಬದನೆ ಮುಂತಾದ ಕಾಯಿ ಪಲ್ಯಗಳನ್ನು ಅಲ್ಲಿ ಬೆಳೆಯುವುದಕ್ಕೆ ಅವಕಾಶ ಇದೆ. ಸರ್ಕಾರಿ ಸೀಡ್ ಫಾರಮ್‌ಗಳಲ್ಲಿ ಸೀಡ್ಸ್ ಮಲ್ಟಿಪ್ಲೈ ಮಾಡುವುದಕ್ಕೆ ಏರ್ಪಾಡು ಮಾಡಬೇಕು.

ಕೇಂದ್ರದ ಆಹಾರಖಾತೆಯ ಸಚಿವರಾದ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ನಮ್ಮ ತುಂಗಭದ್ರಾ ಏರಿಯಾಕ್ಕೆ ಬಂದು ಅಲ್ಲಿನ ರೈತರಿಗೆ ದೊಡ್ಡ ಸಹಾಯ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ನಮಗೆ ಗೊಬ್ಬರ ಮತ್ತು ತಾಯಿ ನೆಲ್ಲಿನ ಬೀಜವನ್ನು ಕೊಡುತ್ತೇವೆಂದು ಹೇಳಿದ್ದಾರೆ. ತಾಯಿ ನೆಲ್ಲನ್ನು ಬೆಳೆಯುವುದಕ್ಕೆ ಅದಕ್ಕೆ ಸಂಬಂಧಪಟ್ಟ ಫರ್ಟಿಲೈಜರ್ಸ್ ಮತ್ತು ಇನ್‌ಸೆಕ್ಟಿಸೈಡ್ಸ್ ಅನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ಬಗೆಯ ಬತ್ತವನ್ನು ಬೆಳೆದು ಮಾರ್ಕೆಟ್ ರೇಟಿಗೆ ಕೊಡಬೇಕೆಂದು ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೂಡ ಕೇಳಿದ್ದಾರೆ. ಆದರೆ ಅದಕ್ಕೆ ಕೆಲವರು ಒಪ್ಪಲಿಲ್ಲ. ತಾಯಿ ವೆರೈಟಿ ಬತ್ತವನ್ನು ಬೆಳೆದವರಿಗೆ ಫರ್ಟಿಲೈಜರ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಆ ವೆರೈಟಿ ಬತ್ತವನ್ನು ಬೆಳೆದರೆ ಬಹಳ ಜಾಗ್ರತೆಯಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ; ಆದ್ದರಿಂದ ಅದನ್ನು ಬೆಳೆಯುತಕ್ಕವರಿಗೆ ಒಂದು ತರಹ ಸಹಾಯ ಮಾಡಬೇಕೆಂದು ಮಾನ್ಯ ಮಂತ್ರಿ

(ಶ್ರೀಮತಿ ಬಸವರಾಜೇಶ್ವರಿ)

ಗಳು ಆ ಪ್ರದೇಶಕ್ಕೆ ಬಂದಿದ್ದಾಗ ನಾವು ಹೇಳಿದ್ದೆವು. ಮುಖ್ಯ ಮಂತ್ರಿಗಳನ್ನು ಅದನ್ನು ಒಪ್ಪಿ ಕೊಂಡಿದ್ದರು. ಖಾರೀಫ್ ಸೀಜನ್ನಿಗೆ ಸಂಬಂಧಪಟ್ಟ ಹಾಗೆ ಒಂದು ಪ್ರೋಗ್ರಾಮ್ ಹಾಕಿಕೊಂಡು ಇಷ್ಟು ಎಕರೆಯಲ್ಲಿ ನಾವು ತಾಜು ಬತ್ತವನ್ನು ಬೆಳೆಯುತ್ತೇವೆ ಎಂದರೆ ಅದಕ್ಕೆ ಸಕಾಲದಲ್ಲಿ ಫರ್ಟಿಲೈಜರ್ಸ್, ಇನ್‌ಸೆಕ್ಟಿಸೈಡ್ಸ್ ಮತ್ತು ಬೀಜ ಇವುಗಳನ್ನು ಕೊಡುತ್ತೇವೆಂದು ಶ್ರೀ ಸುಬ್ರಹ್ಮಣ್ಯಂ ಅವರು ಒಪ್ಪಿಕೊಂಡು ಹೋಗಿದ್ದಾರೆ. ಆದ್ದರಿಂದ ನಮ್ಮ ಇಲಾಖೆಯವರು ಶ್ರೀ ಸುಬ್ರಹ್ಮಣ್ಯಂ ಅವರಿಗೆ ಪತ್ರ ಬರೆದು ಸಕಾಲದಲ್ಲಿ ಬೀಜ, ಗೊಬ್ಬರ ಮತ್ತು ಇನ್‌ಸೆಕ್ಟಿಸೈಡ್‌ಗಳನ್ನು ತರಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಯಚೂರಿಗೆ ಒಂದು ಅಗ್ರಿಕಲ್‌ಚರಲ್ ಕಾಲೇಜನ್ನು ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಈ ವಿಷಯವನ್ನು ನಾವು ಅನೇಕ ಸಾರಿ ಅರಿಕೆ ಮಾಡಿಕೊಂಡಿದ್ದೇವೆ. ಯಾವ ರೀತಿಯಿಂದಲಾದರೂ ಮಾಡಿ ರಾಯಚೂರಿಗೆ ಆದಷ್ಟು ಬೇಗ ಒಂದು ಅಗ್ರಿಕಲ್‌ಚರಲ್ ಕಾಲೇಜನ್ನು ಕೊಡಬೇಕು. ಆ ಅಗ್ರಿಕಲ್‌ಚರಲ್ ಕಾಲೇಜಿಗೆ ಒಂದು ದೊಡ್ಡ ಪ್ರಮಾಣದ ರಿಸರ್ಚ್ ಸ್ಟೇಷನ್ ಕೊಡಬೇಕು. ಒಂದು ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಕೊಡಬೇಕು. ಎಲ್ಲಾ ಉಪಕರಣಗಳಿಂದಲೂ ಕೂಡಿರತಕ್ಕ ಒಂದು ಉತ್ತಮವಾದ ಅಗ್ರಿಕಲ್‌ಚರಲ್ ಕಾಲೇಜನ್ನು ಅಲ್ಲಿಗೆ ಕೊಡುವುದು ಅಗತ್ಯ ಇದೆ. ಇಲ್ಲಿ ನಾನು ಎರಡು ಮೂರು ವರ್ಷದಿಂದಲೂ ಸೀಡ್ ಆಕ್ಟ್ ಹಾಗೂ ಪೆಸ್ಟ್ಸ್ ಕಂಟ್ರೋಲು ಆಕ್ಟ್ ಜಾರಿಗೆ ತಂದು ಅದನ್ನೂ ಚಾಲೂ ಮಾಡಬೇಕೆಂದು ಹೇಳುತ್ತಿದ್ದರೂ ಅದರ ಕಡೆಗೆ ಗಮನ ಕೊಡುತ್ತಿಲ್ಲ. ಈಗ ಹೈ ಬ್ರಿಡ್ ಜೋಳದ ಬೀಜ ಕೆ. ಜಿ. ಒಂದಕ್ಕೆ 15 ರಿಂದ 20 ರೂಪಾಯಿಗಳಷ್ಟು ಆಗಿದೆ ಎಂದು ತಿಳಿದು ಕೆಲವು ಕಡೆಗಳಲ್ಲಿ ಜನಕ್ಕೆ ಮೋಸ ಮಾಡಲು ಅಡಲ್‌ಟ್ರೇಟೆಡ್ ಸೀಡುಗಳನ್ನು ಮಾರುತ್ತಿರುವುದರಿಂದ ಅನೇಕ ರೈತರಿಗೆ ಇದರಿಂದ ಬಹಳ ಹಾನಿಯುಂಟಾಗುತ್ತಿದೆ. ಇದಕ್ಕಾಗಿ ಸೀಡ್ ಆಕ್ಟ್ ಹಾಗೂ ಪೆಸ್ಟ್ ಕಂಟ್ರೋಲ್ ಆಕ್ಟ್‌ಗಳನ್ನು ಜಾರಿಗೆ ತಂದರೆ ಅದರ ಮೂಲಕ ಸೀಡುಗಳನ್ನು ಬೆರಕೆ ಮಾಡುವವರಿಗೆ ಶಿಕ್ಷೆ ಮಾಡಲು ಅನುಕೂಲವಾಗುತ್ತದೆ. ಆದುದರಿಂದ ಸರಕಾರ ರೈತರಿಗೆ ಆಗುವ ಅನಾಹುತಗಳನ್ನು ತಪ್ಪಿಸುವ ಸಲುವಾಗಿ ಆದಷ್ಟು ಜಾಗ್ರತೆ ಸೀಡು ಆಕ್ಟು ಹಾಗೂ ಪೆಸ್ಟ್ ಕಂಟ್ರೋಲ್ ಆಕ್ಟುಗಳನ್ನು ಜಾರಿಗೆ ತರಬೇಕೆಂದು ಸೂಚಿಸುತ್ತೇನೆ.

ಮತ್ತೆ ಇಂಡಿಯಾ ಸರಕಾರದವರು ಮೊದಲಿಗೆ ಪವರು ಸ್ಪ್ರೇಯರುಗಳನ್ನು ನಮ್ಮ ಕಡೆಗೆ ಕೊಡುತ್ತೇವೆ ಮತ್ತು ಇದಕ್ಕೆ 1,200 ರೂಪಾಯಿಗಳಷ್ಟು ಬೆಲೆ ಬರುತ್ತೆ ಎಂದು ಇದ್ದದ್ದು ಈಗ 940 ರೂಪಾಯಿಗೆ ಹೊರಗೆ ಮಾರುತ್ತಿದ್ದಾರೆ. ಇದನ್ನು ಕೇವಲ 600 ರೂಪಾಯಿಗಳಷ್ಟು ಬೆಲೆಯಲ್ಲಿ ರೈತರಿಗೆ ಕೊಡುತ್ತೇವೆಂದು ಇಂಡಿಯಾ ಸರಕಾರದವರು ಹೇಳಿದಾಗ ಅದನ್ನು ನಮ್ಮ ಸರಕಾರದಲ್ಲಿರುವ ಅಧಿಕಾರಿಗಳು ತೆಗೆದುಕೊಂಡು ಸಹಾಯ ಮಾಡಿಕೊಡದೇಹೋದುದು ತುಂಬಾ ವಿಷಾದಕರವಾದ ಸಂಗತಿ. ನಮ್ಮಲ್ಲಿ ಈಗ ಕೂಲಿ ಜನರು ಸಿಗದೇ ಇರುವ ಕಾಲದಲ್ಲಿ ಬ್ರಿಡ್ ಸೀಡುಗಳನ್ನು ಹಾಕುವಾಗ ಇಂತಹ ಪವರು ಸ್ಪ್ರೇಯರುಗಳು ಬಹಳ ಅಗತ್ಯವಾಗಿ ಬೇಕಾಗುತ್ತವೆ. ಈಗಲಾದರೂ ಸರಕಾರ ಇದರ ಕಡೆಗೆ ವಿಶೇಷ ಗಮನ ಕೊಟ್ಟು ನಮ್ಮ ಭಾಗದ ರೈತರಿಗೆ ಆದಷ್ಟು ಜಾಗ್ರತೆ ಪವರು ಸ್ಪ್ರೇಯರುಗಳನ್ನು ಒದಗಿಸಿ ಕೊಟ್ಟರು ನಮ್ಮ ರೈತರಿಗೆ ಎಷ್ಟೋ ಅನುಕೂಲಗಳನ್ನು ಕಲ್ಪನೆ ಮಾಡಿಕೊಟ್ಟಂತಾಗುತ್ತದೆ. ಮೊದಲಿಗೆ ಇದರ ಬೆಲೆ 1,200 ಇದ್ದುದನ್ನು ರೈತರು ಕೊಡಲು ಆಗುವುದಿಲ್ಲ ಎಂದು ಇತ್ತು. ಈಚೆಗೆ ಇದರ ಬೆಲೆಯನ್ನು 600 ರೂಪಾಯಿಗಳವರೆಗೆ ಇಳಿಸಿರುವುದರಿಂದ ನಮ್ಮ ರೈತರು ಇದನ್ನು ತೆಗೆದುಕೊಳ್ಳಲು ಆತುರರಾಗಿದ್ದಾರೆ. ಸರಕಾರ ಜಾಗ್ರತೆ ಇಂತಹ ಪವರು ಸ್ಪ್ರೇಯರುಗಳನ್ನು ಪಡೆದು ರೈತರಿಗೆ ಹಂಚುವ ವ್ಯವಸ್ಥೆ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗ ಕೂಲಿ ಜನಕ್ಕೆ ಇಲ್ಲಿ ರೇಟುಗಳನು ಕೊಡುತ್ತಿರುವುದು ಬಹಳ ಕಡಿಮೆ. ಇದರಿಂದಾಗಿ ಸಾಯಿಲ್ ಕನ್‌ಸರ್‌ವೇಷನ್ ಕಾಮಗಾರಿ ತೆಗೆದುಕೊಂಡಾಗ ಕೂಲಿ ಕಡಿಮೆ ಎಂದು ಕೂಲಿಗಾರರು ಕೆಲಸ ಮಾಡಲು ಮುಂದೆ ಬರುವುದಿಲ್ಲ. ಇವೊತ್ತು ಒಂದು ಕೆ. ಜಿ. ಜೋಳ ಅಥವಾ ಬೇರೆ ದವಸ ಸಿಗುತ್ತಿಲ್ಲ. ಇದರಿಂದ ಇವರು ಒಂದು ಮೈಲಿ ಗುಂಡಿ ಅಗೆಯಿರಿ ಎಂದು ಅವರಿಗೆ ಕಡಿಮೆ ಕೂಲಿ ಕೊಟ್ಟರೆ ಅದರಿಂದ ಯಾವ ರೀತಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಮಾಡಲು ಸಾಧ್ಯ ? ಇಲ್ಲಿ ಕೂಲಿ ಕೆಲಸ ಮಾಡುವ ಜನಕ್ಕೆ ಕೊಡುತ್ತಿರುವ ಕೂಲಿ ಬಹಳ ಕಡಿಮೆ. ಇದನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ರೇಟುಗಳನ್ನು ಪರಿಶೀಲನೆ ಮಾಡಿ ಹೆಚ್ಚಿಸುವುದರ ಕಡೆಗೆ ಪ್ರಯತ್ನ ಮಾಡಬೇಕೆಂದು ನನ್ನ ಸಲಹೆ.

ಇನ್ನು ಅಗ್ರಿಕಲ್ಚರು ಗ್ರಾಜುಯೇಟುಗಳಾಗಿರುವವರು ಈಚೆಗೆ ಸ್ಟ್ರೈಕು ಮಾಡಿದ ವಿಚಾರ ತಮಗೆಲ್ಲರಿಗೂ ತಿಳಿದಿದೆ. ಅವರಿಗೆ ಮೆಡಿಕಲ್ ಗ್ರಾಜುಯೇಟ್‌ಗಳಿಗೆ ಹಾಗೂ ಇಂಜನೀಯರಿಂಗು ಗ್ರಾಜುಯೇಟ್‌ಗಳಿಗೆ ಯಾವ ರೀತಿಯ ಸ್ಥಾನ ಮಾನಗಳು ಅವರ ಸಂಬಳಸಾರಿಗೆ ವಿಚಾರದಲ್ಲಿ ಇದೆಯೋ ಅದನ್ನು ಕೊಡಬೇಕೆಂದು ಕೇಳಿದುದನ್ನು ಸರಕಾರ ಪರಿಶೀಲಿಸಿ ಸರಿಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಇದರ ಬಗ್ಗೆ ಈಗಾಗಲೇ ಮದರಾಸು ಹಾಗೂ ಆಂಧ್ರಗಳಲ್ಲಿ ಅಗ್ರಿಕಲ್ಚರು ಗ್ರಾಜುಯೇಟುಗಳಿಗೆ ಒಂದೇ ರೀತಿಯಾದ ಸಂಬಳ ಸಾರಿಗೆಗಳನ್ನು ಮಾಡಿ ಕೊಟ್ಟಿದ್ದಾರೆ ಇಲ್ಲಿರುವ ಗ್ರಾಜ್ಯುಯೇಟುಗಳಿಗೆ ಮಾಡದೆ ಇದ್ದರೆ ಅವರಿಗೆ ಬಹಳ ಅನಾನುಕೂಲವಾಗುತ್ತದೆ. ಆದಷ್ಟು ಬೇಗ ಇದನ್ನು ಪೂರ್ತಿ ಇತ್ಯರ್ಥ ಮಾಡಲು ಮಾನ್ಯ ಮಂತ್ರಿಗಳು ಇದರ ಬಗ್ಗೆ ಬೇಗನೆ ಕಾರ್ಯಗತ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯದ ಇಲಾಖೆ ಬಗ್ಗೆ ಒಂದು ವಿಚಾರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅನೇಕ ವರ್ಷಗಳಿಂದಲೂ ಫಾರೆಸ್ಟು ಏರಿಯಾದಲ್ಲಿ ಬೋನಫೈಡ್ ಕಲ್ಟಿವೇಟರುಗಳಾಗಿ ಲಂಬಾಣಿ ಜನರು ಹಾಗೂ ಬಡ ಹರಿಜನರು ಸಾಗುವಳಿ ಮಾಡಿಕೊಂಡು ಇದ್ದಾರೆ. ಕಳೆದ 15—16 ವರ್ಷಗಳಿಂದಲೂ ಇವರು ಕೃಷಿ ಮಾಡಿಕೊಂಡು ಬರುತ್ತಿದ್ದರೂ ಕೂಡ ಆಗ ಇದ್ದ ಸಂಸ್ಥಾನ ಸರಕಾರದವರು ಅವರ ಜಮೀನುಗಳಿಗೆ ಪಟ್ಟಾ ಮಾಡಿಕೊಡಲಿಲ್ಲ. ಆದರೆ ಈಚೆಗೆ ಇದರ ರಿಕಾರ್ಡುಗಳನ್ನು ಟ್ರಾನ್ಸ್‌ಫರು ಮಾಡುವಾಗ ಈ ಜನರು ಕಷ್ಟಪಟ್ಟು ಬಹು ವರ್ಷಗಳಿಂದಲೂ ಕಲ್ಟಿವೇಟು ಮಾಡುತ್ತಿದ್ದರೂ ಇವರನ್ನು ಜಮೀನುಗಳಿಂದ ಬಿಡಿಸಬೇಕೆಂದು ಅಲ್ಲಿ ಕೆಲವು ಜನರು ಬಹಳ ತೊಂದರೆ ಕೊಡುತ್ತಿದ್ದಾರೆ. ಇವರಲ್ಲೇ ಇರುವ ಕೆಲವು ಜನ ಇವರನ್ನು ಎಕ್ಸ್‌ಪ್ಲಾಯಿಟ್ ಮಾಡಲು ಪ್ರಯತ್ನ ಮಾಡಿ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಈ ಬಡ ಜನರು ಅಲ್ಲಿದ್ದ ಕಲ್ಲು ಮಣ್ಣುಗಳನ್ನು ಹಾಗೂ ಮುಳ್ಳುಗಳನ್ನು ತೆಗೆದು ಅಷ್ಟೋ ಇಷ್ಟೋ ಬೆಳೆಯುತ್ತಿದ್ದಾರೆ. ಇಂತಹ ಜನರಿಗೆ ಭೂಮಿ ತಪ್ಪಿಸಿದರೆ ತುಂಬಾ ಹಾನಿಯಾಗುತ್ತದೆ. ಇದರ ಕಡೆಗೆ ಸರಕಾರ ಆದಷ್ಟು ಬೇಗ ನಿರ್ಣಯ ತೆಗೆದುಕೊಂಡು ಹತ್ತು ಹದಿನೈದು ವರ್ಷಗಳಿಂದಲೂ ಇಲ್ಲಿ ಜೀವನ ಮಾಡುತ್ತಿರುವ ಜಮೀನುಗಳನ್ನುಳಿಸಿಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕೆ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, 5.65 ಲಕ್ಷ ರೂಪಾಯಿಗಳ ಬೇಡಿಕೆಗಳನ್ನು ನಮ್ಮ ಮುಂದೆ ವ್ಯವಸಾಯಕ್ಕಾಗಿ ಬೇಕೆಂದು ಇಟ್ಟಿದ್ದಾರೆ.

ನಮ್ಮ ದೇಶದಲ್ಲಿ ಅತಿ ಮುಖ್ಯವಾದ ಕಸಬು ಮತ್ತು ನಮ್ಮ ದೇಶದಲ್ಲಿ ಹೆಚ್ಚಿನ ಪ್ರಜೆಗಳು ಜೀವನ ಮಾಡುತ್ತ ಇರತಕ್ಕ ಕಸಬು ಎಂದರೆ ವ್ಯವಸಾಯ. ನಮ್ಮ ಕಸುಬು ವ್ಯವಸಾಯ ಎಂದು ಹೇಳಿಕೊಂಡರೂ ಕೂಡ ಈಗ್ಗೆ ನೂರಾರು ವರ್ಷಗಳ ಹಿಂದೆ ನಾವು ಯಾವ ಸ್ಥಿತಿಯಲ್ಲಿದ್ದೆವೋ ಇವೊತ್ತು ಇಷ್ಟು ಯೋಜನೆಗಳಾದರೂ ಅದೇ ಸ್ಥಿತಿಯಲ್ಲಿದ್ದೇವೆ. ಅಲ್ಲದೆ ವ್ಯವಸಾಯದ ಬಾಬಿನಲ್ಲಿ ಕೆಲಸಮಾಡುವ ಅಧಿಕಾರಿಗಳೂ ಕೂಡ ಇದರ ಕಡೆಗೆ ಹೆಚ್ಚು ಪ್ರಯತ್ನ ಮಾಡಲು ಆಗಲಿಲ್ಲ ಎನ್ನುವುದನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ. ಈ ವ್ಯವಸಾಯ ಇಲಾಖೆಯಲ್ಲಿ ನೂರಾರು ಜನ ಕೆಲಸ ಮಾಡತಕ್ಕವರು ಇದ್ದರೂ, ಅದರಲ್ಲೂ ಹೆಚ್ಚಾಗಿ ವ್ಯವಸಾಯ ಕ್ಷೇತ್ರದಲ್ಲಿ ಪದವಿಯನ್ನು ಪಡೆದುಕೊಂಡು ಬಂದಿರತಕ್ಕ ಜನರೂ ಇದ್ದಾರೆ. ಇಷ್ಟೆಲ್ಲಾ ಇದ್ದರೂ ನಮ್ಮ ಅಧಿಕಾರಿಗಳು ಜಮೀನಿನಲ್ಲಿ ನಿಂತು ಕೆಲಸ ಮಾಡುವ ಮನೋಭಾವವಿಲ್ಲದೆ ಬರೀ ಸೂಟು ಬೂಟುಗಳಿಂದ ಹಳ್ಳಿಗಳಲ್ಲಿರುವ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಜನರ ಸಂಪರ್ಕ ಪಡೆಯಲು ಅವರಿಗೆ ಆಗುತ್ತಿಲ್ಲ. ರೈತನು ಹೇಗೆ ಚಡ್ಡಿ ಹಾಕಿಕೊಂಡು ಜಮೀನಿನಲ್ಲಿ ಕೆಲಸ ಮಾಡುತಾನೋ ಹಾಗೆ ಮಾಡದೆ ಸುಮ್ಮನೆ ತೆವರಿನ ಮೇಲೆ ಓಡಾಡಿಕೊಂಡು ಸೂಟು ಬೂಟು ಹಾಕಿಕೊಂಡು ಇದ್ದರೆ ಇಲ್ಲಿ ವ್ಯಾವಸಾಯವಾಗುವುದಿಲ್ಲ. ಅಧಿಕಾರಿಗಳು ಈ ಕಡೆಗೆ ಸ್ವಲ್ಪ ನಿಗಾ ವಹಿಸಿ ಅವರು ವೇಷ ಭೂಷಣಗಳನ್ನು ರೈತನಂತೆ ಮಾರ್ಪಾಡು ಮಾಡಿಕೊಂಡರೆ ಅನುಕೂಲವಾಗುತ್ತದೆ. ಇವೊತ್ತು ಶೇಕಡ ಎಂಬತ್ತರಷ್ಟು ಭಾಗದ ಜನರು ವ್ಯವಸಾಯದಿಂದ ಜೀವನ ಮಾಡುತ್ತಾರೆ. ಮತ್ತು ವ್ಯವಸಾಯದ ಕಸಬನ್ನು ಮಾಡುತ್ತಿದ್ದಾರೆ. ನಮಗೆ ಈಗ ಲಕ್ಷ ಗಟ್ಟಲೆ ಆಹಾರದ ಕೊರತೆ ಇದೆ ಎಂದು ಅಮೇರಿಕಾ ಹಾಗೂ ಆಸ್ಟ್ರೇಲಿಯಾ ದೇಶಗಳಿಂದ ದವಸಗಳನ್ನು ತರಿಸಿ ತಿನ್ನಬೇಕಾಗಿ ಬಂದಿದೆ. ಇದಕ್ಕೆ ಕಾರಣಗಳನ್ನು ಸ್ವಲ್ಪ ವಿವೇಚನೆ ಮಾಡಬೇಕಾದುದು ಆಗತ್ಯ. ಇವೊತ್ತು ಒಬ್ಬ ರೈತ ಸುಖವಾಗಿ ಸಂಸಾರ ಸಾಗಿಸಬೇಕಾದರೆ ಕನಿಷ್ಟಪಕ್ಷ ನೀರಿನ ಹಾಗೂ ಇತರ ಸೌಕರ್ಯಗಳೂ ಸೇರಿ ಸುಮಾರು 10 ಎಕ್ಕರೆಗಳಷ್ಟು ಭೂಮಿ ಇರಬೇಕಾಗುತ್ತದೆ. ಈಗ ನಮ್ಮಲ್ಲಿ 3-4 ಎಕರೆಗಳಷ್ಟು ಹಿಡುವಳಿ ಇರುವವರೇ ಹೆಚ್ಚು. ಇವರು ಕಷ್ಟಪಟ್ಟು ಕೆಲಸ ಮಾಡುತ್ತ ಇದ್ದರೂ ಕೂಡ ಸರಿಯಾದ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಪ್ರತಿಫಲ ದೊರಕುತ್ತಿಲ್ಲ. ಏನೋ ಅಪ್ಪ ಹಾಕಿದ ಆಲದ ಮರ ಎನ್ನುವಂತೆ ವ್ಯವಸಾಯ ಮಾಡುತ್ತಿದ್ದಾನೆ. ಅದ್ದರಿಂದ ಹೆಚ್ಚು ಉತ್ಪತ್ತಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ವ್ಯವಸಾಯ ಕ್ಷೇತ್ರದಲ್ಲಿ ಇಷ್ಟೇ ಆದಾಯ ಕ್ಲಪ್ತವಾಗಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ದೇಶದ ಕೈಗಾರಿಕೆಯಲ್ಲಿರುವಷ್ಟು ಕೂಲಿ ನಿಗದಿಯಾಗಿರುವಂತೆ ಇಲ್ಲಿ ಬರುವುದಿಲ್ಲ. ಏನೋ ಸಂಬಳ ಸಾರಿಗೆ ಬರುತ್ತಿರುವವರು ಏನೋ ಒಂದು ರೀತಿ ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ವ್ಯವಸಾಯಗಾರನ ಪರಿಸ್ಥಿತಿಯನ್ನು ಈ ವರ್ಷ ನೋಡಿದರೆ, ಮಳೆ ಬೆಳೆಗಳು ಬಾರದೆ ಇದ್ದಬದ್ದ ಹಣವನ್ನೆಲ್ಲಾ ಬಿತ್ತನೆಗೆ ಹಾಕಿ ನರಳುವಂತಹ ಸ್ಥಿತಿಗೆ ಸಿಕ್ಕಿದ್ದಾನೆ. ವ್ಯವಸಾಯ ಕ್ಷೇತ್ರದಲ್ಲಿ ಈ ಪರಿಸ್ಥಿತಿ ಒದಗಿರುವುದರಿಂದ ಬಹಳ ಕಷ್ಟವಾಗುತ್ತದೆ. ಈಗ ಕೇಂದ್ರ ಸರಕಾರದವರು ಪಾಕೀಸ್ಥಾನದ ಜೊತೆಯಲ್ಲಿ ನಾವು ಯುದ್ಧ ಮಾಡುತ್ತೇವೆ ಎಂದು ಹೇಳಿ ಅದಕ್ಕೆ ಸುಮಾರು ಸಾವಿರ ಚಿಲ್ಲರೆ ಕೋಟಿಯಷ್ಟು ಹಣ ಖರ್ಚಾಯಿತು ಎಂದು ಹೇಳುತ್ತಾರೆ. ಇವೊತ್ತು ನಮಗೆ ಈ ಆಹಾರದ ಅಭಾವ ಪರಿಸ್ಥಿತಿಯಲ್ಲೂ ಕೂಡ ಇದೇ ರೀತಿ ಹಣವನ್ನು ಖರ್ಚು ಮಾಡಿದ್ದರೆ ವ್ಯವಸಾಯ ಕ್ಷೇತ್ರದಲ್ಲಿರುವ ರೈತರಿಗೆ ಎಲ್ಲ ಸೌಲಭ್ಯಗಳನ್ನೂ ಕೊಟ್ಟಿದ್ದರೆ ಆಹಾರದ ಕೊರತೆ ಸುಲಭವಾಗಿ ಪರಿಹಾರವಾಗುತ್ತಿತ್ತೋ ಏನೋ ಎಂದು ನನಗನಿಸುತ್ತದೆ.

ರೈತರಲ್ಲಿ ಇವತ್ತು ನೀರಾವರಿ ಬಾವಿಗಳ ಮೇಲೆ ಬಹಳ ಮುತುವರ್ಜಿ ಇದೆ. ಅವರು ಎಲ್ಲಾ ಕಡೆಯಲ್ಲೂ ಬಾವಿಗಳನ್ನು ತೆಗೆಯುತ್ತಾ ಇದ್ದಾರೆ. ಬಾವಿಗೆ ಹಣ ಕೊಡಬೇಕೆಂದು ಕೇಳಿದಾಗ ತಾವು ಕೊಡತಕ್ಕ ಹಣದಿಂದ ಏನು ಅನುಕೂಲವಾಗುತ್ತದೆ ಎಂದು ಕೇಳುತ್ತೇನೆ. ತುಂಗಭದ್ರಾ ಪ್ರಾಜೆಕ್ಟು, ವಿಶ್ವೇಶ್ವರಯ್ಯ ಚಾನಲ್ ಏರಿಯಾ ಇಂತಹ ಕಡೆ ಈಗಾಗಲೇ ಹಾಲಿ ನೀರಿನ ಅನುಕೂಲ ಇರುವುದರಿಂದ ಆ ಕ್ಷೇತ್ರಗಳಲ್ಲಿರತಕ್ಕ ತಾಲ್ಲೂಕುಗಳೂ ಒಂದೇ, ಇಂತ ಕ್ಷಾಮಕ್ಕೆ ತುತ್ತಾಗಿರತಕ ತಾಲ್ಲೂಕುಗಳೂ ಒಂದೇ ಎಂದು ಹೇಳಿ ಹಂಚುವುದು ಸುತ್ರಾಂ ಸರಿಯಾದ್ದಲ್ಲ. ಎಲ್ಲಿ ಬರೀ ಮಳೆಯ ಆಸರೆಯಿಂದ ವ್ಯವಸಾಯ ಮಾಡುತ್ತೇವೆಯೋ ಅಂತಹ ಕಡೆ ಹೆಚ್ಚು ಬಾವಿಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಭೂಮಿಯನ್ನು ಉತ್ತು, ರಾಗಿಯನ್ನು ಬಿತ್ತಿ ಬೆಳೆ ಬೆಳೆಯುವವರೆಗೂ ನಮ್ಮ ಬಡತನ ಹೋಗುವುದಿಲ್ಲ. ರೈತ ಸಮೃದ್ಧಿಯಾಗಿ ಇರಬೇಕಾದರೆ ಅವನಿಗೆ ಪಶುಪಾಲನೆ ಬಹಳ ಮುಖ್ಯ. ಪಶುಪಾಲನೆ ಮಾಡಬೇಕಾದರೆ ಅದಕ್ಕೆ ಉತ್ತಮವಾದ ಮೇವುಬೇಕು. ಇವತ್ತು ನಮ್ಮ ಕಡೆ ಒಂದು ಕಡ್ಡಿ ಹುಲ್ಲು ಸಿಕ್ಕುವುದಿಲ್ಲ. ಇದ್ದಬದ್ದ ದನಕರುಗಳನ್ನೆಲ್ಲಾ ಮಾರಿ ಮುಂಗಾರು ಮಳೆ, ರೇವತಿ, ಅಶ್ವಿನಿ ಮಳೆ ಬಂದರೆ ಜಮೀನುಗಳ ಏರೆ ಕಟ್ಟುವುದಕ್ಕೆ ಎತ್ತು ಇಲ್ಲದೆ ವ್ಯವಸಾಯವನ್ನು ಪ್ರಾರಂಭ ಮಾಡುವುದಕ್ಕೆ ಬಹಳ ಕಷ್ಟವಾಗಿದೆ. ಇಂತಹ ಒಂದು ಪರಿಸ್ಥಿತಿಗೆ ನಾವು ಸಿಕ್ಕಿರುವಾಗ ಟ್ರಾಕ್ಟರುಗಳು ಮತ್ತು ಟಿಲ್ಲರಗಳನ್ನು ಆದಷ್ಟು ಇವತ್ತು ಒದಗಿಸಬೇಕು. ಮೂರು-ನಾಲ್ಕು ವರ್ಷದ ಕೆಳಗೆ ಜಪಾನಿನ ಒಂದು ಕಂಪೆನಿಯ ಜೊತೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಮೈಸೂರಿನವರಿಗೆ ಲೈಸೆನ್ಸ್ ಕೊಟ್ಟು ಬಹಳ ಕಮ್ಮಿ ಬೆಲೆಯಲ್ಲಿ ಉಳುಮೆ ಮಾಡತಕ್ಕ ನೇಗಿಲನ್ನು ಮಾಡುತ್ತೇವೆ ಎಂದು ಸರ್ಕಾರ ಹೇಳಿತ್ತು. ದುರಾದೃಷ್ಟದಿಂದ ಈ ರಾಜ್ಯದಲ್ಲಿ ಕೈಗಾರಿಕೆಗೆ ತಕ್ಕ ಪ್ರೋತ್ಸಾಹ ಇಲ್ಲ. ಬರೀ ಬಾಯಿ ಮಾತೇ ಆಗಿದೆ. ಕಡ್ಡಾಯವಾಗಿ ಕೇಂದ್ರ ಸರ್ಕಾರದಿಂದ ನಮಗೆ ಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ನಮ್ಮ ಸರ್ಕಾರ ಅಸಮರ್ಥವಾಗಿದೆ. ನಮ್ಮಲ್ಲಿರುವುದು ಹಾಲಿ ಬೆಳಗೊಳದಲ್ಲಿ ಒಂದು ಗೊಬ್ಬರದ ಕಾರ್ಖಾನೆ. ಆ ಗೊಬ್ಬರ ನಮ್ಮ ಮಂಡ್ಯ ಜಿಲ್ಲೆಗೇ ಸಾಲದು ; ಅಂತಹ ಪರಿಸ್ಥಿತಿ ಇರುವಾಗ ಬರೀ ಸೀಮೆ ಗೊಬ್ಬರವನ್ನೇ ನೆಚ್ಚಿಕೊಂಡಿದ್ದರೆ ನಮ್ಮ ವ್ಯವಸಾಯಕ್ಕೆಲ್ಲಾ ಗೊಬ್ಬರವನ್ನು ಕೊಡುವುದಕ್ಕಾಗುವುದಿಲ್ಲ. ಹಸರು ಗೊಬ್ಬರದ ಕಡೆಗೆ ಗಮನ ಕೊಡಬೇಕು. ಪ್ರತಿಯೊಂದು ಕಡೆಯೂ ಹಸರು ಸೊಪ್ಪು ಬೆಳೆಸಿ ಅದರಿಂದ ಗೊಬ್ಬರ ಮಾಡತಕ್ಕ ವಿಧಾನವನ್ನು ಕಂಡುಕೊಳ್ಳಬೇಕಾಗಿದೆ. ಜೊತೆಗೆ ಇವತ್ತು ಗೋಮಾಳ ಎಲ್ಲೆಲ್ಲೂ ಇಲ್ಲ. ಇದ್ದಬದ್ದ ಕೆಲವು ಜಾಗಗಳಲ್ಲಿ ಅರಣ್ಯ ಇಲಾಖೆಯವರು ಅರಣ್ಯವನ್ನು ಬೆಳೆಸುತ್ತಾ ಇದ್ದಾರೆ. ಹೀಗಿರುವುದರಿಂದ ನಮ್ಮ ಗೋ ಸಂಪತ್ತು, ಕುರಿ ವಗೈರೆ ಸಾಕಬೇಕಾದರೆ ಬಹಳ ತೊಂದರೆಯಾಗಿದೆ. ಈಗ ಅರಣ್ಯವನ್ನು ಹೇಗೆ ಬೆಳೆಸುತ್ತಾರೆಯೋ ಅದೇ ರೀತಿ ಹುಲ್ಲುಗಾವಲುಗಳನ್ನು ಬೆಳೆಸುವುದು ಬಹಳ ಮುಖ್ಯವಾಗಿದೆ. ಇಲ್ಲದೆ ಹೋದರೆ ಪಂಚಾಯಿತಿ ಕ್ಷೇತ್ರದಲ್ಲಿ ಪ್ರತಿಯೊಂದು ಪಂಚಾಯಿತಿ ಕ್ಷೇತ್ರದಲ್ಲೂ 50-60 ಎಕರೆ ಪ್ರದೇಶದಲ್ಲಿ ಉತ್ತಮವಾದ ಹುಲ್ಲನ್ನು ಬೆಳೆಯತಕ್ಕ ಏರ್ಪಾಡನ್ನು ಮಾಡಬೇಕು ಎಂದು ಕೇಳಿಕೊಳ್ಳಬೇಕಾಗಿದೆ. ರೈತ ಸಂಸಾರವನ್ನು ನಡೆಸುವುದಕ್ಕೆ, ಅವನ ಸಂಸಾರ ಸಮೃದ್ಧಿಯಾಗಿ ಮಾಡುವುದಕ್ಕೆ ಅವನ ಮಕ್ಕಳು ಮರಿ ವಿದ್ಯಾವಂತರಾಗುವುದಕ್ಕೆ ಹಾರ್ಟಿಕಲ್ಚರ್ ಇಲಾಖೆಯಿಂದ ಸರಿಯಾದ ಸೊಸಿಗಳನ್ನು ಕೊಟ್ಟು ಅವರನ್ನು ತೋಟಗಾರರನ್ನಾಗಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಹೈಬ್ರಿಡ್ ಬೀಜದ ವಿಷಯದಲ್ಲಿ ಬಹಳ ಜನ ಸದಸ್ಯರು ಮಾತನಾಡಿದ್ದಾರೆ. ಇಲಾಖೆಯವರು ಒದಗಿಸತಕ್ಕ ಬೀಜದ ವಿಷಯದಲ್ಲಿ ಈಗಾಗಲೇ ನಮಗೆ ಬಹಳ ಅನುಮಾನ ಬಂದಿದೆ. ಅವರು ಕೊಟ್ಟಂಥ ಬೀಜದಲ್ಲಿ ಮೂರುಕಾಳು ಬತ್ತ ಆಗಿಲ್ಲ. ಆದ್ದರಿಂದ ಈ ಇಲಾಖೆಯಲ್ಲಿ ಬಹಳ ಅಪನಂಬಿಕೆ ಬಂದಿದೆ. ಶ್ರೀಮತಿ ಬಸವರಾಜೇಶ್ವರಿಯವರು ನಮ್ಮ ಕಡೆ ಖಾಸಗಿ ಜನರು ಬೀಜ ತಯಾರು ಮಾಡಿ ಕೊಡುತ್ತಾರೆ ಎಂದು ಹೇಳುತ್ತಾ ಇದ್ದರು. ಈಗ ಎರಡು ವಾರದ ಕೆಳಗೆ ನಾನು ಶ್ರೀಮಾನ್ ಬೈರೇ ಗೌಡರು ಮತ್ತು ರಾಮೇ ಗೌಡರ ಜೊತೆಯಲ್ಲಿ ಬಿಜಾಪುರ ಗ್ರಾಮಕ್ಕೆ ಹೋಗಿದ್ದೆ. ಅಲ್ಲಿ ರಾಮಸ್ವಾಮಿ ಎಂಬುವರು ಮಾಡಿದ ಕ್ಷೇತ್ರ ನೋಡಿದಾಗ ಅವರು ಈ ರೀತಿ ಹೇಳುತ್ತಾ ಇದ್ದರು. ರೈತ ಕಟ್ಟುನಿಟ್ಟಾಗಿ ಬೆಳೆ ಬೆಳೆಯುವುದಕ್ಕೆ ಬಹಳ ಕಷ್ಟವಾಗುತ್ತದೆ; ಆದ್ದರಿಂದ ಕೂಡಲೇ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಕ್ಷೇತ್ರವನ್ನು ಆಯ್ದುಕೊಂಡು ಎಷ್ಟೇ ಸಿಬ್ಬಂದಿ ಆಗಲಿ, ಎಷ್ಟೇ ಖರ್ಚಾಗಲಿ ಪರವಾಗಿಲ್ಲ ಈ ಸೀಡ್ ಫಾರಂಗಳ ಜವಾಬ್ದಾರಿಯನ್ನು ಅವರೇ ತೆಗೆದುಕೊಳ್ಳಬೇಕು ನಾಳೆ ಒಂದು ಪಕ್ಷ ಅವರು ರೈತರಿಗೆ ಕೊಟ್ಟಂತಹ ಬೀಜದಲ್ಲಿ ದೋಷ ಇದ್ದರೆ ತೊಂದರೆಯಾಗುವುದಾದರೆ ಇಲಾಖೆಯವರೇ ಜವಾಬ್ದಾರರಾಗಬೇಕಾಗುತ್ತದೆ. ರೈತರನ್ನು ಜವಾಬ್ದಾರರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರೇ ಈ ದೊಡ್ಡ ಹೊಣೆಗಾರಿಕೆಯನ್ನು ಹೊರಬೇಕು. ಸರ್ಕಾರದ ಪರವಾಗಿ ತಾಲ್ಲೂಕಿಗೆ ಬಿತ್ತನೆ ಫಾರಂನ್ನು ಇಡಬೇಕು. ಅಲ್ಲಿ ಹೊಸ ರೀತಿಯಲ್ಲಿ ಬೀಜಗಳನ್ನು ತಂದು ರೈತರಿಗೆ ಸುಲಭ ದರದಲ್ಲಿ ಕೊಡಬೇಕು. ಈ ರೀತಿ ಮಾಡಬೇಕು ಎಂದು ಸಮಯದಲ್ಲಿ ಹೇಳಲು ಇಷ್ಟ ಪಡುತ್ತೇನೆ.

ಈಗ ನಮ್ಮಲ್ಲಿ ಬಾವಿಗಳ ಕಡೆಗೆ ಸ್ವಲ್ಪ ನಿಗಾ ಇದ್ದರೂ ಕೂಡ ಟ್ಯೂಬ್‌ವೆಲ್ಸ್ ಬಗ್ಗೆ ಪರಿಶೋಧನೆ ಮಾಡಿದ ಹಾಗೆ ಕಾಣುವುದಿಲ್ಲ. ಬಾವಿಗಳನ್ನು ತೆಗೆಯುತ್ತಾ ಇರುವ ಕಡೆ ಹೋಗಿ ನೋಡಿದಾಗ ಟ್ಯೂಬ್‌ವೆಲ್ಸ್ ಬಹಳ ಫಲಪ್ರದವಾಗಬಹುದು, ಭೂಮಿಯಿಂದ ನೀರನ್ನು ತೆಗೆದು ಬೆಳೆಗಳಿಗೆ ಉಪಯೋಗಿಸಿದರೆ ಅನುಕೂಲವಾಗಬಹುದು ಎಂದು ಕಂಡು ಬಂತು ಆ ಒಂದು ಮನೋಭಾವ ನಮಗೆ ಇದೆ. ಆದ್ದರಿಂದ ಸರ್ಕಾರದವರು ಟ್ಯೂಬ್ ವೆಲ್ಸ್‌ನ್ನು ತೆಗೆಸುವ ವಿಷಯದಲ್ಲಿ ಪರಿಶೋಧನೆ ಮಾಡಿ ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ತೆಗೆಸಬೇಕೆಂದು ಹೇಳುತ್ತೇನೆ.

ಸಾಯಿಲ್ ಟೆಸ್ಟಿಂಗ್ ಬಗೆಗೆ ಬರೀ ಬಾಯಲ್ಲಿ ಹೇಳುವುದು ಆಗಿದೆಯೇ ಹೊರತು ಸರಿಯಾದ ರೀತಿಯಲ್ಲಿ ಆ ಕೆಲಸ ನಡೆದಿಲ್ಲ. ಅದಕ್ಕೆ ರಿಸರ್ಚ್ ಫಾರಂ ಮಾಡಬೇಕೆಂದು ಹೇಳಬಯಸುತ್ತೇನೆ. ಪ್ಲಾಂಟೇಷನ್‌ನಲ್ಲಿ ಕರ್ಪೂರಸಸಿ, ತಂಗಡಿ ಗಿಡಗಳನ್ನು ಹಾಕುತ್ತಾ ಇದ್ದಾರೆ. ನಮ್ಮಲ್ಲಿ ಉತ್ತಮವಾದ ತೇಗ, ಬೀಟೆ, ಹೊನ್ನೆ, ನಂದಿ ಮರಗಳು ಬಹಳವಾಗಿ ಬೆಳೆಯುತ್ತದೆ. ನಮ್ಮ ರಾಜ್ಯ ತೇಗದ ಮರಕ್ಕೆ ಬಹಳ ಪ್ರಸಿದ್ಧವಾದ ಪ್ರಾಂತ. ಇದು ಎಲ್ಲಾ ಕಡೆಯಲ್ಲೂ ಬರುವುದಿಲ್ಲ. ಆದ್ದರಿಂದ ಯಾವ ಯಾವ ಹವಾಗುಣಕ್ಕೆ ಯಾವ ಯಾವ ಜಾತಿಯ ಮರ, ಯಾವ ಯಾವ ಕ್ಷೇತ್ರದಲ್ಲಿ ಬರುತ್ತದೆ ಅಂತಹ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸರ್ಕಾರದವರಿಗೆ ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

3-30 P.M.

ಮೀನಿನ ವಿಷಯ ಬಹಳವಾಗಿ ಹೇಳುತ್ತಾರೆ. ನಾವು ಬೆಂಗಳೂರಿನಲ್ಲಿ ಎರಡು ತಿಂಗಳಿನಿಂದ ಇದ್ದೇವೆ, ನಮ್ಮ ಕ್ಯಾಂಟೀನಿನಲ್ಲಿ ತಿನ್ನಬೇಕೆಂದರೆ ಒಳ್ಳೆಯ ಮೀನು ಸಿಕ್ಕುವುದಿಲ್ಲ, ನಮ್ಮಲ್ಲಿ ಸಿಕ್ಕುತ್ತಿರುವ ಮೀನನ್ನು ಎಲ್ಲಿ ಬೆಳೆಯುತ್ತಾರೋ ಅರ್ಥವಾಗುವುದಿಲ್ಲ. ಆದುದರಿಂದ ಬರೀ ಮಂಗಳೂರು ಮತ್ತು ಸಮುದ್ರ ತೀರದಲ್ಲಿ ಮೀನಿನ ಅಭಿವೃದ್ಧಿಗಾಗಿ ಕೊಡುವ ಹಣವನ್ನೆಲ್ಲಾ ಖರ್ಚು ಮಾಡದೆ ಒಳನಾಡಿನಲ್ಲಿರುವ ಸಣ್ಣ ಸಣ್ಣ ಕೊಳಗಳಲ್ಲಿ ಮೀನು ಬೆಳೆಯುವುದಕ್ಕೆ ಏರ್ಪಾಡು ಮಾಡಿ ಅಲ್ಲಿಗೂ ಹಣ ಒದಗಿಸಬೇಕೆಂದು ಸೂಚಿಸುತ್ತೇನೆ. ವ್ಯವಸಾಯದ ಬಾಬಿಗೆ ಸೇಲ್ಸ್‌ಟ್ಯಾಕ್ಸ್ ಹಾಕಬಾರದು ಎಂದು ಇಷ್ಟು ಹೇಳಿ ಕಾಲಾವಕಾಶವಿಲ್ಲದ್ದರಿಂದ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

[MR. SPEAKER in the Chair.]

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಸ್ವಾಮಿ, ಈ ದಿವಸ ವ್ಯವಸಾಯದ ಇಲಾಖೆಯ ಬಗ್ಗೆ ತಂದಿರುವ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನಗೆ ಹೆಚ್ಚು ಕಾಲಾವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಕುಂದೂರು ರುದ್ರಪ್ಪ)

ದೇಶದಲ್ಲಿ ಇವತ್ತು ಆಹಾರದ ಕೊರತೆಯಿಂದ ಬಹಳ ಕಷ್ಟ ಪರಿಸ್ಥಿತಿ ಇದೆ. ಆಹಾರ ಪದಾರ್ಥಗಳನ್ನು ಬೆಳೆಯುವವರು ರೈತರು, ಹಳ್ಳಿಗಳಲ್ಲಿ ಸೇಕಡ 85 ಮಂದಿ ಗ್ರಾಮಾಂತರಗಳಲ್ಲಿದ್ದಾರೆ. ರೈತರು ದೇಶದ ಬೆನ್ನುಮೂಳೆ ಎಂದು ಬಾಯಲ್ಲಿ ಹೇಳುತ್ತಿರುವರೇ ವಿನಾ ಕಾರ್ಯತಃ ಅಂಥವರಿಗೆ ಸಾಕಾದಷ್ಟು ಸಹಾಯವನ್ನೇನೂ ಮಾಡಿರುವುದಿಲ್ಲ. ಅವರು ದುಡಿದು ಪಟ್ಟಣಗಳಿಗೆ ಆಹಾರವನ್ನು ತಂದುಕೊಡಬೇಕು. ರೈತರಿಗಾಗಿ ನೂರು ರೂಪಾಯಿ ಕೊಟ್ಟರೆ ಅವರಿಗೆ ಸಲ್ಲುವುದು 48 ರೂಪಾಯಿ ಮಾತ್ರ. ಬಜಾರಿನಲ್ಲಿರುವ ದರಕ್ಕೂ ರೈತರಿಗೆ ಕೊಡುವುದಕ್ಕೂ ಬಹಳ ವ್ಯತ್ಯಾಸವಿದೆ. ಈ ದಿವಸ ಒಂದೆಕರೆಗೆಷ್ಟು ಗೊಬ್ಬರ ಹಾಕುತ್ತಾರೆಂಬುದನ್ನು ನೋಡಬೇಕು. ನನ್ನ ಮಿತ್ರರು ಗಾಂಜಿ ವೀರಪ್ಪನವರು ಈ ವರ್ಷ ವ್ಯವಸಾಯ ಮಾಡುತ್ತಿದ್ದಾರೆ. ಅದು ಬಹಳ ಕಷ್ಟ, ನೀವು ಹೇಗೆ ಮಾಡುತ್ತೀರಿ ಎಂದು ಅವರು ನನ್ನನ್ನು ಕೇಳಿದರು. ರೈತರಿಗೆ ಅತೃಪ್ತಿ ಇದೆ, ಅದನ್ನು ಯಾವುದಾದರೂ ಒಂದು ರೀತಿ ಹೋಗಲಾಡಿಸಿ ಅವರನ್ನು ಉದ್ಧಾರ ಮಾಡಬೇಕು. ರೈತರಿಗೆ ಹಣ ಕೊಡುತ್ತಿದ್ದರೂ ಅದರಿಂದ ಸಾಕಷ್ಟು ಉಪಯೋಗವಾಗುತ್ತಿಲ್ಲ, ಬರೀ ಸಿಬ್ಬಂದಿಗೆ, ಇಲಾಖೆಯ ಖರ್ಚು ಆಫೀಸರುಗಳಿಗೇ ಹೆಚ್ಚು ಖರ್ಚಾಗುತ್ತಿದೆ, ಅವರ ಸಂಖ್ಯೆ ಬೆಳೆಯುತ್ತಿದೆ. ಲಕ್ಷ ರೂಪಾಯಿ ಖರ್ಚು ಮಾಡಿದರೆ 25 ಸಾವಿರ ಕೂಡ ರೈತರಿಗೆ ಸೇರುವುದಿಲ್ಲ. ತುಂಗಭದ್ರಾ ಡೆವಲಪ್‌ಮೆಂಟ್ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯ ವ್ಯವಸಾಯಾಭಿವೃದ್ಧಿ ಮಾಡಬೇಕು, ಸಂಶೋಧನೆ ಮಾಡಬೇಕು ಎಂದು ಹೇಳುತ್ತಾರೆ. ದಾವಣಗೆರೆ ಮತ್ತು ಹರಿಹರ ಮಧ್ಯೆ ಒಂದು ಸೀಡ್ ಫಾರಂ ಮಾಡಬೇಕೆಂದು 5 ವರ್ಷದಿಂದ ಪ್ರಯತ್ನವಿದೆ, ಎಷ್ಟೋ ಖರ್ಚಾಗಿದೆ. ಆದರೆ ಉಪಯೋಗ ಆಗಿಲ್ಲ. ಅಲ್ಲಿ ಒಂದು ಎಕರೆಗೆ 5 ಸಾವಿರ ರೂಪಾಯಿ ಬೆಲೆ ಇದೆ, ಅಲ್ಲಿ ಸಂಶೋದನೆ ಮಾಡುತ್ತಾರಂತೆ. ಇದು ಯಾವ ನ್ಯಾಯ ! ಉಚಿತವಾಗಿ ಕತ್ತಲಗೆರೆ ಗ್ರಾಮದಲ್ಲಿ ಜಮೀನು ಕೊಡುತ್ತೇವೆ ಎಂದರೆ ಜಾಯಿಂಟ್ ಡೈರೆಕ್ಟರು ಆಗುವುದಿಲ್ಲವೆಂದು ಹೇಳುತ್ತಾರೆ, ರೈತರು ಉದ್ಧಾರವಾಗಲಿ, ಅವರು ಬೆಳೆಯಲಿ ಎಂಬ ಭಾವನೆ ಇಲ್ಲ. ರೈತರಿಗೆ ಬಹಳ ತೊಂದರೆ ಇದೆ. ಸೀಡ್ ಫಾರಂ ಬಗ್ಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಗಬೇಕಾದ ಕೆಲಸ ಇನ್ನೂ ಆಗಿಲ್ಲ. ಎಲ್ಲಾ ಕಡೆಯೂ ಸೀಡ್‌ಫಾರಂ ಕೆಲಸ ನಷ್ಟದಲ್ಲಿ ನಡೆದಿದೆ. ನಮ್ಮಲ್ಲಿ 50 ಸಾವಿರ ರೂಪಾಯಿ ಒಂದು ಫಾರಂಗೆ ಖರ್ಚು ಮಾಡುತ್ತಾರೆ. ಇದೇ ಹಣವನ್ನು ರೈತರಿಗೆ ಕೊಡಬೇಕಾಗಿರುವುದರಿಂದ, ಅವರಿಗೆ ಸಹಾಯಮಾಡಬೇಕಾಗಿರುವುದರಿಂದ ನಷ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳುತ್ತಾರೆ. ರೈತರಿಗೆ ಪ್ರೋತ್ಸಾಹವಿಲ್ಲಾ ಮೊನ್ನೆ ಜಿಲ್ಲಾಧಿಕಾರಿಗಳ ಗ್ರೇಡಿನ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಭದ್ರಾ ಪ್ರಾಜೆಕ್ಟ್ ಆಫೀಸರನ್ನು ಶಿವಮೊಗ್ಗಾಕ್ಕೆ ಹಾಕಿದ್ದಾರೆ. ಅವರನ್ನು ಕೇಳಿದರೆ ಯಾವ ಉಪಕರಣವೂ ಇಲ್ಲವೆಂದು ಹೇಳುತ್ತಾರೆ. ಹೀಗಾದರೆ ಅವರೇಕೆ ಇರಬೇಕು ! ಅವರಿರಬೇಕಾದ್ದು ಅನಾವಶ್ಯಕ. ಅವರ ಆಫೀಸನ್ನು ದಾವಣಗೆರೆಗೆ ಬದಲಾಯಿಸಬೇಕೆಂದಿದ್ದಾರೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಹೀಗೆ ಬದಲಾವಣೆ ಮಾಡಲಿದ್ದಾರೆ. ಇದು ಯಾವ ನ್ಯಾಯ ? ಹೈಬ್ರಿಡ್ ಜೋಳ ಬೆಳೆಯಬೇಕೆಂದು ಹೇಳುತ್ತಾರೆ. ಇಲಾಖೆಯಲ್ಲಿ ಯಾರೂ ಅದಕ್ಕೆ ಸಹಾಯ ಮಾಡುವುದಿಲ್ಲಾ ? ರೈತರಿಗೆ ಪ್ರೋತ್ಸಾಹ ಕೊಡಬೇಕು, ಗೊಬ್ಬರ ಒದಗಿಸಬೇಕು. ಒಂದು ಎಕರೆಯಲ್ಲಿ ಆ ಜೋಳ ಬೆಳೆಯಲು 14 ಬಾಟಲು ಔಷಧಿ ಬೇಕು, 4 ದಿವಸಗಳಿಗೊಂದು ಸಲ ಔಷಧಿ ಹಾಕಬೇಕು. ಔಷದಿ ಕೇಳಿದರೆ ಇಲ್ಲವೆಂದು ಹೇಳುತ್ತಾರೆ, ಕೇಳಿದರೆ ಸ್ಟಾಕಿಲ್ಲವೆಂಥು ಹೇಳುತ್ತಾರೆ. ನಮ್ಮ ಜೋಳ 8 ಚೀಲ ಬೆಳೆದರೆ ಹೈಬ್ರಿಡ್ ಜೋಳ 25 ಚೀಲ ಬೆಳೆಯಬಹುದು, ಆದರೆ ರೈತರಿಗೆ ಪ್ರೋತ್ಸಾಹವಿಲ್ಲ, ಇದರಿಂದ ಅದನ್ನು ಬೆಳೆಯಲು ಸಾಧ್ಯವಿಲ್ಲವಾಗಿದೆ. ಇಲಾಖೆ ಸರಿಯಾಗಿ ಮುತವರ್ಜಿ ವಹಿಸುತ್ತಿಲ್ಲ, ಫಾರಂ ಇಲ್ಲ, ಬಿತ್ತನೆ ಬೀಜ ಇಲ್ಲ. ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಆಫೀಸರಿಗೂ ಬಿ.ಡಿ.ಓ.ಗೂ ಹೊಂದಾಣಿಕೆ ಇಲ್ಲ. ಇದರ ಮೇಲೆ ಒಬ್ಬರು ಡೈರೆಕ್ಟರು ಬೇರೆ, ಅವರು ಬರುವುದಿಲ್ಲ ನೋಡುವುದಿಲ್ಲ. ಇದು ಬಹಳ ಅನ್ಯಾಯ.

ಸ್ವಾಮಿ, ನಾನು ಸ್ವತಃ ರೈತನಾಗಿದ್ದೇನೆ. ವ್ಯವಸಾಯದ ಅನುಭವ ನನಗೆ ಸಂಪೂರ್ಣವಾಗಿ ಇದೆ. ನನ್ನ ಸ್ವಂತ ಅನುಭವದಿಂದ ರೈತನ ಕಷ್ಟ ಸುಖ ಹೇಳುತ್ತೇನೆ. ಹೈಬ್ರಿಡ್ ಜೋಳ ಎಂದು ಏನು ಕರೆಯುತ್ತಾರೆಯೋ ಅದನ್ನು ಹನ್ನೆರಡು ಎಕರೆ ಭೂಮಿಯಲ್ಲಿ ಸಾಗುವಳಿ ಮಾಡಿದ್ದೇನೆ. ಹೈಬ್ರಿಡ್ ಜೋಳ ಅಲ್ಲದೆ ಹೈಬ್ರಿಡ್ ಮೇಜ್ ಕೂಡ ಬೆಳೆದಿದ್ದೇನೆ. ರೈತನಿಗೆ ಅತ್ಯವಶ್ಯವಾಗಿ ಬೇಕಾಗುವ ಸಲಕರಣೆಗಳನ್ನು ಬೀಜ ಗೊಬ್ಬರ ಕಬ್ಬಿಣ ಸಾಮಾನು ಒದಗಿಸಿ ಕೊಟ್ಟರೆ ಅದನ್ನೂ ಕೂಡ ಸಕಾಲದಲ್ಲಿ ಒದಗಿಸಿ ಕೊಟ್ಟರೆ ಮತ್ತು ಸಕಾಲದಲ್ಲಿ ಮಳೆ ಬಂದರೆ ರೈತ ಸಮೃದ್ಧಿಯಾಗಿ ಬೆಳೆಯುತ್ತಾನೆ. ರೈತನಿಗೆ ಮಳೆ ಬಾರದೆ ಸಕಾಲಕ್ಕೆ ಕೆಲಸ ಆಗದಿದ್ದರೆ ಈ ರೀತಿಯಾದರೆ ರೈತನಿಗೆ ಬಡತನ ಬರುತ್ತದೆ? ಸರಕಾರ ಒದಗಿಸತಕ್ಕಂಥ ಬೀಜ ಗೊಬ್ಬರ ರೈತನಿಗೆ ಸಕಾಲದಲ್ಲಿ ದೊರೆಯುವುದಿಲ್ಲ. ಇದಲ್ಲದೆ ಅವನು

ಬೆಳೆದಂಥ ಧಾನ್ಯಕ್ಕೆ ಸರಿಯಾದ ಬೆಲೆ ದೊರೆಯುವುದಿಲ್ಲ. ಅದು ಹೇಗೆಂದರೆ ಲೆವಿ ತೆಗೆದುಕೊಳ್ಳುವಾಗ್ಗೆ 50 ರೂಪಾಯಿ ರೇಟು ಕೊಡಲಾಗುವುದು. ಆದರೆ ಮಾರ್ಕೆಟ್ ರೇಟು ಹೊರಗಡೆ 100 ರೂಪಾಯಿ ಇರುತ್ತದೆ. ಈ ರೀತಿ ಕೆಲಸ ಕಾರ್ಯಗಳು ನಡೆದರೆ ರೈತನ ಉದ್ಧಾರ ಹೇಗೆ ಆಗುವುದು ? ನಿಜ ವಾಗಿಯೂ ಇಂದು ರೈತನ ಬಡತನದಲ್ಲಿಯೇ ಉಳಿದಿದ್ದಾನೆ. ಆದರೆ ಶ್ರೀಮಂತ ಮಾತ್ರ ಹೆಚ್ಚು ಐಶ್ವರ್ಯವಂತರು ಆಗಿ ಒಂದು ಕಾರು ಇಟ್ಟುಕೊಂಡವರು ಎರಡು ಮೂರು ಕಾರು ಕೊಂಡು ಕೊಂಡಿದ್ದಾರೆ. ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಈ ರೀತಿಯಾಗುವುದು ದೇಶದ ಹಿತ ದೃಷ್ಟಿಯಿಂದ ಒಳ್ಳೆಯದಲ್ಲ. ಇಂದು ರೈತ ಬಹಳ ಕಷ್ಟದಲ್ಲಿದ್ದಾನೆ. ಆದುದರಿಂದ ಸರಕಾರ ದಯವಿಟ್ಟು ಬಡ ರೈತರ ಕಡೆಗೆ ತೀವ್ರ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೆಲವು ಕಡೆ ಹೈರೆಟ್ ಪ್ರಾಜೆಕ್ಟ್ ಎಂದು ಮಾಡಿದ್ದಾರೆ. ಸದಸ್ಯರ ಒತ್ತಾಯಕ್ಕೆ ದಾಕ್ಷಿಣ್ಯಕ್ಕೆ ಒಳಗಾಗಿ ಮಂಗಳೂರಿನಲ್ಲಿ ಅಂದರೆ, ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ನಲ್ಲಿ ಒಂದು ಹೈರೆಟ್ ಪ್ರಾಜೆಕ್ಟ್ ಕೊಟ್ಟರು. ಇದು ಏನು ನ್ಯಾಯ ? ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ತುಂಗಾ ನದಿ ಇದೆ, ಭದ್ರಾ ಚಾನೆಲ್ ಇದೆ. ಇಲ್ಲಿ ಇರಿಗೇಶನ್ ಡೆವಲಪ್‌ಮೆಂಟಿಗೆ ಅವಕಾಶ ಇದೆ. ಇದು ಮಲೆನಾಡು ಪ್ರದೇಶ ವಾಗಿರುವುದರಿಂದ ಇಲ್ಲಿ ಒಂದು ಹೈರೆಟ್ ಪ್ರಾಜೆಕ್ಟ್ ಕೊಡಬೇಕಾದುದು ನ್ಯಾಯ. ಇನ್‌ಫ್ಲೂಯೆನ್ಸ್ ಇದ್ದಕಡೆ ಕೊಟ್ಟು ಮಲೆನಾಡಿಗೆ ಕೊಡದೇ ಇದ್ದರೆ ಇದು ಏನು ನ್ಯಾಯ ಸ್ವಾಮಿ ? ಈ ರೀತಿಯಾಗ ಬಾರದು. ರೈತನ ಉದ್ಧಾರ ಹೇಗೆ ಮಾಡುತ್ತೀರಿ ? ಆಹಾರ ನೀರು ಇಲ್ಲದೆ ಮನುಷ್ಯ ಒಂದು ನಿಮಿಷ ಬದುಕಲು ಸಾಧ್ಯವಿಲ್ಲ. ಆದುದರಿಂದ ರೈತನಿಗೆ ಹೆಚ್ಚು ಸಹಾಯ ಒದಗಿಸಿ ಕೊಡಿ. ರೈತನಿಗೆ ಅನ್ಯಾಯ ಮಾಡಬಾರದು.

ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಬೇಕಾದಷ್ಟು ಅರಣ್ಯ ಇದೆ. ಅರಣ್ಯ ಪ್ರದೇಶದಲ್ಲಿರುವ ಭೂಮಿ ಸಾಗುವಳಿ ಮಾಡುವುದಕ್ಕೆ ರೈತರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಇದರಿಂದ ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಚನ್ನಗಿರಿ ತಾಲ್ಲೂಕು ಮಲಹಾಳ ಫಾರೆಸ್ಟ್ ಬಸಾಪುರದಲ್ಲಿ ಕೆಲವರಿಗೆ ಜಮೀನು ಕೊಟ್ಟು ಕೆಲವರಿಗೆ ಕೊಟ್ಟಿಲ್ಲಾ ಸಾಗುವಳಿಯಲ್ಲಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಶಿವಪುರ ಎಂಬ ಊರು ಕಟ್ಟಲು ಜನ ಮುಂದೆ ಬಂದಿರುತ್ತಾರೆ, ಜಮೀನು ಕೊಡಿರಿ. ಮಾನ್ಯ ರೆವೆನ್ಯೂ ಮಂತ್ರಿಗಳು ಒಂದು ಸಲ ಬಂದು ನೋಡಿಕೊಂಡು ಹೋಗಿದ್ದಾರೆ.

ಇನ್ನು ಒಂದೇ ಒಂದು ವಿಷಯ ಹೇಳಿ ನನ್ನ ಮಾತು ಮುಗಿಸುತ್ತೇನೆ. ಒಂದೇ ಒಂದು ನಿಮಿಷ ಕಾಲಾವಕಾಶ ನನಗೆ ಮಾತನಾಡಲು ದಯವಿಟ್ಟು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಹೆಚ್ಚು ಆಹಾರ ಬೆಳೆಯಬೇಕಾದರೆ ದೇಶ ಸಮೃದ್ಧಿಯಾಗಬೇಕಾದರೆ ರೈತನಿಗೆ ಬೇಕಾಗುವ ಒಳ್ಳೇ ಬೀಜ, ಗೊಬ್ಬರ, ಕಬ್ಬಿಣ ಸಾಮಾನು ಇವುಗಳನ್ನು ಹೆಚ್ಚಾಗಿ ಒದಗಿಸಿಕೊಡಬೇಕು. ಸ್ವಾಮಿ ಅಧ್ಯಕ್ಷರೇ, ತಮಗೆ ತೊಂದರೆಯಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ನನಗೆ ಮಾತನಾಡಲು ಅವಕಾಶ ಕೊಟ್ಟದ್ದ ಕ್ಕಾಗಿ ಅಧ್ಯಕ್ಷರನ್ನು ಕೃತಜ್ಞತೆಯಿಂದ ವಂದಿಸುತ್ತೇನೆ. ಸರಕಾರದವರು ನನ್ನ ಸೂಚನೆಗಳನ್ನು ಕಾರ್ಯರೂಪದಲ್ಲಿ ತರಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ನಮ್ಮ ಮುಂದೆ ಇರುವ ವ್ಯವಸಾಯ, ಅರಣ್ಯ ಮತ್ತು ಮೀನುಗಾರಿಕೆ ಈ 3 ಬಾಬುಗಳ ಮೇಲೆ ಸುಮಾರು 13 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ; ವಿದ್ಯಾ ಖಾತೆಗಾಗಿ 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ; ಆಹಾರ ಬೆಳೆಯುವುದಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ; ಅರಣ್ಯ ಬಾಬಿಗಾಗಿ ಐದೂವರೆ ಕೋಟಿ ರೂಪಾಯಿಗಳನ್ನು, ಮೀನುಗಾರಿಕೆಗಾಗಿ ಎರಡೂವರೆ ಅಥವಾ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಈ ಮೂರು ಕ್ಷೇತ್ರಗಳಲ್ಲಿ ಮೈಸೂರು ರಾಜ್ಯ ಏನು ಸಾಧನೆ ಮಾಡಿದೆ ಎಂಬುದನ್ನು ಹೇಳುತ್ತೇನೆ. ಶ್ರೀಮಾನ್ ಲೋಖನಾಥನ್ ಅವರು National Council of Economic and Applied Research ಎಂಬುದರಲ್ಲಿ ಈ ರೀತಿ ಬರೆದಿದ್ದಾರೆ. ಮೈಸೂರು ಸರ್ಕಾರದವರು 1975ನೇ ಇಸವಿಯವರೆಗೆ ಪ್ರಯತ್ನ ಮಾಡಿದರೆ ತಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯ. ಇದಕ್ಕಾಗಿ 500 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದರೂ ಸಹ ಈ ಮೂರು ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕಾದ್ದನ್ನು ಮಾಡುವುದಕ್ಕಾಗಿಲ್ಲ. ಅದಕ್ಕೋಸ್ಕರವಾಗಿ ಮೈಸೂರು ಸರ್ಕಾರ ದವರು ಬೇರೆ ರಾಜ್ಯಗಳ ಜೊತೆಯಲ್ಲಿ, ವ್ಯವಸಾಯ ಅಭಿವೃದ್ಧಿಯಲ್ಲಾಗಲೀ, ಅರಣ್ಯ ಅಭಿವೃದ್ಧಿ ಯಲ್ಲಾಗಲೀ, ಮೀನುಗಾರಿಕೆಯಲ್ಲಾಗಲೀ ಹೋಗುವುದಕ್ಕೆ ಸಾಧ್ಯವಾಗಿಲ್ಲ ಎಂದು.

ಶ್ರೀ ಬಿ. ರಾಚಯ್ಯ (ಮೀನುಗಾರಿಕೆ ಮತ್ತು ಅರಣ್ಯ ಶಾಖೆಯ ಮಂತ್ರಿಗಳು).—ಎಷ್ಟನೇ ಪೇಜಿನಲ್ಲಿ ಹೇಳಿದೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಕಸ್ಮಾತ್, Sheer accident ನಿಂದ ಕೆಲವರು ಮಂತ್ರಿಗಳಾಗುತ್ತಾರೆ, ನಾವು ಏನಾದರೂ ಹೇಳಿದರೆ ಅದು ಯಾವ ಪುಸ್ತಕದಲ್ಲಿದೆ, ಎಷ್ಟನೇ ಪೇಜಿನಲ್ಲಿದೆ, ಯಾವ ಪ್ಯಾರಾದಲ್ಲಿದೆ ಎಂದು ಅಧ್ಯಕ್ಷರು ಕೇಳುವ ರೀತಿಯಲ್ಲಿ ಈ ಮಂತ್ರಿಗಳು ಸಹ ಕೇಳುತ್ತಾರೆ. ಇವರಿಗೂ ಈ ರೀತಿ ಕೇಳುವುದು ಒಂದು ಅಭ್ಯಾಸವಾಗಿದೆ. ಹಿಂದೆ ಮಾಡಿದ ಸುಧಾರಣೆಗಳನ್ನೇ ಹೇಳದೆ, ನೀವು ಬಂದಮೇಲೆ ನಾಲ್ಕುವರೆ ವರ್ಷದಿಂದ ಏನು ಸಾಧನೆ ಮಾಡಿದ್ದೀರಿ ಎಂದು ನನ್ನ ಮನಸ್ಸಿಗೆ ಸಮಾಧಾನವಾಗುವಂತೆ ಹೇಳಬೇಕು. ನಾವೇನಾದರೂ ಪ್ರಶ್ನೆ ಕೇಳಿದಾಗ ನೀವು 'ಸ್ಟೀರಿಯೋ ಟೈಪ್' ಉತ್ತರ ಹೇಳುತ್ತೀರಿ, ಇದು ಒಂದು ಅಭ್ಯಾಸವಾಗಿದೆ. ಮೈಸೂರು ಸಂಸ್ಥಾನದಲ್ಲಿ ಬೀಳತಕ್ಕಂಥ ಮಳೆಯಿಂದ, ಕೆರೆ ಕಟ್ಟೆ, ದೊಡ್ಡ ದೊಡ್ಡ ಸರೋವರಗಳ ಮೂಲಕ ಎಷ್ಟು ಎಕರೆ ಜಮೀನು ಸಾಗಾಗುತ್ತದೆ, ಅರಣ್ಯ ಸಂಪತ್ತು ಎಷ್ಟು ಬೆಳೆಯುತ್ತದೆ ಎಂದು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ಚೆನ್ನಾಗಿರುವುದರಿಂದ ಮಳೆ ಚೆನ್ನಾಗಿ ಆಗುತ್ತದೆ. ಮಳೆ ಚೆನ್ನಾಗಿ ಇದ್ದರೆ ವ್ಯವಸಾಯ ಉತ್ಪನ್ನ ಜಾಸ್ತಿಯಾಗುತ್ತದೆಯೆಂದು ತಜ್ಞರು ಹೇಳಿದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ 20 ಲಕ್ಷ ಟನ್ ಆಹಾರ ಕಡಿಮೆ ಬಂತು ಎಂದು ಈ ಸಭೆಯಲ್ಲಿ ನಾವು ಮತ್ತು ನೀವು ಒಪ್ಪಿದ್ದೇವೆ. 20 ಲಕ್ಷ ಟನ್ ಆಹಾರ ಕಡಮೆ ಆಗಿದೆ ಎಂದು ನೀವು ಹೇಳುವಾಗ, 5 ಲಕ್ಷ ಟನ್ ಆಹಾರವನ್ನಾದರೂ ಹೆಚ್ಚುಮಾಡುವುದಕ್ಕೆ, ತಾವು ವ್ಯವಸಾಯ ಇಲಾಖೆಯಲ್ಲಿ, ಅರಣ್ಯ ಕ್ಷೇತ್ರದಲ್ಲಿ ಏನು ಸಾಧನೆ ಮಾಡಿದ್ದೀರಿ ಎಂದು ನೋಡಿದರೆ, ಪರರಾಷ್ಟ್ರಗಳಲ್ಲಿ ಭಿಕ್ಷೆ ಬೇಡುವುದಕ್ಕೆ ಹೋಗಿದ್ದೀರಿ. 50 ಸಾವಿರ ಎಕರೆಯಲ್ಲಿ ವ್ಯವಸಾಯ ಮಾಡಿಸಿ, ಒಂದು ಲಕ್ಷ ಟನ್ ಆಹಾರ ಬೆಳೆದಿದ್ದೇವೆ ಎಂದು ಹೇಳುವುದಕ್ಕೆ ಈ ಸರ್ಕಾರಕ್ಕೆ ಧೈರ್ಯವಿಲ್ಲ. ಕೆರೆ ದಂಡೆಯಲ್ಲಿ ವ್ಯವಸಾಯ ಮಾಡಬಾರದೆಂದು ಇದ್ದರೂ, ಅದನ್ನು ಸಹ ವ್ಯವಸಾಯಕ್ಕೆ ಕೊಟ್ಟಿರಿ, ಈಗ ಆ ಜಾಗವೆಲ್ಲಾ ಬೆಂಗಾಡಾಗಿದೆ. ನದಿ ದಂಡೆಯಲ್ಲಿ ಬೆಳೆಯಬಾರದು ಎಂದು ನಿಯಮವಿದ್ದರೂ ಸಹ, ಆ ಭಾಗದ ಜಮೀನನ್ನು ವ್ಯವಸಾಯಕ್ಕೆ ಕೊಟ್ಟಿರಿ, ಅಲ್ಲೂ ಸಹ ಹೆಚ್ಚು ಬೆಳೆಯುವುದಕ್ಕೆ ಆಗಿಲ್ಲ. ದನಗಳು ಮೇಯುವ ಅಮೃತಮಹಲ್ ಜಮೀನುಗಳನ್ನು ಸಹ, ನಿಷ್ಕಾರಣವಾಗಿ, ಕಾನೂನಿಗೆ ವಿರುದ್ಧವಾಗಿ, ಹೆಚ್ಚು ಬೆಳೆಯಬೇಕೆಂದು ರೈತರಿಗೆ ಕೊಡಿಸಿದಿರಿ, ಆದರೆ ವ್ಯವಸಾಯದ ಉತ್ಪತ್ತಿ ಮಾತ್ರ ಜಾಸ್ತಿಯಾಗಲಿಲ್ಲ. ಈ ವ್ಯವಸಾಯದ ವಿಚಾರದಲ್ಲಿ ಒಂದೇ ಒಂದು ಪ್ರಶ್ನೆ ಬೃಹದಾಕಾರವಾಗಿ ನಮ್ಮ ಮುಂದೆ ನಿಂತಿದೆ. ಶ್ರೀಮಾನ್ ಕುಂದೂರು ರುದ್ರಪ್ಪನವರು ಹೇಳಿದ ರೀತಿ ಈ ಸರ್ಕಾರದವರಿಗೆ ಸರಿಯಾದ ರೀತಿಯಲ್ಲಿ ರೈತರುಗಳಿಗೆ ಒತ್ತನೆ ಬೀಜ, ಗೊಬ್ಬರ, ಇರಿಗೇಷನ್ ಸೌಲಭ್ಯ, ಪವರ್ ಟಿಲ್ಲರ್, ಮತ್ತು ಕೆಮಿಕಲ್ ಫರ್ಟಿಲೈಜರ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಯಾವ ಕ್ಷೇತ್ರಗಳಿಗೆ ಯಾವುದು ಮುಖ್ಯವಾಗಿ ಬೇಕೋ ಅದನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿಯಾದರೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಮಳೆ ಬಂದರೆ ಬೆಳೆ ಬೆಳೆಯುವುದಕ್ಕೆ ರೈತನಿಗೆ ಎತ್ತುಗಳು ಬೇಕು, ಎತ್ತುಗಳಿಗೆ ಹುಲ್ಲು ಬೇಕು, ಉಳುವವನಿಗೆ ಆಹಾರ ಬೇಕು. ನೀರಿನ ಸೌಕರ್ಯವಿರಬೇಕು. ಪವರ್ ಸಪ್ಲೈ ಕೊಡಬೇಕು, ಸಕಲ ಸಮೃತ್ತನ್ನೂ ಕೊಟ್ಟರೆ ರೈತ ಹೆಚ್ಚು ಧಾನ್ಯ ಬೆಳೆಯುತ್ತಾನೆ. ಆದರೆ ಶ್ರೀಮಾನ್ ರುದ್ರಪ್ಪನವರು ಹೇಳಿದ ರೀತಿ ಭತ್ತ ಬೆಳೆಯುವುದಕ್ಕೆ, ಅರಣ್ಯ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲ. ಬರೀ ಭಾಷಣ ಮಾಡುತ್ತಾರೆ ಅಷ್ಟೆ. ಜನರಿಗೆ ಕೂಲಿ ಸಿಗಲಿ ಎಂದು ಉದ್ದಕ್ಕೂ ಟ್ರೆಂಚ್‌ಗಳನ್ನು ಹೊಡೆಸಿದ್ದಾರೆ. ಇವರು 10 ಲಕ್ಷ ಖರ್ಚುಮಾಡಿದರೆ 2 ಲಕ್ಷದ ಉತ್ಪತ್ತಿ ಬರುತ್ತಿದೆ, ಈ ಮೈಸೂರು ರಾಜ್ಯ ಅಂಕಿಅಂಶಗಳ ರಾಜ್ಯವಾಗಿದೆ. ನಮ್ಮ ದೇಶದಲ್ಲಿ ಏನೇನು ಸಾಧನೆ ಮಾಡಿದ್ದೇವೆ ಎಂಬುದನ್ನು ಜಗತ್ತಿನ ಮುಂದೆ ಇಡಲು, ಜನತೆಯ ಮುಂದೆ ಇಡಲು ಯಾವ ಮಂತ್ರಿಗಳಿಗೂ ಧೈರ್ಯವಿಲ್ಲ. ಸದಸ್ಯರೇನಾದರೂ ಕೇಳಿದರೆ ಉದಾಸೀನವಾಗಿ ಉತ್ತರವನ್ನು ಕೊಡುತ್ತಾರೆ. 35 ಲಕ್ಷ ಎಕರೆ ರಿಕ್ಲಮೇಷನ್ ಆಗಬೇಕಾದರೆ ಕನಿಷ್ಟಪಕ್ಷ 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, 10 ರಿಂದ 15 ಲಕ್ಷ ಟನ್ ಆಹಾರವನ್ನು ಬೆಳೆಯಬಹುದು ಎಂದು ಶ್ರೀ ಲೋಗನಾಥನ್ ಹೇಳಿದ್ದಾರೆ. ಈ ರೀತಿ ಮಾಡುವುದಕ್ಕೆ ಮೈಸೂರು ಸರ್ಕಾರದವರಿಗೆ ಮನಸ್ಸಿಲ್ಲ, ಮನಸ್ಸಿದ್ದರೆ ದುಡ್ಡು ಇರುವುದಿಲ್ಲ. ಶ್ರೀ ಲೋಗನಾಥನ್ ಅವರು ಈ ರೀತಿ ಹೇಳಬೇಕಾದರೆ ಮೈಸೂರು ದೇಶದ ವ್ಯವಸಾಯ ಇಲಾಖೆ ಎಷ್ಟರಮಟ್ಟಿಗೆ ಇದೆ ಎಂದು ಗೊತ್ತಾಗುತ್ತದೆ. ಕೋ-ಆಪರೇಟಿವ್ ಸೊಸೈಟಿ ತೆಗೆದುಕೊಂಡರೆ ಇದರಲ್ಲಿ 16 ಜನ ಜಾಯಿಂಟ್ ಡೈರಕ್ಟರ್‌ಗಳಿದ್ದಾರೆ. ವ್ಯವಸಾಯ ಇಲಾಖೆಯಲ್ಲಿ 25 ಜನ ಜಾಯಿಂಟ್ ಡೈರಕ್ಟರ್ ಇದ್ದಾರೆ. ಡೈರಕ್ಟರೇ ಇದ್ದಾರೆ, ಅಸಿಸ್ಟೆಂಟ್ ಡೈರಕ್ಟರ್‌ಗಳು ಎಷ್ಟು ಜನ ಇದ್ದಾರೋ ಗೊತ್ತಿಲ್ಲ. ಬರೀ ಇವರ ಸಂಖ್ಯೆ ಹೆಚ್ಚುತ್ತಿದೆಯೇ ಹೊರತು, ಒಂದು ಪಾವು ಹೆಚ್ಚು ಬತ್ತ ಬೆಳೆಯಲಿಲ್ಲ. ಇವರುಗಳಿಂದ ಯಾವ ರೀತಿಯಿಂದಲೂ ರೈತರಿಗೆ ಸಹಾಯವಾಗುತ್ತಿಲ್ಲ. ದೇವೇಂದ್ರನ ಕೃಪೆಯ ಮೇಲೆ ಮಳೆಯೇನಾದರೂ ಆದರೆ ಹೆಚ್ಚು ಬೆಳೆಯಬಹುದು, ಆದರೆ ಬೆಳೆಗೇನಾದರೂ ರೋಗ ತಗಲಿದರೆ, ಅದಕ್ಕೆ

ಬೇಕಾದ ಔಷದ ಉಪಚಾರಗಳನ್ನು, ರೋಗ ಪರಿಹಾರ ಮಾಡುವ ಇತರೇ ಸಾಧನಗಳನ್ನು ಸರಿಯಾಗಿ ರೈತನಿಗೆ ಕೊಡುತ್ತಿಲ್ಲ. ಈ ವಿಚಾರದಲ್ಲಿ ವ್ಯವಸಾಯ ಇಲಾಖೆಯವರು ನಿರ್ವೀರ್ಯರಾಗಿದ್ದಾರೆ. ಈ ನಾಲ್ಕುವರ ವರ್ಷದಲ್ಲಿ ಮೈಸೂರು ರಾಜ್ಯಕ್ಕೆ ವ್ಯವಸಾಯ ಇಲಾಖೆಯಿಂದ ಏನೇನು ಸಾಧನೆ ಯಾಗಿದೆಯೆಂದರೆ ಏನೂ ಸಾಧನೆಯಾಗಿಲ್ಲ. ಈಗ ವ್ಯವಸಾಯ ಮಂತ್ರಿಗಳು ಸಹ ಇಂಗ್ಲೆಂಡ್, ಅಮೇರಿಕಾ ದೇಶಗಳಿಗೆ ಬೆಳೆಯುವ ವಿಚಾರ ತಿಳಿದುಕೊಳ್ಳುವುದಕ್ಕೆ, ಮುಸಕಿನ ಜೋಳ ಯಾವ ರೀತಿ ಬೆಳೆಯುತ್ತಾರೆ ಎಂದು ತಿಳಿದುಕೊಳ್ಳುವುದಕ್ಕೆ ಹೋಗಿದ್ದಾರೆ. ನಮ್ಮ ಎತ್ತುಗಳು ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ ಅವನ್ನು ಜಾತ್ರೆಗೆ ಏತಕ್ಕೆ ಹೊಡೆಯಬೇಕು ? ನಮಗೆ ತಿಳಿದಿರುವುದನ್ನೇ ಸರಿಯಾಗಿ ಮಾಡುತ್ತಿಲ್ಲ, ಹೈಬ್ರಿಡ್ ಎಂದರೆ ಏನ ಎನ್ನುವುದು ಇವರಿಗೆ ಗೊತ್ತಿಲ್ಲ, 12 ಎಕರೆಯನ್ನು ಸೈಂಟಿಫಿಕ್ ಆಗಿ ವ್ಯವಸಾಯ ಮಾಡಿಸುವುದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸುತ್ತಾರೆ, ನಾನು ಬೇಕಾದರೆ 30 ಎಕರೆಯಲ್ಲಿ ಸೈಂಟಿಫಿಕ್ ಆಗಿ ವ್ಯವಸಾಯ ಮಾಡಿ ತೋರಿಸುತ್ತೇನೆ. ರೈತರಿಗೆ ಹೆಚ್ಚಿನ ಸೌಲಭ್ಯ ಕೊಟ್ಟರೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಬೇರೆ ದೇಶಗಳಿಗೆ ಹೋಗಿ ಬಂದರೆ ಅನ್ನದ ಕ್ಷಾಮ ಹೋಗುತ್ತದೆಯೇ ? ಶ್ರೀ ವಿರೇಂದ್ರಪಾಟೀಲರು ದೆಹಲಿಗೆ ಹೋಗಿ, ಅಪ್ಪರ್ ಕೃಷ್ಣದೊಳಗೆ ಎಂಟೂಕಾಲು ಪರ್ಸೆಂಟ್ ಇರಿಗೇಷನ್ ರ್‍ಯಾಂಡ್ ಇದೆ, ಅದನ್ನು ನಾವೇ ಮುಗಿಸಬೇಕಾದರೆ ಎರಡು ಯೋಜನೆಗಳಾಗುತ್ತದೆ, ಬೇರೆ ರಾಜ್ಯಗಳ ಸಮಕ್ಕೆ ಹೋಗಬೇಕಾದರೆ, ಇದನ್ನು ಕೇಂದ್ರ ಸರ್ಕಾರದವರೇ ತೆಗೆದುಕೊಂಡು ಮಾಡಬೇಕು ಎಂದು ಕೇಳಿದಾಗ, ಅಲ್ಲಿಯೇ ಇದ್ದ, ಮದ್ರಾಸ್, ಕೇರಳ ಮತ್ತು ಆಂಧ್ರದ ಪ್ರತಿನಿಧಿಗಳು ಎಷ್ಟರಮಟ್ಟಿಗೆ ನಕ್ಕಿರಬೇಕು ಎಂದು ನನಗನ್ನಿಸುತ್ತದೆ.

4-00 P.M.

ಸ್ವಾಮಿ, ನಮ್ಮಲ್ಲಿರತಕ್ಕ ಪೊಟೆನ್ಸಿಯಾಲಿಟಿ ಎಕ್ಸ್‌ಪ್ಲಾಯಿಟ್ ಮಾಡಿ ಇರ್ರಿಗೇಷನ್ ಡೆವಲಪ ಮಾಡುವುದಕ್ಕೆ ಇವೊತ್ತು ಹಣ ಇಲ್ಲ. ಟೆಕ್ನಿಕಲ್ ನೋಹೌ ಇಲ್ಲ, ಸ್ಕೀಮ್ ಇಲ್ಲ ಎಂದು ಪೊಲಿಟಿಕಲ್ ಪ್ರಾಜೆಕ್ಟ್ಸ್ ಮಾಡಿಕೊಂಡು ರಾಜಕೀಯ ಕಟ್ಟುತ್ತಾ ಹೋದರೆ, ರಾಜಕೀಯ ನಾಲೆಗಳಿಂದ ರಾಜಕಿಯ ಬರುತ್ತದೆಯೇ ಹೊರತು ಬೇರೆ ಯಾವುದೂ ಬರುವುದಿಲ್ಲ. ಅಗ್ರಿಕಲ್ಚರ್‌ಗೂ ಅನಿಮಲ್ ಹಸ್ಬೆಂಡರಿಗೂ ಸಂಬಂಧ ಇದೆ, ಫಾರೆಸ್ಟ್ರಿಗೂ, ಫಿಷರಿಗೂ ಸಂಬಂಧ ಇದೆ. ಇಂಡಸ್ಟ್ರಿಗೂ ಅಗ್ರಿಕಲ್ಚರ್‌ಗೂ ಸಂಬಂಧ ಇದೆ. ಇವೊತ್ತು ರಾಜ್ಯದಲ್ಲಿ ಎಲ್ಲಿಯವರೆಗೆ ವ್ಯವಸಾಯವನ್ನು ಕೈಗಾರಿಕೆಯೆಂದು ಕಾಣುವುದಿಲ್ಲವೋ ಕೈಗಾರಿಕೆಯ ಹಾಗೆ ಬೆಳೆಯಬೇಕು ಎಂದು ಮನಸ್ಸು ಮಾಡುವುದಿಲ್ಲವೋ ಎಲ್ಲಿಯವರೆಗೆ ಸರ್ಕಾರ ವ್ಯವಸಾಯ ಕ್ಷೇತ್ರದಲ್ಲಿ ಈಗಿನ ರೀತಿ ಮನೋಭಾವ ಇಟ್ಟುಕೊಂಡಿರುತ್ತಾರೋ, ಅಲ್ಲಿಯವರೆಗೆ ವ್ಯವಸಾಯ ಕ್ಷೇತ್ರದಲ್ಲಿ ಏನೇನೂ ಸಾಧನೆ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದು ನಾನಾದರೂ ಹೇಳುತ್ತೇನೆ. ವ್ಯವಸಾಯಕ್ಕೆ ಬೇಕಾದಂಥ ಫರ್ಟಿಲೈಸರ್ಸ್ ತಯಾರು ಮಾಡುವ ಕಾರ್ಖಾನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿದರೂ ನಮ್ಮ ಕೈಯಿಂದ ಸ್ಥಾಪನೆ ಮಾಡುವುದಕ್ಕಾಗಲಿಲ್ಲ. ಇದಕ್ಕೆ ಯಾರು ಕಾರಣರು ? 18 ವರ್ಷಗಳ ಕಾಲ ಅಧಿಕಾರ ಸೂತ್ರ ಹಿಡಿದವರು, ರಾಜ್ಯಭಾರ ಮಾಡಿದವರು ಇದನ್ನು ಮಾಡಬೇಕಾಗಿತ್ತು. ಈಗ ದೇಶದಲ್ಲಿ ಬಂದಿರತಕ್ಕ ಆಹಾರ ಕ್ಷಾಮಕ್ಕೆ ಯಾರು ಕಾರಣರು ಎಂದರೆ, ಅಧಿಕಾರ ಸೂತ್ರ ಹಿಡಿದಿರತಕ್ಕ ನೀವೇ ಎಂದು ಹೇಳುತ್ತೇನೆ. ಮಂಗಳೂರಿಗೆ ಗೊಬ್ಬರದ ಕಾರ್ಖಾನೆ ಯಾವಾಗ ಬರುತ್ತದೋ ಗೊತ್ತಿಲ್ಲ. ಎಂದು ಅದು ಪ್ರೊಡಕ್ಷನ್ ಪ್ರಾರಂಭ ಮಾಡುತ್ತದೋ ಗೊತ್ತಿಲ್ಲ, ಶ್ರೀ ಲೋಗನಾತನ್ ಹೇಳಿದ್ದಾರೆ ಇಂಡಿಯಾ ದೇಶದಲ್ಲಿ ಆಗತಕ್ಕ ಗೊಬ್ಬರದ ಪ್ರೊಡಕ್ಷನ್ ನಾವು ಲೆಕ್ಕ ತೆಗೆದುಕೊಂಡರೆ ಮೈಸೂರು ಸಂಸ್ಥಾನಕ್ಕೆ ಎಷ್ಟು ಕೊಡುತ್ತಿದ್ದಾರೆ ಎಂದರೆ ಸಮುದ್ರದಲ್ಲಿ ಒಂದು ಸಾಸಿವೆ ಹಾಕಿದರೆ ಅದು ಹೇಗೆ ಮುಳುಗಿಹೋಗುತ್ತದೋ, ಹಾಗೆ ಆಗಿದೆ. ಮೈಸೂರು ಸರ್ಕಾರದ ಈ ಬೇಡಿಕೆ ಪೂರೈಸುವುದಕ್ಕೆ ಸಾಧ್ಯವಿಲ್ಲ, ಮೈಸೂರು ಸರ್ಕಾರ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಗೊಬ್ಬರ ಮತ್ತು ಇತರ ಸಾಮಗ್ರಿಗಳನ್ನು ಒದಗಿಸಿ ಕೊಳ್ಳಬೇಕಾಗಿದೆ. ಈಗ ಹೋಗುವ ರೀತಿಯಲ್ಲಿ ಮಂದಗತಿಯಿಂದ ಹೋಗುತ್ತಾ ಇದ್ದರೆ ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ ಕ್ಷೇತ್ರ ನಿರ್ನಾಮವಾಗಿ ಹೋಗುತ್ತದೆ ಎಂದು ಅವರು ಬರೆದಿದ್ದಾರೆ. ಅದನ್ನು ನೋಡಬೇಕು. ವ್ಯವಸಾಯ ಕ್ಷೇತ್ರದಲ್ಲಿ ಡೈರೆಕ್ಟರ್ ಕೆಲಸ ಮಾಡುವುದಿಲ್ಲ ಎಂದು ಹೊರಗಡೆಯಿಂದ ಅಧಿಕಾರಿಗಳನ್ನು ಕರೆಸಿದ್ದೀರಿ. ಹೊಸ ಅಧಿಕಾರಿಗಳು ಬಂದ ಮೇಲೆ ಅನೇಕ ಜನ ಜಾಯಿಂಟ್ ಡೈರೆಕ್ಟರ್ಸ್, ಅಡಿಷನಲ್ ಡೈರಕ್ಟರ್ಸ್, ಡೆಪ್ಯೂಟಿ ಡೈರಕ್ಟರ್ಸ್ ಸಂಖ್ಯೆ ಬೆಳೆದಿದೆ, ಮೈಸೂರು ಸಂಸ್ಥಾನದಲ್ಲಿ ಎಷ್ಟು ಎಕರೆ ಭೂಮಿ ರೆಕ್ಲಮೇಷನ್ ಮಾಡಬೇಕು ಎಂದು ಹೊರಟಿದ್ದೀರಿ ? ಇಷ್ಟು ಭೂಮಿ ರೆಕ್ಲಮೇಷನ್ ಮಾಡಿ, ಫುಡ್‌ಗ್ರೈನ್ಸ್ ಬರಬೇಕು ಎಂದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಿದ್ದೀರಿ ? ಎಷ್ಟು ಎಕರೆಯಲ್ಲಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯಬೇಕು ಎಂದು ಮಾಡಿದ್ದೀರಿ ? ಎಷ್ಟು ಎಕರೆಯಲ್ಲಿ ಎಣ್ಣೆ ಬೀಜಗಳು, ಕಬ್ಬು ಮತ್ತು ಹೊಗೆಸೊಪ್ಪು ಬೆಳೆಯಬೇಕೆಂದು ಮಾಡಿದ್ದೀರಿ ? ಎಷ್ಟು ಎಕರೆಗಳಲ್ಲಿ ಫಾರಿನ್ ಎಕ್ಸ್‌ಛೇಂಜ್ ಸಂಪಾದನೆ ಮಾಡುವ ಬೆಳೆಗಳನ್ನು ಬೆಳೆದು ಈ ರಾಜ್ಯಕ್ಕೆ ಬೇಕಾದ ಫಾರಿನ್ ಎಕ್ಸ್‌ಛೇಂಜ್ ಒದಗಿಸಿಕೊಳ್ಳಬೇಕೆಂದು ಮಾಡಿದ್ದೀರಿ ? ಇವೊತ್ತಿನ ದಿವಸ ನನ್ನ ಸ್ನೇಹಿತರು ಹೇಳುತ್ತಾರೆ, ಕನಿಷ್ಠ ಪಕ್ಷ 35 ಎಕರೆ ರೆಕ್ಲಮೇಷನ್ ಮಾಡಿ, ಐದು ಲಕ್ಷ ಎಕರೆ ಫುಡ್‌ಗ್ರೈನ್ಸ್, ಐದು ಲಕ್ಷ ಮೇಜ್, ಐದು ಲಕ್ಷ ಕಾಟನ್, ಆರು ಲಕ್ಷ ಆಯಿಲ್ ಸೀಡ್ಸ್, ಎಂಟು ಲಕ್ಷ ವೆಜಿಟಬಲ್ಸ್, ಹೀಗೆ ಡಿವೈಡ್ ಮಾಡಿ ವ್ಯವಸಾಯ ಮಾಡುವುದಾದರೆ ವ್ಯವಸಾಯ ಕ್ಷೇತ್ರದಲ್ಲಿ ಮೈಸೂರು ಸಂಸ್ಥಾನ ಏನಾದರೂ ಎಲ್ಲರ ಕಣ್ಣಿಗೆ ಬೀಳುವ ಹಾಗೆ ಆಗುತ್ತದೆ. ಇಲ್ಲದೇ ಹೋದರೆ ವ್ಯವಸಾಯ ಕ್ಷೇತ್ರದ ಭೂಪಟದಿಂದ ಮೈಸೂರಿನ ಚಿತ್ರವನ್ನು ಅಳಿಸುವ ಕಾಲ ಬಂದಿದೆ. ಅದಕ್ಕೋಸ್ಕರ ನಾನಾದರೂ ಸರ್ಕಾರದವರು ಈ ಕಡೆ ಗಮನ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಲ್ಯಾಂಡ್ ರೀಫಾರಮ್ಸ್ ಬಂತು. ಭೂಮಿಯನ್ನು ಕತ್ತರಿಸಿ ಯಾರು ಭೂಮಿಯನ್ನು ಮಾಡುತ್ತಾರೋ ಅವರಿಗೆ ಕೊಡಬೇಕು ಎಂದು ಮಾಡಿದಿರಿ. ಇನ್ನೊಂದು ಕಡೆ ಕನ್‌ಸಾಲಿಡೇಷನ್ ಆಫ್ ಫ್ರಾಗ್‌ಮೆಂಟೇಷನ್, ಎಂದರೆ ಎಲ್ಲೆಲ್ಲಿ ತುಂಡು ತುಂಡು ಭೂಮಿ ಇದೆಯೋ ಅದನ್ನು ಒಟ್ಟಿಗೆ ಸೇರಿಸಿ ವ್ಯವಸಾಯಕ್ಕೆ ಅನುಕೂಲವಾಗತಕ್ಕ ಕ್ಷೇತ್ರ ಮಾಡಬೇಕು ಎಂದು ಮಾಡಿದ್ದೀರಿ. ಹೀಗೆ ಸರ್ಕಾರದಲ್ಲಿ ದ್ವಂದ್ವಯುದ್ಧ ನಡೆದಿದೆ. ಭೂಮಿ ತುಂಡು ಮಾಡಬೇಕೇ ಅಥವಾ ತುಂಡು ಮಾಡಿರುವ ಭೂಮಿಯನ್ನು ಸೇರಿಸಬೇಕೇ, ಯಾವರೀತಿ ತುಂಡು ಭೂಮಿಯನ್ನು ಸೇರಿಸಬೇಕು ಎಂದು ದ್ವಂದ್ವಯುದ್ಧ ನಡೆಯುತ್ತಾ ಇದೆ. ಅದಕ್ಕೋಸ್ಕರ ನಾನಾದರೂ ಹೇಳುತ್ತೇನೆ, ವ್ಯವಸಾಯ ಕ್ಷೇತ್ರದಲ್ಲಿ ಇವೊತ್ತಿನ ದಿವಸ ನಿಜವಾಗಿ ಶಕ್ತಿಮೀರಿ, ಎಲ್ಲೆಮೀರಿ ಕೆಲಸ ಮಾಡಬೇಕಾದರೆ, ಅದಕ್ಕೆ ಬೇಕಾದಂಥ ಎಲ್ಲಾ ಸಾಧನಗಳನ್ನು ಮೈಸೂರು ಸರ್ಕಾರ ಒದಗಿಸಿದರೆ ಮಾತ್ರ ಸಾಧ್ಯವಾಗುತ್ತದೆ ಇಲ್ಲದೇ ಹೋದರೆ ಸಾಧ್ಯವಾಗುವುದಿಲ್ಲ. ನಮಗೆ ಬಂದಿರತಕ್ಕ ಅನ್ನ ಕ್ಷಾಮ ಹೋಗುವುದಿಲ್ಲ. ಅದಕ್ಕೋಸ್ಕರ ಒಂದು ವಿಷಯ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವುದರಲ್ಲಿ ಬೇಕಾದರೂ ರಾಜಕೀಯ ತನ್ನಿ, ಆದರೆ ವ್ಯವಸಾಯ ಕ್ಷೇತ್ರದಲ್ಲಿ ತರಬೇಡಿ. ವ್ಯವಸಾಯ ಕ್ಷೇತ್ರದಲ್ಲಿ ಯಾರೇ ಬತ್ತ ಬೆಳೆಯಲಿ, ರಾಗಿ ಬೆಳೆಯಲಿ, ಅಥವಾ ಏನೇ ಬೆಳೆದರೂ ಅದರಿಂದ ರಾಷ್ಟ್ರಕ್ಕೆ ಅನುಕೂಲವಾಗುತ್ತದೆ, ದೇಶಕ್ಕೆ ಅನುಕೂಲವಾಗುತ್ತದೆ, ಎಂದು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ನಮ್ಮ ಮುಂದಿರುವ ಎಲ್ಲಾ ಬೇಡಿಕೆಗಳನ್ನೂ ಅನುಮೋದಿಸುತ್ತಾ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ. ಆಯವ್ಯಯ ಅಂದಾಜು ಪಟ್ಟಿಯ ಬೇಡಿಕೆಗಳ ಮೇಲೆ ನಾವು ಮಾತನಾಡುವಾಗ, ವಿರೋಧಪಕ್ಷದವರು ಎಲ್ಲಾ ವಿರೋಧ ಮಾಡುವುದು, ಆಡಳಿತ ಪಕ್ಷದವರು ಬೆಂಬಲ ಕೊಡುವುದು ಎಂದು ಅಲ್ಲ ; ಒಳ್ಳೆಯ ಕೆಲಸ ಮಾಡಿದ್ದರೆ, ನಾವೂ ನೀವೂ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳುವುದು, ಸರಿ ಇಲ್ಲದಿದ್ದರೆ, ಸರಿಯಿಲ್ಲ ಎಂದು ಹೇಳಿ ರಚನಾತ್ಮಕ ಸಲಹೆ ಮಾಡುವುದು. ಹಾಗಾದರೆ ಮಾತ್ರ ಆಡಳಿತ ಸರಿಯಾಗಿ ನಡೆಯುತ್ತದೆ.

ಅರಣ್ಯ ಶಾಖೆಯ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ ಅರ್ಥಸಚಿವರ ಭಾಷಣದತಃಖ್ತೆ ನೋಡಿದರೆ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಆದಾಯ ಬಂದಿದೆ ಎನ್ನುವುದು ವಿವರವಾಗಿ ತಿಳಿಯುತ್ತದೆ. ಈ ತೆರಿಗೆಯಿಂದ ಸಂಪಾದನೆ ಬಿಟ್ಟರೆ (Common Tax Revenue) ಅರಣ್ಯ ಇಲಾಖೆಯಿಂದ ಆದಾಯ ಹೆಚ್ಚಾಗಿದೆ. ದುಡಿದು ಸಂಪಾದನೆ ಮಾಡುವ ಇಲಾಖೆ ಇದು ಒಂದೇ. ಈ ಇಲಾಖೆ ಹೆಚ್ಚಿನ ರೀತಿಯಲ್ಲಿ ನೋಡಿಕೊಂಡರೆ, ಇನ್ನೂ ಹೆಚ್ಚಿನ ಸಂಪಾದನೆ ಕೂಡ ಆಗುತ್ತದೆ ಎಂದು ಹೇಳಬಯಸುತ್ತೇನೆ. ಹಿಂದೆ ಈ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಬೆಲೆ ಉಳ್ಳ ಮರಗಳನ್ನು ಕಡಿಮೆ ಬೆಲೆಗೆ ಕೊಟ್ಟಿದ್ದಾರೆ, ಸರಿಯಾದ ಬೆಲೆಗೆ ಮಾರಿದ್ದರೆ ಸರ್ಕಾರಕ್ಕೆ ಲಾಭ ಬರುತ್ತಿತ್ತು ಎಂದು ಹೇಳಿದ್ದಾರೆ. ಹಾಗೆ ಸರಿಯಾದ ಬೆಲೆಗೆ ಮರಗಳನ್ನು ಮಾರು ವ್ಯವಸ್ಥೆ ಮಾಡಿದರೆ ಹೆಚ್ಚಿಗೆ ಆದಾಯ ಬರುತ್ತದೆ ಎಂದು ಹೇಳಬಯಸುತ್ತೇನೆ. ಅರಣ್ಯ ಇಲಾಖೆಯಿಂದ ಒಟ್ಟು ಆದಾಯ 10 ಕೋಟಿ 20 ಲಕ್ಷ ರೂಪಾಯಿ ಬರುತ್ತದೆ ಎಂದು ರಿವೈಸ್ಡ್ ಎಸ್ಟಿಮೇಟ್ಸ್ ಇದೆ. 10½ ಕೋಟಿ ಬರಬೇಕಾದರೆ ಇಲಾಖೆ ಎಷ್ಟು ಮಟ್ಟಿಗೆ ಕೆಲಸ ಮಾಡಿರಬಹುದು ಎಂಬುದರೆ ಅರಿವಾಗುತ್ತದೆ. ಶ್ರೀಮಾನ್ ಮುಕ್ಕಣಪ್ಪನವರು ಮಾತನಾಡುವಾಗ ಆಶ್ಚರ್ಯವಾಯಿತು. ಅವರು ಅಂಕಿಅಂಶಗಳ ಕಡೆಗೆ ಗಮನ ಕೊಟ್ಟು ಸಲಹೆ ಕೊಟ್ಟಿಲ್ಲ. 10½ ಕೋಟಿ ರೂಪಾಯಿಗಳ ವರಮಾನ ಬರಬೇಕಾದರೆ,

ಎಷ್ಟು ಕೆಲಸ ಮಾಡಿರಬಹುದು ಎಂದು ತಿಳಿದು ಬರುತ್ತೆ ಅರ್ಥಸಚಿವರ ಭಾಷಣದತಃಖ್ತೆಯನು ಓದಿದರೆ ಗೊತ್ತಾಗುತ್ತದೆ. ಇಷ್ಟೆಲ್ಲಾ ನಾನು ಹೇಳಿದ್ದು ಈ ಇಲಾಖೆ ಎಷ್ಟು ಮುಖ್ಯವಾದುದು ಎನ್ನುವುದಕ್ಕೋಸ್ಕರ. ಕಾಡಿನಲ್ಲಿ ಜಮೀನು ಸಾಗುವಳಿಗೆ ಕೊಡಬೇಕು ಎಂದು ಕೇಳುತ್ತಾರೆ. ಬೆಳೆಯುವ ಜಾಗದಲ್ಲಿ ಜಮೀನು ಕೊಡುವುದರಲ್ಲಿ ನನ್ನ ಆಕ್ಷೇಪಣೆ ಇಲ್ಲ. ಒಟ್ಟು ನಮ್ಮ ರಾಜ್ಯದಲ್ಲಿ ಶೇಕಡ 18 ಕಾಡು ಇದೆ. ಇರಬೇಕಾದುದು 33⅓ ಭಾಗ. ಅರಣ್ಯ ಶಾಸ್ತ್ರದ ಪ್ರಕಾರ ಉತ್ಪತ್ತಿ ಬರುವ ಕಾಡಿನಲ್ಲಿ ಜಮೀನು ಕೊಡುವುದನ್ನು ಎಚ್ಚರಿಕೆಯಿಂದ ಕಡಿಮೆ ಮಾಡಬೇಕು. ಒಟ್ಟಿಗೆ ತುಂಬಾ ಕೊಡಬೇಡಿ. ಬಾತುಕೋಳಿ ಬಂಗಾರ ಮೊಟ್ಟೆಯಿಟ್ಟಂತಾಗುವುದು ಬೇಡ. ಒಂದು ಲಕ್ಷ ಚಿಲ್ಲರೆ ಕಾಡಿನಿಂದ ಸಾಗುವಳಿಗೆ ಅನುಕೂಲವಾಗಲಿ ಅಂದರೆ ರೆವಿನ್ಯೂಗೆ ಕೊಟ್ಟು ಅದರಿಂದ ಎಂಟು ಲಕ್ಷ ಚಿಲ್ಲರೆ ಎಕರೆ ಸಾಗುವಳಿಗೆ ಉಪಯೋಗಕ್ಕೆ ಬರದೆ ಇರುವ ಜಾಗ ತಗೊಂಡು (Forest consolidation) ಕನ್ಸಾಲಿಡೇಷನ್ ಸ್ಕೀಮ್ ಮಾಡಿದ್ದೀರಿ. 11ನೇ ನವೆಂಬರಲ್ಲಿ ಸ್ಯಾಂಕ್ಷನ್ ಆಗಿದೆ. ಎಂಟು ಲಕ್ಷ ತಗೊಂಡು ಅರಣ್ಯ ಸಂಪತ್ತು ಹೆಚ್ಚು ಮಾಡುತ್ತಿರುವುದು ಒಳ್ಳೆ ಯೋಚನೆ. ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಅರಣ್ಯ ಸಂಪತ್ತಿನಿಂದ ಕೂಡಿದ ಮಲೆನಾಡು ಶಿವಮೊಗ್ಗ ಜಿಲ್ಲೆ. ನಾನು ಅನೇಕ ಬಾರಿ ಮಾನ್ಯ ಸಚಿವರನ್ನು ಕಾಡಿದ್ದೇನೆ, ಜಮೀನು ಬಿಟ್ಟುಕೊಡಬೇಕು ಎಂದು. ಈಗ ನನಗೆ ಅರಿವು ಆಗುತ್ತಿದೆ. ಆ ಬಗ್ಗೆ ಇದೆನ್ನೆಲ್ಲ ಓದಿದಮೇಲೆ ಕಾಡಿನ ಜಮೀನನ್ನು ಕೊಡುವಾಗ ಎಚ್ಚರಿಕೆ ಯಿಂದ ಗಮನಿಸಿ ಕೊಡಬೇಕು. ಅರಣ್ಯಶಾಖೆಯ ಮೇಲೆ ಎಷ್ಟೋ ದೂರುಗಳನ್ನು ನನಗೂ ಕೂಡ ಬಂದು ಹೇಳಿದ್ದಾರೆ. ಊರಿನಲ್ಲಿಯೇ ಕಳ್ಳತನ ಹಿಡಿಯುವುದು ಕಷ್ಟ. ಕಾಡಿನಲ್ಲಿ ಕಳ್ಳತನ ಆದರೆ ಅದನ್ನು ಕಂಡುಹಿಡಿಯುವುದು ಇನ್ನೂ ತುಂಬಾ ಕಷ್ಟ. ಕಳ್ಳತನ ಮತ್ತು ಕಳ್ಳ ಸಾಗಾಣಿಕೆಯನ್ನು ಹಿಡಿಯಲು ಅರಣ್ಯ ಇಲಾಖೆಯವರು (T.S.P.) ಟಿಂಬರ್ ಸ್ಮಗ್ಲಿಂಗ್ ಪ್ರಿವೆನ್‌ಷನ್ (Forest police) ಕೆಲವು ಕಡೆ ಇಟ್ಟಿದ್ದಾರೆ. ಎಲ್ಲಾ ಕಡೆಯೂ ಅದನ್ನು ಇಡುವುದು ಒಳ್ಳೆಯದು ಅರಣ್ಯ ಇಲಾಖೆ ಕಳ್ಳ ತನ ಹಿಡಿಯುವುದರಲ್ಲಿ ಪ್ರಗತಿ ಹೊಂದಿದೆ ಎಂದು ಇಲ್ಲಿ ಕೊಟ್ಟಿರುವ ತಃಖ್ತೆಯಿಂದ ಗೊತ್ತಾಗುತ್ತದೆ. ಇದರ ಮೊಟ್ಟಿಗೆ ಹೇಳುವುದಾದರೆ 7774-63-64ರಲ್ಲಿ 64-65ರಲ್ಲಿ 12 ಸಾವಿರ ಚಿಲ್ಲರೆ ಅಂದಮೇಲೆ ಕಳ್ಳತನ ಹಿಡಿಯುವುದರಲ್ಲಿ ಬರಬರುತ್ತಾ ಈ ಟಿಂಬರ್ ಸ್ಮಗ್ಲಿಂಗ್ ವಿಚಾರದಲ್ಲಿ ತುಂಬಾ ಪ್ರಗತಿ ಯನ್ನು ಸಾಧಿಸಿದೆ. ಆದರೂ ಇದನ್ನು ಪೂರ್ತಿಯಾಗಿ ಹಿಡಿಯುವುದಕ್ಕೆ ಕಷ್ಟ. ಅರಣ್ಯದಲ್ಲಿ ಕಳ್ಳ ಸಾಗಾಣಿಕೆ ಹಿಡಿಯುವವರಿಗೆ ಸಾಕಷ್ಟು ರಕ್ಷಣೆಯೂಬೇಕು. ನೀವು ಏನೂ ಮಾಡೋಲ್ಲ ಹಾಗೆ ನಡೆದಿದೆ ಎಂದರೆ ಇದಕ್ಕಿಂತ ಏನೂ ಮಾಡಲಾಗೋಲ್ಲ. ಇನ್ನು ಆಯುವ್ಯಯ ಆಯಿತು, ಇನ್ನು ವ್ಯಯಖರ್ಚು ಇನ್ನು ಸಿಬ್ಬಂದಿ ವಿಚಾರದಲ್ಲಿ ಹೇಳುವುದಾದರೆ, 1960ನೇ ಇಸವಿಯಲ್ಲಿ 59 ಲಕ್ಷ ಇತ್ತು ಈಗ 84 ಲಕ್ಷವಾಗಿದೆ. ಮತ್ತು ನಮ್ಮ ರೆವೆನ್ಯೂ ಏಳು ಕೋಟಿ ಇದ್ದುದ್ದು 10 ಕೋಟಿವರೆಗೆ ಯಾಗಿದೆ. ಖರ್ಚು ಎರಡು ಕೋಟಿ ಇದ್ದದ್ದು 6½ ಕೋಟಿಯಾಗಿದೆ. ಹೀಗಿರುವುದರಿಂದ, ಈ ಸಿಬ್ಬಂದಿಯಲ್ಲಿ ಏನಾಗುತ್ತೆ. ಹೆಚ್ಚಾಗಿ ಸಿಬ್ಬಂದಿ ಮಾಡಿ. ಉದಾಹರಣೆಗೆ ಈಗ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ್, ಅಸಿಸ್ಟಾಂಟ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರುಗಳು, ಮತ್ತು ವಿದ್ಯಾಇಲಾಖೆಯಲ್ಲಿ ಅಸಿಸ್ಟಾಂಟ್ ಡೈರಕ್ಟರ್, ಜಾಯಿಂಟ್ ಡೈರೆಕ್ಟರ್ ಮತ್ತು ಡೈರಕ್ಟರ್ ಎಂದು ಅನೇಕ ಅಧಿಕಾರಿಗಳು ಇದ್ದಾರೆ. ಅದೇ ರೀತಿ ಈ ಇಲಾಖೆಯಲ್ಲೂ ಕೂಡ ಹೆಚ್ಚು ಮಾಡಬೇಕೆಂದು. ನಾನು ನೋಡಿದಾಗಿನಿಂದ ಇದ್ದಷ್ಟೇ ಜನ ಇದ್ದಾರೆ. ಸಿಬ್ಬಂದಿಗೆ ಹೆಚ್ಚು ಮಾಡಬೇಕು.

ಇನ್ನು ಪ್ಲಾಂಟೇಶನ್ 1965-66ರಲ್ಲಿ ಸುಮಾರು 52,382 ಎಕರೆಯಾಗಿದೆ. ಇದು ಬಹಳ ಒಳ್ಳೆಯ ಕೆಲಸ ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದೇ ರೀತಿ ರಬ್ಬರ್ ಕಲ್ಟಿವೇಶನ್ ಕೂಡ ಮಾಡಿದ್ದಾರೆ. 1286 ಎಕರೆ ಪ್ರಪಥಮವಾಗಿ ಮಾಡಿ ದ್ದೀರಿ ಅಂತ ತಿಳಿದು ತುಂಬಾ ಸಂತೋಷ. ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಸಿ ಅಭಿವೃದ್ಧಿಗೊಳಿಸಿ ಹೆಚ್ಚು ಉತ್ಪತ್ತಿ ದೊರೆಯುತ್ತೆ. ಹುಲ್ಲು ಇಲ್ಲದೆ ದನಕರುಗಳಿಗೆ ತೊಂದರೆಯಾದ ಈ ಅಭಾವ ಕಾಲದಲ್ಲಿ ಅರಣ್ಯ ಇಲಾಖೆಯವರು ಎಷ್ಟೋ ಸಾವಿರ ಹುಲ್ಲನ್ನು ಕಾಡಿನವರು ಸೇರಿಸಿ 1500 ಟನ್ ಮಾಡಿದ್ದೀರಿ. 350 ಟನ್ ಹುಲ್ಲು ಈಗಾಗಲೇ ಹಂಚಲಾಗಿದೆ. ಎಷ್ಟೊ ಸಾವಿರ ಟನ್ ಹುಲ್ಲನ್ನು ಬೆಳೆಸಿ ಯಾರಾದರೂ ಇದನ್ನು ತೆಗೆದುಕೊಂಡು ಹೋಗಬಹುದು ಎಂದು ಹೇಳಿದ್ದದ್ದು ತುಂಬಾ ಒಳ್ಳೇ ಕೆಲಸ ಅಭಿನಂದನೆ. ಇನ್ನು ಕೈಗಾರಿಕೋದ್ಯಮದಲ್ಲಿ ಆದಾಯ ತಗೊಂಡರೆ ಗಂಧದ ಎಣ್ಣೆಯ ಕಾರ್ಖಾನೆಯು ಉದ್ಯಮ ಸಂಸ್ಥೆಗಳಲ್ಲಿ ಮುಂದಿದೆ. ಇದಕ್ಕೂ ಅರಣ್ಯ ಇಲಾಖೆಯವರು ತುಂಬಾ ಗಂಧ ಕೊಟ್ಟಿದುದರಿಂದ ನಮ್ಮ ಮಾನ್ಯ ಸೋದರಿಯವರಾದ ನಾಗರತ್ನಮ್ಮನವರು ಹೇಳಿದರು, ಅರ್ಥಿಕ ಸಚಿವರು ಬಜೆಟನ್ನು ಮಂಡಿಸುವುದರಲ್ಲಿ ಮೂರನೇ ತರಗತಿಯಲ್ಲಿ ಪಾಸಾಗಿದ್ದಾರೆ ಎಂದು. ಆದರೆ ನಾನಾದರು ಹೇಳುತ್ತೇನೆ, ಅವರು ಈ ಇಲಾಖೆಯಲ್ಲಿ ಮೊದಲನೇಯ ತರಗತಿಯಲ್ಲಿ I ರ್‍ಯಾಂಕ್ ಬಂದಿದ್ದಾರೆಂದು ಹೋದ ಬಾರಿ ಅನೇಕ ಸಲಹೆಗಳನ್ನು ಇಲಾಖೆ ಮತ್ತು ಇಲಾಖೆ ನೌಕರರ

(ಶ್ರೀಮತಿ ರತ್ನಮ್ಮ ಮಾಧವರಾವ್)

ಬಗ್ಗೆ ಮಾತಾಡಿದೆ. ಬಹಳ ಭಾಗ ಎಲ್ಲದಕ್ಕೂ ಗಮನ ಕೊಟ್ಟಿದ್ದರೆ ಮತ್ತೆ ಹೇಳಲು ಹೋಗೊಲ್ಲ. ಅವರು ಅನೇಕ ವಿಧವಾದ ಪ್ರಗತಿಯನ್ನು ಮಾಡಿದ್ದಾರೆ. ಇನ್ನು ಈ ಅರಣ್ಯದಲ್ಲಿರುವಂತಹ ಕ್ರೂರ ಮೃಗಗಳಿಗೆ ಅವಕಾಶ ಕೊಡದೆ ವನ್ಯ ಮೃಗಗಳ ರಕ್ಷಣೆಗೆ ಹೆಚ್ಚಿನ ಗಮನವನ್ನು ಕೊಟ್ಟು, ಅರಣ್ಯ ಸಂಪತ್ತನ್ನು ಇನ್ನೂ ಹೆಚ್ಚಿಗೆ ಮಾಡಿಕೊಳ್ಳಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪಿ. ಫಾಯದೆ (ಅಂಕೋಲ):—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ಈ ವ್ಯವಸಾಯ ಫಾರೆಸ್ಟ್ ಖಾತೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಜಿಲ್ಲೆಯ ಮಟ್ಟಿಗೆ ಸ್ವಲ್ಪ ಮಾತನಾಡಲಪೇಕ್ಷಿಸುತ್ತೇನೆ. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯೆಯರು ಈ ಅರಣ್ಯ ಇಲಾಖೆಯ ಬಗ್ಗೆ ತಮ್ಮ ಧೋರಣೆಯನ್ನು ಹೇಳಿದರು. ಆದರೆ ನಾನು ಕಟುವಾಗಿ ಟೀಕೆ ಮಾಡುವ ಪ್ರಸಂಗ ಬಂತಲ್ಲ ಎಂದು ನಾನು ಸ್ವಲ್ಪ ದುಃಖಪಡಬೇಕಾಗಿದೆ. ಏಕೆಂದರೆ, ಇದರಿಂದ ಯಾರಿಗೆ ನೋವಾಗಿದೆಯೋ ಅವರ ಹೊರತು ಬೇರೆಯವರಿಗೆ ಏನೂ ಗೊತ್ತಾಗುವುದಿಲ್ಲ. ಇದೇ ಸಭೆಯಲ್ಲಿ ಕಳೆದ 1963ನೇ ಇಸವಿಯಲ್ಲಿ ನಾನು ಒಂದು ಪ್ರಶ್ನೆ ಕೇಳಿದಾಗ ನಮ್ಮ ಜಿಲ್ಲೆಯಲ್ಲಿ 74,828 ಲ್ಯಾಂಡ್ ಲೆಸ್ ಲೇಬರರ್ಸ್ ಇದ್ದಾರೆ ಎಂದು ಉತ್ತರ ಕೊಟ್ಟಿದ್ದರು. ಆ ಪೈಕಿ ಎಷ್ಟು ಜನರಿಗೆ ಈ ಜಿಲ್ಲೆಯ 2 ಡಿವಿಜನ್ಸ್ ಭೂಮಿ ಒದಗಿಸಿದ್ದಾರೆ ಎಂಬುದನ್ನು ನೋಡಬೇಕು. ಅಲ್ಲಿ ಏನಾಗಿದೆಯೆಂದರೆ ಆಫೀಸುಗಳನ್ನು ಧಾರವಾಡದಲ್ಲೇ ಮಾಡಿಬಿಟ್ಟಿದ್ದಾರೆ. ಒಂದೇ ಒಂದು ಕಡೆ ಕಟ್ಟಡದಲ್ಲೇ ಒಟ್ಟು ಮೂರು ಆಫೀಸುಗಳು ಇವೆ. ಇದರಿಂದಾಗಿ ಕಾರವಾರದವರಿಗೆ ತುಂಬಾ ತೊಂದರೆಯಾಗಿದೆ. ಯಾವ ಕೆಲಸವಾಗಬೇಕಾದರೂ ಧಾರವಾಡಕ್ಕೆ ಹೋಗಬೇಕಾಗುತ್ತದೆ. ಸರಕಾರದವರು ಕಟ್ಟು ನಿಟ್ಟಾಗಿ ಒಂದು ನಿರ್ಣಯಕ್ಕೆ ಬರಬೇಕು ಹೆಚ್ಚಾಗಿ ಕಂಟ್ರಾಕ್ಟರ್ಸ್ ಧಾರವಾಡದ ಕಡೆಯಿಂದ ಬರುತ್ತಾರೆ, ಬೇರೆ ಕಡೆ ಕಾರವಾರದಲ್ಲಿ ಮಾಡಿದರೆ ಅವರಿಗೆ ತುಂಬಾ ಅನಾನುಕೂಲವಾಗುತ್ತದೆ ಎಂದು ವರ್ತಮಾನ ಪತ್ರಗಳಲ್ಲಿ ಬರುತ್ತಾ ಇತ್ತು. ಇದರಿಂದ ಏನು ತಿಳಿಯುತ್ತದೆ ಎಂದರೆ, ಅವರ ಅಧಿಕಾರಿಗಳಿಗೆ, ಕಂಟ್ರಾಕ್ಟರುಗಳಿಗೆ ಅನುಕೂಲವಾಗಬೇಕು, ಇನ್ನುಳಿದವರಿಗೆ ಅನಾನುಕೂಲವಾದರೂ ಚಿಂತೆ ಇಲ್ಲ. ಹಾಗಿದ್ದರೆ ಈ ಎಲ್ಲಾ ಆಫೀಸುಗಳನ್ನೂ ಬೆಂಗಳೂರಿನಲ್ಲೇ ಮಾಡಬಹುದಲ್ಲ! ಇದು ನಿಜವಾಗಿಯೂ ಸರಿಯಲ್ಲ. ಆದ್ದರಿಂದ ಈ ಡಿವಿಜನ್ನುಗಳು ಎಲ್ಲೆಲ್ಲಿ ಇರಬೇಕೋ ಅಲ್ಲೇ ಮಾಡಬೇಕೆಂದು ನಾನು ಮೊದಲನೆಯದಾಗಿ ಕೇಳಿಕೊಳ್ಳುತ್ತೇನೆ. ಇನ್ನು ಈ ಡಿಪಾರ್ಟ್‌ಮೆಂಟಿನವರು ಕೊಡುವ ಉತ್ತರವನ್ನು ನೋಡಿದರೆ, ಈ ಇಲಾಖೆಯವರು ಸರಿಯಾಗಿ ದಕ್ಷತೆ ವಹಿಸಿ ಕೆಲಸಮಾಡುತ್ತಾರೋ ಇಲ್ಲವೋ ಎಂಬ ಸಂದೇಹ ಬರುತ್ತದೆ. ಹಿಂದೆ ಒಂದು ಪ್ರಶ್ನೆಗೆ ಈ ಉತ್ತರವನ್ನು ಕೊಟ್ಟಿದ್ದಾರೆ :

> "Whether it has come to their notice that the grantees are not able to cultivate such land unles jungle is cleared by the forest Department"

Reply : No. Forest land is not handed over to the Revenue Department.

ಅದರ ಜೊತೆಯಲ್ಲಿ ಒಂದು ರಿಕ್ವೆಸ್ಟ್ ಕಳಿಸಿದ್ದೆ, ಅದಕ್ಕೆ ಬಂದ ಉತ್ತರ ಈ ರೀತಿ ಇದೆ.

Reply received is :

> "I am directed to state that the Government have already released nearly an area of 2,000 acres of forest land in Yellapur taluk and these lands are now in the possession of the Deputy Commissioner North Kanara, Karwar, for being released to deserving persons for purposes of cultivation"

ಇದನ್ನೆಲ್ಲಾ ನೋಡಿದ್ದರೆ ಒಂದಕ್ಕೊಂದು ಸರಿಯಿಲ್ಲದೆ ಸತ್ಯಕ್ಕೆ ದೂರವಾದ ಮಾತಾಗಿದೆ. ಇದಕ್ಕೆಲ್ಲಾ ಯಾರು ಕಾರಣರು ಎಂದು ನೋಡಿ ಅವರನ್ನು ಶಿಕ್ಷೆಗೆ ಗುರಿಮಾಡಬೇಕೆಂದು ನಾನಾದರೂ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾಧಾರಣ 84 ಪರ್ಸೆಂಟ್ ಅರಣ್ಯ ಪ್ರದೇಶ. ಅದರಲ್ಲೂ ನಮ್ಮ ತಾಲ್ಲೂಕಿನಲ್ಲಿ ಶೇಕಡಾ 92 ಭಾಗ ಅರಣ್ಯ ಪ್ರದೇಶವಾಗಿದೆ. ಸರ್ಕಾರದವರು ಅರಣ್ಯ

ಭಾಗ ಎಂಬ ನೆವದಿಂದ ನಮ್ಮನ್ನು ನಿರ್ಲಕ್ಷಿಸಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ನಮಗೆ ಬೇಕಾದಷ್ಟು ನೀರಾವರಿ ಇದೆ, ಫಲವತ್ತಾದ ಜಮೀನು ಇದೆ. ಇಲ್ಲಿ ಅರಣ್ಯ ಇಲಾಖೆಯವರು ಕಾಫಿ ಪ್ಲಾಂಟೇಶನ್, ಹಣ್ಣು ಹಂಪಲು ಮರಗಳನ್ನು ಹಾಗೂ ರಬ್ಬರನ್ನು ಬೆಳೆಸಿದರೆ, ಜನರಿಗೆ ಅನುಕೂಲವಾಗುತ್ತದೆ, ಬರೇ ನಿರುಪಯೋಗಿ ಗಿಡಮರಗಳನ್ನು ಬೆಳೆಸಿದರೆ, ಅಥವಾ ಜನರಿಗೆ ಏನೂ ಪ್ರಯೋಜನವಾಗದ ಕಾಡುಮರಗಳನ್ನು ಬೆಳೆಸಿದರೆ, ಅದರಿಂದ ಏನೊಂದು ಪ್ರಯೋಜನವಾಗಲಾರದು. ಇದನ್ನೆಲ್ಲಾ ಜನರಿಗೆ ಉಪಯೋಗವಾಗುವಂತಹ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಫಿಶರೀಸ್ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಬೇಕಾದಷ್ಟು ಕೆರೆಕಟ್ಟೆಗಳು ಇವೆ. ಇದರಲ್ಲಿ ಎಲ್ಲಾ ಮೀನುಗಳನ್ನು ಬೆಳೆಸುವುದರಿಂದ ಅನುಕೂಲವಾಗುತ್ತದೆ. ಅದ್ದರಿಂದ ಈ ಇನ್‌ಲೆಂಡ್ ಫಿಶರಿಯ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಈಗ ವ್ಯವಸಾಯಗಾರರಿಗೆ ಅವಶ್ಯವಿರುವಂಥ ಟ್ರಾಕ್ಟರ್ಸ್, ಪವರ್ ಟ್ರಿಲ್ಲರ್ಸ್ ಯಾವುದೂ ದುರ್ದೈವದಿಂದ ನಮ್ಮ ಜಿಲ್ಲೆಗೆ, ಸಿಗಲೇ ಇಲ್ಲ. ಈ ಸಭೆಯಲ್ಲಿ ನಾನು ಬಂದಲಾಗಾಯ್ತು ಹೇಳುತ್ತಿದ್ದೇನೆ. ನಮ್ಮ ಮುಂಡುಗೋಡು ಹಳಿಯಾಳ ತಾಲ್ಲೂಕು ಭತ್ತ ಬೆಳೆಯುವುದರಲ್ಲಿ ಅಗ್ರಗಣ್ಯ ಎಂದು ಹೆಸರುಪಡೆದಿದೆ. ಅಲ್ಲಿಯೂ ಕೂಡ ಯಾರಿಗೂ ಮಂಜೂರಾಗಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ನಿಗಾ ಕೊಟ್ಟು ಅದನ್ನು ಆ ಭಾಗಕ್ಕೆ ಒದಗಿಸುವಂತೆ ಏರ್ಪಾಡು ಮಾಡಬೇಕೆಂದು. ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಸಭೆಯ ಮುಂದೆ ಇರುವ ವ್ಯವಸಾಯ ಇಲಾಖೆಯ 5,65,05,000 ರೂಪಾಯಿಗಳ ಬೇಡಿಕೆ ಬಹಳ ಕಡಮೆ ಇದೆ ಎಂದು ಹೇಳಿ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ, ನಮ್ಮ ದೇಶದ, ಆಹಾರದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ವ್ಯವಸಾಯ ಇಲಾಖೆ ಯಾವ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಅನುಭವ ನಮಗೆ ಬರುತ್ತದೆ. ಎರಡನೆಯ ಯೋಜನೆಯಲ್ಲಿ ಮೈಸೂರು ಸರ್ಕಾರದವರು ಸಾಧಾರಣ 38 ಲಕ್ಷ ಟನ್ ಆಹಾರವನ್ನು ಬೆಳೆಸಿದರು. ಮೂರನೆ ಯೋಜನೆಯಲ್ಲಿ ಎಂಟು ಲಕ್ಷ ಟನ್ ಜಾಸ್ತಿಯಾಗಿ ಅದು 48 ಲಕ್ಷ ಟನ್ ಆಗಬಹುದು ಎಂದು ಅಂದಾಜು ಮಾಡಿದ್ದರು. ಈ ವರ್ಷದ ಬೆಳೆಗಳನ್ನು ನೋಡಿದರೆ 20 ಲಕ್ಷಕ್ಕೆ ಬಂದು ನಿಂತಿದೆ. ನಮ್ಮ ವ್ಯವಸಾಯ ಇಲಾಖೆ ಯಾವ ತರಹದಲ್ಲಿ ಕೆಲಸ ಮಾಡುತ್ತಿದೆ ಎನ್ನುವುದನ್ನು ನಾವು ಬೇರೆ ಎತ್ತಿ ತೋರಿಸಬೇಕಾಗಿಲ್ಲ. ನಮ್ಮಲ್ಲಿ ಬೇಕಾದಷ್ಟು ವ್ಯವಸಾಯಕ್ಕೆ ಯೋಗ್ಯವಾದ ಸ್ಥಳವಿದೆ ಮಾತ್ರವಲ್ಲದೆ ಸರ್ವ ಅನುಕೂಲತೆಗಳೂ ಇವೆ. ಹೀಗಿದ್ದರೂ ಕೂಡ ನಮ್ಮ ವ್ಯವಸಾಯ ಇಷ್ಟರ ತನಕ ಅಭಿವೃದ್ಧಿ ಹೊಂದದೆ ಇರುವುದಕ್ಕೆ ಕಾರಣವನ್ನು ಕಂಡು ಹಿಡಿಯುವುದಕ್ಕೆ ಕೂಡ ನಮ್ಮ ಸರ್ಕಾರಕ್ಕೆ ಆಗಿಲ್ಲ. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಲೋಕನಾಥನ್ ಅವರ ರಿಪೋರ್ಟಿನಲ್ಲಿ ಒಂದು ವಿಷಯವನ್ನು ಅವರು ಹೇಳಿದ್ದಾರೆ.

> "Mysore has had a tradition of enlightened administration and powerful development, but since the re-organisation of the State in 1956, its economic structure has gone down. Its agriculture is poor and barren......industrial structure is weak; forest and sericulture, though well-developed, indicate only cultural advancement, and the *per capita* income......is well below the All-India average."

ಅವರು ಏನು ಹೇಳಿದ್ದಾರೆಂದರೆ, ಹಳೇ ಮೈಸೂರಿನಲ್ಲಿರುವಾಗ ವ್ಯವಸಾಯ ಇಲಾಖೆಯಲ್ಲಿ ಸ್ವಲ್ಪ ಕೆಲಸ ನಡೆದಿದೆ. 1956ನೆ ಇಸವಿಯಿಂದ ಅಖಂಡ ಕರ್ಣಾಟಕವಾದ ಮೇಲೆ ವ್ಯವಸಾಯ ಇಲಾಖೆಯು ನಿದ್ದೆ ಹೊಡೆಯುತ್ತಿದೆ ಮಾತ್ರವಲ್ಲದೆ ನಮ್ಮ ಆಡಳಿತ ವಹಿಸಿರುವ ಸರ್ಕಾರ ಖಾಲಿ ಹೊಲಸು ರಾಜಕೀಯ ಪುಢಾರಿಗಳನ್ನು ಉತ್ಪಾದನೆ ಮಾಡುವ ಶಕ್ತಿಯನ್ನು ಪಡೆದಿದೆ, ವ್ಯವಸಾಯ ಇಲಾಖೆಯಲ್ಲಿ ಏನೇನೂ ಉತ್ಪನ್ನವಾಗಿಲ್ಲ ಎಂದು ಈ ರಿಪೋರ್ಟಿನ ಮೇಲೆ ನಾವು ಹೇಳಬೇಕಾಗಿದೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

ನಮ್ಮ ದೇಶದಲ್ಲಿ 250.3 ಮಿಲಿಯನ್ ಎಕರೆಗಳಲ್ಲಿ ಆಹಾರ ಧಾನ್ಯವನ್ನು ಬೆಳೆಯುವ ಶಕ್ತಿ ಇದೆ. ವರ್ಷ ಒಂದಕ್ಕೆ ಲಕ್ಷಾಂತರ ಎಕರೆ ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ. ಆದರೂ ನಮ್ಮ ಆಡಳಿತ ವರ್ಗದವರು ವ್ಯವಸಾಯದಲ್ಲಿ ಹೆಚ್ಚಿನ ಅಭಿರುಚಿಯನ್ನು ಹೊಂದದೆ ನಿರ್ಜೀವಾವಸ್ಥೆಯನ್ನು ಹೊಂದಿ ವ್ಯವಸಾಯ ಇಲಾಖೆಯಲ್ಲಿ ಏನನ್ನು ಸಾಧಿಸಿಲ್ಲ ಈ ತನಕ. ಕಾಡಿನಲ್ಲಿ ಹುಲಿಯನ್ನು ಬೇಟೆಯಾಡಲಿಕ್ಕೆ ಹೋಗಿ ಇಲಿಯನ್ನು ಹೊಡೆಯುವ ಪರಿಸ್ಥಿತಿಯಂಟಾಗಿದೆ ಎಂದರೆ ತಪ್ಪಾಗಲಾರದು. ನಾನು ಕೆಲವು ವಿಷಯಗಳನ್ನು ತಮ್ಮ ಮುಂದೆ ಹೇಳುತ್ತೇನೆ. ಹೋದ ಸಲ ಎರಡನೆ ಬೆಳೆಗೆ ದೇಶದಲ್ಲಿ ಮಳೆ ಇಲ್ಲದೆ, ನೀರಿಲ್ಲದೆ ಇರುವ ಪರಿಸ್ಥಿತಿಯಲ್ಲಿ ಪಂಪ್‌ಸೆಟ್‌ಗಳನ್ನು ರೈತರಿಗೆ ಕೊಟ್ಟರು. ಇದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಕೆಲವು ಹಣವನ್ನು ಕೊಟ್ಟು ವ್ಯವಸಾಯಗಾರರಿಗೆ ಪಂಪ್‌ಸೆಟ್‌ಗಳನ್ನು ಕೊಟ್ಟು ಬೆಳೆಗಳನ್ನು ಉಳಿಸಬೇಕು ಎಂದು ಹೇಳಿದರು. ಆ ಪಂಪ್‌ಸೆಟ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂದು ತಮಗಾದರೂ ಗೊತ್ತಿದೆಯೇ ಎಂದು ಕೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಹೀಗೆ ಐದಾರು ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ. ಅದನ್ನು ಪಡೆದ ರೈತರು ನನ್ನ ಹತ್ತಿರ ಬಂದು ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್‌ಗಳಿಲ್ಲದೆ ಪಂಪ್‌ಗಳು ಕೆಲಸ ಮಾಡುತ್ತಿಲ್ಲ, ಇದರಿಂದಾಗಿ ಬೆಳೆ ಎಲ್ಲ ಹೋಯಿತು. ಸರ್ಕಾರದವರು ನಮಗೆ ಪಂಪ್ ಸೆಟ್ ಕೊಡದೆ ಇದ್ದಿದ್ದರೆ ನಾವು ಬೇರೆ ಏರ್ಪಾಡನ್ನು ಮಾಡಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾರೆ. ಅಂಥ ರೀತಿಯಲ್ಲಿ ಪಂಪ್‌ಸೆಟ್‌ಗಳು ಕೆಲಸ ಮಾಡುತ್ತಿವೆ.

ರಾಜ್ಯದಲ್ಲಿ ಬೆಳೆಯುವ ರೈತನಿಗೆ ಬೇಕಾದಷ್ಟು ಗೊಬ್ಬರ ಮತ್ತು ಇತರ ಅನುಕೂಲತೆ ಸಿಕ್ಕುತ್ತಿಲ್ಲ. ನನ್ನ ಮಿತ್ರರು ಅನೇಕರು ಹೇಳುತ್ತಿದ್ದರು, ನಮ್ಮ ರಾಜ್ಯಕ್ಕೆ ಬರುವ ಗೊಬ್ಬರದ ಕಾರ್ಖಾನೆ ಈಗ ಬೇರೆ ರಾಜ್ಯಕ್ಕೆ ಹೋಯಿತು ಮಾತ್ರವಲ್ಲದೆ ನಮ್ಮ ರಾಜ್ಯದಲ್ಲಿ ಈಗ ಸಣ್ಣದಾಗಿ ಕೆಲಸ ಮಾಡುತ್ತಿರುವ ಗೊಬ್ಬರದ ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸುವ ಆಲೋಚನೆಯನ್ನೂ ಕೂಡ ನಮ್ಮ ಸರ್ಕಾರದವರು ಮಾಡಲಿಲ್ಲ. ಅಂತೂ ನಮ್ಮ ರಾಜ್ಯದ ಕೈ ಬಿಟ್ಟು ಹೋದ ಗೊಬ್ಬರದ ಕಾರ್ಖಾನೆ ಹೋಯಿತು, ಅದು ಬರುವುದಿಲ್ಲ. ಆದರೂ ಕೂಡ ನಮಗೆ ಬೇಕಾಗಿರುವ ಗೊಬ್ಬರವನ್ನು ಈಗಿರುವ ನಮ್ಮ ಸಣ್ಣ ಕಾಖಾನೆಯಿಂದಲೇ ಉತ್ಪಾದನೆ ಮಾಡುವಂತೆ ನೋಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಸ್ವಾಮಿ, ನಾವು ಆಹಾರಕ್ಕಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಸಾಧಾರಣ ವರ್ಷ ಒಂದಕ್ಕೆ 60 ಕೋಟಿ ವಿದೇಶಿ ವಿನಿಮಯವನ್ನು ನಷ್ಟ ಮಾಡಿ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಕ್ರಮ ಕೈಕೊಂಡಿದ್ದೇವೆ ಎಂದು ಹೇಳುವುದು ತಮ್ಮ ವೇದಿಕೆಯ ಮೇಲಿನ ಭಾಷಣದಲ್ಲಿ ಇಲ್ಲವೇ ತಾವು ಅಲ್ಲಲ್ಲಿ ಮಾಡುವ ಪಂಚಾಯತಿ ಗೋಷ್ಠಿಗಳಲ್ಲಿ, ತಾಲ್ಲೂಕು ಬೋರ್ಡ್ ವಿಚಾರ ಗೋಷ್ಠಿಗಳಲ್ಲಿ, ಅಲ್ಲಿ ಮುಗಿಯುತ್ತದೆ. ಆಹಾರದ ಉತ್ಪಾದನೆಯಲ್ಲಿ ಹೆಚ್ಚಿಗೆ ಏನೂ ಮಾಡಿಲ್ಲ ಎಂದು ಹೇಳಲಿಕ್ಕೆ ನನಗೆ ಬಹಳ ಶೋಚನೀಯವಾಗುತ್ತದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದು ಇದ್ದರೆ ನಮ್ಮಲ್ಲಿ ಸಾಧಾರಣ, 5,07,897 ಎಕರೆಯಲ್ಲಿ ಬತ್ತದ ಬೆಳೆಯನ್ನು ಬೆಳೆಸುತ್ತೇವೆ. ಅದರಲ್ಲಿಯೂ ಕೂಡ ನಮ್ಮದು ವಿಚಿತ್ರ ಸಂಗತಿ. ಯಾವ ಜಿಲ್ಲೆಯಲ್ಲಿಯೂ ಮೂರು ಬೆಳೆ ಬತ್ತ ಬೆಳೆಸುವ ಕ್ರಮವನ್ನು ಇಟ್ಟುಕೊಂಡಿಲ್ಲ. ನಮ್ಮ ಜಿಲ್ಲೆಯಲ್ಲಿ ಮಾತ್ರ ಮೂರು ಬೆಳೆಗಳನ್ನು, ವರ್ಷದ ಮೂರು ಕಾಲಗಳಲ್ಲಿ ಬೆಳೆಸುತ್ತಾರೆ. ಒಂದನೆ ಬೆಳೆಯನ್ನು 3,69,709 ಎಕರೆಯಲ್ಲಿಯೂ, ಎರಡನೆ ಬೆಳೆಯನ್ನು 1,20,770 ಎಕರೆಯಲ್ಲಿಯೂ ಮೂರನೆ ಬೆಳೆಯನ್ನು 17,418 ಎಕರೆಯಲ್ಲಿಯೂ ಹೀಗೆ ಒಟ್ಟು 5,07,897 ಎಕರೆಯಲ್ಲಿ ಬತ್ತದ ಬೆಳೆಯನ್ನು ತೆಗೆಯುತ್ತಾರೆ. ನಮ್ಮ ದೇಶದಲ್ಲಿ ಆಹಾರ ಧಾನ್ಯಗಳಲ್ಲಿ ನಿಕೃಷ್ಟ ಪರಿಸ್ಥಿತಿ ಬಂದಿರುವುದು ಅಕ್ಕಿಯಲ್ಲಿ. ಇಡೀ ಮೈಸೂರು ದೇಶದಲ್ಲಿ 20 ಜಿಲ್ಲೆಗಳಲ್ಲಿ ಸಾಧಾರಣ ಐದನೇ ಒಂದು ಅಂಶ ಅಕ್ಕಿ ಬೆಳೆಯುವ ವಿಸ್ತೀರ್ಣ ಇರುವ ಜಿಲ್ಲೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆ. ಆದರೆ ಇಲ್ಲಿ ನಮಗೆ ಬೇಕಾದ ಸವಲತ್ತುಗಳಿಲ್ಲ. ನಾವು ಯಾವತ್ತಿಗೂ ಬೊಬ್ಬೆ ಹೊಡೆಯುತ್ತ ಇದ್ದೇವೆ, ನಮ್ಮಲ್ಲಿ ಹೆಚ್ಚು ನೀರಾವರಿ ಅನುಕೂಲವಿಲ್ಲದೆ ಇರುವುದರಿಂದ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಒದಗಿಸಬೇಕು ಎಂದು. ಈ ಗಾಗಲೇ ನನ್ನ ತಿಳುವಳಿಕೆಯ ಮೇರೆ ನಮ್ಮ ಜಿಲ್ಲೆಗೆ ಸಾಧಾರಣ ಎರಡೂವರೆ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ತಯಾರಿಸಿದ ಯೋಜನೆ ಪ್ರಕಾರ ಪಂಪ್‌ಸೆಟ್‌ಗಳನ್ನು ಇನ್‌ಸ್ಟಾಲ್ ಮಾಡುವುದು ಬಾಕಿ ಉಳಿದಿದೆ. ಈಗ ಸಾಧಾರಣ ಮೂರೂವರೆ ಸಾವಿರ, ನಾಲ್ಕು ಸಾವಿರ ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ. ಈ ವರ್ಷ ಹೆಚ್ಚಿಗೆ ಅಂದರೆ ನಮ್ಮ ಜಿಲ್ಲೆ ಒಂದಕ್ಕೆ ಎಂಭತ್ತಾರುವರೆ ಸಾವಿರ ಪಂಪ್‌ಸೆಟ್‌ಗಳನ್ನು ಒದಗಿಸಿದರೆ, ನಾನು ಖಂಡಿತವಾಗಿ ಹೇಳುತ್ತೇನೆ, ನಮ್ಮ ಈಗಿನ ಉಪ್ಪತ್ತಿ ಏನಿದೆ ಅದನ್ನು ಇನ್ನೂ ಹೆಚ್ಚು ಮಾಡಬಹುದು. 2.50,500

ಟನ್ ತನಕ ಬತ್ತವನ್ನು ಈಗ ನಾವು ಉತ್ಪತ್ತಿ ಮಾಡುತ್ತಿದ್ದೇವೆ. ನಮ್ಮಲ್ಲಿ ಇನ್ನೂ ನಾಲ್ಕು ಲಕ್ಷ ಎಕರೆ ಭೂಮಿ ಜಾಸ್ತಿ ಸಾಗುವಳಿ ಆಗಲಿದ್ದು ಪ್ರತಿ ವರ್ಷ ಐದು ಲಕ್ಷ ಟನ್ ಅಕ್ಕಿಯನ್ನು ಉತ್ಪತ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದುದರಿಂದ ತಾವು ಪಂಪ್‌ಸೆಟ್‌ಗಳನ್ನು ಒದಗಿಸುವುದರಲ್ಲಿ ತೀವ್ರ ಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ವಿಚಾರದಲ್ಲಿ ತೆಗೆದು ಕೊಳ್ಳಬೇಕು. ನಮ್ಮಲ್ಲಿ ಬೇರೆ ನೀರಾವರಿ ಯೋಜನೆಗಳ ಸೌಲಭ್ಯವಿಲ್ಲ, ಅಲ್ಲಿ ದೊಡ್ಡ ದೊಡ್ಡ ಅಣೆ ಕಟ್ಟುಗಳಿಲ್ಲ, ಬೇರೆ ಯಾವ ವಿಧವಾದ ನೀರಾವರಿ ಸೌಲಭ್ಯಗಳೂ ಅಲ್ಲಿ ಇಲ್ಲದೆ ಇದ್ದದ್ದರಿಂದ ಅಲ್ಲಿಯ ರೈತರು ಹೆಚ್ಚಾಗಿ ನೀರನ್ನು ಎತ್ತಿ ಸಾಗುವಳಿ ಮಾಡತಕ್ಕ ಪರಿಸ್ಥಿತಿ ಇರುವುದರಿಂದ ಆದಷ್ಟು ಪಂಪ್ ಸೆಟ್‌ಗಳನ್ನು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳು

4-30 P. M.

ತ್ತೇನೆ. ಇನ್ನು ಜೂನ್‌ತಿಂಗಳ ಮೊದಲನೆಯ ವಾರದಲ್ಲಿ ನಮ್ಮ ಜಿಲ್ಲೆಗೆ ಮಳೆ ಬಂದರೆ ನಾಲ್ಕೈದು ತಿಂಗಳುಗಳ ತನಕ ಎಡೆಬಿಡದೆ ವಿಪರೀತ ಮಳೆ ಇದ್ದೇ ಇರುತ್ತದೆ. 2½ ಕೋಟಿ ರೂಪಾಯಿಗಳ ಪಂಪು ಸೆಟ್ಟುಗಳಿಂದಾಗತಕ್ಕ ಕೆಲಸ ಈಗ ಉಳಿದಿದೆ. ಅದನ್ನು ತೀವ್ರಗತಿಯಲ್ಲಿ ಮಾಡಬೇಕು. ಟ್ರಾನ್ಸ್‌ಫಾರ್ಮರ್‌ಸ್, ಎ. ಸಿ. ಎಸ್. ಆರ್. ವೈರ್‌ಸ್, ಅದಕ್ಕೆ ಬೇಕಾದ ಸಲಕರಣೆಗಳನ್ನು ತ್ವರಿತಗತಿಯಲ್ಲಿ ಕಳುಹಿಸಬೇಕು. ನಾನು ಗ್ಯಾರಂಟಿ ಕೊಡುತ್ತೇನೆ. ಬರುವ ವರ್ಷದಲ್ಲಿ 1½ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಸಿಕೊಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇನೆ. ಅಲ್ಲಲ್ಲಿ ಸಣ್ಣ ಸಣ್ಣ ಹೊಳೆಗಳು, ನದಿಗಳು ಹರಿಯುತ್ತವೆ. 197 ಮೈನರ್ ಇರ್ರಿಗೇಷನ್ ಸ್ಕೀಮುಗಳು ಅಂದಾಜಾಗಿ ಕೆಲವು ಇನ್ನೂ ಬಾಕಿ ಉಳಿದಿವೆ. ಇವತ್ತು ಸಣ್ಣ ನೀರಾವರಿ ಯೋಜನೆಯ ಮಂತ್ರಿಗಳು ಉತ್ತರ ಕೊಡುವಾಗ ಮಾಸ್ಟರ್ ಪ್ಲಾನ್ ಮಾಡುತ್ತೇವೆ, ನೀರಾವರಿಯೋಜನಗಳನ್ನು ತ್ವರಿತಗತಿ ಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದರು. ನಮ್ಮ ಜಿಲ್ಲೆಯೊಳಗೆ ಸಣ್ಣ ನೀರಾವರಿ ಯೋಜನೆಗಳೇನಿವೆಯೋ ಅವು ಏನೇನೂ ಸಾಲದು. ಇನ್ನು ಒಂದೆರಡು ವರ್ಷಗಳಲ್ಲಿ ಸಣ್ಣ ನೀರಾವರಿಯೋಜನಗಳನ್ನು ತೆಗೆದುಕೊಂಡರೆ ಬೇಕಾದಷ್ಟು ಪಂಪು ಸೆಟ್ಟುಗಳನ್ನು ರೈತರು ಉಪಯೋಗಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ವೆಂಟೆಡ್ ಡ್ಯಾಮನ್ನು ತೀವ್ರಗತಿಯಲ್ಲಿ ಮಾಡಬೇಕು.

ಇನ್ನು ನಮ್ಮಲ್ಲಿ ಅತಿಮುಖ್ಯವಾದ ಬೆಳೆ ಅಂದರೆ ಗೇರು ಬೀಜದವ್ಯವಸಾಯ. ಇದರ ವಿಷಯದಲ್ಲಿ ನನ್ನ ಅನುಭವವನ್ನು ಹೇಳುತ್ತೇನೆ. ಇದರ ಬಗ್ಗೆ ಇನ್‌ಟೆನ್ಸಿವ್ ಕಲ್ಟಿವೇಷನ್ ಇರುವುದರಿಂದ ಇದು ಬೇರೆ ಬೇರೆ ದೇಶಗಳಿಗೆ ಹೋಗುತ್ತದೆ. ಮೈಸೂರು ರಾಜ್ಯದ ಉತ್ತರ ಮತ್ತು ದಕ್ಷಿಣ ಕನ್ನಡ, ಕೇರಳ ಜಿಲ್ಲೆಗಳಲ್ಲಿ ಬೆಳೆಯುವಷ್ಟು ಗೇರು ಬೀಜವನ್ನು ಇನ್ನೆಲ್ಲೂ ಬೆಳೆಯುವುದಿಲ್ಲ. ಆದ್ದರಿಂದ ಈ ಬೆಳೆಗೆ ಪ್ರೋತ್ಸಾಹವನ್ನು ಸರ್ಕಾರದವರು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಕೊಡದೆ ಬೇರೆ ಪ್ರದೇಶಗಳಿಗೆ ಕೊಡುವುದರಿಂದ ಈ ವ್ಯವಸಾಯವನ್ನೇ ಅಲ್ಲಿ ಕುಂಠಿತ ಮಾಡಿದಂತಾಗುತ್ತದೆ. ಇದರ ಉತ್ಪಾದನೆಗೆ ಶ್ರಮವಹಿಸುವ ಜನರಿಗೆ ಸರ್ಕಾರ ನಿಜವಾಗಿ ಹೆಚ್ಚಿನ ಉತ್ತೇಜನವನ್ನು ಕೊಡಬೇಕು. ಈ ದೇಶದಲ್ಲಿ ಗೇರುಬೀಜದ ಉತ್ಪಾದನೆಗೆ ಸರ್ಕಾರ ಇನ್ನೂ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬುದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಈಗಿನ ಒಂದು ದೊಡ್ಡ ಆಹಾರ ಸಮಸ್ಯೆಯನ್ನು ನಿರ್ಮೂಲ ಮಾಡಬಲ್ಲ ಇನ್ನೊಂದು ಇಲಾಖೆ ಅಂದರೆ ಮೀನುಗಾರಿಕೆ ಇಲಾಖೆ. ನಮ್ಮಲ್ಲಿ ಆಳವಾದ ಸಮುದ್ರ ಇದೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ 186 ಮೈಲಿಗಳ ತನಕ ಮೀನಿನಿಂದ ವ್ಯವಸಾಯ ಮಾಡಬಹುದು. ಅಲ್ಲಿ ಸಾಧಾರಣವಾಗಿ ನನ್ನ ಅನುಭವದ ಮೇರೆಗೆ 6 ಲಕ್ಷ ಜನರು ಮೀನಿನ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಮೀನಿನ ವ್ಯವಸಾಯದ ಬಗ್ಗೆ ಸಹೋದರ ರಾಜ್ಯಗಳಾದ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಮೀನಿನ ವ್ಯವಸಾಯದ ಪ್ರಗತಿ ಏನೇನೂ ಸಾಲದು. ಹೋದವರ್ಷ ಕೇಂದ್ರಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂನಲ್ಲಿ ನಮ್ಮ ರಾಜ್ಯಕ್ಕೆ 76 ಲಕ್ಷ ರೂಪಾಯಿಗಳನ್ನು ಮೀನುವ್ಯವಸಾಯ ಇಲಾಖೆಗೆ ಜಾಸ್ತಿಯಾಗಿ ಕೊಟ್ಟದ್ದರಿಂದ ಕೆಲವು ಕೋಲ್ಡ್ ಸ್ಟೋರೇಜ್, ಕೆಲವು ರಸ್ತೆಗಳ ಹಾಗೂ ಕೆಲವು ಯಾಂತ್ರಿಕ ದೋಣಿಗಳ ಸೌಲಭ್ಯ ಸಿಕ್ಕಿದೆ. ಅದರಲ್ಲೂ ಕೂಡ ಕೇಂದ್ರ ಸರ್ಕಾರದವರು ನಮ್ಮ ಮೇಲೆ ತಾತ್ಸಾರ ಭಾವನೆಯನ್ನು ಬೀರಿ ಬೇರೆದೇಶಗಳಿಗೆ ಒಂದು ಕೋಟಿ ರೂಪಾಯಿಗಳಿಗೆ ಮೀರಿಕೊಟ್ಟಿದ್ದಾರೆ. ಈ ಬಾಬಿನಲ್ಲಿಯೂ ಕೂಡ ನಮ್ಮ ಮೇಲೆ ಮಲತಾಯಿ ಧೋರಣೆಯನ್ನುಂಟು ಮಾಡಿದ್ದಾರೆ. ನಮ್ಮಲ್ಲಿ ಹಿಂದೆ ಮೀನುವ್ಯವಸಾಯ ಒಂದು ದೊಡ್ಡ ಉತ್ಪಾದನೆ ವ್ಯವಸಾಯವಾಗಿತ್ತು. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಪ್ರದೇಶದಲ್ಲಿ ಮೀನುವ್ಯವಸಾಯ ಯೋಜನೆಗೆ 110 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಕೇಂದ್ರ ಸರ್ಕಾರದವರು ನಿರ್ಧರಿಸಿದ್ದಾರೆ. ಅದರಲ್ಲಿ ನಮ್ಮ ರಾಜ್ಯ ಸರ್ಕಾರದವರು 16

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಕೋಟಿ ರೂಪಾಯಿಗಳ ಒಂದು ಪ್ಲಾನನ್ನು ಈಗಾಗಲೇ ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಿದ್ದರ ಮೇಲೆ ನಮ್ಮಲ್ಲಿ ಹಣದ ಅಭಾವವಿರುವುದರಿಂದ ಕೇವಲ 5 ಕೋಟಿ ರೂಪಾಯಿಗಳ ಪ್ಲಾನನ್ನು ಅವರು ಮಂಜೂರು ಮಾಡಿದ್ದಾರೆಂದು ನನ್ನ ತಿಳುವಳಿಕೆಗೆ ಬಂದಿದೆ. ಅಂತೂ ಈ ಸಲ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಮೀನಿನ ವ್ಯವಸಾಯಕ್ಕೆ ಬಹಳ ಕಡಮೆಯಾಗಿದೆ. ಕೇರಳದ ಕರಾವಳಿಯಲ್ಲಿ ಸದ್ಯದಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ 200 ಯಾಂತ್ರಿಕ ದೋಣಿಗಳು ಈ ಮೀನು ವ್ಯವಸಾಯದಲ್ಲಿ ನಿರತವಾಗಿವೆ. ಇನ್ನೂ ಹೆಚ್ಚಿಗೆ ಯಂತ್ರ ಚಾಲಿತ ದೋಣಿಗಳನ್ನು ಈ ಮೀನು ಸಾಗಾಣಿಕೆಗಾಗಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಹೊರ ಪ್ರದೇಶಗಳಲ್ಲಿ ಜನರು ಹೆಚ್ಚಿಗೆ ಮೀನು ತಿನ್ನುವಂತೆ ಮಾಡಲು ಅದರ ಸಾಗಾಣಿಕೆಗಾಗಿ, ಹೆಚ್ಚಿಗೆ ಲಾರಿಗಳನ್ನೂ fishery roads, fisher boats, mechanised boats ಇನ್ನೂ ಇತರ ಸಲಕರಣೆಗಳನ್ನು ಸರ್ಕಾರದವರು ಮಾಡಿ ಕೊಡಬೇಕೆಂದು ನಾನು ಒತ್ತಾಯಮಾಡಿ ಹೇಳುತ್ತೇನೆ. ಏಕೆಂದರೆ ಈ ಸಲ ಕೊಟ್ಟಿರುವ ಹಣ ಏನೇನೂ ಸಾಲದು. ಆದಷ್ಟು ಹಣವನ್ನು ಈ ಮೀನು ವ್ಯವಸಾಯಕ್ಕೆ ಕೇಂದ್ರದವರು ಹೆಚ್ಚಿಗೆ ಕೊಡಬೇಕೆಂದು ನಮ್ಮ ರಾಜ್ಯ ಸರ್ಕಾರದವರು ಪ್ರಯತ್ನ ಮಾಡಬೇಕು. ನಮ್ಮ ಕರಾವಳಿಯಲ್ಲಿ ಸಾಧಾರಣವಾಗಿ ಒಂದು ಸಾವಿರ ಯಾಂತ್ರಿಕ ದೋಣಿಗಳನ್ನು ಸದ್ಯದಲ್ಲಿ ಕೊಟ್ಟರೆ ಸುಮಾರು ಒಂದು ಲಕ್ಷ ಟನ್ನುಗಳಷ್ಟು ಮೀನಿನ ಉತ್ಪಾದನೆಯನ್ನು ಜಾಸ್ತಿ ಮಾಡಬಹುದು. ಈಗ ಅದರ ಉತ್ಪತ್ತಿ ಬಹಳ ಕಡಮೆ. ಒಂದು ಲಕ್ಷ 20 ಸಾವಿರ ಟನ್ನುಗಳಷ್ಟು ನಮ್ಮ ಕ್ಯಾಚಸ್ ಇದೆ. ಮೀನುಗಾರಿಕೆ ಪರಿಸ್ಥಿತಿ ಈಗ ಬಹಳ ಕಡಮೆಯಾಗಿದೆ. ಹಿಂದುಳಿದ ವರ್ಗದವರಿಗೆ ಇಂತಹ ಸೌಲಭ್ಯಗಳನ್ನು ಒದಗಿಸದೇ ಇದ್ದರೆ ಮೀನು ವ್ಯವಸಾಯದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರಲ್ಲಿ ಹೆಚ್ಚಿಗೆ ಪ್ರಗತಿಯನ್ನು ನಾವು ಕಾಣಲಿಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಮೀನು ಬಹಳ ಪುಷ್ಟಿಯಾದ ಅಹಾರ ಪದಾರ್ಥ. ಉಪ್ಪು ನೀರಿನ ಮೀನನ್ನು ತಿಂದರೆ ಮನುಷ್ಯರ ಬುದ್ಧಿ ಶಕ್ತಿ ಕೂಡ ಹೆಚ್ಚಾಗುತ್ತದೆಂದು ಪರಿಣಿತರೂ ಮತ್ತು ಡಾಕ್ಟರುಗಳೂ ಹೇಳುತ್ತಾರೆ. ಆದ್ದರಿಂದ ಉಪ್ಪು ಮೀನನ್ನು ವಿಶೇಷವಾಗಿ ಬೆಂಗಳೂರಿಗೆ ತಂದು ಇಲ್ಲಿನ ಜನರು ಆದಷ್ಟು ಜಾಗ್ರತೆ ಹೆಚ್ಚು ಹೆಚ್ಚು ಅದನ್ನು ಉಪಯೋಗ ಮಾಡುವಂತೆಅದಕ್ಕೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಒಳನಾಡು ಪ್ರದೇಶದಲ್ಲಿ ಈಗಾಗಲೇ ಅಡಿಕೆ ತೋಟಗಳು ಎದ್ದು ನಿಂತಿವೆ. ಅಡಿಕೆ ಬೆಳೆ ಹೆಚ್ಚು ಹೆಚ್ಚಾಗಿ ವಿದೇಶೀ ವಿನಿಮಯವನ್ನು ಗಳಿಸುವಂಥದ್ದಾಗಿದೆ. ಆದ್ದರಿಂದ ಅಲ್ಲಿರತಕ್ಕ ಎಲ್ಲಾ ತಪ್ಪಲು ಪ್ರದೇಶದಲ್ಲಿ ಅಡಿಕೆ ಸಸಿಗಳನ್ನು ಹಾಕಿ ಅಡಿಕೆ ಬೆಳೆಯನು ಬೆಳೆಸಬಹುದು. ಈ ಬೆಳೆಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು, ಮಾತ್ರವಲ್ಲದೆ, ಮೆಣಸನ್ನು ಕೂಡ ನಮ್ಮ ಒಳನಾಡಿನ ಕೆಲವು ಭಾಗಗಳಲ್ಲಿ ಒಳ್ಳೆಯ ರೀತಿಯಲ್ಲಿ ಬೆಳೆಯುತ್ತಿದ್ದಾರೆ. ಆ ಬೆಳೆಗೂ ಕೂಡ ಸರ್ಕಾರದವರು ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಈ ವರ್ಷ ವ್ಯವಸಾಯ ಇಲಾಖೆಗೆ ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಮೆಯಾಗಿರುವುದರಿಂದ ಈ ಬೇಡಿಕೆಯನ್ನು ನಾನು ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸನ್ಮಾನ್ಯ ಅಧ್ಯಕ್ಷರೇ. ನಮ್ಮ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಅರಣ್ಯ ಖಾತೆಗಳ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತಾ ಇವತ್ತಿನ ದಿವಸ ಈ ದೇಶದಲ್ಲಿ ಬಹಳ ಪ್ರಾಮುಖ್ಯತೆಯನ್ನ ಹೊಂದಿರತಕ್ಕ ವ್ಯವಸಾಯ ಖಾತೆಯ ವಿಷಯವಾಗಿ ನಾನು ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡುತ್ತೇನೆ. ಈ ಖಾತೆಯು ಜವಾಬ್ದಾರಿಯನ್ನು ಹೊಂದಿ ಏನು ಮಾಡಬೇಕೆಂದು ಅಪೇಕ್ಷೆ ಮಾಡುತ್ತದೋ ಅದಕ್ಕೆ ಪ್ರಾಂತದ ಮುಖ್ಯ ಮಂತ್ರಿಗಳೂ ಸಹ ಆ ಒಂದು ಜವಾಬ್ದಾರಿಯನ್ನು ವಹಿಸಿಕೊಂಡು ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಹೆಚ್ಚಿನ ಪ್ರಾಮುಖ್ಯತೆಯನು ಕೊಡಬೇಕು. ಮುಖ್ಯವಾಗಿ ಈ ದೇಶದಲ್ಲಿ ಈಗಿಹ ಒಂದು ಆಹಾರ ಸಮಸ್ಯೆ ಮುಗಿಯುವವರೆಗೂ ನಾವು ಬೇರೆ ಯಾವ ಅಭಿವೃದ್ಧಿ ಕೆಲಸಗಳನ್ನು ಹೆಚ್ಚಿಗೆ ಮಾಡಲು ಗಮನ ಕೊಡದೆ ಇರಬೇಕಾಗಿದೆ. ಆ ವಿಚಾರವಾಗಿ ನಾನು ಈಗ ಪ್ರಸ್ತಾಪ ಮಾಡುತ್ತೇನೆ. ಮೊನ್ನೆ productivity council meeting ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಅದರ ಅಧ್ಯಕ್ಷತೆಯನ್ನು ವಹಿಸುತ್ತಾ ಭಾಷಣ ಮಾಡಿ ನೀಡಿದ ವಿವರಣೆಯಲ್ಲಿ ನಿಜವಾಗಿ ನಮ್ಮ ರೈತರಿಗೆ ಮುಂದೆ ಒಳ್ಳೆಯ ಭವಿಷ್ಯವಿದೆ,

ಅವರಿಗೆ ಒಂದು ರೀತಿಯ ಶಕ್ತಿ ಬಂದು ಗ್ರಾಮಾಭಿವೃದ್ಧಿಯಾಗುತ್ತದೆಂಬ ಒಂದು ಆಶ್ವಾಸನೆಯನ್ನು ಬಹಳ ಸ್ಪಷ್ಟವಾಗಿ ಹೇಳಿದರು. ಈ ದೇಶದಲ್ಲಿರತಕ್ಕ ವ್ಯವಸಾಯಗಾರರನ್ನು ಬೇರೆ ಕ್ಷೇತ್ರದಲ್ಲಿರತಕ್ಕ ಜನಗಳಿಗೆ ಹೋಲಿಕೆ ಮಾಡುವುದಾದರೆ, ಅದು ದುರ್ದೈವ. ಅವರನ್ನು ಅನಾದರಣೆ ಮಾಡಿದ ಹಾಗಾಗುತ್ತದೆ. ಅದು ಸರಿಯಲ್ಲ. ಯಾವ ಮರ್ಯಾದೆಯುಳ್ಳ ಸರ್ಕಾರಕ್ಕೂ ಅದು ಘನತೆಯನ್ನು ತರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಇನ್ನು ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ನಿರಂತರವಾಗಿ ರೈತ ಮಳೆಯ ನೀರಿನ ಆಶ್ರಯದಿಂದಲೇ ವ್ಯವಸಾಯ ಮಾಡಬೇಕಾಗಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಬಾವಿಗಳನ್ನು ತೆಗೆಯುವುದಕ್ಕೆ ರೈತರಿಗೆ ಹಣವನ್ನು ಕೊಟ್ಟಿದ್ದಾರೆ. ಆಹಾರೋತ್ಪಾದನೆಯನ್ನು ಮಾಡುವುದಕ್ಕೆ ರೈತನಿಗೆ ಸೌಲಭ್ಯವನ್ನು ಒದಗಿಸಬೇಕೆಂದು ಸರ್ಕಾರ ಹೊರಟಿದೆ. ಈ ಕೆಲಸವನ್ನು ಒಂದು ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡಿದ್ದರೆ ಈ ಪರಿಸ್ಥಿತಿಯನ್ನು ಎಷ್ಟೋಮಟ್ಟಿಗೆ ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಈಗ ಮುಖ್ಯವಾಗಿ ಸರ್ಕಾರದವರು ಮತ್ತು ಇಲಾಖೆಯವರು ಒಂದು ಕೆಲಸವನ್ನು ಮಾಡದೇ ಹೋದರೆ ಬಾವಿಗಳಿಗೆ ಕೊಟ್ಟಿರತಕ್ಕ ಹಣವೆಲ್ಲವೂ ವ್ಯರ್ಥವಾಗಿ ಹೋಗುತ್ತದೆ. ಅದು ಏನೆಂದರೆ, ಸಾಯಿಲ್ ಕನ್‌ಸರ್ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಕೆಲಸವನ್ನು ತೀವ್ರವಾಗಿ ಮಾಡಬೇಕು. ಅದನ್ನು ಮಾಡದೆ ಹೋದರೆ ಬೇಸಿಗೆಯ ಕಾಲದಲ್ಲಿ ಫೆಬ್ರವರಿ, ಮಾರ್ಚಿ ಮತ್ತು ಏಪ್ರಿಲ್ ತಿಂಗಳಿನಲ್ಲಿ ಬಾವಿಗಳಲ್ಲಿ ನೀರಿನ ಕೊರತೆ ಉಂಟಾಗುತ್ತದೆ. ಬಾವಿಗಳು ಇರತಕ್ಕ ಪ್ರದೇಶಗಳಲ್ಲಿ ಆ ಒಂದು ತೊಂದರೆ ಉಂಟಾಗುತ್ತದೆ. ಆ ಕಷ್ಟವನ್ನು ನಿವಾರಣೆ ಮಾಡಬೇಕಾದರೆ ಸಾಯಿಲ್ ಕನ್‌ಸರ್ವೇಷನ್ ಮತ್ತು ಕಾಂಟೂರು ಬಂಡಿಂಗ್ ಕೆಲಸಗಳನ್ನು ಮಾಡಬೇಕು. ಅದನ್ನು ಮಾಡದೇ ಹೋದರೆ ಬಾವಿಗಳಿಗಾಗಿ ಸರ್ಕಾರದವರು ಕೊಟ್ಟಿರತಕ್ಕ ಹಣ ಹಾಳಾಗಿ ಹೋಗುತ್ತದೆ. ರೈತರು ಮುಳುಗಿ ಹೋಗುತ್ತಾರೆ. ಈಗ ಯಾವ ಯಾವ ಜಿಲ್ಲೆಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಬಾವಿಗಳನ್ನು ತೆಗೆಸಿದ್ದಾರೆಯೋ ಆ ಜಿಲ್ಲೆಗಳಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಕೆಲಸಗಳನ್ನೂ ಮಾಡಿಸದೆ ಹೋದರೆ ಬಾವಿಗಳಲ್ಲಿ ನೀರಿನ ಅನುಕೂಲತೆ ಕಡಿಮೆಯಾಗುತ್ತದೆ. ತಜ್ಞರು ನಮಗೆ ಏನು ಹೇಳುತ್ತಾರೆಂದರೆ, ಮಳೆಗಾಲದಲ್ಲಿ ನಮಗೆ ಎಷ್ಟು ನೀರು ಸಿಕ್ಕುತ್ತದೆಯೋ ಅದೆಲ್ಲವೂ ಭೂಮಿಯಲ್ಲಿ ತಂಗಬೇಕು. ಈ ವಿಷಯವನ್ನು ತಜ್ಞರು ನಮಗೆ ಪದೇ ಪದೇ ಹೇಳುತ್ತಾರೆ. ಅದಕ್ಕಾಗಿ ಸರ್ಕಾರದವರು ಆ ಕೆಲಸಗಳನ್ನು ಮಾಡಬೇಕು. ಹಾಗೆ ಮಾಡುವುದಾದರೆ ಸಾಧ್ಯವಾದಮಟ್ಟಿಗೆ ರೈತರು ಬಾವಿಗಳಿಂದ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಾರೆ. ಆದರಿಂದಲೂ ಸಹ ಸಾಧ್ಯವಾದಮಟ್ಟಿಗೆ ಆಹಾರದ ಕೊರತೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆ.

ಇನ್ನು ಉತ್ತಮವಾದ ಬಿತ್ತನೆ ಬೀಜಗಳನ್ನು ರೈತರಿಗೆ ಒದಗಿಸುವ ವಿಚಾರ. ಈ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನಿಂದ ನಮಗೆ ಉತ್ತಮವಾದ ಬೀಜ ಸರಬರಾಯಿ ಆಗುತ್ತಿದೆ. ಇದರಲ್ಲಿ ಒಂದು ವ್ಯವಸ್ಥೆ ಅಗತ್ಯ. ಅದೇನೆಂದರೆ, ವ್ಯವಸಾಯ ಇಲಾಖೆಯವರು ಮತ್ತು ಅಗ್ರಿಕಲ್‌ಚರಲ್ ಯೂನಿವರ್ಸಿಟಿಯವರೂ ಹೊಂದಿಕೊಂಡು ಕೆಲಸ ಮಾಡುವಂತಾಗಬೇಕು. ಆ ಒಂದು ಮನೋಭಾವ ಅವರಲ್ಲಿ ಬೆಳೆಯಬೇಕು. ಅವರು ಇಲಾಖೆಯ ಕೆಲಸ ಕಾರ್ಯಗಳನ್ನು ದೇಶದ ಕೆಲಸ, ಅದು ನನಗೆ ಸಂಬಂಧಪಟ್ಟದ್ದು ಎಂದು ಕೆಲಸವನ್ನು ಮಾಡಬೇಕು. ಅದು ಯೂನಿವರ್ಸಿಟಿಯವರು ಮಾಡುವ ಕೆಲಸ ಎನ್ನುವ ಮನೋಭಾವನೆ ಅಧಿಕಾರಿಗಳಲ್ಲಿ ಬರಬಾರದು. ಹಾಗೆ ಮಾಡದೇ ಹೋದರೆ ಈಗ ಸರ್ಕಾರದವರು ಏನೊಂದು ಹೊಸ ಪ್ರಯೋಗವನ್ನು ಮಾಡುವುದಕ್ಕೆ ಹೊರಟಿದ್ದಾರೆಯೋ ಅದಕ್ಕೆ ಕುಂದಕವುಂಟಾಗುತ್ತದೆ. ಈಗ ನಮ್ಮಲ್ಲಿ ಸರ್ಕಾರಿ ಸೀಡ್ ಫಾರಮ್‌ಗಳಲ್ಲಿ ಬಿತ್ತನೆ ಬೀಜವನ್ನು ಉತ್ಪಾದನೆ ಮಾಡುವುದಕ್ಕಾಗಿ ತಜ್ಞರನ್ನು ಇಟ್ಟುಕೊಂಡಿದ್ದಾರೆ. ಅವರು ಮತ್ತು ಇಲಾಖೆಯ ಅಧಿಕಾರ ವರ್ಗದವರು ಬೀಜಗಳನ್ನು ಪಾಪ್ಯುಲರೈಜ್ ಮಾಡುವುದಕ್ಕಾಗಿ ರೈತರ ಜಮೀನಿನಲ್ಲಿ ಎಕ್ಸ್‌ಪೆರಿಮೆಂಟ್‌ಗಳನ್ನು ಮಾಡುತ್ತಾರೆ. ಆ ರೀತಿ ರೈತರ ಜಮೀನುಗಳಲ್ಲಿ ಎಕ್ಸ್‌ಪೆರಿಮೆಂಟ್‌ಗಳನ್ನು ಮಾಡಿದಾಗ ಅದರ ಖರ್ಚು ವೆಚ್ಚಗಳನ್ನು ರೈತರಿಂದ ಕೇಳಬಾರದು. ಅದು ಸರ್ಕಾರದವರೇ ಮಾಡಬೇಕಾದ್ದು. ಈ ಹೈಬ್ರೀಡ್ ಜೋಳವನ್ನು ನಮ್ಮ ರಾಜ್ಯದಲ್ಲಿರತಕ್ಕ ಪ್ರತಿಯೊಂದು ಬಾವಿಯ ಆಶ್ರಯದಲ್ಲಿ 3 ಎಕರೆಯಲ್ಲಿ ಬೆಳೆಯುವಂತೆ ಒಂದು ಯೋಜನೆಯನ್ನು ಹಾಕಿಕೊಂಡರೆ ಅದರಿಂದ ಸಾವಿರಾರು ಪಲ್ಲ ಜೋಳವನ್ನು ಬೆಳೆದು ಆಹಾರದ ಕೊರತೆಯನ್ನು ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಬಿತ್ತನೆ ಬೀಜವನ್ನು ರೈತರಿಗೆ ಮಾರಾಟ ಮಾಡುವುದಕ್ಕೆ ಧಾರವಾಡ ಮುಂತಾದ ಪ್ರದೇಶಗಳಲ್ಲಿ ಯಾವ ರೀತಿಯ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆಯೋ ಅದೇ ರೀತಿ ಬೆಂಗಳೂರು ಜಿಲ್ಲೆಯಲ್ಲಿಯೂ ಮಾಡಬೇಕು. ಈಗ ನ್ಯಾಷನಲ್ ಸೀಡ್ ಕಾರ್ಪೋರೇಷನ್ನಿನವರು ನಮಗೆ ಬಿತ್ತನೆ

(ಶ್ರೀ ಕೆ. ವಿ. ಬೈರೇಗೌಡ)

ಬೀಜವನ್ನು ಸಪ್ಲೈ ಮಾಡುತ್ತಿದ್ದಾರೆ ಅದು ಚೆನ್ನಾಗಿ ನಡೆಯುತ್ತಿದೆ. ವ್ಯವಸಾಯ ಇಲಾಖೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡುವಾಗ ಅಧಿಕಾರ ವರ್ಗದವರು ಇದು ಇಲಾಖೆಗೆ ಸಂಬಂಧಪಟ್ಟ ಕೆಲಸ, ಇದು ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಕೆಲಸ ಎಂದು ಜವಾಬ್ದಾರಿಯನ್ನು ಒಬ್ಬರ ಮೇಲೊಬ್ಬರು ಹಾಕದೆ ಅದು ನನ್ನ ಕೆಲಸ, ದೇಶದ ಕೆಲಸ, ಎಂದು ಭಾವನೆಯನ್ನಿಟ್ಟು ಕೊಂಡು ಕೆಲಸ ಮಾಡುವುದಾದರೆ ಬಹಳಮಟ್ಟಿಗೆ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಈ ಇಲಾಖೆಯಲ್ಲಿ ಅಧಿಕಾರಿಗಳ ಸೀನಿಯಾರಿಟಿಗೆ ಸಂಬಂಧಪಟ್ಟಹಾಗೆ ಕೆಲವು ಲೋಪ ದೋಷಗಳು ಇವೆ. ಆದ್ದರಿಂದ ಈ ಇಲಾಖೆಯ ಅನೇಕ ಅಧಿಕಾರಿಗಳು ಹೈಕೋರ್ಟಿಗೆ ರಿಟ್ ಹಾಕಿ ದ್ದಾರೆ. ಈಗ ನಮ್ಮ ಸರ್ಕಾರದಲ್ಲಿ ಲಾ ಪರಿಣಿತರಾದ ಅಧಿಕಾರಿಗಳು ಇದ್ದಾರೆ. ಮತ್ತು ಸೆಕ್ರೆಟೇರಿಯೆಟ್‌ನಲ್ಲಿಯೂ ಕೂಡ ಅನೇಕ ಪರಿಣತರಾದ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಸಹ ಸೇರಿಕೊಂಡು ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಿಗೆ, ನೌಕರರುಗಳಿಗೆ ಪ್ರಮೋ ಷನ್ ಕೊಡತಕ್ಕ ವಿಷಯದಲ್ಲಿ ಯಾರುಯಾರಿಗೆ ವ್ಯತ್ಯಾಸವಾಗಿದೆ, ಯಾರುಯಾರಿಗೆ ನ್ಯಾಯವಾಗಿ ಪ್ರಮೋಷನ್ ದೊರೆಯಬೇಕು ಎನ್ನತಕ್ಕ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿ ಅದರ ಬಗ್ಗೆ ಒಂದು ದೃಢವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಅಧಿಕಾರಿಗಳು, ನೌಕರರು ಸುಮ್ಮನೆ ಹೈಕೋರ್ಟಿಗೆ ರಿಟ್ ಹೋಗಿ ಅಲ್ಲಿ ಲಾಯರುಗಳನ್ನು ಇಟ್ಟುಕೊಂಡು ಕೇಸುಗಳನ್ನು ನಡೆಸುವುದರಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಾರೆ. ಆಫೀಸಿನಲ್ಲಿ ಸರಿಯಾಗಿ ಕೆಲಸ ಮಾಡು ವುದಕ್ಕಾಗುವುದಿಲ್ಲ. ಅದರಿಂದ ರೈತರಿಗೂ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ದೊಡ್ಡ ದೊಡ್ಡ ಹುದ್ದೆಯಲ್ಲಿರತಕ್ಕವರು, ಸೆಕ್ರೆಟರಿಗಳು ಮತ್ತು ಡೈರೆಕ್ಟರುಗಳು ಇವರೆಲ್ಲರೂ ಸೇರಿಕೊಂಡು ಈ ಇಲಾಖೆಯ ಅಧಿಕಾರಿಗಳು ನೌಕರರು ಇವರುಗಳ ಸೀನಿಯಾರಿಟಿ ಪ್ರಮೋಷನ್ ಇತ್ಯಾದಿಗಳ ಬಗ್ಗೆ ಏನೇನು ಲೋಪದೋಷಗಳಿವೆ ಎಂಬುದನ್ನು ಕಂಡುಹಿಡಿದು ಅದನ್ನು ಬಗೆಹರಿಸುವುದಾದರೆ ಅವರು ತಮ್ಮ ಕೆಲಸದಲ್ಲಿ ನಿರತರಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಸರ್ಕಾರದವರು ರೈತರಿಗೆ ವ್ಯವಸಾಯಕ್ಕೆ ಸಂಭಂಧಪಟ್ಟ ಕೆಲವು ಮೆಷನರಿಗಳನ್ನು ಎಂದರೆ ಟ್ರ್ಯಾಕ್ಟರುಗಳು, ಪವರ್ ಟಿಲ್ಲರುಗಳು ಮುಂತಾದ ಉಪಕರಣಗಳನ್ನು ಒದಗಿಸಿದ್ದಾರೆ. ಈ ಟ್ರ್ಯಾಕ್ಟರುಗಳಿಗೆ ಒಂದೆರಡು ವರ್ಷಗಳಕಾಲ ರಿಪೇರಿ ವಗ್ಯೆರೆಗಳಿಗೆ ಫ್ರೀ ಸರ್ವೀಸ್ ಕೊಡುತ್ತಾರೆ. ಆ ಟ್ರ್ಯಾಕ್ಟರುಗಳಿಗೆ ಸಣ್ಣ ಪುಟ್ಟ ರಿಪೇರಿಗಳನ್ನು ಮಾಡಿದರೂ ಸಹ ಅದರ ಹೊರೆಯನ್ನು ರೈತರ ಮೇಲೆ ಹೊರಿಸುತ್ತಾರೆ. ಈಗ ಸರ್ಕಾರದವರು ಪ್ರಯತ್ನ ಮಾಡಿ ಒಂದು ಇಂಜಿನಿಯರಿಂಗ್ ಇಲಾಖೆ ಯನ್ನು ಮಾಡಿದ್ದಾರೆ. ಅದರ ಮುಖಾಂತರ ಈ ಟ್ರ್ಯಾಕ್ಟರುಗಳ ರಿಪೇರಿಗೆ ಬೇಕಾದಂತಹ ಸಾಮಾನು ಗಳನ್ನು ರೈತರಿಗೆ ನ್ಯಾಯವಾದ ಬೆಲೆಗೆ ಒದಗಿಸುವ ವ್ಯವಸ್ಥೆ ಮಾಡಬೇಕು; ಮತ್ತು ಅದನ್ನು ರಿಪೇರಿ ಮಾಡುವುದಕ್ಕೆ ಸರ್ಕಾರದವರು ಮೆಕ್ಯಾನಿಕಲ್ ವ್ಯವಸ್ಥೆಯನ್ನು ಜಾಗ್ರತೆ ಮಾಡಬೇಕು. ಇಲ್ಲದೇ ಹೋದರೆ ರೈತರಿಗೆ ಬಹಳ ಕಷ್ಟವಾಗುತ್ತದೆ.

ಇನ್ನು ಹಾರ್ಟಿಕಲ್‌ಚರಲ್ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಆ ಇಲಾಖೆ ಯವರು ಕೆಲವು ತೋಟಗಳನ್ನು ಬೆಳೆಸಿದ್ದಾರೆ. ಕೆಲವು ಗಿಡಗಳನ್ನು ಕೂಡ ಬೆಳೆಸಿದ್ದಾರೆ. ಇವೊತ್ತು ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿ ಸುಧಾರಿಸಬೇಕಾದರೆ ನಾವು ತಿನ್ನತಕ್ಕ ಅಕ್ಕಿ, ರಾಗಿ, ಜೋಳ ಮತ್ತು ಗೋಧಿ ಈ ಆಹಾರವನ್ನು ಸ್ವಲ್ಪ ಬದಲಾವಣೆ ಮಾಡಬೇಕು. ದೇಶದಲ್ಲಿ ಹಣ್ಣಿನ ತೋಟ ಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ದೇಶದ ಎಲ್ಲಾ ಮೂಲೆ ಮೂಲೆಗಳಲ್ಲಿಯೂ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ನರ್ಸರಿ ಪ್ಲಾಂಟು ಗಳನ್ನು ಸರಿಯಾಗಿ ಒದಗಿಸುವ ವ್ಯವಸ್ಥೆಯನ್ನು ಮಾಡಿಲ್ಲ. ಇದರಿಂದ ತೊಂದರೆಯಾಗುತ್ತಿದೆ. ಈ ವಿಚಾರವನ್ನು ಹಿಂದೆ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ಈ ಇಲಾಖೆಯವರು ಉತ್ತಮ ಜಾತಿಯ ನರ್ಸರಿಗಳನ್ನು ಬೆಳೆಸಿ ಅವುಗಳನ್ನು ರೈತರಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಈ ಇಲಾಖೆಯವರು ಕೊಟ್ಟಂತಹ ನರ್ಸರಿಗಳನ್ನು ತೆಗೆದು ಕೊಂಡು ಹೋಗಿ ಬೆಳೆಸಿದಾಗ 3-4 ವರ್ಷಗಳಾದರೂ ಕೂಡ ಆ ಗಿಡಗಳಲ್ಲಿ ಉತ್ತಮವಾದ ಫಸಲು ಬಾರದೆ ಎಷ್ಟೋ ಸಾರಿ ನಮ್ಮ ರೈತರು ನೊಂದುಕೊಂಡಿದ್ದಾರೆ. ಆದ್ದರಿಂದ ನರ್ಸರಿಗಳನ್ನು ಬೆಳೆಸುವಾಗ ಉತ್ತಮ ಜಾತಿಯ ನರ್ಸರಿಗಳನ್ನು ಬೆಳೆಸಿ ಅವುಗಳನ್ನು ರೈತರಿಗೆ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಬಿತ್ತನೆ ಬೀಜದ ವಿಷಯದಲ್ಲಿ ಕೆಲವರು ಬಿತ್ತನೆ ಬೀಜವನ್ನು ಉತ್ಪತ್ತಿ ಮಾಡುತ್ತಾರೆಂದು ಹೇಳುತ್ತಾರೆ. ಆದರೆ ಆ ಬೀಜಗಳ ಬಗ್ಗೆ ನನ್ನ ಮನಸ್ಸಿಗೆ ಸಮಾಧಾನ ಇಲ್ಲ. ವ್ಯವಸಾಯವನ್ನು ಮಾಡಿಕೊಂಡು ಜೀವನ ಮಾಡತಕ್ಕ ರೈತನಿಗೆ ಒಳ್ಳೆಯ ಬೀಜಗಳನ್ನು ಒದಗಿಸದಿದ್ದರೆ ಅವನಿಗೆ ಬಹಳ

ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ರೈತರಿಗೆ ಒಳ್ಳೆಯ ಬೀಜಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ವರ್ಷ ನಮಗೆ ಬಂದಿರತಕ್ಕ ಕಷ್ಟಕಾಲದಲ್ಲಿ ರೈತರು ಬಿತ್ತನೆ ಬೀಜವನ್ನು ಒದಗಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಮೊನ್ನೆ ತಾನೆ ನಾವು ತಾಲ್ಲೂಕು ಬೋರ್ಡ್‌ವತಿಯಿಂದ ಬಿತ್ತನೆ ರಾಗಿಯನ್ನು ಕೊಂಡುಕೊಂಡು ಬರಬೇಕೆಂದು ಹಳ್ಳಿಗಳ ಕಡೆ ಹೋದಾಗ ಅದನ್ನು ಇಟ್ಟುಕೊಂಡಿದ್ದವರಿಗೆ ಒಂದು ಪಲ್ಲಕ್ಕೆ 125 ರೂಪಾಯಿಗಳಂತೆ ಕೊಡುತ್ತೇವೆಂದು ನಾವು ಹೇಳಿದರೂ ಕೂಡ ಅವರು ಬಿತ್ತನೆ ರಾಗಿಗೆ ಜೂನ್ ತಿಂಗಳಿನಲ್ಲಿ ಏನು ಬೆಲೆ ಆಗುತ್ತದೆಯೋ ಆ ಬೆಲೆಯನ್ನು ಕೊಟ್ಟು ತೆಗೆದುಕೊಂಡು ಹೋಗಿ ಎಂದು ನಮಗೆ ಅವರು ಹೇಳಿದರು. ಇಂಥಾ ಒಂದು ಪರಿಸ್ಥಿತಿ ಇರುವಾಗ ಸರ್ಕಾರದವರು ರೈತರಿಗೆ ಬಿತ್ತನೆ ಬೀಜವನ್ನು ಒದಗಿಸುವುದಕ್ಕೆ ವ್ಯವಸ್ಥೆಯನ್ನು ಮಾಡದೇ ಹೋದರೆ ಬಯಲು ಸೀಮೆಯಲ್ಲಿ ರಾಗಿ ಬಿತ್ತನೆ ಬೀಜಕ್ಕೆ ಬಹಳ ತೊಂದರೆ ಬರುತ್ತದೆ.

ಇನ್ನು ಫರ್ಟಿಲೈಸರುಗಳ ಬಗ್ಗೆ ಇನ್ನೂ ಸ್ವಲ್ಪ ಪ್ರಗತಿಯಾಗುವ ಅವಶ್ಯಕತೆ ಇದೆ. ಜನಗಳಲ್ಲಿ ಇನ್ನೂ ಸಾಕಾದಷ್ಟು ಪ್ರಚಾರ ಮಾಡುತ್ತಿಲ್ಲ. ಅಲ್ಲದೆ ಹಳ್ಳಿಗಳಲ್ಲಿ ಫಾರಂ ಮೆನ್ಯೂರು ಹಾಗೂ ತಿಪ್ಪೆ ಕಸಗಳಿಂದ ಮಾಡುವ ಗೊಬ್ಬರ ಮತ್ತು ಗ್ರೀನ್ ಮೆನ್ಯೂರ್ ಇವುಗಳನ್ನು ಮಾಡಲು ಸಾಕಾದಷ್ಟು ವ್ಯವಸ್ಥೆ ಮಾಡಿಲ್ಲ. 1952ನೇ ಇಸವಿಯಲ್ಲಿ ಹಳ್ಳಿಗಳಲ್ಲಿ ಯಾವರೀತಿ ಇತ್ತೊ ಅದೇ ರೀತಿಯಲ್ಲಿ ಈಗಲೂ ಇದೆ ಮತ್ತು ಹತ್ತು ಗೊಬ್ಬರದ ಗುಂಡಿಗಳೂ ಹೆಚ್ಚಾಗಲು ತಕ್ಕ ಕ್ರಮಗಳಾಗಲಿಲ್ಲ. ಇವತ್ತೂ ಹಳ್ಳಿಗಳಲ್ಲಿ ಜನರು ಸುಲಭವಾಗಿ ಫರ್ಟಿಲೈಸರುಗಳನ್ನು ಉಪಯೋಗಿಸುವ ಅಭ್ಯಾಸ ಮಾಡಿಕೊಂಡಿದ್ದಾರೆ. ಕಾಲ ಕಾಲಕ್ಕೆ ಫರ್ಟಿಲೈಸರುಗಳ ಸಹಾಯವಾಗದೇ ಹೋದರೆ ಭೂಮಿಯಿಂದ ಬರುವ ಫಲವೂ ಕಡಿಮೆಯಾಗುತ್ತದೆ. ಆದುದರಿಂದ ಎಲ್ಲರೂ ಇವೊತ್ತು ಫ್ಯಾಕ್ಟರಿಗಳಿಂದ ಬರುವ ಫರ್ಟಿಲೈಸರುಗಳಿಗೇ ಕಾಯುತ್ತಿದ್ದಾರೆ. ಆದುದರಿಂದ ಹೆಚ್ಚು ಫರ್ಟಿಲೈಸರುಗಳನ್ನು ಉತ್ಪತ್ತಿ ಮಾಡಲು ಕಾರ್ಖಾನೆಗಳನ್ನು ತೆರೆಯಲು ಪ್ರಾರಂಭ ಮಾಡಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಬೇರೆ ಕಾರ್ಯಕ್ರಮಗಳನ್ನು ಮಾಡಲು ಸ್ವಲ್ಪಮಟ್ಟಿಗೆ ತಡಮಾಡಿದರೂ ವ್ಯವಸಾಯ ಮಾಡುವ ರೈತರಿಗೆ ಬೇಕಾಗುವ ಸೀಮೆಗೊಬ್ಬರಗಳನ್ನು ಸಕಾಲದಲ್ಲಿ ಒದಗಿಸಿ ಕೊಟ್ಟರೆ ಉತ್ತಮವಾದ ಬೆಳೆಯನ್ನು ಬೆಳೆದು ಜಾಸ್ತಿಮಾಡಲು ಸಹಾಯವಾಗುತ್ತದೆ. ಎಲ್ಲ ಸೌಲಭ್ಯಗಳನ್ನೂ ರೈತರಿಗೆ ಕೊಟ್ಟೇ ಕೊಡಬೇಕು. ಅಲ್ಲದೆ ರೈತ ಬೆಳೆಯುವ ಮಾಲಿಗೆ ಸೂಕ್ತವಾದ ಬೆಲೆಗಳನ್ನು ಕೊಡಬೇಕು. ಹತ್ತುವರ್ಷಗಳ ಹಿಂದೆ ಇದ್ದ ರೇಟುಗಳನ್ನು ಬದಲಾಯಿಸಿ ರೈತಬೆಳೆಯುವ ಮಾಲಿಗೆ ಇವೊತ್ತು ಸರಿಯಾಗಿ ರೆಕ್ಕಾಚಾರ ಮಾಡಿಕೊಟ್ಟರೆ ಉತ್ಪತ್ತಿಯನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ: ಮತ್ತು ಆಹಾರದ ಕೊರತೆ ನೀಗಲು ಸಾಧ್ಯವಾಗುತ್ತದೆ. ಅಲ್ಲದೆ, ಈಗಿರುವ ಉತ್ಪತ್ತಿಯಲ್ಲಿ ಶೇಕಡ 75ರಷ್ಟುಭಾಗ ಹೆಚ್ಚುಮಾಡಲು ಎಲ್ಲ ಸೌಲಭ್ಯಗಳೂ ರೈತಾಪಿ ಜನಕ್ಕೆ ದೊರಕಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಇಟ್ಟಿರುವ ಡಿಮ್ಯಾಂಡುಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ.

ಇಲ್ಲಿ ಇಬ್ಬರು ಮಾನ್ಯ ಸದಸ್ಯರು ಫಿಷರೀಸ್ ಬಗ್ಗೆ ಪಶ್ಚಿಮಕರಾವಳಿಯಲ್ಲೇ ಏಕೆ ಹೆಚ್ಚು ವೆಚ್ಚ ಮಾಡುತ್ತಿದ್ದಾರೆ ಒಳನಾಡಿಗೆ ಏಕೆ ಅಷ್ಟು ಮಾಡುತ್ತಿಲ್ಲ ಎಂದು ಕೇಳಿದರು. ಖರ್ಚುಗಳ ಅಂದಾಜು ಮಾಡುವಾಗಲೂ ಕೂಡ ಸೌತ್ ಕೆನರಾ ಜಿಲ್ಲೆಗೇ ಹೆಚ್ಚು ಖರ್ಚಾಗುತ್ತಿದೆ ಎಂದು ಹೇಳಿದರು. ನಮ್ಮ ಕರಾವಳಿ ಎರಡು ಜಿಲ್ಲೆಗಳಲ್ಲೇ ಸುಮಾರು 200 ಮೈಲಿಗಳಷ್ಟು ಕರಾವಳಿ ಪ್ರದೇಶ ಇದೆ. ಇಲ್ಲಿ ಮೀನುಗಾರಿಕೆಗಾಗಿ ಹೆಚ್ಚು ಖರ್ಚು ಮಾಡಿ ಹೆಚ್ಚು ಶ್ರಮಪಡಬೇಕಾಗುತ್ತದೆ. 200 ಮೈಲ ಕರಾವಳಿ ಪ್ರದೇಶ ಇರುವ ಕರಾವಳಿಯಿಂದ 30 ಮೈಲ ದೂರದವರೆಗೆ ಮೀನು ಹಿಡಿಯುವ ಪ್ರದೇಶವಿದೆ. ಸುಮಾರು 600 ಚದುರ ಮೈಲಿಗಳ ಪ್ರದೇಶದಲ್ಲಿ ಮೀನು ಹಿಡಿಯುತ್ತಿದ್ದಾರೆ. ಇದರಲ್ಲಿ ನಾಲ್ಕು ಚದುರ ಮೈಲಿಗಳಿಗೆ ಒಂದುದೋಣಿ ಎಂದು ಆರಿಸಿಕೊಂಡರೆ ಸುಮಾರು 1,500 ದೋಣಿಗಳು ಬೇಕಾಗುತ್ತವೆ. ಇವೆಲ್ಲ ಯಾಂತ್ರಿಕವಾದ ದೋಣಿಗಳು. ಈಗ ಸುಮಾರು ನಮ್ಮಲ್ಲಿ 275 ದೋಣಿಗಳು ಇವೆ, ಇನ್ನೂ 1,200 ದೋಣಿಗಳನ್ನು ಇಲ್ಲಿ ಮಾಡಿಕೊಂಡರೆ ಮೀನಿನ ಉತ್ಪಾದನೆಯೂ ಕೂಡ ಜಾಸ್ತಿಯಾಗುತ್ತದೆ. ಇಡೀ ಕರ್ಣಾಟಕದಲ್ಲಿ ನಮ್ಮ ಭಾಗವೇ ಅತಿಹೆಚ್ಚು ಮೀನು ಉತ್ಪಾದನೆ ಮಾಡುವ ಸ್ಥಳ. ಇಲ್ಲಿ ಮೀನನ್ನು ಆಹಾರವಾಗಿ ಉಪಯೋಗಿಸುತ್ತಿದ್ದಾರೆ. ಇಲ್ಲಿ ಈಗ ವರ್ಷಕ್ಕೆ 80 ಟನ್ನುಗಳಷ್ಟು ಮೀನನ್ನು ಹಿಡಿಯುವ ಅಂದಾಜು ಇದೆ. ಒಂದು ದೋಣಿಯಿಂದ ವರ್ಷಕ್ಕೆ 80 ಟನ್ನುಗಳಷ್ಟು ಎಂದು ಉತ್ಪತ್ತಿ ಯಾದರೆ ಸುಮಾರು 600 ದೋಣಿಗಳಿಂದ 48 ಸಾವಿರ ಟನ್‌ಗಳಷ್ಟು ಮೀನನ್ನು ಉತ್ಪತ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇಂತಹ ಒಂದೊಂದು ದೋಣಿಮಾಡಲು ಸುಮಾರು 35 ರಿಂದ 45 ಸಾವಿರ ರೂಪಾಯಿಗಳಷ್ಟು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬೇಕಾಗುತ್ತದೆ.ಇದಕ್ಕಾಗಿ ಕೇಂದ್ರ ಸರಕಾರದವರು ಸಹಾಯಕೊಡುತ್ತಿದ್ದಾರೆ. ರಾಜ್ಯ ಸರಕಾರ ಹೆಚ್ಚಾಗಿ ಏನೂ ಕೊಡುತ್ತಿಲ್ಲ. ಇದರಿಂದ ನಮ್ಮ ರಾಜ್ಯಕ್ಕೆ ಅಷ್ಟು ಭಾರವೂ ಬೀಳುವುದಿಲ್ಲ. ಆದರೆ ಒಳನಾಡಿನಲ್ಲಿ ಹೆಚ್ಚು ಮೀನುಗಳನ್ನು ಹಿಡಿಯಲು ಸಮುದ್ರದಷ್ಟು ಅವಕಾಶಗಳಿಲ್ಲ. ಪಶ್ಚಿಮ ಕರಾವಳಿಯಲ್ಲಿ ಹಿಡಿಯುವ ಮೀನುಗಳನ್ನು ಸ್ಟೋರೇಜು ಮಾಡಲು ಐಸ್ ಸ್ಟೋರೇಜು ಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು. ಈಗ ಮಂಗಳೂರು ಹಾಗೂ ಕಾರವಾರದಲ್ಲಿ ಮಾಡು ತ್ತಿರುವುದು ಸಾಲದು. ಒಳನಾಡಿನಲ್ಲಿ ಎಲ್ಲೆಲ್ಲಿ ಇದನ್ನು ಸ್ಟಾಕು ಮಾಡಲು ಅನುಕೂಲ ಇದೆಯೋ ಅಲ್ಲಿ ಮಾಡಬಹುದು ಮತ್ತು ಮೈಸೂರು ರಾಜ್ಯದ ಜಿಲ್ಲೆಗಳಲ್ಲಿರುವ ಹೆಡ್ ಕ್ವಾರ್ಟರುಗಳಲ್ಲಿ ಸ್ಟೋರೇಜು ಮಾಡಲು ಮೀನುಗಳನ್ನು ಸಂಗ್ರಹಿಸಬೇಕು ಮತ್ತು ಜನಗಳು ಇದನ್ನು ಹೆಚ್ಚಾಗಿ ಉಪಯೋಗಿಸಲು ಅವಕಾಶ ಕೊಡಬೇಕು. ಅಲ್ಲದೆ, ಕಡಲಲ್ಲಿ ಒಂದೊಂದು ಸಲ ಮೀನುಗಳು ಬಹಳ ದೊಡ್ಡ ಪ್ರಮಾಣದಲ್ಲಿ ಸಿಗುತ್ತದೆ. ಇದು ಲಕ್ಷಾಂತರ ರೂಪಾಯಿಗಳಷ್ಟು ಬೆಲೆಯನ್ನು ತರುತ್ತದೆ. ಇದನ್ನೆಲ್ಲಾ ಸರಿಯಾಗಿ ಹಿಡಿದು ಶೀಘ್ರವಾಗಿ ಸಾಗಿಸಲು ತೀವ್ರವಾದ ಪ್ರಯತ್ನ ಮಾಡಬೇಕು ಮತ್ತು ಜನಕ್ಕೆ ಹೆಚ್ಚು ಉಪಯೋಗ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು.

ಅರಣ್ಯದ ವಿಚಾರವಾಗಿ ಒಂದು ವಿಚಾರ ಹೇಳಬೇಕಾಗಿದೆ. ಈಗಾಗಲೇ ಎಲ್ಲರಿಗೂ ತಿಳಿದಿರು ವಂತೆ ನಮ್ಮ ಸೌತ್‌ಕೆನರಾದಲ್ಲಿ ಹೆಚ್ಚು ಫಾರೆಸ್ಟು ಲ್ಯಾಂಡು ಇದೆ. ಈ ಭಾಗದಲ್ಲಿ ಇನ್ನು ಅರಣ್ಯ ಬೆಳೆಸುವುದು ಬೇಡ ಎಂದು ಹೇಳುತ್ತಿಲ್ಲ. ಆದರೆ ಈ ಕಾಡುಗಳಲ್ಲಿ ಕೆಲವು ಜನ ಗುಡ್ಡ ಬೆಟ್ಟಗಳನ್ನು ಕಡಿದು ಸ್ವಲ್ಪ ಭೂಮಿಯನ್ನು ಗದ್ದೆಗಳಾಗಿ ಮಾಡಿಕೊಂಡು ಅರಣ್ಯಕ್ಕೆ ಹೊಂದಿಕೊಂಡಂತೇ ಇದ್ದಾರೆ. ಅವರು ಅಲ್ಲೇ ವಾಸಮಾಡಲು ಅವಕಾಶ ಕೊಡುವುದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರೆವೆನ್ಯೂ ಲ್ಯಾಂಡನ್ನು ಫಾರೆಸ್ಟು ಲ್ಯಾಂಡು ಆಗಿ ಮಾರ್ಪಡಿಸು ತ್ತಿದ್ದಾರೆ. ಇದು ಬಂಜರಾಗಿರುವ ಜಮೀನು. ಇವನ್ನು ಅನುಸರಿಸಿಕೊಂಡು ಕೆಲವರು ನೀರಿನ ಆಸರೆ ಯಿಂದ ಕೃಷಿಮಾಡುತ್ತಿದಾರೆ. ಅದನ್ನು ಕೃಷಿಗಾಗಿ ಕೊಡುವುದು ಅಗತ್ಯ. ಇದರಿಂದ ಆಹಾರದವಸ ಗಳನ್ನು ಬೆಳಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಜನ ನಾಲ್ಕಾರು ವರ್ಷ ಶ್ರಮಪಟ್ಟು ಸಾಗುವಾದ ಬೇಕೆಂದು ಮಾಡಿದರೂ ಹೆಚ್ಚು ಉತ್ಪತ್ತಿ ಒಂದು ವರ್ಷ ಸಿಗುತ್ತೆ, ಒಂದು ವರ್ಷ ಸಿಗುವುದಿಲ್ಲ. ಯಾರು ಇಲ್ಲಿ ಸಾಗುಮಾಡುತ್ತಿದ್ದಾರೋ ಅಂತಹವರಿಗೆ ಈ ಭೂಮಿಯನ್ನು ಗೇಣಿಗೆ ಕೊಡಬೇಕು ಮತ್ತು ಆಹಾರದ ದವಸಗಳನ್ನು ಹೆಚ್ಚು ಬೆಳೆಯಲು ಅವಕಾಶ ಮಾಡಿಸಿಕೊಡಬೇಕು. ಇನ್ನೊಂದು ವಿಚಾರ ಇಲ್ಲಿ ಹೇಳಬೇಕು. ಇಲ್ಲಿ ಯಾರು ವ್ಯವಸಾಯ ಮಾಡುತ್ತಾರೋ ಅವರಿಗೆ ಗೇಣಿಗೆ ಕೊಡಬೇಕು. ಆದರೆ ಈಗ ಇಲ್ಲರುವ ರೈತರು ಕೇಳುತ್ತಿದ್ದರೂ ಅವರಿಗೆ ಕೊಡುತ್ತಿಲ್ಲ. ದರಖಾಸ್ತಿನಲ್ಲಿ ಜಮೀನು ತೆಗೆದು ಕೊಂಡು 18 ವರ್ಷಗಳಾಗಿದ್ದರೂ ಅವರಿಗೆ ಗೇಣಿಗೆ ಸ್ಥಳ ಕೊಟ್ಟಿಲ್ಲ. ಇಲ್ಲದ ತೊಂದರೆಗಳಿಗೆ ಈ ಬಡ ಜನ ಸಿಕ್ಕಿ ತೊಂದರೆಪಡುತ್ತಿದ್ದಾರೆ. ಇವರ ಹೆಸರಿಗೆ ಪಟ್ಟೆಯನ್ನು ಮಾಡಿಸಿಕೊಡುವ ವ್ಯವಸ್ಥೆ ಮಾಡಬೇಕು. ಮತ್ತು ಇದರಲ್ಲಿ ಕೃಷಿ ಮಾಡುವರೆ ಬೇಕಾದ ಸವಲತ್ತುಗಳನ್ನೂ ಬೇಗನೆ ಒದಗಿಸಿಕೊಡಬೇಕು. ಯಾರು ಇಲ್ಲಿ ಬಹುದಿನಗಳಿಂದಲೂ ಬೇಸಾಯ ಮಾಡುತ್ತಿದ್ದಾರೋ ಅವರಿಗೆ ಪಟ್ಟೆ ಕೊಡಿಸಿಕೊಡಬೇಕು ಎಂದು ನನ್ನ ಸಲಹೆ. ಅಲ್ಲದೆ ನಮ್ಮ ಕಾಡುಗಳಲ್ಲಿ ಮಧ್ಯೆ ಇರುವ ಕೆಲವು ಸಣ್ಣ ಜಾಗಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಅವಕಾಶವಿದೆ. ಎಂದರೆ ಇಲ್ಲಿ ಅಡಕೆ ತೋಟಗಳನ್ನು ಮಾಡಿದರೆ ಆ ಮರಗಳು ಬಹಳ ಚೆನ್ನಾಗಿ ಬೆಳೆಯಲು ಅವಕಾಶ ಸಿಗುತ್ತದೆ ಮತ್ತು ಇಂತಹ ಸಣ್ಣ ಕಾಡುಗಳಲ್ಲಿ ಅಡಕೆ ವ್ಯವಸಾಯಕ್ಕೆ ಅವಕಾಶಮಾಡಿಕೊಡುವ ಸಲಹೆಯನ್ನು ಸರಕಾರ ಪರಿಶೀಲನೆ ಮಾಡಬೇಕು ಮತ್ತು ಇದರಿಂದ ಕಾಡುಗಳು ನಾಶವಾಗುವುದರ ಬದಲು ಅಡಿಕೆ ಕಾಡೂ ಬೆಳೆಯು ತ್ತದೆ. ಅಡಕೆ ತೋಟಗಳನ್ನು ಮಾಡಲು ಅವಕಾಶ ಕೊಟ್ಟಂತೆಯೂ ಆಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲಿ ಸಣ್ಣ ಸಣ್ಣ ಕಣಿವೆ ಜಾಗಗಳು ಎಂದು ಇರುತ್ತವೆ. ಇಲ್ಲಿ ಅಡಿಕೆ ತೋಟವನ್ನು ಬೆಳೆಸಬಹುದು. ಇದಕ್ಕಾಗಿ ಅರಣ್ಯವನ್ನೇ ಸಂಪೂರ್ಣವಾಗಿ ನಾಶಮಾಡಬೇಕಾದ್ದಿಲ್ಲ. ಅರಣ್ಯಗಳು ನಾಶವಾಗದ ರೀತಿಯಲ್ಲಿ ಅಡಕೆ ತೋಟಗಳು ಆಗುವಂತೆ ಪ್ರಯತ್ನ ಮಾಡಬೇಕು.

5-00 P.M.

ಕೃಷಿ ವಿಚಾರದಲ್ಲಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆ ಅತ್ಯಧಿಕ ಬತ್ತ ಬೆಳೆಯುವ ಪ್ರದೇಶ. ಸಾವಿರಾರು ರೈತರು ವ್ಯವಸಾಯ ಮಾಡುತ್ತಾ ಇದ್ದಾರೆ. ಇವತ್ತಿನ ದಿವಸ ಅವರಲ್ಲಿ ಪವರ್ ಟಿಲ್ಲರ್ಸ್ ಬೇಕೆಂಬ ಒಂದು ಬೇಡಿಕೆ ಇದೆ. ಆದ್ದರಿಂದ ಅದಕ್ಕೆ ಹೆಚ್ಚು ಗಮನ ಕೊಟ್ಟು ಅವುಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ರೈತ ಹಿಂದಿನ ಪದ್ಧತಿಯಲ್ಲೇ ಗೊಬ್ಬರವನ್ನು ಹಾಕುತ್ತಾ ಇದ್ದಾನೆ. ಯಾವ ಬೆಳೆಗೆ ಯಾವ ಗೊಬ್ಬರ ಎಷ್ಟು ಹಾಕಬೇಕೆಂದು ಹೇಳಬೇಕಾದರೆ ಮಣ್ಣಿನ ಪರೀಕ್ಷೆ ಆಗಲೇ ಬೇಕು. ಅದಕ್ಕೆ ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಅತ್ಯಗತ್ಯವಾಗಿದೆ. ಇದನ್ನು ನಮ್ಮ ಜಿಲ್ಲೆಗೆ ಕೂಡಲೇ ಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದರೂ ಕೂಡ ಇಲ್ಲಿಯವರೆಗೂ ಕೊಟ್ಟಿಲ್ಲ. ಮಣಿಪಾಲ್‌ದಲ್ಲಿ ಖಾಸಗಿಯಿಂದ ಮಾಡುತ್ತಾ ಇದ್ದಾರೆ. ಸರ್ಕಾರದವತಿಯಿಂದ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಅತ್ಯಗತ್ಯವಾಗಿ ಕೂಡಲೇ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಆ ರೀತಿ ಮಾಡಿದ್ದೇ ಆದರೆ ಹೆಚ್ಚು ಬೆಳೆ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ.

ಅರಣ್ಯದ ಭೂಮಿಯಲ್ಲಿ ಆಯುರ್ವೇದಕ್ಕೆ ಸಂಬಂಧಪಟ್ಟ ಗಿಡಮೂಲಿಕೆಗಳನ್ನು ಬೆಳೆಯಲು ತಕ್ಕ ತೋಟಗಳನ್ನು ಮಾಡಬಹುದು ಎಂದು ಕಾಣುತ್ತದೆ. ಏಕೆಂದರೆ ಹೆಚ್ಚು ಬೆಳೆಯೂ ಆಗುತ್ತದೆ ಮತ್ತು ಲಕ್ಷಾಂತರ ರೂಪಾಯಿ ಉತ್ಪನ್ನವೂ ಬರಬಹುದು, ಜನರಿಗೂ ಸಹಾಯವಾಗಬಹುದು.

ಅಜ್ಜಾವರ ಎಂಬ ಸ್ಥಳದಲ್ಲಿ ತೆಂಗಿನ ಪರಿಶೋಧನಾ ಕೇಂದ್ರ ಮತ್ತು ಹಾರ್ಟಿಕಲ್ಚರಲ್ ಫಾರಂ ಮಾಡುತ್ತೇವೆ ಎಂದು ಹೇಳಿ 2-3 ವರ್ಷದ ಕೆಳಗೆ ಮಾನ್ಯ ಮಂತ್ರಿಗಳು ಮತ್ತು ಡೈರೆಕ್ಟರವರು ಸ್ಥಳ ಪರಿಶೋಧನೆ ಮಾಡಿದರು. ಅಂತಹ ಕಡೆ ಕ್ಯಾಷ್ಯೂ ನೆಟ್ ಹಾಕುತ್ತಿರುವ ಹಾಗೆ ಕಾಣುತ್ತದೆ. ಅದನ್ನು ನೀರಾವರಿ ಇರತಕ್ಕ ಪ್ರದೇಶದಲ್ಲಿ ಹಾಕಿದರೆ ಹೆಚ್ಚು ಲಾಭದಾಯಕವಲ್ಲ. ಆದ್ದರಿಂದ ಹೆಚ್ಚು ಆಹಾರ ಬೆಳೆಯುವ ಅಥವಾ ತೆಂಗಿನ ತೋಟ ಇತ್ಯಾದಿಗಳನ್ನು ಅಂತಹ ಕಡೆ ಮಾಡಬೇಕು ಎಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್ ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ; ಈ ದಿವಸ ವ್ಯವಸಾಯಕ್ಕೆ ಸಂಬಂಧಪಟ್ಟ ಡಿಮ್ಯಾಂಡ್‌ನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಆಡಲು ಬಯಸುತ್ತೇನೆ. ಇದುವರೆಗೂ ನಮ್ಮ ಸ್ನೇಹಿತರು ಅನೇಕ ವಿಷಯಗಳನ್ನು ಹೇಳಿದ್ದಾರೆ, ನಾನಾದರೂ ಒಂದು ಅತಿ ಮುಖ್ಯವಾದ ವಿಷಯವನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಇಂಡಿಯಾ ದೇಶದಲ್ಲಿ ನೋಡಿದರೆ ಈ ದೇಶ ಪ್ರಪಂಚದ ಇತರ ಎಲ್ಲಾ ರಾಷ್ಟ್ರಗಳಿಗಿಂತಲೂ ವ್ಯವಸಾಯದಲ್ಲಿ ಬಹಳ ಕನಿಷ್ಠ ಸ್ಥಿತಿಯಲ್ಲಿದೆ ಎಂದು ನಾನು ಯತ್ನವಿಲ್ಲದೆ ಹೇಳಬೇಕಾಗಿದೆ. ಪ್ರಪಂಚದ ಇತರರ ರಾಷ್ಟ್ರಗಳವರು ಯಾವ ಮಟ್ಟದಲ್ಲಿ ವ್ಯವಸಾಯವನ್ನು ತೆಗೆದುಕೊಂಡು ಹೋಗುತ್ತಾ ಇದ್ದರೆ ಎಂಬುದನ್ನು ನೋಡಿದರೆ ತಾವು ಕತ್ತು ಬಗ್ಗಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ಈ ವ್ಯವಸಾಯವನ್ನು ನಾವು ಹೇಳುವಷ್ಟು ಸುಲಭವಾಗಿ ಮುಂದುವರಿಸುವುದಕ್ಕೆ ಸಾಧ್ಯವಿಲ್ಲ. ಪ್ರಪಂಚ ಜನಸಂಖ್ಯೆ ಬಹಳ ವೇಗದಲ್ಲಿ ಬೆಳೆಯುತ್ತಾ ಇದೆ. ಅದಕ್ಕೆ ತಕ್ಕಂತ ಆಹಾರ ಸಾಮಾಗ್ರಿಗಳನ್ನು ಒದಗಿಸುವುದು ಸುಲಭವಲ್ಲ. ರಷ್ಯಾ ದೇಶದಲ್ಲಿ 1919ರಿಂದ ಕಷ್ಟಪಟ್ಟರೂ ಕೂಡ ಆಹಾರವನ್ನು ಸಮತೂಗಿಸುವುದಕ್ಕೆ ಅವರಿಂದ ಸಾಧ್ಯವಾಗುತ್ತಾ ಇಲ್ಲ. ಫ್ರೀರೆವಲ್ಯೂಷನ್ ಕಾಲದಿಂದ ಪ್ರಾರಂಭ ಮಾಡಿ ಇಂಡಸ್ಟ್ರೀಸ್‌ನಲ್ಲಿ ಅವರು 52ರಷ್ಟು ಮುಂದುವರಿದರು. ವ್ಯವಸಾಯದಲ್ಲಿ 1926ನೇ ಇಸವಿಯಲ್ಲಿ ಎಷ್ಟಿತ್ತು ಎಂಬುದನ್ನು ಹೋಲಿಸಿ ನೋಡಿದರೆ ಈಗ 130 ಪರ್ಸೆಂಟ್ ಮಾತ್ರ ಮುಂದುವರಿದಿದ್ದಾರೆ ಎಂದು ಹೇಳಬಹುದು. ಕೋಟ್ಯಾನುಗಟ್ಟಲೆ ರೂಬಲ್‌ಗಳನ್ನು ಖರ್ಚು ಮಾಡಿ ಇಡೀ ದೇಶವೇ ದುಡಿದು ಕಷ್ಟಪಟ್ಟರೂ ಕೂಡ ಹೆಚ್ಚು ಪ್ರಗತಿಯನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅಂಕಿಅಂಶಗಳಿಂದ ದೇಶವನ್ನು ಮರುಳುಗೊಳಿಸುವುದಕ್ಕೆ ಸಾಧ್ಯವಿಲ್ಲ. ತಾವು ಈಗ ಹೋಗುತ್ತಿರುವ ವೇಗದಲ್ಲಿ ಹೋದರೆ ಖಂಡಿತವಾಗಿಯೂ ವ್ಯವಸಾಯವನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲ. ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕ ರೈತರು ಕನಿಷ್ಠಮಟ್ಟದಲ್ಲಿದ್ದಾರೆ. ರೂರಲ್ ಪಾಪ್ಯುಲೇಷನ್ ಮೊದಲಿನಿಂದಲೂ ಕೂಡ ಸುಮಾರು 80 ಪರ್ಸೆಂಟ್ ಇದೆ. ರಷ್ಯಾದಲ್ಲಿ ಅರ್ಬನ್ ಪಾಪ್ಯುಲೇಷನ್ 18 ಪರ್ಸೆಂಟ್ ಇದ್ದದ್ದು ಈಗ 47 ಪರ್ಸೆಂಟ್ ಆಗಿದೆ. ಇನ್ನು ಉಳಿದ 53 ಪರ್ಸೆಂಟ್ ರೂರಲ್ ಪಾಪ್ಯುಲೇಷನ್ ಇದೆ. ಅಲ್ಲಿ ರೂರಲ್ ಪಾಪ್ಯುಲೇಷನನ್ನು ಯಾವ ರೀತಿ ಕಡಿಮೆ ಮಾಡಿದರು ಎಂದರೆ ಯಂತ್ರಗಳ ಉಪಯೋಗವನ್ನು ವ್ಯವಸಾಯದಲ್ಲಿ ಹೆಚ್ಚು ಮಾಡಿ ಅಲ್ಲಿನ ಜನಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ. ಹಾಗೆ ಮಾಡಿ ಆ ಜನರ ಜೀವನ ಮಟ್ಟ ಜಾಸ್ತಿ ಮಾಡಿ, ಅವರಿಗೆ ಸುಖ ಶಾಂತಿಯನ್ನು ದೊರಕಿಸಿಕೊಟ್ಟಿದ್ದಾರೆ. ಹೀಗೆ ಅವರ ದೇಶ ಮುಂದುವರಿಯುತ್ತಾ ಇದೆ. ಜನರು ಸುಖವಾಗಿದ್ದಾರೆ. ಬೇಕಾದಷ್ಟು ಆಹಾರವನ್ನು ಸಮೃದ್ಧಿಯಾಗಿ ಬೆಳೆಯುತ್ತಾ ಇದ್ದಾರೆ. ನಮ್ಮಲ್ಲಿ ಇವತ್ತು ಗ್ರಾಮಾಂತರ ಪ್ರದೇಶಗಳಿಂದ ಹೋದರೆ uneconomic holding ಉಳ್ಳವರು ಎರಡು ಮೂರು ಅಥವಾ ನಾಲ್ಕು ಐದು ಎಕರೆ ಒಳಗೆ ಇರತಕ್ಕ ಜನರು ಬಹಳ ಜನ ಇದ್ದಾರೆ. ಪ್ರಪಂಚದ ಇತಿಹಾಸವನ್ನು ನೋಡಿದರೆ ಸ್ಮಾಲ್ ಎಕ್ಸ್‌ಟೆಂಟ್ (Extent) ಇರತಕ್ಕ ಜನರು ಎಲ್ಲೂ ಕೂಡ ಮುಂದೆ ಬಂದಿಲ್ಲ. ಉದಾಹರಣೆಗೆ ಹೇಳಬೇಕಾದರೆ ಅಮೆರಿಕಾ ದೇಶದಲ್ಲಿ 1950 ರಿಂದ 60ರ ವರೆಗೂ ಒಂದು ಮಿಲಿಯನ್ 463 ಸಾವಿರ ಸ್ಮಾಲ್‌ಫಾರಂ

(ಎಚ್. ಆರ್. ಕೇಶವಮೂರ್ತಿ)

ಗಳುಇವೆ average of one million small farmers in West Germany, 80 to 90 thousand in France and 1,20,000 in Italy. ಅನ್‌ಎಕನಾಮಿಕಲ್ ಹೋಲ್ಡಿಂಗ್ಸ್ ಇಟ್ಟುಕೊಂಡು ಯಾವ ದೇಶದ ಜನರೂ ಮುಂದುವರಿದಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಎರಡು ತರಹ ಮಾಡಬೇಕು. ವ್ಯವಸಾಯವನ್ನು ಸೋಷಿಯಲೈಯಸ್ ಮಾಡಬೇಕು ಇಲ್ಲದೇ ಹೋದರೆ ಮ್ಯಾಕನೈಸ್ ಮಾಡಬೇಕು. ಇವೆರಡೂ ಇಲ್ಲದೇ ಹೋದರೆ ಅಮೇರಿಕಾದೇಶದ ಹಾಗೆ ಕ್ಯಾಪಿಟಲೈಸ್ ಮಾಡಬೇಕು. ಜನರನ್ನು ಸೇರಿಸಿಕೊಂಡು ಅವರಿಗೆ ಮೆಷಿನರಿ, ಕ್ಯಾಪಿಟಲ್ ಎಲ್ಲಾ ಕೊಟ್ಟು ವ್ಯವಸಾಯ ಮಾಡಿದರೆ ಹೆಚ್ಚು ಲಾಭ ಸಂಪತ್ತು ಬರುತ್ತದೆಯೇ ಹೊರತು ಈಗಿರತಕ್ಕ ಪದ್ಧತಿಯನ್ನೇ ಮುಂದುವರಿಸುತ್ತಾ ಹೋದರೆ ಸುಮ್ಮನೆ ಈ ಅಸೆಂಬ್ಲಿಯಲ್ಲಿ ಅಂಕಿಅಂಶಗಳನ್ನು ಹೇಳಿಕೊಂಡು ಹೋಗಿ ಅದನ್ನ ಕೇಳುವುದಕ್ಕೆ ಒಂದು ರೀತಿಯ ಕರ್ಣಾನಂದವಾಗುತ್ತದೆಯೇ ಹೊರತು ಖಂಡಿತವಾಗಿಯೂ ವ್ಯವಸಾಯ ಮುಂದುವರಿಯುವುದಿಲ್ಲ. ಇದನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರದವರು ವ್ಯವಸಾಯವನ್ನು ಕ್ಯಾಪಿಟಲೈಸ್ ಮಾಡಿ ಅಥವಾ ಸೋಷಿಯಲೈಸ್ ಮಾಡಿ ಇಲ್ಲದೆ ಹೋದರೆ ಮ್ಯಾಕನೈಸ್ ಮಾಡಿ ವ್ಯವಸಾಯೋತ್ಪನ್ನವನ್ನು ಹೆಚ್ಚು ಮಾಡಬೇಕೆಂದು ನಾನು ಸಲಹೆ ಮಾಡುತ್ತಾ ಇದ್ದೇನೆ.

ರಷ್ಯಾ ದೇಶದಲ್ಲಿ ಇವತ್ತು ವ್ಯವಸಾಯದ ಜಮೀನಗಳನ್ನೆಲ್ಲಾ ಎರಡು ಭಾಗ ಮಾಡಿದ್ದಾರೆ, ಸ್ಟೇಟ್ ಫಾರಂಸ್ ಮತ್ತು ಕಲೆಕ್ಟೀವ್ ಫಾರಂಸ್ ಅಂತ ಸಣ್ಣ ಸಣ್ಣ ಅನ್ ಎಕನಾಮಿಕಲ್ ಯೂನಿಟ್‌ಗಳನ್ನೆಲ್ಲಾ ಸೇರಿಸಿ ಸಾವಿರಾರು ಸ್ಟೇಟ್ ಫಾರಂಸ್ ಮತ್ತು ಕಲೆಕ್ಟಿವ್ ಫಾರಂಸನ್ನು ಮಾಡಿದ್ದಾರೆ. ಮೊದಲು ಅನಿಮಲ್ ಪವರ್‌ನಿಂದ ವ್ಯವಸಾಯ ಮಾಡುತ್ತಾ ಇದ್ದರು, 1963ರಲ್ಲಿ ಅವರ ಹತ್ತಿರ ಒಂದೂವರೆ ಮಿಲಿಯನ್ ಟ್ರ್ಯಾಕ್ಟರ್‌ಗಳನ್ನು ಇಟ್ಟುಕೊಂಡಿದ್ದರು, ಇದೇ ರೀತಿ ಅಮೇರಿಕಾದಲ್ಲಿ 90 ಪರ್ಸೆಂಟ್ ಫಾರಂಸ್ ಮ್ಯಾಕನೈಸ್ ಆಗಿದೆ. ಎಲ್ಲಾ ಫಾರಂಸ್‌ನಲ್ಲೂ 98 ಪರ್ಸೆಂಟ್ ಎಲೆಕ್ಟ್ರಿಸಿಟಿ ಬಂದಿದೆ. 50 ಪರ್ಸೆಂಟ್ ಟೆಲಿವಿಜನ್ ಕನೆಕ್ಷನ್ಸ್ ಇದೆ. ಈ ರೀತಿ ಇರುವುದರಿಂದ ಅವರೂ ಕೂಡ ಬೇರೆಯವರಿಗಿಂತ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಿ ಹೊರ ದೇಶಗಳಿಗೆ ಕಳುಹಿಸುತ್ತಾ ಇದ್ದಾರೆ. ಇದನ್ನು ಸರ್ಕಾರದವರು ಮನಗಾಣಬೇಕು. ನಾನು ಒಂದು ಸಲಹೆ ಮಾಡುತ್ತೇನೆ. ನಮ್ಮ ಇಂಡಿಯಾದೇಶದಲ್ಲಿ ಸ್ಯಾಂಪಲ್‌ಗಾದರೂ ನಮ್ಮ ಮೈಸೂರು ರಾಜ್ಯದಲ್ಲಿ ಒಂದು ಮ್ಯಾಕನೈಸ್ ಫಾರಂನ್ನು ಮಾಡಿ. ಹಿಂದೆ ಟಾಡ್ ಹಂಟರ್ ಅವರ ವರದಿಯಲ್ಲಿ ಈ ರೀತಿ ಮಾಡಿ ಆಹಾರದ ಕೊರತೆಯನ್ನು ಪೂರೈಸಿಕೊಳ್ಳಬಹುದು ಎಂದು ಹೇಳಿ ಸೂಚನೆ ಮಾಡಿದ್ದರು. ವ್ಯವಸಾಯದ ಬಾಬಿನಲ್ಲಿ ನಿಜವಾದ ಪ್ರಗತಿಯಾಗಿಲ್ಲ. ಡೈರೆಕ್ಟರು, ಜಾಯಿಂಟ್ ಡೈರೆಕ್ಟರು, ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರು ಮುಂತಾದ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆಯೇ ಹೊರತು ನಿಜವಾದ ಪ್ರಗತಿಯಾಗಬೇಕಾದರೆ ಯಾವರೀತಿ ಮುಂದುವರಿಯಬೇಕು ಎಂಬುದನ್ನು ಗಮನಿಸಿಲ್ಲ. ಸ್ಟೇಟ್ ಫಾರಂನಲ್ಲಿ ರಷ್ಯಾದಲ್ಲಿ ಯಾವರೀತಿ ಆಫೀಸರುಗಳ ನ್ನಿಟ್ಟಿದ್ದಾರೆಂಬುದನ್ನು ನೋಡಬೇಕು. ರಷ್ಯಾದಲ್ಲಿ 8,29,700 ಜನ ಟ್ರಾಕ್ಟರ್ ಡ್ರೈವರುಗಳು ಕಂ ಹಾರ್‌ವೆಸ್ಟರ್ಸ್, ಮೆಕ್ಯಾನಿಕಲ್ ಆಪರೇಟರ್ಸ್, 3 ಲಕ್ಷ 22 ಸಾವಿರ ಲಾರಿ ಡ್ರೈವರುಗಳು, 1 ಲಕ್ಷ 20 ಸಾವಿರ ಅಗ್ರಾನಮಿಸ್ಟ್‌ಗಳು, 200 ಜೂ ಟೆಕ್ನೀಷಿಯನ್ ಎಂಜಿನಿಯರುಗಳು ಇದ್ದಾರೆ. ಈ ಜನರು ಅಲ್ಲಿ ಕಲೆಕ್ಟಿವ್ ಫಾರಂಗಳಿಗೆ ಹೋಗಿ ಸಲಹೆಕೊಟ್ಟು ಲೇಬರ್ ಕಂಟ್ರೋಲ್‌ಮಾಡಿ ವ್ಯವಸಾಯ ಅದಷ್ಟು ಚೆನ್ನಾಗಿ ನಡೆಯುವಹಾಗೆ ನೋಡಿಕೊಳ್ಳುತ್ತಾರೆ. ಆದುದರಿಂದ ಅಲ್ಲಿ ವ್ಯವಸಾಯ ಚೆನ್ನಾಗಿ ಮುಂದುವರೆಯುತ್ತಿದೆ. ಅದೇ ನಮ್ಮಲ್ಲಿ ಆ ರೀತಿ ಏನೂ ಮಾಡಿಲ್ಲ. 22,400 ದನ, 800 ಹಂದಿ, 4,000 ಕುರಿ ಒಂದೇ ಫಾರಂನಲ್ಲಿ ಸಾಕುತ್ತಾರೆ. ಹೀಗೆ ಒಟ್ಟಿಗೆ ಸೇರಿ ವ್ಯವಸಾಯಮಾಡಿ ಹೆಚ್ಚು ಆದಾಯ ಪಡೆಯಲು ರಷ್ಯಾದಲ್ಲಿ ಅವಕಾಶವಿದೆ, ಎಲ್ಲಾ ಮೆಕನೈಜ್ ಮಾಡಿದ್ದಾರೆ. ಯಾವ ಷೀಪ್ ಫಾರಂ ಮೆಕನೈಜ್ ಮಾಡಿ 2800 ಹೆಕ್ಟಾರ್ ಭೂಮಿಯಲ್ಲಿ 30 ಸಾವಿರ ಕುರಿ ಸಾಕುತ್ತಾರೆ, ಅಲ್ಲಿ ಬಾವಿ ತೋಡುತ್ತಾರೆ, ಲಾರಿಗಳಲ್ಲಿ ಮೇವು, ನೀರು ತೆಗೆದುಕೊಂಡು ಹೋಗಿ ಕುರಿಗಳಿಗೆ ಒದಗಿಸುತ್ತಾರೆ. ಹುಲ್ಲು ಬೆಳೆಸಲು ಸ್ಪೆಷಲೈಜ್ಡ್ ಪ್ಯಾಸ್ಚರ್ ಇರುತ್ತದೆ. ಹೆಚ್ಚು ಮೇವು ಬೆಳೆಯುವಂತೆ ತಕ್ಕ ಕ್ರಮ ಕೈಕೊಳ್ಳುತ್ತಾರೆ. ಡೈರಿಗಳಲ್ಲಿ ರಾಸುಗಳನ್ನು ಚೆನ್ನಾಗಿ ಸಾಕುತ್ತಾರೆ. ಇಲ್ಲಿ ನಾವಾದರೆ ಕಟುಕರಿಗೆ ಸಾಯುವ ಸ್ಥಿತಿಯಲ್ಲಿರುವ ದನಗಳನ್ನು ಕೊಡುತ್ತೇವೆ, ಅದೇ ರಷ್ಯಾದಲ್ಲಿ ಕೆಲವು ಕಾಲ ರಾಸುಗಳನ್ನು ಸಾಕಿ ಹೆಚ್ಚು ತೂಕ ಇರುವಾಗ ಒಂದು ಸ್ಟೇಜಿನಲ್ಲಿ ಚೆನ್ನಾಗಿರುವ ದನಗಳನ್ನೇ ಕಟುಕರಿಗೆ ಕೊಡುತ್ತಾರೆ. ಸಾಯುವ ಸ್ಥಿತಿಗೆ ಬಂದಾಗ ಕೊಡುವುದು ಸರಿಯಲ್ಲ. ಕಡಿಯುವುದಕ್ಕೆ ಸರಿಯಾದ ದನಗಳನ್ನು ಕೊಡಬೇಕು. ಒಂದೊಂದು ಪೌಲ್ಟ್ರಿ ಫಾರಮ್ಮನ್ನೂ ಮೆಕನೈಜ್ ಮಾಡಿ ಸರಾಸರಿ 57 ಸಾವಿರ ಫೌಲ್‌ಗಳನ್ನು ಒಂದೊಂದು ಫಾರಂನಲ್ಲಿ ಸಾಕುತ್ತಾರೆ.

ಹೀಗೆ ಮಾಡಿ ಬೇಕಾದಷ್ಟು ಮೊಟ್ಟೆ ಉತ್ಪತ್ತಿ ಮಾಡುತ್ತಾರೆ. ಇಲ್ಲೂ ಕೂಡ ಹಾಗೆ ಮಾಡಲು ಪ್ರಯತ್ನ ಮಾಡದಿದ್ದರೆ ಆ ಬಾಬು ಮುಂದುವರೆಯುವುದಿಲ್ಲ. ಇನ್ನ ಕ್ರೆಡಿಟ್ ಸರ್ವೆ ತೆಗೆದುಕೊಂಡರೆ ರಷ್ಯಾದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಯು. ಎಸ್. ಎಸ್. ಆರ್. ಬ್ಯಾಂಕ್ ಇದೆ, ಅಲ್ಲಿ 5 ಪರ್ಸೆಂಟ್ ಬಡ್ಡಿ ಛಾರ್ಜ್ ಮಾಡಿ ರೈತರಿಗೆ ಸಾಲ ಕೊಡುತ್ತಾರೆ. ಹೀಗೆ ಕಡಮೆ ಬಡ್ಡಿ ದರದಲ್ಲಿ ಬೇಕಾದಷ್ಟು ಸಾಲ ಒದಗಿಸುತ್ತಾರೆ. ರೂರಲ್ ಕ್ರೆಡಿಟ್ ಸರ್ವೆ ವರದಿ ಪ್ರಕಾರ ಇಂಡಿಯಾದೇಶಕ್ಕೆ 750 ಕೋಟಿ ರೂಪಾಯಿ ಸಾಲ ಬೇಕು. ಇದರಲ್ಲಿ ಸೇಕಡ ಆರರಷ್ಟು ಕೊಟ್ಟಿದ್ದಾರೆ. ಚೈನಾದಲ್ಲಿ 560 ಕೋಟಿ ಜಪಾನಿನಲ್ಲಿ 270 ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ. ಅದನ್ನು ನಮ್ಮ ದೇಶಕ್ಕೆ ಹೋಲಿಸಿದರೆ ಕೊಟ್ಟಿರುವುದು ಸಾಲದು.

ಈಗ ಟೌನುಗಳಲ್ಲಿ ಮತ್ತು ಸಿಟಿಗಳಲ್ಲಿ ನ್ಯೂಯೇಜ್ ವೇಸ್ಟ್ ಆಗುತ್ತಿದೆ. ಅದನ್ನು ಹೊಲಗಳಿಗೆ ಗೊಬ್ಬರವಾಗಿ ಉಪಯೋಗಿಸಬಹುದು, ಅದನ್ನು ಕಾಂಪೋಸ್ಟ್ ಮಾಡಿ ರೈತರಿಗೆ ಸುಲಭ ದರದಲ್ಲಿ ಸಿಕ್ಕುವಹಾಗೆ ಒದಗಿಸಬೇಕು. ಲಾರಿ ಇಟ್ಟು ಅದರ ಮೂಲಕ ರೈತರ ಹೊಲಗಳಿಗೆ ಸರಬರಾಯಿ ಮಾಡಬೇಕು. ಗಾಡಿಗಳಲ್ಲಿ ಅದನ್ನು ಸಾಗಿಸಲು ಸಾಧ್ಯವಾಗುವುದಿಲ್ಲ, ಪ್ರತಿ ಜಿಲ್ಲೆಯಲ್ಲೂ ಹತ್ತಾರು ಲಾರಿಗಳನ್ನಿಟ್ಟು ಸುಲಭ ದರದಲ್ಲಿ ಹೊಲಕ್ಕೆ ಗೊಬ್ಬರ ಸಾಗಿಸಲು ಆ ಲಾರಿಗಳನ್ನು ಒದಗಿಸಬೇಕು. ಹಾಗೆ ಮಾಡಿ ಗೊಬ್ಬರದ ಸಮಸ್ಯೆಯನ್ನು ಪರಿಹಾರ ಮಾಡಬಹುದು.

ಅರಣ್ಯದಲ್ಲಿ ಈಗ ಯಾವುದೋ ಜಾತಿಯ ಮರಗಳನ್ನು ಬೆಳೆಸುತ್ತಿದ್ದಾರೆ, ಇದು ಸರಿಯಿಲ್ಲ, ಮಾವು, ಹಲಸು, ಹುಣಿಸೆ ಮುಂತಾದ ಮರಗಳ ಅಭಾವವಿದೆ, ಅವುಗಳನ್ನೂ ಹೊಂಗೆ ಹಿಪ್ಪೆ ಮುಂತಾದ ಮರಗಳನ್ನೂ ಬೆಳೆಸಬೇಕು ಎಂದು ಸಲಹೆ ಮಾಡುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ನಮ್ಮ ಮುಂದೆ ಮಂಡಿಸಿರುವ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೂ ಅರಣ್ಯ ಶಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತೇನೆ. ಮುಖ್ಯವಾಗಿ ಮೊದಲು ವ್ಯವಸಾಯದ ಇಲಾಖೆ ವಿಚಾರ ಪ್ರಸ್ತಾಪಿಸುತ್ತೇನೆ. ಅನೇಕ ವರ್ಷಗಳಿಂದ ಈ ಮನೆಯಲ್ಲಿ ಮಾನ್ಯ ಸದಸ್ಯರೆಲ್ಲರೂ ಕೂಡ ವ್ಯವಸಾಯಾಭಿವೃದ್ಧಿಗೆ ಮಾತ ವರ್ಜಿ ಸಾಲದು, ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲ, ರೈತರಿಗೆ ಬೇಕಾಗಿರುವ ಸೌಲತ್ತು ಸಿಕ್ಕುತ್ತಿಲ್ಲ, ಇದನ್ನು ತ್ವರಿತಗೊಳಿಸಬೇಕು, ಎಲ್ಲಾ ಖಾತೆಗಳಿಗಿಂತ ವ್ಯವಸಾಯ ಖಾತೆ ಅಭಿವೃದ್ಧಿಯಾಗಬೇಕು, ಈ ಖಾತೆಯ ಅಭಿವೃದ್ಧಿಯಾದರೆ ಜನರ ಸಂಪತ್ತೂ ಅಭಿವೃದ್ಧಿಯಾಗುವುದು ಎಂದು ಹೇಳುತ್ತಿದ್ದೇವೆ. ಆದರೆ ಬರಿ ಭಾಷಣವಾಗಿದೆಯೇ ಹೊರತು ವ್ಯವಸಾಯ ಚೆನ್ನಾಗಿ ಆಗಿ ಹೆಚ್ಚು ಆಹಾರ ಬೆಳೆಯುತ್ತಿಲ್ಲ, ಗುರಿ ಮುಟ್ಟುತ್ತಿಲ್ಲ ಎಂದು ಒಪ್ಪಿಕೊಳ್ಳಬೇಕಾಗಿದೆ. ಆಹಾರ ಬೆಳೆಯಬೇಕಾದರೆ ಎಷ್ಟೋ ಕಷ್ಟವಿದೆ, ಸೌಲತ್ತು ಕೊಡುವುದು ಏನೂ ಸಾಲದು, ಅದರ ಬಗ್ಗೆ ಕ್ರಾಂತಿಕಾರಕವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲಾಖೆ ಅಧಿಕಾರಿಗಳು ಯಾರೇ ಆಗಲಿ, ಅವರವರ ಭಾಗದಲ್ಲಿ ಅವರು ಜವಾಬ್ದಾರಿಯಿಂದ ಕೆಲಸ ಮಾಡಿ ವ್ಯವಸಾಯಕ್ಕೆ ಹೆಚ್ಚು ಗಮನ ಕೊಡದಿದ್ದರೆ ಸರ್ಕಾರ ವರದಿ ನೋಡಿ ಅಂಕಿ ಅಂಶ ನೋಡಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಈಗ ಅಭಾವ ಬಂದ ಕಾರಣ ಎಲ್ಲಾ ಜಿಲ್ಲೆಗಳಲ್ಲೂ ನೀರಾವರಿ ಇರುವ ಕಡೆ ಬೇಸಿಗೆ ಫಸಲನ್ನು ಕಡ್ಡಾಯವಾಗಿ ಇಡಬೇಕು ಎಂದು ಒಂದೊಂದು ಜಿಲ್ಲೆಯನ್ನು ಒಬ್ಬೊಬ್ಬ ಮಂತ್ರಿ ವಹಿಸಿಕೊಂಡು ಅದನ್ನು ನೋಡಿಕೊಳ್ಳುತ್ತಿದ್ದಾರೆ. ಇದನ್ನು ವಹಿಸಿಕೊಂಡ ಮೇಲೆ ಆಯಾಯ ಜಿಲ್ಲೆಯಲ್ಲಿ ಎಷ್ಟರ ಮಟ್ಟಿಗೆ ನೀರಿನ ಸೌಲಭ್ಯ ಇದೆ, ನೀರು ಉಪಯೋಗ ಮಾಡಿದ್ದಾರೆಯೇ, ಎಷ್ಟು ಎಕರೆ ಬೆಳೆದಿದ್ದಾರೆ, ಬೇಸಿಗೆ ಫಸಲು ಹಾಕಿದ್ದಾರೆಯೇ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸಚಿವರು ಈ ಚರ್ಚೆಗೆ ಉತ್ತರ ಕೊಡುವಾಗ್ಗೆ ತಾಲ್ಲೂಕುವಾರು ಎಷ್ಟು ಫಸಲು ಮಾಡಿದ್ದಾರೆ ಎಂಬುದನ್ನು ಅಂಕಿಅಂಶಗಳಿಂದ ಇಲ್ಲಿ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಕಟ್ಟಾಜ್ಞೆಯಾಗಿ ನೀರಾವರಿ ಪ್ರದೇಶದಲ್ಲಿ ಹೊರಗಡೆಯಿಂದ ಕೆಲವು ಅಧಿಕಾರಿಗಳನ್ನು ಡೆಪ್ಯೂಟ್ ಮಾಡಿದ್ದಾರೆ. ಈ ವಿಚಾರದಲ್ಲಿ ಗುರಿ ಮುಟ್ಟಿದ್ದಾರೆಯೇ ಇಲ್ಲವೇ ಯಾವ ತಾಲ್ಲೂಕಿನಲ್ಲಿ ಚೆನ್ನಾಗಿ ಮಾಡಿದ್ದಾರೆ ಎಂಬುದಕ್ಕೆ ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ರೈತ ಏತಕ್ಕಾಗಿ ಆಹಾರ ಧಾನ್ಯ ಹೆಚ್ಚಿಗೆ ಬೆಳೆಯುವುದರಲ್ಲಿ ಮನಸ್ಸು ಹಾಕಿಲ್ಲ ಎಂಬುದನ್ನು ಪ್ರಸ್ತಾಪ ಮಾಡುತ್ತೇನೆ. ಇಂದು ರೈತನಲ್ಲಿ ಉತ್ಸಾಹ ಇಲ್ಲ. ಯಾಕೆಂದರೆ ಬೆಳೆದಂಥ ಫಸಲಿಗೆ ಇಂದು ಸರಿಯಾದ ಧಾರಣೆ ಇಲ್ಲ. ಆದುದರಿಂದ ರೈತ ಬಾಗಾಯತು ವ್ಯವಸಾಯ ಮಾಡುವುದಕ್ಕೆ ಮನಸ್ಸು ಮಾಡಿದ್ದಾನೆ. ಬರೀ ಲಾಭದಾಯಕವಾದ ತೋಟ ಮಾಡುವುದರಲ್ಲಿ ಇದ್ದಾನೆ. ಇದನ್ನು ಸರ್ವೇ ಮಾಡಲಾಗಿದೆಯೇ ? ಒಂದು ಎಕರೆ ಭತ್ತ ಬೆಳೆಯುವುದಕ್ಕೆ ಎಷ್ಟು ಖರ್ಚು ಬರುತ್ತದೆ ಲೆಕ್ಕ ಹಾಕಿದರೆ ಇದು ಸರಿಯಾಗಿ ಗೊತ್ತಾಗುತ್ತದೆ. ಒಂದು ಎಕರೆಗೆ ಒಟ್ಟು ಖರ್ಚು 548 ರೂಪಾಯಿ ಬರುತ್ತದೆ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಇದರಲ್ಲಿ ಉತ್ಪತ್ತಿ 12 ಪಲ್ಲಾ ಬರುತ್ತದೆಂದು ಲೆಕ್ಕ ಹಾಕಿದರೆ ಇವತ್ತಿನ ಧಾರಣೆಯಂತೆ ಒಂದು ಪಲ್ಲಾಕ್ಕೆ 50 ರೂಪಾಯಿನಂತೆ ಒಟ್ಟು 600 ರೂಪಾಯಿ ಉತ್ಪತ್ತಿ ಆಗುತ್ತದೆ. ಅಂದರೆ ರೈತನಿಗೆ ಖರ್ಚು ವೆಚ್ಚ ಹೋಗಿ 52 ರೂಪಾಯಿ ಉಳಿತಾಯವಾಗುತ್ತದೆ. ಇದು ಮುಂದಿನ ವರ್ಷದ ಬೀಜಕ್ಕೆ ಕೂಡ ಸಾಲುವುದಿಲ್ಲ. ರೈತ ಉಪವಾಸ ಸಾಯಬೇಕಾಗುತ್ತದೆ. ನಾನು ಸ್ವತಃ ರೈತನಾಗಿರುವುದರಿಂದ ಇದನ್ನು ಜವಾಬ್ದಾರಿಯಿಂದ ಹೇಳುತ್ತೇನೆ. ನಾನು ಬೇರೆ ವ್ಯವಹಾರ ಮಾಡುವುದಿಲ್ಲ ನನಗೆ ಬಿಜಿನೆಸ್ಸು ಇಲ್ಲ. ನಾನು ಸ್ವಂತ ವ್ಯವಸಾಯಗಾರನಾಗಿದ್ದು ನಾನು ಸ್ವಂತ ಕೆಲಸ ಮಾಡುತ್ತೇನೆ. ಆದುದರಿಂದ ನಾನು ಹೇಳುವ ಈ ಅಂಶವನ್ನು ಸರ್ಕಾರ ಪರಿಶೀಲಿಸಬೇಕು. ಸುಮ್ಮನೆ ಅನ್ಯಾಯವಾಗಿ ಪರದೇಶದಿಂದ ಗೋಧಿ ಮೊದಲಾದ ಆಹಾರ ಧಾನ್ಯ ಆಮದು ಮಾಡಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದರ ಬದಲು ರೈತನಿಗೆ ವ್ಯವಸಾಯಕ್ಕಾಗಿ ಬೇಕಾಗುವ ಅನುಕೂಲತೆ ಸಿಕ್ಕುವಂತೆ ವ್ಯವಸ್ಥೆ ಏತಕ್ಕೆ ಮಾಡಬಾರದು ಎಂಬುದನ್ನು ಸರ್ಕಾರ ಯೋಚನೆಮಾಡಬೇಕು. ಓಪನ್ ಮಾರ್ಕೆಟ್ಟಿನಲ್ಲಿ ಒಂದು ಕೆ. ಜಿ, ಅಕ್ಕಿಗೆ ಒಂದೂವರೆ ರೂಪಾಯಿ ಬೆಲೆ ಇದೆ. ಈ ರೇಟನ್ನು ರೈತನಿಗೆ ಏತಕ್ಕೆ ಕೊಡಬಾರದು ? ಒಂದು ಪಲ್ಲ ಭತ್ತಕ್ಕೆ 75 ರೂಪಾಯಿ ರೇಟು ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ. ಹೆಚ್ಚು ಆಹಾರ ಬೆಳೆದು ನಾವು ಸಮೃದ್ಧಿಯಿಂದ ಇರಬೇಕಾದರೆ ಕೊನೆಯ ಪಕ್ಷ ಒಂದು ಪಲ್ಲ ಭತ್ತಕ್ಕೆ 75 ರೂಪಾಯಿ ರೇಟು ನಿಗದಿ ಮಾಡಬೇಕು ಮತ್ತು ಈ ರೇಟು ಕೊಡುತ್ತೇವೆಂದು ಪ್ರಕಟ ಮಾಡಿದರೆ ರೈತನ ಮುಂದಿನ ವರ್ಷಕ್ಕಾದರೂ ಚೆನ್ನಾಗಿ ಕೆಲಸ ಮಾಡಿ ಹೆಚ್ಚು ಆಹಾರ ಬೆಳೆಸಲು ಈಗಿನಿಂದಲೇ ಪ್ರಯತ್ನ ಮಾಡುತ್ತಾನೆ. ಒಟ್ಟಿನಲ್ಲಿ ರೈತನಿಗೆ ಪ್ರೋತ್ಸಾಹ ಮತ್ತು ಅನುಕೂಲತೆ ಮಾಡಿಕೊಡುವುದಕ್ಕಾಗಿ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆ ಬಗ್ಗೆ ಹೇಳುವುದಾದರೆ ಸಚಿವರು ತಮ್ಮ ಕೆಲಸ ಕಾರ್ಯಗಳನ್ನು ಬಹಳ ಚೆನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಸಾಗುವಳಿಗೆ ಜಮೀನು ರಿಲೀಜ್ ಮಾಡಿಕೊಡುತ್ತಿದ್ದಾರೆ. ಅವರ ಗಮನಕ್ಕೆ ಒಂದು ವಿಷಯ ತರಲು ಬಯಸುತ್ತೇನೆ. ಅರಣ್ಯ ಇಲಾಖೆಯಲ್ಲಿರುವ ಗೋಮಾಳ ಜಮೀನು ಸಾಗುವಳಿಗೆ ಲಾಯಖ್ ಜಮೀನು ಎಂದು ರಿಕಾರ್ಡು ಆಗಿದೆ. ಆದರೆ ಅದು ಇದುವರೆಗೆ ರಿಲೀಜ್ ಆಗಿಲ್ಲ. ಇದನ್ನು ಬೇಗನೆ ರಿಲೀಜ್ ದಯವಿಟ್ಟು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಆ ಜಮೀನುಗಳ ಹೆಸರು ಹೇಳುತ್ತೇನೆ. ಗಂಗೂರು ಫಾರೆಸ್ಟು, ಭದ್ರಾವತಿ ತಾಲ್ಲೂಕು, ಬಿಸಿಲುಮನೆ ಫಾರೆಸ್ಟು, ಸಿದ್ದಾಪುರ, ಸ. ನಂ. 135-136 ಮಲ್ಲಿಗೇನಹಳ್ಳಿ ಸರ್ವೇ ನಂಬರು 12. ಇದು ರಿಕಾರ್ಡು ಆಗಿ 5 ವರ್ಷವಾಯಿತು. ಕಂದಾಯ ಕೊಡುತ್ತಿದ್ದಾರೆ. ಈ ಜಮೀನಿನಲ್ಲಿ ಸಾಗುವಳಿ ಮಾಡಿದ್ದರೆ ಆಹಾರ ಉತ್ಪತ್ತಿಯಾಗುತ್ತಿತ್ತು. ಈ ಜಮೀನುಗಳ ರಿಕಾರ್ಡು ತರಿಸಿ ಕೂಡಲೇ ರಿಲೀಜ್ ಮಾಡಿ ವ್ಯವಸಾಯಕ್ಕೆ ಅನುಕೂಲಮಾಡಿಕೊಡಬೇಕು. ಈ ಪ್ರಕರಣಗಳನ್ನು ಇತ್ಯರ್ಥ ಮಾಡುವುದಕ್ಕಾಗಿ ಫೈರ್ ಮತ್ತು ಸಿಬ್ಬಂದಿ ಜೊತೆಗೆ ಮಂತ್ರಿಗಳು ಸ್ಥಳಕ್ಕೆ ಪ್ರಯಾಣ ಮಾಡಿ ಅಲ್ಲಿಯೇ ಇತ್ಯರ್ಥ ಮಾಡಿದರೆ ಅನುಕೂಲವಾಗುತ್ತದೆ ಎಂದು ಸಚಿವರಿಗೆ ತಿಳಿಸಲು ಬಯಸುತ್ತೇನೆ. ಸಚಿವರು ತಹಶೀಲದಾರ್ ಮತ್ತು ಅಧಿಕಾರಿಗಳನ್ನು ನಂಬಿಕೊಂಡು ಕುಳಿತರೆ ಕಾಲಹರಣವಾಗುತ್ತದೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

†Sri ALLUM KARIBASAPPA (Kurugodu).—While supporting the Demands, I should like to say a few words only on agriculture because I do not know anything about forest and fisherise. Sir, we are all aware that our country is having 80 per cent of Agriculturists and we are also aware that crores of rupees are being spent on agriculture. I have to mention here that many officers concerned, are not doing job with real spirit. I have got personal experience about this. In Bellary District, the Agricultural officer is not discharging his duties properly to help the ryots and support the food production. In many cases the ryots have to go to take the fertilizess and stay for 4 to 5 days at Bellary though the stock will be there. The Officer does not care that it is properly supplied in time to help the ryots. This is one of the greatest draw

backs that I have come across with many of the Officers in the Department. This has to go and until and unless the officers are concerned work sincerely I am doubtful that agriculture will succeed. Therefore I request the Government to see that the Department has to be tuned up throughout the state as far as possible. I do not say that all officers are bad. Some Officers are brilliant and discharging their duties properly but at the same time there are officers who do not do their duties properly. Such draw backs should be set right immediately in the interst of our country. Sir, I feel it is advisible that the Government should start a special Department with qualified officers to tour the interior parts of the State and to teach the royts the modern methods of agriculture because the Agriculturists are mostly illiterate and ignorant of the latest methods. This will help a great deal and there will be more production by this type of introduction of a special Department.

One more point I want to stress and finish is about the supply of fertilizers in time. I request the Government to supply the fertilizers in time, so that there will be no trouble for ryots. Thank you.

5-30 P.M.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಒಟ್ಟಿನಲ್ಲಿ ವ್ಯವಸಾಯದ ಬಗ್ಗೆ ಈಗಿರುವ ಪರಿಸ್ಥಿತಿಯಲ್ಲಿ ಏನಾಗಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಪ್ರಪಂಚದಲ್ಲೇ, ಎಲ್ಲಾ ದೇಶಗಳಲ್ಲೂ ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತು. ಈಗ ಏನಾಗಿದೆಯೆಂದರೆ, ಜಮೀನಿನ ವಿಸ್ತೀರ್ಣವನ್ನು ಜಾಸ್ತಿ ಮಾಡುವುದಕ್ಕೆ ಹೊರಟಿದ್ದಾರೆ. ಈ ರೀತಿ ಮಾಡಿದರೆ 2 ವರ್ಷದ ನಂತರ ಜಾಸ್ತಿ ಬೆಳೆಯುವುದಕ್ಕೆ ಸಾಧ್ಯವೆಂದು ತಿಳಿದುಕೊಂಡಿದ್ದಾರೆ. ಕೆಲವು ಕಡೆ ಕಾಡುಗಳನ್ನೆಲ್ಲಾ ತೆಗೆದು ವ್ಯವಸ್ಯಾಯಕ್ಕೆ ಜಮೀನನ್ನು ಪರಿವರ್ತನೆ ಮಾಡುತ್ತಾರೆ, 2 ವರ್ಷದ ನಂತರ ಆ ಭೂಮಿ ಒಂದು ರಾಸಾಯನಿಕ ಕಾರ್ಖಾನೆ ಇದ್ದ ರೀತಿಯಾಗುತ್ತದೆ. ಈಗ ಇನ್‌ಟೆನ್‌ಸಿವ್ ಕಲ್ಟಿವೇಷನ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹಿಂದಿನ ಕಾಲದ ಜನಜೀವನವನ್ನು ನೋಡಿದರೆ, ಯಾರಾದರೂ ಒಬ್ಬ ರೈತ ಮುಂದೆ ಬಂದರೆ, ಎಲ್ಲರೂ ಸೇರಿಕೊಂಡು ಅವನನ್ನು ಹಾಳು ಮಾಡುತ್ತಿದ್ದರು, ಆದರೆ ಈಗ ಆ ರೀತಿಯ ಭಾವನೆ ಯಾರಿಗೂ ಇರದೆ ಎಲ್ಲರೂ ಆಧುನಿಕ ಯಂತ್ರಗಳನ್ನು, ತಾಂತ್ರಿಕ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಒಟ್ಟಾಗಿ ಕೆಲಸಮಾಡುವ ಒಂದು ಭಾವನೆ ಮೂಡಿ ಬಂದಿದೆ. ಈಗ ಒಂದು ಕಡೆ ಅನ್‌ಇಕನಾಮಿಕ್ ಹೋಲ್ಡಿಂಗ್ಸ್ ಎಂದು, ಇನ್ನೊಂದು ಕಡೆ ಕನ್ಸಾಲಿಡೇಷನ್ ಎಂದು ಇದೆ. ಈ ರೀತಿ ಇರಬಾರದು. ವಾಸ್ತವ ಪ್ರಪಂಚದಲ್ಲಿ ಏನಾಗಿದೆ ನೋಡೋಣ. ಮುಂದುವರಿದ ದೇಶಗಳಲ್ಲಿ ರೈತನಿಗೆ ಬೇಕಾದ ಟ್ರಾಕ್ಟರ್‌ಗಳನ್ನು ಕೊಟ್ಟು ಹೆಚ್ಚು ಆಹಾರವನ್ನು ಬೆಳಿಯಲು ಅನುಕೂಲ ಮಾಡಿ ಕೊಡುತ್ತಾರೆ. ಹತ್ತಾರು ವರ್ಷಗಳ ನಂತರ ಆ ಜಮೀನನ್ನು ಸರ್ಕಾರದವರೇ ತೆಗೆದುಕೊಳ್ಳಬಹುದು. ಆದರೆ ನಮ್ಮದು ಬೇರೆ ದೇಶ. ಇಲ್ಲಿ ಸಮಾಜವಾದ ಇದೆ. ನಮ್ಮದು ಅಂಡರ್‌ಡೆವಲಪ್‌ಡ್ ಕಂಟ್ರಿ. ಕೈಗಾರಿಕೆ ಭಾಗದಲ್ಲಿ ಸಾಕಷ್ಟು ಮುಂದುವರೆದಿಲ್ಲ. ಈ ದೃಷ್ಟಿಯಿಂದ ಆಳವಾಗಿ ಯೋಚನೆ ಮಾಡಬೇಕಾದ್ದು ಒಳ್ಳೆಯದು. ನಮ್ಮಲ್ಲಿ ಎಲ್ಲೆಲ್ಲಿ ಮೈದಾನ ಪ್ರದೇಶಗಳು ಇವೆಯೋ ಅಲ್ಲಿ ಸರಿಯಾಗಿ ಮಳೆಯಾದರೆ ಹೆಚ್ಚು ಬೆಳೆಯಾಗುತ್ತದೆ. ಬೆಟ್ಟದ ಕಡೆಗಳಲ್ಲಿ ಈಗ ಮಳೆ ಕಡಿಮೆಯಾಗುತ್ತಾ ಹೋಗುತ್ತಿದೆ. ಈಗ 5-10 ವರ್ಷಕ್ಕೆ ಒಂದು ಸಾರಿ ಮೈದಾನದ ಕಡೆ ಮಳೆ ಬರುವುದು ಕಷ್ಟವಾಗಿದೆ. ಫಾರಿನ್ ಎಕ್ಸ್‌ಛೇಂಜ್ ಬೆಳೆಗಳನ್ನು ಮಳೆ ಕಡಿಮೆಯಾದಾಗ ಬೆಳೆಯುತ್ತಾರೆ. ಆದರೆ ಆಹಾರ ದೃಷ್ಟಿಯಿಂದ ನೋಡುವುದಾದರೆ, ನಮ್ಮ ಗುಬ್ಬಿ ತಾಲ್ಲೂಕ್ ಮೈದಾನ ಪ್ರದೇಶದಲ್ಲಿರುವರಿಂದ ಮಳೆ ಕಡಮೆ. ಹಾಗಲವಾಡಿ ಭಾಗದಲ್ಲಿ, ಸಿರಾದ ಭಾಗದಲ್ಲಿ ಯಾವಾಗಲೂ ಮಳೆ ಕಡಮೆ. 3-4-5-10 ವರ್ಷಕ್ಕೆ ಒಂದು ಸಾರಿ ಪೂರ್ಣ ಬೆಳೆ ಬರುವುದು ಕಷ್ಟವಿವೆ. ಇಂತಹ ಜಾಗಗಳಲ್ಲಿ ಮೇಜರ್, ಮೈನರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಕೈಗೊಳ್ಳುವುದರ ಜೊತೆಗೆ ಹೆಚ್ಚು ಹೆಚ್ಚು ಬಾವಿಗಳನ್ನು ತೋಡಿಸಬೇಕು. ಸರ್ಕಾರದವರನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ರೈತರೇ ದುಡ್ಡು ಕೊಟ್ಟು ಬಾವಿಗಳನ್ನು

(ಶ್ರೀ ಪಿ. ಎಂ. ದೇವ್)

ತೆಗೆಸಲು ತೊಂದರೆಯಾಗುವುದರಿಂದ ಸರ್ಕಾರದವರೇ ತೆಗೆಸಬೇಕು ಮತ್ತು ಒಬ್ಬ ಏಜೆಂಟ್‌ನನ್ನು ನೇಮಕ ಮಾಡಿ, ಅವನ ಮುಖಾಂತರ ರೈತರಿಗೆ ಬೇಕಾದ ಉಪಕರಣಗಳನ್ನು ಕೊಡಿಸಬೇಕು, ಕೆರೆಗಳ ಸುತ್ತಲೂ ನಾಲ್ಕು ನಾಲ್ಕು ಬಾವಿಗಳನ್ನು ತೆಗೆಸಿ, 100 ಹಾರ್ಸ್ ಪವರ್ ಇರುವ ಪಂಪ್‌ಗಳನ್ನು ಹಾಕಿ ಕೊಟ್ಟರೆ ಹೆಚ್ಚು ಬೆಳೆ ಬೆಳೆಯುತ್ತಾರೆ. ಹೆಚ್ಚು ಬೆಳೆ ಬೆಳೆದಾಗ ಹೆಚ್ಚು ಕಂದಾಯವನ್ನು ಕೊಡುತ್ತಾರೆ. ಇದೇ ಕಂದಾಯದ ಹಣದಿಂದ ಮತ್ತೆ ಬೇಕಾದರೆ ಬಾವಿಗಳನ್ನು ತೋಡಿಸಬಹುದು. ಈ ಕೆಲಸಗಳನ್ನು ದಳ್ಳಾಳಿ ಕಂಟ್ರಾಕ್ಟರ್‌ಗಳ ಮೂಲಕ ಮಾಡಿಸಿದರೆ ಉಪಯೋಗವಾಗುವುದಿಲ್ಲ. ದೂರದ ದೃಷ್ಟಿಯಿಂದ ನಾವು ಆಹಾರ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟವಾಗುತ್ತದೆಯೆಂದು ನನ್ನ ಭಾವನೆ. ಇದನ್ನು ನಿವಾರಣೆ ಮಾಡಲು ಕೆಮಿಕಲ್ ಇಂಡಸ್ಟ್ರಿಗಳು ಹೆಚ್ಚಾಗಬೇಕು. ಪೂರ್ವ ಕಾಲದ ವ್ಯವಸಾಯ ಉಪಕರಣಗಳನ್ನು ಉಪಯೋಗಿಸದೆ ಆಧುನಿಕ ಉಪಕರಣಗಳನ್ನು ಉಪಯೋಗಿಸಬೇಕು. ರೋಗಗಳು ಬರದಂತೆ ಕ್ರಿಮಿನಾಶಕವಸ್ತುಗಳನ್ನು ಉಪಯೋಗಿಸಬೇಕು. ಈಗಿರುವ ವ್ಯವಸಾಯದ ಕ್ರಮ ಸಂಪೂರ್ಣವಾಗಿ ಬದಲಾಗಬೇಕು. ಯಾವ ರೀತಿ ಮಾರ್ಪಾಡು ಮಾಡಿದರೆ ಹೆಚ್ಚು ಬೆಳೆಯಬಹುದು ಎಂದು ಯೋಚನೆ ಮಾಡಬೇಕಾಗಿದೆ. ಈಗಾಗಲೆ ಅನೇಕ ರೈತರಿಗೆ ಸಾಲಗಳನ್ನು ಕೊಟ್ಟಿದ್ದೀರಿ. ಇದರ ಪೈಕಿ ಕೆಲವು ಭಾಗ ವಸೂಲು ಆಗುವುದಿಲ್ಲ. ಹಿಂದಿನ ಕಾಲದಲ್ಲಿ 10-20 ಹಳ್ಳಿಗಳಿಗೆ ಒಬ್ಬ ಗೌಡನಿರುತ್ತಿದ್ದ. ಅವನೇ ಎಲ್ಲರಿಗೂ ಸಾಲ ಕೊಟ್ಟು ಹತ್ತಾರುವರ್ಷಗಳ ನಂತರ ಎಲ್ಲಾ ಜಮೀನುಗಳನ್ನೂ ತನ್ನ ಹೆಸರಿಗೆ ಮಾಡಿಸಿಕೊಳ್ಳುತ್ತಿದ್ದ. ಸರ್ಕಾರದವರು ಕೊಡುವ ಸಾಲದಿಂದಲೂ ಸಹ ಅವನು ಸರಿಯಾಗಿ ಬೆಳೆ ಬೆಳೆಯದೆ ಅವನಿಗೆ ಸಾಲ ತೀರಿಸುವುದು ಕಷ್ಟವಾಗಿದೆ. ಈಗ ಸೀಡ್ಸ್ ಫಾರಮ್ ಮತ್ತು ಸ್ಟೇಟ್ ಫಾರಮ್ ಮಾಡಬೇಕೆಂದು ಮಾಡಿದ್ದೀರಿ. ಒತ್ತಾಯದಿಂದ ರೈತನಿಂದ ಬೆಳೆ ಬೆಳೆಸುವುದಕ್ಕೆ ಆಗುವುದಿಲ್ಲ. ಸೀಡ್ಸ್ ಫಾರಮ್ ಏನಾದರೂ ಮಾಡಿದರೆ ಒಂದು ಕಾನೂನಿನ ಮೇಲೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಯಾರು ಯಾರು ಸಾಲವನ್ನು ಸರಿಯಾಗಿ ತೀರಿಸುವುದಿಲ್ಲವೋ ಅವರಿಂದ ಬಡ್ಡಿಯನ್ನು ಲೆಕ್ಕ ಹಾಕಿ ವಸೂಲು ಮಾಡುತ್ತಿದ್ದೀರಿ, ಅದು ತಪ್ಪು ಎಂದು ಹೇಳುತ್ತೇನೆ. ಹಿಂದಿನ ಕಾಲದಲ್ಲಿ ಕೆಲವರು ಜಮೀನನ್ನು ಮಾಡಿಸಲು ಕೂಲಿ ಕೊಟ್ಟು ಜನರನ್ನು ನೇಮಿಸಿಕೊಳ್ಳುತ್ತಿದ್ದರು. ಅದೇ ರೀತಿ ಸರ್ಕಾರದವರು ರೈತರುಗಳಿಗೆ ಸಂಬಳ ಕೊಟ್ಟು ಜಮೀನನ್ನು ಮಾಡಿಸಬೇಕು. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಮೊದಲಾದವರನ್ನು ರೈತರಿಗೆ ಆಧುನಿಕ ವ್ಯವಸಾಯವನ್ನು ಹೇಳಿಕೊಡಲು ನೇಮಿಸಬೇಕು. 3-4-5-6 ವರ್ಷಗಳ ನಂತರ ಆ ರೈತರು ತಮ್ಮ ಹಣದಿಂದ ಜಮೀನನ್ನು ಬೇಕಾದರೆ ಕೊಳ್ಳಬಹುದು, ಮತ್ತು ನಿಮ್ಮ ಅಧಿಕಾರಿಗಳ ಎಫಿಸಿಯನ್ಸಿಯು ಕೂಡ ಗೊತ್ತಾಗುತ್ತದೆ. ದೇಶದಾದ್ಯಂತ ಭೂಮಿಯನ್ನು ಛಿದ್ರಛಿದ್ರವಾಗಿ ಮಾಡುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಟ್ಟರೆ ಹೆಚ್ಚಿನ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ದೊಡ್ಡ ಹಿಡುವಳಿ ಒಬ್ಬ ರೈತನಿಗೆ ಇದ್ದರೆ, ಒಬ್ಬನಿಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಎಲ್ಲರನ್ನೂ ಸೇರಿಸಿಕೊಂಡು, ಎಲ್ಲರೂ ತನ್ನ ಅಣ್ಣತಮ್ಮಂದಿರು ಎಂದು ತಿಳಿದುಕೊಂಡು ಆಧುನಿಕ ವ್ಯವಸಾಯ ಉಪಕರಣಗಳನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯುವುದಕ್ಕೆ ಇಷ್ಟ ಪಡುತ್ತಾನೆ. ಇನ್ನೊಂದು ವಿಚಾರ, ಇದಕ್ಕೆ ಒಂದಕ್ಕೊಂದಕ್ಕೆ ನಿಕಟವಾದ ಸಂಬಂಧವಿರುವುದರಿಂದ ವಿಲೇಜ್ ಲೆವೆಲ್ ಗೌರ್ನಮೆಂಟಿನವರು ಏನು ಹೇಳುತ್ತಾರೋ ಅದಕ್ಕೆ ಅನುಗುಣವಾದ ಬದಲಾವಣೆಗಳು ಆಗಬೇಕು. ಇಷ್ಟು ಹೇಳಿ ಅಧ್ಯಕ್ಷರು ನನಗೆ ಇಷ್ಟು ಸಮಯ ಕೊಟ್ಟಿದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri R. M. DESAI (Bilgi).—Mr. Speaker, Sir in supporting the Demand on Agriculture for 1966-67. I wish to make some observations. If we look to the discussions held in this House, Sir, I think we have got a mind to grow foodgrains and the Government also is in a position to help the raiyats to a certain extent. The Department concerned is very eager to help us. I think there should be a sort of adjustment so that we may achieve the results. Looking to the State requirements of food, we require about 48 lakhs tons of foodgrains every year normally, and the shortage we are experiencing is not more than 3 to 4 lakhs tons. Looking to the cultivable area and the sown area and the area on which we are mainly growing the foodcrops, I do not think it will be a difficult problem to grow what we require, not in the three-year scheme that has

been thought of by our Government, but in the three crop seasons even. I am rather optimistic about it. Sir, in the book about the review of the working of Government Departments with special reference to Development in 1966, some points have been given to us on which we have laid a let of stress. I think they are self-explanatory. The eight points laid down under Agriculture are the following :

1. Reclamation of land by tractors and bulldozers.
2. Bringing more area under irrigation.
3. Developing local manurial resources.
4. Use of fertilisers
5. Use of improved seeds
6. Adoption of improved agronomic practices
7. Plant protection
8. Soil conservation.

I would like to add one more thing and that is economic aid to the farmer. Of course in the speech delivered by our Hon'ble Finance Minister he has stated in para 31 that short term loan to the former is also being thought of and for which our State Government are approaching the Central Government. I think they will get it. We have only to think of the inputs that are required to produce in the land. Sir, in the matter of agriculture, what we have to think in our country is rather from a different angle. First we have got to lay stress on our food problem and food production and how we are to graw more. Taking into consideration the inputs that we are going to have on the land, how best that can be adopted and where it should be adopted is a matter that should receive our serious attention. Why I state this is we should not go on the presumption that every former is eligible to recive all the help necessary. We should restrict the help as such or the input as such to such of those areas where we can achieve the best results. Let us not say that the big farmers should not get it and it must go to small marmers ; we must not be choosey about it. Whoever does the job and shows result should be helped and that should be the criterion. Ours is a socialistic pottern of society and we must cut down the pockets of big people should not be the criterion. For the present what all we want is more food production and we should not look to others in these matters.

Sir, after making these general observations, I must say that if we concentrate our efforts on certain areas to grow more food, I think we can overcome the difficulty. As regards our area, that is, Ghataprabha Left bank Channel irrigation area, it is really developing into a very prosperous area and it is giving us a very blooming picture. We are adopting almost all the modern techniques of agriculture and treatment of water ; improved agronomic practices are also being adopted there. But the supply of bulldozers is a question which will never be solved by us and cannot be solved practically. We have used the water to the best of our capacity by the simple method of border strip irrigation and

(SRI R. M. DESAI)

it has proved successful. I go to the extent of requesting our Government to think very seriously adopting it even on dry lands also. It helps the land and also it solves soil conservation problem. It really teaches the farmer how best to use water which has been allotted to him.

Much is talked of Tungabhadra area. Much has been given to the Tungabhadra area and much is being envisaged to be given to Tungabhadra area. I think some step-motherly attitude is being taken by the Government in respect of other projects. But Tungabhadra project has not shown good results though it was taken up since a long time. But Ghataprabha within a very short period has come up and it is full of promise to the cultivators. I request the Government to please consider this aspect and give the necessary encouragement to that area so that we will be able to really produce more. The total irrigable area under Ghataprabha is about 2 lakhs acres. Taking our normal production at 45 lakhs tons of foodgrains, the shortage is only 3 to 4 lakhs tons. If the necessary encouragement is given to us, I think we can produce 4 lakhs tons of food grains in that particular area only. I do not mean to say that Tungabhadra area should not be developed or Bhadra area should not be developed. But let them specialise themselves in certain production programmes which is very necessary now.

For food production programme, I wish to suggest one or two things The disparity between the price structure of food crops and cash crops as we call is also inducing the farmer to switch on to cash crops rather than food crops. Government should devote its serious attention to see that this disparity is brought to the minimum. In the Thungabhadra area what I have observed is, most of the area is benefited by the cultivation of oil-reeds like ground-nut, because it has become very lucrative, because the price factor is very attractive. So, to remove this disparity or inducement to the farmer, I think a little higher price to the foodgrains is necessary.

Looking to our Food Minister's statement, whatever he has given as procurement price and ceiling price, at least that difference should be paid to us rather than the middle-man having it.

As regards plant protection scheme, I wish to say one thing. By way of illustration I would say that for oil-seeds production, some subsidy is given for the spraying and medicines. But there is no such subsidy in the case of foodgrains wherever we use these insecticides. Some policy should be adopted whereby in the case of foodgrains also, subsidy should be given for any insecticides and pesticides, in the same manner as it is done in the case of commercial crops.

I am really very sorry to say that our Chief Minister is not here. He has to answer to what we say today and unfortunately our Agriculture Minister is now in the U.S.A. who should have replied to the House. The Chief Minister also is absent. Any way, I hope our views will be taken by the Government very seriously and and attended to.

One or two matters with regard to hybrid seeds. Sir, this is closely related to the problem of food—the programme for growing hybrid seeds. In this book, Review of the Working of the Government Departments, there is a scheme mentioned wherein there is acreage figures given. Actually what we have done is something different this time. The total acreage under the seed programme this time has been given to the National Seed Corporation which supplies the fonudation seeds. The acreage under jawar, bajra, maize are given. The hybrid jawar scheme only for this year has been given as 2334 acres. Here we are feeling, on what basis we are actually making our programme as such. Some of the Hon'ble Members made an observation that the Government is unable to carry out seed programme. It is not such a very easy matter. We have to produce it by natural methods. It takes its own time. The hybrid system in the other countries has devoloped since 1917 and now they have come to a certain stage, wherein they have been able to grow to a substantial extent. Hardly we have started last year. It has caught our imagination only last year and it is to our credit to say that the State has risen to the call of the Nation and we have done 1400 acres. I have heard that Mysore State stands second in growing seeds in the whole of India.

In regard to the forests in North Kanara, Sri Phayade made a remark if some offices are shifted to certain other places, it will be better managed. We have given serious thought to it and after that only the three divisional offices were shifted to Dharwar. These three offices were in Dharwar and had been shifted to Dharwar some time in 1930 when the forest programme was very heavy there. Now I do not think they will be any better served if we think of shifting these offices to the respective places. Whereas 97 per cent of the contractors come from Dharwar, only 3 per cent of the contractors come from other places.

The second thing is, in the Forest Department, I am not coming across any encouraging para about any attempts to maintain national parks, to attract the foreigners, to maintain our own species of animals. It is very necessary. I request the Government to devote some time and energy and space to see that they are made very attractive so as to attract foreigners and so that we can increase our foreign tourism.

With these few remarks, I thank you, Sir.

MR. SPEAKER.—Siddaiah Kasimath is absent and Sri H. D. Deve Gowda may speak. Let the debate be over today.

SRI D. DEVARAJ URS (Minister for Transport and Tourism).—How long are we sitting ?

MR. SPEAKER.—I am prepared to sit as long as Hon'ble Members want me. It was agreed that the debate should be over today and tomorrow there will be reply and one hour should be made available to two Ministers. After that, we will take up the other Demand. That Demand is equally important.

SRI B. BHASKAR SHETTY.—It was agreed between the Opposition and the Whip of the Congress Party that we should sit till 7 P.M. today, Sir.

Sri B. RACHIAH.—We can sit till 7 P.M. today.

Sri D. DEVARAJ URS.—Is it agreed that we sit till 7 P.M. today ?

Mr. SPEAKER.—I am entirely in your hands. If it is decided that we should sit till 7 P.M. I have no objection.

6-00 P.M.

† **ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).**—ಸ್ವಾಮಿ, ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕ ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಬೇಡಿಕೆಗಳ ಬಗ್ಗೆ ನಾನು ಕೆಲವು ವಿಷಯಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ವ್ಯವಸಾಯ ಇಲಾಖೆಗೆ ಕೊಟ್ಟಿರತಕ್ಕ ಹಣ 56,55,000 ರೂಪಾಯಿ ಏನೇನೂ ಸಾಲದು. ನಮ್ಮ ಸರ್ಕಾರದ ಒಟ್ಟು 153 ಕೋಟಿ ರೂಪಾಯಿ ಆದಾಯದಲ್ಲಿ ವ್ಯವಸಾಯ ಖಾತೆಗೆ ಕೇವಲ ಐದೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದನ್ನು ನೋಡಿದರೆ ಇತ್ತ ಕಡೆ ಸರ್ಕಾರದ ಗಮನ ಹರಿದಿಲ್ಲವೆಂದು ಗೊತ್ತಾಗುತ್ತದೆ. ವ್ಯವಸಾಯ ಇಲಾಖೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳುತ್ತಿದ್ದರೂ ಅದರ ಕಡೆ ಸರ್ಕಾರದ ಗಮನ ಹರಿದಿಲ್ಲ ಎನ್ನುವುದು ವ್ಯವಸಾಯ ಬಾಬಿಗೆ ಒದಗಿಸಿರುವ ಸ್ವಲ್ಪ ಹಣದಿಂದಲೇ ಗೊತ್ತಾಗುತ್ತದೆ. ವ್ಯವಸಾಯ ಇಲಾಖೆಗೆ ಬಹಳ ಮಹತ್ತರವಾದ ಗಮನವನ್ನು ಕೊಡಬೇಕೆಂದು, ಹೆಚ್ಚಿನ ರೀತಿಯಲ್ಲಿ ವ್ಯವಸಾಯ ಇಲಾಖೆಯನ್ನು ರೀ ಓರಿಯಂಟೇಷನ್ ಮಾಡಿ ಉತ್ಪಾದನೆಯನ್ನು ದ್ವಿಗುಣಗೊಳಿಸಬೇಕು, ನಮ್ಮಲ್ಲಿರತಕ್ಕ ಆಹಾರದ ಕೊರತೆಯನ್ನು ನೀಗಲು ಹೆಚ್ಚು ಬೆಳೆಯನ್ನು ತೆಗೆಯುವ ಶಕ್ತಿಯನ್ನು ಪಡೆಯಬೇಕು ಎಂದು ಎಲ್ಲ ಕಡೆಯ ಸದಸ್ಯರೂ ಸರ್ಕಾರಕ್ಕೆ ಈ ಸಭೆಯಲ್ಲಿ ಮನವಿ ಮಾಡಿದ್ದಾರೆ. ವ್ಯವಸಾಯ ಇಲಾಖೆಯಿಂದಲೇ ಈ ಮಹತ್ತರ ಕಾರ್ಯವನ್ನು ಸಾಧಿಸಲು ಆಗುವುದಿಲ್ಲ. ಇದು ಮೂರು ನಾಲ್ಕು ಖಾತೆಗಳಲ್ಲಿ ಹಂಚಿಕೊಂಡು ಹೋಗಿದೆ. ಮೊದಲನೆಯದು ವ್ಯವಸಾಯ ಇಲಾಖೆ, ಎರಡನೆಯದು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಮತ್ತು ಮೂರನೆಯದಾಗಿ ನೀರಾವರಿ ಇಲಾಖೆ. ಈ ಮೂರು ಖಾತೆಗಳಲ್ಲಿ ಹೊಂದಾಣಿಕೆ ಇರಬೇಕು ಎನ್ನುವುದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ವ್ಯವಸಾಯ ಇಲಾಖಾಧಿಕಾರಿಗಳ ಹತ್ತಿರ ಹೋಗಿ ಕೇಳಿದರೆ ಅವರು ತಮ್ಮ ಲಿಮಿಟೇಷನ್ ಏನಿದೆ ಅಷ್ಟನ್ನು ಮಾಡುತ್ತೇವೆ, ಅಷ್ಟನ್ನು ಮಾಡಿದರೆ ತಮ್ಮ ಜವಾಬ್ದಾರಿ ಮುಗಿದ ಹಾಗೆ, ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ ಹಾಗೆ ಆಯಿತು ಎಂದು ಹೇಳುತ್ತಾರೆ.

ಇವತ್ತು ಫೌಂಡೇಷನ್ ಸೀಡ್ಸ್ ಕೆಲಸವನ್ನು ಬ್ಲಾಕ್ ಏಜನ್ಸಿಗಳಿಗೆ ಕೊಟ್ಟ ಮೇಲೆ ಅಲ್ಲಿನ ಬೀಜವನ್ನು ಪುನಃ ದ್ವಿಗುಣಗೊಳಿಸುವುದರ ಬಗ್ಗೆ ನಮಗೆ ಸಂಬಂಧವಿಲ್ಲ ಎಂದು ಹೇಳುವುದನ್ನು ಕೇಳಿದ್ದೇನೆ. ಇವತ್ತು ವ್ಯವಸಾಯ ಇಲಾಖೆಯಲ್ಲಿರುವ ಯಾವ ಅಧಿಕಾರಿಯನ್ನು ತೆಗೆದುಕೊಂಡರೂ ಕೂಡ ತನ್ನ ಪಾತ್ರ ಎಲ್ಲಿಯವರೆಗೆ ಎಂದರೆ ಜಿಲ್ಲಾ ಮಟ್ಟದಲ್ಲಿ ಮಾತ್ರ ಎಂದು ತಿಳಿದುಕೊಂಡಿದ್ದಾರೆ. ಅಲ್ಲಿಂದ ಮುಂದೆ ಹೋದರೆ ಬ್ಲಾಕ್ ಏಜನ್ಸಿ ಬರುತ್ತದೆ ಎಂದು ಅವರ ಕಡೆಗೆ ತೋರಿಸುತ್ತಾರೆ. ಇದನ್ನೆಲ್ಲ ನೋಡಿದರೆ ಇವರಲ್ಲಿ ಸಾಕಷ್ಟು ಹೊಂದಾಣಿಕೆ ಇಲ್ಲ ಎನ್ನುವುದು ಅರ್ಥವಾಗುತ್ತದೆ. ರಾಷ್ಟ್ರೀಯ ವಿಸ್ತರಣಾ ಯೋಜನೆ ಇಲಾಖೆ ಮಹತ್ತರವಾದ ಪಾತ್ರವನ್ನು ವಹಿಸಬೇಕು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ ಹಾಗೂ ಗ್ರಾಮ ಸುಧಾರಕ ಇವರು ಮೂವರೂ ವ್ಯವಸಾಯದ ಉತ್ಪಾದನೆಯಲ್ಲಿ ಭಾರಿ ಜವಾಬ್ದಾರಿಯನ್ನು ಕೆಳಮಟ್ಟದಲ್ಲಿ ಹೊಂದಿರುವವರು ಎಂದರೆ ತಪ್ಪಾಗಲಾರದು. ಇವರು ಆಸಕ್ತಿ ವಹಿಸಿ ಕೆಲಸ ಮಾಡಬೇಕು ಮತ್ತು ಅವರ ಮೇಲೆ ಇಲಾಖೆಯ ಕೆಲಸ ನಿಂತಿವೆ ಎಂದರೆ ಸರ್ಕಾರ ಅದನ್ನು ಒಪ್ಪುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಗ್ರಾಮ ಸುಧಾರಕ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಮತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಕೊಡತಕ್ಕ ಬೂಸ್ಟೆಡ್ ಫಿಗರ್ಸ್ ಎಷ್ಟುಮಟ್ಟಿಗೆ ಸರಿಯಾಗಿವೆ ಎನ್ನುವುದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂಬುದು ನನ್ನ ಅಭಿಪ್ರಾಯ. ಅಗ್ರಿಕಲ್ಚರಲ್ ಆಫೀಸರ್‌ನಂಥ ಕೆಲವು ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾದ ಸಂದರ್ಭ ಇದೆ. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಮತ್ತು ಗ್ರಾಮ ಸುಧಾರಕ ಇವರಿಗೆ ಒಂದೊಂದು ಗ್ರಾಮವನ್ನು ಒಬ್ಬೊಬ್ಬರಿಗೆ ಎಂದು ಕೆಲವಾರು ಗ್ರಾಮಗಳನ್ನು ಅವರಿಗೆ ನಿಗದಿ ಮಾಡಿ ಒಂದು ವರ್ಷಕ್ಕೆ ಸಂಬಂಧಪಟ್ಟಂತೆ ಒಂದು ಬೆಳೆಗೆ ಇಷ್ಟು ಬೆಳೆಸಬೇಕು ಎಂದು ನಿಗದಿ ಮಾಡದೆ ಹೋದರೆ, ಒಂದು ನಿರ್ಬಂಧವನ್ನು ಹಾಕದೆ ಹೋದರೆ ಬಹುಶಃ ನಮ್ಮ ಉತ್ಪಾದನೆ ಕಾರ್ಯಕ್ರಮ ಕುಂಠಿತವಾಗುತ್ತದೆ. ಆದುದರಿಂದ ಅಧಿಕಾರಿಗಳಿಗೆ ಕೆಲವು ಗ್ರಾಮಗಳನ್ನು ಒಪ್ಪಿಸಿ ಅವರ ಮೇಲೆ ಜವಾಬ್ದಾರಿಯನ್ನು ಹೊರಿಸುವುದು ಉತ್ತಮ ಎಂದು ನನ್ನ

ಅಭಿಪ್ರಾಯ. ಹೀಗೆ ಪ್ರತಿಯೊಬ್ಬರಿಗೂ ಕೆಲವು ಗ್ರಾಮಗಳನ್ನು ಕೊಟ್ಟು, ಒಂದು ಟಾರ್ಗೆಟ್ ಗೊತ್ತು ಮಾಡಿ ಆ ಪ್ರಕಾರವಾಗಿ ಅವರು ಫಲಿತಾಂಶವನ್ನು ತೋರಿಸದೆ ಹೋದರೆ ಅಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೀಗೆ ಸರ್ಕಾರ ಒಂದು ಹಿಡಿತವನ್ನು ಹಾಕದೆ ಹೋದರೆ ಹೆಚ್ಚು ಉತ್ಪಾದನೆ ಮಾಡಬೇಕೆಂಬ ನಮ್ಮ ಆಸೆ ಏನಿದೆ ಅದು ಫಲಪ್ರದವಾಗಲಾರದು. ಅಲ್ಲದೆ ವ್ಯವಸಾಯ ಇಲಾಖೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ಇಲಾಖೆ ಮತ್ತು ನೀರಾವರಿ ಇಲಾಖೆ ಇವು ಮೂರೂ ಹೊಂದಾಣಿಕೆಯಿಂದ ಕೆಲಸ ಮಾಡುವುದು, ಅಧಿಕಾರಿಗಳಿಗೆ ಕೆಲವು ಪ್ರದೇಶಗಳನ್ನು ವಹಿಸಿ ಅದರಲ್ಲಿ ಏನು ಉತ್ಪಾದನೆಯಾಗಬೇಕು ಎಂದು ನಿಗದಿ ಮಾಡುವುದು ಇಂಥ ವಿಷಯಗಳ ಬಗ್ಗೆ ಯೋಚನೆ ಮಾಡಬೇಕೆಂದು ಕೇಳುತ್ತೇನೆ. ಈ ತರಹ ಜವಾಬ್ದಾರಿಯನ್ನು ಗೊತ್ತು ಮಾಡುವಾಗ ಒಂದು ಕಾನೂನು ಮಾಡಿ ಅದರ ಪ್ರಕಾರ ಜವಾಬ್ದಾರಿ ವಹಿಸಿ, ಅದರಂತೆ ಕೆಲಸ ಮಾಡಲು ತಪ್ಪಿದರೆ ಅವರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ.

ಫರ್ಟಿಲೈಸರುಗಳ ಅಡಲ್ಟರೇಷನ್ ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಗಮನ ಕೊಡಬೇಕೆಂದು ತಿಳಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ರೈತನಿಗೆ ಕೊಡತಕ್ಕ ರಸಾಯನಿಕ ಗೊಬ್ಬರವನ್ನು ಸರ್ಕಾರದವರು ಪೂರ್ಣವಾಗಿ ಒದಗಿಸುವುದಕ್ಕೆ ಶಕ್ತಿ ಇಲ್ಲ. ಈ ಖಾಸಗಿಯವರು, ಈ ರಸಾಯನಿಕ ಗೊಬ್ಬರದ ಮಿಕ್ಸ್‌ಚರ್ ಮಾಡುವವರು ಗೊಬ್ಬರವನ್ನು ಸರಿಯಾದ ಪ್ರಮಾಣದಲ್ಲಿ ಮಾಡಿ ರೈತರಿಗೆ ಕೊಡುತ್ತಿಲ್ಲ. ಇಂಥವರ ಬಗ್ಗೆ ಇಲಾಖೆಯವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳುವುದಾದರೆ ಸರ್ಕಾರದವರು ಮಾಡಿರುವ ಆರ್ಡರುಗಳು ಎಲ್ಲ ಪುಸ್ತಕಗಳಲ್ಲಿರಬಹುದು. ಎಷ್ಟು ಜನ ಗೊಬ್ಬರದಲ್ಲಿ ಅಡಲ್ಟರೇಷನ್ ಮಾಡುತ್ತಾರೆ, ಅಂಥವರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೋ ಎಂದರೆ ವ್ಯವಸಾಯ ಇಲಾಖೆಯ ಇತಿಹಾಸದಲ್ಲಿ ಒಬ್ಬರ ಮೇಲೆಯೂ ಕ್ರಮ ತೆಗೆದುಕೊಂಡಿಲ್ಲ ಎಂದು ನನ್ನ ಅಭಿಪ್ರಾಯ. ಇಲಾಖಾಧಿಕಾರಿಗಳು ಇದರ ಬಗ್ಗೆ ಪೂರ್ಣ ಗಮನಕೊಡಬೇಕು ಇಲ್ಲದೆ ಹೋದರೆ ರೈತನಿಗೆ ರಸಾಯನಿಕ ಗೊಬ್ಬರಗಳ ವಿಚಾರದಲ್ಲಿ ಒಂದು ತರಹ ಉದಾಸೀನ ಉಂಟಾಗತಕ್ಕ ಸನ್ನಿವೇಶ ಬರುತ್ತದೆ. ಆದ್ದರಿಂದ ಸರ್ಕಾರದವರು ಇದರ ಕಡೆಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಫಿಷರೀಸ್ ಇಲಾಖೆಯಲ್ಲಿ ಕೆಲವಾರು ವರ್ಷಗಳಿಂದಲೂ 16 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ತೋರಿಸಿದ್ದಾರೆ. ಖರ್ಚನ್ನು 30 ಲಕ್ಷ ರೂಪಾಯಿ ತೋರಿಸಿದ್ದಾರೆ. ಮಂತ್ರಿಗಳು ಉತ್ತರ ಕೊಡುವಾಗ 30 ಲಕ್ಷ ರೂಪಾಯಿಗಳ ಬಗ್ಗೆ ಸ್ವಲ್ಪ ವಿವರಗಳನ್ನು ಕೊಡಬೇಕು ಎಂದು ತಿಳಿಸುತ್ತೇನೆ.

ಅರಣ್ಯ ಇಲಾಖೆಯ ಸಂಬಂಧವಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಈ ಇಲಾಖೆಯ ರೆವೆನ್ಯೂ 10 ಕೋಟಿ ಚಿಲ್ಲರೆ ರೂಪಾಯಿ ಇದೆ. ಪೂರ್ವದಿಂದ ಬಂದಂಥ ಕಾಡುಗಳನ್ನು ಕಡಿದು ಮಾರಿದ್ದರಿಂದ 10 ಲಕ್ಷ ರೂಪಾಯಿಗಳಷ್ಟು ಆದಾಯವನ್ನು ತೋರಿಸುತ್ತಿದ್ದಾರೆ. ಇವರು ಕಡಿದಂತಹ ಕಾಡನ್ನು ಎಷ್ಟು ರಿಇಂಬರ್ಸ್ ಮಾಡಿದ್ದಾರೆಂಬುದನ್ನು ತಿಳಿಸಬೇಕು. ಹಿಂದೆ ನಮ್ಮ ದೇಶದಲ್ಲಿ ಎಷ್ಟು ಕಾಡು ಇತ್ತು, ಇವತ್ತು ಎಷ್ಟು ಕಾಡು ಇದೆ ಎಂಬುದನ್ನು ತಿಳಿಸಬೇಕು. ಇವತ್ತಿನ ದಿವಸ ಎಷ್ಟು ಕಾಡು ನಮ್ಮಲ್ಲಿತ್ತು, ಈಗ ಎಷ್ಟು ಕಡಿಮೆಯಾಗಿದೆ ಎಂಬವನ್ನು ನಾವು ತಿಳಿಯಬೇಕಾಗಿದೆ. ಅರಣ್ಯದಲ್ಲಿರತಕ್ಕ ಟಿಂಬರನ್ನು ಮಾರಿರತಕ್ಕದ್ದರಲ್ಲಿ, ಈಗ ಇವರು ಎಷ್ಟು ಕಾಡನ್ನು ರೆಸ್ಟೋರ್ ಮಾಡಿದ್ದಾರೆ, ಅದರಲ್ಲಿ ಪ್ರೊಪೋರ್ಷನ್ ಏನಿದೆಯೆಂಬುದನ್ನು ಕೇಳುತ್ತೇನೆ.

ಇನ್ನೂ ವುಡ್ ಪ್ರಿಜರ್ವೇಷನ್ wood preseravation ಪ್ಲಾಂಟಿಗೋಸ್ಕರ 58 ಲಕ್ಷ ರೂಪಾಯಿಗಳ ಖರ್ಚನ್ನು ತೋರಿಸಿದ್ದಾರೆ. 60 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ತೋರಿಸಿದ್ದಾರೆ. ಹಾಗೆಯೇ ತುಮಕೂರಿನಲ್ಲಿ ಅಂತಹ ಒಂದು ಪ್ಲಾಂಟ್‌ನ್ನು ನಡೆಸುತ್ತೇವೆಂದು 16 ಸಾವಿರ ರೂಪಾಯಿಗಳ ಖರ್ಚನ್ನು ಮತ್ತು 20 ಸಾವಿರ ರೂಪಾಯಿಗಳ ಉತ್ಪತ್ತಿಯನ್ನೂ ತೋರಿಸುತ್ತಿದ್ದಾರೆ. ಅದರಿಂದ ಸಾಕದಷ್ಟು ಪ್ರಗತಿಪರ ಉತ್ಪತ್ತಿಯೇನೋ ಇಲ್ಲ. ಸರ್ಕಾರ ಹೆಚ್ಚಿಗೆ ನಷ್ಟದಲ್ಲಿ ಇದನ್ನು ನಡೆಸುತ್ತಿದ್ದಾರೆ. ಇದು ಈಗ ಅನಾವಶ್ಯಕ.

ಒಟ್ಟಿನಲ್ಲಿ ಈಗ ಅಫಾರೆಸ್ಟೇಷನ್ ಏನು ಆಗುತ್ತಿದೆಯೋ ಅವರ ಕೆಲಸ ಅಷ್ಟು ಪರಿಣಾಮಕಾರಿಯಾಗಿ ಆಗಿಲ್ಲ. ಈ ವರ್ಷ ಈ ಬಾಬಿಗೆ ಏನು ಮೊಬಲಗನ್ನು ಖರ್ಚುಮಾಡುತ್ತಾರೋ ಅದು ಅಷ್ಟು ಫಲಪ್ರದವಾಗಲಾರದೆಂದು ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI R. S. HEGDE (Honnavar).—I welcome all these demands. In my submission agriculture has made considerable expansion in the field of food and other agriculture products. When we speak of agriculture

(Sri R. S. Hegde)

it has to be seen from three angles of vision. In my submission any planning of agriculture is sometimes not so easy of execution and implementation looking into the very nature of the subject, the success of which has to depend upon the vicissitudes of nature. When I say that we have to see agriculture from three different points of view I mean a long range plan *i.e.*, guaranteeing assured water supply in places where there is scant rainfall and in times of failures of rainfall. Secondly to meet immediate requirements of the agriculturists in accelerating the progress of minor irrigation and thirdly arrangsments to meet the crisis on account of failure of rainfall as it has happened this year. Irrigation being an important aspect of agriculture production, one has to see how far the Government has tried to fulfill its obligations. In all countries of the world attempts have been made to plan agriculture in an authoritative way. But the results it is stated have been very very disappointing. Nevertheless our Government, in my submission, has done well in the advancement of agriculture and in trying to fulfill irrigational obligations in the budgetary framework of the State. It is stated that there is only 8 per cent of irrigational facilities in the State. But I am sure the Government is bent to turn the corner for more and more irrigation and there is less concentration on the production of power. Power, of course, is essential for the purpose of lighting and for the purpose of industries and also for irrigation. When all the units in the Sharavathi project are commissioned, I am sure there will be ample power. The Minister has stated that the thought with the Government is to concentrate more on irrigation and less on the manufacture of power. Even in the field of minor irrigation the target is exceeded. it may be a particular taluk gets more and a particular taluk gets less. But if we take the overall picture as far as minor irrigation facilities and also supply of pumpsets, taking up of new wells and desilting of tanks, satisfactory progress has been made as is revealed in the book called Review of Government Departments. Even to meet this year's drought I am sure the Government has made supreme efforts in the matter of supply of pumpsets. If there is so much demand on the companies for these pumpsets, it was not possible for the companies to supply them with all the accessories. So much so, the Department had to issue orders even to go for these pumps which are not approved by the Stores Purchase Committee. The two ministers toured the entire State with all the Governmental staff, engineering staff, staff pertaining to Agriculture and Revenue Departments and discussed with the Taluk Boards, Presidents with a view to take certain decisions on the spot, to give immediate relief to save the existing crop and to boost up rabi crop. As far as North Canara is concerned I vouchsafe and say we have been very well benefited by the supply of pumpsets. Nearly 150 diesel sets have been supplied and they have been working well. I do not know if spare parts could not be supplied by a particular company from which pumpsets were

ordered. But the Government could not be blamed because those spare parts were in short supply. The Government cannot be expected to do mesmerism to manufacture pumpsets overnight. There was shortage in the companies and therefore there was delay in the supply of certain accessories. Taking into consideration the peculiar circumstance under which the Government institutions are placed, I do not know what better could have been ordered and who else could have done better. In advanced countries the following practices for the agriculture production is pursued.

(1) High degree of mechanisation to reduce the cost of agriculture production;

(2) High standard of livestock;

(3) Genctic improvement of crops by the supply of dood seeds.

(4) To give a support price to agriculturists to make agriculture a profitable industry.

(5) To reduce the pressure on land.

(6) Assured water supply in places of scaut rainfall or failur of rainfall in devising and executing long range plans of irrigation.

(7) In devising and concentrating on Minor irrigation to keep food production at the normal level and to supply irrigation pumpsets.

(8) Arrangements for irrigation in case of emer failure of usual rains as it has happened this year.

(9) Soil conservation.

(10) Sheer good husbandory of the farmer.

These are seven practices that have been followed in England, America and also in U. S. S. R. and China. This information is available in a book called Fifteen Years of Agriculture by Iyengar available in the library. How far the Government has been able to achieve that in the framework of the seven points I have laid before the House? It is stated in the Revew of Government Departments that there are 22 tractors, 66 bulldozers owned by the Government and 270 tractors has been supplied by the Department on hire purchase system. When we think of mechanisation of agriculture, it must be remembered that the condition of agriculture holding in the State, as far as we are concerned, is only fragments. In England the holding is more than 50 per cent are owned by land owners where the area is more than 1,000 acres. So also in America. But in India and especially in Mysore persons who have more than 100 acres is perhaps 5 to 10 per cent. So looking to the nature of fragmentation of land we have to think how far mechanisation can be successful. On the other day a suggestion was made that if mechanisation is put in, what about the labour, and there will be unemployment of labour and Government has to rehabilitate labour. So, there is a contradiction, and for mechanisation certain

(SRI R. S. HEGDE)

pre-conditions are necessary which are absent in the State. Of course, the State Government has been enacting the Fragmentation and Consolidation of Holdings Act. As far as Soil Conservation is concerned, Government has taken certain action.

With regard to support prices, in the United States of America and other countries a good price is given as an incentive to farmers, a economic price is given. But, as far as the State and the country is concerned, the producer thinks that the price he receives is not remunerative while the foodgrains are too high to the consumer. In Mysore, the highest price that is given to the producer is Rs. 45 *plus* Rs. 5 bonus, whereas the price is Rs. 97 to the consumer. So, there is a disparity and it should go. The producer should be given more. The price that is offered to him must be an economic and profitable price. I submit that instead of having controls, the price must find its place in the open market and there should not be much disparity between the cost of production and market price. In our State there is too much disparity in the price which should not be there.

Under agriculture, I would like to make the following suggestions -

(1) All the Extension officers in the blocks must be agriculture oriented, so that their services can be requisitioned in times of emergency ;

(2) There must be a Plant protection Squad, because whenever there is a chronic disease, mass spraying is necessary. Instead of arranging spraying on subsidy basis, let us have a Squad attached to every Revenue Sub-division so that their services can be requisitioned in times of emergency.

As far as Forests and Fisheries are concerned, I have got a word to say. With regard to forests, our revenue has increased from Rs. 6 crores to Rs. 10 crores and this year it is stated that it will be a little over Rs. 10 crores. Of course, there is afforstation. In Germany, the policy is, if one tree is cut, six trees are planted. I think the very same practice is followed here also, because a large number of our officers are trained in Germany.

As far as Fisheries are concerned, I do not attach so much importance on the giving of mechanised launches, but I stress upon the consciousness that has to be created amongst fishermen. Five years back, it was a problem as to how to distribute launches. Now, there is so much of demand for admission for training. After having trained, there is demand for launches. So, the 'will' is most important, just as we say, 'wherever there is a will there is a way'.

Finally, about five years back, it was a problem to distribute fertilisers. Today, there is so much of demand for fertilisers. It is due to the education that the Government is giving to the agriculturists.

Thank you, Sir.

†ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಧ್ಯಕ್ಷರೇ, ಜಗತ್ತಿನಂತ ಅಂತರರಾಷ್ಟ್ರೀಯ ಅಕ್ಕಿಯ ಉತ್ಪತ್ತಿಯ ವರ್ಷವನ್ನು ಈ ವರ್ಷ ಆಚರಿಸುತ್ತಿರುವಾಗ ನಮ್ಮ ಮೈಸೂರು ಸಂಸ್ಥಾನದಲ್ಲಿ ಅಕ್ಕಿ ಇಲ್ಲದೆ, ಅನ್ನ ಆಹಾರ ಇಲ್ಲದೆ ಜನ ಉಪವಾಸ ಬಿದ್ದು ಸಾಯುವ ಪರಿಸ್ಥಿತಿ ಬಂದಿದೆ. ಇದು ನಮ್ಮ ವ್ಯವಸಾಯ ಇಲಾಖೆಯ ಧೋರಣೆ ಅಥವಾ ಸಮರ್ಥತೆಯನ್ನು ಪ್ರತಿಬಿಂಬಿಸುತ್ತದೆ. ವ್ಯವಸಾಯ ಇಲಾಖೆ ಯೋಗ್ಯ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರೆ ಬಹುಶಃ 18 ವರ್ಷಗಳ ಅವಧಿಯಲ್ಲಿ ನಮ್ಮ ದೇಶದ ಜನತೆಗೆ ಬೇಕಾದ ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುವಂತಹ ಒಂದು ಅವಕಾಶ ಇತ್ತು. ಮೈಸೂರು ಸಂಸ್ಥಾನ ಸಮೃದ್ಧವಾದ ರಾಜ್ಯ. ನೀರಿಗೆ ಅವಕಾಶವಿದೆ, ನದಿಗಳು ಬೇಕಾದಷ್ಟು ಇವೆ, ಫಲವತ್ತಾದ ಭೂಮಿ ಇದೆ. ಆದರೆ ಅವುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಳವಡಿಸಿಕೊಳ್ಳುವ ಶಕ್ತಿ ಮತ್ತು ಜಾಣತನ ಮಂತ್ರಿಗಳಲ್ಲಾಗಲೀ ಅಧಿಕಾರಿಗಳಲ್ಲಾಗಲೀ ಇಲ್ಲದೆ ಇರುವುದರಿಂದ ಜನತೆಗೆ ಒಂದು ಹೊಸ ದಾರಿಯನ್ನು ತೋರಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಮೊದಲನೆಯ, ಎರಡನೆಯ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತ ಮಾಡುವುದರಲ್ಲಿ ನಮ್ಮ ಸರ್ಕಾರ ಅಸಮರ್ಥವಾಗಿದೆ. ಈಗ ನಮ್ಮ ರಾಜ್ಯದಲ್ಲಿ ತೀವ್ರತರ ಬೇಸಾಯ ಯೋಜನೆ ಎರಡು ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿಯೂ ಸಹ ತೀವ್ರತರ ಬೇಸಾಯ ಯೋಜನೆಯನ್ನು ಜಾರಿಗೆ ತರಬೇಕಾಗಿತ್ತು. ಈ ತೀವ್ರತರ ಬೇಸಾಯ ಯೋಜನೆಗಳನ್ನು ಜಾರಿಗೆ ತಂದಿರುವ ಪ್ರದೇಶಗಳಲ್ಲಿ ಅದಷ್ಟು ಬೇಗ ತೀವ್ರತರ ಬೇಸಾಯದ ಕಾರ್ಯಗಳನ್ನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಪ್ರಾರಂಭವಾಗಬೇಕಾಗಿದ್ದ ಯಾವ ಫೀಲ್ಡ್ ಪ್ರಿಪರೇಷನ್ ಕೆಲಸಗಳೂ ಆಗಿಲ್ಲ. ಅದಕ್ಕೆ ಕಾರಣ ಯೋಜನೆಗಳು ಪ್ರಾರಂಭವಾಗುವ ವರ್ಷದಲ್ಲಿ ಯೋಜನೆಯಲ್ಲಿರತಕ್ಕ ಕಾರ್ಯಕ್ರಮಗಳಲ್ಲಿ ಅಡ್ಡಿ ಆತಂಕಗಳು ಬೇಕಾದಷ್ಟು ಬರುತ್ತವೆ. ಏತಕ್ಕೆಂದರೆ, ಸರ್ಕಾರದವರು ಈ ಯೋಜನೆಗಳನ್ನು ತಯಾರು ಮಾಡುವಾಗ ಆಲೋಚನೆ ಮಾಡಿ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಏರ್ಪಾಡು ಮಾಡಿಲ್ಲ. ಈಗ ಮುಖ್ಯವಾಗಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಪವರ್ ಟಿಲ್ಲರ್ಸ್ ಅನ್ನು ಜನಗಳು ಹೆಚ್ಚಿಗೆ ಅಪೇಕ್ಷಿಸುತ್ತಾರೆ. ಸಾವಿರಾರು ಪವರ್ ಟಿಲ್ಲರುಗಳನ್ನು ತೆಗೆದುಕೊಳ್ಳುವ ರೈತರು ನಮ್ಮಲ್ಲಿ ಇದ್ದಾರೆ. ಆದ್ದರಿಂದ ಅಲ್ಲಿಗೆ 70-80 ಪವರ್ ಟಿಲ್ಲರುಗಳನ್ನು ಕೊಟ್ಟರೆ ಸಾಕಾಗುವುದಿಲ್ಲ. ಅದನ್ನು ಹೆಚ್ಚು ಮಾಡಬೇಕು. ಪವರ್ ಟಿಲ್ಲರುಗಳಿಗೆ ಸೇಲ್ಸ್ ಟ್ಯಾಕ್ಸನ್ನು ತೆಗೆದು ಹಾಕಬೇಕೆಂದು ನನ್ನ ಅಭಿಪ್ರಾಯ.

ಆಹಾರವನ್ನು ಉತ್ಪತ್ತಿ ಮಾಡತಕ್ಕ ಯೋಜನೆಗಳಲ್ಲಿ ಸರ್ಕಾರದವರು ಆದಷ್ಟು ಮಟ್ಟಿಗೆ ರೈತರಿಗೆ ಸೌಲಭ್ಯವನ್ನು ಒದಗಿಸಿಕೊಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದನ್ನು ಬಿಟ್ಟು ಕೃಷಿ ಉತ್ಪಾದನಾ ಡೆವಲಪ್‌ಮೆಂಟ್ ಬೋರ್ಡುಗಳು, ಕೃಷಿ ವಿಚಾರಣಾ ಗೋಷ್ಠಿಗಳು, ಸಿಟಿ ಕ್ಯಾಂಪುಗಳು, ಸೆಮಿನಾರಗಳು, ಶಿಬಿರಗಳು ಮುಂತಾದುವುಗಳನ್ನು ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅವುಗಳಿಂದ ಆಹಾರ ಉತ್ಪಾದನೆಯನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇಂಥಾ ಒಂದು ಅಭಾವ ಪರಿಸ್ಥಿತಿ ದೇಶದಲ್ಲಿರುವಾಗ ಅಂಥಾ ವಿಚಾರಣಾ ಗೋಷ್ಠಿಗಳನ್ನು, ಶಿಬಿರಗಳನ್ನು, ಸೆಮಿನಾರಗಳನ್ನು ನಡೆಸುವ ಅಗತ್ಯ ಇಲ್ಲ. ಅವುಗಳಿಗೆ ಹಣವನ್ನು ಖರ್ಚು ಮಾಡುವುದರಿಂದ ಯಾವ ರೀತಿಯ ಫಲವೂ ನಮಗೆ ದೊರೆಯುವುದಿಲ್ಲ. ಆದಕಾರಣ ಅವುಗಳಿಗೆ ಹಣವನ್ನು ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ವ್ಯವಸಾಯ ರಂಗದ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಮತ್ತು ಫಲಕಾರಿಯಾದಂತಹ ವ್ಯವಸಾಯದ ಕೆಲಸ ಕಾರ್ಯಗಳಿಗೆ ಸರ್ಕಾರದವರು ಹೆಚ್ಚಿಗೆ ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

6-30 P.M.

ಇನ್ನು ಮೀನು ವ್ಯವಸಾಯ ಕುರಿತು ಹೇಳುವುದಾದರೆ, ಬಹುಶಃ ನಮ್ಮ ಎರಡು ಜಿಲ್ಲೆಗಳ ಬಗ್ಗೆ ಸಾಕಷ್ಟು ಪ್ರಗತಿಯೇನೋ ಆಗುತ್ತಿದೆ. ಅದಕ್ಕಾಗಿ ನಾನು ಮೀನುಗಾರಿಕೆ ಮಂತ್ರಿಗಳನ್ನು ಶ್ಲಾಘಿಸುತ್ತೇನೆ. ಅವರು ಈ ವಿಚಾರದಲ್ಲಿ ಸ್ವಲ್ಪ ಕೆಲಸ ಮಾಡುವ ಮನಸ್ಸಿನಲ್ಲಿದ್ದಾರೆ. ಮತ್ತು ಸ್ವಲ್ಪ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಆದರೂ ಈಗ ಆಗಿರುವ ಪ್ರಗತಿ ಸಾಲುವುದಿಲ್ಲ. ಇನ್ನೂ ಹೆಚ್ಚು ಪ್ರಗತಿಯಾಗಬೇಕಾಗಿದೆ. ನಮ್ಮಲ್ಲಿ ಸಿಗುವ ಮೀನನ್ನು ಹೆಚ್ಚು ಸಂಖ್ಯೆಯಲ್ಲಿ ಪಡೆದು ಅದನ್ನು ಜನ ಉಪಯೋಗಿಸಿದರೆ ಮತ್ತೂ ಒಳ್ಳೆಯದು. ಬಹುಶಃ ಜನ ಹೆಚ್ಚು ಹೆಚ್ಚಾಗಿ ಮೀನು ತಿಂದರೆ ಅಕ್ಕಿ ಮುಂತಾದ ಇತರ ಆಹಾರ ಪದಾರ್ಥಗಳನ್ನು ಉಪಯೋಗಿಸುವುದು ಕಡಿಮೆಯಾಗುತ್ತದೆ. ಮೀನು ಬಹಳ ಒಳ್ಳೆಯದು. ಇದೇನು ಮಾಂಸಾಹಾರವಲ್ಲ. ಇತರ ತರಕಾರಿಗಳಂತೆ ಇದೂ ಒಂದು ತರಕಾರಿ ಎಂದು ಉಪಯೋಗಿಸಬಹುದು. ಎಷ್ಟು ಬೇಕಾದರೂ ತಿನ್ನಬಹುದು. ನಮ್ಮ ಭಾಗದಲ್ಲಿರುವ ಜನ ಮೀನು ತಿನ್ನುತ್ತಿರುವುದರಿಂದ ಇವರು ಬಹಳ ಚುರುಕಾಗಿ ಕೆಲಸ ಮಾಡುವರು ಎಂದು ಒಂದು

(ಶ್ರೀ [illegible])

ಸಲ ಮಾನ್ಯ ಮುಖ್ಯ ಮಂತ್ರಿಗಳು ನಮ್ಮಲ್ಲಿ ಬಂದಿದ್ದಾಗ ಹೇಳಿದರು. ಅವರು ಮಂಗಳೂರು ಜನ ಒಳ್ಳೆಯವರು, ಬಹಳ ಬುದ್ಧಿವಂತರು, ಮೀನು ತಿನ್ನುವುದರಿಂದ ಅವರು ಬಹಳ ಚುರುಕಾಗಿದ್ದಾರೆ. ಯೋಗ್ಯರೂ ಆಗಿದ್ದಾರೆ ಎಂದು ಹೇಳಿದರು. ಅದೇರೀತಿ ಮೀನುಗಳನ್ನು ಇಲ್ಲಿರುವ ಈ ಭಾಗದ ಜನರೂ ಉಪಯೋಗಿಸಿ ಯೋಗ್ಯರೂ ಮತ್ತು ಚುರುಕಾದವರೂ ಆಗುವಂತೆ ಮಾಡಿದರೆ ವಿಧಾನ ಸೌಧದ ಕೆಲಸವೂ ಬೇಗನೆ ಆಗಬಹುದು. ಆರೀತಿ ಆಗಲಿ. ಮೀನು ತಿನ್ನುವುದರಿಂದ ಬುದ್ಧಿಯೂ ಹೆಚ್ಚಾಗುತ್ತದೆ. ಆದಷ್ಟು ಹೆಚ್ಚಾಗಿ ನಮ್ಮ ಭಾಗದಿಂದ ಮೀನುಗಳನ್ನು ಬೆಂಗಳೂರಿಗೂ ಒಂದು ಇಲ್ಲೂ ಎಲ್ಲರೂ ತಿನ್ನುವ ವ್ಯವಸ್ಥೆಮಾಡಬೇಕು. ಅಲ್ಲದೆ ಮೀನನ್ನು ಚಾಕಲೇಟುಗಳಲ್ಲಿ ವಾಸನೆ ಇಲ್ಲದಂತೆ ಉಪಯೋಗಿಸುತ್ತಾರೆ. ಜಪಾನು ಸರಕಾರದವರು ಮೀನನ್ನು ಹಾಗೂ ಮೀನುಗಳಿಂದ ಪದಾರ್ಥಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಮಾಡಿದ್ದಾರೆ. ಅಲ್ಲದೆ ಔಷಧಿ ರೀತಿಯಲ್ಲೂ ಮೀನನ್ನು ಉಪಯೋಗಿಸುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಪ್ರಚಾರ ಮಾಡುವುದು ಅಗತ್ಯ. ಹೆಚ್ಚು ಹೆಚ್ಚಾಗಿ ಮೀನುಗಳನ್ನು ಹಿಡಿದು ಅದನ್ನು ಸರಿಯಾಗಿ ಶೇಖರಿಸಿಡಲು ಟಿನ್ನುಗಳನ್ನು ಒದಗಿಸಿ ಕೊಡಬೇಕು. ಎರಡು ವರ್ಷಗಳಿಂದಲೂ ಟಿನ್ನುಗಳ ಕೊರತೆ ಇದೆ ಎಂದು ಕೇಳುತ್ತಿದ್ದರೂ ಇನ್ನೂ ಒದಗಿಸಲು ಆಗಲಿಲ್ಲ. ಈಗಲಾದರೂ ಹೆಚ್ಚು ಟಿನ್ನುಗಳ ಪೆಟ್ಟಿಗೆಗಳನ್ನು ಒದಗಿಸಿ ಕೊಡಬೇಕು, ಅದೇ ರೀತಿಯಲ್ಲಿ ಇಲ್ಲಿಂದ ಮೀನಿನ ಮರಿಗಳನ್ನು ಒಳನಾಡಿಗೂ ಕಳುಹಿಸಬಹುದು. ಅಲ್ಲಿ ಒಂದು ಎಕರೆ ಜಮೀನಿನಲ್ಲಿ ಮೀನು ಬೇಸಾಯಮಾಡಿದರೆ ವರ್ಷಕ್ಕೆ ಒಂದು ಸಾವಿರದಷ್ಟು ಉತ್ಪಾದನೆ ಮಾಡಲಿಕ್ಕೆ ಅವಕಾಶವಾಗುತ್ತದೆ ಮತ್ತು ಇದೊಂದು ಲಾಭದಾಯಕವಾದ ಕೈಗಾರಿಕೆಯಾಗಿಯೂ ಮಾಡಿಕೊಂಡಿದ್ದಾರೆ. ಈಗ ಒಳನಾಡಿನಲ್ಲಿ ಮೀನುಗಾರಿಕೆ ಯೋಜನೆಗೆ ಸಾಕಷ್ಟು ಪ್ರಧಾನ್ಯತೆ ಯನ್ನು ಕೊಟ್ಟಿಲ್ಲ. ನಮ್ಮಲ್ಲಿ ಅನೇಕ ಸಣ್ಣ ಹಾಗೂ ದೊಡ್ಡ ದೊಡ್ಡ ಕೆರೆಗಳೂ ಇವೆ. ಅಲ್ಲದೆ ನಮ್ಮ ಭಾಗದಲ್ಲಿರುವ ರಾಮಸಮುದ್ರದಲ್ಲಿ ರೀಸರ್ಚ್‌ಸ್ಟೇಷನ್ ಎಂದು ಮಾಡಿದ್ದಾರೆ. ಇಲ್ಲಿ ಮೀನು ಸಾಕಾಣಿಕೆ ಬಗ್ಗೆ ಪ್ರಯೋಗ ನಡೆಸಬೇಕೆಂದು ಕೇಂದ್ರ ಸರಕಾರದ ಅಧಿಕಾರಿಗಳು ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಬೇಕಾಗುವ ಸಹಾಯಗಳನ್ನು ಒದಗಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅರಣ್ಯದ ವಿಚಾರದಲ್ಲಿ ಹೇಳುವುದಾದರೆ, ಕೆಲವು ಸದಸ್ಯರು ಆಗಲೇ ಹೇಳಿದಂತೆ ಮುಖ್ಯವಾಗಿ ನಮ್ಮಲ್ಲಿ ಬೆಳೆದಿರುವ ಒಳ್ಳೆ ಮರಗಳನ್ನು ಕಡಿದು ಸಾಗಾಣಿಕೆ ಮಾಡಿ ನಷ್ಟ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಮರಗಳನ್ನು ಕಡಿದು ಹಾಳು ಮಾಡುತ್ತಿದ್ದಾರೆ. ಬೆಲೆ ಬಾಳುವ ಮರಗಳನ್ನು ಕಡಿದು ಇಲ್ಲಿ ಸುಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇನ್ನು ಮುಂದಾದರೂ ಆಗದಂತೆ ತಡೆ ಮಾಡಬೇಕು. ಒಳನಾಡಿನಲ್ಲಿ ಮೀನುಗಾರಿಕೆಯನ್ನು ಹೆಚ್ಚು ಮಾಡಲು ಏನಾದರೂ ಒಂದು ಉಪಾಯವನ್ನು ಮಾಡಬೇಕು. ಕೇರಳದಿಂದ ವಲಸೆ ಬಂದಿರುವ ಜನರು ಕಾಡಿನಲ್ಲಿರುವ ಮರ ಗಳನ್ನು ಕಡಿದು ಅಲ್ಲಿರುವ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅವರನ್ನು ಬಿಡಿಸ ಬೇಕೆಂದು ಮಾಡಿದ್ದಾರೆ. ಹಾಗೆ ಬಿಡಿಸಿದರೆ ಅವರಿಗೆ ಬೇರೆ ಸ್ಥಳಗಳನ್ನು ಕೊಡಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇವೆ. ಹಾರ್ಟಿಕಲ್‌ಚರ್ ಇಲಾಖೆ ಬಗ್ಗೆ ಹೇಳಬೇಕಾದರೆ ಬಹಳ ಹೆದರಿಕೆಯಾಗುತ್ತದೆ. ಈ ಇಲಾಖೆಯವರು ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಎಲ್ಲಾ ಕಡೆಗಳಲ್ಲೂ ಹೆಚ್ಚು ಹೆಚ್ಚು ಹಣ್ಣು ತರಕಾರಿಗಳನ್ನು ಬೆಳೆಯಲು ಪ್ರಯತ್ನ ಮಾಡಬೇಕು. Soft fruitsಗಳು ಎಂದರೆ ಪಪಾಯಿ, ಗೇರುಬೀಜ, ಪೈನ್ ಆಪಲ್ ಇವುಗಳನ್ನು ನಮ್ಮ ಜಿಲ್ಲೆಯಲ್ಲಿ ಬೆಳೆಸಲು ನಿಗಾ ಕೊಡಬೇಕು. ಮತ್ತು ಹಾರ್ಟಿಕಲ್‌ಚರ್ ಇಲಾಖೆಗೆ ಇನ್ನೂ ಹೆಚ್ಚು ಪ್ರೋತ್ಸಾಹ ಕೊಡಬೇಕು.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ನಮ್ಮ ಭಾಗದಲ್ಲಿ ತೆಗೆದುಕೊಂಡ ಪೋಲ್‌ಗಳಿಗೆ ಎಂದರೆ ಮರದ ಕಂಬಗಳ ದುಡ್ಡನ್ನು ಕೊಟ್ಟಿಲ್ಲ ಎಂದು ಕೇಳುತ್ತೇನೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸಾಧ್ಯವಾಗುವುದಿದ್ದರೆ ಕೊಡಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ಎನ್. ಪಾಟೀಲ್ (ತಾಳಿಕೋಟೆ).—ಸ್ವಾಮಿ, ಇವೊತ್ತಿನ ದಿವಸ ನಮ್ಮ ಮುಂದೆ ಇಟ್ಟಿರುವ ಅಗ್ರಿಕಲ್‌ಚರ್ ಹಾಗೂ ಫಾರೆಸ್ಟ್ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಮಾಡುವುದಕ್ಕೆ ಇಚ್ಛಿಸುತ್ತೇನೆ.

ಮೊದಲು ನಮ್ಮ ದೇಶದೊಳಗೆ ಒಕ್ಕಲುತನ ನೆಟ್ಟಗಿದ್ದರೆ ನಾವು ಇವೊತ್ತಿನ ದಿವಸ ಆಹಾರ ಧಾನ್ಯದ ಕೊರತೆ ನೀಗಲಿಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿ ಬೇಕಾದಷ್ಟು ಜಮೀನಿದ್ದರೂ ಅದಷ್ಟು ಇರಿಗೇಷನ್ ಫೆಸಿಲಿಟೀಸ್‌ಗಳು ಇದ್ದರೂ ಇವೊತ್ತಿನ ದಿನ ಇದನ್ನು ಅಭಿವೃದ್ಧಿ ಮಾಡಲಿಕ್ಕೆ ಆಗದೇ

ಇರುವುದು ಬಹಳ ಶೋಚನೀಯವಾದ ಸಂಗತಿ ಎಂದು ಇಲ್ಲಿ ಹೇಳಬೇಕಾಗಿದೆ. ಮುಖ್ಯವಾಗಿ ಒಕ್ಕಲುತನದಲ್ಲಿ ಉತ್ಪಾದನೆ ಮಾಡಲು ನಮಗೆ ನೀರು ಮುಖ್ಯವಾಗಿ ಬೇಕಾಗುತ್ತದೆ. ಶೇಕಡ 8.5 ರಷ್ಟು ಮಾತ್ರ ನೀರಾವರಿ ಎಂದು ಈಗ ಇದೆ. ಇದರಲ್ಲಿ ಸುಮಾರು 25 ಲಕ್ಷ ಎಕರೆಗೆ ನೀರಾವರಿ ಮಾಡಲು ಅನುಕೂಲ ಸಿಗುತ್ತದೆ. ಮುಂದಕ್ಕೆ ಶೇಕಡಾ 25 ರಷ್ಟು ಭಾಗಕ್ಕೆ ನೀರಿನ ಸಹಾಯ ಒದಗಿಸಿದರೆ ಅದರಿಂದ ಸುಮಾರು 75 ಲಕ್ಷ ಎಕರೆಯಷ್ಟು ಭೂಮಿಗೆ ನೀರಾವರಿ ಸೌಕರ್ಯ ಸಿಕ್ಕಿ ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಇವೊತ್ತಿನ ದಿವಸ ದೊಡ್ಡ ದೊಡ್ಡ ಯೋಜನೆಗಳು ಇತ್ಯರ್ಥವಾಗದೆ ಇರುವುದರಿಂದ ನೀರಾವರಿಯಲ್ಲಿ ಹಿಂದೆ ಬಿದ್ದಿದ್ದೇವೆ. ಈ ದೆಸೆಯಿಂದ ನಾವು ಕೇಳಿಕೊಳ್ಳುವುದು ನಮ್ಮ ಭಾಗದಲ್ಲಿರುವ ಅಪ್ಪರ್ ಕೃಷ್ಣಾ ಯೋಜನೆ ಈಗಲಾದರೂ ಬೇಗನೆ ಬರಲಿ ಎಂದು ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಇದನ್ನೂ ಬೇಗನೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ನಮ್ಮಲ್ಲಿ ಸುಮಾರು 75 ಲಕ್ಷ ಎಕರೆಯಲ್ಲಿ ನೀರಾವರಿ ಮಾಡಲು ಅನುಕೂಲವಾದೀತು. ಇದರಿಂದ ಒಕ್ಕಲುತನ ಮಾಡುವವರಿಗೂ ಸಹಾಯವಾಗುತ್ತದೆ. ನಮಗೆ ಅಭಾವದ ಕಾಲದಲ್ಲಿ ಈಗ ಬೇಕಾಗಿರುವುದು ಬಂಡಿಂಗ್ ಕೆಲಸಗಳೂ ಜಾಸ್ತಿಯಾಗಬೇಕು. ಬಂಡಿಂಗ್‌ನಲ್ಲಿ ಕೆಲಸ ಮಾಡುವ ಕೂಲಿ ಜನರಿಗೆ ಕೂಲಿ ಕಡಿಮೆ ಕೊಟ್ಟರೆ ಜನ ಬರುವುದಿಲ್ಲ ಎಂದು ಇಲ್ಲಿ ಮಾತನಾಡುತ್ತ ನಿನ್ನೆ ಮಾನ್ಯ ಸದಸ್ಯರಾದ ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದರು. ಇವೊತ್ತಿನ ದಿನ ಕೂಲಿ ಜನಕ್ಕೆ ಕೊಡುವ ಕೂಲಿ ಹೆಚ್ಚು ಮಾಡಿದರೆ ಅದರ ಹೆಚ್ಚು ಭಾರ ಬಡ ರೈತನ ಮೇಲೇ ಬೀಳುವುದು. ಇದು ಬಹು ಕಷ್ಟವಾಗುತ್ತದೆ. ಎಕರೇಜು ಬೇಸಿಸ್ ಮೇಲೆ ಕಲ್ಟಿವೇಷನ್ನು ಮಾಡುವಾಗ ಸುಮಾರು 50 ರಿಂದ 55 ರೂಪಾಯಿಗಳ ಹೆಚ್ಚುವರಿ ಹೊರೆಯೂ ಬಡ ರೈತರ ಮೇಲೆ ಬೀಳುತ್ತದೆ. ಈ ದೆಸೆಯಿಂದ ಕೂಲಿ ಹೆಚ್ಚು ಮಾಡಿದರೆ ಹೆಚ್ಚು ಭಾರ ರೈತನ ಮೇಲೇನೇ ಬೀಳುತ್ತದೆ. ವ್ಯವಸಾಯದಲ್ಲಿ ಇವೊತ್ತಿನ ದಿನ ರೈತಾಪಿ ಜನ ಕೆಲವು ಕಡೆ ಬಹಳ ದಿನಗಳಿಂದಲೂ ಬೇಸಾಯ ಮಾಡುತ್ತಿದ್ದರೂ ಅವರಿಗ್ನು ಲೀಗಲೈಸು ಮಾಡಿಲ್ಲ. ಇದರಿಂದ ಇವರು ಇನ್ನು ನೂರಾರು ವರ್ಷಕಾಲ ಕಾಯುವ ಪರಿಸ್ಥಿತಿ ಬರುತ್ತದೆ. ಇವರಷ್ಟೂ ನ್ಯಾಷನಲ್ ವೆಲ್‌ಫೇರ್ ಸ್ಕೀಂನಂತೆ ಗಣನೆಗೆ ತೆಗೆದುಕೊಂಡು ಸರಕಾರ ತಮ್ಮ ಕಡೆಯಿಂದಲೇ ರೈತರಿಗೆ ಭೂಮಿ ಕೊಡಿಸಿದರೆ ಒಕ್ಕಲುತನ ಮಾಡಿ ಹೆಚ್ಚು ಉತ್ಪತ್ತಿ ಮಾಡಲಿಕ್ಕೆ ಸಾಧ್ಯ. ರೈತ ಹೆಚ್ಚು ಭಾರ ಹೊರಲು ಆಗುವುದಿಲ್ಲ. ಇವೊತ್ತಿನ ದಿವಸ ಹೆಚ್ಚು ಉತ್ಪತ್ತಿಮಾಡಲು ರೈತನ ಆರ್ಥಿಕ ಸ್ಥಿತಿಯು ದೆಸೆಯಿಂದ ಆಗುತ್ತಿಲ್ಲ. ರೈತನು ಉಳಿಯಬೇಕಾದರೆ ಅವನಿಗೆ ಸರಕಾರ ಕೆಲವು ಕಡೆ ಮುಫತ್ತಾಗಿ ಭೂಮಿಯನ್ನು ಕೊಡಿಸಿಕೊಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಒಂದುವೇಳೆ ಅವರು ಮುಫತ್ತು ಮಾಡಿದರೆ ಸರಿಇಲ್ಲದೇ ಹೋದರೆ ಅಡ್ಮಿನಿಸ್ಟ್ರೇಟೀವ್ ಚಾರ್ಜಸ್‌ನ್ನು ಆದರೂ ಕಡಿಮೆಯಾಗಿ ಚಾರ್ಜ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಸರ್ಕಾರದವರು 2.8 ಲಕ್ಷ ಟನ್ ಗೊಬ್ಬರ ಕೊಟ್ಟಿದ್ದಾರೆ ಎಂದು ನಾವು ಕೇಳುತ್ತಾ ಇದ್ದೇವೆ. ಅದರಲ್ಲಿ ಸೆಂಟ್ರಲ್ ಗವರ್ನಮೆಂಟಿನವರು ನಮಗೆ ಸಪ್ಲೈ ಮಾಡಿದ್ದು 1.1. ಅಜಮಾಯಿಷಿ ಮಾಡಿದ್ದರಲ್ಲಿ 60 ಸಾವಿರ ಎಕರೆಗೆ ಅದನ್ನು ಸಪ್ಲೈಮಾಡಿದಂತಾಗುತ್ತದೆ. ನಮ್ಮಲ್ಲಿ ಇರುವುದು 25 ಸಾವಿರ ಎಕರೆ ನೀರಾವರಿ. ಉಳಿದ ಪ್ರದೇಶಗಳಿಗೆ ಸಾಲದ ಒಂದು ರೂಪದಲ್ಲಿ ಗೊಬ್ಬರವನ್ನು ಸಪ್ಲೈ ಮಾಡಬೇಕಾಗುತ್ತದೆ. ಅದಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರವನ್ನು ತರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುತ್ತಾ ಇದ್ದೇನೆ.

ನಮ್ಮ ಜಿಲ್ಲೆಯಲ್ಲಿ ದೋಣಿ ರಿವರ್ ಇದೆ. ಆ ಪ್ರದೇಶದಲ್ಲಿ ಸರಾಸರಿ 30 ಸಾವಿರ ಎಕರೆ ಸವಳು ಆಗಿದೆ. ಇದು ಬಹಳ ಉತ್ತಮವಾದ ಬ್ಲ್ಯಾಕ್ ಕಾಟನ್ ಸಾಯಿಲ್. ಇವತ್ತು ಅದು ಬಂಜರು ಆಗಿರುವುದರಿಂದ ಅದನ್ನು ರೆಕ್ಲಮೇಷನ್ ಮಾಡಬೇಕಾದ್ದು ಬಹಳ ಹೆಚ್ಚಿನ ಅವಶ್ಯಕತೆಯುಂಟಾಗಿದೆ ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದವರು 16 ಲಕ್ಷ ರೂಪಾಯಿಗಳನ್ನು ಸಾಯಿಲ್ ರೆಕ್ಲಮೇಷನ್‌ಗಾಗಿ ಸಾಲವಾಗಿ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಅದನ್ನು ಎಕ್ಸ್‌ಪರಿಮೆಂಟ್ ಸಲುವಾಗಿ ಕೊಟ್ಟಿದ್ದಾರೆ ಎಂದು ಕೇಳುತ್ತಾ ಇದ್ದೇವೆ. ಅದನ್ನು ದೋಣ್ ರಿವರ್ ಪ್ರದೇಶದಲ್ಲಿ ಮಾಡಬೇಕೆಂದು ಹೇಳುತ್ತಾ ಇದ್ದೇನೆ. ಅಲ್ಲಿ ಬ್ರಿಡ್ಜ್ ಕಟ್ಟುವುದರಿಂದಾಗಲಿ ಅಥವಾ ಮತ್ತೇನಾದರೂ ಮಾಡುವುದರಿಂದಾಗಲಿ ಏನೂ ಪ್ರಯೋಜನವಾಗುವುದಿಲ್ಲ. ನನ್ನ ಸಲಹೆ ಏನೆಂದರೆ ದೋಣ್ ರಿವರ್ ಬಹಳ ಹೂತು ಹೋಗಿದೆ ಅದು ಭೂಮಿಯ ಲೆವಲ್‌ಗೆ ಬಂದಿದೆ. ಆದ್ದರಿಂದ ಆ ಪ್ರದೇಶದಲ್ಲಿ ತಗ್ಗು ತೋಡಿಸಿ ಅದನ್ನು ಆಳವಾಗಿ ಮಾಡಿಸಿದರೆ ಉಪ್ಪಿನ ಅಂಶ ಕಡಿಮೆಯಾಗುತ್ತದೆ. ಮತ್ತು ಅದರಿಂದಾಗಿ ಬೆಳೆ ಹತ್ತಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ತಮ್ಮ ಕೆಲಸ ಕಾರ್ಯಗಳಲ್ಲಿ ಇದನ್ನು ಸೇರಿಸಿಕೊಂಡು ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಅಂಡರ್‌ಗ್ರೌಂಡ್ ಡ್ರೈನೇಜ್, ವಾಟರ್ ಸಪ್ಲೈ ಇವುಗಳ ಬಗ್ಗೆ ಸಾಕಾದಷ್ಟು ಆಸ್ಥೆ ವಹಿಸಿದ್ದಾರೆ. ಇನ್ನೂ ಹೆಚ್ಚು ಆಸ್ಥೆ ವಹಿಸಿ ಬಾವಿ ತೋಡಿಸುವ ಕಡೆಗೆ ಹೆಚ್ಚಿನ ಗಮನವನ್ನು ಕೊಡ

(ಶ್ರೀ ಜಿ. ಎಸ್. ಪಾಟೀಲ್)

ಬೇಕೆಂದು ಹೇಳುತ್ತೇನೆ. ಬಾವಿಸಲುವಾಗಿ ರೈತರಿಗೆ ತಗಾಯಿ ಸಾಲ ಅಥವಾ ಯಾವುದಾದರೂ ರೂಪದಲ್ಲಿ ಹಣವನ್ನು ಒದಗಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಇಚ್ಛೆ ಮಾಡಿ, ಮಾನ್ಯ ಸ್ಪೀಕರ್ ಅವರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಅರಣ್ಯದ ವಿಷಯ ಯಾರೂ ಹೆಚ್ಚಾಗಿ ಮಾತನಾಡಲಿಲ್ಲ. ಇವತ್ತಿನ ದಿವಸ ವ್ಯವಸಾಯ, ಕಾಡು ಇವುಗಳು ಅತಿ ಮುಖ್ಯವಾದ ವಿಷಯ ಗಳಾದ್ದರಿಂದ ತಾವು ನನಗೆ ಕೊಟ್ಟಿರತಕ್ಕ ಟೈಂ ಸಾಲದು. ಆದರೂ ಕೂಡ ಇನ್ನು ಮುಂದೆ ಯಾವಾಗಲಾದರೂ ಶಾಸನ ಸಭೆ ನಡೆಯುವಾಗ ಈಗ ತಾವು ಕೊಟ್ಟಿರುವುದಕ್ಕಿಂದ ಹೆಚ್ಚು ಟೈಂ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅರಣ್ಯದಲ್ಲಿ ಏನು ಉತ್ಪನ್ನ ಬರಬೇಕಾಗಿತ್ತೊ ಅದರಲ್ಲಿ ಕಾಲು ಭಾಗ ಬರುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ, ಇಲಾಖೆಯವರು ಬಹಳ ಅತ್ಯುತ್ತಮವಾದ ಉನ್ನತ ಬೆಲೆ ಬಾಳತಕ್ಕ ಮರಗಳನ್ನು ಕಡಿದು ಹಾಕುವುದಕ್ಕೆ ಅವಕಾಶ ಮಾಡಿ ಕೊಡುತ್ತಿರುವುದೇ ಆಗಿದೆ. ಕಾಡಿನಲ್ಲಿ ಮರಗಳನ್ನು ಕಡಿದು ಡಿಪೋಗಳಿಗೆ ಸಾಗಿಸುವಾಗ 35—40 ಸಾವಿರ ಬೆಲೆ ಬಾಳತಕ್ಕ ತೇಗ, ಹೊನ್ನೆ ಮೊದಲಾದ ಮರಗಳನ್ನು ತಂದು ಕೇರಳ ಅಥವಾ ಇತರ ಹೊರ ಪ್ರಾಂತ್ಯಗಳಿಗೆ ಕಳುಹಿಸಿಕೊಡುತ್ತಾ ಇದ್ದಾರೆ. ಇದನ್ನು ಹಿಂದಿನ ಸಭೆಯಲ್ಲೂ ಕೂಡ ಹೇಳಿದ್ದೆ. ಒಂದು ವೇಳೆ ಆ ರೀತಿ ಸಾಗಿಸುತ್ತಾ ಇರುವಾಗ ಯಾರನ್ನಾದರೂ ಹಿಡಿದಿದ್ದರೂ ಕೂಡ ಅವರನ್ನು ಕಾಂಪೌಂಡ್ ಮಾಡಿ ಬಿಟ್ಟು ಬಿಡುತ್ತಾರೆ. ಕನ್‌ವಿಕ್ಷನ್ ಆಗಿದ್ದರೂ ಕೂಡ ಅವರನ್ನು ಬಿಟ್ಟುಬಿಡಬೇಕಾದರೆ ಯಾವ ರೀತಿ ಬಿಡುತ್ತಾರೋ ಅರ್ಥವಾಗುವುದಿಲ್ಲ. ಅಂತಹ ಸಂಧರ್ಭದಲ್ಲಿ ಶಿಕ್ಷೆಗೆ ಅವರನ್ನು ಅರ್ಹರನ್ನಾಗಿ ಮಾಡಿ ನಮ್ಮ ದೇಶದ ಕಾಡಿನ ಉತ್ಪನ್ನವನ್ನು ಹೆಚ್ಚು ಮಾಡ ಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕೆಲವು ಸೊಸೈಟಿಗಳಿಗೆ ತಂಗಡಿ ಚಕ್ಕೆ ಕಂಟ್ರಾಕ್ಟ್ ಕೊಟ್ಟಿದ್ದೀರಿ. ಹರಿಜನ ಅರ್ಥಿಕಾಭಿವೃದ್ಧಿ ಸೊಸೈಟಿ ಚಿತ್ರದುರ್ಗ ಅಂತ ಇದೆ. ಈ ತರಹ ದೇಶದ ಆಸ್ತಿ ತೆಗೆದುಕೊಂಡು ಹೋಗಿ ಯಾವುದೋ ಒಂದು ಜನಾಂಗಕ್ಕೆ ಅದು ಬಹಳ ಬಡತನದಲ್ಲಿದೆ ಎಂದು ಹೇಳಿ ಕಂಟ್ರಾಕ್ಟ್ ಕೊಟ್ಟರೆ ಯಾರ ಉದ್ಧಾರವೂ ಆಗುವುದಿಲ್ಲ. ಈ ರೀತಿ ಮಾಡುವುದು ಬಹಳ ಅನ್ಯಾಯ.

ಗಂಧದ ಮರದ ವಿಷಯದಲ್ಲಿ ಬಹಳ ದಿವಸದಿಂದ ಹೇಳುತ್ತಾ ಇದ್ದೇನೆ. ಒಂದು ಟನ್‌ಗೆ 6—7 ಸಾವಿರ ರೂಪಾಯಿ ಆಗುತ್ತದೆ. ಇಂತಹ ಮರಗಳನ್ನು ತುಂಡು ತುಂಡು ಮಾಡಿ ಡಿಪೋ ಗಳಿಗೆತೆಗೆದು ಹೋಗುವ ನೆಪದಲ್ಲಿ ಹೊರಕ್ಕೆ ಸಾಗಿಸುತ್ತಾ ಇದ್ದಾರೆ. ರಾತ್ರಿ ಹೊತ್ತು ಸೈಕಲ್ ಮೇಲೆ ಕಂಟೋನ್‌ಮೆಂಟ್ ಕಡೆಯಿಂದ ಹೋಗುತ್ತಾ ಇದೆ. ರೈತನ ಭೂಮಿಯಲ್ಲಿ ಬೆಳೆದ ಗಂಧದ ಮರವನ್ನು ಅವನು ಜೋಪಾನ ಮಾಡಬೇಕು ಆದರೆ ಅವನಿಗೆ ಕೊಡಬೇಕಾದ ಪರಿಹಾರವನ್ನು ಮಾತ್ರ ಕೊಡುತ್ತಾ ಇಲ್ಲ. ಒಂದು ವೇಳೆ ಅವನು ಅದನ್ನೇನಾದರೂ ಕಡಿದು ಹಾಕಿದರೆ ಪೋಲೀಸ್‌ನವರಿಗೆ ದೂರು ಹೋಗಿ ಅವನು ಶಿಕ್ಷೆಗೆ ಗುರಿಯಾಗ ಬೇಕಾಗುತ್ತದೆ, ಹೀಗಾಗಿ ಅವನು ಈ ಕಷ್ಟ ಏಕೆ ಎಂದು ಹೇಳಿ ಗಿಡ ಬಂದ ತಕ್ಷಣ ಸಸಿ ಇರುವಾಗಲೇ ಅದನ್ನು ಕಿತ್ತು ಹಾಕುತ್ತಾ ಇದ್ದಾರೆ. ಗಿಡ ಬೆಳೆಸಿದ ರೈತರಿಗೆ ಪರಿಹಾರವನ್ನು ಕೊಡುವ ವಿಷಯ ಬೇಕಾದಷ್ಟು ಜನರು ಹೇಳಿದ್ದಾರೆ. ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರಿ ಬರೀ ತೀರ್ಮಾನದಿಂದ ಪ್ರಯೋಜನವಿಲ್ಲ, ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಕೆಲವು ಸಾಮಿಲ್ಸ್‌ಗಳಿಂದ 5—10 ಲಕ್ಷ ರೂಪಾಯಿಗಳನ್ನು ಡಿಪಾರ್ಟ್‌ಮೆಂಟಿನವರು ಪಡೆದದ್ದು ಇದೆ. ಒಂದು ಸಾರಿ ಕಾಂಪೌಂಡ್ ಮಾಡುವುದಂತೂ ಸ್ವಾಭಾವಿಕ. 4—5 ಸಾರಿ ಕಾಂಪೌಂಡ್ ಮಾಡಿದ್ದಾರೆ. ಸಾಮಿಲ್‌ನವರು ಎಷ್ಟು ಬಂಡವಾಳ ಹಾಕಿದ್ದಾರೆ, ಅವರಿಗೆ ಎಷ್ಟು ಆದಾಯ ಇದೆ ಎಂಬುದನ್ನು ತಾವು ನೋಡಬೇಕು.

ಕಾಡಿನಲ್ಲಿ ಜಮೀನು ಕೊಡುವಾಗ ಕೆಲವರಿಗೆ 62 ನೇ ಇಸವಿ ರೇಟ್ ಪ್ರಕಾರ ಕೆಲವರಿಗೆ 65ನೇ ಇಸವಿ ರೇಟ್ ಪ್ರಕಾರ ಕೊಟ್ಟಿದ್ದೀರಿ. ಇದರಲ್ಲೂ ರಾಜಕೀಯ ನಡೆದಿದೆ. ಇದನ್ನು ತಪ್ಪಿಸಬೇಕು ಎಲ್ಲರಿಗೂ ಒಂದೇ ರೀತಿಯ ರೇಟ್‌ನಲ್ಲಿ ಕೊಡಬೇಕು.

ಟಿಂಬರ್ ಮತ್ತು ಸಾಫ್ಟ್ ವುಡ್ ಕೊಡುವಾಗ ಮೈಸೂರು ಸ್ಟೇಟ್‌ನಲ್ಲಿರತಕ್ಕ ಭದ್ರಾವತಿ ಫ್ಯಾಕ್ಟರಿಗಾಗಲಿ ಅಥವಾ ಬೆಂಗಳೂರಿನಲ್ಲಿರತಕ್ಕ ರೆಂಕೋ ಮುಂತಾದ ಫ್ಯಾಕ್ಟರಿಗಳಿಗೆ ಯಾವ ರೇಟ್ ಪ್ರಕಾರ ಕೊಟ್ಟಿದ್ದೀರಿ ? ಇವತ್ತು ಮಾರುಕಟ್ಟೆಯ ರೇಟ್ ಏನಿದೆ ಅದಕ್ಕಿಂತ ಕಡಿಮೆ ಬೆಲೆಗೆ ಕೊಡುವುದಕ್ಕೆ ಕಾರಣವೇನು ? ಅರಣ್ಯ ಖಾತೆ ವಿಷಯದಲ್ಲಿ ಕೆಲವು ಟೀಕೆಗಳಿವೆ, ಅವನ್ನು ಆದಷ್ಟು ಬೇಗ ಗಮನಿಸಿ ಇರುವ ಲೋಪದೋಷಗಳನ್ನು ಸರಿಪಡಿಸಬೇಕು.

ವ್ಯವಸಾಯದ ವಿಷಯ ಹೇಳಬೇಕಾದರೆ ಸಂಬಂಧಪಟ್ಟ ಸಚಿವರಿಲ್ಲ, ಪಾರ್ಲಿಮೆಂಟರಿ ಸೆಕ್ರೆಟರಿಗಳಿದ್ದಾರೆ, ಅವರಿದ್ದರೂ ಪ್ರಯೋಜನವಿಲ್ಲ, ಆರ್. ಎಂ. ಪಾಟೀಲರು, ನೀರಾವರಿ ಸಚಿವರು ಇರಬೇಕಾಗಿತ್ತು. ಈ ಇಲಾಖೆ ನಾಲ್ಕಾರು ಸಚಿವರಿಗೆ ಸಂಬಂದಪಟ್ಟಿದೆ. ಬಾವಿ ತೆಗೆಯಬೇಕಾದರೆ ಬಿ. ಡಿ. ಓ. ಕೇಳಿದರೆ ವ್ಯವಸಾಯದ ಇಲಾಖೆಯವರನ್ನು ಕೇಳಿ ಎಂದು ಹೇಳುತ್ತಾರೆ, ಅಲ್ಲಿ ಹೋದರೆ ತಾಲ್ಲೂಕುಬೋರ್ಡ್ ಪ್ರೆಸಿಡೆಂಟರನ್ನು ಕೇಳಬೇಕೆನ್ನುತ್ತಾರೆ, ಅವರ ಹತ್ತಿರ ಹೋದರೆ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಹೀಗೆ ದಿಕ್ಕು ದೆಶೆ ಇಲ್ಲದೆ ಇಲಾಖೆ ಇದೆ. ವ್ಯವಸಾಯದ ಇಲಾಖೆಯು ಹಾವು ಕಪ್ಪೆ ನುಂಗಿ ಒದ್ದಾಡುವ ಹಾಗೆ ಕೆಲಸಮಾಡುತ್ತದೆ, ತಿಂಗಳಾದರೆ ಸಲೀಸಾಗಿ ಅಧಿಕಾರಿಗಳಿಗೆ ಸಂಬಳ ಮಾತ್ರ ಬಂದುಬಿಡುತ್ತದೆ. ಬಾವಿಗೆ ಹಣ ಪಡೆಯಬೇಕಾದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೋಗಬೇಕು, ಅಲ್ಲಿಗೆ ಹೋದರೆ ಅರ್ಜಿ ತೆಗೆದುಕೊಳ್ಳುವವರೇ ಇರುವುದಿಲ್ಲ. ತಾಲ್ಲೂಕುಗಳಲ್ಲಿ ಸೊಸೈಟಿ ಇದೆ, ಎರಡು ತಿಂಗಳಲ್ಲಿ ಹಣ ದೊರೆಯುತ್ತದೆ ಎಂದು ಹೇಳುತ್ತಾರೆ. ಆದರೆ ಮೂರು ವರ್ಷವಾದರೂ ದೊರೆಯದಿರುವ ಸಂದರ್ಭಗಳಿಗೆ, ಬೇಕಾದರೆ ತಿಳಿಸುತ್ತೇನೆ. ಹೀಗಾದರೆ ವ್ಯವಸಾಯ ಹೇಗೆ ಮುಂದುವರೆಯುವುದು ? ಗೊಬ್ಬರ ಕೇಳಿದರೆ ಸೊಸೈಟಿಯವರು ತರಿಸಿಲ್ಲವೆಂದು ಹೇಳುತ್ತಾರೆ, ಕೆಲವುವೇಳೆ ಅವರು ಕೊಡುವುದದು ಸಾಲದೆ ಸಿಟಿಗೆ ಹೋಗಿ ತೆಗೆದುಕೊಳ್ಳಬೇಕಾಗುತ್ತದೆ. ಗ್ರಾಮಗಳಲ್ಲಿ ಮಲಮೂತ್ರ, ಕಸಕಡ್ಡಿ ಕೂಡಿ ಹಾಕಿ ಗೊಬ್ಬರ ಮಾಡಬೇಕೆಂದು ಹೇಳಿದರೂ ಕೂಡ ಎನ್. ಇ. ಎಸ್.ನವರು ಇದುವರೆಗೂ ಕೂಡ ಪ್ರಯತ್ನ ಮಾಡಿಲ್ಲ. ಇಂಥ ಇಲಾಖೆ ಏಕಿರಬೇಕು ? ಕಸಕಡ್ಡಿ ಒಂದು ಕಡೆ ಸೇರಿಸಿ ಕಾಂಪೋಸ್ಟ್ ಮಾಡಿ ಹಂಚಲು ಏರ್ಪಾಡು ಮಾಡಿದ್ದೀರಾ? ಯಾರಿಗೂ ಕೂಡ ವ್ಯವಸಾಯದ ಇಲಾಖೆಯನ್ನು ಉತ್ತಮಪಡಿಸಿ ವ್ಯವಸಾಯಾಭಿವೃದ್ಧಿ ಮಾಡಲು ಮನಸ್ಸಿರುವಂತೆ ಈಗ ಮಾಡುತ್ತಿರುವ ಕೆಲಸ ನೋಡಿದರೆ ಕಂಡುಬರುವುದಿಲ್ಲ. ಅನೇಕ ಜನ ರಾಜ್ಯ ಸಭೆ ಸದಸ್ಯರು ನಿನ್ನೆಯಿಂದ ಓಡಾಡುತ್ತಿದ್ದಾರೆ, ಓಟು ತೆಗೆದುಕೊಂಡು ಹೊರಟು ಹೋಗುತ್ತಾರೆ. ನಮ್ಮ ಸಂಸ್ಥಾನಕ್ಕೆ ಸಲ್ಲಬೇಕಾದ ಹಣ ಸೌಲಭ್ಯ ಕಡಮೆಯಾಗಿ ನಮ್ಮ ದೇಶದ ಕೀರ್ತಿ ಕಡಮೆಯಾಗಿರುವುದಕ್ಕೆ ಅವರೇ ಕಾರಣ. ನಾವು ನೋಡಿದ ಹಾಗೆ ಅವರು ನಮ್ಮ ದೇಶದ ಕೀರ್ತಿಯನ್ನು ಸರಿಯಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿಲ್ಲ. ದೇಶ ಹೀಗೆ ಅಧೋಗತಿಗೆ ಬರುವಾಗ ಅವರೇಕೆ ಇರಬೇಕು ? ಆಂಧ್ರದವರು 300 ರೂಪಾಯಿಗಳಿಗೆ ನಮ್ಮ ಜಮೀನನ್ನು ಕೊಂಡು ಇಂದು ನಮ್ಮವರಿಗೇ 4—5 ಸಾವಿರ ರೂಪಾಯಿಗಳಿಗೆ ಮಾರುತ್ತಿದ್ದಾರೆ, ಅವರಿಗೆ ಸೌಲತ್ತು ಕೊಡುತ್ತಿದ್ದಾರೆ. ಕೇರಳದವರಾದರೋ ದರಖಾಸ್ತು ಕೊಡದೆ ಜಮೀನನ್ನು ಸ್ವಾಧೀನಪಡಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು. ನೀರಿನ ಅನುಕೂಲವಿರುವ ಕಡೆ ಹೆಚ್ಚಾಗಿರುವ ಜಮೀನನ್ನು ರಿಲೀಸ್ ಮಾಡಿಕೊಡಬೇಕು ಎಂದು ಇಷ್ಟು ಹೇಳಿ, ಈ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಟಿ. ಕೆ. ಕಂಬಳಿ (ಕುಂದ್‌ಗೋಳ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರುವ ವ್ಯವಸಾಯ, ಅರಣ್ಯ ಮೀನುಗಾರಿಕೆ ಯಾವತ್ತೂ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ವ್ಯವಸಾಯದ ಉದ್ಯೋಗ ಮಾಡುವ ನಮ್ಮ ರಾಜ್ಯದಲ್ಲಿ ಕನಿಷ್ಠ ಸೇಕಡ 75 ಜನ ವ್ಯವಸಾಯ ಮಾಡುತ್ತಿದ್ದರೂ ಕೂಡ ಬೆಳೆಯುವ ಆಹಾರ ನಮಗೆ ಸಾಲುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೇನು ಕಾರಣ ಎಂಬುದನ್ನು ಕಂಡುಹಿಡಿಯಬೇಕು. ಈ ಉದ್ಯೋಗವನ್ನು ಈಗ ಬಿಡುವ ಸ್ಥಿತಿ ಬಂದಿದೆ. ಇದು ಲಾಭದಾಯಕವಾಗಬೇಕಾದರೆ, ನಮ್ಮ ದೇಶದ ಆಹಾರದ ಉತ್ಪತ್ತಿ ಹೆಚ್ಚಬೇಕಾದರೆ ಏನು ಮಾಡಬೇಕೆಂದು ಎಲ್ಲರೂ ಹೇಳುತ್ತಿದ್ದರೂ ಕೂಡ ಇಲ್ಲಿಯವರೆಗೆ ಸರಿಯಾದ ಒಂದು ವ್ಯವಸ್ಥೆ ಕಾರ್ಯರೂಪಕ್ಕೆ ಬಂದಿಲ್ಲ. ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರೆ ಇದು ಸರಿಹೋಗುವುದಿಲ್ಲ. ಈಗಿರುವ ಸೇಕಡ 75 ಮಂದಿ ರೈತರಿಗೆ ಸೇಕಡ 25 ಮಂದಿಗೆ ಕೂಡ ಹೊಟ್ಟೆಗೆ ಹಾಕುವುದಕ್ಕಿಲ್ಲ. ಬೆಳೆಯುವ 75 ಮಂದಿಗೂ ಕೂಡ ಅವರು ಬೆಳೆಯುವುದು ಸಾಕಾಗುತ್ತಿಲ್ಲ. ವ್ಯವಸಾಯಗಾರರಿಗೆ ಬೇಕಾಗಿರುವುದು ಬೀಜ, ಗೊಬ್ಬರ, ಉತ್ಪತ್ತಿಮಾಡುವ ಹೊಲ. ಈ ಮೂರು ಸರಿಯಾಗಿಲ್ಲ ಎಂಬುದು ನನ್ನ ಮಾತು. ಈ ಮೂರೂ ಸರಿಯಾಗಬೇಕಾದರೆ ದೇವರು ಮನಸ್ಸು ಮಾಡಬೇಕು. ಆತ ಕೃಪೆ ಮಾಡಬೇಕು. ಅವನ ಕೃಪೆಯಿಲ್ಲದೆ ಈಗ ತೊಂದರೆಯಾಗಿದೆ. ಹಿಂದಿನಿಂದಲೂ ನಮ್ಮ ಕೊರತೆ

(ಶ್ರೀ ಟಿ. ಕೆ. ಕಂಬಳಿ)

ತಪ್ಪಿಲ್ಲ. ಈಗ ಸರಕಾರದವರು ನೀರಾವರಿ, ಬೀಜ, ಗೊಬ್ಬರ ಮುಂತಾದುವುಗಳ ಸಹಾಯ ನೀಡುತ್ತಿದ್ದಾರೆ. ಹೈಬ್ರಿಡ್ ಬಿತ್ತನೆ ಮಾಡಿದರೆ ಹೆಚ್ಚು ಬೆಳೆ ಬರುತ್ತದೆಂದು ಕೆಲವರು ಹೇಳಿದರು. ಅದು ನಿಜ, ನಾನೂ ವ್ಯವಸಾಯಗಾರ. ಆದರೆ ಒಂದು ಕಷ್ಟವಿದೆ, ಹೈಬ್ರೀಡ್ ಬೀಜ ಸಿಕ್ಕುವುದಿಲ್ಲ. ನಮ್ಮಲ್ಲಿ ಜೋಳ, ಮೈಜ್, ಸಜ್ಜೆ ಎಂದು ಮುಖ್ಯವಾಗಿ ಮೂರು ಹೈಬ್ರಿಡ್ ಬೀಜ ಇದೆ. ಹೀಗೆ ಎಲ್ಲಾ ಧಾನ್ಯಗಳ ವಿಚಾರದಲ್ಲೂ ಸುಧಾರಣೆಯಾಗಬೇಕು. ರಾಗಿ, ಬತ್ತ, ನವಣೆ ಮುಂತಾದ ಎಲ್ಲಾ ಧಾನ್ಯಗಳ ಸಮಸ್ಯೆಯೂ ಬಗೆಹರಿಯಬೇಕು. ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ಇದನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಮೊನ್ನೆ ಕೆಲವರು ಬರೀ ಗಂಡುಜಾತಿ ಬೀಜ ದೊರೆಯುತ್ತದೆ, ಹೆಣ್ಣು ಜಾತಿ ಬೀಜವಿಲ್ಲ ಎಂದು ಹೇಳಿದರು. ಅದನ್ನು ಹೊರ ದೇಶದಿಂದ ತರಿಸುವುದಕ್ಕೆ ಬದಲಾಗಿ ಇಲ್ಲೇ ಏಕೆ ತಯಾರಿಸಬಾರದು ?

ಅಧ್ಯಕ್ಷರು.—ಹೊರದೇಶದಿಂದ ಯಾವುದನ್ನು ತರಿಸಬೇಕು ?

ಶ್ರೀ ಟಿ. ಕೆ. ಕಂಬಳಿ.—ಕೆಲವು ಕಡೆ ಹೆಣ್ಣು ಬೀಜ ದೊರೆಯುವುದಿಲ್ಲ, ಗಂಡುಬೀಜ ದೊರೆಯುತ್ತದೆ. ಎರಡನ್ನೂ ಈಗ ತರಿಸಬೇಕು. ಇದನ್ನು ತರಿಸುವುದಕ್ಕೆ ಬದಲಾಗಿ ಇಲ್ಲೇ ಉತ್ಪತ್ತಿ

7-00 P.M.

ಮಾಡಬೇಕು. ಹೊರಗಿನಿಂದ ತರುವುದಕ್ಕಿಂತ ಈ ಬೀಜ ಇಲ್ಲಿಯೇ ಉತ್ಪತ್ತಿ ಮಾಡುವುದು ಒಳ್ಳೆಯದು. ಈ ಹೈಬ್ರಿಡ್ ಬೀಜದ ಬಗ್ಗೆ ರಿಸರ್ಚ್ ಮಾಡಬೇಕಾದ ಅಗತ್ಯ ಇದೆ. ರಿಸರ್ಚ ವಿಷಯದಲ್ಲಿ ನಮ್ಮ ರಾಜ್ಯ ಹಿಂದೆ ಉಳಿದಿವೆ. ನಮ್ಮಲ್ಲಿ ಇನ್ನೂ ಸೀಡ್ ಫಾರ್ಮ್ ಆಗಿಲ್ಲ. ಈ ಸೀಡ್ ಫಾರ್ಮನ್ನು ತಾಲ್ಲೂಕ್ ವೈಸ್ ಆಗಿ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಕುಂದಗೋಳ್ ತಾಲ್ಲೂಕಿನಲ್ಲಿ ಸೀಡ್ ಫಾರ್ಮ ಮಾಡಬೇಕೆಂದು ಮೂರು ಸಲ ಕೇಳಿದರೂ ಕೂಡ ಇದುವರೆಗೆ ಸೀಡ್ ಫಾರ್ಮ ಆಗಿಲ್ಲ. ತಾಲ್ಲೂಕ್ ವೈಸ್ ಸೀಡ್ ಫಾರ್ಮ ಮಾಡುವುದರಿಂದ ಕೆಳಮಟ್ಟದಲ್ಲಿರತಕ್ಕ ಸಮಸ್ಯೆಗಳು ದೂರವಾಗುತ್ತವೆ. ರಿಸರ್ಚ ಮಾಡಿ ಹೈಬ್ರಿಡ್ ಜೋಳದ ಬೀಜ ಇಲ್ಲಿಯೇ ಪಡೆಯಬಹುದು. ಗೋಧಿಗೆ ಹೈಬ್ರಿಡ್ ಇಲ್ಲವಾದುದರಿಂದ ಅದನ್ನು ಅವಶ್ಯ ತರಿಸಬೇಕಾಗುತ್ತದೆ. ಒಂದು ಕ್ರಾಪ್ ಫೆಲ್ಯೂರ್ ಆದರೆ ಇದರಲ್ಲಿ ಕಷ್ಟವಾಗುತ್ತದೆ. ಇಂದು ದೇಶದಲ್ಲಿ ಅಭಾವ ಇದೆ. ಕ್ಷಾಮದಲ್ಲಿ ಫಾರ್ಮ ಸಂರಕ್ಷಣೆ ಮಾಡತಕ್ಕದ್ದು ಸರಕಾರದ ಹೊಣೆ. ಪರದೇಶದಲ್ಲಿ ಯಾವ ರೀತಿ ಕ್ರಾಪ್ ಪ್ರೊಟೆಕ್ಷನ್ ವ್ಯವಸ್ಥೆ ಇದೆಯೋ ಅದೇ ರೀತಿ ನಮ್ಮ ದೇಶದಲ್ಲಿಯೂ ಕೂಡ ವ್ಯವಸ್ಥೆಯಾಗಬೇಕಾದುದು ಅಗತ್ಯವಾಗಿದೆ ಎಂದು ಹೇಳುತ್ತೇನೆ. ಕೇಂದ್ರ ಸರಕಾರದೊಳಗೆ ಎರಡು ಮೂರು ವರ್ಷಗಳ ಹಿಂದೆ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಮಾತನಾಡುತ್ತಿದ್ದರು. ಈಗಿನ ಕಾಲದಲ್ಲಿ ಇದು ಬಹಳ ಅವಶ್ಯಕವಾಗಿದೆ. ಕ್ರಾಪ್ ಪ್ರೊಟೆಕ್ಷನ್‌ಗಾಗಿ ಒಂದು ವಿಮಾ ಯೋಜನೆಯ ವ್ಯವಸ್ಥೆ ಮಾಡಬೇಕಾದ ಅಗತ್ಯವಿದೆ ಎಂದು ಸಲಹೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಇದನ್ನು ಅಗತ್ಯವಾಗಿ ಮಾಡಬೇಕೆಂದು ನನ್ನ ಮತ.

ಇನ್ನೊಂದು ವಿಚಾರ. ನಮ್ಮ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರಬೇಕಾಗುತ್ತದೆ. ಗೊಬ್ಬರದ ಉತ್ಪತ್ತಿ ಎಷ್ಟು ಮಾಡಿದರೂ ಅದು ಕಡಿಮೆಯಾಗಿದೆ. ರಾಸಾಯನಿಕ ಗೊಬ್ಬರದ ತಯಾರಿಸುವುದಕ್ಕೆ ನಾಲ್ಕಾರು ಕಾರಖಾನೆಗಳನ್ನು ಪ್ರಾರಂಭಿಸಿ ಸರಕಾರದವರು ರೈತರಿಗೆ ಗೊಬ್ಬರ ಪೂರೈಸಬೇಕು. ಇದಲ್ಲದೆ ತಾಲ್ಲೂಕುಗಳಲ್ಲಿ ರೈತರಿಗೆ ಕಡಿಮೆ ಬೆಲೆಯಲ್ಲಿ ರೆಂಟೆ ಕುಂಟೆ ಮೊದಲಾದ ಉಪಕರಣಗಳನ್ನು ಒದಗಿಸಿ ಕೊಡಬೇಕು. ಈ ರೀತಿ ಒಂದು ವ್ಯವಸ್ಥೆ ಬೇರೆ ಪ್ರಾಂತಗಳಲ್ಲಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಇಲ್ಲ. ಈ ಬಗ್ಗೆ ವ್ಯವಸಾಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ತಾಲ್ಲೂಕಿಗೆ ಒಂದು ವ್ಯವಸ್ಥೆ ಮಾಡಬೇಕು ಮತ್ತು ಕಾರ್ಯ ರೂಪದಲ್ಲಿ ತಂದು ಪೂರೈಸಬೇಕು.

ಕೊನೆಯದಾಗಿ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. ಈಗ ಅರಣ್ಯ ಇಲಾಖೆಯ ರೇಂಜು ಆಫೀಸು ಅಂದರೆ ಡಿ.ಎಫ್.ಓ. ಆಫೀಸು ಧಾರವಾಡ ನಗರದಲ್ಲಿ ಇದೆ. ಧಾರವಾಡವು ಜಿಲ್ಲಾ ಕೇಂದ್ರಸ್ಥಾನವಾಗಿದ್ದು ಸೆಂಟ್ರಲ್ ಪ್ಲೇಸ್ ಆಗಿರುವುದರಿಂದ ಇಲ್ಲಿ ಕಂಟ್ರಾಕ್ಟರ್ಸ್ ಹೆಚ್ಚು ಜನ ಇದ್ದಾರೆ. ಇಲ್ಲಿ ಈ ಆಫೀಸು ಇರುವುದರಿಂದ ಬಹಳ ಉಪಯೋಗವಾಗುತ್ತದೆ.

ಆದುದರಿಂದ ಈ ಆಫೀಸು ಬೇರೆ ಕಡೆ ಹೋಗಬಾರದು. ಇಲ್ಲಿಯೇ ಈ ಆಫೀಸು ಇರುವುದನ್ನು ಕಾಯಂ ಮಾಡಬೇಕು ಎಂದು ಹೇಳಿ ಇದನ್ನು ಅಧ್ಯಕ್ಷರ ಮೂಲಕ ಸರಕಾರಕ್ಕೆ ಬಿನ್ನವಿಸಿ ಕೊಳುತ್ತೇನೆ. ಕೊನೆಯದಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Mr. SPEAKER.—The House will now rise and meet again tomorrow at 8-30 A.M.

The House adjourned at Five Minutes past Seven of the Clock to meet again at Thirty Minutes past Eight of the Clock on Tuesday the 29th March 1966.

WD 6710—GPB—500—28-6-66

MYSORE LEGISLATIVE ASSEMBLY

Tuesday, 29th March 1966.

The House met in the Assembly Chamber, Vidhana Soudha, Bangalore, at Thirty Minutes Past Eight of the clock.

Mr. SPEAKER (Sri Vaikunta Baliga, B.A., B.L.,) in the Chair.

PAPERS LAID ON THE TABLE

SECRETARY.—I beg to lay on the Table the Third List of un-starred questions and answers.

UNSTARRED QUESTIONS AND ANSWERS

Central Herb Garden at Lal-bagh.

Q. 11.—Sri C. R. RANGE GOWDA (Magadi).—

Will the Government be pleased to state :—

(*a*) when the Central Herb Garden was established in Lal-bagh Bangalore ;

(*b*) what is the amount so far spent for that purpose ;

(*c*) how many kinds and what are the species of herbs that are grown there ;

(*d*) what is the income so far derived from that garden ?

A.—Sri G. NARAYANA GOWDA (Minister for Agriculture).—

(a) No such Central Herb Garden has been established as yet.

(*b*) Does not arise.

(c) Do

(*d*) Do

Supply of seed potatoes.

Q. 13.—Sri C. R. RANGE GOWDA (Magadi).—

Will the Government be pleased to state:—

(a) the arrangements that are made for the supply of seed potatoes to the ryots in the State;

(b) where do they get the seed potatoes and at what cost;

(c) whether sufficient care is taken to select the best seed and to supply the same to the ryots in time?

A.—Sri G. NARAYANA GOWDA (Minister for Agriculture).—

(a) The Mysore State Marketing Society procures the seed potatoes and distributes it through the Primary Marketing Co-operative Societies to the needy ryots.

(b) From Himachal Pradesh and Burma. The cost depends on the rate that prevails during the months of October and November each year when the potato season starts and varies according to procurent rates. The cost of seed potatoes during 1964-65 was as under:—

1. Burma Seed Potatoes—Rs. 74 per bag (ex-destination).
2. Simla Seed Potatoes—Rs. 68.42 (average per bag) ex-Simla).

(c) Yes.

Villages without Educational Facilities.

Q. 17.—Sri C. R. RANGE GOWDA (Magadi).—

Will the Government be pleased to state:—

(a) the number of villages in Bangalore Division that are still without any educational facilities;

(b) the number of primary schools in the above division that are still without proper accommodation for schools;

(c) the steps taken to provide buildings for all these schools and the time required for so doing?

A.—Sri S. R. KANTHI (Minister for Education).—

(a) 870.

(b) 60.

(c) Government contribution of Rs. 1,000 per room is assured for new school buildings. The Taluk Development Board is responsible for construction of Primary School buildings. They are being urged to take up more buildings.

Medical Examination of School Children

Q. 21.—Sri C. R. RANGE GOWDA (Magadi).—

Will the Government be pleased to state :—

(*a*) whether any officer is deputed to foreign countries to study the system of medical examination of school children ;

(*b*) whether they intend to introduce any new system in the State in this behalf and if so, what is that system ?

A.—Sri S. R. KANTHI (Minister for Education).—

(*a*) No.

(*b*) No.

Survey Regarding Indebtedness of Ryots

Q. 32.—Sri C. R. RANGE GOWDA (Magadi).—

Will the Government be pleased to state :—

(*a*) whether there has been a survey regarding the extent of indebtedness of the ryots in the State after the introduction of Community Development Blocks and if so, the extent of indebtedness prevailing ;

(*b*) whether they have taken up any measures to remove the indebtedness, if so, what are they ?

A.—Sri K. PUTTASWAMY (Minister for Co-operation and Housing).—(*a*) and (*b*) No such survey has been conducted by the Co-operation Department, but loans are being advanced by the Mysore State Land Development Bank for redemption of old debts. The quantum of loan advanced for this purpose by the said Bank since its inception up to 30th June 1965 amounted to Rs. 9,31,16,983-00.

Phada Restoration Cases

Q. 36.—Sri C. R. RANGE GOWDA (Magadi).—

Will the Government be pleased to state :—

(*a*) the number of Phada restoration cases pending in each taluk of Bangalore Rural District at present ;

(*b*) the reasons for the delay in restoring the same to the respective parties ;

(SRI C. R. RANGE GOWDA)

(c) since how many years these cases are pending;

(d) whether it is a fact that the parties are paying exorbitant T. T. fines for the same lands ?

A.—Sri M. V. KRISHNAPPA (Minister for Revenue).—

(a)	1.	Doddaballapur taluk	5
	2.	Devanahalli taluk	—
	3.	Hoskote taluk	—
	4.	Nelamangala taluk	—
	5.	Anekal taluk	2
	6.	Ramanagaram taluk	12
	7.	Magadi taluk	84
	8.	Channapatna taluk	134
	9.	Kanakapura taluk	3

(b) Some of them are pending under correspondence for non-payment of arrears, etc.

(c) From 8 months to 5 years.

(d) No.

Joint-Stock Companies for the Development of Film Industry

Q. 56.—Sri C. R. RANGE GOWDA (Magadi).—

Will the Government be pleased to state:—

(a) the number of Joint-Stock Companies started for the development of the film industry in the State;

(b) the facilities and concessions given to these concerns;

(c) whether they have taken any initiative to procure raw film to those concerns;

(d) whether they have procured any quota of raw film to the State;

(e) how it is being distributed ?

A.—Sri K. MALLAPPA (Minister for Industries and Commerce).—

(a) Twenty-one.

(b) None so far except helping to procure raw films.

(c) The cases of parties approaching Government for raw film quota are being recommended to the Government of India.

(d) No.

(e) The allotment is being made by the Chief Controller of Imports and Exports, Government of India.

Maintenance of Tanks under Irrigation Act

Q. 80.—Sri C. R. RANGE GOWDA (Magadi).—

Will the Government be pleased to state:—

(a) which are all the tanks that are taken up for maintenance under the Irrigation Act, 1964, in Bangalore District;

(b) what is the percentage of maintenance cess fixed in each one of these cases;

(c) what is the amount collected for each one of these tanks and what is the amount expended so far?

A.—Sri ALUR HANUMANTHAPPA (Deputy Minister for Minor Irrigation).—(a) The Mysore Irrigation Act, 1965, has been published as Mysore Act No. 16 of 1965 in the Gazette dated 19th August 1965 for general information and this Act has been brought into force with effect from 1st *January* 1966 only. The question of taking up the tanks for maintenance under this Act in all the districts of the State including Bangalore District is under consideration of Government.

(b) Does not arise in view of answer to (a).

(c) Does not arise.

Municipal High Schools in Bangalore Rural District

Q. 81.—Sri C. R. RANGE GOWDA (Magadi).—

Will the Government be pleased to state:—

(a) which are all the Municipal High Schools in Bangalore Rural District;

(b) how many Managing Committee meetings of these High Schools have been held in the year 1962-63, 1963-64, 1964-65 each year?

A.—Sri S. R. KANTHI (Minister for Education).—

(a) 1. Municipal High School, Anekal.
2. Municipal High School, Devanahally.
3. Municipal High School, Doddaballapur.
4. Municipal High School, Hoskote.
5. Municipal High School, Kanakapura.
6. Municipal High School, Magadi.
7. Municipal High School, Nelamangala.
8. Municipal High School, Thyamagondlu.
9. Municipal High School, Vijayapura.

(SRI S. R. KANTHI)

(*b*) —

Sl. No.	*Name of the Institution*	*Managing Committee meetings held*		
		1962-63	*1963-64*	*1964-65*
1.	Municipal High School, Anekal ..	1	1	Nil
2.	Municipal High School, Devanahalli. ..	1	2	Nil
3.	Municipal High School, Doddaballapur. ..	1	..	1
4.	Municipal High School,Hoskote ..	1	1	1
5.	Municipal High School, Kanakapura. ..	1	1	2
6.	Municipal High School, Magadi ..	1	3	1
7.	Municipal High School, Nelamangala. ..	2	2	Nil
8.	Municipal High School, Thyamagondlu. ..	2	1	1
9.	Municipal High School, Vijayapura. ..	1	1	1

Master-Plan for Irrigation Projects

Q. 82.—Sri C. R. RANGE GOWDA (Magadi).—

Will the Government be pleased to state :—

(*a*) whether the Master-Plan for the construction of Irrigation Projects in Magadi Taluk which was under preparation is now ready ;

(*b*) if so, what are the works included in the plan ;

(*c*) the amount required to implement the same ;

(*d*) the amount so far allotted for that purpose ?

A.—Sri ALUR HANUMANTHAPPPA (Deputy Minister for Minor Irrigation).—

(*a*) Not yet.

(*b*), (*c*) and (*d*) Does not arise in view of reply to clause (*a*).

Surprise Visits to Offices and Institutions

Q. 85.—Sri C. R. RANGE GOWDA (Magadi).——

Will the Government be pleased to state:—

whether Ministers and Deputy Ministers and also the inspecting officers of the Departments are giving surprise visits to the offices and institutions under their control with a view to improve efficiency in administration?

A.—Sri S. NIJALINGAPPA (Chief Minister).—

Ministers, Deputy Ministers and also the inspecting officers do pay occasional surprise visits.

Suggestions made by Dr. D. V. Nadakarni

Q. 86.—Sri C. R. RANGE GOWDA (Magadi).—

Will the Government be pleased to state:—

whether the various suggestions made by Dr. D. V. Nadakarni, Ex-Director of Medical Services in the State, in his pamphlets in the matter of (i) Hospital Administration and Amenities and (ii) Medical Education and Rural Medical Relief are given effect to by Government?

A.—Sri K. NAGAPPA ALVA (Minister for Health).—

No.

TAMARIND TREES IN GOMAL LANDS.

Q. 87.—Sri C. R. RANGE GOWDA (Magadi).——

Will the Government be pleased to state:—

(*a*) the number of tamarind trees in the gomal lands of Averahally Village, Madabal Hobli of Magadi Taluk, during the year 1955-56, 1959-60, 1962-63 and now;

(b) what is the Amarai sales of these trees during the said years;

(*c*) whether there is any decrease in the Amarai sale amount during that priod;

(*d*) if so, the reason for the same?

A.—Sri M. V. KRISHNAPPA (Minister for Revenue).—

	Year	*No. of trees*
(a)	1955-56	561
	1959-60	561
	1962-63	561
	now	491
		Rs.
(b)	1955-56	400-00
	1959-60	200-00
	1962-63	1,625-00

(c) As compared to 1955-56, there was decrease in the year 1959-60.

(d) For want of competitive bidders.

Cultivation of Lands by Harijans

Q. 89.—Sri C. R. RANGE GOWDA (Magadi).—

Will the Government be pleased to state:—

(a) the number of Harijans who are cultivating the land in Kondahalli Village, Kasaba Hobli, Magadi Taluk;

(b) since how long they are cultivating and paying T.T.;

(c) whether they would consider to confirm these lands to the landless Harijans and others?

A.—Sri M. V. KRISHNAPPA (Minister for Revenue).—

(a) 16.

(b) Since 1954-55.

(c) Yes.

Inspectors of Schools in Bangalore District

Q. 91.—Sri C. R. RANGE GOWDA (Magadi).—

Will the Government be pleased to state:—

(a) the number of Inspectors of Schools who have put in more than three years of service in each taluk of Bangalore District;

(b) whether there are any complaints against them;

(c) if so, the nature of complaints;

(d) the action they have taken in that respect?

A.—Sri S. R. KANTHI (Minister for Education).—

(a) Three
(b) No
(c) and (d) Do not arise in view of reply to (b) above.

Devadaya Inam Lands

Q. 96.—Sri C. R. RANGE GOWDA (Magadi).—

Will the Government be pleased to state:—

(a) the number of acres of Devadaya Inam lands in each taluk of Bangalore Rural District;

(b) whether any money has been depositel for the upkeep of the temple for which they are meant and if so, what is the amount deposited in each taluk;

(c) whether any of the minor Muzrai Temples restored, repaired and maintained for the last three years out of this fund and if so, which are they?

A.—Sri M. V. KRISHNAPPA (Minister for Revenue).—

(a) As noted below:—

	Name of Taluk	*Acres*	*Guntas*
1.	Kanakapura Taluk	114	14
2.	Ramanagaram	934	22
3.	Magadi	2,281	14
4.	Hoskote	2,045	28
5.	Anekal	3,780	37
6.	Devanahally	1,125	21
7.	Channapatna	819	38½
8.	Doddaballapur	942	25
9.	Nelamangala	7,920	14
		20,965	13½

(b) Out of the income of every institution, a percentage ranging from 10 to 15 is set apart as reserve for repairs and other incidental demands.

(c) As noted below:—

1. *Magadi Taluk*:—

   1. Sri Anjaneyaswamy Temple.
   2. Sri Bettada Ranganathaswamy Temple.

(SRI M. V. KRISHNAPPA)

2. *Hoskote Taluk* :—

1. Sri Anjaneyaswamy Temple, Hindiganal.
2. Sri Anjaneyaswamy Temple, Dasarahally.
3. Sri Patalamma's Temple, Muthusandra.

3. Devanahally Taluk :—

1. Sri Anjaneyaswamy Temple, Vijayapura.
2. Sri Veeranjaneyaswamy Temple, Devanahally.
3. Sri Anjaneyaswamy Temple, Devanahally.

Feeder Channel to Kanva Reservoir.

Q. 102.—Sri C. R. RANGE GOWDA (Magadi).—

Will the Government be pleased to state :—

(*a*) whether it is a fact that the Government intend taking a feeder channel from the proposed Manchanabele Project to Kanva Reservoir;

(*b*) if so, what would be the estimated cost of the proposed feeder channel;

(*c*) whether it is a fact that the ryots who would be further affected by the impounding water in the Kanva Reservoir have resolved to protest against any such action if their villages and lands are to be further submerged;

(*d*) whether there is any proposal to construct a Reservoir Tank near Yerehally and if so, what is the quantity of water that is proposed to be impounded in the said Reservoir Tank;

(*e*) the number of acres that would be submerged under the said Reservoir Tank and what is the extent of land that could be brought under irrigation by such proposal ?

A.—Sri S. NIJALINGAPPPA (Chief Minister).—

(*a*) Only investigations to find out the feasibility of diverting flood water from the proposed Manchanabele Reservoir to Kanva ar taken uup.

(*b*) The details of the Project are not yet worked out, as the investigations are not yet completed.

(*c*) No.

(*d*) The proposal of a Reservoir near Yerehally in Kanva Valley is a part of the diversion scheme which is under investigation.

(*e*) Details are not ready.

Consolidation Schemes in Bombay-Karnatak Area.

Q. 105.—Sri M. R. PATIL (Hubli).—

Will the Government be pleased to state:—

(*a*) in how many villages of the Bombay-Karnatak area consolidation schemes under the Bombay Prevention of Fragmentation and Consolidation of Holdings Act of 1947 has been completed and confirmed;

(*b*) how many holdings allotted under the confirmed schemes under the said Act, have been permitted in the entire area of Bombay-Karnatak, such as:—

(i) to be transferred in parts under clause (a) of section 31 of the said Act, and

(ii) to be subdivided under clause (*b*) of the said Section?

A.—Sri M. V. KRISHNAPPA (Minister for Revenue).—

(*a*) 708 villages.

(*b*) (i) 97 Consolidation holdings.

(ii) 163 Consolidation holdings.

Rental Housing Scheme in North Kanara District.

Q. 113.—Sri S. P. PHAYADE (Ankola).—

Will the Government be pleased to state:—

(*a*) whether they have taken up any Rental Housing Scheme in North Kanara District:

(*b*) if so, the amount spent on the same in different taluks of North Kanara District so far;

(*c*) whether they have got any master-plan to provide houses on Rental Housing Scheme in the said district;

(*d*) if so, the amount earmarked in the last year of the Third Five-Year Plan?

A.—Sri K. PUTTASWAMY (Minister for Co-operation and Housing).—

(*a*) Yes.

(*b*) (i) Rs. 2,43,352 in Karwar Taluk.

(ii) Rs. 1,49,753 in Sirsi Taluk.

(*c*) No.

(*d*) Does not arise.

Supply of Cement.

Q. 121.—Sri S. P. PHAYADE (Ankola).—

Will the Government be pleased to state :—

(*a*) the quantity of cement supplied to the Co-operative Societies and private agencies in North Kanara District since the past three years;

(*b*) the number of these Societies and agencies existing in this District at present;

(*c*) whether it has come to the notice of the Government that cement is not supplied regularly to public of North Kanara District and if so, what action has been taken to improve the supply?

A.—Sri K. MALLAPPA (Minister for Industries and Commerce).—

(*a*) 7,500 metric tonnes for the calendar years 1962, 1963 and 1964.

(*b*) 14 as on 14th October 1965. But, subsequent to 1st January 1966, when cement was decontrolled, there are no restrictions for dealing in cement.

(*c*) No. However, cement has been decontrolled with effect from 1st January 1966 and can now be obtained from the open market.

Letter from late Sri V. C. Pavate's son

Announcement.

Mr. SPEAKER.—A letter has been received from the son of late Sri V. C. Pavate. It reads as follows :—

" Sir,

I write to thank you for your letter No. 19445/LA of 22nd March 1966, a copy of the Condolence reference made at the Legislative Assembly on the demise of my father Sri V. C. Pavate.

I and the members of my family request you to convey our grateful thanks to the House and to the distinguished Speaker—Hon. Sri Vaikunta Baliga—for their kind reference made to my father in the Assembly Chamber on the 14th March 1966.

Yours faithfully,

(Sd.) D. V. V. PAVATE "

Now, we begin the debate.

Members' Representations.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಒಂದು ಮುಖ್ಯವಾದ ವಿಷಯ. ನಿನ್ನೆಯ ದಿವಸ ರಾಜ್ಯದ ಉಪಮಂತ್ರಿಗಳಾದ ಶ್ರೀ ವೈ. ರಾಮಚಂದ್ರ ಅವರು ಒಂದು ಸಭೆಯಲ್ಲಿ ಮಾತನಾಡುತ್ತಿರುವಾಗ ಈ ನಗರದ ಜನತೆಗೆ ಹಿಂದೆ ದೊರೆಯುತ್ತಿದ್ದಂತೆ ನೀರನ್ನು ಉಚಿತವಾಗಿ ಒದಗಿಸಲು ಮೈಸೂರು ಸರ್ಕಾರದವರು ನಿರ್ಧರಿಸಿದ್ದಾರೆಂದು ಹೇಳಿದ್ದಾರೆ. ಇದು ಸ್ಪಷ್ಟವೇ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಉತ್ತರಿಸಬೇಕೆಂದು ನಾನು ಹೇಳುತ್ತೇನೆ.

Mr. SPEAKER.—But not, now. The Member has brought it to his notice.

Sri S. NIJALINGAPPA (Chief Minister).—I cannot be taken by surprise.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಈಗ ಅಧಿವೇಶನ ನಡೆಯುತ್ತಿರುವಾಗ ಉಪಮಂತ್ರಿಗಳಾದ ಮಾನ್ಯ ಶ್ರೀ ವೈ. ರಾಮಚಂದ್ರ ಅವರು ಆ ರೀತಿಯಾಗಿ ಹೊರಗೆ ಒಂದು ಸಭೆಯಲ್ಲಿ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ......

Mr. SPEAKER.—This is not a matter which is coming for the first time. There are rulings covering the same thing. Now, two aspects have been raised. Sri Kasimath Siddiah wants to know the exact position. Naturally, the Chief Minister wants notice to make an accurate statement because when statements are made on the floor of the House, they must be accurate, whatever may be the report in the press.

Regarding the point raised by Sri Bhaskar Shetty, it has been ruled more than once.

Sri SIDDIAH KASHIMATH.—The Deputy Minister has said that Government of Mysore have decided to give free water supply to citizens of Bangalore.

Mr. SPEAKER.—The Hon. Member should have put it in writing and given to me and not raise it on the Floor of the House. If he claims it as a matter of privilege or breach of privilege or point of order, whatever it is, he should have put it in writing. By simply mentioning a matter here, no purpose is served.

With regard to the Debate, Sri Siddaiah Kasimath's name was given yesterday, I called him, and he was absent. But, he has come and made a personal request to me to give him five minutes. I am entirely in the hands of the House. It does not matter to me.

Sri SIDDAIAH KASIMATH.—Sir, I have given cut-motions and if those points are covered in the reply by the Government, I withdraw my request.

Mr. SPEAKER.—With regard to Crash Programme and the other advance programme and assistance, and the food situation assistance, the impression in Delhi is that Mysore Government has acquitted itself exceedingly well, much better than other States and that the percentage of utilization by the Government and the Departments is exceedingly good.

(ಶ್ರೀ ಎಸ್. ನಿಜಲಿಂಗಪ್ಪ)

ಅನುಸರಿಸಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಭಯವೇನೂ ಇಲ್ಲ. ಮತ್ತೊಂದು ವಿಷಯವೇನೆಂದರೆ, ಬೆಳೆಯತಕ್ಕ ಮಾಲಿಗೆ ಸಾಕಷ್ಟು ಒಳ್ಳೆಯ ಧಾರಣೆಯೂ ಸಿಗುತ್ತಾ ಇದೆ, ಹಿಂದೆ ಎಂದೂ ಇಲ್ಲದ ಧಾರಣೆ ಈಗ ಸಿಗುತ್ತಿದೆ. ಧಾರಣೆ ಹೀಗೆ ಜಾಸ್ತಿಯಾಗುತ್ತ ಹೋದರೂ ದವಸಗಳು ಹೆಚ್ಚಾಗಿ ಹೊರಕ್ಕೆ ಬರುತ್ತಿಲ್ಲ. ಮತ್ತೊಂದು ಕಾರಣ ವ್ಯವಸಾಯ ಮಾಡುವವನು ಮುಂದಿನ ವರ್ಷ ಇನ್ನೂ ಹೆಚ್ಚು ಧಾರಣೆ ದವಸಕ್ಕೆ ಸಿಗಬಹುದು ಎಂದು ಮತ್ತು ಈಗ ಮಾರಿದರೆ ಕಡಿಮೆ ಧಾರಣೆ ಇದೆ ಎಂದು ಮಾರುತ್ತಿಲ್ಲ. ಈ ರೀತಿ ನಾನಾ ಕಾರಣಗಳಿಂದ ನಾನಾ ವರ್ಗಗಳಲ್ಲಿ ಇನ್ನೂ ಹೆಚ್ಚು ಲಾಭ ಸಂಪಾದನೆ ಮಾಡಬೇಕೆಂಬ ಹವ್ಯಾಸ ಹೆಚ್ಚಿದೆ ವ್ಯಾಪಾರಗಾರರು ಇಂತಹ ದೃಷ್ಟಿಯಿಂದ ಇರುವಾಗ ರಾಷ್ಟ್ರದ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಅವರು ಸಾಕಷ್ಟು ಮಾಲನ್ನು ತೆಗೆದಿಟ್ಟು ಜನರಿಗೆ ಸಿಗದಂತೆ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿದೆ. ಇದರ ಜೊತೆಗೆ ಬೆಳಸತಕ್ಕವನುಕೂಡ ಮುಂದೆ ದವಸ ಸಿಕ್ಕುತ್ತೋ ಇಲ್ಲವೋ ಎಂದು ಭಯದಿಂದ ಅವರಲ್ಲಿರುವ ದವಸವನ್ನು ಹೊರಕ್ಕೆ ಬಿಡದೆ ಬಚ್ಚಿಡುತ್ತಿದ್ದಾರೆ ಮುಂದೆ ಒಳ್ಳೆ ಬೆಳೆ ಬಂದಾಗ ಮಾರಬಹುದು ಎಂದು ಹೀಗೆ ಮಾಡುತ್ತಿದ್ದಾರೆ. ಹೀಗೆ ಮೂರು ನಾಲ್ಕು ಕಾರಣಗಳಿಂದಾಗಿ ಅಭಾವ ಪರಿಸ್ಥಿತಿ ಹೆಚ್ಚಾಗುವುದಕ್ಕೆ ಒಂದು ಕಾರಣವಾಗಿದೆ. ನಮ್ಮಲ್ಲಿ ಸ್ಕೇರ್ಸಿಟಿಗಿಂತ ಸ್ಕೇರ್ ಎನ್ನುವುದು ಜಾಸ್ತಿಯಾಗಿದೆ. ಈ ವರ್ಷ ಬಹುಶಃ ಮಳೆ ಅಭಾವದಿಂದ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ವರ್ಷ ವಿಶೇಷ ಪರಿಸ್ಥಿತಿ ಬಂದಿದೆ. ಸರ್ವೇ ಸಾಧಾರಣವಾಗಿ ನಾಲ್ಕೈದು ವರ್ಷಗಳಿಂದ ವ್ಯವಸಾಯವನ್ನೇ ಪೂರ್ತಿಯಾಗಿ ಮಾಡುತ್ತಿದ್ದ ಜನರು ಈ ಸಲ ಮಳೆ ಬರದೇ ಹೋದುದರಿಂದ ಅವರಿಗೆ ತೊಂದರೆಯಾಗಿದೆ. ಈ ತೊಂದರೆ ಹೋಗಬೇಕಾದರೆ ಹೆಚ್ಚು ಉತ್ಪತ್ತಿ ಮಾಡಿದರೆ ಈ ತೊಂದರೆಯನ್ನು ಬಗೆಹರಿಸಲು ರೈತರಿಗೆ ಸಾಕಷ್ಟು ಸಹಾಯ ಮಾಡಬೇಕು. ಊಟ ಮಾಡುವ ಜನರೂ ಹೆಚ್ಚಾಗಿ ಜನಸಂಖ್ಯೆ ಕೂಡ ಹೆಚ್ಚಾಗಿ ಬೆಳೆಯುತ್ತಿದೆ. ಇದನ್ನು ಕಡಿಮೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ. ಇದು ಒಂದು ವಿಚಾರ. ಎರಡನೇ ವಿಚಾರ ಪಾಂಚ ವಾರ್ಷಿಕ ಯೋಜನೆಗಳಿಂದಾಗಿ ಹೆಚ್ಚು ಹಣ ಜನಗಳ ಕೈಯ್ಯಲ್ಲಿ ಹರಿಯುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇವೊತ್ತು ಊಟ ಮಾಡತಕ್ಕ ಪ್ರಮಾಣ ಹೇಗಿದೆ ಎಂದರೆ 15—20 ವರ್ಷಗಳ ಹಿಂದೆ ಏನು ಇತ್ತೋ ಅದಕ್ಕೆ ಹೋಲಿಸಿದರೆ ಇವೊತ್ತು ಜನ ತಿನ್ನತಕ್ಕ ಪ್ರಮಾಣ ಜಾಸ್ತಿಯಾಗಿದೆ ಮತ್ತು ಆಹಾರ ಧಾನ್ಯಗಳು ಜಾಸ್ತಿಯಾಗಬೇಕಾಗಿದೆ. ಇವೊತ್ತು 46 ಲಕ್ಷ ಟನ್ನುಗಳಷ್ಟು ಬೆಳೆಯುತ್ತಿದ್ದರೂ ಕಡಿಮೆ ಎನ್ನತಕ್ಕ ಭಾವನೆ ಬೆಳೆದು ಬಂದಿದೆ. ಬೆಲೆ ಜಾಸ್ತಿಯಾಗಿರುವುದರಿಂದ ಬಡಜನ ಕೊಳ್ಳಲು ತೊಂದರೆಯಾಗುತ್ತಿದೆ. ಇದನ್ನು ಪರಿಹಾರ ಮಾಡಬೇಕಾದರೆ ಹೆಚ್ಚು ಹೆಚ್ಚು ಆಹಾರದ ದವಸ ಸಿಗುವಂತೆ ಮಾಡಬೇಕಾದರೆ ಒಂದು ಕಡೆ ನೀರಾವರಿ ಜಾಸ್ತಿಯಾಗಬೇಕು, ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಇನ್‌ಸೆಕ್ಟಿಸೈಡುಗಳನ್ನು ಮಾಡಿ ಕ್ರಿಮಿ ಕೀಟಗಳನ್ನು ನಾಶಮಾಡತಕ್ಕದ್ದು ಅಲ್ಲದೆ ವಿದ್ಯಾವಂತರುಗಳು ಎಂದರೆ, ಸೊಫಿಸ್ಟಿಕೇಟೆಡ್ ಯಂಗ್ ಮೆನ್ ಎಂದರೆ, ಯುವಕರು ಹೆಚ್ಚಾಗಿ ವ್ಯವಸಾಯ ಮಾಡಲು ಮುಂದೆ ಬಂದರೆ ಇನ್ನೂ ಹೆಚ್ಚು ಉತ್ಪತ್ತಿ ಮಾಡಬಹುದು. ಆದರೆ ಅವರಿಗೆ ಮುಖ್ಯವಾಗಿ ಪವರು ಟಿಲ್ಲರುಗಳು ಬೇಕು. ಇದನ್ನು ಜಾಸ್ತಿಮಾಡಿ ತರಿಸಿ ಎಲ್ಲರಿಗೂ ಹಂಚಬೇಕು ಎಂದು ಮಾನ್ಯ ಸದಸ್ಯರುಗಳೂ ಇಲ್ಲಿ ಎಷ್ಟು ಜನ ಮಾತನಾಡಿದರೋ ಅವರೆಲ್ಲರೂ ಹೇಳಿದ್ದಾರೆ. ಎಲ್ಲರೂ ಪವರು ಟಿಲ್ಲರುಗಳನ್ನು ಕೊಡಬೇಕು, ಟ್ರಾಕ್ಟರುಗಳನ್ನು ಕೊಡಬೇಕು, ಎಂದು ಹೇಳುವುದನ್ನು ಎಲ್ಲರೂ ಒಪ್ಪತಕ್ಕ ಮಾತು. ಒಂದು ಸಂತೋಷದ ವಿಚಾರ ಇಲ್ಲಿ ಹೇಳಬೇಕು. ಬೆಂಗಳೂರಿನಲ್ಲೇ ಇಂತಹ ಒಂದು ಕಾರ್ಖಾನೆ ಪ್ರಾರಂಭವಾಗುವುದರಲ್ಲಿದೆ. ಈ ಕಾರ್ಖಾನೆಯಲ್ಲಿ ವರ್ಷಕ್ಕೆ 5,000 ಪವರು ಟಿಲ್ಲರುಗಳನ್ನು ಉತ್ಪತ್ತಿ ಮಾಡುವಂತಹ ಕಾರ್ಖಾನೆ ಕೇಂದ್ರ ಸರಕಾರದ ಅನುಮತಿ ಪಡೆದು ಬಹುಶಃ ಒಂದೆರಡು ವರ್ಷಗಳೊಳಗಾಗಿ ಆರಂಭವಾಗುತ್ತದೆ. ಆಗ ವರ್ಷಕ್ಕೆ ಎರಡು ಸಾವಿರ ಪವರು ಟಿಲ್ಲರುಗಳು ಉತ್ಪತ್ತಿಯಾಗುವ ಸಂಭವ ಇದೆ. ಈಗ ಜಪಾನ್ ದೇಶದಿಂದ 175 ಪವರು ಟಿಲ್ಲರುಗಳನ್ನು ತರಿಸಲಾಗಿದೆ. ಇನ್ನೂ 200 ಬರುವುದರಲ್ಲಿದೆ. ಅಲ್ಲದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಸದಸ್ಯರು ನಮ್ಮ ಜಿಲ್ಲೆಗೆ ಏನೂ ಸಿಗಲಿಲ್ಲ ಎಂದೇ ಹೇಳುವ ಹವ್ಯಾಸ ತಪ್ಪಲಿಲ್ಲ......................

Sri SANJEEVANATH AIKALA (Surathkal).—Sir, I protest........

Mr. SPEAKER.—Order, order.

Sri B. BHASKAR SHETTY.—Sir..... .....

[*Interruption*]

Mr. SPEAKER.—Order, order.

ಶ್ರೀ ಎಸ್. ನಿಜಲಿಂಗಪ್ಪ :—ದಕ್ಷಿಣ ಕನ್ನಡ ಜಿಲ್ಲೆಯವರು ಹಾಗೆ ಪ್ರತಿಭಟನೆ ಮಾಡಿ ಮಾಡಿ ಅವರು ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗೆ ಪ್ರತಿಭಟನೆ ಮಾಡತಕ್ಕದ್ದು ಒಳ್ಳೆಯದು. ಮತ್ತು ಅಲ್ಲಿಯ ಜನರು ಬಹಳ ಒಳ್ಳೆಯವರು ಮತ್ತು ಚೆನ್ನಾಗಿ ಬೆಳೆಯುವವರೂ ಆಗಿದ್ದಾರೆ. ಆದರಿಂದ ಎಲ್ಲರಿಗೂ ಆಹಾರದ ದವಸ ಸಿಗುವಂತೆ ಮಾಡಬೇಕು. ಇದಕ್ಕೆ ಯಾರೂ ವಿರೋಧ ಮಾಡಬಾರದು.

Members' Representations.

ಶ್ರೀ ಸಿದ್ದಯ್ಯ ಕಾಶೀಮಠ(ಶಿರಹಟ್ಟಿ).—ಒಂದು ಮುಖ್ಯವಾದ ವಿಷಯ. ನಿನ್ನೆಯ ದಿವಸ ರಾಜ್ಯದ ಉಪಮಂತ್ರಿಗಳಾದ ಶ್ರೀ ವೈ. ರಾಮಚಂದ್ರ ಅವರು ಒಂದು ಸಭೆಯಲ್ಲಿ ಮಾತನಾಡುತ್ತಿರುವಾಗ ಈ ನಗರದ ಜನತೆಗೆ ಹಿಂದೆ ದೊರೆಯುತ್ತಿದ್ದಂತೆ ನೀರನ್ನು ಉಚಿತವಾಗಿ ಒದಗಿಸಲು ಮೈಸೂರು ಸರ್ಕಾರದವರು ನಿರ್ಧರಿಸಿದ್ದಾರೆಂದು ಹೇಳಿದ್ದಾರೆ. ಇದು ಸ್ಪಷ್ಟವೇ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಉತ್ತರಿಸಬೇಕೆಂದು ನಾನು ಹೇಳುತ್ತೇನೆ.

Mr. SPEAKER.—But not, now. The Member has brought it to his notice.

Sri S. NIJALINGAPPA (Chief Minister).—I cannot be taken by surprise.

ಶ್ರೀ ಬಿ. ಭಾಸ್ಕರ ಶೆಟ್ಟಿ(ಕಾಪು).—ಈಗ ಅಧಿವೇಶನ ನಡೆಯುತ್ತಿರುವಾಗ ಉಪಮಂತ್ರಿಗಳಾದ ಮಾನ್ಯ ಶ್ರೀ ವೈ. ರಾಮಚಂದ್ರ ಅವರು ಆ ರೀತಿಯಾಗಿ ಹೊರಗೆ ಒಂದು ಸಭೆಯಲ್ಲಿ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ......

Mr. SPEAKER.—This is not a matter which is coming for the first time. There are rulings covering the same thing. Now, two aspects have been raised. Sri Kasimath Siddiah wants to know the exact position. Naturally, the Chief Minister wants notice to make an accurate statement because when statements are made on the floor of the House, they must be accurate, whatever may be the report in the press.

Regarding the point raised by Sri Bhaskar Shetty, it has been ruled more than once.

Sri SIDDIAH KASHIMATH.—The Deputy Minister has said that Government of Mysore have decided to give free water supply to citizens of Bangalore.

Mr. SPEAKER.—The Hon. Member should have put it in writing and given to me and not raise it on the Floor of the House. If he claims it as a matter of privilege or breach of privilege or point of order, whatever it is, he should have put it in writing. By simply mentioning a matter here, no purpose is served.

With regard to the Debate, Sri Siddaiah Kasimath's name was given yesterday, I called him, and he was absent. But, he has come and made a personal request to me to give him five minutes. I am entirely in the hands of the House. It does not matter to me.

Sri SIDDAIAH KASIMATH.—Sir, I have given cut-motions and if those points are covered in the reply by the Government, I withdraw my request.

Mr. SPEAKER.—With regard to Crash Programme and the other advance programme and assistance, and the food situation assistance, the impression in Delhi is that Mysore Government has acquitted itself exceedingly well, much better than other States and that the percentage of utilization by the Government and the Departments is exceedingly good.

The Hon'ble Chief Minister may please commence his reply.

BUDGET ESTIMATES FOR 1966-67—DEMANDS FOR GRANTS

DEMANDS NOS: 20, 38 AND 51 (*contd.*)

ಶ್ರೀ ಎಸ್. ನಿಜಲಿಂಗಪ್ಪ :—ಸ್ವಾಮಿ, ವ್ಯವಸಾಯದ ವಿಚಾರವಲ್ಲಿ ಈ ಸಭೆಯುಮುಂದಿಟ್ಟಿರತಕ್ಕ ಕೋರಿಕೆಗಳ ಬಗ್ಗೆ ಅನಿರೀಕ್ಷಿತವಾಗಿ ಈ ಸಭೆಯಲ್ಲಿ ಟೀಕೆಗಳ ಅಭಾವ ಕಂಡುಬಂದಿದೆ. ನಿಜವಾಗಿಯೂ ಇದು ಸಂತೋಷದ ವಿಚಾರ. ಸಭಾಪತಿಗಳು ಅಪ್ಪಣೆಕೊಡಿಸಿದಂತೆ ವ್ಯವಸಾಯ ಇಲಾಖೆಯಲ್ಲಿ ಅದರಲ್ಲೂ ಈ ವರ್ಷದಲ್ಲಿ ಆಗಿರತಕ್ಕ ಮುನ್ನಡೆ ಹಿಂದೆ ಎಂದೂ ಆಗಿರಲಿಲ್ಲ ಎಂದು ಧೈರ್ಯವಾಗಿ, ಸ್ಪಷ್ಟವಾಗಿ ಹೇಳಬಹುದು. ಮೈಸೂರಿಗೆ ಬಹಳ ಕೊರತೆಗಳು ಇವೆ. ಪೂರ್ವದಲ್ಲಿ ಸಾಕಷ್ಟು ಮಳೆ ಇಲ್ಲ. ಆದರೆ ಪಶ್ಚಿಮ ಘಟ್ಟದಲ್ಲಿ ಸುಮಾರು 250ರಿಂದ 300 ಇಂಚಿನವರೆಗೂ ಮಳೆ ಆಗುತ್ತದೆ. ಪೂರ್ವಕ್ಕೆ ಬರುತ್ತಾ ಮಳೆಯ ಅಭಾವಕ್ಕೆ ಸುಮಾರು 10—12 ಜಿಲ್ಲೆಗಳು ಯಾವಾಗಲೂ ಒಳಗಾಗುತ್ತವೆ. ಆ ಜಿಲ್ಲೆಗಳು ಹಾಗಾಗಿವೆ ; ನಿಜ. ಆ ಪ್ರದೇಶದಲ್ಲಿ ಉತ್ಕೃಷ್ಟವಾದ ಭೂಮಿ ಇದ್ದರೂ ಕೂಡ ಮಳೆಯ ಅಭಾವದಿಂದ ಅನೇಕ ಸಾರಿ ಆ ಪ್ರದೇಶದ ಜನಗಳು ಕಷ್ಟಕ್ಕೆ ಒಳಗಾಗಿದ್ದಾರೆ. ಕ್ಷಾಮದ ಬಾಧೆಗೆ ಈಡಾಗಿದ್ದಾರೆ. ಅಲ್ಲಿ ಅಭಾವ ಪರಿಸ್ಥಿತಿ ಅನೇಕಸಾರಿ ತಲೆದೋರುತ್ತಿರುತ್ತದೆ. ಇದನ್ನು ಗಮನಿಸುವುದು ಅತ್ಯಂತ ಅವಶ್ಯಕ. ಪೂರ್ವಕಾಲದಲ್ಲಿ ಜನಸಂಖ್ಯೆ ಕಡಿಮೆ ಇತ್ತು. ನಮ್ಮ ಪೂರ್ವಿಕರು ಅನೇಕ ಕೆರೆಗಳನ್ನು ಕಟ್ಟಿಸಿದ್ದಾರೆ. ಅದರಲ್ಲೂ ಹಳೆಯ ಮೈಸೂರು ಪ್ರದೇಶದಲ್ಲಿ ಚಿಕ್ಕ ಚಿಕ್ಕ ಕೆರೆಗಳು ಸುಮಾರು 28 ಸಾವಿರ, 30 ಸಾವಿರ ಇವೆ. ಆದರೆ ಆ ಕೆರೆಗಳಿಂದ ಆಗತಕ್ಕಂಥ ನೀರಾವರಿ ಪ್ರದೇಶ ಬಹಳ ಕಡಿಮೆ ಇದೆ. ನಮ್ಮ ಸಂಸ್ಥಾನದ ಒಟ್ಟು ವಿಸ್ತೀರ್ಣ 4 ಕೋಟಿ 65 ಲಕ್ಷ ಎಕರೆಗಳಿವೆ. ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು 289 ಲಕ್ಷ ಎಕರೆಗಳಿವೆ. ಇದರಲ್ಲಿ 15 ಲಕ್ಷ ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಕೂಡ ಅದರಲ್ಲಿ ವ್ಯವಸಾಯ ನಡೆಯುತ್ತಿಲ್ಲ. ಇನ್ನು ಬಾಕಿ 2 ಕೋಟಿ 75 ಲಕ್ಷ ಎಕರೆ ಜಮೀನಿನಲ್ಲಿ ವ್ಯವಸಾಯ ನಡೆಯುತ್ತಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಕೂಡ, ನಾವು ಸಾಕಷ್ಟು ಉತ್ಪತ್ತಿಯನ್ನು ಮಾಡುತ್ತಿದ್ದರೂ ಕೂಡ ನಮ್ಮಲ್ಲಿ ಆಹಾರದ ಕೊರತೆ ಇದೆ. ಅದರಲ್ಲೂ ಅಕ್ಕಿಯ ಕೊರತೆ ಹೆಚ್ಚಾಗಿದೆ. ಒಟ್ಟು ಈಗಿನ ಹೊಸ ಮೈಸೂರಿನ ಆಹಾರದ ಉತ್ಪತ್ತಿಯನ್ನು ತೆಗೆದುಕೊಂಡರೆ ನಮ್ಮಲ್ಲಿ ಕೊರತೆ ಇರುವುದು ಸ್ವಲ್ಪ ಹೆಚ್ಚು ಕಡಿಮೆ $3\frac{1}{2}$ ಲಕ್ಷ ಅಥವಾ 4 ಲಕ್ಷ ಟನ್ ಆಹಾರದ ಕೊರತೆ ಇದೆ. ಹತ್ತಿಯನ್ನು ಉತ್ಪತ್ತಿ ಮಾಡುವುದರಲ್ಲಿ ನಾವು 3 ನೆಯವರೋ ಅಥವಾ 4 ನೆಯವರೋ ಆಗುತ್ತೇವೆ. ಎಣ್ಣೆ ಬೀಜದ ಉತ್ಪಾದನೆಯಲ್ಲಿ 3 ಅಥವಾ 4 ನೆಯವರು ಆಗುತ್ತೇವೆ. ನಮ್ಮ ದೇಶದಲ್ಲಿ ಉತ್ಕೃಷ್ಟವಾದ ನೆಲ ಇದ್ದರೂ ಕೂಡ ನೀರಾವರಿ ಪ್ರದೇಶ ಕಡಿಮೆ ಇದೆ. ಹೆಚ್ಚು ಭಾಗ ಮಳೆಯ ನೀರಿನ ಆಶ್ರಯದಿಂದಲೇ ವ್ಯವಸಾಯಮಾಡಿ ಬೆಳೆಯನ್ನು ಬೆಳೆಯಬೇಕಾಗಿದೆ. ಈಗ ಮೈಸೂರಿನಲ್ಲಿ ಶೇಕಡ 9ಕ್ಕಿಂತ ಕಡಿಮೆ ನೀರಾವರಿ ಪ್ರದೇಶ ಇದೆ. ಎಲ್ಲಿಯುವರೆಗೆ ನಮ್ಮ ದೇಶದಲ್ಲಿ ಹರಿಯತಕ್ಕ ನದಿಗಳು ಮತ್ತು ಹೊಳೆಗಳನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ವ್ಯವಸಾಯಕ್ಕೆ ಸಾಕಷ್ಟು ನೀರನ್ನು ಒದಗಿಸುವುದಿಲ್ಲವೋ ಅಲ್ಲಿಯುವರೆಗೂ ನಮ್ಮ ಅಭಾವ ಕಡಿಮೆಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ನಮ್ಮ ದೇಶವಲ್ಲಿ ಹತ್ತಿಬೆಳೆಯು ಚೆನ್ನಾಗಿ ಆಗುತ್ತಿದೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು 20-25 ಹತ್ತಿಯ ಗಿರಣಿಗಳು ಇವೆ, ಅವುಗಳಲ್ಲಿ ಕೆಲಸ ನಡೆಯುತ್ತಿದೆ. ಇನೂ 25 ಗಿರಣಿಗಳು ನಡೆಯುವುದಕ್ಕೆ ಅವಕಾಶವಿದೆ. ಈ ಹತ್ತಿ ಬೆಳೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ನಮ್ಮಲ್ಲಿ ಸಾಕಷ್ಟು ಹತ್ತಿ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಿದೆ. ಈಗ ಎರಡು ವರ್ಷಗಳಿಂದ ಮಳೆಯ ಅಭಾವ ಬೇರೆ ಉಂಟಾಗಿದೆ. ಹತ್ತಿ ಬೆಳೆಯುವ ಪ್ರದೇಶದಲ್ಲಿ ಶೇಕಡಾ 1 ಅಥವಾ 2ರಷ್ಟು ಪ್ರದೇಶ ಮಾತ್ರ ನೀರಾವರಿಗೆ ಒಳಗಾಗಿದೆ. ಇನ್ನು ಉಳಿದ ಪ್ರದೇಶದಲ್ಲಿ ಮಳೆಯ ಆಧಾರದ ಮೇಲೆಯೇ ಬೆಳೆಯನ್ನು ಬೆಳೆಯಬೇಕಾಗಿದೆ. ಮಳೆಯ ಅಭಾವ ಮತ್ತು ಹಣದ ಅಭಾವದಿಂದ ಆಹಾರದ ಉತ್ಪಾದನೆಯಲ್ಲಿ ಎಷ್ಟು ಪ್ರಗತಿಯನ್ನು ಸಾಧನೆ ಮಾಡಬೇಕಾಗಿತ್ತೋ ಅಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ. ಎಣ್ಣೆ ಬೀಜವನ್ನು ಉತ್ಪಾದನೆ ಮಾಡುವುದರಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಪಡೆದಿದ್ದೇವೆ. ಆದರೆ ಆಹಾರದ ಉತ್ಪಾದನೆಯಲ್ಲಿ ಸಾಕಷ್ಟು ಮುಂದುವರಿಯುವುದಕ್ಕೆ ಸಹಾಯ ಎಷ್ಟು ಬೇಕೋ ಅಷ್ಟು ಸಿಕ್ಕುತ್ತಾ ಇಲ್ಲ. 1961 ಮತ್ತು 1962ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ 39 ಲಕ್ಷ ಚಿಲ್ಲರೆ ಟನ್ ಆಹಾರ ಉತ್ಪತ್ತಿಯಾಗಿದೆ. 1965-66ರಲ್ಲಿ 46 ಲಕ್ಷ ಟನ್ ಆಹಾರಧಾನ್ಯ ಉತ್ಪಾದನೆಯಾಗಿದೆ. ಅಷ್ಟು ಆಹಾರ ನಮಗೆ ಸಾಕಾಗುವುದಿಲ್ಲ ಎಂದು ಕಾಣುತ್ತದೆ. ನಮಗೆ ಎಷ್ಟು ಆಹಾರ ಕೊರತೆಯುಂಟಾಗಿದೆಯೋ ಅದನ್ನು ನೀಗಿಸಬೇಕಾದರೆ ನಾವು ಹೆಚ್ಚು ಪ್ರಯತ್ನ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರೂ ಕೂಡ ಸಾಕಷ್ಟು ರೀತಿಯಲ್ಲಿ ಹೇಳಿದ್ದಾರೆ. ಮುಖ್ಯವಾಗಿ ಈಗ ಇರತಕ್ಕದ್ದು ನೀರಾವರಿ ಪ್ರದೇಶವನ್ನು ಜಾಸ್ತಿ ಮಾಡತಕ್ಕದ್ದು ಅಗತ್ಯ. ಅದಕ್ಕಾಗಿ ಪ್ರಯತ್ನ ನಡೆದಿದೆ. ಈ ವಿಷಯದಲ್ಲಿ ಪ್ರತಿದಿವಸವೂ ಇಲ್ಲಿ ಪ್ರಶ್ನೆಗಳ ಮತ್ತು ಉಪಪ್ರಶ್ನೆಗಳ ಸುರಿಮಳೆ ಆಗಿದೆ. ಅದಕ್ಕೆ ಉತ್ತರಗಳನ್ನು ಕೂಡಕೊಟ್ಟಿದೆ. ಮೈಸೂರು ದೇಶದಲ್ಲಿ ನೀರಾವರಿ

ಪ್ರದೇಶವನ್ನು ಜಾಸ್ತಿ ಮಾಡತಕ್ಕದ್ದು ಅತ್ಯಂತ ಅವಶ್ಯಕ. ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಮೇಜರ್, ಮೀಡಿಯಂ ಮತ್ತು ಮೈನರ್ ನೀರಾವರಿ ಯೋಜನೆಗಳನ್ನು ಮಾಡಿದೆ. ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಅನುಕೂಲಮಾಡಿಕೊಡಬೇಕೆಂಬ ಉದ್ದೇಶದಿಂದ ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಹೆಚ್ಚು ಹೆಚ್ಚು ಬಾವಿಗಳನ್ನು ತೋಡಿಸಲಾಗಿದೆ. ಬಹುಶಃ ಮೈಸೂರು ರಾಜ್ಯದಲ್ಲಿ 5—6 ವರ್ಷಗಳಲ್ಲಿ ಸಾಧಿಸಬಹುದಾದಂತಹ ಸಾಧನೆಯನ್ನು ಈ ಒಂದು ವರ್ಷದಲ್ಲಿ ಮೈನರ್ ಇರಿಗೇಷನ್‌ನಲ್ಲಿ ಸಾಧಿಸಿದೆ. ಬೇರೆ ಯಾವ ರಾಜ್ಯದಲ್ಲೂ ಇಂಥಾ ಸಾಧನೆಯನ್ನು ಮಾಡಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಬಾವಿಗಳನ್ನು ತೋಡಿಸುವುದರಲ್ಲಿ ನಾವು ಸಾಕಷ್ಟು ಮುಂದುವರಿದಿದ್ದೇವೆ. ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳು ಗೊತ್ತಿದೆ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ವರ್ಷದಲ್ಲಿ ಒಂದು ವಿಶೇಷವಾದ ಸಾಧನೆಯಾಗಿದೆ. ಮಳೆಯ ಅಭಾವ ಬಂದದ್ದರಿಂದ ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಕೆಲಸ ಈ ಒಂದೇ ವರ್ಷದಲ್ಲಿ 80 ಸಾವಿರ ಎಕರೆಯಲ್ಲಿ ಆಗಿದೆ. ಈ ವರ್ಷ 30 ಸಾವಿರ ಬಾವಿಗಳು ಆಗಿವೆ. ಬಾವಿಗಳನ್ನು ತೆಗಸತಕ್ಕ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರೂ ಮುಂದೆ ಬರುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಬಾವಿಯನ್ನು ತೆಗೆಸುವುದಕ್ಕೆ ಜನಗಳು ಮುಂದೆ ಬರುತ್ತಿದ್ದಾರೆ. ರೈತರಿಗೆ ಬಡವರಿಗೆ ಸಾಕಷ್ಟು ಸಹಾಯವನ್ನು ಸರ್ಕಾರದವರು ಕೊಡುವುದು ಅಗತ್ಯ ಎಂದು ತಿಳಿದುಕೊಂಡು ಸಕಾಲದಲ್ಲಿ ಅವರಿಗೆ ಸಾಲವನ್ನು ಕೊಡಲಾಗುತ್ತಿದೆ. ಮತ್ತು ನಾನಾ ರೀತಿಯಲ್ಲಿ ಅವರಿಗೆ ಸಹಾಯ ಹೆಚ್ಚಾಗಿ ದೊರೆಯುತ್ತಿದೆ ಎಂದು ನಾನು ಹೇಳುತ್ತೇನೆ. ಆದರೂ ಸಹ ರೈತರಿಗೆ ಎಷ್ಟು ಸಹಾಯ ದೊರೆಯಬೇಕೋ ಅಷ್ಟು ದೊರೆಯುತ್ತಿಲ್ಲ. ಅದನ್ನು ಎಲ್ಲರೂ ಒಪ್ಪುತ್ತಾರೆ. ಇದರ ಜೊತೆಗೆ ಹಣದ ಅಭಾವ ಕೂಡ ಇದೆ. ಬ್ಯಾಂಕುಗಳವರಿಂದ ಎಷ್ಟು ಸಹಾಯ ಆಗಬೇಕೋ ಅಷ್ಟು ಸಹಾಯ ಆಗುತ್ತಿಲ್ಲ, 1966-67ನೇ ಸಾಲಿನಲ್ಲಿ 5 ಕೋಟಿ ರೂಪಾಯಿಗಳನ್ನು ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ರೈತರಿಗೆ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅದು ಸಾಲದು 10 ಕೋಟಿ ರೂಪಾಯಿಗಳನ್ನು ಕೊಡಬೇಕು. ಬಾವಿಗಳನ್ನು ತೋಡಿಸುವ ವಿಷಯದಲ್ಲಿ ಆಯಾಯ ತಾಲ್ಲೂಕಿನ ಮಾನ್ಯ ಸದಸ್ಯರು ಮುಂದೆ ಬಂದು ನಮಗೆ 100 ಬಾವಿಗಳಾಗಬೇಕು, 200 ಬಾವಿಗಳಾಗಬೇಕು, 300 ಬಾವಿಗಳಾಗಬೇಕು, ಎಂದು ಕೇಳುತ್ತಿದ್ದಾರೆ ಸಹಾಯ ಮಾಡಬೇಕೆಂದು ಸರ್ಕಾರದವರಿಗೂ ಇಷ್ಟ ಇದೆ. ಇದರಲ್ಲಿ ಸಕಾಲದಲ್ಲಿ ರೈತರಿಗೆ ನಾನಾ ರೀತಿಯಲ್ಲಿ ಸಹಾಯ ದೊರೆಯುತ್ತಿದೆ. ಈ ರೀತಿ ಸಹಾಯವನ್ನು ಮಾಡುವಾಗ ಕೆಲವು ಸಂದರ್ಭಗಳಲ್ಲಿ ಅನೇಕ ಪ್ರತಿಬಂಧಕಗಳು ಬರುತ್ತವೆ. ಆ ವಿಷಯವನ್ನು ನಾನು ಅನೇಕಸಲ ಇಲ್ಲಿ ಹೇಳಿದ್ದೇನೆ. ರೈತರಿಗೆ ಸಾಲ ಮುಂತಾದ ಸೌಲಭ್ಯಗಳು ಎಷ್ಟು ಸುಲಭವಾಗಿ ಜಾಗ್ರತೆಯಾಗಿ ಸಿಕ್ಕುತ್ತವೆಯೋ ಅಷ್ಟು ಜಾಗ್ರತೆಯಾಗಿ ವ್ಯವಸಾಯದಲ್ಲಿ ಉತ್ಪಾದನೆ ಜಾಸ್ತಿ ಆಗುತ್ತದೆ. ಈಗ ರೈತರಿಗೆ ಕೊಡತಕ್ಕ ಸಾಲಕ್ಕಾಗಿ ಅವರು ಶೇಕಡಾ 7 ರೂಪಾಯಿ $7\frac{1}{2}$ ರೂಪಾಯಿ ಬಡ್ಡಿಯನ್ನು ಕೊಡುತ್ತಿದ್ದಾರೆ. ಅದನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ. ತೆಗೆಯಬೇಕಾದ ಬಾವಿಗಳಿಗೆ ಕೊಡುವ ಹಣಕ್ಕೆ ಬಹುಶಃ ಈಗ ಏನು ಬಡ್ಡಿ ದರ ಇದೆಯೋ ಅದನ್ನು ಆದಷ್ಟು ಕಡಿಮೆ ದರದಲ್ಲಿ ಕೊಡುವ ವ್ಯವಸ್ಥೆ ಮಾಡಬೇಕು. ಹಿಂದೆ ಬಡ್ಡಿ ದರ ಮೂರರಷ್ಟು ಇದ್ದುದು ಈಗ ಶೇಕಡಾ ಎಂಟಕ್ಕೆ ಏರಿದೆ ಮತ್ತು ಇದಕ್ಕೆ ಶೇಕಡ ಮೂರು ಅಥವಾ ನಾಲ್ಕರಷ್ಟು ಸಬ್‌ಸಿಡಿ ಕೊಡುತ್ತಾರೆ. ಆದುದರಿಂದ ಬಡ್ಡಿಯ ದರ ಆದಷ್ಟೂ ಕಡಿಮೆ ದರದಲ್ಲಿದ್ದರೆ ಜನಕ್ಕೆ ಹೆಚ್ಚು ಉಪಕಾರವಾದೀತು. ಆದುದರಿಂದ ರೈತರಿಗೆ ಸಾಲಗಳನ್ನು ಕೊಡುವಾಗ ಬಡ್ಡಿ ದರವನ್ನು ಕಡಿಮೆ ಮಾಡುವುದು ಆವಶ್ಯಕ ಎಂದು ಈ ಸಭೆಯ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಮ್ಮ ಸಂಪತ್ತನ್ನು ಹೊರಗಿನ ದೇಶಗಳೊಡನೆ ಹೋಲಿಸಿದರೆ ನಮ್ಮಲ್ಲಿ ಕೈಗಾರಿಕೆಗಳು ಹೆಚ್ಚಾಗಿಲ್ಲದೇ ಇರುವುದರಿಂದ ಶೇಕಡಾ ಐವತ್ತರಷ್ಟು ವ್ಯವಸಾಯದಿಂದಲೇ ಉತ್ಪತ್ತಿಯಾಗುತ್ತದೆ. ಮುಂದೆ ಕೈಗಾರಿಕೆಗಳು ಜಾಸ್ತಿಯಾದರೆ ಉತ್ಪತ್ತಿಯೂ ಹೆಚ್ಚಬಹುದು. ಅದುದರಿಂದ ಬಡ ಜನರು ಕೃಷಿ ಮಾಡಲು ನಾನಾ ರೀತಿಯಲ್ಲಿ ಅವರಿಗೆ ಸಹಾಯ ಮಾಡಿ ಹೆಚ್ಚು ಉತ್ತೇಜನ ಕೊಡತಕ್ಕದ್ದು ಆವಶ್ಯಕ. ಬಹುಶಃ ನಾನು ಹೇಳುವುದಾದರೆ ರಾಷ್ಟ್ರದ ಉತ್ಪತ್ತಿಯಲ್ಲಿ ಸುಮಾರು ಶೇಕಡಾ 50ರಿಂದ 60ರಷ್ಟು ವ್ಯವಸಾಯದಿಂದಲೇ ಇದೆ ಮತ್ತು ಉಳಿದ ರಾಷ್ಟ್ರಗಳಲ್ಲಿನ ವ್ಯವಸಾಯದ ಉತ್ಪತ್ತಿಯಲ್ಲಿಯೂ ತಾರತಮ್ಯ ಇದೆ. ಆದುದರಿಂದ ವ್ಯವಸಾಯದ ಉತ್ಪತ್ತಿ ಹೆಚ್ಚಾಗಲು ಇದರ ಸಂಬಂಧವಾದ ಕೈಗಾರಿಕೆಗಳು ಹೆಚ್ಚಿಗೆ ಆಗುವುದು ಕೂಡ ಆವಶ್ಯಕ. ಈ ಒಂದು ದೃಷ್ಟಿಯಿಂದ ವ್ಯವಸಾಯಗಾರನಿಗೆ ಹೆಚ್ಚಿನ ಅನುಕೂಲಬೇಕು. ರಿಸರ್ವ್ ಬ್ಯಾಂಕಿನವರು ಹಣದ ರೂಪದಲ್ಲಿ ಸಾಲ ಕೊಡುವಾಗ ಸುಲಭ ಬಡ್ಡಿ ದರದಲ್ಲಿ ಸಾಲ ಸಿಗಬೇಕು. ಇಲ್ಲದಿದ್ದರೆ ಅವನು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಲ್ಲಿ ಸಹಾಯ ಮಾಡುವುದು ಆವಶ್ಯಕ. ಕೇಂದ್ರ ಸರಕಾರದವರೂ ಇದನ್ನು ಆಲೋಚನೆ ಮಾಡಬೇಕು. ಈ ಮಾತನ್ನೇ ಮಾನ್ಯ ಸದಸ್ಯರು ಅನೇಕರು ಹೆಚ್ಚು ದುಡ್ಡಿನ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಅಲ್ಲದೆ ಇವೊತ್ತು ರೈತರು ಹೆಚ್ಚು ಅಭಿಮಾನದಿಂದ ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ವಿದ್ಯಾವಂತರಾದವರು ವ್ಯವಸಾಯ ಮಾಡಲು ಹೆಚ್ಚು ಹೆಚ್ಚಾಗಿ ಹೋಗಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರೂ ಹೇಳಿದರು. ಅವರು ಹೇಳುವಂತೆ ಹೆಚ್ಚು ಹೆಚ್ಚಾಗಿ ವಿದ್ಯಾವಂತರು ವ್ಯವಸಾಯಗಾರರಾಗಿ ಕೆಲಸ ಮಾಡಲು ಮುಂದೆ ಹೋಗಬೇಕು. ಇದು ಒಪ್ಪತಕ್ಕಂತಹ ಮಾತು. ಎಲ್ಲಿ ವಿದ್ಯಾವಂತರು ವ್ಯವಸಾಯ ಮಾಡುತ್ತಾರೋ ಅಲ್ಲಿ ವ್ಯವಸಾಯದ ಕೆಲಸಗಳು ಚೆನ್ನಾಗಿ ನಡೆಯುತ್ತವೆ ಮತ್ತು ಅವರು ನೂತನ ವಿಧಾನಗಳನ್ನು

(ಶ್ರೀ ಎಸ್. ನಿಜಲಿಂಗಪ್ಪ)

ಅನುಸರಿಸಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಭಯವೇನೂ ಇಲ್ಲ. ಮತ್ತೊಂದು ವಿಷಯವೇನೆಂದರೆ, ಬೆಳೆಯುತಕ್ಕ ಮಾಲಿಗೆ ಸಾಕಷ್ಟು ಒಳ್ಳೆಯ ಧಾರಣೆಯೂ ಸಿಗುತ್ತಾ ಇದೆ, ಹಿಂದೆ ಎಂದೂ ಇಲ್ಲದ ಧಾರಣೆ ಈಗ ಸಿಗುತ್ತಿದೆ. ಧಾರಣೆ ಹೀಗೆ ಜಾಸ್ತಿಯಾಗುತ್ತ ಹೋದರೂ ದವಸಗಳು ಹೆಚ್ಚಾಗಿ ಹೊರಕ್ಕೆ ಬರುತ್ತಿಲ್ಲ. ಮತ್ತೊಂದು ಕಾರಣ ವ್ಯವಸಾಯ ಮಾಡುವವನು ಮುಂದಿನ ವರ್ಷ ಇನ್ನೂ ಹೆಚ್ಚು ಧಾರಣೆ ದವಸಕ್ಕೆ ಸಿಗಬಹುದು ಎಂದು ಮತ್ತು ಈಗ ಮಾರಿದರೆ ಕಡಿಮೆ ಧಾರಣೆ ಇದೆ ಎಂದು ಮಾರುತ್ತಿಲ್ಲ. ಈ ರೀತಿ ನಾನಾ ಕಾರಣಗಳಿಂದ ನಾನಾ ವರ್ಗಗಳಲ್ಲಿ ಇನ್ನೂ ಹೆಚ್ಚು ಲಾಭ ಸಂಪಾದನೆ ಮಾಡಬೇಕೆಂಬ ಹವ್ಯಾಸ ಹೆಚ್ಚಿದೆ ವ್ಯಾಪಾರಗಾರರು ಇಂತಹ ದೃಷ್ಟಿಯಿಂದ ಇರುವಾಗ ರಾಷ್ಟ್ರದ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಅವರು ಸಾಕಷ್ಟು ಮಾಲನ್ನು ತೆಗೆದಿಟ್ಟು ಜನರಿಗೆ ಸಿಗದಂತೆ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿದೆ. ಇದರ ಜೊತೆಗೆ ಬೆಳೆಸತಕ್ಕವರುಕೂಡ ಮುಂದೆ ದವಸ ಸಿಕ್ಕುತ್ತೋ ಇಲ್ಲವೋ ಎಂದು ಭಯದಿಂದ ಅವರಲ್ಲಿರುವ ದವಸವನ್ನು ಹೊರಕ್ಕೆ ಬಿಡದೆ ಬಚ್ಚಿಡುತ್ತಿದ್ದಾರೆ ಮುಂದೆ ಒಳ್ಳೆ ಬೆಳೆ ಬಂದಾಗ ಮಾರಬಹುದು ಎಂದು ಹೀಗೆ ಮಾಡುತ್ತಿದ್ದಾರೆ. ಹೀಗೆ ಮೂರು ನಾಲ್ಕು ಕಾರಣಗಳಿಂದಾಗಿ ಅಭಾವ ಪರಿಸ್ಥಿತಿ ಹೆಚ್ಚಾಗುವುದಕ್ಕೆ ಒಂದು ಕಾರಣವಾಗಿದೆ. ನಮ್ಮಲ್ಲಿ ಸ್ಕೇರ್ಸಿಟಿಗಿಂತ ಸ್ಕೇರ್ ಎನ್ನುವುದು ಜಾಸ್ತಿಯಾಗಿದೆ. ಈ ವರ್ಷ ಬಹುಶಃ ಮಳೆ ಅಭಾವದಿಂದ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ವರ್ಷ ವಿಶೇಷ ಪರಿಸ್ಥಿತಿ ಬಂದಿದೆ. ಸರ್ವೇ ಸಾಧಾರಣವಾಗಿ ನಾಲ್ಕೈದು ವರ್ಷಗಳಿಂದ ವ್ಯವಸಾಯವನ್ನೇ ಪೂರ್ತಿಯಾಗಿ ಮಾಡುತ್ತಿದ್ದ ಜನರು ಈ ಸಲ ಮಳೆ ಬರದೇ ಹೋದುದರಿಂದ ಅವರಿಗೆ ತೊಂದರೆಯಾಗಿದೆ. ಈ ತೊಂದರೆ ಹೋಗಬೇಕಾದರೆ ಹೆಚ್ಚು ಉತ್ಪತ್ತಿ ಮಾಡಿದರೆ ಈ ತೊಂದರೆಯನ್ನು ಬಗೆಹರಿಸಲು ರೈತರಿಗೆ ಸಾಕಷ್ಟು ಸಹಾಯ ಮಾಡಬೇಕು. ಊಟ ಮಾಡುವ ಜನರೂ ಹೆಚ್ಚಾಗಿ ಜನಸಂಖ್ಯೆ ಕೂಡ ಹೆಚ್ಚಾಗಿ ಬೆಳೆಯುತ್ತಿದೆ. ಇದನ್ನು ಕಡಿಮೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ. ಇದು ಒಂದು ವಿಚಾರ. ಎರಡನೇ ವಿಚಾರ ಪಾಂಚವಾರ್ಷಿಕ ಯೋಜನೆಗಳಿಂದಾಗಿ ಹೆಚ್ಚು ಹಣ ಜನಗಳ ಕೈಯ್ಯಲ್ಲಿ ಹರಿಯುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇವೊತ್ತು ಊಟ ಮಾಡತಕ್ಕ ಪ್ರಮಾಣ ಹೇಗಿದೆ ಎಂದರೆ 15—20 ವರ್ಷಗಳ ಹಿಂದೆ ಏನು ಇತ್ತೋ ಅದಕ್ಕೆ ಹೋಲಿಸಿದರೆ ಇವೊತ್ತು ಜನ ತಿನ್ನತಕ್ಕ ಪ್ರಮಾಣ ಜಾಸ್ತಿಯಾಗಿದೆ ಮತ್ತು ಆಹಾರ ಧಾನ್ಯಗಳು ಜಾಸ್ತಿಯಾಗಬೇಕಾಗಿದೆ. ಇವೊತ್ತು 46 ಲಕ್ಷ ಟನ್ನುಗಳಷ್ಟು ಬೆಳೆಯುತ್ತಿದ್ದರೂ ಕಡಿಮೆ ಎನ್ನತಕ್ಕ ಭಾವನೆ ಬೆಳೆದು ಬಂದಿದೆ. ಬೆಲೆ ಜಾಸ್ತಿಯಾಗಿರುವುದರಿಂದ ಬಡಜನ ಕೊಳ್ಳಲು ತೊಂದರೆಯಾಗುತ್ತಿದೆ. ಇದನ್ನು ಪರಿಹಾರ ಮಾಡಬೇಕಾದರೆ ಹೆಚ್ಚು ಹೆಚ್ಚು ಆಹಾರದ ದವಸ ಸಿಗುವಂತೆ ಮಾಡಬೇಕಾದರೆ ಒಂದು ಕಡೆ ನೀರಾವರಿ ಜಾಸ್ತಿಯಾಗಬೇಕು, ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಇನ್‌ಸೆಕ್ಟಿಸೈಡುಗಳನ್ನು ಮಾಡಿ ಕ್ರಿಮಿ ಕೀಟಗಳನ್ನು ನಾಶಮಾಡತಕ್ಕದ್ದು ಅಲ್ಲದೆ ವಿದ್ಯಾವಂತರುಗಳು ಎಂದರೆ, ಸೊಫಿಸ್ಟಿಕೇಟೆಡ್ ಯಂಗ್ ಮೆನ್ ಎಂದರೆ, ಯುವಕರು ಹೆಚ್ಚಾಗಿ ವ್ಯವಸಾಯ ಮಾಡಲು ಮುಂದೆ ಬಂದರೆ ಇನ್ನೂ ಹೆಚ್ಚು ಉತ್ಪತ್ತಿ ಮಾಡಬಹುದು. ಆದರೆ ಅವರಿಗೆ ಮುಖ್ಯವಾಗಿ ಪವರು ಟಿಲ್ಲರುಗಳು ಬೇಕು. ಇದನ್ನು ಜಾಸ್ತಿಮಾಡಿ ತರಿಸಿ ಎಲ್ಲರಿಗೂ ಹಂಚಬೇಕು ಎಂದು ಮಾನ್ಯ ಸದಸ್ಯರುಗಳೂ ಇಲ್ಲಿ ಎಷ್ಟು ಜನ ಮಾತನಾಡಿದರೋ ಅವರೆಲ್ಲರೂ ಹೇಳಿದ್ದಾರೆ. ಎಲ್ಲರೂ ಪವರು ಟಿಲ್ಲರುಗಳನ್ನು ಕೊಡಬೇಕು, ಟ್ರಾಕ್ಟರುಗಳನ್ನು ಕೊಡಬೇಕು, ಎಂದು ಹೇಳುವುದನ್ನು ಎಲ್ಲರೂ ಒಪ್ಪತಕ್ಕ ಮಾತು. ಒಂದು ಸಂತೋಷದ ವಿಚಾರ ಇಲ್ಲಿ ಹೇಳಬೇಕು. ಬೆಂಗಳೂರಿನಲ್ಲೇ ಇಂತಹ ಒಂದು ಕಾರ್ಖಾನೆ ಪ್ರಾರಂಭವಾಗುವುದರಲ್ಲಿದೆ. ಈ ಕಾರ್ಖಾನೆಯಲ್ಲಿ ವರ್ಷಕ್ಕೆ 5,000 ಪವರು ಟಿಲ್ಲರುಗಳನ್ನು ಉತ್ಪತ್ತಿ ಮಾಡುವಂತಹ ಕಾರ್ಖಾನೆ ಕೇಂದ್ರ ಸರಕಾರದ ಅನುಮತಿ ಪಡೆದು ಬಹುಶಃ ಒಂದೆರಡು ವರ್ಷಗಳೊಳಗಾಗಿ ಆರಂಭವಾಗುತ್ತದೆ. ಆಗ ವರ್ಷಕ್ಕೆ ಎರಡು ಸಾವಿರ ಪವರು ಟಿಲ್ಲರುಗಳು ಉತ್ಪತ್ತಿಯಾಗುವ ಸಂಭವ ಇದೆ. ಈಗ ಜಪಾನ್ ದೇಶದಿಂದ 175 ಪವರು ಟಿಲ್ಲರುಗಳನ್ನು ತರಿಸಲಾಗಿದೆ. ಇನ್ನೂ 200 ಬರುವುದರಲ್ಲಿದೆ. ಅಲ್ಲದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಸದಸ್ಯರು ನಮ್ಮ ಜಿಲ್ಲೆಗೆ ಏನೂ ಸಿಗಲಿಲ್ಲ ಎಂದೇ ಹೇಳುವ ಹವ್ಯಾಸ ತಪ್ಪಲಿಲ್ಲ......................

Sri SANJEEVANATH AIKALA (Surathkal).—Sir, I protest........

Mr. SPEAKER.—Order, order.

Sri B. BHASKAR SHETTY.—Sir..... .....

[*Interruption*]

Mr. SPEAKER.—Order, order.

ಶ್ರೀ ಎಸ್. ನಿಜಲಿಂಗಪ್ಪ :—ದಕ್ಷಿಣ ಕನ್ನಡ ಜಿಲ್ಲೆಯವರು ಹಾಗೆ ಪ್ರತಿಭಟನೆ ಮಾಡಿ ಮಾಡಿ ಅವರು ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗೆ ಪ್ರತಿಭಟನೆ ಮಾಡತಕ್ಕದ್ದು ಒಳ್ಳೆಯದು. ಮತ್ತು ಅಲ್ಲಿಯ ಜನರು ಬಹಳ ಒಳ್ಳೆಯವರು ಮತ್ತು ಚೆನ್ನಾಗಿ ಬೆಳೆಯುವವರೂ ಆಗಿದ್ದಾರೆ. ಆದರಿಂದ ಎಲ್ಲರಿಗೂ ಆಹಾರದ ದವಸ ಸಿಗುವಂತೆ ಮಾಡಬೇಕು. ಇದಕ್ಕೆ ಯಾರೂ ವಿರೋಧ ಮಾಡಬಾರದು.

Sri SANJEEVANATH AIKALA.—We are not getting our share.

Mr. SPEAKER.—Order, order.

Sri S. NIJALINGAPPA.—Sir, if my friends feel that this should get into the papers and they get some publicity, I have no objection.

ಈಗ ಬಂದಿರತಕ್ಕ ಟ್ರಾಕ್ಟರುಗಳ ಪೈಕಿ ಅವರಿಗೆ ಸುಮಾರು 30—35 ಸಿಕ್ಕಿವೆ. ಹೀಗೆ ಎಲ್ಲೆಲ್ಲಿ ಇದನ್ನು ಉಪಯೋಗಿಸಲು ಜನ ತಯಾರಾಗಿದ್ದಾರೋ ಅಲ್ಲೆಲ್ಲಾ ಅನುಕೂಲಗಳನ್ನು ಕಲ್ಪಿಸುತ್ತಿದ್ದಾರೆ. ಬಹುಶಃ ಎಲ್ಲರೂ ಪವರು ಟಿಲ್ಲರುಗಳು ಬೇಕೆಂದು ಕೇಳುತ್ತಾರೆ. ಈ ಪ್ರಶ್ನೆ ಸ್ವಲ್ಪಮಟ್ಟಿಗೆ ಬಗೆಹರಿಯಬೇಕಾದರೆ ನಮಗೆ 300—400 ಟ್ರಾಕ್ಟರುಗಳು ಈಗ ಬರುತ್ತವೆ. ಇದನ್ನು ಹಂಚುತ್ತೇವೆ. ಕೆಲವು ಜಿಲ್ಲೆಗಳಿಂದ ಇದಕ್ಕೆ ಕೋರಿಕೆಗಳೇ ಬಂದಿಲ್ಲ. ಅವರುಗಳೂ ವಿಚಾರಮಾಡಿ. ಅವರಿಗೆ 8—10 ಟ್ರಾಕ್ಟರುಗಳು ಬೇಕೆಂದು ಕೇಳಿದರೂ ಕೊಡಬಹುದು. ಸರಕಾರಕ್ಕೂ ಕೊಡಬೇಕೆಂದು ಉದ್ದೇಶ ಇದೆ. ಆದರೆ ಹೆಚ್ಚು ಟ್ರಾಕ್ಟರುಗಳನ್ನು ನಾವೇ ತಯಾರು ಮಾಡುವುದು ಆವಶ್ಯಕ. ಇದರ ಜೊತೆಯಲ್ಲೇ ಬೀಜ ಬೇಕು ಎಂದು ಕೇಳುತ್ತಿದ್ದಾರೆ. ಹೈ ಬ್ರಿಡ್ ಬೀಜ ಎನ್ನುತ್ತಾರೆ, ಶಕ್ತಿ ಬೀಜಗಳು, ಸಮ್ಮಿಶ್ರ ಬೀಜಗಳೆನ್ನುತ್ತಾರೆ. ಅಂತೂ ಇಂತಹ ಶಕ್ತಿಯುತವಾದ ಬೀಜ ಗಳನ್ನು ಜಾಸ್ತಿ ಮಾಡಬೇಕಾದರೆ ಇನ್ನೂ ಎರಡು ವರ್ಷಗಳಾದರೂ ಬೇಕು. ಇದಕ್ಕೆ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ನೀರಾವರಿ ಪ್ರದೇಶಬೇಕು. ಸಾಕಷ್ಟು ಸೀಮೆ ಗೊಬ್ಬರಬೇಕು. ಇದನ್ನೂ ತಯಾರುಮಾಡುವ ಪ್ರಯತ್ನ ನಡೆದಿದೆ. ಬೆಳಗೊಳದಲ್ಲಿ ಒಂದು ಫರ್ಟಿಲೈಸರು ಕಂಪನಿ ಇದೆ. ಬಹುಶಃ ಇಲ್ಲಿ 25 ಅಥವಾ 30 ಸಾವಿರ ಟನ್ನುಗಳಷ್ಟು ಉತ್ಪತ್ತಿ ಮಾಡಬಹುದು. ನಮಗೆ ಸುಮಾರು 80 ಸಾವಿರ ಟನ್ನುಗಳಷ್ಟು ಗೊಬ್ಬರ ಉತ್ಪತ್ತಿ ಮಾಡುವ ಕಾರ್ಖಾನೆ ಮಾಡಬೇಕು. ಇದಕ್ಕೆ ಪ್ರಯತ್ನ ನಡೆದಿದೆ. ಬಹುಶಃ ಶೀಘ್ರದಲ್ಲೇ ಇದೂ ಬಗೆ ಹರಿಯುವಂತೆ ಕಾಣುತ್ತದೆ. ಇನ್ನೆರಡು ಮೂರು ತಿಂಗಳಲ್ಲಿ ಯಾವುದೋ ಒಂದು ಕಂಪನಿಗೆ ಲೈಸನ್ಸು ಸಿಗುವುದರಲ್ಲಿದೆ. ಮಂಗಳೂರಿನಲ್ಲಿ ಫರ್ಟಿಲೈಸರು ಕಾರ್ಖಾನೆ ಸ್ಥಾಪನೆಯಾಗುವ ನಿರೀಕ್ಷೆ ಇದೆ. ಇದಕ್ಕೆ ಸಾಕಷ್ಟು ಪ್ರಯತ್ನಗಳೂ ನಡೆಯುತ್ತಿವೆ.

9-00 A.M.

ಮಂಗಳೂರಿನ ವಿಚಾರದಲ್ಲಿ ಬಹುಶಃ ಅಲ್ಲಿಯ ಸದಸ್ಯರಿಗಿಂತಲೂ ನನಗೆ ಹೆಚ್ಚು ಅಭಿಮಾನ ಇದೆ ಎಂದು ಹೇಳುತ್ತೇನೆ. ಅವರು ಕೇಳದೇ ಹೋದರೂ ಅಲ್ಲಿ ಮಾಡಬೇಕಾದ್ದನ್ನು ಮಾಡುತ್ತೇವೆ. ಅಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರಿ ಆಗಬೇಕು. ಅದರ ಜೊತೆಗೆ ಆದಷ್ಟು ಜಾಗ್ರತೆಯಾಗಿ ಅಲ್ಲಿ ಎಣ್ಣೆ ತಯಾರು ಮಾಡತಕ್ಕ ರಿಫೈನರಿ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಅದು ಆಗುತ್ತದೆಯೋ ಇಲ್ಲವೋ ಅದನ್ನು ಹೇಳದೆ ಹೋದರೂ ಅಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರಿ ಆಗತಕ್ಕ ಸೂಚನೆಗಳು ಇವೆ. ಶೀಘ್ರದಲ್ಲೇ ತೀರ್ಮಾನವಾಗಬಹುದು ಎಂದು ಅನಿಸುತ ದೆ.

ಇನ್ನು ಸೀಡ್‌ಫಾರಂಸ್. ಒಳ್ಳೆಯ ಬೀಜಗಳನ್ನು ತಯಾರುಮಾಡತಕ್ಕ ಪ್ರಯತ್ನ ನಡೆದಿದೆ. ಎರಡು ವರ್ಷದಿಂದ ಹೈ ಬ್ರಿಡ್ ಮೇಜ್, ಜೋಳ, ಹಾಗೂ ಸಜ್ಜೆ ಇವುಗಳ ವಿಚಾರದಲ್ಲಿ ಪ್ರಯತ್ನ ನಡೆದಿದೆ. ಆದರೆ ಈ ವರ್ಷ ಎಷ್ಟು ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ, ಒಂದು ಸಂತೋಷದ ಮಾತು ಏನೆಂದರೆ, ಈಸಲ 15—20 ಸಾವಿರ ಎಕರೆಯಲ್ಲಿ ಉತ್ಪನ್ನ ಮಾಡುವುದಕ್ಕೆ ಸಾಧ್ಯವಾಗಿದೆ. ಸುಮಾರು 10 ಲಕ್ಷ ಎಕರೆ ಸಾಕಾಗುವಷ್ಟು ಜೋಳ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಸಜ್ಜೆ ಮತ್ತು ಮೆಕ್ಕೆ ಜೋಳ ಇವುಗಳ ವ್ಯವಸ್ಥೆ ಆಗುತ್ತಾ ಇದೆ. ತುಂಗಭದ್ರಾ ಏರಿಯಾದಲ್ಲಿ ರಾಯಚೂರಿನಲ್ಲಿ 5 ಸಾವಿರ ಎಕರೆಯಲ್ಲಿ ಒಂದು ಸೀಡ್ ಫಾರಂ ಮಾಡಿ, ಅದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಕೆಲಸ ಮಾಡಬೇಕೆಂದು ತೀರ್ಮಾನವಾಗಿದೆ. ಬಹುಶಃ ಮುಂದಿನ ವರ್ಷದಿಂದ ಈ ಕಷ್ಟ ಕಡಿಮೆಯಾಗಬಹುದು. ಎರಡು ವರ್ಷದ ನಂತರ ಈ ಪ್ರಶ್ನೆ ಬರುವುದೇ ಇಲ್ಲ ಎಂದು ಹೇಳುವುದಕ್ಕೆ ಸಂತೋಷಪಡುತೇನೆ.

ಅನೇಕ ಮಾನ್ಯ ಸದಸ್ಯರು ಇನ್‌ಸೆಕ್ಟಿಸೈಡ್ಸ್ ಬೇಕು ಎಂದು ಹೇಳಿದ್ದಾರೆ. ಹೈಬ್ರಿಡ್ ಬೀಜಗಳಿಂದ ಆಗತಕ್ಕ ಬೆಳೆಗಳಿಗೆ ಆಗಿಂದಾಗ್ಗೆ ಅದನ್ನು ಹಾಕಲೇಬೇಕಾಗುತ್ತದೆ. ಇನ್‌ಸೆಕ್ಟಿಸೈಡ್ಸ್ ಇಲ್ಲದೇ ಹೋದರೆ ಚೆನ್ನಾಗಿ ಬೆಳೆಯು ವುದಿಲ್ಲ. ಸಾಕಾದಷ್ಟು ನೀರು ಗೊಬ್ಬರ ಕ್ರಿಮಿನಾಶಕ ಇಂಥಾದ್ದು ಸಾಕಾದಷ್ಟು ಇರಬೇಕಾದ್ದು ಅವಶ್ಯಕ. ಇದಕ್ಕೆ ಸಾಕಾದಷ್ಟು ಪ್ರಯತ್ನ ನಡೆಯುತ್ತಾ ಇದೆ. ಹೀಗಾಗಿ ಮಾನ್ಯ ಸದಸ್ಯರು ಏನೇನು ಹೇಳುತ್ತಾ ಇದ್ದಾರೋ ಅದನ್ನು ನಾವೇ ಮುಂದುವರಿದು ಮಾಡುತ್ತಾ ಇದ್ದೇವೆ. ಬಾವಿಗಳ ವಿಚಾರದಲ್ಲಿ ಸಾಕಾದಷ್ಟು ಪ್ರಗತಿ ಸಾಧನೆ ಯಾಗಿದೆ. ಭಾವಿಗಳನ್ನು ಕೊಡುತ್ತಾ ಇದ್ದಾರೆ. ಇದರಲ್ಲಿ ಕೊರತೆ ಏನೆಂದರೆ, ದುಡ್ಡಿನ ಕೊರತೆ, ಮತ್ತು ಕೆಲವು ಸಂದರ್ಭಗಳಲ್ಲಿ ಯಂತ್ರಗಳು ಸಿಕ್ಕುವುದಿಲ್ಲ. ಶರಾವತಿಯಲ್ಲಿ ಸಾಕಾದಷ್ಟು ವಿದ್ಯುಚ್ಛಕ್ತಿ ಉತ್ಪನ್ನವಾದರೂ ಅದನ್ನು ಹಳ್ಳಿ ಹಳ್ಳಿಗೆ ತೆಗೆದುಕೊಂಡು ಹೋಗಿ ಪ್ರತಿಯೊಂದು ಬಾವಿಗೆ ಕೊಡಬೇಕೆಂದು ನಮಗೆ ಇಷ್ಟವಿದ್ದರೂ ಕೂಡ ಇದಕ್ಕೆ ಇರತಕ್ಕ ಒಂದು ಕೊರತೆ ಎಂದರೆ ತಂತಿಯ ಅಭಾವ. ತಂತಿ ಇಲ್ಲದೇ ಇರುವುದರಿಂದ ಬಹಳ

(ಶ್ರೀ ಎಸ್. ನಿಜಲಿಂಗಪ್ಪ)

ತೊಂದರೆಯಾಗಿದೆ ; ಅದನ್ನು ನಾನಾ ರೀತಿಯಲ್ಲಿ ಪ್ರಯತ್ನಪಟ್ಟು ತಯಾರುಮಾಡುತ್ತಾ ಇದ್ದೇವೆ. ಆದರೂ ಎಲ್ಲಾ ಕಡೆಯಲ್ಲೂ ಕೊಡುವುದಕ್ಕೆ ಸಾಧ್ಯವಾದೀತು ಎಂದು ಅನಿಸುವುದಿಲ್ಲ. ಈ ವರ್ಷ ಬಹುಶಃ ಸುಮಾರು 20 ಸಾವಿರ ಬಾವಿ ಆದೀತು ಎಂದು ಕಾಣುತ್ತದೆ. ನಮ್ಮ ವಿದ್ಯುಚ್ಛಕ್ತಿ ಬೋರ್ಡಿನವರು ನಮಗೆ ಲೈನ್ ಮೆಟೀರಿಯಲ್ಸ್ ತಂದುಕೊಟ್ಟರೆ ಲಕ್ಷ ಬಾವಿಗಳಿಗೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಪ್ರತಿ ವರ್ಷ 10__15 ಸಾವಿರ ಬಾವಿ ತೆಗೆದುಕೊಳ್ಳುವುದಾದರೆ ಬಹುಶಃ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾವಿಗಳ ತೊಂದರೆ ಪೂರೈಸೀತು. ಅದೇ ರೀತಿ ಸಣ್ಣ ನೀರಾವರಿ ತೊಂದರೆ, ತಪ್ಪುತ್ತದೆ. ಮಧ್ಯಮ ವರ್ಗದ ಮತ್ತು ದೊಡ್ಡ ನೀರಾವರಿ ಯೋಜನೆಗಳ ಕಷ್ಟ ಇದೆ. ಮಾನ್ಯ ಸದಸ್ಯರು ನ್ಯಾಯವಾಗಿ ಕೇಳುತ್ತಾ ಇದ್ದಾರೆ. ಕೇಂದ್ರ ಸರ್ಕಾರದವರೇ ಈ 120 ಕೋಟಿ ರೂಪಾಯಿಗಳ ಯೋಜನೆಯನ್ನು ವಹಿಸಿಕೊಳ್ಳಲಿ ಎಂದು. ಅದೇ ರೀತಿ ನಾವೂ ಕೂಡ ಬರೆಯುತ್ತಾ ಇದ್ದೇವೆ. ನೆನ್ನೆತಾನೆ ಒಂದು ಕಾಗದ ಬಂದಿದೆ, ಪ್ಲಾನಿಂಗ್ ಕಮಿಷನ್‌ನಿಂದ, ಅವರು ಇದು ಬಹಳ ಕಷ್ಟವಾದ ಮಾತು ಆದರೂ ಕೂಡ ಇದನ್ನು ಆಲೋಚನೆ ಮಾಡುತ್ತಾ ಇದ್ದೇವೆ, ಬಡ್ಡಿ ಕೊಡುತ್ತೀರಾ, ಹಾಗೆ ಹೀಗೆ ಎಂತ ಹೇಳಿ ವಿಚಾರ ಮಾಡಿದ್ದಾರೆ. ಅವರ ಅರ್ಥ ಬಹುಶಃ ಬಡ್ಡಿ ಜಾಸ್ತಿ ಕೊಡದಿದ್ದರೂ ಈ ಸಾಲ ತೀರಿಸಲೇಬೇಕಾದೀತು ಎಂದು ಇರಬಹುದು. ಸಾಲ ಕೊಡುವುದಕ್ಕೆ ಪ್ರಯತ್ನ ಮಾಡಬಹುದೋ ಏನೋ ಎಂಬ ಸೂಚನೆ ಬಂದಿದೆ. ಇದು ಎಲ್ಲಿಗೆ ಬರುತ್ತದೆಯೋ ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಸಹಾಯ ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ನೀರಾವರಿ ಪ್ರದೇಶ ಸರಾಸರಿ 9ಕ್ಕಿಂತ ಕಡಮೆ ಇರತಕ್ಕ ಸಂದರ್ಭದಲ್ಲಿ ಅವರು ನಮ್ಮ ಸಹಾಯಕ್ಕೆ ಬಂದು ಈ ಕೆಲಸ ಮಾಡುವುದು ಸೂಕ್ತ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಈಗಲೂ ಈ ಸಭೆಯ ಮೂಲಕ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಾ ಇದ್ದೇವೆ. 120 ಕೋಟಿ ರೂಪಾಯಿನ ಈ ಕೃಷ್ಣಾನದಿ ಯೋಜನೆ ಏನಿದೆ ಅದನ್ನು ಅವರೇ ವಹಿಸಿಕೊಳ್ಳಬೇಕೆಂದು ಹೇಳುತ್ತಾ ಇದ್ದೇನೆ. ಇದರ ಮೇಲೆ ಪತ್ರವ್ಯವಹಾರ ನಡೆದಿದೆ. ಅನೇಕ ದೂರುಗಳನ್ನು ಮಾಡುತ್ತಾರೆ. ಅದು ಸರಿಯೇ. ಈ ರಾಜ್ಯ ಸರ್ಕಾರ ಏನೂ ಪ್ರಯತ್ನ ಮಾಡುತ್ತಾ ಇಲ್ಲ, ಹಾಗೆ ಹೀಗೆ ಎಂದು ಟೀಕೆ ಮಾಡುತ್ತಾರೆ. ಬಯ್ಯುವುದಕ್ಕೆ ಏನೂ ಇಲ್ಲದೇ ಇದ್ದರೆ ಏನಾದರೂ ಒಂದು ತಪ್ಪನ್ನು ವಿರೋಧಪಕ್ಷದವರು ಹುಡುಕಬೇಕಲ್ಲಾ! ಅದನ್ನು ಎತ್ತಿ ತೋರಿಸಿ ಅದನ್ನೇ ದೊಡ್ಡದಾಗಿ ಮಾಡಬೇಕು, ತಪ್ಪು ಏನೂ ಇಲ್ಲದೇ ಹೋದರೂ ಏನೋ ಒಂದು ಹೇಳುವುದು ಸ್ವಾಭಾವಿಕ. ಅದನ್ನು ಬೇಡ ಎಂದು ನಾನು ಹೇಳುವುದಿಲ್ಲ. ಅದನ್ನು ಮಾಡತಕ್ಕ ಸಂದರ್ಭದಲ್ಲಿ ಸಮಯ, ಸಂದರ್ಭ, ಯೋಗ್ಯತೆ, ಅವಶ್ಯಕತೆ ಇದನ್ನೆಲ್ಲಾ ತಿಳಿದುಕೊಂಡು ಮಾಡಲಿ ಅಷ್ಟೆ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳು ಬೆಳೆಯಬೇಕು, ಚೆನ್ನಾಗಿ ಬೆಳೆಯಬೇಕು ಅಷ್ಟೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).__ಹಾಗಾದರೆ ಏನೂ ತಪ್ಪೇ ಇಲ್ಲ ಅನ್ನುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.__ಈ ಮಾನ್ಯ ಸದಸ್ಯರಿಗೆ ಒಂದು ಮಾತು ಹೇಳಬೇಕು. ಜಗತ್ತಿನಲ್ಲಿ ಸತ್ಯ ಇದೆ ನ್ಯಾಯ ಇದೆ, ಒಳ್ಳೆಯದು ಇದೆ ಇದನ್ನು ತಿಳಿದುಕೊಂಡು ಹೇಳಬೇಕಾದ್ದನ್ನು ಹೇಳಿದರೆ ಎಷ್ಟೋ ಸಂತೋಷ ವಾದೀತು ಎಂದು ಕಾಣುತ್ತದೆ. ಅದು ಏನೇ ಆಗಲಿ ಸರ್ಕಾರದವರು ಮಾಡತಕ್ಕದ್ದು ಎಲ್ಲಾ ಸರಿ. ನಾವು ಎಲ್ಲವನ್ನೂ ಬಗೆಹರಿಸುತ್ತೇವೆ ಎಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ಮಾಡತಕ್ಕ ಕೆಲಸ ಬೇಕಾದಷ್ಟು ಇದೆ. ಸ್ವತಂತ್ರವಾಗಿರತಕ್ಕ ಈ ಸಮಯದಲ್ಲಿ ಅನೇಕ ಸಮಸ್ಯೆಗಳು ಬಂದಿವೆ, ಅವನ್ನೆಲ್ಲಾ ಬಗೆಹರಿಸುವುದು ಸುಲಭವಾದ ಕೆಲಸವಲ್ಲ. ಅದಕ್ಕೆ ಕಾಲ ಬೇಕು, ಶಕ್ತಿ ಬೇಕು ಮತ್ತು ಅನೇಕ ರೀತಿಯ ಸೌಲತ್ತುಗಳು ಬೇಕು. ಇವುಗಳೆಲ್ಲಾ ಬೇಕಾಗತಕ್ಕ ಸಂದರ್ಭದಲ್ಲಿ ನಾವು ಎಲ್ಲವನ್ನೂ ಒಂದೇ ಸಲ ಮಾಡುತ್ತೇವೆ ಎಂದು ಹೇಳುವ ದಡ್ಡತನ ನಮ್ಮಲ್ಲಿ ಇಲ್ಲ. ಸ್ವಲ್ಪವನ್ನು ದೊಡ್ಡದಾಗಿ ಟೀಕೆ ಮಾಡಿಕೊಂಡು ಹೇಳುವುದು ಅವರ ದಡ್ಡತನ. ಅದುಹೋಗ ಬೇಕು ಈ ಕೆಲಸಗಳನ್ನು ಮಾಡುವುದಕ್ಕೆ ಹಣ ಬೇಕು. ರೈತರಿಗೆ ಸಲ್ಲಬೇಕಾಗಿರುವುದು ಸಲ್ಲಬೇಕು, ಹಾಗೆ ಸಿಕ್ಕದಿದ್ದರೆ ವ್ಯವಸಾಯ ಒಂದು ಕೈಗಾರಿಕೆಯಾಗಿ ಬೆಳೆಯುವುದಿಲ್ಲ, ನಮ್ಮ ಅಭಾವ ಪರಿಹಾರವಾಗುವುದಿಲ್ಲ. ಒಂದು ಅಂಶ ತೀಕ್ಷ್ಣವಾಗಿ ಹೇಳಬೇಕೆಂದರೆ, ಇದು ನಾಚಿಕೆಗೇಡಿನ ಮಾತು. ನಾವು ಬೇರೆಕಡೆಗೆ ಹೋಗಿ ಕೈ ಒಡ್ಡಿ ಭಿಕ್ಷೆಬೇಡಿ ಅನ್ನ ತರುತ್ತಾ ಇದ್ದೇವೆ. ಇದು ನಿಲ್ಲಬೇಕು. ನಿಲ್ಲಬೇಕಾದರೆ ರೈತನಿಗೆ ಸಾಕಾದಷ್ಟು ಸಹಾಯ ಬೇಕು. ಅವನಿಗೆ ಒಳ್ಳೆಯ ಧಾರಣೆ ಸಿಕ್ಕಬೇಕು. ಇದು ಆಗುತ್ತಾ ಇಲ್ಲ ಎಂಬುದು ಎಲ್ಲರ ಅಭಿಪ್ರಾಯ, ಹೌದು ಅವನ ಉತ್ಪನ್ನ ಜಾಸ್ತಿಯಾಗಬೇಕಾದರೆ ಅವನಿಗೆ ಅನುಕೂಲತೆಯೂ ಜಾಸ್ತಿಯಾಗಬೇಕು. ಬೆಳೆಯತಕ್ಕ ಶಕ್ತಿ ಬೇಕು, ಶಕ್ತಿ ಕೊಡತಕ್ಕ ತಾಕತ್ತು ಕೊಡಬೇಕಾದರೆ ಸಾಲವನ್ನು ತಂದು ಸರ್ಕಾರ ಯಾವ ರೈತನಿಗೆ ಸಹಾಯ ಮಾಡುತ್ತದೆಯೋ ಆ ಸರ್ಕಾರಕ್ಕೆ ಆ ರೈತನೂ ಸಹ ಸ್ವಲ್ಪ ಮುಂದೆ ಬಂದು ಕೆಲವು ಕಾಲವಾದರೂ ಅನುಕೂಲ ಸ್ಥಿತಿಗೆ ಬರುವವರೆಗೆ ನಾನು ಸಹಾಯ ಮಾಡುವುದಕ್ಕೆ ಸಿದ್ಧನಾಗಿದ್ದೇನೆ, ನನಗೆ ಹೆಚ್ಚು ಹಣ ಕೊಡಿರಿ ಎಂದು ಹೇಳಬೇಕು. ಸರ್ಕಾರ ಹಾಕತಕ್ಕ ಕಂದಾಯವನ್ನು ಕರಭಾರವನ್ನು ಹೊರುವುದಕ್ಕೆ ಸಿದ್ಧವಾಗಿರಬೇಕು. ಇವತ್ತು ಮೈಸೂರು ಸರ್ಕಾರದಲ್ಲಿ ಈ ಒಂದೆರಡು ವರ್ಷಗಳಲ್ಲಿ ಏನು ಪ್ರಗತಿ ಸಾಧನೆಯಾಗಿದೆ ಇದು ಹಿಂದೆ 20__30

ವರ್ಷಗಳಲ್ಲಿ ಮಾತ್ರವಲ್ಲ 100 ವರ್ಷಗಳಲ್ಲಿ ಆಗಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಈಗಿನ ಪರಿಸ್ಥಿತಿ ಹಣಕಾಸಿನ ದೃಷ್ಟಿಯಿಂದ ಸರಿಯಾಗಿಲ್ಲ. ಜೊತೆಗೆ ಎಲ್ಲ ಅನುಕೂಲಗಳೂ ಆಗಬೇಕು ಇಂತಹ ಸಂದರ್ಭದಲ್ಲಿ ರೈತರೂ ಸಹ ಸ್ವಲ್ಪಮಟ್ಟಿಗೆ ಮುಂದೆ ಬಂದು ಕಂದಾಯ ಕೊಡುವುದಕ್ಕೆ ಸಿದ್ಧವಾಗಬೇಕು. ಅವರು ಕೊಡುವುದಕ್ಕೆ ಸಿದ್ಧವಾದರೂ ಬೇಡ ಎಂದು ಹೇಳುವವರು ಜಾಸ್ತಿಯಾಗಿದ್ದಾರೆ, ಅನೇಕ ಸಂದರ್ಭಗಳಲ್ಲಿ; ಒಂದು ಆಗುತ್ತದೆ, ಟೀಕೆ ಟಿಪ್ಪಣಿಗಳನ್ನು ಇಲ್ಲೂ ಮತ್ತು ಹೊರಗೂ ನೋಡಿದಾಗ ಏನಾಗಿದೆ ಎಂದರೆ, ಆಗಬೇಕಾದ ಕೆಲಸಕ್ಕೆ ಹರಕತ್ತು, ಆಗಬಾರದ ಕೆಲಸಕ್ಕೆ ಕುಮ್ಮಕ್ಕು ಇದು ಹೆಚ್ಚಾಗುತ್ತಾ ಇದೆ. ಇದು ವಿಷಾದ ಪಡತಕ್ಕ ವಿಚಾರ. ರೈತರು ಈ ಹೊರೆ ಹೊರುವುದು ಅವಶ್ಯಕ. ಈ ಹೊರೆ ಸಮಾಜದ ಬಾಕಿ ಭಾಗಗಳಲ್ಲಿ ಬೇರೆ ಕ್ಷೇತ್ರಗಳಲ್ಲೂ ಬೀಳುತ್ತದೆ. ಇವತ್ತು ನಾನಾ ರೀತಿಯಲ್ಲಿ ಅಭಾವ ಇದೆ, ಅದನ್ನು ಕಡಿಮೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕೆ ಏನೇನು ಕೆಲಸವಾಗಬೇಕೋ ಅದನ್ನು ಬಹಳ ಹೆಚ್ಚಿನ ರೀತಿಯಲ್ಲಿ, ಇವತ್ತು ಹೆಮ್ಮೆ ಪಡತಕ್ಕ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ಅರ್ಧಗಂಟೆ ಮಾತ್ರ ಮಾತನಾಡಬೇಕೆಂದು ಇದ್ದೆ. ಈಗಾಗಲೇ ಕಾಲ ಮುಗಿಯುತ್ತಾ ಬಂತು ಮಾನ್ಯ ಸದಸ್ಯರು ಇವತ್ತು ಬಹಳ ವಿಧಾಯಕವಾಗಿ ಮಾತನಾಡಿದ್ದಾರೆ ಅನೇಕ ಜನರು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯವರು ಕಂದಾಯವನ್ನು ಎಲ್ಲವನ್ನೂ ಕೊಟ್ಟಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಆರೀತಿಯಲ್ಲೇ ನಡೆದುಕೊಂಡು ಹೋಗಲಿ ಬಹಳ ಒಳ್ಳೆಯದು. ದಕ್ಷಿಣ ಕನ್ನಡ ಜಿಲ್ಲೆಯವರು ಒಳ್ಳೆಯವರು ಅಂದ ಮಾತ್ರಕ್ಕೆ ಬಾಕಿಯವರು ಕೆಟ್ಟವರು ಅಂತ ಆಗುವುದಿಲ್ಲ. ರಾಮ ಒಳ್ಳೆಯವನು ಎಂದರೆ ಲಕ್ಷ್ಮಣ ಕೆಟ್ಟವನು ಅಂತ ಅಲ್ಲ. ಒಟ್ಟಿನಲ್ಲಿ ಕಟ್‌ಮೋಷನ್ಸ್‌ನಲ್ಲಿ ಇರತಕ್ಕ ಈ ಸೀಡ್ ಫಾರಂಸ್, ಪವರ್ ಟಿಲ್ಲರ್ಸ್, ಇನ್‌ಸೆಕ್ಟಿಸೈಡ್ಸ್, ಫರ್ಟಿಲೈಸರ್ಸ್, ನೀರಾವರಿ ಬಾವಿ, ಪಂಪ್‌ಸೆಟ್ಟುಗಳು, ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಇವುಗಳನ್ನು ಏನೇನು ಕೇಳುತ್ತಾ ಇದ್ದೀರೋ ಇದ್ಯಾವುದೂ ಹೊಸದಲ್ಲ. ಸರ್ಕಾರದವರು ಆಲೋಚನೆ ಮಾಡಿ ಏನೇನು ತೀರ್ಮಾನ ಮಾಡಿದ್ದೇವೆಯೋ ಅದನ್ನೆಲ್ಲಾ ಹೇಳಿದ್ದೇನೆ; ಇನ್ನೇನನ್ನೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತಿನ ಪರಿಸ್ಥಿತಿಯಲ್ಲಿ ರೈತನಿಗೆ ಏನು ಸಹಾಯ ಆಗಬೇಕೋ ಅದನ್ನೆಲ್ಲಾ ಸರ್ಕಾರದವರು ಮಾಡುತ್ತಾ ಇದ್ದಾರೆ, ತೀವ್ರಗತಿಯಿಂದ ಮಾಡಬೇಕೆನ್ನುವುದು ಒಂದೇ ವಿನಾ ಹೊಸ ಸೂಚನೆ ಏನೂ ಬಂದಿಲ್ಲ. ವಿಧಾಯಕವಾದ ಸೂಚನೆಗಳಿಗೆ ಆಸಕ್ತಿ, ಪ್ರೋತ್ಸಾಹ ಸಿಕ್ಕಬೇಕಾಗಿದೆ ಅದು ಸಂತೋಷಪಡತಕ್ಕ ಮಾತು ಅದಕ್ಕೆ ಯಾವ ವಿರೋಧವೂ ಇಲ್ಲ ಎಂದು ನಂಬಿದ್ದೇನೆ.

ಶ್ರೀ ಬಿ. ರಾಚಯ್ಯ (ಮೀನುಗಾರಿಕೆ ಮತ್ತು ಅರಣ್ಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಅರಣ್ಯ ಮತ್ತು ಮೀನುಗಾರಿಕೆಗಳಿಗೆ ಸಂಬಂಧಪಟ್ಟ ಬೇಡಿಕೆಯ ಮೇಲೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಮಾತನಾಡಿದ ಬಹುಮಂದಿ ಸದಸ್ಯರು ಬಹಳ ನೀರಸವಾದ, ಸಪ್ಪೆಯಾದ, ಭಾಷಣ ಗಳನ್ನು ಮಾಡಿದರೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಇದನ್ನು ನೋಡಿದರೆ ಬಹುಶಃ ಪಾಪ. ಅರಣ್ಯ ಇಲಾಖೆಯ ವಿಷಯದಲ್ಲೇನು ಮಾತನಾಡುವುದು ಎಂದು ತಾತ್ಸಾರವಿದ್ದ ಹಾಗೆ ಕಾಣುತ್ತದೆ ಮಾತನಾಡ ದಿದ್ದರೆ ಎಲ್ಲಾ ಬಹಳ ಚೆನ್ನಾಗಿದೆಯೆಂದು ಭಾವಿಸಿಕೊಳ್ಳಬಹುದು ಎಂದು ಗಾಂಜಿ ವೀರಪ್ಪನವರು ಹೇಳುತ್ತಾರೆ. ಒಟ್ಟಿನಲ್ಲಿ ಈ ದಿವಸ ದೇಶದಲ್ಲಿ ಮಳೆಯಿಲ್ಲ, ಅಭಾವವಿದೆ ಎಂದು ಹೇಳುತ್ತಿರುವುದಕ್ಕೆ ಕಾರಣ ಬಹುಶಃ ಪ್ರಕೃತಿಯ ಒಂದು ಸಮತೋಲನವನ್ನು ನಾವು ಇಟ್ಟುಕೊಳ್ಳದಿರುವುದು ಎಂಬುದನ್ನು ಮಾನ್ಯ ಸದಸ್ಯರು ಮನಗಾಣಬಹುದು. ಯಾವ ದೇಶದಲ್ಲಿ ಅರಣ್ಯ ಉತ್ಕೃಷ್ಟವಾಗಿದೆ ಆ ದೇಶದಲ್ಲಿ ಇರುವ ಸಂಪದಭಿವೃದ್ಧಿ ಯನ್ನು ನಾವು ನೋಡಿದರೆ ಮಾನವನಿಗೂ ಅರಣ್ಯಕ್ಕೂ ಮೊದಲಿನಿಂದಲೂ ಕೂಡ ಬಹಳ ನಿಕಟವಾದ ಸಂಬಂಧ ಬೆಳೆದಿದೆ ಎಂಬುದು ವ್ಯಕ್ತವಾಗುತ್ತದೆ. ಯಾವ ಸಂಸ್ಕೃತಿಯಾಗಲಿ ಅಥವ ಒಳ್ಳೆಯ ಕೆಲಸಕಾರ್ಯವಾಗಲಿ ಪ್ರಾರಂಭವಾಗಿರುವುದು ಅರಣ್ಯದಿಂದ ಎಂಬುದನ್ನು ಶ್ರೀಮತಿ ನಾಗರತ್ನಮ್ಮನವರು ಜ್ಞಾಪಕಮಾಡಿಕೊಳ್ಳ ಬೇಕು.

ಸ್ವಾಮಿ, ಅರಣ್ಯಗಳು ಮನುಷ್ಯನ ನೈತಿಕ ಬೆಳವಣಿಗೆಗೆ ಮತ್ತು ನಾಗರೀಕತೆಗೆ ಸಹಾಯಮಾಡಿರುವುದರ ಜೊತೆಗೆ ಮನುಷ್ಯನಿಗೆ ಬೇಕಾಗಿರುವ, ಆವಶ್ಯಕವಾಗಿರುವ ಮರ-ಮುಟ್ಟುಗಳನ್ನು, ಕೈಗಾರಿಕೆಗಳಿಗೆ, ವಾಸದ ಮನೆಗಳಿಗೆ, ದನಗಳಿಗೆ ಮತ್ತು ಜನಗಳಿಗೆ ಬೇಕಾಗಿರುವ ಸಂಪತ್ತನ್ನು ಒದಗಿಸುತ್ತಿವೆ. ಇದಲ್ಲದೆ ದೇಶಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಮಳೆಯನ್ನು ತರಿಸುವುದಕ್ಕೆ ಸಹಕಾರಿಯಾಗಿವೆ. ಈ ರೀತಿಯಾದ ಅನೇಕ ಕಾರಣಗಳಿಂದ ಅರಣ್ಯವು ನಮಗೆ ಅತ್ಯಾವಶ್ಯಕವೆಂಬುದನ್ನು ನಾವು ಮನಗಾಣಬೇಕು. ಈ ದೃಷ್ಟಿಯಿಂದ ಅರಣ್ಯಗಳಿಗೆ ಈಗಿರುವುದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ಕೊಡುವುದಾದರೆ ಈ ದಿವಸ ನಾವೇನು ಅಭಾವ ಕಾಣು ತ್ತಿದ್ದೇವೆ, ಮಳೆಯಿಲ್ಲದೆ ಏನು ತೊಂದರೆ ಪಡುತ್ತಿದ್ದೇವೆ ಅದು ಹೋಗಿ ಸಕಾಲದಲ್ಲಿ ಮಳೆಯಾಗಿ ಜನರು ಸುಖವಾಗಿ ಬಾಳಲು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಅರಣ್ಯದ ಅಭಿವೃದ್ಧಿಯ

(ಶ್ರೀ ಬಿ. ರಾಚಯ್ಯ)

ಕಡೆಗೆ ಹೆಚ್ಚು ಗಮನ ಹರಿಸಿದ್ದರೆ ಅವರಿಗೆ ಇದರ ಮೇಲೆ ಹೆಚ್ಚಿನ ಅಭಿಮಾನವಿದೆ ಎಂದು ಭಾವಿಸುತ್ತಿದ್ದೆ. ಇನ್ನಾದರೂ ಅವರು ಈ ರೀತಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮಾತನಾಡಿದ ಬಹುಮಂದಿ ಸದಸ್ಯರು ಕಳಿಸಿರುವ ಖೋತಾ ನಿರ್ಣಯಗಳನ್ನು ವಿಮರ್ಶೆ ಮಾಡಿದರೆ ಅವನ್ನು 5 ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಅರಣ್ಯದಲ್ಲಿ ಎಷ್ಟು ಗಿಡಗಳನ್ನು ಹಾಕ ಲಾಗುತ್ತಿದೆ, ಹಾಕಿರುವುದರಲ್ಲಿ ಈ ದಿವಸ ಎಷ್ಟಿವೆ ಎಂಬುದು, ಎರಡನೆಯದು ಅರಣ್ಯದಲ್ಲಿ ಬರುವ ಉತ್ಪತ್ತಿ ಸಾಲದು, ಹೆಚ್ಚಾಗಬೇಕು ಎಂಬುದು, ಮೂರನೆಯದು ಅರಣ್ಯದಲ್ಲಿ ಬಹಳ ಬೆಲೆಬಾಳುವ ಗಂಧದ ಮರ ಮುಂತಾದುವುಗಳು ಬಹಳವಾಗಿ ಸಾಗಾಣಿಕೆಯಾಗುತ್ತಿವೆ, ಅದನ್ನು ತಡೆಗಟ್ಟಲು ಹೆಚ್ಚು ಸಿಬ್ಬಂದಿ ನೇಮಿಸ ಬೇಕು ಎಂಬುದು, ನಾಲ್ಕನೆಯದು ಎಷ್ಟು ಭೂಮಿಯನ್ನು ಸಾಗಿಗೆ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿಲ್ಲ, ಹೆಚ್ಚು ಸಾಗುವಳಿಗೆ ಕೊಡಬೇಕು ಎಂಬುದು, ಐದನೆಯದು ಕೈಗಾರಿಕೆಗಳನ್ನು ನಾವು ಹೆಚ್ಚಾಗಿ ಸ್ಥಾಪಿಸುವುದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿಲ್ಲ ಎಂಬುದು. ಇದರ ಜೊತೆಗೆ ಕೈಗಾರಿಕೆಗಳಿಗೆ ಕೊಟ್ಟಿರುವ ಮರಗಳಾಗಲಿ ಬೊಂಬುಗಳಾಗಲಿ ಸರಿಯಾದ ಬೆಲೆಗೆ ಕೊಡದೆ ಸರಕಾರಕ್ಕೆ ನಷ್ಟವಾಗುವ ರೀತಿ ಕೊಟ್ಟಿದ್ದಾರೆ ಎಂದೂ ಹೇಳಿದ್ದಾರೆ. ಮಾನ್ಯ ಸದಸ್ಯರು ಈ ವಿಧವಾದ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಇತರ ಕೆಲವು ಸದಸ್ಯರು ಈ ಇಲಾಖೆಯಲ್ಲಾಗಿರುವ ಕೆಲಸಕಾರ್ಯಗಳ ವಿಷಯದಲ್ಲಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವುದಲ್ಲದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸವಾಗಬೇಕೆಂದು ಹೇಳಿದ್ದಾರೆ. ಅವರಿಗೆ ನಿಜವಾಗಿಯೂ ಕೂಡ ಧನ್ಯವಾದಗಳನ್ನರ್ಪಿಸುತ್ತೇನೆ. ಒಳ್ಳೆಯ ಕೆಲಸಕಾರ್ಯ ಆಗಿರುವ ಕಡೆ ಒಳ್ಳೆಯ ಮಾತನ್ನಾಡಿದರೆ ಅಧಿಕಾರಿಗಳಿಗೆ ಮತ್ತು ಇಲಾಖೆಯ ಜವಾಬ್ದಾರಿಯನ್ನು ವಹಿಸಿರುವವರಿಗೆ ಉತ್ತೇಜನ ದೊರೆಯುತ್ತದೆ. ಅದೇ ರೀತಿಯಿಂದ ಎಲ್ಲಿ ಕೆಲಸಕಾರ್ಯ ವಾಗಿಲ್ಲ ಅದನ್ನು ನಿಷ್ಪಕ್ಷಪಾತವಾಗಿ ಹೇಳಿದರೆ ಒಪ್ಪಿಕೊಳ್ಳುವುದು ನಿಜವಾಗಿಯೂ ಕೂಡ ರಾಜಕೀಯ ಧರ್ಮ ನಮ್ಮ ಇಲಾಖೆಯ ಕೆಲಸಕಾರ್ಯಗಳ ವಿಷಯವನ್ನು ಬಹುಶಃ ಅರ್ಥಿಕ ಸಚಿವರು ತಮ್ಮ ಇಲಾಖೆಗಳ ಪ್ರೋಗ್ರೆಸ್ಸನ್ನು ರಿವ್ಯೂ ಮಾಡುವಾಗ ಬಡ್ಜೆಟ್ ವಿವರಣೆಯ ರೂಪವಾಗಿ ಮಾನ್ಯ ಸಭೆಗೆ ತಿಳಿಸಿದ್ದಾರೆ, ಅದನ್ನು ನೋಡಿದರೆ ಅನಾವಶ್ಯಕವಾಗಿರುವ ಒಂದೆರಡು ಟೀಕೆಗಳಿಗೆ ಅವಕಾಶವಾಗುತ್ತಿರಲಿಲ್ಲ ಎಂದು ಭಾವಿಸಿದ್ದೇನೆ. ಮೊದಲನೆಯದಾಗಿ ಪ್ಲಾಂಟೇಷನ್ಸ್ 5 ವರ್ಷಗಳಲ್ಲಿ ಮಾಡಿರುವ ಕೆಲಸಕಾರ್ಯಗಳನ್ನು ತಮ್ಮ ಅನುಮತಿ ಬೇಡಿ ಸಭೆಯ ಮುಂದಿಡುತ್ತೇನೆ. 1956ನೆಯ ಇಸವಿಯ ಸುಮಾರಿನಲ್ಲಿ ನಮ್ಮಲ್ಲೇನು ಪ್ಲಾಂಟೇಷನ್ ಆಗಿತ್ತು, ಈ ದಿವಸ ಎಷ್ಟಾಗಿದೆ ಎಂಬ ವಿವರ ಕೊಟ್ಟರೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗಬಹುದೆಂದು ಭಾವಿಸಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೇಗದ ಮರವನ್ನು 1,21,652 ಎಕರೆಗಳಲ್ಲಿ, ಹಾಕಿತ್ತು: ಹಾಗೆಯೇ ಮೃದು ಮರವನ್ನು 8,052 ಎಕರೆಗಳಲ್ಲಿ, ಗೋಡಂಬಿ 11,005 ಎಕರೆಗಳಲ್ಲಿ, ಸೌದೆ ಮತ್ತು ಇತರೆ ಕಾಡು ಜಾತಿ ಮರ, 1,18,852 ಎಕರೆಗಳಲ್ಲಿ ಹಾಕಿತ್ತು, ಒಟ್ಟಿನಲ್ಲಿ ಎರಡನೆ ಯೋಜನೆಯ ಅಂತ್ಯದಲ್ಲಿ 2,60,011 ಎಕರೆಗಳಲ್ಲಿ ಗಿಡ ಹಾಕಿ ಬೆಳೆಸಿದೆ. ಮೂರನೆಯ ಪಂಚವಾರ್ಷಿಕ ಯೋಜನೆ ಅಂತ್ಯದಲ್ಲಿ 1,71,012 ಎಕರೆಗಳಲ್ಲಿ ತೇಗ, 23,022 ಎಕರೆಗಳಲ್ಲಿ ಮೃದು ಮರ, 28,547 ಎಕರೆಗಳಲ್ಲಿ ಗೋಡಂಬಿ, 2,91,741 ಎಕರೆಗಳಲ್ಲಿ ಸೌದೆ ಮತ್ತಿತರ ಕಾಡು ಜಾತಿ ಮರ, ರಬ್ಬರ್ 1,288 ಎಕರೆಗಳಲ್ಲಿ ಲಿನೋಲಿಯಂ 1,301 ಎಕರೆಗಳಲ್ಲಿ ಹಾಕಿ ಹೀಗೆ ಒಟ್ಟಿನಲ್ಲಿ 5,16,911 ಎಕರೆಗಳಲ್ಲಿ ಹೊಸದಾಗಿ ಕಾಡನ್ನು ಹೆಚ್ಚಿಸುವುದಕ್ಕೆ ಇಲಾಖೆಯವರು ಪ್ರಯತ್ನಿಸಿದ್ದಾರೆ. ಬಹುಶಃ ಎಲ್ಲಿ ಬರಡು ಭೂಮಿ ಇತ್ತೋ ಅಂಥಲ್ಲಿ ಗಿಡಗಳನ್ನು ಹಚ್ಚಿ ಹಸುರಾಗಿ ಕಾಣುವಂತೆ ಮಾಡಿದ್ದಾರೆ. ಅಲ್ಲಿ ಹಾಕಿರತಕ್ಕಂಥ ಗಿಡಗಳಲ್ಲಿ ಎಷ್ಟು ಗಿಡಗಳು ಉಳಿದಿವೆ ಎಷ್ಟು ಸತ್ತು ಹೋಗಿವೆ ಎಂದು ಶ್ರೀ ಮುಕ್ಕಣ್ಣಪ್ಪನವರು ಕೇಳಿದರು. ಅರಣ್ಯ ಇಲಾಖೆಯಲ್ಲಿ ಇರತಕ್ಕಂಥ ಮೈದಾನ ಪ್ರದೇಶ ಏನು ಇದೆಯೋ ಅಂಥ ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಕೊಡಿ ಎಂದು ಹೇಳಿ ಫಲವತ್ತಾದ ಭೂಮಿಯನ್ನು ರಿಲೀಜ್ ಮಾಡಿಸುತ್ತಾರೆ. ಇದಲ್ಲದೆ ಜಲಾಶಯಗಳಿಗಾಗಿ ಕೊಡಬೇಕಾಗುತ್ತದೆ, ಕೆರೆ ಕಟ್ಟೆಗಾಗಿ ಕೊಡಬೇಕಾಗುತ್ತದೆ, ವ್ಯಾಲಿಯಲ್ಲಿರತಕ್ಕ ಫಲವತ್ತಾದ ಭೂಮಿಯನ್ನು ಸಾಗುವಳಿಗೆ ಕೊಡ ಬೇಕಾಗುತ್ತದೆ. ಆದುದರಿಂದ ಅರಣ್ಯ ಇಲಾಖೆಯ ಒಳ್ಳೇ ಭೂಮಿಯಲ್ಲಿ ಮರ ಬೆಳೆಸುವುದಕ್ಕೆ ಅವಕಾಶವಿಲ್ಲ. ಉಳಿದಿರುವ ಅರಣ್ಯ ಇಲಾಖೆ ಪ್ರದೇಶ ಬೆಟ್ಟ ಗುಡ್ಡ ಮತ್ತು ಕಲ್ಲು ಮಣ್ಣುಗಳಿಂದ ಕೂಡಿದ್ದ ಭೂಮಿಯಲ್ಲಿ ಗಿಡ ಬೆಳೆಯಬೇಕಾದರೆ ಕಷ್ಟವಾಗಿದೆ. ಕೇಂದ್ರದ ಸೆಂಟ್ರಲ್ ಬೋರ್ಡ್ ಆಫ್ ಫಾರೆಸ್ಟ್ ಅವರು ಕಳೆದ ವರ್ಷ ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಪ್ರಾಂತ್ಯದಲ್ಲಿ ಎಷ್ಟೆಷ್ಟು ಎಕರೆಯಲ್ಲಿ ಗಿಡಗಳು ನಿಂತಿವೆ ಎಂಬುದನ್ನು ತಜ್ಞರಿಂದ ಪರೀಕ್ಷೆ ಮಾಡಿರುವುದರಲ್ಲಿ ನಮ್ಮ ಸಂಸ್ಥಾನ ಮೊದಲನೇ ಸ್ಥಾನ ಪಡೆದು ಬಾಬು ರಾಜೇಂದ್ರ ಪ್ರಸಾದ್ ಷೀಲ್ಡ್ ಪಡೆದಿದೆ ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೆಲವು ಕಡೆ ಮಳೆ ಅಭಾವದಿಂದ ಎಷ್ಟೋ ಎಕರೆ ಭೂಮಿಯಲ್ಲಿ ಮರ ಗಿಡಗಳನ್ನು ಬೆಳೆಸಲು ಆಗಿಲ್ಲ. ಮಳೆ ಬಂದಮೇಲೆ ಹಾಕಬೇಕೆಂದು ಇಟ್ಟುಕೊಂಡಿದ್ದೇವೆ. ಒಂದು ಎಕರೆಯಲ್ಲಿ ಎಷ್ಟು ಉತ್ಪತ್ತಿ ಬಂದಿದೆ ಎಂಬುದಕ್ಕೆ ಲೋಕನಾಥನ್ ಕಮಿಟಿ ರಿಪೋರ್ಟಿನಲ್ಲಿ ನೋಡಿ, ನಾವು ಹಿಂದೆ ಬಿದ್ದಿದ್ದೇವೆ ಎಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ಅದು ರಿಪೋರ್ಟಿನ ಯಾವ ಪುಟದಲ್ಲಿದೆ ಎಂದು ಕೇಳಿದರೆ ಅವರು ತಮ್ಮದೇ ಆದ ಭಾಷಣದ

ರೀತಿಯಲ್ಲಿ ಏನೋ ಹೇಳಿದರು. ಲೋಕನಾಥನ್ ಅವರು Development of forests and Forest borne Industries in Mysore ಎಂಬ ಒಂದು ಉಪಯುಕ್ತವಾದ ಪುಸ್ತಕ ಬರೆದು ಕಳಿಸಿದ್ದಾರೆ. ಆ ಪುಸ್ತಕದ 9ನೇ ಪೇಜಿನಲ್ಲಿ ಹೇಳಿದೆ. Financial Yield of Forest in Mysore ಬಗ್ಗೆ ಲೆಕ್ಕ ಹಾಕಿ ಒಂದು ಎಕರೆಗೆ ಆಲ್ ಇಂಡಿಯಾ ಫಿಗರ್ 1,541 ಉತ್ಪತ್ತಿಯಾಗುತ್ತದೆ. ಮೈಸೂರು ಸಂಸ್ಥಾನದಲ್ಲಿ 4,542 ರೂಪಾಯಿ ಉತ್ಪಾದನೆಯಾಗುತ್ತದೆ ಎಂದು ಹೇಳಿದ್ದಾರೆ. ಇದು ಅನ್-ಆರ್ಗನೈಜ್ಡ್ ಫಾರೆಸ್ಟು. ಇನ್ನು ಆರ್ಗನೈಜ್ಡ್ ಫಾರೆಸ್ಟಿನಲ್ಲಿ ಆಲ್ ಇಂಡಿಯಾ ಫಿಗರ್ 2,500 ಇದೆ. ಮೈಸೂರು ಸಂಸ್ಥಾನದಲ್ಲಿ 6,724 ರೂಪಾಯಿ ಉತ್ಪತ್ತಿಯಾಗುತ್ತದೆ.

> "Increased realisation of revenue is chiefly due to timber and teak and sandalwood."

They have also said that Mysore holds the advantageous position. ಮಾನ್ಯ ಸದಸ್ಯರು ಇದನ್ನು ದಯವಿಟ್ಟು ಓದಬೇಕು ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಉತ್ಪಾದನೆ ಈ ಇಲಾಖೆಯಲ್ಲಿ ಎಷ್ಟು ಬರಬೇಕೋ ಅಷ್ಟು ಬರುತ್ತಾ ಇಲ್ಲ. ಕಾಲು ಭಾಗ ಉತ್ಪತ್ತಿ ಬರುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮಿಕ್ಕಿದ್ದು ಕಳ್ಳ ಸಾಗಾಣಿಕೆಯಾಗುತ್ತದೆ ಎಂಬ ಭಾವನೆ ಮಾಡಿಕೊಂಡರುವ ಹಾಗೆ ಇದೆ. ಇಂಡಿಯಾ ದೇಶದ ಎಲ್ಲ ಪ್ರಾಂತ್ಯಗಳ ನಿವ್ವಳ ಉತ್ಪಾದನೆಯನ್ನು ಹೋಲಿಸಿ ನೋಡಿದರೆ ಕೇರಳ ಪ್ರಾಂತ ಮೊದಲನೇ ಸ್ಥಾನ ಪಡೆದಿದೆ. ಎರಡನೇ ಸ್ಥಾನ ಮೈಸೂರು ಸಂಸ್ಥಾನ ಪಡೆದಿದೆ. ಈ ಎರಡು ರಾಜ್ಯಗಳಲ್ಲಿ ಇರತಕ್ಕ ವ್ಯತ್ಯಾಸ ಏನು ಅಂದರೆ 100ಕ್ಕೆ 60 ಭಾಗ ನಮ್ಮಲ್ಲಿ ಅರಣ್ಯ ಪ್ರದೇಶ ಮರಗಳಿಲ್ಲದೆ ಇರತಕ್ಕಂಥಾದ್ದು ಇದೆ. ಕೇರಳದ ಅರಣ್ಯದಲ್ಲಿ ಒಳ್ಳೇ ಮರಗಳನ್ನು ಬೆಳೆಸಿದ್ದಾರೆ. ಇಂಡಿಯಾ ದೇಶದಲ್ಲಿ ಮಧ್ಯ ಪ್ರದೇಶ ಹೆಚ್ಚಿನ ಅರಣ್ಯ ಪಡೆದಿದ್ದರೂ ಕೂಡ ಕೇರಳಕ್ಕಿಂತ ಕಡಿಮೆ ಉತ್ಪತ್ತಿ ಒಂದು ಎಕರೆಗೆ ಮಾಡುತ್ತಾರೆ. ಎರಡನೇದ್ದು ಮೈಸೂರು ಸಂಸ್ಥಾನ ಮಾಡುತ್ತದೆ.

ಆಂಧ್ರ ಪ್ರದೇಶದಲ್ಲಿ ನೆಟ್ಟ ರೆವೆನ್ಯೂ ಪರ್ ಎಕರೆ	...	...	1.69
ಅಸ್ಸಾಮ	...	...	1.39
ಬಿಹಾರ್	...	...	1.58
ಗುಜರಾತ	...	...	3.05
ಜಮ್ಮು ಅಂಡ್ ಕಾಶ್ಮೀರ್	...	...	3.87
ಕೇರಳ	...	...	11.99
ಮಧ್ಯ ಪ್ರದೇಶ	...	...	1.86
ಮದ್ರಾಸ್	...	...	2.88
ಮಹಾರಾಷ್ಟ್ರ	...	...	2.59
ಮೈಸೂರು	...	...	5.67
ಒರಿಸ್ಸಾ	...	...	1.56
ಪಂಜಾಬ್ ಅಂಡ್ ರಾಜಸ್ಥಾನ	...	...	(ಮೈನಸ್)
ಉತ್ತರ ಪ್ರದೇಶ	...	...	3.89
ವೆಸ್ಟ ಬೆಂಗಾಲ್	...	...	2.13

ಇದನ್ನು ನೋಡಿದರೆ ಎರಡನೇ ಸ್ಥಾನ ನಮ್ಮ ಮೈಸೂರು ಸಂಸ್ಥಾನ ಪಡೆದಿದೆ ಎಂದು ಹೇಳಬಹುದು. ಆದರೂ ಕೂಡ ಇಷ್ಟು ಮಾತ್ರ ಹೇಳುತ್ತೇನೆ. ರೆವೆನ್ಯೂ ಅಂಡ್ ಎಕ್ಸಪೆಂಡೀಚರ್ ನೋಡಿದರೆ 10 ಕೋಟಿ 20 ಲಕ್ಷ ರೂಪಾಯಿ ಉತ್ಪಾದನೆಯಾಗಿದೆ. ಹಿಂದಕ್ಕೆ 1961-62ರಲ್ಲಿ ಸುಮಾರು ಏಳು ಕೋಟಿ ಇತ್ತು. ಖರ್ಚು ಎಸ್ಟಾಬ್ಲಿಷಮೆಂಟ್ ಚಾರ್ಜಸ್ ಪ್ರತಿವರ್ಷ ಕಡಿಮೆಯಾಗುತ್ತಾ ಈಗ 77 ಪರ್ಸೆಂಟ್ ಇದೆ. ಇತರ ಸಂಸ್ಥಾನಗಳನ್ನು ನೋಡಿದರೆ ನಮಗೆ ಅದು ಅತ್ಯಂತ ಕಡಿಮೆ, ಚದುರ ಮೈಲಿಗೆ ಖರ್ಚು ಕಡಿಮೆ ಇದೆ. ಹೆಚ್ಚಾಗಿ ಇರತಕ್ಕ ಅರಣ್ಯ ಭೂಮಿಯನ್ನು ಕಾಪಾಡಬೇಕಾದರೆ ಫಾರೆಸ್ಟ್ ಗಾರ್ಡ್ಸ್ ಸ್ಟ್ರೆಂಗ್ತ್ ಹೆಚ್ಚಿಸಬೇಕಾಗುತ್ತದೆ. ಆಂಧ್ರ ಬೊಂಬಾಯಿ ಕೇರಳ ಮದ್ರಾಸ್ ಮೈಸೂರು ಇಷ್ಟನ್ನು ಹೋಲಿಸಿ ನೋಡಿದರೆ ಒಂದು ಬೀಟಿಗೆ ಎಷ್ಟು ಇದೆ. ಗೊತ್ತಾಗುತ್ತದೆ.

ಆಂಧ್ರ	...	...	12
ಬೊಂಬಾಯಿ	...	...	9
ಗುಜರಾತ್	...	...	10
ಮೈಸೂರು	...	...	34

(ಶ್ರೀ ಬಿ. ರಾಚಯ್ಯ)

ಒಟ್ಟಿನಲ್ಲಿ ನಮ್ಮ ಮೈಸೂರಿನಲ್ಲಿ ಒಬ್ಬ ಗಾರ್ಡನಿಗೆ 34 ಬೀಟ್ ಮಾಡಬೇಕಾಗುತ್ತದೆ. ಅಂದರೆ ಒಬ್ಬ ಗಾರ್ಡ್ 2,600 ಎಕರೆ ಭೂಮಿ ನೋಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಅರಣ್ಯ ಸಂಪತ್ತನ್ನು ಕಾಪಾಡುವುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವುದು ಗೊತ್ತಾಗುತ್ತದೆ. ಇನ್ನು ಮೂರನೆಯದಾಗಿ ಫಾರೆಸ್ಟ್ ಪ್ರೊಟೆಕ್ಷನ್‌ಗಾಗಿ ಸರಕಾರ ಸಾಕಷ್ಟು ಗಮನಕೊಡುತ್ತಾ ಇಲ್ಲ ಅನೇಕ ಕಡೆ ಕಳ್ಳ ಸಾಗಾಣಿಕೆಯಾಗುತ್ತದೆ ಎಂದು ಒಬ್ಬ ಮಾನ್ಯ ಸದಸ್ಯರು ಟೀಕೆ ಮಾಡಿದರು. ಬಹುಶಃ ಈ ಇಲಾಖೆಯಲ್ಲಿ ಹಿಂದೆ ಎಂದೂ ಇಲ್ಲದೇ ಇದ್ದಂಥ ರೀತಿಯಲ್ಲಿ ಅಲ್ಲಲ್ಲಿ ಚೆಕಿಂಗ್ ಸ್ಟೇಷನ್ಸ್ ಇರಬೇಕು ಎಂದು 600 ಚೆಕಿಂಗ್ ಸ್ಟೇಷನ್ಸ್ ಏರ್ಪಾಡು ಮಾಡಿದ್ದೇವೆ. ಇದಲ್ಲದೆ 7 ಫ್ಲೈಯಿಂಗ್ ಸ್ಕ್ವಾಡ್ಸ್ ಮಾಡಿದ್ದೇವೆ. ನಮ್ಮ ಸಂಸ್ಥಾನದಲ್ಲಿ ಎಷ್ಟು ಗಣನೀಯ ವಾದ ಪ್ರಮಾಣದಲ್ಲಿ ಗಂಧದ ಮರದ ಕಳ್ಳ ಸಾಗಾಣಿಕೆ ತಡೆಗಟ್ಟಲು ಸಾಧ್ಯವಾಯಿತು ಎಂಬುದನ್ನು ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಅಂಕಿ ಅಂಶಗಳಿಂದ ತಿಳಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಸ್ವಲ್ಪ ವಿವರ ಕೊಡುತ್ತೇನೆ.

1962-63 ನಂಬರ್ ಆಫ್ ಕೇಸಸ್ ಡಿಟೆಕ್ಟೆಡ್	...	...	7,746
1963-64	...	...	10,860
1964-65	...	...	12,434

9-30 A.M.

ಈ ಮೂರು ವರ್ಷಗಳಲ್ಲಿ ಕಾಂಪೌಂಡ್ ಆಗಿರುವುದು, 6925, 9641, 9795. Amount of produce involved ಮೊದಲನೆ ವರ್ಷ 2,80,310, 1963-64ರಲ್ಲಿ 4,21,511, 1964-65ರಲ್ಲಿ 3,62,744. number of cases prosecuted ಮೊದಲನೆ ವರ್ಷ 120, ಎರಡನೆ ವರ್ಷ 245, ಮೂರನೆ ವರ್ಷ 133. Amount involved ಮೊದಲನೆ ವರ್ಷ 11,770 ಎರಡನೆ ವರ್ಷ10,265, ಕಳೆದ ವರ್ಷ 10,823, ಈ ರೀತಿ ಗಂಧದ ಕಳ್ಳ ಸಾಗಾಣಿಕೆ ನಡೆಯುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಮಾನ್ಯ ಸದಸ್ಯರಿಗೆಲ್ಲಾ ಏನು ಭಾವನೆ ಇದೆಯೆಂದರೆ: ರಿಜರ್ವ್ ಫಾರೆಸ್ಟ್‌ನಲ್ಲಿ ಕಳ್ಳಸಾಗಾಣಿಕೆ ಹೆಚ್ಚು ನಡೆಯುತ್ತಿದೆ, ಇದನ್ನು ಅರಣ್ಯ ಇಲಾಖೆಯವರು ಕಂಡು ಹಿಡಿಯುವುದಕ್ಕೆ ಆಗಿಲ್ಲವೆಂದು. ಇದರಲ್ಲಿ ಒಂದು ಕಷ್ಟವೆಂದರೆ, ಐದು ಭಾಗಗಳಿಂದ ಐದು ರೀತಿಯ ಕಾನೂನುಗಳು ನಮ್ಮ ರಾಜ್ಯಕ್ಕೆ ಬಂದು ಸೇರಿದೆ, ನಮ್ಮ ರಾಜ್ಯದ ಕಾನೂನು ಪ್ರಕಾರ ಹಳೆಯ ಮೈಸೂರಿನಲ್ಲಿ ಗಂಧದ ಮರಗಳು ಸರ್ಕಾರದ ಸ್ವತ್ತಾಗಿದ್ದವು. ಬೇರೆಯವರು ಕದ್ದು ಮಾರುವುದಕ್ಕೆ ಅವಕಾಶ ವಿರಲಿಲ್ಲ. ಬಹಳ ಹಿಂದೆ ಬಳ್ಳಾರಿ, ಕೊಳ್ಳೆಗಾಲದಲ್ಲಿ ಯಾರು ಯಾರು ಗಂಧದ ಮರಗಳನ್ನು ಬೆಳೆಸಿದ್ದರೋ ಅವರಿಗೆ ಅದರಮೇಲೆ ಹಕ್ಕು ಇತ್ತು. ಅಲ್ಲಿಂದೀಚೆಗೆ ಈ ಮರಗಳ ಬೆಲೆಯನ್ನು ನಿಗದಿ ಮಾಡುವ ಹಕ್ಕು ಸರ್ಕಾರಕ್ಕೂ, ಖಾಸಗೀ ಮಾಲೀ ಕರುಗಳಿಗೂ ಇತ್ತು. ಇದರ ಬಗ್ಗೆ ಒಂದು ಯೂನಿಫಾರಮ್ ಆಕ್ಟ್ ಮಾಡಿದ್ದಾಗಿದೆ. ಇದರ ಬಗ್ಗೆ ರೂಲ್ಸ್‌ಗಳೆಲ್ಲಾ ಫೈನಲೈಸ್ ಆಗಿವೆ. ಈಗ ಲಾ ಡಿಪಾರ್ಟ್‌ಮೆಂಟ್‌ನವರು ಸ್ಕ್ರುಟಿನಿ ಮಾಡುತ್ತಿದ್ದಾರೆ. ಒಂದೆರಡು ತಿಂಗಳಲ್ಲಿ ಫೈನಲೈಸ್ ಆಗಿ ಯೂನಿಫಾರಮ್ ರೂಲ್ಸ್ ಬಂದಾಗ ಕಳ್ಳಸಾಗಾಣಿಕೆ ಹೆಚ್ಚು ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಇನ್ನು ಒಂದು ತಿಂಗಳಲ್ಲಿ ಈ ಗಂಧದ ಮರದ ಕಳ್ಳ ಸಾಗಾಣಿಕೆ ಇನ್ನೂ ಕಡಿಮೆಯಾಗುವುದಕ್ಕೆ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆಂದರೆ, ಗಂದದ ಕಡ್ಡಿಯನ್ನು ತಯಾರು ಮಾಡುವವರಿಗೆ, ಶಿಕಾರಿಪುರ, ಸೊರಬ, ಬೆಂಗಳೂರು ಮುಂತಾದ ಕಡೆಗಳಲ್ಲಿ ಐವರಿ ವರ್ಕ್ಸ್ ಮಾಡುವವರಿಗೆ ಗಂಧದಮರ ಹೆಚ್ಚು ಬೇಕಾಗುವುದರಿಂದ, ಅವರಿಗೆ ಕಡಿಮೆ ಬೆಲೆಯಲ್ಲಿ ಕೊಡಬೇಕೆಂದು ಇದ್ದೇವೆ. ಇದರಿಂದ ಅವರುಗಳು ಕಳ್ಳ ಸಾಗಾಣಿಕೆಯ ಮೂಲಕ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಇಲಾಖೆಯವರೇ ಎಲ್ಲಾ ಮರಗಳನ್ನೂ ತೆಗೆದುಕೊಂಡು ಅವರುಗಳಿಗೆ ಅರ್ಧ ಬೆಲೆಗೆ ಕೊಡುವುದರಿಂದ ಕಳ್ಳ ಸಾಗಾಣಿಕೆ ಹೆಚ್ಚು ಆಗುವುದಕ್ಕೆ ಅವಕಾಶವಾಗುವುದಿಲ್ಲ. ಮತ್ತೊಂದು ಅಂಶವೆಂದರೆ, ಮದ್ರಾಸ್ ಪ್ರಾಂತ್ಯ, ಕೇರಳಾ ಪ್ರಾಂತ್ಯ, ಆಂಧ್ರ ಪ್ರಾಂತ್ಯಗಳವರ ಜೊತೆಯಲ್ಲಿ ಇನ್‌ಟರ್ ಸ್ಟೇಟ್ ಕಮಿಟಿಯನ್ನು ಸ್ಥಾಪನೆ ಮಾಡಿಕೊಂಡು, ನಮ್ಮ ಭಾಗದ ಗಂಧದ ಮರಗಳು ಆ ಕಡೆ ಹೋದರೆ ಅವರು ಕಂಡುಹಿಡಿದು ನಮಗೆ ಸಹಕರಿಸಬೇಕೆಂದು ಕೇಳಿದ್ದೇವೆ. ಅವರು ಸಹ ಸಹಕಾರ ನೀಡಿದ್ದಾರೆ. ಇದರಿಂದ ಬಹುಮಟ್ಟಿಗೆ ಕಳ್ಳ ಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿದೆ. Central Forest Advisory Board ನವರು ಇಡೀ ದೇಶಕ್ಕೆ ಸಂಬಂಧಪಟ್ಟ ರೀತಿ ಸ್ಯಾಂಡ್‌ಲ್‌ವುಡ್ ಬಗ್ಗೆ ಒಂದು ಕಾಮನ್ ರೂಲ್ಸ್ ಮಾಡಬೇಕೆಂದು ಹೇಳಿದ್ದಾರೆ. ನಾವು ಸಹ ಒಪ್ಪಿದ್ದೇವೆ. ಬೇರೆ ಸಂಸ್ಥಾನದವರು ಸಹ ಇದನ್ನು ಅಳವಡಿಸಿದರೆ ಕಳ್ಳ ಸಾಗಾಣಿಕೆ ಕಡಮೆಯಾಗುತ್ತದೆ. ಮೈಸೂರು ಸಂಸ್ಥಾನದವರು ಹೊರದೇಶಗಳಿಗೆ ಗಂಧದ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಒಪ್ಪಿದ್ದಾರೆ.

ಕಳ್ಳಭಟ್ಟಿ ಇಳಿಸುವವರು ಒಂದು ಕಾರ್ಖಾನೆ ಇಟ್ಟುಕೊಂಡು, ಕಳ್ಳಸಾಗಾಣಿಕೆಯಿಂದ ಬರುವ ಮರಗಳನ್ನು ಕಡಮೆ ಬೆಲೆಗೆ ಕೊಂಡು ಎಣ್ಣೆ ಇಳಿಸಿ International Market ನಲ್ಲಿ ಸರ್ಕಾರದ ಬೆಲೆಗಿಂತಲೂ ಕಡಮೆ ಬೆಲೆಗೆ ಮಾರುತ್ತಿರುವುದು ಕಂಡುಬಂದಿದ್ದರಿಂದ, ಈಗ ಗಂಧದ ಮರಗಳ ಬೆಲೆಯನ್ನು ಅರ್ಧದಷ್ಟು ಇಳಿಸಿದ್ದೇವೆ. ಗಂಧದ ಎಣ್ಣೆ ಮಾರಾಟದಿಂದ 18 ಲಕ್ಷ ರೂಪಾಯಿಗಳ ಲಾಭ ಸಂಪಾದನೆ ಮಾಡಿದ್ದೇವೆ. ಈಗ ಎಲ್ಲಾ ಮರಗಳನ್ನೂ ಸರ್ಕಾರದವರೇ ತೆಗೆದುಕೊಂಡು, ಕಾರ್ಖಾನೆಗಳವರಿಗೆ ಕಡಮೆ ಬೆಲೆಗೆ ಮಾರುವುದರಿಂದ, ಎಲ್ಲಾ ಗಂಧದ ಮರಗಳೂ ಸರ್ಕಾರದ ಸ್ವತ್ತಾಗಿರುವುದರಿಂದ, ಕಳ್ಳಬಟ್ಟಿ ಇಳಿಸುತ್ತಿದ್ದ ಗಂಧದ ಕಾರ್ಖಾನೆಗಳವರು ತಮ್ಮ ಕಾರ್ಖಾನೆಗಳನ್ನು ಮುಚ್ಚಬೇಕಾದ ಸಂಧರ್ಭ ಬಂದಿದೆ. ರೈತರುಗಳು ತಮ್ಮ ತಮ್ಮ ಜಮೀನುಗಳಲ್ಲಿರತಕ್ಕ ಮರಗಳನ್ನು ಸಂರಕ್ಷಣೆ ಮಾಡಿಕೊಳ್ಳಲು ಅವರಿಗೆ ಸರ್ಕಾರದವರು ಯಾವ ರೀತಿಯ ಉತ್ತೇಜನವನ್ನೂ ಕೊಟ್ಟಿಲ್ಲವೆಂದು ಒಬ್ಬರು ಸದಸ್ಯರು ಹೇಳಿದರು. ಅದಕ್ಕೋಸ್ಕರವಾಗಿ, ಯಾರು ಗಂಧದ ಮರಗಳನ್ನು ಬೆಳೆಸುತ್ತಾರೋ, ಸಂರಕ್ಷಣೆ ಮಾಡುತ್ತಾರೋ, ಅವರುಗಳಿಗೆ ಗಂಧದ ಮರದ ಬೆಲೆಯ ಅರ್ಧದಷ್ಟನ್ನು ಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದೇವೆ ಎಂಬ ವಿಷಯವನ್ನು ಅತ್ಯಂತ ಸಂತೋಷದಿಂದ ತಿಳಿಸುತ್ತೇನೆ. ಗಂಧದ ಕಾರ್ಖಾನೆಯಲ್ಲಿ ಗಂಧದ ಕೋಟೆಗಳಿಂದ ಕೆಲವು hard woodನಲ್ಲಿ ಸರಿಯಾಗಿ ಎಣ್ಣೆ ಬರುವುದಿಲ್ಲವೆಂದು ತೆಗೆದುಕೊಳ್ಳುವುದಿಲ್ಲವೆಂದು ಕೆಲವರು ಹೇಳಿದ್ದಾರೆ. ಬಹುಶಃ ನಮ್ಮ ಗಂಧದ ಕೋಟೆಯಲ್ಲಿ ಕಳಪೆ ಮಾಲು ಇರಲಿ, ಒಳ್ಳೆಯಮಾಲು ಇರಲಿ, ಅವುಗಳನ್ನು ಡ್ರೆಸ್‌ಮಾಡಿ ಗಂಧದ ಕಾರ್ಖಾನೆಗೆ ಕೊಡುತ್ತೇವೆ. Chief Conservator of Forests ಅವರಿಗೆ ಈ ರೀತಿ ಡ್ರೆಸ್ ಮಾಡಿದ ಗಂಧದ ಕೊರಡುಗಳನ್ನು ಕಾರ್ಖಾನೆಗಳವರಿಗೆ ಕೊಡುವುದಕ್ಕೆ ಹಕ್ಕಿರುತ್ತದೆಯೇ ಹೊರತು, ಬೇರೆಯವರಿಗೆ ಹಕ್ಕು ಇರುವುದಿಲ್ಲ. ಈ ಒಂದು ವಿಚಾರದಲ್ಲಿ ಸರ್ಕಾರದ ಮನಾಪಲಿಯಾಗಿದೆಯೆಂದು ಹೇಳಬಹುದು. ಈಗಲಾದರೂ ಈ ಸಭೆಯ ಗಮನಕ್ಕೆ ತಿಳಿಸುವುದೇನೆಂದರೆ, ಈ ಗಂಧದ ಮರಗಳನ್ನು ಎಲ್ಲಾ ರೈತರುಗಳೂ, ಅದು ಸಣ್ಣ ಗಿಡವೇ ಆಗಿರಲಿ, ದೊಡ್ಡ ಗಿಡವೇ ಆಗಿರಲಿ, ಕಡಿದು ಹಾಳು ಮಾಡುವುದಕ್ಕೆ ಬದಲು, ಅದನ್ನು ರಕ್ಷಣೆ ಮಾಡಿದರೆ, ಕೋಲಾರದ ಚಿನ್ನದ ಗಣಿಯಿಂದ ಎಷ್ಟು ಪ್ರತಿಫಲ ಬರುತ್ತಿದೆಯೊ ಅಷ್ಟೇ ಪ್ರತಿಫಲ ಇದರಲ್ಲೂ ಬರುತ್ತದೆ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮೂರನೇಯದಾಗಿ ಫಾರೆಸ್ಟ್ ಇಲಾಖೆಯಿಂದ ಹೆಚ್ಚು ಹೆಚ್ಚು ಜಮೀನನ್ನು ವ್ಯವಸಾಯಕ್ಕೆ ಕೊಟ್ಟಿಲ್ಲವೆಂದು ಕೆಲವುಸದಸ್ಯರು ಟೀಕೆಮಾಡಿದ್ದಾರೆ. ರೆವಿನ್ಯೂ ಇಲಾಖೆಯವರು ಒಪ್ಪದೆ ಇದ್ದರೂ ಸಹ ಕೆಲವರು ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು unauthorised occupation ಮಾಡಿಕೊಂಡು ಬೆಳೆ ಬೆಳೆಯುತ್ತಿದ್ದಾರೆಂದು ಕೆಲವು ಸದಸ್ಯರು ವ್ಯಕ್ತಪಡಿಸಿದರು. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ಈ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಸಭೆಯಮುಂದೆ ಇಟ್ಟರೆ ಗೊತ್ತಾಗುತ್ತದೆ. ಅರಣ್ಯ ಇಲಾಖೆಯು ಬಹಳ ಉದಾರವಾಗಿದೆ ಎಂದರೆ ತಪ್ಪಾಗುವುದಿಲ್ಲ. ಯಾರೋ ಅರಣ್ಯ ಇಲಾಖೆಯ ಸಚಿವನಾಗಿದ್ದರೂ, ಅರಣ್ಯವನ್ನು ಲಿಕ್ವಿಡೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯವಸಾಯಕ್ಕಾಗಿ ಅರಣ್ಯ ಇಲಾಖೆಯಿಂದ ಎಷ್ಟು ಭೂಮಿಯನ್ನು ಕೊಡಬೇಕೆಂದು ಯೋಚನೆ ಮಾಡಬೇಕಾಗಿದೆ. ಇರುವ ಜಮೀನಿನಲ್ಲೇ ಹೆಚ್ಚು ಬೆಳೆ ಬೆಳೆಯಬೇಕೇ ಹೊರತು, ಅರಣ್ಯವನ್ನು ನಾಶಮಾಡಿ ಅಲ್ಲಿಯೇ ಬೆಳೆ ಬೆಳೆಯುವುದು ಸಾಧುವಲ್ಲಾ ಎಂದು ದಿವಂಗತ ಜವಹರ್‌ಲಾಲ್ ನೆಹರು ಅವರು ಹೇಳಿದ್ದರು. ಕಾಡಿಗಾಗಿ ನಾವು ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಫಾರೆಸ್ಟ್ ಇಲಾಖೆಯಿಂದ ಧರ್ಮಾ ಪ್ರಾಜೆಕ್ಟ್, ಅಂಬಲಿ ಪ್ರಾಜೆಕ್ಟ್, ಭದ್ರಾ ಪಾಜೆಕ್ಟ್, ತುಂಗಭದ್ರಾ ಪ್ರಾಜೆಕ್ಟ್, ಶರಾವತಿ ಪ್ರಾಕೆಕ್ಟ್, ಘಟಪ್ರಭಾ ಪ್ರಾಜೆಕ್ಟ್, ನುಗು ಪ್ರಾಜೆಕ್ಟ್, ಮತ್ತು ಕಾಳೀನದಿ ಪ್ರಾಜೆಕ್ಟ್‌ಗಳಿಗಾಗಿ 68,245 ಎಕರೆಗಳಷ್ಟು ಭೂಮಿಯನ್ನು ಕೊಡಬೇಕಾಗಿ ಬಂತು. ಹೀಗೆ ಫ್ಯಾಕ್ಟರಿಗಳಗೋಸ್ಕರವಾಗಿ 3,827 ಎಕರೆಗಳನ್ನೂ, ಮೈನಿಂಗ್ ಏರಿಯಾಕ್ಕೆ 49,627 ಎಕರೆಗಳನ್ನೂ ಬಿಡಬೇಕಾಗಿ ಬಂತು. ಪವರ್ ಲೈನ್ಸ್‌ಗೆ 4,222 ಎಕರೆಯಷ್ಟು ಬಿಡಬೇಕಾಗಿ ಬಂದಿತು. ಮೂರು ಜನರ ಕಮಿಟಿ ಮಾಡಿದ್ದಾರೆ. ಆ ಕಮಿಟಿ ತೀರ್ಮಾನದ ಪ್ರಕಾರ 1,07,228 ಎಕರೆಗಳನ್ನು ವ್ಯವಸಾಯಕ್ಕೋಸ್ಕರ ರಿಲೀಸ್ ಮಾಡಿದ್ದೇವೆ. ಹೀಗೆ ವ್ಯವಸಾಯಕ್ಕೋಸ್ಕರ 1961ರಿಂದ 1964-65ನೇ ಇಸವಿಗೆ ಬೆಳಗಾಂ, ಬಳ್ಳಾರಿ, ಶಿವಮೊಗ್ಗ ಮತ್ತು ಕೂರ್ಗ್ ಸರ್ಕಲ್‌ಗಳಿಂದ 65,303 ಎಕರೆಗಳನ್ನು ಬಿಡುಗಡೆ ಮಾಡಿದ್ದೇವೆ. ಅಲ್ಲದೆ ಎಕ್ಸ್‌ಪ್ರೋಪ್ರಿಯೇಟೆಡ್ ರೈಯಟ್ಸ್‌ನ್ನು ಪುನರ್ವ್ಯವಸ್ಥೆ ಮಾಡುವುದಕ್ಕೆ ಹಿಡಕಲ್, ಕಬಿನಿ, ತುಂಗಭದ್ರ ಮತ್ತು ಭದ್ರಾ ಪ್ರದೇಶದಲ್ಲಿ 19,185 ಎಕರೆಗಳಷ್ಟು ಬಿಟ್ಟುಕೊಟ್ಟಿದ್ದೇವೆ. ಅರಣ್ಯ ಇಲಾಖೆಯಿಂದ ಸುಮಾರು 3,07,686 ಎಕರೆ 24 ಗುಂಟೆಗಳನ್ನು ಇದರಿಂದಾಗಿ ಇವೊತ್ತು ಕಳೆದುಕೊಂಡಿದ್ದೇವೆ. ರೆವಿನ್ಯೂ ಮತ್ತು ಇತರ ಮೈನರ್ ಫಾರೆಸ್ಟ್‌ನಲ್ಲಿ ಮೂರು ಮಂದಿ ಕಮಿಟಿಯ ಶಿಫಾರ್ಸಿನಮೇಲೆ 8 ಲಕ್ಷ 9 ಸಾವಿರ 144 ಎಕರೆಯಷ್ಟು ಅರಣ್ಯ ಇಲಾಖೆಗೆ ಬರಬೇಕೆಂದು ಅದನ್ನು ವರ್ಗಾಯಿಸಿದ್ದಾರೆ. ಆದ್ದರಿಂದ ತಮಗೆ ಅರ್ಥವಾಗುತ್ತದೆ ಅರಣ್ಯ ಇಲಾಖೆಯಲ್ಲಿ ಎಲ್ಲಿ ಬೇಸಾಯಕ್ಕೆ ಯೋಗ್ಯವಾಗಿದೆ ಅಂತಹ ಭೂಮಿಯನ್ನು ಬೇಸಾಯಕ್ಕೆ ಬಿಟ್ಟುಕೊಟ್ಟು ಎಲ್ಲಿ ಒಳ್ಳೆಯ ಮರಗಳು ಇತ್ತು ಮೈನರ್ ಫಾರೆಸ್ಟ್ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳಲ್ಲಿ ಅನೇಕ ರೀತಿಯಾದಂಥ ಮರಗಳು ಬೆಳೆದು ಕಾಡು ಬೆಳೆಯುವುದಕ್ಕೆ ಅನುಕೂಲವಾಗಿದೆ ಅಂತಹ ಭೂಮಿಯನ್ನು ಅರಣ್ಯ ಇಲಾಖೆಗೆ ಸೇರಿಸಿಕೊಂಡಿದ್ದೇವೆ. ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೇರಳದವರಾಗಲೀ ಅಥವಾ ಮೈಸೂರು ಸಂಸ್ಥಾನದವರೇ ಆಗಲಿ,

(ಶ್ರೀ ಬಿ. ರಾಚಯ್ಯ)

ಕೆಲವರು ಅರಣ್ಯ ಭೂಮಿಯನ್ನು ಅತಿಕ್ರಮ ಪ್ರವೇಶಮಾಡಿ ಮರಗಳನ್ನು ಕಡಿದುಹೋಗುವುದಲ್ಲದೆ ಕಳ್ಳ ಸಾಗಾಣಿಕೆ ಮಾಡಿರುವುದನ್ನು ಸರ್ಕಾರದವರ ಗಮನಕ್ಕೆ ತಂದರೆ ಅವರನ್ನು ಓಡಿಸುವುದಕ್ಕೆ ಮತ್ತು ಆ ರೀತಿ ಅಕ್ರಮ ಪ್ರವೇಶ ಮಾಡದೇ ಇರುವುದಕ್ಕೆ ಕಾರ್ಯಕ್ರಮ ಈಗಾಗಲೇ ಸರ್ಕಾರದವರು ತೆಗೆದುಕೊಂಡಿದ್ದಾರೆ ಆ ಭೂಮಿ ಇದುವರೆಗೆ ರೆವಿನ್ಯೂ ಇಲಾಖೆಯಲ್ಲಿ ಇತ್ತೇವಿನಾ ಅರಣ್ಯ ಇಲಾಖೆಯ ಸುಪರ್ದಿನಲ್ಲಿರಲಿಲ್ಲ ಎಂದು ಮಾನ್ಯ ಶ್ರೀ ಮುಕ್ಕಣ್ಣಪ್ಪನವರ ಗಮನಕ್ಕೆ ತರುತ್ತೇನೆ. ಮೈನರ್ ಫಾರೆಸ್ಟ್, ಡಿಸ್ಟ್ರಿಕ್ಟ್ ರಿಸರ್ವ್ ಇವು ರೆವೆನ್ಯೂ ಇಲಾಖೆಯ ಸುಪರ್ದಿನಲ್ಲಿ ಹೆಸರಿಗೆ ಮಾತ್ರ ಇರುವುದರಿಂದ, ಅದನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿ ಇಲ್ಲದೇ ಇರುವುದರಿಂದ ಅಕ್ರಮ ಪ್ರವೇಶ ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಅವಕಾಶವಾಯಿತು ಫಾರೆಸ್ಟ್ ಡಿಪಾರ್ಟ್ ಮೆಂಟಿನ ಸುಪರ್ದಿನಲ್ಲಿ ಇದ್ದಿದ್ದರೆ ಈ ರೀತಿ ಕಳ್ಳ ಸಾಗಾಣಿಕೆ ಮತ್ತು ಅಕ್ರಮ ಪ್ರವೇಶ ಆಗುತ್ತಾ ಇರಲಿಲ್ಲ. ನಮ್ಮ ಸುಪರ್ದಿಗೆ ಬಂದ ಕೂಡಲೇ ಆ ರೀತಿ ಆಗದಂತೆ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಶಿವಮೊಗ್ಗದ ಕಾಡಿನಲ್ಲಿ ನೆಲೆಸಿದವರು ಯಾರು ಇದ್ದಾರೆ ಅವರ ಜಾತಾ ಬೆಂಗಳೂರಿಗೆ ಕಾಲುನಡಿಗೆಯಲ್ಲಿ ಬರುತ್ತಿದ್ದಾರೆ. ಅವರು ತಮ್ಮನ್ನು ಅನಾವಶ್ಯಕವಾಗಿ ಕಾಡುಭೂಮಿಯಿಂದ ಹೊರಗೆ ಹಾಕುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಜಾತಾ ಸತ್ಯಾಗ್ರಹ, ಅನ್ನ ಸತ್ಯಾಗ್ರಹಕ್ಕೆ ಅಂಜಿ ಕೆಲಸಮಾಡುವ ಹಾಗಿದ್ದರೆ, ನಾಳೆ ಮನೆಬಿಟ್ಟು ಹೋಗಬೇಕಾಗುತ್ತದೆ. ಯಾರು ಆರೀತಿ ಕಳ್ಳ ಸಾಗಾಣಿಕೆ ಮಾಡುತ್ತಾರೋ ಅವರ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರೂ ಈ ಪಕ್ಷದ ಸದಸ್ಯರೂ ಅನುಕಂಪ ಇಟ್ಟುಕೊಳ್ಳದೆ ಇದ್ದರೆ, ಈ ದೇಶದಲ್ಲಿ ಒಳ್ಳೆಯ ಕಾರ್ಯ ಸಾಧನೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಅರಣ್ಯ ವಸ್ತುಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳ ವಿಚಾರವಾಗಿ, ಮಾನ್ಯ ಸದಸ್ಯರಾದ ಶ್ರೀ ಸುಂತನ್‌ಕರ್ ಅವರು ಹೇಳಿದ್ದಾರೆ. ಕೊನೆಯದಾಗಿ ಭಾಷಣ ಮಾಡಿದ ಶ್ರೀ ರೇವಣಸಿದ್ದಪ್ಪನವರು ಕೊಡತಕ್ಕಂಥ ರೇಟು ಏನು ಇದೆ, ಅದು ಅತ್ಯಂತ ಕಡಿಮೆಯಾಗಿದೆ. ಅದರಿಂದ ಸರ್ಕಾರಕ್ಕೆ ಬರತಕ್ಕ ಲಾಭ ಕಡಿಮೆಯಾಗುತ್ತದೆ. ಹರಾಜಿನಲ್ಲಿ ಇಡದೆ ರೇಟ್ ಫಿಕ್ಸ್ ಮಾಡಿ ಯಾತಕ್ಕೆ ಕೊಡಬೇಕು ಎಂದು ಪ್ರಶ್ನೆ ಮಾಡಿದರು. ಕೈಗಾರಿಕೆಯ ಬೇಡಿಕೆ ಸಭೆಯಮುಂದೆ ಬಂದಾಗ ಮಾನ್ಯ ಸದಸ್ಯರು ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆ ಹಿಂದೆ ಬಹಳ ಅಭಿವೃದ್ಧಿ ಪಡೆದಿತ್ತು. ಈಗ ಕೈಗಾರಿಕಾಭಿವೃದ್ಧಿ ಹೆಚ್ಚು ಕುಂಠಿತವಾಗಿದೆ, ಹೆಚ್ಚು ರೀತಿಯಲ್ಲಿ ಸರ್ಕಾರದವರು ಪ್ರೋತ್ಸಾಹಕೊಡುತ್ತಾ ಇಲ್ಲ ಎಂದು ಒಂದುಕಡೆ ಟೀಕೆ ಮಾಡಿದರೆ ಮತ್ತೊಂದುಕಡೆ ಕೈಗಾರಿಕಾಭಿವೃದ್ಧಿಮಾಡಿದಕಡೆ, ರೇಟ್ಸ್ ಕಡಿಮೆ ಹಾಕುತ್ತೀರಿ ಎಂದು ಹೇಳುತ್ತೀರಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ಕಚ್ಚಾ ಮಾಲು ಎಲ್ಲಿ ಬೆಳೆಯುತ್ತಾರೋ ಅಲ್ಲಿ ಸಹಾಯ ಮಾಡಬೇಕು. ಶಿವಮೊಗ್ಗದಲ್ಲಿ ಮಾಲು ಇದ್ದರೆ ಶಿವಮೊಗ್ಗದವರಿಗೆ ಕೊಡಿ. ಚಿಕ್ಕಮಗಳೂರಿನಲ್ಲಿ ಮಾಲು ಸಿಕ್ಕುವುದಾದರೆ ಚಿಕ್ಕಮಗಳೂರಿನವರಿಗೆ ಕೊಡಿ.

ಶ್ರೀ ಬಿ. ರಾಚಯ್ಯ.—ಅರಣ್ಯ ಉತ್ಪಾದನೆ ಆಗತಕ್ಕ ಕಚ್ಚಾವಸ್ತುಗಳು ಎಲ್ಲಿ ಉತ್ಪಾದನೆ ಆಗುತ್ತವೆಯೋ ಅಲ್ಲಿ ಜನ ಮುಂದೆ ಬಂದರೆ ಅವರಿಗೇ ಉತ್ತೇಜನ ಕೊಟ್ಟಿದ್ದೇವೆಯೇವಿನಾ ಹೊರಗಡೆಯವರಿಗೆ ಕೊಟ್ಟಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಈ ಒಂದು ಕೇಸಿನಲ್ಲಿ ಇಂಡಿಯಾ ದೇಶದಲ್ಲಿ ಒಂದೇ ಅತ್ಯಂತ ದೊಡ್ಡ ಸಂಸ್ಥೆ ಆದ ವೆಸ್ಟರ್ನ್ ಇಂಡಿಯಾ ಮ್ಯಾಚ್ ಕಂಪೆನಿಗೆ ನಾನು ಬರುವುದಕ್ಕೆ ಮುಂಚಿತವಾಗಿ ಬಹಳ ಹಿಂದೆ ಕನ್ಸೆಷನ್ ರೇಟಿನಲ್ಲಿ ಸಾಫ್ಟ್‌ವುಡ್ ಕೊಟ್ಟಿದ್ದರು. ಇಷ್ಟು ಮಾತ್ರ ಹೇಳುತ್ತೇನೆ. ನಾನು ಬಂದಮೇಲೆ ಹೊರಗಡೆಯಿಂದ ಬರತಕ್ಕ ಯಾವುದೇ ಕಂಪನಿಗಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟಿಲ್ಲ. ನಮ್ಮ ಸಂಸ್ಥಾನದಲ್ಲಿ ಯಾರು ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಾರೋ ಅವರಿಗೆ ಪ್ರಾಶಸ್ತ್ಯ ಕೊಡುತ್ತೇವೆ. ಹೊರಗಡೆಯವರಿಗೆ ಕೊಡುವುದಿಲ್ಲವೆಂದು ತೀರ್ಮಾನ ತೆಗೆದುಕೊಂಡು, ಅದರ ಪ್ರಕಾರ ನಡೆದುಕೊಂಡು ಬರುತ್ತಿದ್ದೇವೆ. ಸಂಸ್ಥಾನದಲ್ಲಿ ಸ್ಥಾಪಿತವಾಗಿರತಕ್ಕ ಪ್ಲೈವುಡ್ ಕಾರ್ಖಾನೆ ಆಗಲೀ ಅಥವಾ ಪೇಪರ್ ಮಿಲ್ಸ್ ಆಗಲೀ ಮ್ಯಾಚ್ ಫ್ಯಾಕ್ಟರಿ ಆಗಲೀ, ಒಬ್ಬರಿಗೊಬ್ಬರಿಗೆ ತಾರತಮ್ಯ ಮಾಡುತ್ತಿದ್ದೇವೆಂದು ಹೇಳಿದರು. ನಾನು ಅಧಿಕಾರಕ್ಕೆ ಬರುವ ಮುನ್ನ, 1958ನೇ ಇಸವಿಯ ಹಿಂದೆ ರೇಟು ಫಿಕ್ಸ್ ಮಾಡಿದ್ದರು. ಅದನ್ನು ಅಗ್ರಿಮೆಂಟ್ ಮುಗಿಯುವುದಕ್ಕೆ ಮುಂಚಿತವಾಗಿ ಇಂತಹ ವರ್ಷದೊಳಗೆ ಮಾತ್ರ ಈ ರೇಟನ್ನು ರಿವೈಸ್ ಮಾಡಬಹುದು ಎಂದು ಕಂಡೀಷನ್‌ನಲ್ಲಿ ಇದ್ದರೂ ಕೂಡ, ಅದನ್ನು ವಿರೋಧಿಸಿ ಎಮರ್ಜೆನ್ಸಿ ನೆಪದಲ್ಲಿ ಎರಡು ಸಾರಿ ರೇಟ್ಸ್ ರಿವೈಸ್ ಮಾಡಿರುವುದರಿಂದ ಪ್ಲೈವುಡ್ ಫ್ಯಾಕ್ಟರಿಯವರು ಇಂಟರ್ ನ್ಯಾಷನಲ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡುವುದಕ್ಕಾಗುವುದಿಲ್ಲ, ಎಂದು ಪ್ರೊಟೆಸ್ಟ್ ಮಾಡಿದ್ದಾರೆ. ಹಾಗೆ ಮ್ಯಾಚ್‌ವುಡ್ ಕಂಪೆನಿಯವರೂ ಹೇಳುತ್ತಾ ಇದ್ದಾರೆ. ನನಗೆ ದೂರದೃಷ್ಟಿಯಿಲ್ಲ; ರಾ ಮೆಟೀರಿಯಲ್ಸ್ ಬೆಲೆ ಹೆಚ್ಚಿಸುವುದರಿಂದ ಕೈಗಾರಿಕೆ ಅಭಿವೃದ್ಧಿ ಆಗುವುದಿಲ್ಲ, ಅವರು ಕೊಡತಕ್ಕ ಇನ್‌ಡೈರೆಕ್ಟ್ ಟ್ಯಾಕ್ಸ್ ಎಂದರೆ, ಸೇಲ್ಸ್ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ, ಕಮರ್ಷಿಯಲ್ ಟ್ಯಾಕ್ಸ್ ಮತ್ತು ಸಂಸ್ಥಾನಕ್ಕೆ ಒದಗತಕ್ಕ ಲೇಬರ್

ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಇವುಗಳನ್ನು ಮರೆತು ಮೊಟ್ಟೆ ಇಡತಕ್ಕ ಬಾತುಕೋಳಿಯನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದೇವೆ ಎಂದು ನನ್ನಮೇಲೆ ಟೀಕೆ ಮಾಡಿದ್ದಾರೆ. ರೇಟುಗಳನ್ನು ನೋಡಿದರೆ, 1960ನೇ ಇಸವಿಯಲ್ಲಿ ರೇಟು 43 ರೂಪಾಯಿ ಇತ್ತು, ಅದು ಇವೊತ್ತು 65 ರೂಪಾಯಿ ಆಗಿದೆ. ಎರಡು ಸಾರಿ ರಿವೈಸ್ ಮಾಡಿರತಕ್ಕ ರೇಟು ನೋಡಿದ ಪಕ್ಷದಲ್ಲಿ ಹಿಂದೆ ಕೊಡತಕ್ಕ ರೇಟಿಗಿಂತ 1½ ಯಷ್ಟು ಆಗಿದೆ. ನಾವು ಅದನ್ನು ಕಡಿದು, ಸಾಗಾಣಿಕೆಮಾಡಿ ಡಿಪೋಗಳಿಗೆ ತಂದು ಅದನ್ನು ಹರಾಜು ಮಾಡಬೇಕಾದರೆ, ಮರ ಒಣಗಿಹೋದರೆ ಕೈಗಾರಿಕೆಗಳಿಗೆ ಉಪಯೋಗಕ್ಕೆ ಬರುವುದಿಲ್ಲ. ಅವನ್ನು ಕಡಿದು ಸಾಗಾಣಿಕೆ ಮಾಡುವ ಖರ್ಚನ್ನು ಲೆಕ್ಕ ಹಾಕಿ ನೋಡಿದರೆ, ಸ್ಟಾಂಡಿಂಗ್ ಟಿಂಬರ್ ಕೊಡತಕ್ಕದ್ದು, ಲಾಭಾದಾಯಕವಾಗಿದೆ. ಎನ್ನತಕ್ಕದ್ದನ್ನು ಸರ್ಕಾರ ಮನ ವರಿಕೆ ಮಾಡಿಕೊಂಡು ಈ ರೀತಿಯಾದಂಥ ಒಂದು ಇಂಡಸ್ಟ್ರೀಗೆ ಎನ್‌ಕರೇಜ್‌ಮೆಂಟ್ ಕೊಟ್ಟ ಹಾಗೆ ಆಗಬೇಕು, ಮತ್ತು ಇಲಾಖೆಗೆ ಲಾಭ ಬರಬೇಕು ಎನ್ನುವ ಎರಡು ದೃಷ್ಟಿಗಳಿಂದ ಮಾಡಿದೆ. ಯಾವ ಸದಸ್ಯರು ಬೇಕಾದರೂ ಕೂಡ ಯಾವ ಟೈಂನಲ್ಲಿ ಏನೇನು ರೇಟು, ಯಾವ ಯಾವ ವರ್ಷ ಫಿಕ್ಸ್‌ಮಾಡಿದ್ದೇವೆ, ಮಾರ್ಕೆಟ್ ರೇಟು ಏನು ಇದೆ ಎಂದು ನೋಡಬಹುದು. ಅವರು ಬಂದು ನೋಡಿ ತಪ್ಪುಮಾಡಿದ್ದೇವೆ, ದುರುಪಯೋಗವಾಗಿದೆ ಎಂದು ಸಾಬೀತುಮಾಡಿದರೆ ನನಗೆ ಈ ಕೆಲಸ ಬೇಡ. ಇನ್ನೊಂದು ಮಾತು ಹೇಳಿದರು. ಕಂಟ್ರಾಕ್ಟ್ ಕೊಡತಕ್ಕವರಿಗೆ ಒಳ್ಳೆಯ ಮರಗಳನ್ನು ಸಾಗಾಣಿಕೆ ಮಾಡಲು ಅವಕಾಶಕೊಟ್ಟು ಡಿಪೋಗಳಿಗೆ ಮಾತ್ರ ಕೊನೆಯ ರೆಂಬೆಗಳನ್ನು ತರುತ್ತಾರೆ ಎಂದು. ಎಲ್ಲಿ ಮರ ಕೊಡುತ್ತಾರೋ ಅಲ್ಲಿ ರೇಂಜ್ ಆಫೀಸರು ಅಸಿಸ್ಟೆಂಟ್ ಸರ್ವೇಯರ್ ಸ್ಟಾಂಡಿಂಗ್ ಮರಗಳನ್ನು ಗುರುತುಮಾಡಿ ಕಡಿದಮೇಲೆ ನೋಡುತ್ತಾರೆ. ಎಲ್ಲೆಲ್ಲಿ ಕಳ್ಳ ಸಾಗಾಣಿಕೆ ಸರ್ಕಾರದ ಗಮನಕ್ಕೆ ಬಂದಿದೆಯೋ ಅಲ್ಲಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಚಿಕ್ಕಮಗಳೂರಿನಲ್ಲಿ ಮರ ಸಾಗಿಸಿ ಎಷ್ಟೋ ಜನ ಸಾಹುಕಾರರಾಗಿದ್ದಾರೆ.

ಶ್ರೀ ಬಿ. ರಾಚಯ್ಯ.—ಒಂದು ಪೈಲೆಟ್ ಜೀಪ್ 8 ಲಾರಿಗಳು ಮರ ಸಾಗಾಣಿಕೆ ಮಾಡುತ್ತಾ ಇದ್ದುವು. ಒಬ್ಬ ಡಿ.ಎಫ್.ಓ. ಹೋಗಿ ಮೂರು ರಾತ್ರಿ ಕಷ್ಟಪಟ್ಟು ಹಿಡಿದರು. ಡಿ.ಎಫ್.ಓ. ಅವರನ್ನು ಪ್ರಾಸಿಕ್ಯೂಟ್ ಮಾಡಬೇಕು ಪರ್ಮಿಷನ್ ಕೊಡಿ, ಅವರು ಹಲ್ಲು ಮುರಿದಿದ್ದಾರೆ ಎಂದು ಕೆಲವರು ಪ್ರಯತ್ನ ಮಾಡಿದರು. ಆದರೆ ಆತನು ಓಡುತ್ತಾ ಇದ್ದು ; ಬಿದ್ದುದರಿಂದ ಆತನ ಹಲ್ಲು ಮುರಿಯಿತು. ಪೈಲೆಟ್ ಜೀಪಿನವರು ರಿವಲ್ವಾರ್ ಇಟ್ಟುಕೊಂಡಿದ್ದರೂ, ಅದು ಅತೀ ವೇಗವಾಗಿ ಹೋಗುತ್ತಿದ್ದರೂ, ಕಳ್ಳ ಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಮನುಷ್ಯನಿಗೆ ಎಷ್ಟು ಸಾಧ್ಯವೋ ಅಷ್ಟನ್ನೂ ಪ್ರಯತ್ನ ಮಾಡಿದ್ದೇವೆ.

ಇನ್ನು ಮಾನ್ಯ ಸದಸ್ಯರೊಬ್ಬರು ಹೇಳಿದಹಾಗೆ, ನಮ್ಮ ಮನೆಯೊಳಗೆ, ಮೈಸೂರು ಸಿಟಿಯಲ್ಲಿ, ಬೆಂಗಳೂರು ಸಿಟಿಯಲ್ಲಿ ಇಷ್ಟು ಪೋಲೀಸ್‌ದಳ ಇದ್ದರೂ ಸುತ್ತುಮುತ್ತಲೂ ನಡೆಯುತ್ತಿದ್ದ ಕಳ್ಳತನವನ್ನು ನೋಡಿದರೆ, ನಮ್ಮ ಅರಣ್ಯ ಇಲಾಖೆಯ ವಿಚಾರ ತಾವೇ ಊಹಿಸಬಹುದು. ಯಾರು ಯಾರು ಸರಿಯಾಗಿ ವರ್ತಿಸುವು ದಿಲ್ಲವೋ, ಯಾರು ಯಾರು ಇದರಲ್ಲಿ ಒಳಗಾಗುತ್ತಾರೋ ಅಂಥವರನ್ನು ಶಿಕ್ಷೆಗೆ ಗುರಿಪಡಿಸುತ್ತೇವೆ. ಕೆಲವು ರೇಂಜ್ ಆಫೀಸರುಗಳನ್ನು, ಮತ್ತು ನೂರಾರು ಗಾರ್ಡ್‌ಗಳನ್ನು, ಹಾಗೂ ಡಿ.ಎಫ್.ಓ., ಎ.ಎಫ್.ಓ. ಇನ್ನಿತರ ರನ್ನು ಸಸ್ಪೆಂಡ್ ಮಾಡಿದ್ದೇವೆ. ಇದೆಲ್ಲಾ ವಿಜಿಲೆನ್ಸ್‌ನವರ ನೇತೃತ್ವದಲ್ಲಿಯೂ ವಿಚಾರಣೆ ನಡೆಯುತ್ತಿದೆ. ಮತ್ತು ಈ ಇಲಾಖೆಯಲ್ಲಿ ದಾವೆಮಾಡಿದ ವಿಚಾರಗಳಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಮಾಡಿದೆ ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಬಹುಶಃ ಮಾನ್ಯ ಸ್ನೇಹಿತರಾದ ಶ್ರೀ ಸಿದ್ದಯ್ಯ ಕಾಶೀಮಠ ಅವರು ಒಂದೆರಡು ಕಟ್ ಮೋಶನ್ಸ್ ಕಳಿಸಿ, ಒಂದು ಫಾರೆಸ್ಟ್ ಬಂಗಲೆಯನ್ನು ಫರ್ನಿಶ್ ಮಾಡಬೇಕೆಂದು ಪ್ರಸ್ತಾಪಮಾಡಿದ್ದಾರೆ. ಅದನ್ನು ಈಗಾಗಲೇ ತೆಗೆದುಕೊಂಡಿದ್ದೇವೆ.

ಸಾಂಡೂರು ಪ್ರದೇಶದ ಸಂಬಂಧವಾಗಿ ನಾಲ್ಕು ಕೇಸುಗಳು ಈಗಾಗಲೇ ನಡೆಯುತ್ತಿವೆ. ಯಾರಿಗೂ ಬಿಟ್ಟು ಕೊಟ್ಟಿಲ್ಲ. ಆದ್ದರಿಂದ ಎಲ್ಲೆಲ್ಲಿ ಸರ್ಕಾರದ ಗಮನಕ್ಕೆ ಕಳ್ಳಸಾಗಾಣಿಕೆಯಾಗುತ್ತದೆ ಎಂದು ಬಂದಿದೆಯೋ, ಅದನ್ನು ಹಿಡಿದು ಅವರಿಗೆ ಶಿಕ್ಷೆ ಮಾಡುತ್ತೇವೆ.ಜೊತೆಗೆ ಪೋಲೀಸ್ ಇಲಾಖೆಯವರೂಕೂಡ ಕೆಲವುಕಡೆ ಇದಕ್ಕೆ ಹೆಚ್ಚು ಸಹಾಯವನ್ನು ಮಾಡುತ್ತಿದ್ದಾರೆ. ಆದರೆ ಕೆಲವುಕಡೆ ಇವರ ಸಹಾಯ ಸಾಕಷ್ಟು ಸಿಗುತ್ತಾ ಇಲ್ಲ. ಅದೇ ರೀತಿ ಇದು ಕೋರ್ಟಿಗೆ ಹೋದಾಗ ನಮ್ಮಲ್ಲಿ ಅದಕ್ಕೆ ಬೇಕಾದ ನಮ್ಮದೇ ಆದ ಪ್ರೋಸಿಕ್ಯೂಟರ್ಸ್ ಇಲ್ಲದೆ ಸ್ವಲ್ಪ ತೊಂದರೆಯಾಗುತ್ತಿದೆ. ಅನೇಕರಿಗೆ ಇದರಿಂದ ಸ್ವಲ್ಪ ಭಯವಿದೆ. ಇದಕ್ಕೋಸ್ಕರ ಮುಂದಿನ ವರ್ಷ ಅರಣ್ಯ ಇಲಾಖೆಯದ್ದೇ ಆದ ಒಬ್ಬ ಪ್ರೋಸಿಕ್ಯೂಟರನ್ನು ನೇಮಕ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರದವರು ಇಟ್ಟುಕೊಂಡಿದ್ದೇವೆ. ಇನ್ನು ರಬ್ಬರ್ ಪ್ಲಾಂಟೇಶನ್‌ನ್ನು ಸಾಧಾರಣ 20 ಲಕ್ಷ ಎಕರೆಗಳಲ್ಲಿ ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಈ ಪ್ಲಾಂಟೇಶನ್‌ನ್ನು ಅರಣ್ಯ ಇಲಾಖೆಯ ಮುಖಾಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಹಾಗೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಬೋಟ್ ಬಿಲ್ಡಿಂಗ್ ಯಾರ್ಡನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದೆ. ಅದೇ ರೀತಿ ಜಪಾನೀಸ್ ಸಹಾಯದಿಂದ ಒಂದು ಫರ್ನಿಚರ್ ಯೂನಿಟ್ಟನ್ನು ತೆಗೆಯ ಬೇಕೆಂದು ಇಟ್ಟುಕೊಂಡಿದ್ದೇವೆ. ಮತ್ತು ಒಂದು ಲಿನೋಲಿಯಮ್ ಮುಂತಾದ ಪ್ಲಾಂಟನ್ನು ಮಾಡಬೇಕೆಂದು ಇದ್ದೇವೆ. ಅದಕ್ಕೆ ಒಂದು

(ಶ್ರೀ ಬಿ. ರಾಚಯ್ಯ)

ಡಿಸ್ಟಿಲರಿ ಕೂಡ ತೆಗೆಯಬೇಕೆಂದು ಇದೆ. ಇದನ್ನೆಲ್ಲಾ ಮುಂದಿನ ವರ್ಷ ಇಟ್ಟುಕೊಂಡಿದ್ದೇವೆ. ಪ್ರತಿವರ್ಷ ಮಳೆಯ ಅಭಾವದಿಂದ ದನಗಳಿಗೆ ಆಹಾರ ಸಿಗದಿರುವುದರಿಂದ. ಅದಕ್ಕೆ ಒಂದು ಫಾಡರ್ ಬ್ಯಾಂಕನ್ನು ಮಾಡ ಬೇಕೆಂದು ಈ ಇಲಾಖೆಯವರು ಇಟ್ಟುಕೊಂಡಿದ್ದಾರೆ. 1,250 ಟನ್ಸ್ ಹುಲ್ಲನ್ನು ಅರಣ್ಯ ಇಲಾಖೆಯವರು ಕಷ್ಟಕಾಲದಲ್ಲಿ ಎಲ್ಲಾ ಜಿಲ್ಲೆಗಳಿಗೆ ರವಾನೆ ಮಾಡಿದ್ದಾರೆ.

ಇನ್ನು ಮಾನ್ಯ ಶ್ರೀ ಮಾದಯ್ಯ ಗೌಡರು ಒಳ್ಳೆಯ ತಳಿಯ ಹುಲ್ಲನ್ನು ಬೆಳೆಸಬೇಕು ಎಂದು ಹೇಳಿದರು. ಅದನ್ನೂ ಸ್ವಲ್ಪ ಮಟ್ಟಿಗೆ ಪ್ರಾರಂಭಮಾಡಿದ್ದೇವೆ. ಇನ್ನೂ ಹೆಚ್ಚಾಗಿ ಮಾಡುತ್ತೇವೆ. ಇನ್ನು ಫಾರೆಸ್ಟ್ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪನೆ ಮಾಡಿ ಈ ಮಧ್ಯವರ್ತಿ ಜನಗಳು ಹೆಚ್ಚು ಲಾಭ ಪಡೆಯದಹಾಗೆ ಮಾಡಬೇಕೆಂದು ಮಾಡಿದ್ದೇವೆ. ಹಾಗೆ ಕ್ಯಾಶ್ಯು ಪ್ಲಾಂಟೇಶನ್ ಸುಮಾರು 25 ಸಾವಿರ ಎಕರೆಗಳಲ್ಲಿ ಮಾಡಿದ್ದೇವೆ. ಒಂದು ಕ್ಯಾಶ್ಯೂಶೆಲ್ ಪ್ರೊಸೆಸಿಂಗ್‌ನ್ನೂ ಈ ಇಲಾಖೆಯ ಮುಖಾಂತರ ತೆರೆಯಬೇಕೆಂದು ಇಟ್ಟುಕೊಂಡಿದ್ದೇವೆ. ಮತ್ತು ಈ ಮ್ಯಾಪ್ಸ್ ಮತ್ತು ಅಟ್ಲಾಸ್ ಏನಿದೆ ಅದನ್ನೂ ಕೂಡ ರಿವೈಸ್ ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಇದು ಪ್ರಥಮಥಃ ಈ ಇಲಾಖೆಯಲ್ಲಿ ಮಾಡುತ್ತಿರುವುದು. ಒಟ್ಟಿನಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಅರಣ್ಯವನ್ನು ಸಂರಕ್ಷಣೆಮಾಡತಕ್ಕಂತದ್ದನ್ನು ಯೋಚಿಸುತ್ತಿದೆ. ಹೆಚ್ಚು ಪ್ಲಾಂಟೇಶನನ್ನು ಬೆಳೆಸಿ, ದೇಶಕ್ಕೆ ಹೆಚ್ಚಿನ ಸಂಪಾದನೆಯನ್ನು ಮಾಡಬೇಕೆಂದು ಎಲ್ಲಾ ತರದ ಕಾರ್ಯ ಕ್ರಮಗಳನ್ನೂ ಹಾಕಿಕೊಂಡಿದೆ.

ಆದರೆ, ಈ ಇಲಾಖೆಯ ಅಧಿಕಾರಿಗಳಿಗೆ ಕೊಡುತ್ತಿರುವ ಸಂಬಳ ಬಹಳ ಕಡಿಮೆ. ಒಬ್ಬ ಗಾರ್ಡಿಗಲೀ, ಫಾರೆಸ್ಟ್ ರೇಂಜರಿಗಾಗಲೀ, ಅಥವಾ ರೇಂಜ್ ಆಫೀಸರಿಗಾಗಲೀ ಕೊಡುತ್ತಿರುವ ಸಂಬಳ ಬಹಳ ಕಡಿಮೆ. ರೇಂಜ್ ಆಫೀಸರಿಗೆ ಕೇವಲ 70 ರೂಪಾಯಿ ಎಂದರೆ ಅದು ತೀರಾ ಕಡಿಮೆ. ಅದಕ್ಕೋಸ್ಕರ ಇತರ ತಜ್ಞರ ಇಲಾಖೆಗಳಲ್ಲಿ ಏನು ಸಂಬಳ ಕೊಡುತ್ತಾರೋ, ಅದನ್ನು ಇಲ್ಲಿ ಇವರಿಗೂ ಕೊಡಬೇಕೆಂಬ ಒಂದು ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಅದರಿಂದ ತೃಪ್ತಿಕರವಾಗಿ ನೌಕರರು ಕೆಲಸಮಾಡಲು ಅನುಕೂಲವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಈಗ ಗಾರ್ಡ್ಸಿಗೆ ಏನು ಕೊಡಬೇಕೆಂದು ಇದ್ದೀರಿ?

ಶ್ರೀ ಬಿ. ರಾಚಯ್ಯ.—ಮತ್ತು ಯಾರ್ಯಾರು ಈ ಇಲಾಖೆಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ ಕಳ್ಳ ಸಾಗಾಣಿಕೆಗಳನ್ನು ತಡೆಗಟ್ಟಿ, ತಮ್ಮ ರಿಸ್ಕಿನಿಂದ ಸರ್ಕಾರದ ಸೊತ್ತನ್ನು ಉಳಿಸಲು ಪ್ರಯತ್ನ ಮಾಡುತ್ತಾರೋ, ಅಂಥವರಿಗೆ ಪೋಲೀಸ್ ಇಲಾಖೆಯಲ್ಲಿ ಏನು ಒಂದು ಮೆಡಲನ್ನು ಕೊಡುತ್ತಾರೋ, ಅದೇರೀತಿಯಲ್ಲಿ ಈ ಇಲಾಖೆಯಲ್ಲೂ ಕೊಡಬೇಕೆನ್ನುವುದನ್ನು ತೀರ್ಮಾನಮಾಡಿದ್ದೇವೆ. ಮತ್ತು ಎಲ್ಲೆಲ್ಲಿ ಸಿಬ್ಬಂದಿವರ್ಗ ಕಡಿಮೆ ಇದೆಯೋ ಅದನ್ನು ಜಾಸ್ತಿಮಾಡಬೇಕಾಗುತ್ತದೆ. ಈಗಾಗಲೇ ರಬ್ಬರ್ ಪ್ಲಾಂಟೇಶನಿಗಾಗಿ, ಸಿರ್ಸಿ, ಹೊನ್ನಾವರ, ಚಾಮರಾಜನಗರಗಳಲ್ಲಿ ನಾಲ್ಕು ಡಿವಿಜನುಗಳನ್ನು ಮಾಡಿದ್ದೇವೆ. ಇನ್ನೂ ಎರಡು ಸರ್ಕಲ್‌ಗಳನ್ನು ಮಾಡ ಬೇಕಾಗುತ್ತದೆ. ಇದನ್ನೆಲ್ಲಾ ಮಾಡಬೇಕೆಂದು ಮುಂದಿನ 66-67ನೇ ಸಾಲಿನಲ್ಲಿ ಯೋಜನೆಯನ್ನು ಇಟ್ಟು ಕೊಂಡಿದ್ದೇವೆ. ಮತ್ತು ಚಿತ್ರದುರ್ಗದಲ್ಲಿ ಯಾವುದೋ ಹರಿಜನ ಕೋ-ಆಪರೇಟಿವ್ ಸೊಸೈಟಿಗೆ ಬಹಳ ಕನ್‌ಸೆಶನ್ ಕೊಟ್ಟರು ಎಂದು ಹೇಳಿದರು. ಅದು ಯಾರಿಗೆ ಏನು ಎಂದು ನನಗೆ ಗೊತ್ತಿಲ್ಲ. ನಾನು ಬಂದಮೇಲೆ ನನಗೆ ಇಂಥ ಯಾವುದೂ ಆಗಿರುವುದು ಜ್ಞಾಪಕವಿಲ್ಲ. ಹಿಂದೆ ಇತ್ತೋ ಏನೋ ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರಿಗೆ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೀಟ್ ಕೊಟ್ಟಿದ್ದಾರೆ. ಎಲೆಕ್ಷನ್ನಿಗೆ ನಿಂತಿದ್ದಾರೆ. ಇವರು ಗೊತ್ತಿಲ್ಲ ಎಂದು ಹೇಳಿದರು.

ಶ್ರೀ ಕೆ. ಒ. ರೇವಣ್ಣಸಿದ್ದಪ್ಪ.—ಅದು ಹರಿಜನ ಆರ್ಥಿಕ ಅಭಿವೃದ್ಧಿ ಕೋ-ಆಪರೇಟಿವ್ ಸೊಸೈಟಿ.

ಶ್ರೀ ಬಿ. ರಾಚಯ್ಯ.—ಹರಿಜನ ಕೋ-ಆಪರೇಟಿವ್ ಸೊಸೈಟಿಗೆ ಯಾವುದೂ ಕೊಟ್ಟಿಲ್ಲ. ಕೊಟ್ಟಿರುವುದು ಒಬ್ಬ ಕಂಟ್ರಾಕ್ಟರರಿಗೆ. ಬರಗಾಲ ಬಂದುದರಿಂದ 56 ಸಾವಿರ ಎಕರೆ ಭೂಮಿಯನ್ನು ಫಾರೆಸ್ಟ್ ಕಂಟ್ರಾಕ್ಟರಿಗೆ ಕೊಟ್ಟಿದ್ದನ್ನು ರಿಲೀಸ್ ಮಾಡಿರುವುದರಿಂದ. ಆತನಿಗೆ ಬಹಳ ನಷ್ಟವಾಗಿದೆ ; ಹಿಂದೆ ಬಾಕಿ ಇಟ್ಟುಕೊಂಡಿದ್ದುದನ್ನು ಆರು ತಿಂಗಳೊಳಗೆ ವಸೂಲು ಮಾಡುವ ಬದಲು ಒಂದು ವರ್ಷ ಹೆಚ್ಚಿಗೆ ಕೊಡಿ ಎಂದು ಕೇಳಿದರು, ಹಾಗೆ ಕೊಟ್ಟು ಬಾಕಿ ಇದ್ದದನ್ನು ಒಂದು ಕಾಸೂ ಇಲ್ಲದಹಾಗೆ ವಸೂಲು ಮಾಡಿದ್ದೇವೆ. ಇದೇ ಮಾನ್ಯ ಸದಸ್ಯರು ಅದಕ್ಕಾಗಿ ನನ್ನ ಅಭಿನಂದಿಸಿದರು. ಇವತ್ತು ಕನ್‌ಸೆಷನ್ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅವರಿಂದ ಯಾರೂ ವಸೂಲು ಮಾಡುವುದಕ್ಕಾಗುವುದಿಲ್ಲ ಎಂದು ಶ್ರೀ ಬಿ. ಎಲ್. ಗೌಡರು, ರೇವಣ್ಣ ಸಿದ್ದಪ್ಪನವರು, ಮುಂತಾದವರು ಹೇಳುತ್ತಿದ್ದರು. ಆದರೆ, ಅದನ್ನೆಲ್ಲಾ ವಸೂಲು ಮಾಡಿದ್ದೇವೆ ಎಂದು ನಾನು ಇಲ್ಲಿ ಹೇಳುತ್ತೇನೆ.

10-00 A.M.

ಮೈಸೂರು ಸಂಸ್ಥಾನದಲ್ಲಿ ವನ್ಯ ಮೃಗಗಳ ಸಂರಕ್ಷಣೆಯ ಕಾರ್ಯ ಹೆಚ್ಚಿನ ರೀತಿಯಲ್ಲಿ ಆಗಬೇಕೆಂದು ಮಾನ್ಯ ಆರ್. ಎಂ. ದೇಶಾಯಿಅವರು ಹೇಳಿದ್ದಾರೆ. ಬಂಡೀಪುರವನ್ನು ನ್ಯಾಷನಲ್ ಪಾರ್ಕ್ ಆಗಿ ಮಾಡಲು

ಕೇಂದ್ರದ ವೈಲ್ಡ್ ಲೈಫ್ ಬೋರ್ಡಿನವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಆಗಬೇಕಾಗಿರುವ ಎಕ್ಸ್‌ಪ್ಯಾನ್‌ಷನ್ ಸ್ಕೀಮು ಈಗಾಗಲೇ ಕಾರ್ಯಗತವಾಗುತ್ತಿದೆ. ದಾಂಡೇಲಿ, ಜಾಗರ್ ವ್ಯಾಲಿ, ತುಂಗಭದ್ರ ಮತ್ತು ಶರಾವತಿಯಲ್ಲಿ ಹಾಗೂ ರಂಗನತಿಟ್ಟು ಈ ಜಾಗಗಳಲ್ಲಿ ಹಕ್ಕಿಗಳ ರಕ್ಷಣೆ ಮಾಡುವ ಕಾರ್ಯವನ್ನು ಇಟ್ಟುಕೊಂಡಿದ್ದೇವೆ. ಈ ರೀತಿಯಾಗಿ ಅಭಿವೃದ್ಧಿ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತಿದ್ದೇವೆ.

[MR. DEPUTY SPEAKER in the Chair]

ಮೀನುಗಾರಿಕೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ತಿಳಿಸಬೇಕು ಎಂದು ಇಚ್ಛೆ ಪಡುತ್ತೇನೆ. ಮೀನುಗಾರಿಕೆ ವಿಷಯದಲ್ಲಿ ಮಾತನಾಡಿದ ಎಲ್ಲ ಸದಸ್ಯರೂ ಬಹುಮಟ್ಟಿಗೆ ಕೆಲಸ ಚೆನ್ನಾಗಿ ನಡೆದಿದೆ, ಆದರೆ ಇನ್ನೂ ಹೆಚ್ಚಿಗೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ ಎಂದು ತಿಳಿಸಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವಿಚಾರವಾಗಿ ಹೆಚ್ಚು ಮಾತನಾಡಿದಂಥ ಸದಸ್ಯರು ಒಳನಾಡಿನ ಮೀನುಗಾರಿಕೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿಲ್ಲ, ಅದಕ್ಕೆ ಹೆಚ್ಚು ಗಮನ ಕೊಡಬೇಕು ನಮಗೂ ಮೀನು ಸಿಕ್ಕಿದ ಹಾಗೆ ಆಗುತ್ತದೆ ಎಂದು ಹೇಳಿದರು. ಮೈಸೂರು ಸಂಸ್ಥಾನದ ಪುಣ್ಯದಿಂದ 186 ಮೈಲಿ ಕರಾವಳಿ ಪ್ರದೇಶ ಪಡೆದಿದೆ, 10 ಸಾವಿರ ಎಕರೆಯಷ್ಟು ನೀರಿನಲ್ಲಿ ಮೀನನ್ನು ಹಿಡಿಯುವುದಕ್ಕೆ ಅವಕಾಶವಾಗಿದೆ. ಇಂಡಿಯಾ ದೇಶದ ಐದನೇ ಒಂದು ಭಾಗದಷ್ಟು ಕರಾವಳಿ ನಮಗೆ ಇದ್ದರೂಕೂಡ ಇಂಡಿಯಾ ದೇಶದ ಎಲ್ಲ ರಾಜ್ಯಗಳ ಉತ್ಪಾದನೆಯಲ್ಲಿ ಆರನೆ ಒಂದು ಭಾಗದಷ್ಟು ಉತ್ಪಾದನೆ ನಮ್ಮ ಕರಾವಳಿ ತೀರದಲ್ಲಿ ನಾವು ಮಾಡುತ್ತಿದ್ದೇವೆ. ಒಂದು ಲಕ್ಷ 61 ಸಾವಿರ ಟನ್ ಮೀನನ್ನು ಸಂಗ್ರಹ ಮಾಡಿ ಸುಮಾರು ಒಂದು ಕೋಟಿ 18 ಲಕ್ಷ ರೂಪಾಯಿನಷ್ಟು ವಿದೇಶಿ ವಿನಿಮಯವನ್ನು ಗಳಿಸಿದ್ದೇವೆ. ಇನ್ನೂ ಹೆಚ್ಚಾಗಿ ಮೀನನ್ನು ಹಿಡಿಯುವುದಕ್ಕೆ ಮತ್ತು ಅದನ್ನು ಒಳನಾಡಿಗೆ ಸಾಗಿಸುವುದಕ್ಕೆ, ಪರದೇಶಗಳಿಗೆ ರಫ್ತು ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇದುವರೆಗೆ ಒಂದು ಮತ್ತು ಎರಡನೆಯ ಯೋಜನೆಯಲ್ಲಿ ಏನು ಶೀತಲ ಗೃಹಗಳನ್ನು ಮತ್ತು ತರಪೇತಿ ಕೇಂದ್ರಗಳನ್ನು ತೆರೆದಿದ್ದೆವು, ಈ ಶೀತಲ ಗೃಹಗಳಲ್ಲಿ 25 ಟನ್ ಮಂಜುಗಡ್ಡೆಯನ್ನು ತಯಾರು ಮಾಡುವುದಕ್ಕೆ ಮಾತ್ರ ಮೂರನೆ ಯೋಜನೆಯ ಮೂರನೆ ವರ್ಷದವರೆಗಿನ ಕಾಲದಲ್ಲಿ ಸಾಧ್ಯವಾಗಿತ್ತು. ಆದರೆ ಈ ಒಂದು ವರ್ಷದಲ್ಲೇ ಸುಮಾರು 27 ಟನ್‌ನಷ್ಟು ಮಂಜುಗಡ್ಡೆಯನ್ನು ತಯಾರು ಮಾಡತಕ್ಕ ಶೀತಲ ಗೃಹಗಳ ಕಟ್ಟಡಗಳ ಕೆಲಸ ಪ್ರಾರಂಭವಾಗಿದೆ ಒಟ್ಟಿನಲ್ಲಿ 57 ಟನ್‌ನಷ್ಟು ಮಂಜುಗಡ್ಡೆಯನ್ನು ಒಂದು ದಿವಸಕ್ಕೆ ತಯಾರು ಮಾಡುವಂಥ ಗೃಹಗಳನ್ನು ಸರ್ಕಾರ ಮಂಜೂರು ಮಾಡಿ ಅದರ ಕೆಲಸಕಾರ್ಯಗಳು ನಡೆಯುತ್ತಿವೆ. ಇವುಗಳಲ್ಲದೆ, ಮೀನನ್ನು ಜೋಪಾನ ಮಾಡತಕ್ಕದ್ದು, ಅವುಗಳನ್ನು ಕೆಡದಂತೆ ಇಡಲು ಸ್ಟೋರೇಜ್ ಅನುಕೂಲತೆಗಳು ಇವುಗಳನ್ನು ಒಂದರಿಂದ ನಾಲ್ಕು ಪಟ್ಟು ಹೆಚ್ಚು ಮಾಡಿದ್ದೇವೆ. ಹಾಗೆಯೇ ತರಪೇತಿ ಕೇಂದ್ರದಲ್ಲಿಯೂ ಸುಮಾರು 612 ಜನರಿಗೆ ತರಪೇತಿಯನ್ನು ಕೊಟ್ಟಿದ್ದೇವೆ. ಅದಲ್ಲದೆ 225 ದೋಣಿಗಳನ್ನು ಈಗಾಗಲೇ ಹಂಚಿದ್ದೇವೆ. 1956ನೇ ಇಸವಿಯಲ್ಲಿ ನಮ್ಮಲ್ಲಿ ಒಂದೂ ಮೆಕ್ಯಾನೈಸ್ಡ್ ಬೋಟ್ಸ್ ಇರಲಿಲ್ಲ. ಈಗ 225 ದೋಣಿಗಳಾಗಿವೆ. 59 ದೋಣಿಗಳಿಗೆ ಬೇಕಾಗುವ ಇಂಜಿನ್‌ಗಳನ್ನು ಕೊಟ್ಟು ಅದನ್ನು ಕಟ್ಟುವ ಕೆಲಸವೂ ನಡೆಯುತ್ತಿದೆ. ಇದಕ್ಕಾಗಿ ಮಂಗಳೂರು ಮತ್ತು ಕಾರವಾರದಲ್ಲಿ ದೋಣಿಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಬೋಟ್ ಬಿಲ್ಡಿಂಗ್ ಯಾರ್ಡ್‌ಗಳನ್ನು ಕಟ್ಟಿದ್ದರು. ಅದರ ಜೊತೆಗೆ ಸಹಕಾರ ಸಂಸ್ಥೆಗಳ ಮುಖಾಂತರ ಮತ್ತು ಖಾಸಗಿ ಜನಗಳ ಮುಖಾಂತರ ದೋಣಿಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮುಂದಿನ ವರ್ಷ 100 ದೋಣಿಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಈ ವರ್ಷ ಹೊನ್ನಾವರ, ಗಂಗವಳ್ಳಿ ಮತ್ತು ಕೃಷ್ಣರಾಜಸಾಗರದಲ್ಲಿ ಮೂರು ತರಪೇತಿ ಕೇಂದ್ರಗಳನ್ನು ತೆರೆದಿದ್ದೇವೆ. ಮುಂದಿನ ವರ್ಷ ಹೆಸರುಘಟ್ಟ, ವಾಣಿವಿಲಾಸ ಸಾಗರ ಮತ್ತು ತುಂಗಭದ್ರದಲ್ಲಿ ಮೂರು ತರಪೇತಿ ಕೇಂದ್ರಗಳನ್ನು ತೆರೆಯತಕ್ಕ ಯೋಜನೆಗಳನ್ನು ಇಟ್ಟುಕೊಂಡಿದ್ದೇವೆ. ತುಂಗಭದ್ರದಲ್ಲಿ ಇವತ್ತು ನೆಟ್ ಮೇಕಿಂಗ್ ಪ್ಲಾಂಟನ್ನು ಮೊದಲನೆಯ ಬಾರಿಗೆ ಮೈಸೂರು ರಾಜ್ಯದಲ್ಲಿ ಸ್ಥಾಪನೆ ಮಾಡುವ ಯೋಜನೆಯನ್ನಿಟ್ಟುಕೊಂಡಿದ್ದೇವೆ. ಇದರ ಕೆಲಸ ಕಾರ್ಯಗಳು ಈಗಾಗಲೇ ನಡೆದಿವೆ.

ಮೀನನ್ನು ಸಾಗಾಣಿಕೆ ಮಾಡುವುದಕ್ಕೆ ಇನ್‌ಸುಲೇಟೆಡ್ ವ್ಯಾನ್ಸ್, ರಿಫ್ರಿಜಿರೇಟರ್ ವಾನ್ಸ್, ಇವುಗಳನ್ನು ಹಿಂದೆ ಇದ್ದದಕ್ಕಿಂತ ಎರಡರಷ್ಟು ಒಂದೇ ವರ್ಷದಲ್ಲಿ ಕೊಂಡುಕೊಂಡಿದ್ದೇವೆ.

ಒಳನಾಡಿನಲ್ಲಿ 18 ಜಲಾಶಯಗಳು, ಮೂರು ಸಾವಿರ ದೊಡ್ಡ ಕೆರೆಗಳು, 2,700 ಸಣ್ಣ ಕೆರೆಗಳು, ಇವುಗಳಲ್ಲಿ 10 ಲಕ್ಷ ಎಕರೆ ಪ್ರದೇಶದಲ್ಲಿ ಮೀನು ಸಾಕುವುದಕ್ಕೆ ಅವಕಾಶವಿದೆ. ಇದಕ್ಕಾಗಿ ತುಂಗಭದ್ರದಲ್ಲಿ 14 ಎಕರೆಯಲ್ಲಿ ಸೀಡ್ ಫಾರಂ ತಯಾರು ಮಾಡಿದ್ದೇವೆ. ಇದುವರೆಗೂ ನಾವು ಕಲ್ಕತ್ತದಿಂದ ತರಿಸುತ್ತಿದ್ದ ಫಿಷ್ ಫ್ರೈ ತರಿಸುವುದನ್ನು ನಿಲ್ಲಿಸಿ ಒಂದು ಎಕರೆಯಲ್ಲಿ ಇದರ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಹಿಂದೂಸ್ಥಾನದಲ್ಲಿ ಮೊಟ್ಟ ಮೊದಲನೆಯ ಇನ್‌ಲ್ಯಾಂಡ್ ಸೀಡ್ ಫಾರಂ ಎಂದರೆ ತುಂಗಭದ್ರದಲ್ಲಿ ಮಾಡಿರುವುದು. ಎರಡನೆಯದು ಏಷ್ಯದಲ್ಲೇ ದೊಡ್ಡ ಫಾರಂ ಎಂದರೆ ಭದ್ರದಲ್ಲಿ 50 ಎಕರೆಗಳ ದೊಡ್ಡ ಫಾರಂ. ನೀರಸಾಗರ,

(ಶ್ರೀ ಟಿ. ರಾಚಯ್ಯ)

ಶಾಂತಿಸಾಗರ, ಕೃಷ್ಣರಾಜಸಾಗರ ಈ ಸ್ಥಳಗಳಲ್ಲಿ ಈ ವರ್ಷ ಸೀಡ್ ಫಾರಂ ವಿಸ್ತರಿಸುವ ಕಾರ್ಯಕ್ರಮವಿದೆ. ಇದಲ್ಲದೆ 18 ಜಲಾಶಯಗಳಲ್ಲಿಯೂ ಕೂಡ ಸೀಡ್ ಫಾರಂ ತೆಗೆದು ಅಲ್ಲಿ, ಫ್ರೈ, ಫಿಂಗರ್‌ಲಿಂಗ್ಸ್ ಇವುಗಳ ಉತ್ಪಾದನೆಯನ್ನು ಮಾಡಿ ಅವುಗಳನ್ನು ಎಲ್ಲ ಭಾಗಗಳಲ್ಲಿರುವ ಕೆರೆಗಳಿಗೂ ಒದಗಿಸುತ್ತಿದ್ದೇವೆ. ಇದರ ಜೊತೆಗೆ ಒಳನಾಡಿನಲ್ಲಿ 10 ಇನ್‌ಟೆನ್‌ಸಿವ್ ಬ್ಲಾಕ್ ಎಂದು ಫಿಷರಿ ಡೆವಲಪ್‌ಮೆಂಟ್ ತೆಗೆದುಕೊಂಡಿದ್ದೇವೆ. ಅಪ್ಲೈಡ್ ನ್ಯೂಟ್ರಿಷನ್ 5, ಎಕ್ಸ್‌ಟೆನ್‌ಷನ್ ಸ್ಕೀಂ 5 ತೆಗೆದು ಹೆಚ್ಚಿನ ಸಂಖ್ಯೆಯಲ್ಲಿ ಮೀನು ಸಾಗಾಣಿಕೆಯನ್ನು ಮಾಡುತ್ತಿದ್ದೇವೆ. ಇದರಲ್ಲಿ ಎರಡು ಮೂರು ಸಾವಿರ ರೂಪಾಯಿಗಳವರೆಗೂ ಪಂಚಾಯಿತಿಯವರು ಸಂಪಾದನೆ ಮಾಡಿದ್ದಾರೆ. ಮೀನನ್ನು ಹೆಚ್ಚಿನ ರೀತಿಯಲ್ಲಿ ಉತ್ಪಾದನೆ ಮಾಡುವುದಕ್ಕೆ ಮತ್ತು, ಆಹಾರದ ಕೊರತೆಯನ್ನು ನೀಗುವುದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮೀನಿನ ಉದ್ಯಮ ವನ್ನು ಅವಲಂಬಿಸಿರತಕ್ಕ ಜನ ಅತ್ಯಂತ ಬಡತನದಿಂದ ಕೂಡಿರತಕ್ಕ ಜನ. ಇವರು ಅವಿದ್ಯಾವಂತರಾಗಿದ್ದಾರೆ. ಅವರ ಪುನರ್ವಸತಿಗಾಗಿ ಮೂರನೆಯ ಯೋಜನೆಯಲ್ಲಿ 500 ಮನೆಗಳನ್ನು ಕಟ್ಟಿಸಿಕೊಡಲಾಗಿದೆ. 46 ಶಾಲೆ ಗಳನ್ನು ತೆರೆಯಲಾಗಿದೆ. ಇವುಗಳಲ್ಲಿ 13 ಹೈಸ್ಕೂಲುಗಳಾಗಿವೆ. 10 ಸಾವಿರ ವಿದ್ಯಾರ್ಥಿಗಳು ಈ ಶಾಲೆ ಗಳಲ್ಲಿ ಓದುತ್ತಿದ್ದಾರೆ. ಅವರೆಲ್ಲರೂ ಕೂಡ ಬುದ್ಧಿವಂತರು. ಈ ಜನಗಳಿಗಾಗಿ 105 ಸಹಕಾರ ಸಂಘಗಳನ್ನು ಮಾಡಲಾಗಿದೆ, ಬೆಂಗಳೂರಿನಲ್ಲಿ ಒಂದು ಇನ್‌ಲ್ಯಾಂಡ್ ಫೆಡರೇಷನ್ ಇದೆ. ಮತ್ತೊಂದು ಸೌತ್ ಕೆನರಾ ಫಿಷ್ ಫೆಡರೇಷನ್, ನಾರ್ತ್ ಕೆನರಾದಲ್ಲಿ ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಕೂಡ ಅವರಿಗೆ ಸಾಲಗಳನ್ನು ಕೊಡತಕ್ಕದ್ದು ಮತ್ತು ಅವರಿಗೆ ಫಿಷರಿ ರಿಕ್ವಿಸಿಟ್ಸ್ ಇವುಗಳನ್ನು ಕೊಡತಕ್ಕದ್ದು ಅಲ್ಲದೆ ಸಹಕಾರ ಸಂಸ್ಥೆಗಳ ಮುಖಾಂತರ ಅವರಿಗೆ ಬೇಕಾದ ಸಹಾಯವನ್ನು ಕೊಡುತ್ತಿದ್ದೇವೆ. ಒಂದು ಸಹಕಾರ ಸಂಸ್ಥೆಯವರೂಕೂಡ ಡಿಫಾಲ್ಟ್ ಆಗಿಲ್ಲ. ಐದು ವರ್ಷಗಳಲ್ಲಿ ಹಿಂದಕ್ಕೆ ಕೊಡಬೇಕಾದ ಹಣವನ್ನು ಮೂರು ವರ್ಷಗಳಲ್ಲಿಯೇ ವಾಪಸ್ ಕೊಟ್ಟು ಅವರ ಪ್ರಾಮಾಣಿಕತೆಯನ್ನು ಎತ್ತಿ ತೋರಿಸಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಒಳನಾಡಿನಲ್ಲಿ ಅನೇಕ ಕೆರೆಗಳು ಬತ್ತಿ ಹೋಗಿರುವುದರಿಂದ ಆ ಕೆರೆಗಳಲ್ಲಿ ಮೀನಿನ ಮರಿಗಳನ್ನು ತಂದು ಹಾಕುವುದು ಸಾಧ್ಯವಾಗಲಿಲ್ಲ. ಮುಂದಿನ ವರ್ಷದಿಂದ ಸಮೃದ್ಧಿಯಾಗಿ ಮಳೆಯಾಗಿ ಕೆರೆಕಟ್ಟೆಗಳು ತುಂಬಿದ ಪಕ್ಷದಲ್ಲಿ ಆ ಕೆರೆಗಳಲ್ಲಿ ಮೀನಿನ ಮರಿಗಳನ್ನು ಹಾಕಬಹುದು. ಅದರಿಂದ ನಮ್ಮ ಸಂಸ್ಥಾನದ ಉತ್ಪತ್ತಿಯನ್ನೂ ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಪ್ರೋಟೀನ್ ಫಿಷ್ ಏನಿದೆ ಅದನ್ನು ಹೆಚ್ಚಿನ ರೀತಿಯಲ್ಲಿ ತಯಾರು ಮಾಡುವುದಕ್ಕೂ ಅವಕಾಶವಾಗುತ್ತದೆ. ಆದುದರಿಂದ ಈ ಬಾಬಿಗೆ ಕೊಟ್ಟಿರತಕ್ಕ ಹಣ ಸಾಲುವುದಿಲ್ಲ, ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿಕೊಡಬೇಕು, ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಮೂರನೆಯ ಯೋಜನೆಯಲ್ಲಿ 130 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡ 180 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುವುದಕ್ಕೆ ಅವಕಾಶವನ್ನು ಕೊಟ್ಟರು. ಹಾಗೆಯೇ ಈಗ 46 ಲಕ್ಷ ಇರುವುದನ್ನು ಕೂಡ 146 ಲಕ್ಷ ಖರ್ಚು ಮಾಡುವುದಕ್ಕೆ ಅವಕಾಶ ಕೊಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಆ ದೃಷ್ಟಿಯಿಂದ ಮೀನಿನ ಅಭಿವೃದ್ಧಿ ಇನ್ನೂ ಹೆಚ್ಚಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಭಾವಿಸಿದ್ದೇನೆ. ನಾಲ್ಕನೆಯ ಯೋಜನೆಯಲ್ಲಿ ಆರು ಮೆರೀನ್ ಫಿಷರಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳ ಬೇಕೆಂದು ಇಟ್ಟುಕೊಂಡಿದ್ದೇವೆ. ಹಾಗೆಯೇ ಇನ್‌ಲ್ಯಾಂಡ್ ಫಿಷರಿ ಪ್ರಾಜೆಕ್ಟ್‌ನಲ್ಲಿ 10 ಬ್ಲಾಕುಗಳನ್ನು ಹೆಚ್ಚು ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಮುಂದಿನ ವರ್ಷ ಒಂದು ಫಿಷರಿ ಕಾರ್ಪೊರೇಷನ್ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

ಹೈಸ್ಕೂಲುಗಳಲ್ಲಿ ಫಿಷರಿ ಟೆಕ್‌ನಲಾಜಿಯನ್ನು ಪ್ರಾರಂಭ ಮಾಡತಕ್ಕದೆಂದು ಸರ್ಕಾರದವರು ಒಪ್ಪಿ ಕೊಂಡಿದ್ದಾರೆ. ಅದರ ಬಗ್ಗೆ ಒಂದು ಸ್ಟ್ಯಾಟಿಸ್ಟಿಕಲ್ ವಿಂಗನ್ನು ಸ್ಥಾಪನೆ ಮಾಡ ಬೇಕೆಂದು ಮಾಡಿಕೊಂಡಿದ್ದಾರೆ.

ಒಟ್ಟಿನಲ್ಲಿ ಇದುವರೆಗೆ ಏನೇನು ಕೆಲಸಕಾರ್ಯಗಳು ಉಳಿದಿವೆ ಅವನ್ನು ಮಾಡಿ ಈ ಐದು ಯೋಜನೆಗಳನ್ನು ಈ ವರ್ಷ ಕಾರ್ಯಗತ ಮಾಡತಕ್ಕ ಒಂದು ಯೋಚನೆಯನ್ನು ಸಂಬಂಧಪಟ್ಟ ಇಲಾಖೆಯವರು ಇಟ್ಟುಕೊಂಡಿ ದ್ದಾರೆ. ಅದರಿಂದಲೇ ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ಫಿಷರಿ ಡಿಪಾರ್ಟ್‌ಮೆಂಟಿ ಗೋಸ್ಕರ ಯಾವರೀತಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ ಎಂಬುದಾಗಿ ನಾನು ಕೊಟ್ಟ ಅಂಕಿ ಅಂಶಗಳಿಂದ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಾಗಿದೆ. ಆದ್ದರಿಂದ ಈಗ ಸಭೆಯಮುಂದೆ ಇರತಕ್ಕ ಬೇಡಿಕೆಗಳಿಗೆ ಮಾನ್ಯ ಸದಸ್ಯರೆಲ್ಲರೂ ಅವಿರೋಧವಾಗಿ ಒಪ್ಪಿ ಮಂಜೂರಾತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಈಗ ವ್ಯವಸಾಯ ಇಲಾಖೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಷಯಗಳನ್ನು ಹೇಳಿದರು. ಇದರಲ್ಲಿ ಸರ್ಕಾರಕ್ಕೂ ಮತ್ತು ರೈತರಿಗೂ ನಿಕಟಸಂಪರ್ಕವನ್ನು ಏರ್ಪಡಿಸ ಬೇಕಾಗಿದೆ. ಮೈಸೂರು ಫಾರ್ಮರ್ಸ್ ಆರ್ಗನೈಜೇಷನ್ ಮತ್ತು ಮೈಸೂರು ಫಾರ್ಮರ್ಸ್ ಫೋರಂ ವಿಷಯ

ವಾಗಿ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಅವು ಜೀವಂತವಾಗಿ ಕೆಲಸಮಾಡುತ್ತಿವೆಯೆ, ಅಲ್ಲಿ ಏನೇನು ಕೆಲಸಕಾರ್ಯಗಳಾಗಿವೆ, ರೈತರಿಗೆ ಯಾವ್ಯಾವ ರೀತಿಯಲ್ಲಿ ಸರ್ಕಾರದವರು ಸಹಾಯ, ಸಹಕಾರಗಳನ್ನು ಕೊಟ್ಟಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಎರಡು ಸಂಸ್ಥೆಗಳು ಯೋಗ್ಯ ರೀತಿಯಲ್ಲಿ ಕೆಲಸಮಾಡುತ್ತಿವೆ. ಆದರೆ ಮೊದಲಿನಲ್ಲಿ ಸಾಕಷ್ಟು ಸಹಾಯ ಸರ್ಕಾರದವರಿಂದ ಇರಲಿಲ್ಲ. ಈಗ ಸರ್ಕಾರದವರು ಸಹಾಯ ಕೊಡಬೇಕೆಂದು ಮನವಿಮಾಡಿದ್ದಾರೆ. ಮತ್ತು ಕೆಲವು ಪಬ್ಲಿಕೇಷನ್ಸ್ ಸಹ ಮಾಡಿದ್ದಾರೆ. ಮಾಹೆಯಾನ ಪಬ್ಲಿಕೇಷನ್ಸ್ ರೈತರಿಗೆ ಬಹಳ ಉಪಯುಕ್ತವಾದುವು. ಆದ್ದರಿಂದ ಹೆಚ್ಚಿನ ರೀತಿಯಲ್ಲಿ ಸರ್ಕಾರ ಸಹಾಯಮಾಡುವುದು ಅವಶ್ಯಕವಿದೆ. ಇದನ್ನು ಖಾಯಂ ಆಗಿ ನಡೆಸುವುದಕ್ಕೆ ಒಂದು ಸ್ವಂತ ಕಟ್ಟಡ ಹಾಗೂ ಒಂದು ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಇಡಬೇಕೆಂದು ಪ್ರಯತ್ನಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ.

ಶ್ರೀ ಸಂಜೀವನಾಥ ಐಕಳ.—ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಕೊಡುತ್ತೇವೆ ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದಕ್ಕೆ ಬೇಕಾದ ಸಾಲವನ್ನು ಯಾವರೀತಿಯಲ್ಲಿ ಕೊಟ್ಟಿದ್ದಾರೆ ? ಅದರಲ್ಲಿ ಮುನಿಸಿಪಾಲಿಟಿಯೋ, ಕಾರ್ಪೊರೇಷನ್ನೋ ಸರ್ಕಾರವೂ ಅಲ್ಲ, ಖಾಸಗಿ ಜನರೂ ಅಲ್ಲ. ಕೋಲ್ಡ್ ಸ್ಟೋರೇಜ್ ಕೋಲ್ಡಾಗಿ ಪೇಪರ್‌ನಲ್ಲಿ ಬಿದ್ದಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಮೊನ್ನೆ ಅದಕ್ಕೂ ಸಹಾಯಮಾಡಬೇಕೆಂದು ತೀರ್ಮಾನವಾಗಿದೆ ಅವರ ಕೈಲಿ ಕೊಡುತ್ತೇವೆ. ಅದರಲ್ಲಿ ಏನೂ ಅನುಮಾನ ಬೇಡ.

ಶ್ರೀ ಸಿದ್ದಯ್ಯ ಕಾಶೀಮಠ್.—ಹಿಂದೆ ಇಲ್ಲಿ ಹೆಸರುವಾಸಿಯಾದಂಥ ಗಾರ್ಡನ್ನುಗಳು ಅಂದರೆ ವಿಧಾನ ಸೌಧ ಗಾರ್ಡನ್ ಮತ್ತು ಕಬ್ಬನ್‌ಪಾರ್ಕ್ ಗಾರ್ಡನ್. ಇವು ಸುವ್ಯವಸ್ಥಿತವಾದ ರೀತಿಯಲ್ಲಿರುವುದರಿಂದ ಅಲ್ಲಿ ಸರ್ಕಾರದವರು ಸರ್ಕಾರೀ ತೋಟವನ್ನಾಗಿ ಬೆಳೆಸುತ್ತಿದ್ದಾರೆ. ಹಾಗೆಯೇ ನಮ್ಮ ರಾಜ್ಯದ ಎಲ್ಲಾ ತೋಟಗಳನ್ನೂ ಸರಿಯಾದ ರೀತಿಯಲ್ಲಿಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಿರತಕ್ಕ ತೋಟಗಳು ಒಳ್ಳೆಯ ಸ್ಥಿತಿಯಲ್ಲಿವೆ. ಮಾನ್ಯ ಸದಸ್ಯರು ಹೇಳಿದಹಾಗೆ ಎಲ್ಲಾ ತೋಟಗಳನ್ನೂ ಚೆನ್ನಾಗಿಡುವುದು ಸರ್ಕಾರದವರ ಕರ್ತವ್ಯ, ಮತ್ತು ಅವಶ್ಯಕ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಧಾರವಾಡ, ಬಿಜಾಪುರ, ಬೆಳಗಾಂನಲ್ಲಿ ಚಾಪೆ, ಬುಟ್ಟಿ ಮರ—ಇವುಗಳನ್ನು ಮಾಡತಕ್ಕ ಮೇದಿರುಗಳಿಗೆ ಅವರ ಸಮಾಜದ ಅಭಿವೃದ್ಧಿಗಾಗಿ ದಬ್ಬೆ, ಬೊಂಬುಗಳನ್ನು ಕೊಡಬೇಕು ಎಂಬುದಾಗಿ ಹೋದಸಾರಿಯೇ ವಿನಂತಿಮಾಡಿಕೊಂಡಿದ್ದೆವು. ಆ ವಿಚಾರವಾಗಿ ಸಾಕಷ್ಟು ಹೇಳಿದ್ದೇವೆ. ಒಂದು ಜಂಗಲ್ಲನ್ನೇ ಅವರಿಗಾಗಿ ರಿಜರ್ವ್‌ಮಾಡಿ ಇಡಬೇಕೆಂದೂ ಮತ್ತು ಸ್ವಲ್ಪ ಭಾಗವನ್ನು ಪೇಪರ್ ಮಿಲ್ ನವರಿಗೂ ಕೊಡಬೇಕೆಂದೂ ಹೇಳಿದ್ದೆವು. ಅದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಈ ಕೈಗಾರಿಕೆಯನ್ನು ಅವಲಂಬಿಸಿರತಕ್ಕ ಜನ ಸಣ್ಣ ಪುಟ್ಟ ಪಂಗಡಗಳವರು. 3 ತಿಂಗಳುಗಳವರೆಗೆ ಬಿದಿರನ್ನು ಕಡಿಯಬಾರದೆಂದು ನಿಯಮ ಮಾಡಲಾಗಿದೆ. ಮೊಳಕೆ ಬಂದಾಗ ಅದನ್ನು ತೆಗೆದುಕೊಂಡುಹೋಗಿ ಊಟ ಮಾಡುವುದಕ್ಕೆ ಉಪಯೋಗಿಸುತ್ತಾರೆ. ಮೊಳಕೆಗಳು ಹೋದಮೇಲೆ ಬಿದಿರು ಬರುವುದಿಲ್ಲ. ಅದಕ್ಕೆ ನಿರ್ಭಂಧವಿದೆ. ಮಿಕ್ಕಿದ್ದನ್ನು ಎಷ್ಟುಬೇಕೋ ಅಷ್ಟು ಕೊಡುತ್ತಾರೆ. ತೊಂದರೆ ಯಾದಾಗ ಎಷ್ಟುಬೇಕೋ ಅಷ್ಟನ್ನು ಬೇರೆ ಭಾಗದಿಂದ ತರಿಸಿಕೊಡಬೇಕೆಂದು ಅಧಿಕಾರಿಗಳಿಗೆ ಸೂಚನೆಕೊಟ್ಟಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯಾ).—ಸಾಗುವಳಿಗೆ 1 ಲಕ್ಷ ಚಿಲ್ಲರೆ ಎಕರೆಯಷ್ಟು ಜಮೀನನ್ನು ಅರಣ್ಯ ಪ್ರದೇಶದಲ್ಲಿ ಮಿಸಲಾಗಿಡಬೇಕೆಂದು ಹಿಂದೆಯೇ ಹೇಳಿತ್ತು. ಸೌತ್ ಕೆನರಾದಲ್ಲಿ ಇದಕ್ಕೋಸ್ಕರ ಎಷ್ಟು ಎಕರೆ ಜಮೀನನ್ನು ಬಿಟ್ಟಿದ್ದಾರೆ. ಅದರ ಪೈಕಿ ರೆವಿನ್ಯೂ ಎಷ್ಟು ಎಕರೆ ಜಮೀನನ್ನು ಸೌತ್ ಕೆನರಾಕ್ಕೆ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಸುಮಾರು 50 ಸಾವಿರ ಎಕರೆಗಳವರೆಗೆ ಅಲ್ಲಿನ ರೆವಿನ್ಯೂ ಜಮೀನು ಅರಣ್ಯ ಇಲಾಖೆಗೆ ಸಂಬಂಧಪಟ್ಟಿದೆ. ಸುಮಾರು 7 ಸಾವಿರ ಚಿಲ್ಲರೆ ಜಮೀನು ಸಾಗುವಳಿಗೆ ಬಿಟ್ಟಿದೆ.

Sri R. S. HEGDE (Honnawar).—Have the Government started any industry in forests and are they running on profitable lines ?

ಶ್ರೀ ಬಿ. ರಾಚಯ್ಯ.—ನಿನ್ನೆ ದಿವಸ ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ ಈ ವಿಚಾರವಾಗಿ ಕೇಳಿದ್ದರು. ಈ ಇಲಾಖೆಯ ಮುಖಾಂತರ ಅನೇಕ ಸಾ ಮಿಲ್ಲುಗಳು ಲಾಭವನ್ನು ಪಡೆದಿವೆ. ಜೈಹಿಂದ್ ಸಾ ಮಿಲ್ ದಾಂಡೇಲಿಯಲ್ಲಿ ಸುಮಾರು ಶೇ. 5.29 ರಷ್ಟು ಲಾಭವನ್ನು ಸಂಪಾದನೆ ಮಾಡಿದೆ. ಶಿವಮೊಗ್ಗದ ಗೌರ್ನ್‌ಮೆಂಟ್ ಸಾ ಮಿಲ್ ಶೇ. 5.1ರಷ್ಟು ಲಾಭ ಪಡೆದಿದೆ, ಮುಡಕಲ್ ಗೌರ್ನ್‌ಮೆಂಟ್ ಸಾ ಮಿಲ್ಸ್ ಶೇ. 5.4ರಷ್ಟು ಲಾಭ ಪಡೆದಿದೆ. ಭದ್ರಾವತಿಯ ಗೌರ್ನ್‌ಮೆಂಟ್ ವುಡ್ ಪ್ರಿಜರ್‌ವೇಷ- ಮಿಲ್ಸ್ ಶೇ. 15.50 ರಷ್ಟು ಲಾಭ ಸಂಪಾದಿಸಿದೆ. ಆದರೆ ತುಮಕೂರಿನ ಸೆಂಟ್ರಲ್ ವುಡ್ ವರ್ಕಿಂಗ್ ಫ್ಯಾಕ್ಟರಿ ಇರುವಕಡೆ ಸುತ್ತ ಮುತ್ತಲೂ ಅರಣ್ಯವಿಲ್ಲ. ಅಲ್ಲಿ ಪ್ಲಾಂಟನ್ನು ಹಾಕುವುದಕ್ಕೆ, ಸಾಗಾಣಿಕೆ ಮಾಡುವುದಕ್ಕೆ ಟ್ರಾನ್ಸ್‌ಪೋರ್ಟೇಷನ್ ಜಾಸ್ತಿಯಾಗುತ್ತಿರುವುದರಿಂದ ಸುಮಾರು ಶೇ. 1.3ರಷ್ಟು ನಷ್ಟದಲ್ಲಿ ಅದು ನಡೆಯುತ್ತಿದೆ.

ಶ್ರೀ ಎಸ್. ಎ. ಕರಿಲಿಂಗಣ್ಣನವರ್ (ಗೋಕಾಕ್-1).—ಸರ್ಕಾರದವರು ಈಗ ಒಂದು ಸಾವಿರ ಪ್ಲಾಂಟ್‌ಗಳನ್ನು ಹಾಕಬೇಕಾಗಿದೆ ಎಂದು ಹೇಳಿರುವುದರಿಂದ ಪ್ರತಿಯೊಂದು ಪ್ಲಾಂಟಿಗೂ ಸುಮಾರು 22 ರೂಪಾಯಿಗಳ ಖರ್ಚು ರೈತನಿಗೆ ಬೀಳುತ್ತದೆ. ಅದು ಅವನಮೇಲೆ ಬೀಳದಹಾಗೆ ಸರ್ಕಾರದವರೇ ನೇರವಾಗಿ ಆ ಕಾರ್ಯವನ್ನು ಮಾಡುವುದಕ್ಕೆ ಏನು ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಆ ವಿಚಾರ ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪವರ್ ಟಿಲ್ಲರ್ಸ್‌ಮೇಲೆ ಮಾರಾಟ ತೆರಿಗೆ ವಿಧಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಟೌನುಗಳಲ್ಲಿನ ಮಲಮೂತ್ರಾದಿಗಳನ್ನು ಹಾಗೂ ಕೆಲವು ಕಚ್ಚಾ ವಸ್ತುಗಳನ್ನು ಸೇರಿಸಿ ಗೊಬ್ಬರ ತಯಾರು ಮಾಡತಕ್ಕ ಬಗ್ಗೆ ಏನೂ ತಿಳಿಸಲಿಲ್ಲ. ಇವರು ಕೇಂದ್ರದ ಸಹಾಯ ಧನದಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರುಮಾಡಲು ಏನೂ ಪ್ರಯತ್ನ ಮಾಡುತ್ತಿಲ್ಲ. ಅದರ ಬಗ್ಗೆ ಏನೂ ಹೇಳಲಿಲ್ಲ. ಮತ್ತೆ ಬಾವಿಗಾಗಿ ಅರ್ಜಿಗಳನ್ನು ಕೊಟ್ಟರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಸೊಸೈಟಿಯವರು ಅವನ್ನು ಸರಿಯಾಗಿ ರಿಸೀವ್‌ಮಾಡಿ ಪರಿಶೀಲಿಸುತ್ತಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಹಣವನ್ನು ಕೂಡಿಸಿಕೊಟ್ಟು ಕಡೆಗಳಲ್ಲಿ ಕೆಲವು ಬಾವಿಗಳನ್ನು ತೆರೆಯಲು ಸರ್ಕಾರದವರು ತೀರ್ಮಾನ ಮಾಡುತ್ತಾರೆ. ಬಾವಿಗಳಿಗಾಗಿ ಬರತಕ್ಕ ಅರ್ಜಿಗಳನ್ನು ಕಡ್ಡಾಯವಾಗಿ ರಿಜಿಸ್ಟರ್ ಮಾಡಬೇಕು. ಪ್ರಯಾರಿಟಿ ಮೇಲೆ ಅರ್ಜಿಗಳನ್ನು ತೆಗೆದುಕೊಂಡು ತೀರ್ಮಾನ ಮಾಡಬೇಕೆಂದು ಅವರಿಗೆ ಹೇಳಿದೆ. ಇನ್ನು ಅರಣ್ಯ ಶಾಖೆಯ ಸಚಿವರು ಇಲ್ಲಿ ಯಾವ್ಯಾವ ಕೈಗಾರಿಕೆಗಳು ಸ್ಥಾಪನೆಯಾಗುತ್ತವೆ, ಯಾವ್ಯಾವ ಕೈಗಾರಿಕೆಗಳಿಂದ ಎಷ್ಟರ ಮಟ್ಟಿಗೆ ಲಾಭಬಂದಿದೆಯೆಂಬುದನ್ನು ತಿಳಿಸಿದ್ದಾರೆ. ಯಾವ್ಯಾವ ಜಿಲ್ಲೆಯಲ್ಲಿ ಏನೇನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೋ ಅಲ್ಲಿಯೇ ಸ್ಥಾಪನೆ ಮಾಡುತ್ತೇವೆಯೋ ಹೊರತು ಬೇರೆ ಜಿಲ್ಲೆಯಲ್ಲಿ ಮಾಡುವುದಿಲ್ಲ. ಯಾವ್ಯಾವ ಜಿಲ್ಲೆಯಲ್ಲಿ ಕಾಡನ್ನು ಬೆಳೆಸುತ್ತಿದ್ದಾರೋ ಅಲ್ಲಿ ಹೆಚ್ಚಿನ ಸೌಕರ್ಯ ಸಿಗುತ್ತವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೈಗಾರಿಕೆಗಳನ್ನು ವಿಶೇಷವಾಗಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಾ, ಮೈಸೂರಿಗೆ ಮಾತ್ರ ಇವರು ಕೊಟ್ಟಿದ್ದಾರಲ್ಲವೇ ?

ಶ್ರೀ ಬಿ. ರಾಚಯ್ಯ.—ಶಿವಮೊಗ್ಗಾದ ಪ್ಲೈವುಡ್ ಮತ್ತು ಮ್ಯಾಚ್ ಕಾರ್ಖಾನೆಗೆ ಕೆಲವು ಸೌಕರ್ಯಗಳನು ಕೊಟ್ಟಿದೆ. ಆದರೆ ಯಾರೂ ಅವರ ಕಾರ್ಖಾನೆಗೆ ಕೊಡದೆ ಬೇರೆಯವರಿಗೆ ಆರೀತಿ ಸೌಕರ್ಯಗಳನ್ನು ಕೊಟಿದ್ದಾರೆಂದು ಇವತ್ತಿನವರಿಗೂ ಸರ್ಕಾರಕ್ಕೆ ಅರ್ಜಿ ಕೊಟ್ಟಿಲ್ಲ. ಮೊನ್ನೆ ಹೇಳಿದರು ಬೊಂಬುಗಳನ್ನು ಯಾರಿಗೋ ಕೊಟ್ಟಿದ್ದಾರೆಂದು ಭದ್ರಾವತಿ ಪೇಪರ್ ಮಿಲ್‌ನವರಿಗೆ 50 ಪೈಸೆಯಂತೆ ಕೊಟ್ಟಿದೆ. ಶರಾವತಿ ಮುಳುಗಡೆ ಯಾದಂತಹವರು ಯಾರೂ ಇನ್ನೂ ಅದರಲ್ಲಿ ತೆಗೆದುಕೊಳ್ಳಲಿಲ್ಲ. ದಾಂಡೇಲಿ ಪೇಪರ್ ಮಿಲ್‌ನವರು ಯಾರಾದರೂ ಅರ್ಜಿ ಹಾಕಿದ್ದಾರೆಂದೂ ಅವರಿಗೆ ಆ ದರದಲ್ಲಿ ಕೊಟ್ಟಿದ್ದರೆ ಆರೋಪಣೆ ಮಾಡಬಹುದಾಗಿತ್ತು. ನೀರಿನಲ್ಲಿ ಮುಳುಗಿಹೋಗಿ ನಷ್ಟ ಹೊಂದಿದವರಿಗೆ, ಕಾರ್ಖಾನೆ ಸುಟ್ಟುಹೋಗಿ ನಷ್ಟಪಟ್ಟವರಿಗೆ ಒಂದು ಟನ್ ಡ್ರೈ ಬೊಂಬಿಗೆ 7.50ರಂತೆ ಕೊಟ್ಟಿದ್ದೇವೆ. ಬೊಂಬಾಯಿ ಸರ್ಕಾರದವರು 1 ಟನ್ ಫಲ್ಪ್‌ಗೆ 3.25ರಂತೆ ಕೊಡುತ್ತಾರೆ. 2½ಟನ್ನುಗಳಷ್ಟು ಡ್ರೈ ಬೊಂಬು ಬೇಕಾಗುತ್ತದೆ. 2.5 ರೂಪಾಯಿಗಳನ್ನು ಹೆಚ್ಚಿಸಿದುದರಿಂದ ಅವರು ಕಾಂಪ್ಲಿಮೆಂಟ್ ಮಾಡಲಿಲ್ಲ. ಆರೋಪಣೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಂಬಂಧಪಟ್ಟ ಕಾಗದ ಪತ್ರಗಳನ್ನು ಮತ್ತು ದಾಖಲಾತಿಗಳನ್ನು ಸರ್ಕಾರಕ್ಕೆ ಕೊಟ್ಟರೆ, ಅದನ್ನು ಸರಿಪಡಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ನಿನ್ನೆ ದಿವಸ ಕೆಲವು ಮಾನ್ಯ ಸದಸ್ಯರು ಹಿಂದಿನ ಫಾರೆಸ್ಟ್ ಮಂತ್ರಿಗಳು ಮರಗಳನ್ನು ಕಡಿಮೆ ರೇಟಿಗೆ ಕೊಟ್ಟಿದ್ದರು ಎಂದು ಆರೋಪಣೆ ಮಾಡಿದರು. ಅದು ನಿಜ. ಹಿಂದೆ ಮರಗಳನ್ನು ಎಷ್ಟು ರೇಟಿಗೆ ಕೊಟ್ಟಿದ್ದರು, ಈಗ ನಾವು ಎಷ್ಟು ರೇಟು ಮಾಡಿದ್ದೇವೆ ಎಂಬುದನ್ನು ನಾನು ಈಗ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ—

		ಹಿಂದೆ ಕೊಟ್ಟಿದ್ದ ರೇಟು ರೂಪಾಯಿಗಳು	ಈಗ ಕೊಟ್ಟಿರುವ ರೇಟು ರೂಪಾಯಿಗಳು
ಗೋಟಿಂಗ್ ತಾರೆ ಮರ	...	10	40
ಜಮಾರ್ ಮರ	...	31	40
ಹಲಗೆ ಮರ	...	31	55
ಆಪ್ಪ ಮರ	...	25	35
ಫಾಢ್ಲ	...	12	50
ಮ್ಯಾಂಗೋ	...	50	100
ಬೆನೆಟಾ	...	45	225

ಆದ್ದರಿಂದ ನಾವು ಸರ್ಕಾರಕ್ಕೆ ಲಾಭ ಬರುವಂತೆ ಮಾಡಬೇಕೆಂಬುದನ್ನು ಅರಿತುಕೊಂಡು ರೇಟುಗಳನ್ನು ಎರಡು ಸಾರಿ ರಿವೈಜ್ ಮಾಡಿ ರೇಟನ್ನು ಹೆಚ್ಚಿಗೆ ಮಾಡಿದ್ದೇವೆ.

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೇ ಕಟ್‌ಮೋಷನ್ ಮೇಲೆ ಜವಾಬು ಕೊಟ್ಟಿದೆ. ಸುಮ್ಮನೆ ಕ್ಲಾರಿಫಿಕೇಷನ್ ಕೇಳುತ್ತೇವೆಂದು ಇದನ್ನು ಕ್ವೆಶ್ಚನ್ ಅವರ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಪವರ್ ಟಿಲ್ಲರಿಗೆ ಸೇಲ್ಸ್ ಟ್ಯಾಕ್ಸ್ ಬಿಡಬೇಕು ಎಂದು ಹೇಳಿದರು. ಅದು ಒಂದು ಸೂಚನೆಯೇ ಹೊರತು, ಈಗ ಅದನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಅದು ಸಾಕಷ್ಟು ಆಲೋಚನೆ ಮಾಡಬೇಕಾದ ವಿಚಾರ. ಆಮೇಲೆ ಮಲಮೂತ್ರವನ್ನು ಉಪಯೋಗಿಸಿಕೊಂಡು ಗೊಬ್ಬರವನ್ನು ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಅದು ಒಳ್ಳೆಯ ಕೆಲಸ. ಇವರು ಹೇಳುವುದಕ್ಕಿಂತ ಮುಂಚೆಯೇ ಅನೇಕ ದೊಡ್ಡವರು ಸಹ ಅದನ್ನು ಹೇಳುತ್ತಿದ್ದಾರೆ. ಅದನ್ನು ಎಲ್ಲೆಲ್ಲಿ ಎಷ್ಟರಮಟ್ಟಿಗೆ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಿ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕಚ್ಚಾ ಮಾಲುಗಳನ್ನು ಉಪಯೋಗಿಸುವುದಕ್ಕೆ ಸರ್ಕಾರದವರು ಕೊಡುವು ದಿಲ್ಲ. ಈಗ ನಾನು ಅದನ್ನು ಸಾಬೀತು ಮಾಡಿದರೆ ಅದನ್ನು ಪರಿಶೀಲನೆ ಮಾಡುವುದಕ್ಕೆ ತಾವು ಸಿದ್ಧರಾಗಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ. ಅದು ದುರದೃಷ್ಟದ ಮಾತು. ಮಾನ್ಯ ಸದಸ್ಯರು ಅದನ್ನು ಬರೆದುಕೊಟ್ಟರೆ ಆರೀತಿ ಎಲ್ಲೆಲ್ಲಿ ನಡೆಯುತ್ತಿದೆ ಎಂದುಬನ್ನು ವಿಚಾರ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಳ್ಳಿಗಳಲ್ಲಿ ಕೆರೆಗಳಲ್ಲಿ ಹೂಳು ತೆಗೆಸುವುದಕ್ಕೆ, ರೈತರಿಗೆ ಗೊಬ್ಬರ ಮತ್ತು ಮಣ್ಣನ್ನು ಹೊಲಗಳಿಗೆ ಹೇರುವುದಕ್ಕೆ ವ್ಯವಸಾಯ ಇಲಾಖೆಯವರು ಲಾರಿಯನ್ನು ಕೊಡುತ್ತಿದ್ದರು. 1956ನೆ ಇಸವಿಯಿಂದ ಈಚೆಗೆ ಆ ಪದ್ಧತಿ ನಿಂತುಹೋಗಿದೆ. ಆದ್ದರಿಂದ ಪ್ರತಿ ಡಿಸ್ಟ್ರಿಕ್ಟ್‌ನಲ್ಲಿಯೂ ಸರ್ಕಾರ ದವರು ಲಾರಿ ಮತ್ತು ಟ್ರ್ಯಾಕ್ಟರುಗಳನ್ನು ಇಟ್ಟು ಹಳ್ಳಿಗಳಿಗೆ ರೈತರಿಗೆ ಗೊಬ್ಬರ ಗೋಡು ಇವುಗಳನ್ನು ಹೊಲಕ್ಕೆ ಹೇರುವುದಕ್ಕೆ ಅವರಿಗೆ ಒದಗಿಸಿಕೊಡಬೇಕು. ಈ ದೃಷ್ಟಿಯಿಂದ ಹಿಂದೆ ಇದ್ದಂತಹ ಪದ್ಧತಿಯನ್ನು ಜಾರಿಗೆ ತರಬೇಕು. ಮತ್ತು ನಮ್ಮ ಕಡೆ ತೆಂಗಿನ ಮರಗಳಿಗೆ ದುಂಬಿಗಳು ಬಿದ್ದು ಸಾವಿರಾರು ತೆಂಗಿನ ಮರಗಳು ಸತ್ತು ಹೋಗುತ್ತಿವೆ. ಈಗ ಕೇರಳದಲ್ಲಿ ಮಾಸ್ ಸ್ಪ್ರೇ ಮಾಡುತ್ತಿದ್ದಾರೆ. ಅದೇರೀತಿ ಮೈಸೂರಿನಲ್ಲಿಯೂ ಮಾಸ್‌ಸ್ಪ್ರೇ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಆರೀತಿ ಮಾಡಿದರೆ ನಮ್ಮ ದೇಶದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಉಳಿಸಬಹುದು ಇದರ ಬಗ್ಗೆ ಸರ್ಕಾರದವರು ಏರ್ಪಾಟು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಸೂಚನೆ ಮಾಡಿದ್ದಾರೆ. ಇದು ಖಂಡಿತ ಯೋಚನೆ ಮಾಡಬೇಕಾದ ವಿಚಾರ. ಮಾನ್ಯ ಸದಸ್ಯರು ಇಲ್ಲಿ ಕೇಳುವುದಕ್ಕಿಂತ ನಮಗೆ ಬಂದು ಹೇಳಿದರೆ ಅದನ್ನು ವಿಚಾರ ಮಾಡಬಹುದು.

ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಮಾನ್ಯ ಅರಣ್ಯ ಶಾಖೆಯ ಮಂತ್ರಿಗಳು ಹೇಳಿದರು ಷೆಡ್ಯೂಲ್ ಕ್ಯಾಸ್ಟಿನವರಿಗೆ ಮತ್ತು ಸ್ಕೂಲುಗಳಿಗೆ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಮರವನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿ ಒಂದು ಆರ್ಡರನ್ನು ಮಾಡಿದ್ದೇವೆ ಎಂದು ಹೇಳಿದರು. ಆದರೆ ಆ ಮರಗಳನ್ನು ಅವು ಬೆಳೆಯುವ ಪ್ರದೇಶದಿಂದ ತರಬೇಕಾದರೆ ಬಹಳ ದೂರ ಆಗುತ್ತದೆ. ಮತ್ತು ಅದನ್ನು ತರಬೇಕಾದರೆ ಜಾಸ್ತಿ ಖರ್ಚನ್ನೂ ಸಹ ಕೊಡಬೇಕಾಗುತ್ತದೆ. ಆದ್ದರಿಂದ ಬೆಂಗಳೂರಿನಲ್ಲಿಯೇ ಒಂದು ಡಿಪೋ ಮಾಡಿ ಅದರ ಮುಖಾಂತರ ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಅರಣ್ಯ ಇರುವ ಪ್ರದೇಶದಿಂದ ಮರಗಳನ್ನು ಬೆಂಗಳೂರಿಗೆ ಸಾಗಿಸಿ ಇಲ್ಲಿ ಡಿಪೋಗಳನ್ನು ತೆರೆದು ಅದರ ಮುಖಾಂತರ ಮರಗಳನ್ನು ಒದಗಿಸಬೇಕೆಂದರೆ ಆದರ ಕ್ವಾಂಟಿಟಿ ಕಡಿಮೆ ಆಗುತ್ತದೆ. ಕ್ವಾಂಟಿಟಿ ಕಡಿಮೆ ಆದರೂ ಚಿಂತೆಯಿಲ್ಲ ಬೆಂಗಳೂರಿಗೇ ತರಿಸಿಕೊಡಿ ಎಂದು ಹೇಳಿದರೆ ಅದನ್ನು ಇಲ್ಲಿಗೇ ತರಿಸಿ ಕೊಡುತ್ತೇವೆ.

Mr. DEPUTY SPEAKER.—The question is :

"That the respective sums not exceeding the amounts mentioned in the Demand Nos. 20, 38 and 51 be granted to Government to defray the charges which will come in course of payment during the financial year for the period ending 31st day of March, 1967."

The motion was adopted.

As directed by the Chair the Motion for Demands for Grants adopted by the House are reproduced below :—

DEMAND *No*. 20.—AGRICULTURE, HORTICULTURE AND FISHERIES.

31. *Agriculture.*

"That a sum not exceeding Rs. 5,65,05,000 be granted to the Government to defray the charges which will come in course of payment during the financial year for the period ending 31st day of March 1967, in respect of 'Agriculture'."

DEMAND NO. 38.—FOREST.

70. *Forest.*

"That a sum not exceeding Rs. 5,96,77,000 be granted to the Government to defray the charges which will come in course of payment during the financial year for the period ending 31st day of March 1967, in respect of 'Forest'."

DEMAND NO. 51.—CAPITAL OUTLAY ON FORESTS.

119. *Capital Outlay on Forests.*

"That a sum not exceeding Rs. 9,00,000, be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Forests'."

DEMAND FOR GRANTS

DEMAND Nos: 2, 7, 8, 22, 33 and 42

SRI M. V. KRISHNAPPA (Minister for Revenue).—Sir, on the recommendation of the Governor of Mysore, I beg to move:

"That a sum not exceeding Rs. 2,31,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Land Revenue'."

"That a sum not exceeding Rs. 11,49,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stamps'."

"That a sum not exceeding Rs. 23,96,000 be granted to the Government to defray the charges which will come in course of payment during the financial year for the period ending 31st day of March 1967, in respect of 'Registration Fees'."

"That a sum not exceeding Rs. 2,95, 67, 000 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

"That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

"That a sum not exceeding Rs. 36,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payment of Compensation to Land holders, etc., on the Abolition of Zamindari System'."

Mr. DEPUTY SPEAKER.—Motion moved:

"That a sum not exceeding Rs. 2,31,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Land Revenue'."

"That a sum not exceeding Rs. 11,49,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stamps'."

"That a sum not exceeding Rs. 23,96,000 be granted to the Government to defray the charges which will come in course of payment during the financial year for the period ending 31st day of March 1967, in respect of 'Registration Fees'."

"That a sum not exceeding Rs. 2,95,67,000 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

"That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

"That a sum not exceeding Rs. 36,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payment of Compensation to Land holders, etc., on the Abolition of Zamindari System'."

All the Demands are before the House for discussion.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ಈದಿವಸ ನಮ್ಮ ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ರಿಪಬ್ಲಿಕ್ ಆಫ್ ಇಂಡಿಯಾ ಬಂದಮೇಲೆ ಅದರ ಒಂದು ಸಾಂಕೇತಿಕವಾಗಿ ಲ್ಯಾಂಡ್ ರೆವಿನ್ಯೂ ಅನ್ನು ತೆಗೆದುಹಾಕಬೇಕು, ಅದನ್ನು ವಿಮೋಚನೆ ಮಾಡತಕ್ಕ ಒಂದು ಪಾಲಿಸಿಯನ್ನು ಮಾಡಬೇಕು, ಇದು ಸಾಮಾನ್ಯ ಜನತೆಗೆ ಇಪ್ಪೊತ್ತಿನ ದಿವಸ ಸ್ವರಾಜ್ಯ ಬಂದಿರತಕ್ಕ ಒಂದು ದೊಡ್ಡ ಕುರುಹು ಆಗುತ್ತದೆ, ಅದರ ನೆನಪು ಸ್ಥಿರವಾಗಿ ಉಳಿಯುತ್ತದೆ, ಎಂದು ನಾವು ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ. ಈಗ ಇರತಕ್ಕ ಭೂಕಂದಾಯದ ಪದ್ಧತಿಯನ್ನು ಸಂಪೂರ್ಣವಾಗಿ ಮಾರ್ಪಾಡು ಮಾಡಿ ಜಮೀನಿನ ಕಂದಾಯವನ್ನು ರದ್ದುಗೊಳಿಸಿ ತನ್ಮೂಲಕ ಬಡವರಿಗೆ ಮತ್ತು ಕಡಿಮೆ ಹಿಡುವಳಿದಾರರಿಗೆ ವಿನಾಯ್ತಿ ಕೊಡಬೇಕು. ಹೆಚ್ಚು ಕೊಡತಕ್ಕಂಥ ಶಕ್ತಿ ಇರತಕ್ಕ ಜನಗಳಿಗೆ ಹೆಚ್ಚು ಹೆಚ್ಚು ಕಂದಾಯವನ್ನು ಹಾಕಿ ವಸೂಲು ಮಾಡಬೇಕು. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಭೂಕಂದಾಯವನ್ನು ಮಾರ್ಪಾಡು ಮಾಡುವುದು ಅಗತ್ಯ ಇದೆ.

10-30 A.M.

ನಮ್ಮ ಮಾನ್ಯ ರೆವಿನ್ಯೂ ಸಚಿವರು Land Revenue System in Mysore—1948 ಎನ್ನುವುದರಲ್ಲಿ ಒಂದು ಕಮಿಟಿಯನ್ನು ಮಾಡಿದ್ದೆವು ಎಂದು ಹೇಳಿದ್ದಾರೆ. ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆಂದರೆ, ಜಮೀನುದಾರಿ ಪದ್ಧತಿ ತೆಗೆದು ಕಂದಾಯವನ್ನು ವಜಾ ಮಾಡಬೇಕು. ಅದರಲ್ಲೂ ಕಡಿಮೆ ಹಿಡುವಳಿದಾರರಿಗೆ ವಿನಾಯತಿ ಮಾಡಬೇಕು, ಇದನ್ನು ಅಗ್ರಿಕಲ್‌ಚರ್ ಇನ್‌ಕಂಟ್ಯಾಕ್ಸ್ ರೀತಿಯಲ್ಲೋ ಅಥವಾ ಬೇರಾವ ರೀತಿಯಲ್ಲೋ ತೆರಿಗೆ ಹಾಕಿ ಆ ತೆರಿಗೆಯನ್ನು ವಸೂಲಿ ಮಾಡಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಇದನ್ನು ಸರಕಾರದವರು ಜಾರಿಗೆ ತರುವುದಕ್ಕೆ ಇನ್ನೂ ಹಿಂದು ಮುಂದು ನೋಡುತ್ತಿದ್ದಾರೆ. ಈಗ ಎಲ್ಲಾ ಕಡಿಮೆ ಹಿಡುವಳಿದಾರರಿಗೆ ವಿನಾಯತಿ ಕೊಡಬೇಕೆಂದರೆ ಒಂದು ಅಥವಾ ಎರಡು ಕೋಟಿಯಷ್ಟು ಉತ್ಪತ್ತಿ ಕಡಿಮೆಯಾಗುವುದನ್ನು ಬೇರೆ ರೀತಿಯಲ್ಲಿ ಸಂಪಾದಿಸಿಕೊಳ್ಳಬಹುದು. ಇದಕ್ಕೆ ತೀವ್ರಗಮನ ಕೊಟ್ಟು ನಮ್ಮ ಮಾನ್ಯ ರೆವಿನ್ಯೂ ಸಚಿವರು ಅಧಿಕಾರದಲ್ಲಿರುವ ಕಾಲದಲ್ಲೇ ಈ ಮಾರ್ಪಾಡನ್ನು ಮಾಡುತ್ತಾರೆಂದು ಭಾವಿಸುತ್ತೇನೆ ಇದೇರೀತಿಯಲ್ಲಿ ಲ್ಯಾಂಡ್ ರೆವಿನ್ಯೂ ಮೇಲೆ ಸೆಸ್ಸುಗಳನ್ನು ಹಾಕುತ್ತಿದ್ದೀರಿ. ಇದೇ ಕಮಿಟಿಯವರು ಇದನ್ನೇತಕ್ಕೆ ಹಾಕಬೇಕು ಎಂದು ಅವರು ಮುಂದೆ ಹೋಗಿ ಹೀಗೆ ಹೇಳಿದ್ದಾರೆ.

"The levy of surcharge on land revenue has been discontinued as the Act was not extended."

ಇಲ್ಲಿ ಅಗ್ರಿಕಲ್‌ಚರಿಸ್ಟುಗಳು ಸೆಸ್ಸುಗಳನ್ನೇತಕ್ಕೆ ಕೊಡಬೇಕು ? ಸೆಸ್ಸುಗಳನ್ನೆಲ್ಲಾ ಅಬಾಲಿಷ್ ಮಾಡ ಬೇಕೆಂದು ಈ ಕಮಿಟಿಯವರು ಸಲಹೆಕೊಟ್ಟಿದ್ದಾರೆ. ಇವುಗಳೆಲ್ಲವನ್ನೂ ಸೋಷಿಯಲ್ ಸರ್ವಿಸ್‌ಗಳಂತೆ ವಸೂಲು ಮಾಡಬೇಕೆಂದೂ ಸಲಹೆ ಮಾಡಿದ್ದಾರೆ. ಇನ್ನು ಇದರ ಮೇಲೆ ಈಚೀಗೆ ಸರ್ ಚಾರ್ಜು ಎಂದು ಬೇರೆ ಹಾಕಿದ್ದಾರೆ. ಜಮೀನು ಕಂದಾಯವಲ್ಲದೆ ಪದೇ ಪದೇ ಸರ್‌ಚಾರ್ಜನ್ನು ಹಾಕಬೇಡಿ ಎಂದು ಎಷ್ಟೋ ವೇಳೆ ಹೇಳಿದರೂ ಹಾಕುತ್ತಿದ್ದಾರೆ. ತಾವು ಬಡ್ಜೆಟ್ ಮೆಮೊರ್ಯಾಂಡಂ ಪುಟ 12ರಲ್ಲಿ ನೋಡಬಹುದು. ಸರ್‌ಚಾರ್ಜನ್ನು ಕೇವಲ ಒಂದು ವರ್ಷಕ್ಕೋಸ್ಕರ ಎಂದು ಹೇಳಿಕೊಂಡು ಅದನ್ನು ಮುಂದಕ್ಕೆಹಾಗೆ ವರ್ಷ ವರ್ಷವೂ ಪಾಸ್ ಮಾಡುತ್ತಾ ತರುತ್ತಾರೆ. ಇದನ್ನು ತರಬೇಡಿ ಇದಕ್ಕೋಸರ ದೇಶದಲ್ಲಿ ಮುಂದೆ ಗೊಂದಲಗಳು ಬರಬಹುದು. ಈ ಚಾರ್ಜುಗಳಿಗೆ ಬದಲಾಗಿ ಇನ್ನಷ್ಟು ಅಸೆಸ್‌ಮೆಂಟ್ ಹಾಕಿದರೂ ಅದ ರಿಂದ ಇನ್ನಷ್ಟು ಅನುಕೂಲವಾಗುತ್ತದೆ. ರೈತರ ದೃಷ್ಟಿಯಿಂದ ಸರ್‌ಚಾರ್ಜನ್ನು ಅಬಾಲಿಷ್ ಮಾಡಬೇಕು. ಇದು ಪ್ರೆಸ್ಟೀಜ್ ಪ್ರಶ್ನೆಯಾಗಿ ಉಳಿಯಬೇಕು ಎನ್ನುವಂತೆ ಇದ್ದರೆ ಇದಕ್ಕೆ ಬದಲು Social Service Tax ಹಾಕಬಹುದು. ಇದನ್ನು ನಿಜವಾಗಿ ರೈತನ ಮೇಲೆ ಹಾಕಬೇಕೆಂದಿದ್ದರೆ, ಹಾಗೆ ಮಾಡದೆ ಎಲ್ಲ ರಿಂದಲೂ ವಸೂಲು ಮಾಡಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು Demand (9) Sale of Revenue Lands ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಜಮೀನನ್ನು ಕೊಡುವ ಪದ್ಧತಿ ಹಿಂದೆ ಯಾವುದೋ ಕಾಲದಲ್ಲಿರುವ ಲ್ಯಾಂಡ್ ರೆವಿನ್ಯೂ ರೂಲ್ಸಿನಂತೆ ಕೊಡುತ್ತಿದ್ದಾರೆ ಈಗ ಸರಕಾರದ ನೀತಿ ಏನೆಂದರೆ, Land to the Tiller ಎನ್ನುವುದು ಶೇಕಡ 55ರಷ್ಟು ಜನ ವ್ಯವಸಾಯ ಮಾಡುವವರೇ ಆಗಿದ್ದರೂ ಅವರಿಗೆ ಭೂಮಿ ಸಿಗುತ್ತಿಲ್ಲ. ಈಗ ಫಾರೆಸ್ಟು ಲ್ಯಾಂಡುಗಳನ್ನು ಹಾಗೂ ರೆವಿನ್ಯೂ ಲ್ಯಾಂಡುಗಳನ್ನು ಪಟ್ಟಣಗಳಲ್ಲಿರುವವರು ದರಖಾಸ್ತಿನಮೇಲೆ ಭೂಮಿ ತೆಗೆದುಕೊಂಡು ಬೇರೆ ಬೇರೆ ಜನರ ಕೈಲಿ ಸಾಗುವಳಿ ಮಾಡಿಸುತ್ತಿದ್ದಾರೆ. ಇದರಿಂದ ದೇಶದ ಉತ್ಪತ್ತಿ ಹೆಚ್ಚಾಗುತ್ತದೆಯೆ ? Tiller of the Soil ಎಂದು ಹೇಳಿದರೂ ಭೂಮಿ ರೈತನಿಗೆ ಸಿಗುತ್ತಿಲ್ಲ. ಆದುದರಿಂದ ರೆವಿನ್ಯೂ ಅಧಿಕಾರಿಗಳು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ತಾಲ್ಲೂಕು ಲೆವಲ್‌ಗಳಲ್ಲಿ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮಾಡಬೇಕು. ಇಲ್ಲದೇಇದ್ದರೆ ಸರಕಾರದ ಉದ್ದೇಶ ಸಫಲಗೊಳ್ಳುವುದಿಲ್ಲ ಎಂದು ಅವರ ಗಮನಕ್ಕೆ ತರಲಿಚ್ಛಿಸು ತ್ತೇನೆ. Sale of Revenue lands ನಲ್ಲಿ ಮಧ್ಯವರ್ತಿ ಜನರು ಬಹಳ ಬೆಲೆ ಬಾಳುವ ಜಮೀನುಗಳನ್ನು ಬಹಳ ಕಡಿಮೆ ಬೆಲೆಗೆ ಪಡೆದಿದ್ದಾರೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಈ ಜಮೀನನ್ನು ಯಾರು ಹೊಂದಿದ್ದರೋ ಅವರಿಗೆ ಶೇಕಡಾ 50ರಷ್ಟು ಬೆಲೆಯಲ್ಲಿ ಕೊಡಲು ತಕ್ಕ ಪ್ರಾವಿಷನ್ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ರೆವಿನ್ಯೂ ಒಳಗೆ ಉತ್ಪತ್ತಿ ಬಾಬಿನಲ್ಲಿ ವಾಟರು ಟ್ಯಾಕ್ಸು, ಕಂಟ್ರಿಬ್ಯೂಷನ್, ಬೆಟರ್‌ಮೆಂಟು ಲಿವಿ ಇತ್ಯಾದಿಗಳನ್ನು ಬಡ ಜನರ ಮೇಲೆ ಹೊರಿಸಲು ತರುತ್ತಿದ್ದಾರೆ, ಇದನ್ನು ಹೊರಲು ಬಡಜನರಿಗೆ ಆಗುವುದಿಲ್ಲ. ಆದುದರಿಂದ ಇದನ್ನು ಮಾಫೀ ಮಾಡಬೇಕೆಂದು ಸೂಚಿಸುತ್ತೇನೆ. ಇದನ್ನು ಬೇರೆ ಯಾವ ತರದಲ್ಲಾದರೂ ವಸೂಲು ಮಾಡಬಹುದು. ದೊಡ್ಡ ಕಟ್ಟೆಗಳನ್ನು ಕಟ್ಟಿ ಪ್ರಾಜೆಕ್ಟುಗಳು ಆಗುತ್ತಿರುವ ಪ್ರದೇಶದಲ್ಲಿ ಬಡ್ಡಿ ತೆರುತ್ತಿರುವ ಜನ ಅಲ್ಲಿ ಈಗ ಖುಷ್ಕಿ ಬೆಳೆಗೆ ಬದಲು ತರಿ ಬೆಳೆ ಮಾಡುತ್ತಿದ್ದಾರೆ. ಇಂತಹವರಮೇಲೆ ಕಂದಾಯ ಹೊರಿಸಿದರೆ ಅದು ಅಕ್ಷಮ್ಯ ಅಪರಾಧವಾಗುವುದಿಲ್ಲಾ. ಇವರಿಂದ ವಾಟರು ಟ್ಯಾಕ್ಸನ್ನೂ ವಸೂಲಿ ಮಾಡಬೇಡಿ. ವಾಟರ್ ಟ್ಯಾಕ್ಸ್ ಲೆವಿಯನ್ನು ಸರಿಯಾಗಿ ಸೈಂಟಿಫಿಕ್ ಸಿಸ್ಟಂ ಅನುಸರಿಸಿ ಕೋಟಿಗಟ್ಟಲೆ ಲಾಭ ಸಂಪಾದಿಸುತ್ತಿರುವ ಲಕ್ಷಾಂತರ ಜನ ಇದ್ದಾರೆ. ಅವರಿಂದ ವಸೂಲಿ ಮಾಡಲು ತೆರಿಗೆಗಳನ್ನು ಹಾಕಬಹುದು.

(ಶ್ರೀ ಎಚ್. ಆರ್. ಕೇಶವ ಮೂರ್ತಿ)

ಇದೇರೀತಿ ಬೆಟರ್‌ಮೆಂಟ್ ಹಾಗೂ ಕಾಂಟ್ರಿಬ್ಯೂಷನ್ ಲೆವಿ ಬಿಲ್ಲು ತಂದು ಪಾಸುಮಾಡಿದಿರಿ. ಇದರಿಂದ ಎಷ್ಟು ವಸೂಲಾಗಿದೆ ಎನ್ನುವುದೂ ನಮಗೆ ಕಾಣಿಸುತ್ತಿಲ್ಲ. ಈಗ ಟ್ಯಾಕ್ಸ್ ಇವೇಷನ್ ಜಾಸ್ತಿಯಾಗುತ್ತಿದೆ. ಇದಕ್ಕೆ ಅವಕಾಶವಾಗದಂತೆ ರೂಲ್ಸ್‌ಗಳನ್ನು ರಿಜಿಡ್ ಆಗಿ ಮಾಡಿ ಅಧಿಕಾರಿಗಳು ವಸೂಲಿ ಮಾಡಿದರೆ ಹೆಚ್ಚು ಹಣ ಸರಕಾರಕ್ಕೆ ಬರುತ್ತದೆ. ಈಗ ಸರಕಾರಕ್ಕೆ ಬರುವ ಕೋಟಿಗಟ್ಟಲೆ ಹಣ ಸರಿಯಾದ ರೂಲ್ಸ್‌ಗಳನ್ನು ಅನುಸರಿಸದೇ ಇರುವುದರಿಂದ ನಿಂತುಹೋಗಿದೆ. ಇದನ್ನು ಸರಿಪಡಿಸಬೇಕು. ಬಡವರ ಮೇಲೆ ತೆರಿಗೆ ಹೊರೆ ಹೇರುವುದನ್ನು ನಿಲ್ಲಿಸಿ ಗ್ರಾಮಾಂತರಗಳಲ್ಲಿ ಜನ ಬಹಳ ಕಷ್ಟಪಡುತ್ತಿದ್ದಾರೆ. ಸರಕಾರಕ್ಕೆ ಅವರಿಂದ ಲಕ್ಷಾಂತರ ರೂಪಾಯಿಗಳಷ್ಟು ಉತ್ಪತ್ತಿ ಬರುವಂತೆ ಸರಕಾರ ಸಹಾಯ ಮಾಡದೆ ಇರುವುದು ಯಾವ ನ್ಯಾಯ ? ಇದು ನಿಮ್ಮ ಸೋಷಿಯಲಿಸಂ ತತ್ವಕ್ಕೆ ತದ್ವಿರುದ್ಧವಲ್ಲವೇ ? ಇದನ್ನು ತಾವು ಆಲೋಚನೆ ಮಾಡಿ **Tax Evasion** ಆಗುತ್ತಿರುವುದನ್ನು ತಡೆಯಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

Expenditure Head ನಲ್ಲಿ **Herlditary Inams Abolition** ಆಕ್ಟ್ ಬಗ್ಗೆ ಸುಪ್ರೀಂ ಕೋರ್ಟಿಗೆ ರಿಟ್ ಹೋಗಿದ್ದರು ಎಂದು ಇದ್ದುದು ಈಗ ನಿವೃತ್ತಿಯಾಗಿದೆ. ಇಲ್ಲಿಂದ ಅನುವಂಶೀಕರ ಬಗ್ಗೆ ಏಕೆ ಇತ್ಯರ್ಥ ಮಾಡಬಾರದು. ಇವರಲ್ಲಿ ಕೆಲವರನ್ನು ಮನೆಗೆ ಕಳುಹಿಸುವುದಾದರೆ ಅವರಿಗೆ ಸೂಕ್ತವಾದ ಕಾಂಪೆನ್‌ಸೇಷನ್ ಕೊಡಬೇಕು. ಈ ವಿಲೇಜು ಅಕೌಂಟೆಂಟರುಗಳಾಗಿ ಸುಮಾರು 20—30 ವರ್ಷಗಳಿಂದಲೂ ಕೆಲಸಮಾಡಿಕೊಂಡು ಇರುವವರನ್ನೂ ಕೆಲಸದಿಂದ ತೆಗೆದುಹಾಕಿದರೆ ಅವರು ಸಂಸಾರಸ್ಥರು ಮಕ್ಕಳು ಮರಿಗಳನ್ನು ಕಾಪಾಡಿಕೊಂಡು ಜೀವನಮಾಡುತ್ತಿದ್ದವರು. ಇವರನ್ನು ಈಗ ಮನೆಗೆ ಕಳುಹಿಸಿದರೆ ಅವರಿಗೆ ಮುಂದೇನುಗತಿ ? ಇದರ ಬಗ್ಗೆ ವಿಚಾರ ಮಾಡಬೇಕು. ಗೋಲ್ಡ್‌ಸ್ಮಿತ್ತುಗಳನ್ನು ಮನೆಗೆ ಕಳುಹಿಸುವಾಗ ಅವರಿಗೆ ಎಲ್ಲ ಸೌಕರ್ಯಗಳನ್ನೂ ಮಾಡಿಸಿಕೊಟ್ಟಿರಿ. ಅದೇ ರೀತಿ ಅಬಾಲಿಷ್ ಆಗುವ ವಿಲೇಜು ಅಕೌಂಟೆಂಟರುಗಳಿಗೂ ಸೂಕ್ತವಾದ ಸಹಾಯಗಳನ್ನು ಕೊಡಬೇಕು. 20–30 ವರ್ಷಗಳಿಂದ ಕೆಲಸಮಾಡಿದಂತಹವರು ಇವರನ್ನು ಹಾಗೆ ಕಳುಹಿಸುವುದು ನ್ಯಾಯವಲ್ಲ. ಅವರಿಗೆ ಸೂಕ್ತವಾದ ಪರಿಹಾರ ಕೊಡುವುದು ಅಗತ್ಯ ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಅಲ್ಲದೆ ಇಲ್ಲಿ ಯಾರು ಯಾರನ್ನು ಮನೆಗೆ ಕಳುಹಿಸದೇಕೆಂದು ಇದ್ದಾರೋ ಅವರಿಗೆಲ್ಲ ಎಂದರೆ, ಪಟೇಲ್, ತೋಟಿ, ತಳವಾರರಿಗೆ ಅವರ ಅವಧಿಗೆ ತಕ್ಕಂತೆ, 5 ಎಕರೆ ಅಥವಾ ಹತ್ತು ಎಕರೆಗಳಷ್ಟು ಭೂಮಿಯನ್ನು ಅವರು ಜೀವನ ಮಾಡಲು ಕೊಡಬೇಕೆಂದು ತಮಗೆ ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಖಂಡಿತವಾಗಿಯೂ ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಜಮೀನಿನ ರೂಪದಲ್ಲಾದರೂ ಪರಿಹಾರ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಸ್ಟ್ಯಾಂಪ್ಸ್ ಬಾಬಿನಲ್ಲಿ 339 ಲಕ್ಷ ರೂಪಾಯಿ ಆದಾಯ ಇದೆ. ಸ್ಟ್ಯಾಂಪ್ಸ್ ಮಾರುವುದಕ್ಕೆ ಇವತ್ತಿನ ದಿವಸ 8 ಲಕ್ಷ ರೂಪಾಯಿಗಳ ಕಮಿಷನ್ ಕೊಡುತ್ತಾ ಇದ್ದೀರಿ. ಸಾಮಾನ್ಯವಾಗಿ ಆರುಕಾಲು ಪರ್ಸೆಂಟ್ ಕಮಿಷನ್ ಕೊಡಬೇಕು. ಇದರಿಂದ ಏನಾಗಿದೆ ಎಂದರೆ, ಮನಸ್ಸಿಗೆ ಬಂದಹಾಗೆ ಸ್ಟ್ಯಾಂಪುಗಳನ್ನು ಮಾರುತ್ತಾರೆ. 59 ಲಕ್ಷ ರೂಪಾಯಿಗಳಷ್ಟು ರೀಫಂಡ್ ಆಗಿದೆ. ಇದನ್ನು ತಪ್ಪಿಸುವುದಕ್ಕೆ ಏಜನ್ಸಿ ಮುಖಾಂತರ ಮಾರುವುದನ್ನು ತಪ್ಪಿಸಿ ಪೋಸ್ಟ್ ಆಫೀಸಿನವರು ಮಾರುವ ಹಾಗೆ ಟ್ರೆಜರಿಯಲ್ಲಿ ಒಬ್ಬ ಕ್ಲಾರ್ಕನ್ನು ಇಟ್ಟು ಅವರ ಮುಖಾಂತರ ಮಾರಿಸಿ. ಇದರಿಂದ ಸರ್ಕಾರಕ್ಕೂ ಹೆಚ್ಚಿನ ಆದಾಯ ಬರುತ್ತದೆ ಎಂದು ಸಲಹೆ ಮಾಡುತ್ತೇನೆ.

ಜ್ಯುಡೀಷಿಯಲ್ ಸ್ಟ್ಯಾಂಪ್ಸ್. ಇದರಲ್ಲೂ ಕೂಡ ರೀಫಂಡ್ ಬಹಳ ಜಾಸ್ತಿಯಾಗಿದೆ. ಇಷ್ಟು ಏಕೆ ಆಗಬೇಕು ? ಇದಕ್ಕೆ ಹೆಚ್ಚು ಅವಕಾಶ ಕೊಡಕೂಡದು ಎಂದು ಸಲಹೆ ಮಾಡುತ್ತೇನೆ. ಸಾಮಾನ್ಯವಾಗಿ ಒಂದು ಸೇಲ್ ಡೀಡ್ ಮಾಡಬೇಕಾದರೆ ಒಂದು ಸಾವಿರ ಬೆಲೆ ಉಳ್ಳ ಆಸ್ತಿಗೆ 75 ರೂಪಾಯಿ ಸ್ಟ್ಯಾಂಪ್ ತೆಗೆದುಕೊಳ್ಳಬೇಕೆಂದು ನಿಬಂಧನೆ ಇದೆ. ಬೆಲೆಯನ್ನು ಕಡಿಮೆ ಹಾಕಿ ಕಡಿಮೆ ಸ್ಟ್ಯಾಂಪ್ ತೆಗೆದುಕೊಳ್ಳುತ್ತಾರೆ. ಈರೀತಿ ಸರಿಯಾದ ಸ್ಟ್ಯಾಂಪ್ ವ್ಯಾಲ್ಯು ಕೊಡುತ್ತಾ ಇಲ್ಲ. ರಿಜಿಸ್ಟ್ರೇಷನ್ ಫೀಜು ಕೊಡುತ್ತಾ ಇಲ್ಲ. ಇಂತಹ **Exploitation class** ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ ? ಯಾವುದೂ ಕಾಣುತ್ತಾ ಇಲ್ಲ. ಸರ್ಕಾರದ ಆದಾಯ ಕಡಿಮೆಯಾಗುತ್ತಾ ಇದೆ. ಇದಕ್ಕೆ ಸೂಕ್ತ ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಕೋರ್ಟ್ ಫೀ ಸ್ಟ್ಯಾಂಪ್ ರೀಫಂಡ್ ವಿಷಯದಲ್ಲಿ ಇನ್ನು ಒಂದೆರಡು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಇವತ್ತು ಏನಾಗಿದೆ ತಿಳಿವಳಿಕೆ ಇಲ್ಲದ ಪಾರ್ಟಿಗಳು ಲಾಯರುಗಳ ಹತ್ತಿರ ಹೋದಾಗ ಅವರಿಂದ ಹಣ ವಸೂಲು ಮಾಡಿಕೊಂಡು ಇರುತ್ತಾರೆ. ರೀಫಂಡ್ ಕ್ಲೈಮ್ ಮಾಡುವಾಗ ಈ ಲಾಯರುಗಳು ಅದನ್ನು ತಾವೇ ಉಪಯೋಗಿಸಿಕೊಂಡುಬಿಡುತ್ತಾರೆ. ಅದು ಸರ್ಕಾರಕ್ಕೂ ಬರುವುದಿಲ್ಲ. ಪಾರ್ಟಿಗೂ ಬರುವುದಿಲ್ಲ. ಆದ್ದರಿಂದ ಈ ಹಣ ಮಧ್ಯವರ್ತಿ ಜನಗಳಿಗೆ ಹೋಗುವುದನ್ನು ತಪ್ಪಿಸುವುದಕ್ಕೆ ರೀಫಂಡ್ ಮಾಡುವುದಕ್ಕೇ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

Mr. DEPUTYS PEAKER.—Does the Hon'ble Member want, some restrictions to be imposed ?

Sri H. R. KESHAVAMURTHY.—There should be some restrictions so that the party may get the amount.

Mr. DEPUTY SPEAKER.—It is coming to the party now.

Sri H. R. KESHAVAMURTHY.—It is being manipulated by the intelligent class.

ರಿಜಿಸ್ಟ್ರೇಷನ್ ವಿಷಯದಲ್ಲಿ ಒಂದು ಮಾತು. ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಬಹಳ ತೊಂದರೆಯಾಗಿದೆ. ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದು ಬಹಳ ಜಾಸ್ತಿಯಾಗಿದೆ. ಸೊಸೈಟಿಯವರು ಕೇಳುತ್ತಾರೆ, ಬ್ಯಾಂಕಿನವರು ಕೇಳುತ್ತಾರೆ, ಹೀಗಾಗಿ ಎನ್‌ಕಂಬರೆನ್ಸ್ ಸರ್ಟಿಫಿಕೇಟುಗಳನ್ನು ಕೊಡಲು ಕಾಪಿ ಮಾಡುವಾಗ ಆ ರಿಜಿಸ್ಟರನ್ನು ಹ್ಯಾಂಡಲ್ ಮಾಡುವುದು ಜಾಸ್ತಿಯಾಗಿ ಅದರ ಹಾಳೆಗಳೇ ಕಿತ್ತುಹೋಗಿವೆ. ಹರಿದುಹೋಗಿವೆ. ಆದ್ದರಿಂದ ಜನರಲ್ ರಿಜಿಸ್ಟರ್‌ಗೆ ಬದಲಾಗಿ ಪ್ರತಿಯೊಂದು ಹಳ್ಳಿಗೂ ಕೂಡ ಒಂದೊಂದು ರಿಜಿಸ್ಟರ್ ಇಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅನಿಮಲ್ ಹಸ್ಬೆಂಡರಿ ವಿಷಯದಲ್ಲಿ ಒಂದು ಮಾತು. ಅಮೃತಮಹಲ್ ಡಿಪಾರ್ಟ್‌ಮೆಂಟು ಇದೆ. ಅವರು ಹೋರಿಗಳನ್ನು ಸಾಕುತ್ತಾರೆ. ಇದು ಅರಮನೆಗೆ ಸಂಬಂಧಪಟ್ಟಿತ್ತು. ಅರಮನೆಯೇ ಇಲ್ಲದೇ ಇರುವಾಗ ಇದು ಏಕೆ ಇರಬೇಕೆಂದು ಕೇಳುತ್ತೇನೆ. ಪೂರ್ವದಲ್ಲಿ ಈ ಅಮೃತಮಹಲ್ ಕಾವಲುಗಳನ್ನು ಮಾಡಿದ್ದರು. ರಷ್ಯಾದಲ್ಲಿ ಏನು ಮಾಡಿದ್ದಾರೆ ಎಂದರೆ :—

> "In tsarist Russia, for example, migratory grazing was typical of livestook production in semi-desert areas. Cattle was driven from pasturage to pasturage, no reserve fodder being stored and so stalls built. In the severe conditions prevailing in these areas this often resulted in a great loss of cattle. After the Revolution the migratory system was abandned. Animal farms were built on the huge grazing areas. The distant pasturing system was introduced, the cattle grazing in pastures at some distance from the farm, while adjacent pastures provide a stock of todder for the winter season. Sheds and other structures are built to shelter the cattle and store the fodder. The pastures are provided with watering places, sanitation facilities and veterinary services."

ಮಾನ್ಯ ಮಂತ್ರಿಗಳು ಈ ಅಮೃತ ಮಹಲ್ ಕಾವಲುಗಳನ್ನು ಸಂಪೂರ್ಣವಾಗಿ ನಿಷೇಧಮಾಡಿದರೆ ನಮ್ಮ ದೇಶದಲ್ಲಿ ಹೆಚ್ಚು ಲೈವ್ ಸ್ಟಾಕ್‌ಗೆ ಅವಕಾಶವಾಗುತ್ತದೆ ಒಳ್ಳೆಯ ಬ್ರೀಡ್ಸ್‌ನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಅಮೃತ ಮಹಲ್ ಕಾವಲು ಇರುವುದರಿಂದ ಅನೇಕರಿಗೆ ಜಮೀನು ಸಿಕ್ಕುವುದಕ್ಕೆ ತೊಂದರೆಯಾಗಿದೆ. ಬೇಕಾದಷ್ಟು ಅಂತ ಜನರು ಇದ್ದಾರೆ ಅವರಿಗೆ ಜಮೀನು ಕೊಟ್ಟರೆ ಅದರಲ್ಲಿ ಅವರು ವ್ಯವಸಾಯವನ್ನಾದರೂ ಮಾಡಬಹುದು ಆಹಾರವನ್ನು ಹೆಚ್ಚಾಗಿ ಬೆಳೆಯಬಹುದು ಎಂದು ಸಲಹೆ ಮಾಡುತ್ತೇನೆ.

ಅಮೃತ ಮಹಲ್ ಕಾವಲಿನಲ್ಲಿ ದನಗಳನ್ನು ಮಾತ್ರ ನೋಡುತ್ತಾ ಇದ್ದೇವೆ. ನಮ್ಮ ದೇಶದಲ್ಲಿ ಷೀಪ್ ಬ್ರೀಡಿಂಗ್‌ಗೆ ಹೆಚ್ಚು ಅವಕಾಶ ಕೊಡುತ್ತಾ ಇಲ್ಲ ರಷ್ಯಾದಲ್ಲಿ :—

> The mechanised sheep-breeding team on the Yesensaisk Sovkhoz in Kazakhstan consists of six workers, including two tractor-operators. The team tends 2,000 head of sheep. It cultivates 320 hectares of forage crops to feed the sheep in winter."

ಆದ್ದರಿಂದ ಕುರಿಗಳನ್ನು ಸಾಕುವುದಕ್ಕೆ ಹೆಚ್ಚು ಗಮನ ಕೊಡಬೇಕು ಮತ್ತು ಅವುಗಳಿಂದ ಹೆಚ್ಚು ತುಪ್ಪಟ ಉಪಯೋಗ ಮಾಡಿಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಸಲಹೆ ಮಾಡುತ್ತೇನೆ.

(H. R. KESHAVAMURTHY)

ಇನ್ನು ಪೌಲ್ಟ್ರಿ ವಿಚಾರವನ್ನು ನೋಡಿದರೆ ಮುಂದುವರೆದ ರಾಷ್ಟ್ರದಲ್ಲಿ ಬೇಕಾದಷ್ಟು ಮೊಟ್ಟೆ, ಕೋಳಿ ಮುಂತಾದುವುಗಳನ್ನು ಸಾಮಾನ್ಯವಾಗಿ ಉತ್ಪತ್ತಿಮಾಡುತ್ತಿದ್ದಾರೆ. ನಮ್ಮಲ್ಲೂ ಕೂಡ ಸಾಕಾದಷ್ಟು ಸಂಶೋಧನೆ ಮಾಡಿ ಒಳ್ಳೆಯ ಕೋಳಿ ತಳಿಯನ್ನು ಬೆಳೆಸಬೇಕು. ಹಾಗೆಯೇ ನಮ್ಮಲ್ಲಿ ಪಿಗ್ಗರಿ ವಿಚಾರಕ್ಕೆ ಹೆಚ್ಚು ಗಮನ ಕೊಡುತ್ತಿಲ್ಲ, ಯುದ್ಧದ ಸಮಯದಲ್ಲಿ ಒಳ್ಳೆಯ ಹಂದಿಗಳನ್ನು ನೋಡುತ್ತಿದ್ದೆವು, ನಾವು ಶಾಖಾಹಾರಿಗಳಾದರೂ ಕೂಡ ಅವನ್ನು ನೋಡಿದರೆ ನಮ್ಮ ಬಾಯಲ್ಲೂ ಕೂಡ ನೀರೂರುತ್ತಿತ್ತು. ಈಗಲೂ ಕೂಡ ಅಂತಹ ಒಳ್ಳೆಯ ಹಂದಿಗಳನ್ನು ಬೆಳೆಸಲು ಮಾನ್ಯ ಕೃಷ್ಣಪ್ಪನವರು ವ್ಯವಸ್ಥೆ ಮಾಡಬೇಕು.

ಕ್ಷಾಮ ಪರಿಹಾರದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. 1891ನೇ ಇಸವಿ ಫ್ಯಾಮಿನ್ ಕೋಡಿನ ಪ್ರಕಾರ ಈಗ ಪರಿಹಾರ ನೀಡುತ್ತಿದ್ದಾರೆ. ಈ ಸಂಬಂಧವಾದ ಕೆಲಸವನ್ನು ಲೋಕೋಪಯೋಗಿ ಇಲಾಖೆ ಮೂಲಕ ಸ್ವಲ್ಪ ಮತ್ತು ರೆವೆನ್ಯೂ ಇಲಾಖೆ ಮೂಲಕ ಸ್ವಲ್ಪ ಮಾಡುತ್ತಿದ್ದಾರೆ. ರೆವೆನ್ಯೂ ಇಲಾಖೆ ಏಜೆನ್ಸಿ ಮೂಲಕ ಕ್ಷಾಮ ಪರಿಹಾರದ ಕೆಲಸವನ್ನೇಕೆ ಮಾಡಬೇಕು ? ರೆವೆನ್ಯೂ ಇಲಾಖೆಯ ತಾಸಿಲ್ದಾರರು, ರೆವೆನ್ಯೂ ಇನ್‌ಸ್ಪೆಕ್ಟರು ಮುಂತಾದವರು ಅವರಿಗೆ ಟಿ. ಎ. ವಗೈರೆ ಏನೂ ಸಿಕ್ಕುವುದಿಲ್ಲವೆಂದು ಈ ಕೆಲಸ ಮಾಡುವುದಿಲ್ಲ. ಆದುದರಿಂದ ಕೊಟ್ಟ ಹಣ ರೆವೆನ್ಯೂ ಇಲಾಖೆಯಲ್ಲಿ ಖರ್ಚಾಗುವುದಿಲ್ಲ. ಅಲ್ಲದೆ ಹೆಣ್ಣಾಳಿಗೆ ದಿನಕ್ಕೆ ಒಂದು ರೂಪಾಯಿ ಗಂಡಾಳಿಗೆ ಒಂದೂವರೆ ರೂಪಾಯಿ ಕೂಲಿ ಕೊಟ್ಟರೆ ಕೆಲಸಮಾಡಲು ಸಾಧ್ಯವಿಲ್ಲ. ಆದುದರಿಂದ ಸರಕಾರ ಕೊಡುವ ಈ ಬಾಬಿನ ಹಣವನ್ನು ಪೂರ್ಣವಾಗಿ ಲೋಕೋಪಯೋಗಿ ಇಲಾಖೆಗೇ ಕೊಟ್ಟು ಆ ಇಲಾಖೆ ಮೂಲಕವೇ ಕೆಲಸಮಾಡಿಸಬೇಕು. ಹೆಚ್ಚು ಅಭಾವವಿರುವ ಪ್ರದೇಶಗಳಿಗೆ ಹೆಚ್ಚಾಗಿ ಹಣ ಕೊಡದೆ ಮನಸ್ಸಿಗೆ ಬಂದಹಾಗೆ ಕೊಡುತ್ತಿದ್ದಾರೆ. ಯಾರ್ಡ್ ಕಮಿಷನ್ನಿನವರೂ ಕೂಡ ನಮ್ಮ ಜಿಲ್ಲೆ ನೋಡದೆ ಬಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹೆಚು ಅಭಾವವಿರುವುದರಿಂದ ಅಲ್ಲಿಗೆ ಹೆಚ್ಚು ಕೊಡಬೇಕು. ಅಲ್ಲಿ ಜನರಿಗೆ ಹೊಟ್ಟೆಗಿಲ್ಲದೆ ಕೆಲವರು ಸಾಯುತ್ತಿದ್ದಾರೆ, ಹುಣಿಸೆ ಬೀಜ ಹುರಿದು ತಿನ್ನುತ್ತಿದ್ದಾರೆ. ಇದನ್ನು ತಪ್ಪಿಸಲು ನಮ್ಮ ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕಿಗೆ ಹೆಚ್ಚಿಗೆ ಹಣ ಒದಗಿಸಿ ಪರಿಹಾರ ಕಾಮಗಾರಿಗಳನ್ನು ನಡೆಸಬೇಕು.

ಜಮೀನುದಾರಿ ಮತ್ತು ಇನಾಂ ಪದ್ಧತಿಯನ್ನು ವಜಾಮಾಡುತ್ತಿದ್ದಾರೆ. 18 ವರ್ಷಗಳಿಂದ ಈ ಕೆಲಸ ವಾಗುತ್ತಿದೆ. ಇಷ್ಟು ದಿವಸ ಬೇಕೇ ಈ ಕೆಲಸವಾಗುವುದಕ್ಕೆ ? ಚೈನಾದಲ್ಲಿ ಭೂ ಸುಧಾರಣೆ ಜಾರಿಗೆ ಬಂದಾಗ ಮತ್ತು ಇನಾಮುಗಳನ್ನು ರದ್ದುಮಾಡುವಾಗ ಒಂದೇ ಸೀಜನ್‌ನಲ್ಲಿ ಆ ಕೆಲಸ ಮಾಡಿಬಿಟ್ಟರು, ಅದಕ್ಕೆ ಸರಿಯಾದ ಸಿಬ್ಬಂದಿ ಇಟ್ಟು ಅವರಿಗೆ ಶಿಕ್ಷಣ ಕೊಟ್ಟು 3 ತಿಂಗಳಲ್ಲಿ ಕೆಲಸಮಾಡಿದರು. ಇಲ್ಲಿ ಮಾಡಲು ಇನ್ನೂ ಎಷ್ಟು ವರ್ಷ ಬೇಕು ? ಜಾಗ್ರತೆ ಇದನ್ನು ಮುಗಿಸಬೇಕು.

ರೆವೆನ್ಯೂ ಇಲಾಖೆಯಲ್ಲಿ ಇನ್ನೂ ರೆಡ್‌ಟೇಪಿಸಂ ಬಹಳವಾಗಿದೆ. ಕೆಲವು ರಿಕಾರ್ಡುಗಳು ಹೋದರೆ ಗುಮಾಸ್ತೆಯ ಟೇಬಲ್ಲಿನಿಂದ ವಾಪಸು ಬರುವುದೇ ಇಲ್ಲ. ಉದಾಹರಣೆಗೆ ಅಕ್ವಿಜಿಷನ್, ದರಖಾಸ್ತು, ಫೋಡಿ ರಿಕಾರ್ಡು ಮುಂತಾದುವು ಎಷ್ಟೋ ಇವೆ. ಮಾನ್ಯ ರೆವೆನ್ಯೂ ಸಚಿವರು ಅಂಕಿಅಂಶ ತರಿಸಿ ಅವು ಎಷ್ಟು ದಿವಸಗಳಿಂದ ಪೆಂಡಿಂಗ್ ಇವೆ ಎಂಬುದನ್ನು ನೋಡಬಹುದು. ಎರಡು ಮೂರು ತಲೆಗಳಿಂದ ಫೈಸಲಾಗದಿರುವ ರಿಕಾರ್ಡುಗಳು ಕೂಡ ಎಷ್ಟೋ ಇವೆ. ಇದಕ್ಕೆ ಅವಕಾಶವಿಲ್ಲದಂತೆ ಒಂದು ಪರಿಮಿತಿ ಗೊತ್ತುಮಾಡಿ ಆದಷ್ಟು ಜಾಗ್ರತೆ ರಿಕಾರ್ಡು ಫೈಸಲಾಗುವಂತೆ ವ್ಯವಸ್ತೆಮಾಡಬೇಕು. ರೆವೆನ್ಯೂ ಇಲಾಖೆಯಲ್ಲಿ ರೆಡ್‌ಟೇಪಿಜಂ ಹೆಚ್ಚಾಗಿದೆ, ತಿಳಿವಳಿಕೆ ಇಲ್ಲದವರು ಯಾವ ಕೆಲಸಕಾರ್ಯವನ್ನು ಮಾಡಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಮಧ್ಯವರ್ತಿ ಜನರ ಜೊತೆಯಲ್ಲಿ ಹೋದರೆ ಕೆಲಸವಾಗಬಹುದೇ ಹೊರತು ರೈತ ತಾನೇ ಹೋಗಿ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಿಲ್ಲ. ಇದು ಮಂತ್ರಿಗಳಿಗೂ ಗೊತ್ತಿದೆ. ಆದುದರಿಂದ ಯಾವುದಾದರೂ ಉಪಾಯಮಾಡಿ ರೆಡ್‌ಟೇಪಿಜಂಗೆ ಅವಕಾಶವಿಲ್ಲದಂತೆ ಮಾಡಬೇಕು.

ಈಗ ತಕಾವಿ ಸಾಲ, ಜಮೀನು ಅಭಿವೃದ್ಧಿ ಸಾಲ ಕೊಡುತ್ತಾರೆ. ಆದರೆ ತಕಾವಿ ಸಾಲ ಬಡವರಿಗೆ ಸಿಕ್ಕುತ್ತಿಲ್ಲ, ಸಾಮಾನ್ಯ ರೈತನಿಗೆ, **tiller of the soil** ಗೆ ಸಿಕ್ಕುತ್ತಿಲ್ಲ. ಅಂಕಿಅಂಶ ನೋಡಿದರೆ ಬಡವರಿಗೆಷ್ಟು ಸಿಕ್ಕುತ್ತಿದೆ ಎಂಬುದು ಗೊತ್ತಾಗುತ್ತದೆ.

ಫ್ಲಡ್ ರಿಲೀಫ್‌ಗೆ ಬೇಕಾದಷ್ಟು ಸಾಲ ವಗೈರೆ ಸಹಾಯ ಕೇಂದ್ರ ಸರಕಾರದಿಂದ ಪಡೆದರೂ ನಮ್ಮ ದೇಶದಲ್ಲಿ ಅದು ಸರಿಯಾಗಿ ಹಂಚಿಕೆಯಾಗುತ್ತಿಲ್ಲ, ಗ್ರಾಂಟು ಕೊಟ್ಟರೂ ಅದು ಲ್ಯಾಪ್ಸ್ ಆಗುತ್ತಿದೆ. ಹಾಸನ ಡಿವಿಜನ್ನಿಗೆ ಹೋದ ವರ್ಷ ಕೊಟ್ಟ ಎರಡು ಸಾವಿರ ರೂಪಾಯಿಗಳಲ್ಲಿ ಒಂದು ಪೈಸಾ ಕೂಡ ಖರ್ಚಾಗದೆ ಲ್ಯಾಪ್ಸ್ ಆಗುತ್ತಿದೆ. ಇದೇ ರೀತಿ ಫ್ಲಡ್ ಪ್ರೊಟೆಕ್ಷನ್ ವಿಚಾರದಲ್ಲೂ ಆಗುತ್ತಿದೆ. ಇದರ ಕೆಲಸಮಾಡಲು ಜನರಿಗೆ ಸಾಲ ಕೊಡಬೇಕು. ಜಮೀನು ಕೊರೆದು ಹಾಳಾಗುತ್ತಾ ಇದೆ, ಅದನ್ನು ತಡೆಗಟ್ಟಲು ಕೇಂದ್ರ ಸರಕಾರದಿಂದ ಬಡ್ಡಿ ಇಲ್ಲದೆ ಅಥವಾ ಕಡಮೆ ಬಡ್ಡಿಯಲ್ಲಿ ಹಣ ಪಡೆದು ರೈತರಿಗೆ ಕೊಡಬೇಕು.

ಡಿಸ್ಟ್ರಿಕ್ಟ್ ಆಫೀಸು ನೌಕರರಿಗೆ ಕೆಲವು ಕಡೆ ತೊಂದರೆ ಇದೆ. ಹೊಸ ಮೈಸೂರು ಮತ್ತು ಹಳೇ ಮೈಸೂರು ಭಾಗಗಳಲ್ಲಿ ಒಬ್ಬ ನೌಕರನು ಎಷ್ಟು ಪೇಪರುಗಳನ್ನು ಡಿಸ್‌ಪೋಸ್ ಮಾಡುತ್ತಾರೆಂಬುದನ್ನು ನೋಡಬೇಕು. ಹಳೆಯ ಮೈಸೂರಿನ ನೌಕರರಿಗೆ ಕೆಲಸ ಜಾಸ್ತಿ, ಹೊಸ ಮೈಸೂರಿನಲ್ಲಿ ಕೆಲಸ ಕಡಮೆ. ಹೊಸ ಮೈಸೂರು ಪ್ರದೇಶದಲ್ಲಿ ಹೆಚ್ಚು ನೌಕರರಿದ್ದಾರೆ. ಇದನ್ನು ಗಮನಿಸಿ ಎಲ್ಲರಿಗೂ ಕೆಲಸ ಸಮವಾಗಿರುವಂತೆ ನೌಕರರನ್ನು ನೇಮಿಸಬೇಕು.

ಸಬ್ ಡಿವಿಜನ್ ಆಫೀಸು ಬರೀ ಟಪ್ಪಾಲು ಆಫೀಸಿನಂತಿದೆ, ಇದು ಅನ್ಯಾಯ, ಸಾಧ್ಯವಾದ ಮಟ್ಟಿಗೆ ಇದನ್ನು ವಜಾಮಾಡುವುದು ಒಳ್ಳೆಯದು. ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಡಿಸ್ಟ್ರಿಕ್ಟ್ ಆಫೀಸು ಮತ್ತು ತಾಲ್ಲೂಕು ಆಫೀಸು ಇವೆರಡಿದ್ದರೆ ಸಾಕು. ಒಂದುವೇಳೆ ಸಬ್ ಡಿವಿಜನ್ ಆಫೀಸನ್ನು ಮುಂದುವರೆಸುವು ದಾದರೆ ಅದು ಚುರುಕಿನಿಂದ ಕೆಲಸಮಾಡುವುದಕ್ಕೆ ಏರ್ಪಾಡುಮಾಡಬೇಕು.

ಹಿಂದೆ ಆಕಾರಬಂದು ದುರಸ್ತುಮಾಡಿ ನಕಾಸೆ ದುರಸ್ತುಮಾಡಿ ಜಮೀನಿಗೆ ಕಂದಾಯ ಹಾಕಿ ಪಟಿ ಕೊಡುತ್ತಿದ್ದರು. ಪೋಡಿಮಾಡಿ ಲೆಕ್ಕ ತೋರಿಸುತ್ತಿದ್ದರು. ಈಗ ಒಂದು ತಾಲ್ಲೂಕು ಆಫೀಸಿನ ಇಂಡೆಕ್ಸ್ ರಿಜಿಸ್ಟರು ನೋಡಬಹುದು, ಸಬ್ ರಿಜಿಸ್ಟ್ರಾರರ ಆಫೀಸಿನಲ್ಲಿ ಪೋಡಿ ಎಷ್ಟಾಗಿದೆ ಎಂದು ನೋಡಬಹುದು. ಎಷ್ಟು ಮ್ಯುಟೇಷನ್ ಆಗಬೇಕಾಗಿತ್ತೋ ಅಷ್ಟು ಆಗಿದೆಯೇ ಎಂದು ನೋಡಬೇಕು. ಜಮೀನು ಕೊಂಡು ಹತ್ತಾರು ವರ್ಷಗಳಾದರೂ ದಾಖಲೆ ಇರುವುದಿಲ್ಲ; ಜಮೀನು ಪೋಡು ಮಾಡಿರುವುದಿಲ್ಲ, ಮ್ಯಾಪಿನಲ್ಲಿ ಗುರುತುಮಾಡಿರುವುದಿಲ್ಲ. ಪೋಡಾದ ಜಮೀನನ್ನು ನಕಾಸೆಯಲ್ಲಿ ಗುರುತುಮಾಡಬೇಕೆಂದು ಹೇಳಿದರೂ ಮಾಡಿರುವುದಿಲ್ಲ. ಹೀಗಾಗಿ ರೈತರಿಗೆ ಎಷ್ಟು ಜಮೀನಿದೆ, ಕಂದಾಯ ಎಷ್ಟು ಕೊಡಬೇಕು ಎಂದು ಗೊತ್ತಾಗು ವಂತೆ ಪಟ್ಟೆ ಕೂಡ ಕೊಡುತ್ತಿಲ್ಲ. ಇದರಿಂದ ಬಹಳ ಕಾಂಪ್ಲಿಕೇಷನ್ ಆಗಿದೆ. ಸಾಲ ತೆಗೆದುಕೊಳ್ಳಬೇಕಾದರೆ ಎಷ್ಟೋ ಜನರನ್ನು ಆಶ್ರಯಮಾಡಬೇಕಾಗಿದೆ. ಇದು ಸರಿಯಲ್ಲ. ಇದನ್ನು ತಪ್ಪಿಸುವುದಕ್ಕೆ ಆದಷ್ಟು ಜಾಗ್ರತೆ ಮ್ಯುಟೇಷನ್ ಸ್ಲಿಪ್ಸ್ ವಿಲೇಮಾಡಬೇಕು. ಪುಸ್ತಕಗಳಲ್ಲಿ ಪೋಡಿ ಗುರುತುಮಾಡಬೇಕು. ರೈತರು ಕೇಳಿದಾಗ ಕಾಪಿ ಕೊಡಬೇಕು. ಇದಕ್ಕೆ ಅವಕಾಶಮಾಡಿದರೆ ಎಷ್ಟು ಜಮೀನು ಇದೆ, ಕಂದಾಯ ಎಷ್ಟು ಎಂಬ ಅಭಿಪ್ರಾಯ ಬರುತ್ತದೆ. ಒಟ್ಟಿನಲ್ಲಿ ಕಂದಾಯದ ಹೊರೆ ಬಡ ರೈತರಿಗೆ ಜಾಸ್ತಿಯಾಗಿದೆ, ಅದನ್ನು ತಪ್ಪಿಸಿ ಅನುಕೂಲಸ್ಥರಿಗೆ ಹಾಕಬೇಕು, ಬಡವರನ್ನು ಎಕ್ಸ್‌ಪ್ಲಾಯಿಟ್ ಮಾಡಿ ಹಣ ಸಂಪಾದನೆ ಮಾಡುವವರಿಗೆ ಜಾಸ್ತಿ ಹಾಕಬಹುದು, ಬಡವರಿಗೆ ಹೆಚ್ಚು ಹಾಕಬಾರದು, ಕಂದಾಯವನ್ನು ಸಂಪೂರ್ಣವಾಗಿ ಮಾಫಿಮಾಡಬೇಕು, ಸರ್‌ಛಾರ್ಜ್ ಹಾಕಬಾರದು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11-00 A.M.

Mr. DEPUTY SPEAKER.—How much time the Hon'ble Minister for Revenue would require for reply?

Sri M. V. KRISHNAPPA.—I require about half-an-hour.

Mr. DEPUTY SPEAKER.—We can sit till 12 NOON and meet again at 3 P.M.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಕಂದಾಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥ ಡಿಮ್ಯಾಂಡ್ ನಂಬರ್ 2, 7, 8, 22, 33, 42 ಈ ಡಿಮಾಂಡುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ದಿನ ನಮ್ಮ ರಾಜ್ಯದಲ್ಲಿ ರೆವಿನ್ಯೂ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎಂಬುದಕ್ಕೆ ನನ್ನ ಅಭಿಪ್ರಾಯ ವ್ಯಕ್ತಪಡಿಸಬೇಕು ಎಂದು ಅಂದುಕೊಂಡಿದ್ದೇನೆ. ಈ ರೆವಿನ್ಯೂ ಇಲಾಖೆ ಬಹು ಪುರಾತನವಾದುದು. ಬಹುಶಃ ನಮ್ಮ ದೇಶದಲ್ಲಿ ಸರಕಾರ ರಚನೆಯಾದ ದಿವಸ ಮೊಟ್ಟ ಮೊದಲನೇ ಇಲಾಖೆ ರಚನೆಯಾದುದು ಈ ರೆವಿನ್ಯೂ ಇಲಾಖೆ ಎಂದು ಹೇಳಿದರೆ ಅದು ತಪ್ಪಾಗ ಲಾರದು. ಅಷ್ಟು ಪುರಾತನವಾದುದು ಆಗಿದೆ. ಈ ಒಂದು ಇಲಾಖೆಯು ರಾಜ್ಯದ ಎಲ್ಲ ಇಲಾಖೆಗಳ ಕೆಲಸಕಾರ್ಯ ನಡೆಸತಕ್ಕಂಥ ಜವಾಬ್ದಾರಿ ಪಡೆದದ್ದು ಎಂಬುದನ್ನು ನಾನು ಚರಿತ್ರೆಯಲ್ಲಿ ಓದಿದ್ದೇನೆ. ಆದರೆ ಇವತ್ತಿನ ದಿವಸ ದೇಶದಲ್ಲಿ ಪರಿಸ್ಥಿತಿ ಬದಲಾವಣೆಯಾಗಿದೆ. ಈ ಇಲಾಖೆಯ ರೂಪ ರೇಷೆ ಬದಲಾವಣೆ ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅನೂಚಾನವಾಗಿ ಬಂದಿರತಕ್ಕ ಆನುವಂಶಿಕ ಹಕ್ಕು ತೆಗೆಯಬೇಕು ಎಂಬ ಕಾನೂನು ತಂದಿದ್ದರೂ ಕೂಡ ಅದಕ್ಕೆ ಕೋರ್ಟಿನಿಂದ ತಡೆ ಬಂದಿದೆ. ಇಂಥ ಹಕ್ಕನ್ನು ತೆಗೆಯತಕ್ಕಂಥಾದ್ದು ಸರಿ ಎಂಬ ತೀರ್ಮಾನ ಈಗ ಕೋರ್ಟಿನಲ್ಲಿ ಕೊಟ್ಟಿದ್ದಾರೆ. ಇದಕ್ಕಾಗಿ ಸರಕಾರ ಒಂದು ಕಾರ್ಯಕ್ರಮ ನಿರ್ದಿಷ್ಟ

†Indicates that the speeches or remarks have not been revised by the member concerned.

(ಶ್ರೀ ಎಂ. ಸಿ. ಬಸಪ್ಪ)

ವಾಗಿ ಹಾಕಿಕೊಳ್ಳಬೇಕಾದುದು ಅತ್ಯಗತ್ಯ ಎಂದು ನಾನು ಅಂದುಕೊಂಡಿದ್ದೇನೆ. ಇಂದು ಒಂದು ಗ್ರಾಮದ ಆಡಳಿತ ನೋಡಿದರೆ ಪುರಾತನ ಇಲಾಖೆಯಲ್ಲಿ ಪುರಾತನ ಮಾರ್ಗವನ್ನೇ ಇವತ್ತಿನ ದಿವಸ ಕೂಡ ಅನುಸರಿಸುತ್ತಿದ್ದಾರೆ.

SRI V. M. DEO (Gubbi).—Sir, there is no quorum.

(The bell was rung and there was quorum).

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈ ದಿನ ಈ ಇಲಾಖೆಯಲ್ಲಿ ಮಹತ್ತರವಾದ ಬದಲಾವಣೆಯಾಗಬೇಕಾದುದು ಅತ್ಯಗತ್ಯವಾಗಿದೆ. ಗ್ರಾಮ ಮಟ್ಟದಲ್ಲಿ ಶಾನುಭೋಗ ಪಟೇಲ್ ಏನು ಕೆಲಸ ಮಾಡುತ್ತಾರೆ ಎಂಬುದನ್ನು ಈಗಾಗಲೇ ಶ್ರೀಮಾನ್ ಕೇಶವಮೂರ್ತಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಗ್ರಾಮಗಳಲ್ಲಿ ಅಗತ್ಯವಾಗಿ ಇಡಬೇಕಾದಂಥ ರಿಕಾರ್ಡು ಬಗ್ಗೆ ಹೆಚ್ಚಿನ ಜಾಗರೂಕತೆ ವಹಿಸಿಲ್ಲ. ಅವರನ್ನು ನಿವೃತ್ತಿಗೊಳಿಸಲಾಗುತ್ತದೆ ಮತ್ತು ತರಬೇತಿ ಪಡೆದಂಥ ಅಧಿಕಾರಿಗಳು ಜವಾಬ್ದಾರಿ ಹೊರುತ್ತಾರೆ ಮುಂದೆ ಸರಿ ಹೋಗುತ್ತದೆ ಎಂದು ಸರಕಾರ ಸಮಾಧಾನ ಕೊಡುತ್ತದೆ. ಇದು ಸಮಾಧಾನವಾಗಿಯೇ ಉಳಿಯಬಾರದು, ಇದು ಕಾರ್ಯರೂಪದಲ್ಲಿ ಬರಬೇಕು ಎಂದು ಹೇಳುತ್ತೇನೆ. ಗ್ರಾಮ ರಿಕಾರ್ಡನಲ್ಲಿ ಮುಖ್ಯ ಅಂಶ ಅಂದರೆ, ಜಮೀನಿನ ಬಗ್ಗೆ ಹದ್ದುಬಸ್ತು ಬೌಂಡರಿ ರಿಕಾರ್ಡು ಸರಿಯಾಗಿ ಇಡತಕ್ಕ ಜವಾಬ್ದಾರಿ ಇದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇನ್ನು ರೆವೆನ್ಯೂ ಇನ್‌ಸ್ಪೆಕ್ಟರ್ ಮತ್ತು ತಹಶೀಲದಾರ ಇವರಲ್ಲಿ ಕೂಡ ನಿರುತ್ಸಾಹ ಕಂಡುಬರುತ್ತದೆ. ಅವರು ಜವಾಬ್ದಾರಿಯಿಂದ ತಮ್ಮ ಕೆಲಸ ನಿರ್ವಹಿಸುತ್ತಿಲ್ಲ. ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿದಂತಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ. ಯಾವುದಾದರೂ ಒಬ್ಬ ರೈತನಿಗೆ ಏನಾದರೂ ಕೆಲಸವಾಗಬೇಕಾದರೆ ಅವನು ರೆವೆನ್ಯೂ ಇನ್‌ಸ್ಪೆಕ್ಟರನನ್ನು ಹುಡುಕುವುದೇ ಒಂದು ಸಮಸ್ಯೆಯಾಗಿದೆ. ರೆವೆನ್ಯೂ ಇನ್‌ಸ್ಪೆಕ್ಟರನಿಗೆ ಆಫೀಸು ಇಲ್ಲ. ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಸಹ ಇರುವುದಿಲ್ಲ ; ಎಲ್ಲಿಯೋ ಪಟ್ಟಣದಲ್ಲಿ ಇರುತ್ತಾನೆ. ಅವನ ಆಫೀಸು ಅಂದರೆ ಅವನ ಸೈಕಲ್ಲಿಗೆ ಇರತಕ್ಕ ಕೈಚೀಲ. ಅದರಲ್ಲಿ ಎಲ್ಲ ಕಾಗದಗಳನ್ನೂ ಇಟ್ಟಿರುತ್ತಾನೆ. ರೈತನಿಗೆ ಏನಾದರೂ ರಿಕಾರ್ಡು ಬೇಕಾದರೆ ದಾರಿಯಲ್ಲೇ ನಿಂತುಕೊಂಡು ಬರೆದುಕೊಟ್ಟು ಬಿಡುತ್ತಾನೆ. ಇದು ಸರಿಯಲ್ಲ. ರೆವೆನ್ಯೂ ಇನ'ಸ್ಪೆಕ್ಟರಿಗೆ ಒಂದು ಆಫೀಸು ಕೊಡತಕ್ಕಂಥ ಏರ್ಪಾಡು ಮಾಡಬೇಕು. ರೈತನಿಗೆ ಬೇಕಾಗುವ ರಿಕಾರ್ಡು ದೊರೆಯುತಕ್ಕ ವ್ಯವಸ್ಥೆ ಮಾಡಬೇಕು. ರೆವೆನ್ಯೂ ಆಡ್ಮಿನಿಸ್ಟ್ರೇಷನ್ ಇವತ್ತಿನ ದಿವಸ ಚೆನ್ನಾಗಿಲ್ಲ. ಇದಕ್ಕಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ತಹಶೀಲದಾರರಿಗೆ ಹಿಂದಕ್ಕೆ ದೊಡ್ಡ ಪ್ರಮಾಣದಲ್ಲಿ ಮರ್ಯಾದೆ ಇತ್ತು. ಇಂದು ಅದು ಹೋಗಿದೆ ಎಂಬ ಭಾವನೆ ತಪ್ಪು. ಅವರ ಕರ್ತವ್ಯದಲ್ಲಿ ಮಾತ್ರ ಬದಲಾವಣೆಯಾಗಿದೆ. ಅಭಿವೃದ್ಧಿ ಕಾರ್ಯ ಮಾಡುವುದಕ್ಕೋಸ್ಕರ ಒಂದು ಇಲಾಖೆಯಾಗಿದೆ ಅಂದಮಾತ್ರಕ್ಕೇ ಹಾಗೆ ಹೇಳುವುದು ಸರಿಯಲ್ಲ. ಹಿಂದೆ ಯಾವ ರೀತಿ ಹಳ್ಳಿಗಳಿಗೆ ಹೋಗುತ್ತಿದ್ದರೋ ಸಂಪರ್ಕ ಇಟ್ಟುಕೊಂಡಿದ್ದರೋ ಆ ರೀತಿ ಇಟ್ಟುಕೊಳ್ಳಲಿ. ತಪ್ಪು ಭಾವನೆ ಅಧಿಕಾರಿಗಳಲ್ಲಿ ಇರಬಾರದು ಹಿಂದೆ ಇದ್ದ ವೈಭವ ಇಂದೂ ಕೂಡ ಇಟ್ಟುಕೊಳ್ಳಲಿ. ಆದರೆ ಕರ್ತವ್ಯ ನಿರ್ವಹಿಸುವುದರಕಡೆಗೆ ಗಮನಕೊಡುವ ಮನೋಭಾವನೆ ಇರಬೇಕು. ಯಾವ ಜವಾಬ್ದಾರಿ ಕೆಲಸ ಕೊಟ್ಟರೂ ಹೃತ್ಪೂರ್ವಕವಾಗಿ ಸಂತೋಷದಿಂದ ಜವಾಬ್ದಾರಿ ನಿರ್ವಹಿಸತಕ್ಕ ಮನೋಭಾವ ತಾಳತಕ್ಕಂಥಾದ್ದು ಅವಶ್ಯಕ ಎಂದು ಹೇಳಬಯಸುತ್ತೇನೆ.

ರೈತನಿಗೆ ಮುಖ್ಯವಾಗಿ ಬೇಕಾದುದು ರಿಕಾರ್ಡ್ ಆಫ್ ರೈಟ್ಸ್. ಇದರ ಬಗ್ಗೆ ಈ ಸಭೆಯಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಒಂದೊಂದು ತಾಲ್ಲೂಕಿನಲ್ಲಿ ಸಾವಿರಗಟ್ಟಲೆ ಪೆಂಡಿಂಗ್ ಕೇಸಸ್ ಇವೆ. ಈ ಇಲಾಖೆಯಲ್ಲಿ ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ. ರಿಕಾರ್ಡ್ ಆಫ್ ರೈಟ್ಸ್ ಆರ್. ಆರ್. 5 ಆವಶ್ಯಕವಾಗಿ ಬೇಕಾಗಿದೆ ಎಂದು ಒಬ್ಬ ರೈತ ಅರ್ಜಿ ಕೊಟ್ಟರೆ ಖಂಡಿತವಾಗಿ ನಾಲ್ಕೈದು ತಲೆಮಾರು ಹಿಂದಿನ ಅಂದರೆ, ಅವನ ತಾತನ ಮುತ್ತಾತನ ಹೆಸರಿನಲ್ಲಿ ಆರ್. ಆರ್. 5 ಮತ್ತು ಆರ್. ಆರ್. 6 ಸಿಕ್ಕುತ್ತದೆ. ಆವನ ಹೆಸರಿನಲ್ಲಿ ಖಾತೆ ಇರುವುದಿಲ್ಲ. ಇದಕ್ಕೆ ಬಹುಶಃ ಅವರು ಹೇಳುವುದು ನಮ್ಮ ಜವಾಬ್ದಾರಿ ಏನೂ ಇಲ್ಲ, ಎಲ್ಲಾ ಅವನದ್ದೇ ಎಂದು. ರೆಕಾರ್ಡ್ ಆಫ್ ರೈಟ್ಸ್ ಎಂದು ಏನು ಇದೆ ಅದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವುದು ಸರ್ಕಾರದವರಮೇಲೆ ಇದೆ. ಸಂಬಂಧಪಟ್ಟವರು ತಮ್ಮ ಜವಾಬ್ದಾರಿಯೆಂದು ತಿಳಿದುಕೊಂಡು ಮಾಡಬೇಕೇ ಹೊರತು, ಅವಿದ್ಯಾವಂತನಾದ. ತಿಳಿವಳಿಕೆ ಇಲ್ಲದ ರೈತನಮೇಲೆ ಜವಾಬ್ದಾರಿ ಹಾಕುವುದು ಸಾಧುವಲ್ಲವೆಂದು ತಿಳಿಸಬಯಸುತ್ತೇನೆ.

ನಮ್ಮ ಸಬ್‌ಡಿವಿಷನ್ ಆಫೀಸರ್‌ಗಳ ವಿಚಾರದಲ್ಲಿ ಮಾತನಾಡಬೇಕಾದರೆ, ಇವರಲ್ಲಿ ಕೆಲವು ಮಹನೀಯರುಗಳು ಟಪಾಲ್ ಆಫೀಸ್ ಇದ್ದ ಹಾಗೆ ಇದ್ದಾರೆ. ಇವರುಗಳಿಗೆ ಹೆಚ್ಚಿನ ಜವಾಬ್ದಾರಿ ಇಲ್ಲ. ಇವರ ಕೆಲಸವೆಂದರೆ ಜಿಲ್ಲಾ ಕಛೇರಿಗೂ ತಾಲ್ಲೋಕ್ ಕಛೇರಿಗೂ ಕಾಗದಗಳನ್ನು ಫರ್‌ವಾರ್ಡ್ ಮತ್ತು ಸಬ್‌ಮಿಟ್

ಮಾಡುವ ಒಂದೇ ಕೆಲಸವೆಂದು ತಿಳಿದುಕೊಂಡಿದ್ದಾರೆ. ಇವರುಗಳು ಸಹ ತಮ್ಮ ಜವಾಬ್ದಾರಿಯನ್ನು ಹೆಚ್ಚಿನ ರೀತಿಯಲ್ಲಿ ನಿರ್ವಹಿಸುತ್ತಿಲ್ಲ. ನಮ್ಮ ಲ್ಯಾಂಡ್ ಅಕ್ವಿಷಿಷನ್ ಬಗ್ಗೆ ಹೇಳಬೇಕಾದರೆ, ನಮ್ಮ ಸೆಂಟ್ರಲ್ ಆಕ್ಟ್ ಏನಿದೆ, ಅದರ ಪ್ರಕಾರ ಲ್ಯಾಂಡ್ ಅಕ್ವಿಷಿಷನ್ ಕೆಲಸ ಮಾಡತಕ್ಕಂಥವರು ನಮ್ಮ ಅಸಿಸ್ಟೆಂಟ್ ಕಮೀಷನರ್‌ಗಳು. ಇವರು ಲ್ಯಾಂಡ್ ಅಕ್ವಿಷಿಷನ್ ಆಕ್ಟ್ ಪ್ರಕಾರ ಕೇಸುಗಳನ್ನು ಎಷ್ಟು ಬೇಗ ಡಿಸ್‌ಪೋಸ್ ಮಾಡಿದ್ದಾರೆ ಎಂದು ಕೇಳುವ ಪಕ್ಷದಲ್ಲಿ 8 ವರ್ಷ, 10 ವರ್ಷ, 15 ವರ್ಷಗಳಿಂದ ನಡೆಯುತ್ತಿರುವ ರೆಕಾರ್ಡ್ಸ್‌ಗಳು ಒಂದಲ್ಲ, ನೂರು ಅಲ್ಲ, ಸಾವಿರಗಟ್ಟಲೆ ಇವೆ. ಅದಕ್ಕೆ ಕಾರಣವನ್ನು ಸಂಬಂಧಪಟ್ಟವರು ಏನು ಹೇಳುತ್ತಾರೆಂದರೆ, ಲ್ಯಾಂಡ್ ಅಕ್ವಿಷಿಷನ್ ಆಕ್ಟ್ ಏನಿದೆ, ಇದು ಸೆಂಟ್ರಲ್ ಆಕ್ಟ್, ಆದ್ದರಿಂದ ಬಹಳ ನಿಧಾನವಾಗಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು. ಇದೇ ಕಾರಣದಿಂದ ಒಂದು ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದು ಸರಿಯಾದ ಭಾವನೆಯಲ್ಲ ಎಂದು ನನ್ನ ಅಭಿಪ್ರಾಯವಾಗಿದೆ. ಬಹುಶಃ ನಾವು ಅನೇಕ ನಡೆವಳಿಕೆಗಳನ್ನು ನಮ್ಮ ಸಂಸ್ಥಾನದಲ್ಲಿ ಸೆಂಟ್ರಲ್ ಆಕ್ಟ್‌ಗಳ ಪ್ರಕಾರವೇ ನಡೆಸುತ್ತೇವೆ.

ಜುಡಿಷಿಯಲ್ ಇಲಾಖೆಯನ್ನು ತೆಗೆದುಕೊಂಡರೆ, ಸಿ. ಆರ್. ಪಿ. ಸಿ. ಮತ್ತು ಸಿ. ಪಿ. ಸಿ. ಇವುಗಳ ಸೆಂಟ್ರಲ್ ಆಕ್ಟ್‌ಗಳು. ಒಂದು ಕೋರ್ಟಿನ ಪ್ರೊಸಿಡಿಂಗ್ಸ್ ತೆಗೆದುಕೊಳ್ಳುವ ಪಕ್ಷದಲ್ಲಿ ನಿರ್ಧಿಷ್ಟವಾದ ಒಂದು ನಿಯಮವನ್ನು ಅವರು ಹಾಕಿಕೊಂಡಿರುತ್ತಾರೆ. ಒಂದು ಕೇಸ್ ವಿಚಾರಣೆಯಾಗಿ ಅದರ ಬಗ್ಗೆ ತೀರ್ಪನ್ನು ಒಂದು ವರ್ಷದಲ್ಲಿ ಕೊಡಬೇಕು ಎಂದು ಒಂದು ನಿಯಮವಿರುತ್ತದೆ. ಅದಕ್ಕಿಂತ ಹೆಚ್ಚು ಕಾಲಾವಕಾಶವನು ತೆಗೆದುಕೊಂಡರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗೆ ಏತಕ್ಕೆ ಹೆಚ್ಚಿನ ಕಾಲಾವಧಿ ಬೇಕಾಗುತ್ತದೆ ಎಂದು ಎಕ್ಸ್‌ಪ್ಲನೇಷನ್ ಕೊಡಬೇಕಾಗುತ್ತದೆ. ಅವರು ಅವರ ಇಲಾಖೆಯಲ್ಲಿ ಒಂದು ಕಾಲದ ಪರಿಮಿತಿಯನ್ನು ಇಟ್ಟುಕೊಂಡಿರುತ್ತಾರೆ. ನಮ್ಮ ಅಧಿಕಾರಿಗಳು ಸೆಂಟ್ರಲ್ ಆಕ್ಟ್‌ನ ಒಂದು ಅಡಚಣೆಯಿರುವುದರಿಂದ, ಕೇಸ್‌ಗಳನ್ನು ಬೇಗ ಡಿಸ್‌ಪೋಸ್ ಮಾಡುವುದಕ್ಕಾಗುವುದಿಲ್ಲವೆಂಬ ಒಂದು ವಾದವನ್ನು ಹೇಳಿ ಒಂದೊಂದು ಅಕ್ವಿಷಿಷನ್ ಆಕ್ಟ್‌ಗಳ ಬಗ್ಗೆ 10—15—20 ವರ್ಷಗಳ ಕಾಲದವರೆಗೆ ತಳ್ಳುತ್ತಾ ಇರುತ್ತಾರೆ. ಈ ರೀತಿಯಾದರೆ ಎಷ್ಟು ಜನರಿಗೆ, ಎಷ್ಟು ಪಾರ್ಟಿಗಳಿಗೆ ಅನ್ಯಾಯವಾಗುತ್ತದೆ, ಮತ್ತು ದೇಶಕ್ಕೆ ದ್ರೋಹ ಮಾಡಿದಹಾಗೆ ಆಗುತ್ತದೆ. ನಾವು ನಮ್ಮ ಕರ್ತವ್ಯವನ್ನು, ಜನರ ಮನವಿಯನ್ನು ಪರಿಪಾಲನೆ ಮಾಡಬೇಕು ಎಂಬ ಬಗ್ಗೆ ಅಧಿಕಾರಿಗಳಲ್ಲಿ ಕಂಡುಬರುವುದಿಲ್ಲ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಿಂದೆ ಒಂದು ಸಾರಿ ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಕ್ಯಾಲೆಂಡರ್ ಆಫ್ ಇವೆಂಟ್ಸ್ ಇನ್‌ಸಿಸ್ಟ್ ಮಾಡಬೇಕು ; ಲ್ಯಾಂಡ್ ಅಕ್ವಿಷಿಷನ್ ಆಕ್ಟ್ ಪ್ರಕಾರ ಬಿಲ್ ಮಾಡುವುದಕ್ಕೆ ಒಂದು ವರ್ಷದಲ್ಲಿ ಸಾಧ್ಯವಿಲ್ಲವೆಂದು ಹೇಳಿದಿರಿ. ನಮ್ಮ ಅಧಿಕಾರಿಗಳಿಗೆ ಒಂದು ವರ್ಷವಲ್ಲದಿದ್ದರೆ ಎರಡು ವರ್ಷ ಕೊಡಿ, ಮೂರು ವರ್ಷ ಕೊಡಿ, ಆದರೆ 10—15 ವರ್ಷ ತೆಗೆದುಕೊಂಡರೆ ಇದರಲ್ಲಿ ಏನಾದರೂ ಅರ್ಥವಿದೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ. ಇನ್ನು ಮೇಲ್ಪಟ್ಟದವರು ಈ ವಿಚಾರದಲ್ಲಿ ಒಂದು ಕಾಲದ ಮಿತಿಯನ್ನು ಇಟ್ಟು, ಅದಕ್ಕಿಂತ ಹೆಚ್ಚು ಕಾಲವನ್ನು ತೆಗೆದುಕೊಳ್ಳುವವರಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಒಂದು ರೂಲ್ಸ್ ಮಾಡಿದರೆ ಒಳ್ಳೆಯದು ಎಂದು ತಿಳಿಸುತ್ತೇನೆ.

ಇನ್ನು ಫ್ಯಾಮಿನ್ ರಿಲೀಫ್ ವರ್ಕ್ಸ್ ವಿಚಾರದಲ್ಲಿ ಎಲ್ಲೆಲ್ಲಿ ಮಳೆಯ ಅಭಾವದಿಂದ, ನಾನಾ ಸನ್ನಿವೇಶಗಳಿಂದ ಜನರು ಬರಗಾಲಕ್ಕೆ ತುತ್ತಾಗಿದ್ದಾರೋ ಅವರಿಗೆ ಅನುಕೂಲಮಾಡಿಕೊಡಬೇಕು ಎಂದು ಅಲ್ಲಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡುವುದರ ಮೂಲಕ, ಕೆಲಸ ಇಲ್ಲದೆ ಇರುವ ಜನರಿಗೆ ಕೆಲಸ ಕೊಡಬೇಕು ಎಲ್ಲಿ ದನಕರುಗಳಿಗೆ ಫಾಡೆರ್, ಹುಲ್ಲು ಇಲ್ಲವೋ ಅಂಥಹ ಪ್ರದೇಶಗಳಿಗೆ ಹುಲ್ಲನ್ನು ಒದಗಿಸುವ ಒಂದು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಒಂದು ಆಕ್ಟ್ ಪಾಸ್ ಮಾಡಿ, ಈ ಸಾಲಿನ ಬಡ್ಜೆಟ್‌ನಲ್ಲಿ ಒಂದು ಅವಕಾಶವನ್ನು ಮಾಡಿದ್ದೀರಿ ಬಹುಶಃ ಅದರಲ್ಲಿ ಕಾಣುವ ಒಂದು ತೊಡಕು ಎಂದರೆ, ಈ ಕಾಮಗಾರಿಯ ಜವಾಬ್ದಾರಿಯನ್ನು ಸರ್ಕಾರದವರು ಎರಡು ಇಲಾಖೆಯವರಿಗೆ ಕೊಟ್ಟಿದ್ದಾರೆ. ರೆವಿನ್ಯೂ ಇಲಾಖೆಯವರು 64ನೇ ಹೆಡ್ ಪ್ರಕಾರ ಹಣವನ್ನು ತೆಗೆದು ಬಿ. ಡಿ. ಓ. ಗಳಿಗೆ ಕೊಡತಕ್ಕದ್ದು. ಪೇಮೆಂಟ್ ಮಾಡುವ ಜವಾಬ್ದಾರಿ, ಡೆವಲಪ್‌ಮೆಂಟ್ ಇಲಾಖೆಯ ಮುಖಾಂತರ ಗ್ರಾಮ ಸೇವಕರುಗಳಿಗೆ ಕೊಟ್ಟು ಅವರು ಮಾಡಬೇಕೆಂದು ಒಂದು ನಿರೂಪಣೆ ಮಾಡಿದ್ದೀರಿ. ಬಹುಶಃ ಈ ಎರಡು ಇಲಾಖೆಯವರಿಗೆ ಜವಾಬ್ದಾರಿಯನ್ನು ವಹಿಸಿರುವುದರಿಂದ ರೈತರಿಗೆ ಸ್ವಲ್ಪ ಅಲ್ಲಲ್ಲಿ ತೊಂದರೆಯಾಗುತ್ತಿದೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ತಾಲ್ಲೋಕಿನ ಒಬ್ಬ ರೆವಿನ್ಯೂ ಅಧಿಕಾರಿ ಒಂದೆರಡು ಸಾವಿರ ರೂಪಾಯಿಗಳನ್ನು ಡ್ರಾಮಾಡಿ, ಬಿ. ಡಿ. ಓ. ಗೆ ಕೊಟ್ಟರು. ಈ ಬಿ. ಡಿ. ಓ. ಮುಂದೆ ಗ್ರಾಮಸೇವಕರಿಗೆ ಕೊಟ್ಟರು. ಇವರು ನಾಮಿನಲ್ ರೋಲ್ ಸಬ್‌ಮಿಟ್ ಮಾಡುವಹಾಗೆ ಇಲ್ಲ. ಇದನ್ನು ಸಬ್‌ಮಿಟ್ ಮಾಡದೆ ಹಣ ಡ್ರಾ ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿಯಾದರೆ ಮಾರ್ಚ್ 31ರೊಳಗೆ ಸರ್ಕಾರದವರು ರಿಲೀಫ್ ವರ್ಕ್ಸ್‌ಗೆ ಎಷ್ಟು ರೂಪಾಯಿಗಳ ಪರಿಹಾರ ಕೊಡಬೇಕೆಂದು ಮಾಡಿದ್ದರೋ ಅಷ್ಟನ್ನು ಖರ್ಚುಮಾಡುವುದಕ್ಕಾಗುವುದಿಲ್ಲ. ಇದರಿಂದ ಗ್ರಾಮಗಳಲ್ಲಿ ತೊಂದರೆ ಪಡುವ ಜನರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಈ ಹಣದ ಹಂಚಿಗೆ ಎರಡು ಇಲಾಖೆಗಳ ಮಧ್ಯೆ ಸಿಕ್ಕಿಕೊಂಡು, ಇರುವುದರಿಂದ ನೀವು ಇಟ್ಟುಕೊಂಡಿರುವ ಉದ್ದೇಶವನ್ನು ಪೂರೈಸುವುದಕ್ಕಾಗುವುದಿಲ್ಲ. ಆದ್ದರಿಂದ ಸೂಕ್ತ ಬದಲಾವಣೆಗಳನ್ನು ಮಾಡುವುದು ಒಳ್ಳೆಯದು. ಕ್ಷಾಮ ಪರಿಹಾರ ಕಾರ್ಯಗಳಲ್ಲಿ ಜನರಿಗೆ ಪರಿಹಾರ ದೊರಕಬೇಕಾದರೆ ಯಾವುದಾದರೂ

(ಶ್ರೀ ಎಂ. ಸಿ. ಬಸಪ್ಪ)

ಒಂದು ಇಲಾಖೆಗೆ ಜವಾಬ್ದಾರಿಯನ್ನು ವಹಿಸಿದರೆ, ನೀವು ಇಟ್ಟಿರುವ ಹಣ ಸರಿಯಾಗಿ ವಿನಿಯೋಗವಾದಂತೆ ಆಗುತ್ತದೆ. ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ, ನನಗೆ ಇಷ್ಟು ಕಾಲ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ಅಧ್ಯಕ್ಷ ಮಹಾಶಯರೆ ಈ ರಾಜ್ಯದ ರೆವಿನ್ಯೂ ಇಲಾಖೆ ದೇಶದ ಪ್ರಗತಿಗೆ, ದೇಶದ ಆಗುಹೋಗುಗಳಿಗೆ ಬಹಳ ಮುಖ್ಯವಾದ ಇಲಾಖೆ ಎನ್ನುವ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ರೈತರುಗಳಿಗೆ ಮತ್ತು ಗ್ರಾಮಾಂತರವಾಸಿಗಳಿಗೆ ಬಹಳ ನಿಕಟ ಸಂಬಂಧವಿರತಕ್ಕಂಥ ಒಂದು ಸಂಸ್ಥೆಯೆಂದರೆ, ಒಂದು ಇಲಾಖೆಯೆಂದರೆ ಈ ರೆವಿನ್ಯೂ ಇಲಾಖೆ. ಈ ರೆವಿನ್ಯೂ ಇಲಾಖೆ ಎಲ್ಲಿಯ ವರೆಗೆ ಅಚ್ಚುಕಟ್ಟಾಗಿ, ಚೆನ್ನಾಗಿ ಕೆಲಸಮಾಡುತ್ತದೋ, ಅಲ್ಲಿಯವರೆಗೆ ರೈತನ ಕ್ಷೇಮಚಿಂತನೆ ಅಚ್ಚುಕಟ್ಟಾಗಿ, ಚೆನ್ನಾಗಿ ಆಗುತ್ತದೆ ಎಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ಅದರಲ್ಲೂ ಪ್ರಾಮುಖ್ಯವಾಗಿ ತಾಲ್ಲೋಕ್ ಲೆವಲ್‌ನಲ್ಲಿ ಕೆಲಸಕಾರ್ಯಗಳು ಬಹಳ ಚೆನ್ನಾಗಿ ನಡೆಯಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ತಾಲ್ಲೋಕ್ ಆಫೀಸರ್‌ಗಳು ಮತ್ತು ಇತರ ಅಧಿಕಾರಿಗಳು ಬಹುಮಟ್ಟಿಗೆ ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಾರೆ, ಬಹಳ ದಕ್ಷತೆಯಿಂದ ಕೆಲಸಮಾಡುತ್ತಾರೆ ಎಂದು ಹೇಳುತ್ತೇನೆ. ಆದರೂ ಸಹ ಎಷ್ಟು ದಕ್ಷತೆಯಿಂದ ಕೆಲಸಮಾಡು ತ್ತಾರೆ ಎಂದು ನಿರೀಕ್ಷಣೆ ಮಾಡಿದ್ದೆನೋ ಅಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಆದ್ದ ರಿಂದ ಸರ್ಕಾರದವರು ಈ ವಿಷಯದಲ್ಲಿ ಕಣ್ಣಲ್ಲಿ ಕಣ್ಣು ಇಟ್ಟು ನೋಡಿಕೊಳ್ಳಬೇಕು ಎಂದು ಅಪೇಕ್ಷಿಸುತ್ತೇನೆ.

ತಾಲ್ಲೂಕು ಲೆವೆಲ್ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ಹೇಳುವುದಾದರೆ ಪ್ರಥಮತಃ ತಾಲ್ಲೂಕು ಲೆವೆಲ್‌ನಲ್ಲಿ ರೈತನ ಏಳಿಗೆಗೋಸ್ಕರ ಜನಗಳ ಕ್ಷೇಮಕ್ಕೋಸ್ಕರ ಏನು ರಿಕಾರ್ಡ್ ಮಾಡುತ್ತಾರೆ, ಏನು ಕೆಲಸಕಾರ್ಯಗಳನ್ನು ಮಾಡುತ್ತಾರೆ ಅದು ಅನೇಕ ಹಂತಗಳನ್ನು ಹತ್ತಿಕೊಂಡು ಬಂದು ಸರ್ಕಾರದವರಿಗೂ ಕೂಡ ಅದೇ ಒಂದು ಕಟ್ಟುನಿಟ್ಟಾದ ರಿಕಾರ್ಡ್ ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ತಾಲ್ಲೂಕು ಆಫೀಸಿನಲ್ಲಿ ರೆವೆನ್ಯೂ ಇನ್‌ಸ್ಪೆಕ್ಟರ್ ಏನು ಗ್ರಾಮಾಂತರಗಳಲ್ಲಿ ರೈತರ ಪ್ರಯೋಜನಕ್ಕೋಸ್ಕರ, ರೈತನ ಯೋಗಕ್ಷೇಮಕ್ಕೋಸ್ಕರ, ರಿಕಾರ್ಡ್ ಮಾಡುತ್ತಾರೋ ಅದು ಸರ್ವೇ ಸಾಧಾರಣವಾಗಿ ಇತರ ಹಂತಗಳಲ್ಲಿ ಬದಲಾವಣೆ ಆಗುವುದಿಲ್ಲ. ಅದಕೋಸ್ಕರ ಅಲ್ಲಿ ಏನು ಮಾಡುತ್ತಾರೆ ಎಂಬುದು ಪ್ರಾಮುಖ್ಯವಾದ ವಿಚಾರ. ಒಂದು ಜಮೀನನ್ನು ಹೊಸದಾಗಿ ಗ್ರಾಂಟು ಮಾಡತಕ್ಕ ವಿಚಾರವಾಗಲಿ, ಪೋಡಿ ರಿಕಾರ್ಡ್ ಮಾಡತಕ್ಕ ವಿಚಾರದಲ್ಲಾಗಲಿ ಅಥವಾ ಗ್ರಾಮಕ್ಕೆ ಬೇಕಾದ ಇತರ ಸೌಕರ್ಯದ ವಿಚಾರದಲ್ಲಾಗಲಿ ಗ್ರಾಮದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಏನು ಮಹಜರು ಇತ್ಯಾದಿಗಳನ್ನು ಮಾಡುತ್ತಾರೋ ಅದು ಅಲ್ಲಿ ಕ್ರಮವಾಗಿ ಇರಬೇಕು, ನಿಷ್ಪಕ್ಷಪಾತವಾಗಿ ಇರಬೇಕು, ಸತ್ಯ ಸಂಧತೆಯಿಂದ ಕೂಡಿರಬೇಕು ಎಂದು ನಾನಾದರೂ ಅಪೇಕ್ಷಿಸುತ್ತೇನೆ. ಈ ದೃಷ್ಟಿಯಿಂದ ರೆವೆನ್ಯೂ ಇನ್‌ಸ್ಪೆಕ್ಟರ್, ತಾಸೀಲ್ದಾರರ ಆಫೀಸಿನಲ್ಲಿ ಕೆಲಸಮಾಡತಕ್ಕಂಥವರು ಯೋಗ್ಯರೂ, ದಕ್ಷರೂ ಆಗಿರಬೇಕು, ನಿಸ್ಪೃಹರೂ ಆಗಿರಬೇಕು, ಸತ್ಯಸಂಧರೂ ಆಗಿರಬೇಕು ಎಂದು ಅಪೇಕ್ಷಿಸುತ್ತೇನೆ. ಅವರು ಹಾಗಿಲ್ಲದೆ, ಅಡಚಣೆ ಆದರೆ, ತೊಂದರೆ ಆದರೆ, ಯಾರಾದರೂ ದಾರಿಬಿಟ್ಟು ಹೋದರೆ, ಅದರಿಂದ ಅಪಾಯ ತಟ್ಟುತ್ತದೆ. ಆದ್ದರಿಂದ ಮೇಲಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಅವರಮೇಲೆ ನಿಗಾ ಇರಬೇಕು ಎಂದು ಅಪೇಕ್ಷಿಸುತ್ತೇನೆ. ಈ ದೃಷ್ಟಿ ಯಿಂದ ತಾಲ್ಲೂಕು ಆಫೀಸಿನಲ್ಲಿ ಹೇಗೆ ನಡೆಯುತ್ತಾ ಇದೆ, ಎಷ್ಟರಮಟ್ಟಿಗೆ ದಾಖಲಾತಿಯನ್ನು ಇಟ್ಟಿದ್ದಾರೆ, ಎಷ್ಟರಮಟ್ಟಿಗೆ ಗ್ರಾಮಾಡಳಿತವನ್ನು ನಡೆಸಿಕೊಂಡು ಹೋಗುತ್ತಾ ಇದ್ದಾರೆ ಎನ್ನುವ ಮೇಲ್ವಿಚಾರಣೆಯನ್ನು ಮೇಲ್ಪಟ್ಟ ಅಧಿಕಾರಿಗಳು, ಸಬ್‌ಡಿವಿಷನ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಡಿವಿಷನಲ್ ಕಮೀಷನರ್ಸ್ ಮತ್ತು ಸರ್ಕಾರದವರು ಕೂಡ ಆಗಾಗ್ಗೆ ಇನ್‌ಸ್ಪೆಕ್ಷನ್ ನಡೆಸಿ ಸರಿಯಾಗಿ ನಡೆಯುತ್ತಿದೆಯೋ ಎಂದು ನೋಡಿಕೊಳ್ಳಬೇಕು. ಎಲ್ಲಿಯಾದರೂ ಒಂದು ಆಫೀಸಿನಲ್ಲಿ ಒಬ್ಬ ಗುಮಾಸ್ತ ಎಡವಿದರೆ, ಅದರ ಪರಿಣಾಮ ದುಷ್ಪರಿಣಾಮವಾಗುತ್ತದೆ, ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ; ಮತ್ತು ಗ್ರಾಮವಾಸಿಗಳಿಗೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಇನ್‌ಸ್ಪೆಕ್ಷನ್ ಮತ್ತು ಚೆಕಿಂಗ್ ಬಹಳ ಚೆನ್ನಾಗಿ ನಡೆಯಬೇಕು ಎಂದು ನಾನು ಅಪೇಕ್ಷಿಸುತ್ತೇನೆ. ನಾನು ಅನೇಕವೇಳೆ ರೆವೆನ್ಯೂ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ತಾಲ್ಲೂಕು ಆಫೀಸಿಗೆ ಸರ್‌ಪ್ರೈಸ್ ವಿಸಿಟ್ಸ್, ಕೊಡಬೇಕು, ಹೇಗೆ ಆಫೀಸ್ ನಡೆಯುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು ಅವರು ಹಾಗೆ ಮಾಡುತ್ತಾರೆಂದು ನಂಬಿಕೊಂಡಿದ್ದೇನೆ. ಹಿಂದೆ ಮಂತ್ರಿಗಳು, ಉಪಮಂತ್ರಿಗಳು ಇತರೇ ಅಧಿಕಾರಿಗಳು ಎಷ್ಟರಮಟ್ಟಿಗೆ ಆ ಸಂಸ್ಥೆಗಳಿಗೆ ಸರ್‌ಪ್ರೈಸ್ ವಿಸಿಟ್ಸ್ ಕೊಡುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರವಾಗಿ ಸರ್ವೇ ಸಾಧಾರಣವಾಗಿ ವಿಸಿಟ್ ಕೊಡುತ್ತಾರೆ ಎಂದು ಹೇಳಿದರು. ಆ ಉತ್ತರ ನನಗಾದರೂ ಸಮಾಧಾನಕರ ವಾಗಿಲ್ಲ. ಯಾವ ಆಫೀಸಿನಲ್ಲಿಯೂ ಕೂಡ ಯಾವ ಕ್ಷಣದಲ್ಲಿ ಯಾವ ಮಂತ್ರಿಗಳು ಬರುತ್ತಾರೊ, ಯಾವ ಅಧಿಕಾರಿಗಳು ಬರುತ್ತಾರೊ, ನಮ್ಮ ಕೆಲಸ ಕಾರ್ಯಗಳನ್ನು ನೋಡುತ್ತಾರೊ ಎನ್ನುವ ಭಯ ಇದ್ದರೆ, ಅಲ್ಲಿಯ ಕೆಲಸ ಅಚ್ಚುಕಟ್ಟಾಗಿ ಆಗುತ್ತದೆ ಎಂದು ನನಗೆ ತೋಚುತ್ತದೆ. ಅನೇಕ ತಾಲ್ಲೂಕು ಆಫೀಸುಗಳಿಗೆ ಸರ್‌ಪ್ರೈಸ್ ವಿಜಿಟ್ ಕೊಡುತ್ತಾ ಇಲ್ಲ. ಹಿಂದೆ ಮಾನ್ಯ ಕಡಿದಾಳ್ ಮಂಜಪ್ಪನವರು ಮಂತ್ರಿಗಳಾಗಿದ್ದಾಗ ಹೇಪರ್‌ನಲ್ಲಿ

ಬರುತ್ತಾ ಇತ್ತು. ಅಲ್ಲಿ ತಾಲ್ಲೂಕು ಆಫೀಸಿಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟರು, ಇಲ್ಲಿ ಕೊಟ್ಟರು ಎಂದು. ಈ ಸಂದರ್ಭದಲ್ಲಿ ನಾನಾದರೂ ಕೂಡ ಮಾನ್ಯ ರೆವಿನ್ಯೂ ಸಚಿವರು ಹಾಗೆ ತಾಲ್ಲೂಕು ಆಫೀಸುಗಳಿಗೆ ಭೇಟಿ ಕೊಡಬೇಕೆಂದು ಅಪೇಕ್ಷಿಸುತ್ತೇನೆ. ಮೇಲಧಿಕಾರಿಗಳು ಕಡ್ಡಾಯವಾಗಿ ಕೆಳಗಿನ ಆಫೀಸಿಗೆ ಸರ್‌ಪ್ರೈಸ್ ವಿಸಿಟ್ ಕೊಡಬೇಕು. ಆಗಾಗ್ಗೆ ಇನ್‌ಸ್ಪೆಕ್ಷನ್ ಕಾರ್ಯಗಳನ್ನು ಹೆಚ್ಚು ಮುತುವರ್ಜಿಯಿಂದ ನಡೆಸುವಂತೆ ಮಾಡಬೇಕು ಇದರ ಬಗ್ಗೆ ಕಟ್ಟುನಿಟ್ಟಾದ ಸರ್ಕ್ಯುಲರ್ ಕೊಡಬೇಕು ಎಂದು ನಾನಾದರೂ ಸೂಚಿಸುವುದಕ್ಕೆ ಅಪೇಕ್ಷಿಸುತ್ತೇನೆ.

ಹಿಂದೆ ಒಂದು ಗ್ರಾಮಕ್ಕೆ ಜಮಾಬಂದಿಗೆ ಹೋದರೆ ಆ ಗ್ರಾಮಕ್ಕೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ ಆ ಕಾಲದಲ್ಲಿ ನೋಡುತ್ತಾ ಇದ್ದರು. ಪಟೇಲ್, ಶ್ಯಾನುಭೋಗರ ಯೋಗಕ್ಷೇಮವನ್ನೂ ಗ್ರಾಮದವರ ಯೋಗಕ್ಷೇಮವನ್ನೂ ವಿಚಾರಿಸುತ್ತಾ ಇದ್ದರು. ಆ ಊರಿನ ಕೆರೆ, ರಸ್ತೆ, ಬೌಂಡರಿ ಮಾರ್ಕ್‌ಟ್ಟುಗಳು ಇತ್ಯಾದಿ ಇತ್ಯಾದಿ ಅನೇಕ ವಿಚಾರಗಳನ್ನು ವಿಚಾರ ಮಾಡಿ ಯಾವುದಾದರೂ ಲೋಪದೋಷಗಳು ಇದ್ದರೆ ತತ್‌ಕ್ಷಣ ಸರಿಪಡಿಸುತ್ತಾ ಇದ್ದರು, ಇವೊತ್ತಿನ ದಿವಸ ಒಂದು ತಾಲ್ಲೂಕಿನ ಜಮಾಬಂದಿ ಒಂದೆರಡು ಗಂಟೆಗಳೊಳಗೆ ಮುಗಿದು ಹೋಗುತ್ತದೆ. ಈಗಿನ ಜಮಾಬಂದಿಗಳು ಹಿಂದಿನ ಕಾಲದ ಜಮಾ ಬಂದಿ ಹಾಗೆ ನಡೆಯುತ್ತಾ ಇಲ್ಲ. ಈ ಸಬ್‌ಡಿವಿಷನ್ ಆಫೀಸರು ತಮ್ಮ ಸಬ್‌ಡಿವಿಷನ್‌ನಿನ ಒಂದು ತಾಲ್ಲೂಕಿನಲ್ಲಿ ಹುಜೂರು ಜಮಾಬಂದಿ ಮಾಡಬೇಕು. ಡೆಪ್ಯೂಟಿ ಕಮಿಷನರು ಜಿಲ್ಲೆಗಳಲ್ಲಿ ಜಮಾಬಂದಿ ಮಾಡಬೇಕು. ಹೀಗೆಯೇ ಡಿವಿಷನಲ್ ಕಮಿಷನರ್ ತಮ್ಮ ಡಿವಿಷನ್‌ನಲ್ಲಿ ಒಂದೆರಡು ತಾಲ್ಲೂಕು ಜಮಾಬಂದಿಯನ್ನು, ರೆವಿನ್ಯೂ ಮಂತ್ರಿಗಳೂ ಕೂಡ ತಾಲ್ಲೂಕು ಆಡಳಿತ ಗ್ರಾಮಾಂತರ ಆಡಳಿತ ಪ್ರತಿಯೊಂದು ಬಾಬಿನಲ್ಲೂ ಹೀಗೆ ನಡೆಯುತ್ತಾ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಜಮಾ ಬಂದಿಗಳನ್ನು ಒಂದೊಂದು ತಾಲ್ಲೂಕಿನಲ್ಲಿ 2—3 ದಿವಸ ನಡೆಸಿದರೆ ಅದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಹಿಂದಿನ ಕಾಲದಂಥ ಜಮಾಬಂದಿಗಳು ನಡೆಸಿದರೆ ಒಳ್ಳೆಯದಾಗುತ್ತದೆ ಎಂದು ಭಾವಿಸುತ್ತೇನೆ.

ತಹಸೀಲ್ದಾರರ ವಿಚಾರ ಹೇಳಬೇಕಾಗಿದೆ. ತಾಲ್ಲೂಕು ಲೆವೆಲ್‌ನಲ್ಲಿ ಅವರಿಗೆ ಮನೆಗಳನ್ನು ಕಟ್ಟಿಕೊಟ್ಟಿಲ್ಲ ರೆವಿನ್ಯೂ ಇಲಾಖೆಯಲ್ಲಿ ಅನೇಕ ತಹಸೀಲ್‌ದಾರರಿಗೆ ಮನೆಗಳು ಇಲ್ಲ, ಅಮಲ್ದಾರರ ಕೆಲಸ ಹೆಚ್ಚಾಗಿ ಇರುವುದರಿಂದ ಅವರಿಗೆ ಅಲ್ಲಿಯೇ ಮನೆಗಳು ಇದ್ದರೆ ಒಳ್ಳೆಯದು. ಆದ್ದರಿಂದ ಇತರೇ ಇಲಾಖೆಯವರಿಗೆ ಕೊಟ್ಟಿರುವ ಹಾಗೆ ಅವರಿಗೆ ಮನೆಗಳನ್ನು ಮಾಡಿಸಿಕೊಡಬೇಕು. ಸಾಧಾರಣವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ. ಜೀಪುಗಳನ್ನು ಒದಗಿಸಿದ್ದಾರೆ, ತಾಲ್ಲೂಕುಗಳಲ್ಲಿ ಸುತ್ತು ಹೊಡೆದು ಜನರ ಯೋಗಕ್ಷೇಮ ವಿಚಾರಿಸುವ ತಹಸೀಲ್ದಾರರಿಗೆ ಜೀಪು ಸೌಕರ್ಯ ಇಲ್ಲ. ಪೂರ್ವದಲ್ಲಿ ಅವರು ಕುದುರೆಗಳನ್ನು ಇಟ್ಟುಕೊಳ್ಳಬೇಕೆಂದು ಕಡ್ಡಾಯವಾಗಿ ಇತ್ತು. ಅದು ಹೋಯಿತು. ಈಗ ದೇಶದಲ್ಲಿ ಕುದುರೆಗಳೇ ಇಲ್ಲ. ಕುದುರೆ ಇಟ್ಟುಕೊಂಡು ಗ್ರಾಮಾಂತರಗಳಲ್ಲಿ ರೈತನ ಜಮೀನಿನ ಹತ್ತಿರ ಹೋಗುವ ಕಾಲ ಇತ್ತು. ಈಗ ಕುದುರೆ ಇಲ್ಲ, ಜೀಪೂ ಇಲ್ಲ. ಮುರುಕಲು ಸೈಕಲ್ಲಿನಲ್ಲಿ ಹೋದರೆ ಅವರು ರೈತರ ಮೇಲೆ ಏನು ದಕ್ಷತೆ ಬೀರಬಹುದು ? ಆರೀತಿ ದಕ್ಷತೆ ಪ್ರಭಾವ ಬೀರುವುದಕ್ಕಾಗುವುದಿಲ್ಲ. ಹಿಂದೆ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಇರುವ ಗೌರವ ಈಗ ತಹಸೀಲ್ದಾರರಿಗೆ ಕೊಡುತ್ತಾ ಇಲ್ಲ. ಇದು ಶೋಚನೀಯ ವಿಷಯ. ನಮ್ಮ ಮಿತ್ರರು ಹೇಳಿದ ಹಾಗೆ ಅಮಲ್ದಾರರು ತಾಲ್ಲೂಕು ಮಟ್ಟದ ಅಧಿಕಾರಿಗಳು, ತಾಲ್ಲೂಕಿನ ದೊಡ್ಡ ಅಧಿಕಾರಿಗಳು ಎನ್ನುವ ಭಾವನೆ ಜನರಲ್ಲಿ ಮೂಡಬೇಕು. ಅವರೂ ಕೂಡ ತಾಲ್ಲೂಕಿನ ಉದ್ಧಾರಕ್ಕಾಗಿ ನೇಮಕ ಮಾಡಿರತಕ್ಕಂಥ ಅಧಿಕಾರಿ ಎನ್ನುವ ಭಾವನೆ ಇಟ್ಟುಕೊಳ್ಳಬೇಕು. ತಾಲ್ಲೂಕು ಆಫೀಸಿನಲ್ಲಿ ರಿಕಾರ್ಡುಗಳು ಅಪ್ಟುಡೇಟ್ ಆಗುತ್ತಾ ಇಲ್ಲ. ಇದು ಬಹಳ ಶೋಚನೀಯ.

ರಿಕಾರ್ಡ್ ಆಫ್ ರೈಟ್ಸ್, ರಿಕಾರ್ಡ್ ಆಫ್ ಮ್ಯುಟೇಷನ್ಸ್, ವರ್ಷಾನುಗಟ್ಟಲೆ ಹಾಗೆಯೇ ಆಫೀಸಿನಲ್ಲಿ ಬಿದ್ದಿವೆ. ಇದರಿಂದ ರೈತರಿಗೆ ಬಹಳ ದೊಡ್ಡ ಅಡಚಣೆ ಆಗಿದೆ. ಅಕ್ವಿಸಿಷನ್ ಕೇಸುಗಳು ತೀವ್ರತೆಯಿಂದ ಆಗುತ್ತಾ ಇಲ್ಲ. ಅದಕ್ಕೆ ಅನೇಕ ಕಾರಣಗಳು ಇವೆ. ಅದನ್ನು ಇಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲ. ಪ್ರಿಂಟಿಂಗ್ ಆಫೀಸಿನಲ್ಲಿ ಅಕ್ವಿಸಿಷನ್ ಕೇಸುಗಳನ್ನು ಪ್ರಿಂಟ್ ಮಾಡಿಕೊಡಲು ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ರಾಮನಗರ ತಾಲ್ಲೂಕಿನ ಜಯಪುರ, ನಿಜಯ ಪುರ ಗ್ರಾಮಗಳನ್ನು 30 ವರ್ಷದ ಹಿಂದೆ ಫಾರೆಸ್ಟ್ ಇಲಾಖೆಯಿಂದ ತೆಗೆದುಕೊಂಡರು. ಈ ಗ್ರಾಮಗಳಲ್ಲಿ ರಿಕಾರ್ಡ್ಸ್ ಕ್ರಮ ಕ್ರಮವಾಗಿ ಇಲ್ಲ. ಪೋಡಿ ಸರಿಯಾಗಿ ಮಾಡಿಲ್ಲ. ನಕಾಸೆ ಇಲ್ಲ. ರಿಕಾರ್ಡ್ಸ್ ಆಫ್ ರೈಟ್ಸ್ ಇಲ್ಲ. ಯಾವುದೂ ಇಲ್ಲ. ಇದರ ವಿಚಾರವಾಗಿ ಮಂತ್ರಿಗಳಿಗೆ ಬರೆದು ಕೊಂಡಿದ್ದೇನೆ. ಅವರು ಏರ್ಪಾಡು ಮಾಡುತ್ತೇವೆ ಎಂದು ಒಪ್ಪಿದ್ದಾರೆ. ಎಷ್ಟು ಜಾಗ್ರತೆ ಮಾಡಿಕೊಡಬಹುದೋ ಅಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಬಯಸುತ್ತೇನೆ. ರೈತರು ಈಗಾಗಲೇ ನಿತ್ರಾಣವಾಗಿದ್ದಾರೆ. ಈ ಕೆಲಸಗಳನ್ನು ಮಾಡದೇ ಇದ್ದರೆ ಅದು ಇನ್ನೂ ನಿತ್ರಾಣವಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಜಾಗ್ರತೆ ಇದನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಅನೇಕ ತಾಲ್ಲೂಕುಗಳಲ್ಲಿ ಪೋಡಿ ಕೆಲಸ ಆಗಿಲ್ಲ. ಈ ಕೆಲಸ ಬಾಕಿ ಇದೆ.

11-30 A.M.

ಮಾನ್ಯ ಮಿತ್ರರಾದ ಶ್ರೀ ರಂಗೇಗೌಡರು ಒಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ ಬೆಂಗಳೂರು ಜಿಲ್ಲೆಯಲ್ಲಿ ಮೂರು ವರ್ಷಕ್ಕಿಂತ ಜಾಸ್ತಿಯಾಗಿರುವ ಪೋಡಿ ರಿಕಾರ್ಡ್ 1386, ಐದು ವರ್ಷಕ್ಕಿಂತ ಜಾಸ್ತಿಯಾಗಿರುವುದು

(ಶ್ರೀ ಟಿ. ಮಾದಯ್ಯ ಗೌಡ)

1758 ಎಂದು ಹೇಳಿದ್ದಾರೆ. ಇದರಿಂದ ಒಂದೊಂದು ತಾಲ್ಲೂಕಿನಲ್ಲಿ ನೂರಾರು ಪೋಡಿ ರಿಕಾರ್ಡ್ಸ್ ಪೆಂಡಿಂಗ್ ಇವೆ. ಹೀಗೆ ಪೆಂಡಿಂಗ್ ಇರುವುದರಿಂದ ಅನಾಹುತ ಏನಾಗುತ್ತದೆ ಎಂಬುದು ಮಾನ್ಯ ಸಚಿವರಿಗೆ ಅರ್ಥವಾಗುತ್ತದೆ. ಅದರ ಕಷ್ಟ ಅವರಿಗೆ ಗೊತ್ತಾಗುತ್ತದೆ.

ಈಗ ತಾಲ್ಲೂಕ ಆಫೀಸುಗಳಲ್ಲಿ ರಾಮನಗರದ ತಾಲ್ಲೂಕ್ ಆಫೀಸ್ ಸುಮಾರು 200 ವರ್ಷಗಳ ಹಿಂದೆ ಕಟ್ಟಿದ್ದು. ಅದರ ರೂಫ್ ಲೆವಲ್ ಬಹಳ ಕೆಳಗಡೆ ಇರುವುದರಿಂದ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಜೀರ್ಣೋದ್ಧಾರ ಮಾಡಿದರೆ ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇನ್ನು ಚನ್ನಪಟ್ಟಣದ ತಾಲ್ಲೂಕಿನಲ್ಲಿ ಒಂದು ತಿಮ್ಮರಾಜ ಮ್ಯಾನ್‌ಶನಿನಲ್ಲಿ ಈ ಆಫೀಸನ್ನು ಮಾಡಿದ್ದಾರೆ. ಅಲ್ಲಿ ತಡಿಕೆಯ ಗೋಡೆಯನ್ನು ಕಟ್ಟಿದ್ದಾರೆ, ಮತ್ತು ಅಲ್ಲಿ ಚಿತ್ರ ಎಲ್ಲಾ ಬರೆದಿದ್ದಾರೆ. ಈಗ ಇದು ಪೂರ್ತಿಯಾಗಿ ಬಿರುಕು ಬಿದ್ದಿದೆ. ಇದು ಯಾವ ಕಾಲಕ್ಕೆ ಬಿದ್ದುಬಿಡುತ್ತದೋ ಎಂಬ ಭೀತಿ ಬೇರೆ ಇದೆ. ಇದನ್ನು ಇಂಡಿಯಾ ಸರ್ಕಾರದವರು ವಹಿಸಿಕೊಂಡಿದ್ದರಿಂದ ಅವರು ಮಾಡಲಿ, ಎಂದು ಬಿಟ್ಟುಬಿಟ್ಟಿದ್ದಾರೆ. ಇದನ್ನು ರೆವಿನ್ಯೂ ಇಲಾಖೆಯವರು ಪಬ್ಲಿಕ್ ವರ್ಕ್ಸ್‌ನವರು, ಇಂಡಿಯಾ ಸರ್ಕಾರದವರು ಮಾಡಲಿ ಎಂದು ಹೇಳಿ ಬಿಟ್ಟುಬಿಟ್ಟಿದ್ದಾರೆ. ಇದರಿಂದ ಇದನ್ನು ಅಧಿಕಾರಿಗಳ ಹಿತದೃಷ್ಟಿಯಿಂದಾದರೂ ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈ ಫ್ಯಾಮಿನ್ ರಿಲೀಫ್ ಕೆಲಸಗಳು ಸರಿಯಾದ ಕಾಲಕ್ಕೆ ಬಹಳವಾಗಿ ಆಗುತ್ತಾ ಇಲ್ಲ. ಈ ಕೆಟ್ಟಕಾಲದಲ್ಲಿ ಹಣವನ್ನು ಸರಿಯಾಗಿ ಉಪಯೋಗಿಸಿಕೊಂಡು ಸಹಾಯಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿ ಹುಲ್ಲಿನ ಅಭಾವ ಬಹಳವಾಗಿದೆ. ದನಗಳಿಗೆ ಹುಲ್ಲು ಸಿಗದೆ ಅವುಗಳು ನಿತ್ರಾಣವಾಗಿವೆ ನಮ್ಮ ರೆವೆನ್ಯೂ ಸಚಿವರು, ದನಗಳಲ್ಲಿ ಪ್ರೀತಿ ಇದ್ದವರು, ಈ ಗೋವುಗಳ ವಿಚಾರದಲ್ಲಿ ಸರಿಯಾದ ನಿಗಾ ಕೊಟ್ಟು ಅದಕ್ಕೆ ಒಂದೊಂದು ಹೋಬಳಿ ಹೆಡ್‌ಕ್ವಾರ್ಟರ್ಸಿನಲ್ಲೂ ಒಂದೊಂದು ಫಾಡರ್ ಬ್ಯಾಂಕ್ ಮಾಡಿ ಮೇವು ಎಲ್ಲಾ ಹಳ್ಳಿಗಳಿಗೂ ಸಿಗುವಂತೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈರೀತಿ ಮಾಡದೆ ಇದ್ದರೆ, ಮಳೆ ಬಂದಾಗ ರೈತನಿಗೆ ಉಳುವುದಕ್ಕೆ ಹಸುಗಳು ಸಿಕ್ಕಲಿಕ್ಕಿಲ್ಲ, ಮತ್ತು ಜನರಿಗೆ ಒಂದು ಪಾವು ಹಾಲು ಕೂಡ ಕುಡಿಯುವುದಕ್ಕೆ ಸಿಗದಂತಾಗಬಹುದು. ಆದ್ದರಿಂದ ಇಂಥ ಒಂದು ಫಾಡರ್ ಬ್ಯಾಂಕನ್ನು ಎಲ್ಲಾ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಲ್ಲೂ ಏರ್ಪಾಡು ಮಾಡಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಯವರೊಡನೆ ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri ANNA RAO GANAMUKHI (Afzalpur).—Mr. Speaker, Sir, adverting to this Demand, I should like to offer a few remarks. In the first place............

Sri K. P. REVANNA SIDDAPPA.—There is no quorum, Sir.

(*The quorum Bell was rung and quorum was formed*)

Sri ANNA RAO GANAMUKHI.—Sir, I was saying that land Revenue is a very old and antiquated department. It was occupying the front seat so far, but now, the land revenue as it is realised now, has gone to the back seat. For collecting about Rs. 500 lakhs, we are spending Rs. 128.47 lakhs. This stands no comparison with any other tax which is administered by the State. If you take the sales-tax, for the estimated realisation of 240 lakhs, we are spending Rs. 54.89 lakhs—2¼ per cent we are spending on the collection of sales-tax. But in respect of land revenue, we are spending 20 per cent of the revenue which we are realising by way of land revenue. If you take the Motor vehicle tax, it comes roughly to 3 per cent. Therefore if we compare the realisations or the collection charges of the various taxes which the State administering, I think this is the highest percentage which the State Government is spending 20 per cent of the realisations under land revenue. If we go back, in 1793-94 the

total collection of taxes in the whole of India—the percentage of expenditure incurred in collecting the taxes was 69 per cent. Now the percentage is 8.6 per cent. It means that it has dwindled to such an extent that it stands no comparison with the total collection of taxes by the State Government as also by the other State Governments. Therefore Sir, I should say that this tax is antiquated, not only antiquated, but also inequitous and bears no comparison to the paying capacity of the tax-payer. I think that it should be abolished altogether.

Now if we go to the various scientific methods which are devised now-a-days, we will see that this tax is not based on any scientific basis because it is not following the principle of progressive taxation as we follow in other taxation methods. Therefore, I should say that for the realisation of a paltry sum, we should not maintain such a huge department. If we take the expenses which the general administration department bears on the revenue officers, the divisional commissioners, the deputy commissioners, the assistant commissioners and the tahsildars, then the percentage comes to at least fifty. So, fifty per cent of the expenses have to be borne by the State Government in relation to the taxes which are being realised by the Government. Therefore, I would say that it must be based on some progressive basis. The Chief Minister had promised that the poorer classes should be exempted from this burden. Those farmers who are holding less than five acres of land should be exempted from this taxation. Unless the principle of progression is followed, I do not think the taxation will be equitous.

Now, Sir, going to land reforms, when the Hon'ble Minister for Revenue parted with his food portfolio, I remember to have heard that he would concentrate on Land Reforms Act and that he would pursue it in its various stages. But, I see, Sir, up to this time—although there was so much of delay in passing the Amendment Act and then there was waiting for such a long time, at least the Act was brought into force on 2nd October 1965—I do not know what steps the State Government has taken to bring the Act into operation. What steps it has taken in establishing the land tribunals and the appellate authorities and determination of any area, and surplus land being resumed—all these things have not been done so far.

Sri M. V. KRISHNAPPA.—Everything has been done and everything that has to be done according to the Act is being done. We have appointed tribunals. They must be given one year's time. Step by step the whole process has to be done according to law. I cannot do anything arbitrarily.

Sri ANNA RAO GANAMUKHI.—As far as I know if this process takes so much of time, then, I do not know when 25 lakhs of acres of resumable land will be available and when two lakhs of

(SRI ANNA RAO GANAMUKHI)

acres of surplus land will be available to the Government. Let the Hon'ble Minister give details in his reply, whatever it is. It is stated that for giving compensation, about 34.50 crores are required. I do not know if this amount also will be outside the Plan. Probably the Government is delaying because, there is no money in the Government. Even surplus land for resuming and assigning to the ryots, you require another two crores. Even if you give bonds for the amount exceeding 2,000 then also you say that about 7.50 crores are required in the fourth plan and in the last year of the third plan. We have already finished or completed the Third Plan period and stepping into the Fourth Plan. I do not know how much amount will be provided for implementing this Act and whether 7.50 crores will be made available. If the land is assigned to the deserving people, surplus land and then this non-resumable land if you assign to various tenants, then, I think, to reimburse this amount, you will take about 20 years. So, within that period, the Government has to provide the money to the owners. So the whole position is in a liquid stage. Because, as I know, the Mysore Land Reforms Act and the Rules state that the Government are to determine the ceilings, the area under assured irrigation has to be determined. I do not know whether the Government has determined the area under assured irrigation. Unless you determine that, you cannot say how much land a particular person has got, because various persons may irrigate dry or wet or different kinds of land. There are seven categories of land or classifications of land, from the first to the seventh class. All these classes have to be categorised. Assured irrigation land has to be separated. Then only, ceiling has to be determined. In order to determine the ceiling area, there has to be irrigated land, lands having assured irrigation—that has to be done. Unless this is done, the tribunal cannot function in any way. Even transfers cannot be made. Therefore, I think, unless we expedite the various measures enunciated in the Act, there will not be fixity of tenure and people will not be willing to invest more money on the land. Unless that is done, we cannot produce more. There must be some satisfaction, some safety to the land owners. They do not know how much land will be resumed and how much land will be declared as surplus. It must be declared as early as possible, so that the owners of land and also the tenants may take interest and make investment in the land and help production in the process. Therefore, I have urged that the land reform measures should be given top priority and various measures should be taken under the Land Reforms Act.

Now, Sir, the City survey scheme has not been taken in right earnest. It is stated that it will take during the fourth plan only six city surveys. There are encroachments on Government land and in municipal areas, there is no proper demarcation between revenue

and municipal land. That is why the municipalities give permission for revenue land, and the Revenue Department does not know which land belongs to the Revenue and which to the private people. Therefore, it is very necessary to recover—100 per cent I do not mind. Ten per cent will be borne by the Government. But the cities should be surveyed so that lands available may be demarcated and the Government may be benefited after the land is auctioned. If you make delays in this regard, then all the revenue land will be taken by private people and no land will be left for the Revenue Department to dispose of. I should say that the Panchayats should be the authority to collect land revenue. Why should we spend so much money on the collection ? We have done away with village officers and some concession can be given to Panchayats, so that they can augment their resources.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ಮುಂದಿರುವ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ದೇಶದಲ್ಲಿ ಸುಮಾರು ಶೇಕಡ 80 ಭಾಗದ ಜನತೆಗೆ ಅತಿ ಅವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು ಈ ರೆವಿನ್ಯೂ ಇಲಾಖೆ. ಈ ಖಾತೆಯನ್ನು ಹೊತ್ತಿರತಕ್ಕಂಥ ಮಾನ್ಯ ಸಚಿವರು ಕೇಂದ್ರ ಸರ್ಕಾರದ ಆಹಾರದ ಉಪಸಚಿವರಾಗಿ ಅನುಭವ ಪಡೆದು ನಮ್ಮ ರಾಜ್ಯದ ಈ ಪವಿತ್ರವಾದ ಖಾತೆಯನ್ನು ಹೊತ್ತು ಅವರ ಕಾಲದಲ್ಲಿ ರಾಜ್ಯದಲ್ಲಿ ಅನೇಕ ಭೂಹೀನರಿಗೆ ಜಮೀನುಗಳು ಸಿಕ್ಕಿವೆ. ಆದ್ದರಿಂದ ನಾನು ಬಹಳ ಸಂತೋಷದಿಂದ ಅವರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ರೇವಣಸಿದ್ದಪ್ಪನವರಂತಹವರು ಮಾತ್ರ ಅವರ ಖಾತೆಯ ಬಗ್ಗೆ ಟೀಕೆಮಾಡಬಹುದು. ನಾನು ನೋಡಿದ್ದೇನೆ. ಅವರಲ್ಲಿ ಯಾರು ಹೋದರೂ ಕೂಡ, ಯಾವ ಪಕ್ಷದವರೇ ಹೋದರೂ ಕೂಡ ಸ್ವಲ್ಪವೂ ಬೇಜಾರು ಇಲ್ಲದೆ ಅವರ ಕೆಲಸಗಳನ್ನು ಮಾಡಿಕೊಡುತ್ತಿದ್ದಾರೆ. ಅದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ನಾನು ಪಕ್ಷದ ವತಿಯಿಂದ ಹೇಳುವುದಾದರೆ ಅವರ ಮೇಲೆ ಯಾವ ರೀತಿಯಲ್ಲಿಯೂ ಆಕ್ಷೇಪಣೆ ಮಾಡುವುದು ಸರಿಯಲ್ಲ. ಒಪ್ಪಿಕೊಳ್ಳತಕ್ಕ ವಿಚಾರವನ್ನು ಅವರು ಒಪ್ಪಿಕೊಳ್ಳಲೇಬೇಕು.

ಇನ್ನು ದರಖಾಸ್ತು ಹಂಚಿಕೆ ವಿಚಾರದಲ್ಲಿ ಕೆಲಸಕಾರ್ಯಗಳು ಇನ್ನೂ ಸ್ವಲ್ಪ ತ್ವರಿತವಾಗಿ ಆಗಬೇಕಾಗಿದೆ. ಮಂತ್ರಿಗಳು ಅವರೇ ಕೆಲವು ಸ್ಥಳಗಳಿಗೆ ಸಂಬಂಧಪಟ್ಟ ಸಿಬ್ಬಂದಿಯವರೊಡನೆ ಮತ್ತು ತಹಸೀಲುದಾರರೊಡನೆ ಹೋಗಿ ಇನ್ನೂ ಸ್ವಲ್ಪ ಜಮೀನು ಹಂಚಿಕೆ ಕಾರ್ಯ ಉಳಿದಿದ್ದರೆ ಅದನ್ನೆಲ್ಲಾ ಪೂರ್ತಿಯಾಗಿ ಹಂಚಿಕೆ ವ್ಯವಸ್ಥೆ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ರೆವಿನ್ಯೂ ಇಲಾಖೆಗೆ ಸಂಬಂಧವಾಗಿ ನಾನು ಮೊದಲೇ ಹೇಳಿದಹಾಗೆ ಶೇಕಡ 80 ಭಾಗದಷ್ಟು ಜನರ ಕಷ್ಟ ಸುಖಗಳನ್ನು ಕೇಳುವುದಕ್ಕೆ ಇದು ಒಂದು ಅತ್ಯುತ್ತಮವಾದ ಇಲಾಖೆ. ಈ ಇಲಾಖೆಗೆ ಸಂಬಂಧಪಟ್ಟ ತಹಸೀಲುದಾರರು ತಾಲ್ಲೂಕು ಮಟ್ಟದಲ್ಲಿ ಅನೇಕ ವಿಚಾರಗಳನ್ನು ವಿಮರ್ಶೆ ಮಾಡಿದ ಮೇಲೆ ಅವರ ಮುಖಾಂತರ ಸರ್ಕಾರಕ್ಕೆ ಅನೇಕ ಕಾಗದ ಪತ್ರಗಳು ಬರಬೇಕಾಗಿವೆ. ಇವತ್ತು ನಾನು ನೋಡಿದ ಹಾಗೆ ಎಲ್ಲಾ ಇಲಾಖೆಗಳಿಗೂ ಕೂಡ ಜೀಪಿನ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ. ಹಿಂದಿನ ಕಾಲದಲ್ಲಿಯೂ ಕೂಡ ಈ ಇಲಾಖೆ ಬಹಳ ಒಳ್ಳೆಯ ಇಲಾಖೆಯೆಂದೆನಿಸಿಕೊಂಡು ಬಂದಿರತಕ್ಕದ್ದಾಗಿದೆ. ಸರ್ಕಾರದವರು ತಹಸೀಲ್ದಾರರಿಗೆ ಇವತ್ತಿನವರೆಗೂ ಜೀಪಿನ ವ್ಯವಸ್ಥೆ ಮಾಡಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಶೇಕಡ 80 ಭಾಗದಷ್ಟು ಜನರ ಹೊಂದಾಣಿಕೆ ಕೇವಲ ಒಬ್ಬ ತಹಸೀಲ್ದಾರರ ಮುಖಾಂತರ ಸರ್ಕಾರಕ್ಕೆ ಬರಬೇಕು. ಆಬಗ್ಗೆ ಮಾನ್ಯ ಸಚಿವರು ವಿಚಾರಮಾಡಬೇಕು. ಎಲ್ಲಾ ಇಲಾಖೆಗಳಿಗೂ ಜೀಪಿನ ವ್ಯವಸ್ಥೆ ಮಾಡಿ ಅದನ್ನು ಇಲಾಖೆಗೆ ಕೊಟ್ಟಿಲ್ಲವೆಂದರೆ ಬಹಳ ಶೋಚನೀಯವಾಗುತ್ತದೆ. ರಾಜ್ಯಕ್ಕೆಲ್ಲಾ ಪೂರ್ತಿ ಒಂದು ಕಾಲದಲ್ಲಿ ಜೀಪುಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲದೇ ಇದ್ದರೂ ಎಲ್ಲೆಲ್ಲಿ ಅವಶ್ಯಕವಿದೆಯೋ ಅಂತಹ ಕಡೆಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ವರ್ಷೇ ವರ್ಷೇ ಜೀಪುಗಳನ್ನು ತಹಸೀಲ್ದಾರರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಬಿ.ಡಿ.ಓ. ಗಳಿಗೆ ಆ ಸೌಕರ್ಯವನ್ನು ಕೊಟ್ಟಿರುವಾಗ ತಹಸೀಲ್ದಾರರುಗಳಿಗೂ ಆ ಸೌಕರ್ಯವನ್ನು ಕೊಡುವ ಏರ್ಪಾಡು ಮಾಡಬೇಕೆನ್ನುವುದೇನು ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಿ.ಡಿ.ಓ. ಗಳಿಗೆ ಅದನ್ನು ಬೇರೆ ಕ್ರಮದಲ್ಲಿ ಕೊಟ್ಟಿದ್ದಾರೆ. ಬಿ.ಡಿ.ಓ ಮತ್ತು ತಹಸೀಲ್ದಾರರಿಗೆ ಸಂಪರ್ಕ ಹೆಚ್ಚಾಗಿದೆಯೆಂಬುದನ್ನು ನಾವು ಮರೆಯುವ ಹಾಗಿಲ್ಲ. ಆದುದರಿಂದ ಅವರಿಗೂ ಆ ಸೌಕರ್ಯವನ್ನು ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಇನ್ನು ಈಗ ರೆವಿನ್ಯೂ ಇಲಾಖೆಯಲ್ಲಿ ಅನೇಕ ಕಾರಣಗಳಿಂದ ಕಾಗದ ಪತ್ರಗಳ ಇತ್ಯರ್ಥ ತಕ್ಷಣ ಆಗುವುದಿಲ್ಲ ವೆಂಬ ಕೂಗು ಇದೆ. ಇವತ್ತು ಯಾವುದೇ ಒಂದು ಕಾಗದ ಪತ್ರವಾಗಲೀ ಅದು ರೆವಿನ್ಯೂ ಆಫೀಸಿನಿಂದ ರೆವಿನ್ಯೂ ಇನ್‌ಸ್ಪೆಕ್ಟರಿಗೆ, ರೆವಿನ್ಯೂ ಇನ್‌ಸ್ಪೆಕ್ಟರಿನಿಂದ ತಹಸೀಲ್ದಾರರಿಗೆ, ತಹಸೀಲ್ದಾರನಿಂದ ಅಸಿಸ್ಟೆಂಟ್ ಕಮಿಷನರಿಗೆ ಅಸಿಸ್ಟೆಂಟ್ ಕಮಿಷನರಿಂದ ಜಿಲ್ಲಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಂದ ಡಿವಿಜನಲ್ ಕಮಿಷನರಿಗೆ— ಹೀಗೆ ಹೋಗುತ್ತಿರುತ್ತದೆ. ಡಿವಿಜನಲ್ ಕಮಿಷನರ್ ಎಂದು ಏನು ಆಫೀಸ್ ಇದೆ ಅಲ್ಲಿ ವರ್ಷಾನುಗಟ್ಟಲೆ ಕಾಗದ ಪತ್ರಗಳು ತಡವಾಗುತ್ತವೆ. ಆದ್ದರಿಂದ ಹೆಚ್ಚಿನ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕು. ಡಿವಿಜನಲ್ ಕಮಿಷನರ್ ವಿಭಾಗವನ್ನು ರದ್ದುಪಡಿಸಬೇಕು. ಡಿವಿಜನಲ್ ಕಮಿಷನರ್ ಆಫೀಸಿನ ಸಿಬ್ಬಂದಿವರ್ಗವನ್ನು ಜಿಲ್ಲಾಧಿಕಾರಿಗಳಿಗೆ ಸ್ವಲ್ಪ, ಸೆಕ್ರೆಟೇರಿಯಟ್ಟಿಗೆ ಸ್ವಲ್ಪ ತೆಗೆದುಕೊಂಡರೆ ತ್ವರಿತವಾಗಿ ಇರತಕ್ಕ ಕಾಗದ ಪತ್ರಗಳು ವಿಲೇವಾರಿಯಾಗಬಹುದು ಎಂಬುದಾಗಿ ನನಗನ್ನಿಸುತ್ತದೆ. ಅದನ್ನು ಸಚಿವರು ವಿಚಾರಮಾಡಬೇಕು. ಒಟ್ಟಿನಲ್ಲಿ ಡಿವಿಜನಲ್ ಕಮಿಷನರ್ ವಿಭಾಗಗಳನ್ನು ತೆಗೆದುಹಾಕಬೇಕು. ಇನ್ನು ಕೆಲವು ಕಡೆಗಳಲ್ಲಿ ಸ್ಪೆಷಲ್ ಡೆಪ್ಯುಟಿ ಕಮಿಷನರುಗಳನ್ನು ನೇಮಕಮಾಡಿದ್ದಾರೆ. ಈಗ ಅವರ ಕಾರ್ಯವನ್ನು ರಾಜ್ಯದಲ್ಲಿ ಪೂರೈಸಬೇಕಾಗಿ ಬಂದಿದೆ ಈ ಹುದ್ದೆಗಳನ್ನೂ ಕೂಡ ತೆಗೆದುಹಾಕಬೇಕು. ಅಲ್ಲಿರತಕ್ಕ ಸಿಬ್ಬಂದಿಯನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಸೆಕ್ರೆಟೇರಿಯಟ್ಟಿಗೆ ತೆಗೆದುಕೊಂಡರೆ ಬಹುಶಃ ಒಂದೇ ಜಿಲ್ಲಾಧಿಕಾರಿಗಳು ಈ ಕೆಲಸಗಳನ್ನು ಮಾಡಬಹುದು, ಸರ್ಕಾರಕ್ಕೂ ಕೂಡ ಹಣದ ಉಳಿತಾಯವಾಗಬಹುದು. ಸಲೀಸಾಗಿ ಅರ್ಜಿಗಳೂ ಸಹ ವಿಲೇವಾರಿಯಾಗ. ಬಹುದು ಎಂಬುದಾಗಿ ನಾನು ಹೇಳುತ್ತೇನೆ. ಮಂತ್ರಿಗಳು ಇದನ್ನೂ ಕೂಡ ವಿಚಾರಮಾಡಿ ಸರ್ಕಾರದವರು ಅವರ ಅಭಿಪ್ರಾಯವನ್ನು ಆಬಗ್ಗೆ ತಿಳಿಸುತ್ತಾರೆಂದು ನಾನು ಆಶಿಸುತ್ತೇನೆ.

ಇನ್ನು ರೆವಿನ್ಯೂ ಇನ್‌ಸ್ಪೆಕ್ಟರುಗಳ ವಿಚಾರವಾಗಿ ಪ್ರಸ್ತಾಪಮಾಡುವುದಾದರೆ ಅವರ ಮನೆಗಳಲ್ಲಿಯೆ ಅವರ ಆಫೀಸು ಆಗಿರುತ್ತದೆ. ಏನಾದರೂ ತಹಸೀಲ್‌ದಾರ ಅಥವಾ ಷೇಕ್‌ದಾರ ರೈತರಿಗೆ ಮನೆಗೇ ಬನ್ನಿ ಎಂದು ಹೇಳಿದರೆ ರೈತನಾದವನು ಅವನ ಕೆಲಸಮಾಡಿಸಿಕೊಂಡು ಬರುವುದಕ್ಕೆ ಅವರ ಮನೆಗೇ ಹೋಗಬೇಕಾಗುತ್ತದೆ. ಇದರಿಂದ ಪರಿಸ್ಥಿತಿ ಸರಿಹೋಗುವುದಿಲ್ಲ. ಏಕೆಂದರೆ, ರೈತ ಅವರ ಮನೆಗೆ ಹೋದಾಗ್ಗೆ ಅವರ ಮನಸ್ಸು ಹೇಗಿರುತ್ತದೋ ಗೊತ್ತಾಗುವುದಿಲ್ಲ. ರೈತ ಅಲ್ಲಿಯೇ ಘಂಟೆಗಳ ತನಕ ಕೂತಿರುತ್ತಾನೆ. ಇದರಿಂದ ಅವನ ಕೆಲಸ ನ್ಯಾಯವಾಗಿ ಬಗೆಹರಿಯುವುದಿಲ್ಲ. ಅಲ್ಲಿ ಷೇಕ್‌ದಾರರಿಗೆ ಏನಾದರೂ ವ್ಯವಸ್ಥೆ ಮಾಡಬೇಕಾಗಿ ಬರುತ್ತದೆ. ಲಂಚದ ವ್ಯವಸ್ಥೆಯಾದರೂ ಮಾಡಬೇಕಾಗುತ್ತದೆ. ಅದನ್ನು ನಾನು ಇಲ್ಲಿ ಹೇಳಬೇಕಾದುದೇನಿಲ್ಲ. ಆದ್ದರಿಂದ ಪ್ರತಿಯೊಂದು ಹೆಡ್‌ಕ್ವಾರ್ಟರ್‌ನಲ್ಲಿಯೂ ತಾಲ್ಲೂಕು ಆಫೀಸಿಗೆ ಬಹಳ ಹತ್ತಿರವಿರುವ ಹಾಗೆ ರೆವಿನ್ಯೂ ಇನ್‌ಸ್ಪೆಕ್ಟರುಗಳ ಆಫೀಸನ್ನು ತೆರೆಯಬೇಕು. ಹೋಬಳಿ ಏನಾದರೂ ದೂರದಲ್ಲಿದ್ದರೆ ಅಲ್ಲಿಯೇ ರೆವಿನ್ಯೂ ಇನ್‌ಸ್ಪೆಕ್ಟರ್ ಆಫೀಸು ಇರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟ ಪಡುತ್ತೇನೆ.

ಇನ್ನು ಪಶುವೈದ್ಯ ಇಲಾಖೆಯ ವಿಷಯದಲ್ಲಿ ಪ್ರಸ್ತಾಪ ಮಾಡುತ್ತೇನೆ. ಭದ್ರಾವತಿ ಇವತ್ತು ಬೆಳೆಯುತ್ತಿದೆ. ಸುಮಾರು 75 ಸಾವಿರ ಜನಸಂಖ್ಯೆ ಇದೆ. ಶಿವಮೊಗ್ಗಾದಲ್ಲಿಯೂ ಕೂಡ ಅಷ್ಟೇ ಪ್ರಜಾಸಂಖ್ಯೆ ಇದೆ. ಇವೆರಡನ್ನೂ ಸೇರಿಸಿ ಒಂದು ಕಾರ್ಪೊರೇಷನ್ ಮಾಡಬೇಕೆಂಬ ಯೋಜನೆ ಸರ್ಕಾರದಲ್ಲಿ ನಡೆಯುತ್ತಾ ಇದೆ ಅದು ಆದರೆ ಬಹಳ ಸಂತೋಷ. ಇವೆರಡರ ಮಧ್ಯೆ ಇರತಕ್ಕ ಜೇಡಿಕಟ್ಟೆ ಹತ್ತಿರ ಹಾಲಿನ ಕೇಂದ್ರಗಳನ್ನು ತೆರೆಯಬೇಕು ಎಂಬುದಾಗಿ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿ ಅದನ್ನು ಮಂಜೂರು ಮಾಡಿ ಈಗ ಆ ಜಾಗವನ್ನು ತೆಗೆದುಕೊಂಡಿದ್ದಾರೆ. ಆದರೆ ಅದು ಇವತ್ತಿಗೂ ಇನ್ನೂ ಅಲ್ಲಿ ಕಾರ್ಯಗತವಾಗಿದೆಯೆಂದು ನನಗನ್ನಿಸುವುದಿಲ್ಲ. ಆದ್ದರಿಂದ ಅಲ್ಲಿ ಜಾಗ್ರತೆಯಾಗಿ ಹಾಲಿನ ಕೇಂದ್ರಗಳನ್ನು ತೆರೆಯಲು ಸಚಿವರು ಪ್ರಯತ್ನಿಸಬೇಕೆಂದು ನಾನು ಈ ಸಮಯದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಭದ್ರಾವತಿ ತಾಲ್ಲೂಕಿನ ಹತ್ತಿರ ಹೊಳೆ ಹೊನ್ನೂರು ಎಂಬುದು 5 ಸಾವಿರ ಪ್ರಜಾಸಂಖ್ಯೆ ಇರತಕ್ಕ ಸ್ಥಳ. ಅದು ಒಂದು ದೊಡ್ಡ ಹೋಬಳಿ.

12-00 NOON.

ಅಲ್ಲಿ ಒಂದೇ ಒಂದು ಪಶುವೈದ್ಯ ಶಾಲೆ ಇದೆ. ಅಲ್ಲಿ ಮೊದಲು ಇದ್ದಂತಹ ಆಸ್ಪತ್ರೆಯನ್ನು ಯಾವ ಕಾರಣದಿಂದ ವರ್ಗಾವಣೆ ಮಾಡಿದರೋ ಗೊತ್ತಿಲ್ಲ. ಅದರ ಬಗ್ಗೆ ರೆಕಾರ್ಡ್ ಕೂಡ ನಡೆದಿದೆ. ಆದಕ್ಕಾಗಿ ಸರ್ಕಾರದವರು ಅಥವಾ ಸಂಬಂಧಪಟ್ಟ ಇಲಾಖೆಯವರು ದಯವಿಟ್ಟು ಹೊಳೆ ಹೊನ್ನೂರಿಗೆ ಒಂದು ಪಶುವೈದ್ಯದ ಆಸ್ಪತ್ರೆಯನ್ನು ಮಂಜೂರು ಮಾಡಿ ಕೊಡಬೇಕೆಂದು ನಾನು ತಿಳಿಸುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಚಾರ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮಲ್ಲಿಗೇನಹಳ್ಳಿ ಎಂಬ ಗ್ರಾಮದ ಹತ್ತಿರ ಸ. ನಂ. 12ರಲ್ಲಿ ಇದ್ದಂತಹ 100 ಜನಕ್ಕೆ ಗೋಮಾಳದ ಜಮೀನನು ಖಾಸಗೀ ಜನಗಳಿಗೆ ಒಬ್ಬೊಬ್ಬರಿಗೆ 2 ಎಕರೆಯಂತೆ 5 ವರ್ಷ ಆಯಿತು. ಅದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಮತ್ತು ಸಾಗುವಳಿ ಚೀಟಿಯನ್ನೂ ಕೊಟ್ಟಿದ್ದಾರೆ. ಆ ಜನಗಳು ಈಗ 5 ವರ್ಷಗಳಿಂದ ಕಂದಾಯವನ್ನು ಕೂಡ ಕೊಡುತ್ತಿದ್ದಾರೆ. ಆದರೆ ಈಗ ಆ ಜಮೀನಿನ ಬಗ್ಗೆ ಆರಣ್ಯ ಇಲಾಖೆಯವರು ಸ್ವಲ್ಪ ಕ್ವೈರಿ ಹಾಕಿದ್ದಾರೆ. ಅದಕ್ಕೆ ಸಂಬಂಧಪಟ್ಟ ಫೈಲು ಜಿಲ್ಲಾಧಿಕಾರಿಗಳ ಆಫೀಸಿನಿಂದ ಡಿವಿಜನಲ್ ಕಮಿಷನರ ಆಫೀಸಿಗೆ ಓಡಾಡುತ್ತಿದೆ. ಈರೀತಿ ಮಾಡುವುದರಿಂದ ಏನು ಪ್ರಯೋಜನ? ಭೂಮಿಯನ್ನ ಕೊಟ್ಟಮೇಲೆ ಅದನ್ನ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಈಗಾಗಲೇ 5 ವರ್ಷಗಳಿಂದ ಕಂದಾಯ ಕಟ್ಟಿದ್ದಾರೆ. ಈಗ 5 ವರ್ಷಗಳಿಂದ ಆ ಜಮೀನಿನಲ್ಲಿ ಫಸಲನ್ನ ಬೆಳೆದಿದ್ದರೆ ಎಷ್ಟು ಆಹಾರ ಉತ್ಪತ್ತಿಯಾಗುತ್ತಿತ್ತು ಎಂಬುದನ್ನ ನಾವು ವಿಚಾರ ಮಾಡಬೇಕಾಗಿದೆ. ಈಗ ಈ ಸಭೆಯಲ್ಲಿ ಅರಣ್ಯ ಶಾಖೆಯ ಮಂತ್ರಿಗಳೂ ಇದ್ದಾರೆ. ನಾನು ಅವರಿಗೂ ಈ ವಿಷಯವನ್ನ ತಿಳಿಸಿದ್ದೇನೆ. ಮಾನ್ಯ ರೆವಿನ್ಯೂ ಸಚಿವರು ಈ ಬಗ್ಗೆ ಸ್ವಲ್ಪ ನಿಗಾ ಕೊಟ್ಟು ಆ ಫೈಲು ಎಲ್ಲಿ ಹೂತುಕೊಂಡಿದೆ ಎಂಬುದನ್ನು ವಿಚಾರಮಾಡಿ ಅದನ್ನ ತರಿಸಿ ತಕ್ಷಣ ಆ ಜಮೀನಿನ ಬಗ್ಗೆ ಇರುವಂತಹ ಕ್ವೈರಿಯನ್ನ ಸರಿಪಡಿಸಿ ಆ ರೈತರು ಜಮೀನಿನಲ್ಲಿ ವ್ಯವಸಾಯ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟರೆ ಅದರಲ್ಲಿ ಆಹಾರವನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಬೇಗ ಬಗೆಹರಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನ ಮುಗಿಸುತ್ತೇನೆ.

Mr. DEPUTY SPEAKER.—The House will now rise and will meet again at 3 P.M.

The House adjourned for Recess at Three Minutes past Twelve of the Clock and met again at Three of the Clock.

[MR. SPEAKER in the Chair]

INTRODUCTION OF BILLS

Mr. SPEAKER.—Bills for introduction.

Sri M. V. KRISHNAPPA.—Sir, I beg to introduce the Mysore Stamp (Amendment) Bill, 1966.

Mr. SPEAKER.—The Mysore Stamp (Amendment) Bill, 1966 is introduced.*

Sri R. M. PATIL.—(Minister for Municipal Administration).—Sir, I beg to introduce the Mysore Urban Development Boards Bill, 1966.

Mr. SPEAKER.—The Mysore Urban Development Boards Bill, 1966 is introduced.

Sri R. M. PATIL.—I beg to introduce the Mysore Industrial Areas Development Bill, 1966.

---

*Introduced upon the recommendation of the Governor.

Mr. SPEAKER.—The Mysore Industrial Areas Development Bill, 1966 is introduced.

SRI H. R. ABDUL GAFFAR (Deputy Minister for finance).—Sir, I beg to introduce the Mysore Entertainment Tax (Amendment) Bill, 1966.

Mr. SPEAKER.—The Mysore Entertainment Tax (Amendment) Bill, 1966 is introduced.*

Sri D. DEVARAJ URS (Minister for Transport).—Sir, I beg to introduce the Mysore Motor Vehicles (Taxation on Passengers and Goods) (Amendment) Bill, 1966.

Mr. SPEAKER.—The Mysore Motor Vehicles (Taxation on Passengers and Goods) (Amendment) Bill, 1966 is introduced.*

BUDGET ESTIMATES FOR 1966-67—DEMANDS FOR GRANTS

Demand Nos. 2, 7, 8, 22, 33 and 42

(Debate continued)

†ಶ್ರೀ ಸಂಜೀವನಾಥ ಐಕಲ.—ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳು ಎಂದರೆ, 2, 7, 8, 22 ಹಾಗೂ 33 ಮತ್ತು 42ನೆಯ ಡಿಮಾಂಡುಗಳನ್ನು ವಿರೋಧಿಸುತ್ತ ಇದರಲ್ಲಿ ಮೊದಲಿಗೆ ಪಶುಸಂಗೋಪನ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಮಾತನಾಡಲು ಬಯಸುತ್ತೇನೆ. ಇದರ ವಿಚಾರ ಗಳನ್ನು ಮಾತನಾಡುವುದಕ್ಕೆ ಮುನ್ನ ಈ ಒಂದು ಇಲಾಖೆ ಯಾವ ರೀತಿಯ ಅವ್ಯವಸ್ಥೆಯಾಗಿದೆ ಎಂಬುದರ ಬಗ್ಗೆ ಇತ್ತೀಚೆಗೆ ಎಂದರೆ 12-10-1965 ಹೈಕೋರ್ಟಿನವರು ಕೊಟ್ಟಿರುವ ಒಂದು ತೀರ್ಪಿನಲ್ಲಿರುವ ಮೂರು ನಾಲ್ಕು ವಾಕ್ಯಗಳನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ. ಅದು ಹೀಗಿದೆ :

> "The facts of the case discloses a sorry state of affairs in this Animal Husbandry Department at present. In that department the seniority list is not prepared and junior officers are put in senior and important posts as stop gap arrangement. Hence, there is naturally complaint of mal-practice. This Court had occasion to refer to the state of affairs in another case that came up before us for decision. Yet, there has been no improvement."

ಪಶುಸಂಗೋಪನ ಇಲಾಖೆಯ ಬಗ್ಗೆ ಹೈಕೋರ್ಟಿನವರು ಹೇಳಿದ ಮಾತುಗಳು ಇವು. ಆದರೆ ಈಚಿನ ನಾಲ್ಕೈದು ತಿಂಗಳಲ್ಲಿ ಇಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸಿ, ಸುಧಾರಣೆಗಳಾಗಿವೆ ಎಂದು ಹೇಳುತ್ತಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ಈಗ ಅಭಿನಂದಿಸಬಹುದು. ಇದು ಪ್ರಾಯಶಃ ಎರಡು ಮೂರು ವರ್ಷಕ್ಕೆ ಮೊದಲು ಇದ್ದಂತಹ ಅವ್ಯವಸ್ಥೆಗಳ ಬಗ್ಗೆ ಹೇಳಿರಬಹುದು. ಈಗ ಮಾನ್ಯ ರೆವಿನ್ಯೂ ಮಂತ್ರಿಗಳು ಸುಧಾರಣೆ ಗಳಾಗಿವೆ ಎಂದು ಇಲ್ಲಿ ಈಗ ಹೇಳುತ್ತಾರೆ. ಆದರಿಂದ ಅವರ ಮಾತುಗಳನ್ನೂ ಸ್ವಾಗತಿಸುತ್ತೇನೆ.

ಈ ಇಲಾಖೆಯಲ್ಲಿ ಅತಿ ಮುಖ್ಯವಾದ ಮಾರ್ಪಾಡುಗಳಿಂದ ನಡೆಯುತ್ತಿರುವ ಡೈರಿ ಪ್ರಾಜೆಕ್ಟು ಸ್ಕೀಮು ಗಳು ಬಹುಮುಖ್ಯವಾದದ್ದು. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮಿಲ್ಕ್ ಪ್ರಾಜೆಕ್ಟ್ ಸ್ಕೀಂ...

---

* Introduced upon the recommendation of the Governor.

ಮಾಡಿರುವ ಬಗ್ಗೆ ಮೂರು ನಾಲ್ಕು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇಲ್ಲಿ ಏನಾಗಿದೆ ಎಂದರೆ, ಡೈರಿ ಪ್ರಾಜೆಕ್ಟ್‌ಗಾಗಿ ಕಟ್ಟಡಗಳನ್ನು ಕಟ್ಟೋಣ ಎಲ್ಲವೂ ಆಗಿದೆ. ಆ ಸ್ಥಳಕ್ಕೆ ಹೋಗುವ ಜಾಗದಲ್ಲಿ ಸುಮಾರು 120 ಅಡಿಗಳಷ್ಟು ಭಾಗ ಇನ್ನೂ ಅಕ್ವಿಸಿಷನ್ನು ಆಗಿಲ್ಲ. ಸುಮಾರು ಎರಡು ವರ್ಷ ಗಳಿಂದಲೂ ಅಕ್ವಿಸಿಷನ್ನು ಪ್ರೊಸೀಡಿಂಗ್ಸ್ ನಡೆಯುತ್ತಿತ್ತು. ಮತ್ತು ಇದಕ್ಕೆ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲ.

ಅಧ್ಯಕ್ಷರು.—ಇದು ತಪ್ಪು. ನೀರಿನ ಸೌಕರ್ಯಗಳನ್ನೆಲ್ಲಾ ಅಲ್ಲಿನ ಮುನಿಸಿಪಾಲಿಟಿಯವರೇ ಕೊಡು ತ್ತಾರೆ.

ಶ್ರೀ ಸಂಜೀವನಾಥ ಐಕಳ.—ಇಲ್ಲಿ ಬಾವಿಗಳನ್ನು ಮಾಡಲು ಮುನಿಸಿಪಾಲಿಟಿಯವರು ಪ್ರಯತ್ನ ಮಾಡಿದ್ದರೆ ಇಲ್ಲಿ ನೀರಿನ ತೊಂದರೆ ತಪ್ಪುತ್ತಿತ್ತು. ಇಲ್ಲಿ ಹಾಗೆ ಆಗಲಿಲ್ಲ. ಈ ಬಾವಿಗಳನ್ನು ಆದಷ್ಟುಬೇಗ ಮಾಡಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಮುನಿಸಿಪಾಲಿಟಿಯ ಛೇರ್ಮನ್ನರೂ ಸರಕಾರದವರೂ ಇಬ್ಬರೂ ಒಪ್ಪಿಕೊಂಡು ಈ ಪ್ರಾಜೆಕ್ಟ್ ಆಗಿದೆ.

ಶ್ರೀ ಸಂಜೀವನಾಥ ಐಕಳ.—ಬೋರ್‌ವೆಲ್ಸ್‌ಗಳನ್ನು ಆದಷ್ಟುಬೇಗ ಮಾಡಿ ಇಲ್ಲಿ ನೀರು ಸಿಗುವಂತೆ ಮಾಡಿ ಇಲ್ಲಿನ ಮಂಗಳೂರು ಮಿಲ್ಕ್ ಪ್ರಾಜೆಕ್ಟ್ ಸ್ಕೀಮನ್ನು ಆದಷ್ಟು ಬೇಗನೆ ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟೇ ಅಲ್ಲ. ಇಲ್ಲಿ ಹತ್ತು ಹನ್ನೆರಡು ಕೋ-ಆಪರೇಟೀವ್ ಸೊಸೈಟಿಗಳಾಗಿದೆ ಇವರುಗಳೇ ಹಾಲನ್ನು ತಂದುಕೊಡುತ್ತಿದ್ದಾರೆ. ಇಲ್ಲಿರುವ ಮಿಲ್ಕ್ ಪ್ರಾಜೆಕ್ಟ್ ಅಧಿಕಾರಿಗಳ ಪ್ರಯತ್ನದಿಂದ ಒಂದು ದಿನಕ್ಕೆ ಸುಮಾರು ಎರಡು ಸಾವಿರ ಲೀಟರುಗಳಷ್ಟು ಹಾಲನ್ನು ಒದಗಿಸಿ ಕೊಡುತ್ತಿದ್ದಾರೆ. ಇವರಿಗೆ ಇನ್ನೂ ಹೆಚ್ಚು ಪ್ರೋತ್ಸಾಹಗಳು ಸಿಕ್ಕಿದರೆ ಮುಂದೆ ಇದರಿಂದ ಐದಾರು ಸಾವಿರ ಲೀಟರುಗಳಷ್ಟು ಹಾಲನ್ನು ಇಲ್ಲಿರುವ ಸಹಕಾರ ಸಂಘಗಳಿಂದ ಕೊಡಲಿಕ್ಕೆ ಸಾಧ್ಯವಾದೀತು. ಮಿಲ್ಕ್ ಪ್ರಾಜೆಕ್ಟ್ ಸ್ಕೀಂ ಮೆಷಿನರಿಗಳನ್ನು ಇನ್ನೂ ಹೆಚ್ಚುಮಾಡಿದರೆ ಹೆಚ್ಚು ಹಾಲನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದು ಮುಖ್ಯವಾಗಿ ಆಗ ಬೇಕಾದ ಕೆಲಸ ಸಹಕಾರ ಸಂಘಗಳಿಗೆ ಬೇಕಾಗುವ ಸಾಲಗಳು ಸರಿಯಾಗಿ ದೊರಕುತ್ತಿಲ್ಲ. ರಿಸರ್ವ್ ಬ್ಯಾಂಕಿ ನವರು ಇತರ ಸೊಸೈಟಿಗಳಿಗೆ ಸಾಲಕೊಡುವ ರೀತಿಯಲ್ಲಿ ಈ ಮಿಲ್ಕ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಸಾಲ ಕೊಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ, ಈಗಿರುವ ನಿಯಮಗಳಂತೆ ರಿಸರ್ವ್ ಬ್ಯಾಂಕಿ ನವರು ಈ ಮಿಲ್ಕ್ ಸೊಸೈಟಿಗಳಿಗೆ ಸಾಲ ಕೊಡಲಾಗುತ್ತಿಲ್ಲ. ಇದರಿಂದ ಇವರಿಗೆ ಸಾಲ ಸಿಗದಹಾಗೆ ಆಗಿದೆ. ಪ್ರೈಮರಿ ಸೊಸೈಟಿಗಳಿಗೆ ಮಾತ್ರ ಸಾಲ ಕೊಡುವಂತೆ ಈ ಮಿಲ್ಕ್ ಸೊಸೈಟಿಗಳಿಗೂ ಸಾಲ ಕೊಡಲು ಪ್ರತ್ಯೇಕ ವಾಗಿ ಒದಗಿಸಿಕೊಡಲು ಸಹಾಯ ಮಾಡಬೇಕು. ಬೇರೆ ಯಾರಲ್ಲೂ ಇವರಿಗೆ ಸಾಲ ಸಿಗುತ್ತಿಲ್ಲ. ಇದರಿಂದಾಗಿ ಇಲ್ಲಿರುವ ಹತ್ತು ಹನ್ನೆರಡು ಹಾಲಿನ ಸೊಸೈಟಿಗಳು ಬಹಳ ಕಷ್ಟಪಡುತ್ತಿವೆ. ಸಾಲ ಸಿಗುವಹಾಗೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಸರಕಾರ ಈಚೆಗೆ ಸಹಾಯ ಮಾಡಿರುವುದರಿಂದ ತಾವು ಸರಕಾರಕ್ಕೆ ಚಿರಋಣಿಗಳಾಗಿರ ಬೇಕು.

ಶ್ರೀ ಸಂಜೀವನಾಥ ಐಕಳ.—ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಸಹಾಯ ಕೊಟ್ಟಿದ್ದಕ್ಕಾಗಿ ಅವರೂ ಸರಕಾರಕ್ಕೆ ಚಿರಋಣಿಗಳಾಗಿದ್ದಾರೆ. ಅದೇ ರೀತಿ ಅಂತಹ ಪ್ರಾಜೆಕ್ಟುಗಳು 3—4 ಕಡೆ ಇವೆ. ಅವು ಅಷ್ಟು ಪ್ರಗತಿಯಾಗಿಲ್ಲ.

ಬೆಂಗಳೂರು ಡೈರಿ ಪ್ರಾಜೆಕ್ಟು ವಿಷಯದಲ್ಲಿ ಒಂದು ಮಾತು. ಒಂದು ಲಕ್ಷಕ್ಕೂ ಹೆಚು ಲೀಟರ್ಸ್ ಹಾಲಿನ ವ್ಯವಸ್ಥೆಗೊಳಿಸತಕ್ಕ ಬೆಂಗಳೂರು ಡೈರಿ ಪ್ರಾಜೆಕ್ಟು ಏನಿದೆ ಅದರಲ್ಲಿ ಈಗ ಕೇವಲ 12—13 ಸಾವಿರ ಲೀಟರ್ಸ್ ಹಾಲನ್ನು ಮಾತ್ರ ಸಂಗ್ರಹ ಮಾಡತಕ್ಕ ಕಾರ್ಯ ನಡೆದಿದೆ. ಅದೂಸಹ ಇಲ್ಲಿಯ ಸಹಕಾರ ಸಂಘಗಳಿಗೆ ಕೊಡುವುದಿಲ್ಲ. ವ್ಯಕ್ತಿಗಳಿಗೆ ಮಾತ್ರ ಕೊಡುತ್ತಾರೆ. ಏಕೆಂದರೆ ಅವರು ಕೊಡುತ್ತಾ ಇರುವ ರೇಟ್ ಬಹಳ ಕಡಿಮೆಯಾಗಿದೆ. 65—68 ಪೈಸೆ ಒಂದು ಲೀಟರ್‌ಗೆ ಕೊಡುತ್ತಾರೆ. ಇಷ್ಟು ದೊಡ್ಡ ದೊಡ್ಡ ಪ್ರಾಜೆಕ್ಟ್ ಯೂನಿಸೆಫ್ ಪ್ರಾಜೆಕ್ಟ್ ಆದ ಇದು ಯಶಸ್ವಿಯಾಗಿ ಬೆಂಗಳೂರಿನ ನಾಗರಿಕರಿಗೆ ಬೇಕಾದ ಎಲ್ಲಾ ಹಾಲೂ ಕೂಡ ಅವರಿಂದಲೇ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡಲು ಅಲ್ಲಿನ ಅಧಿಕಾರಿಗಳು ಯಾರಿದ್ದಾರೋ ಅವರು ತ್ವರಿತ ವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 45 ಮೈಲಿ ಒಳಗೆ ಇರತಕ್ಕ ಮಿಲ್ಕ್ ಷೆಡ್ ಏರಿಯಾ ದಲ್ಲಿ ಎಲ್ಲಾ ಸೊಸೈಟಿಗಳಿಗೂಕೊಟ್ಟು ಅವರಿಗೆ ಸಾಲ ಸಿಕ್ಕುವ ಏರ್ಪಾಡು ಮಾಡಿ ಅವರಿಂದಲೇ ಹಾಲಿನ ಸರಬ ರಾಯಿ ಆಗುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

(ಶ್ರೀ ಸಂಜೀವನಾಥ ಐಕಳ)

ಪಶುವೈದ್ಯ ಇಲಾಖೆಯ ಸ್ಟಾಕ್‌ಮೆನ್‌ಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಿಜವಾಗಿಯೂ ಅವರು ಒಂದು ವರ್ಷ ಎರಡು ತಿಂಗಳು ಟ್ರೈನಿಂಗ್ ಪಡೆದು ಅವರಿಗೆ ಸಿಕ್ಕತಕ್ಕ ಪಗಾರ ನೋಡಿದರೆ ಬಹಳ ಕಡಿಮೆ. ಲೋಯರ್ ಡಿವಿಜನ್ ಕ್ಲಾರ್ಕಗಳಿಗೆ ಕೊಡತಕ್ಕ ಸಂಬಳ ಕೊಡುತ್ತಾ ಇದ್ದೀರಿ. ಅವರು ಅನೇಕ ಮನವಿಗಳನ್ನು ಈ ಬಗ್ಗೆ ತಮಗೆ ಕೊಟ್ಟಿದ್ದಾರೆ ಮತ್ತು ಅನೇಕ ಪ್ರಶ್ನೆಗಳನ್ನು ಈ ಸಭೆಯಲ್ಲಿ ಕೇಳಲಾಗಿದೆ. ಈ ಸ್ಟಾಕ್‌ಮನ್ ಯಾರಿದ್ದಾರೆ ಇವರು ವೆಟರ್‍ನರಿ ಡಿಪಾರ್ಟ್‌ಮೆಂಟಿನಲ್ಲಿ ಕೀ ಪೋಸ್ಟ್ ಇದ್ದಹಾಗೆ ಇದ್ದಾರೆ. ಇವರ ವೇತನವನ್ನು ಪರಿಷ್ಕರಿಸಿ, ಕಡೇಪಕ್ಷ ಅಪ್ಪರ್ ಡಿವಿಜನ್ ಕ್ಲಾರ್ಕ್ಸ್‌ಗೆ ಸಿಕ್ಕತಕ್ಕ ಸಂಬಳವನ್ನಾದರೂ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೋಳಿ ಸಾಕಾಣಿಕೆಯ ಪ್ರಾಜೆಕ್ಟನ್ನು ಮಾಡಿದ್ದೀರಿ ಇದು ಬಹಳ ಒಳ್ಳೆಯ ಸ್ಕೀಂ ನಮ್ಮ ಜಿಲ್ಲೆಯಲ್ಲೂ ಸಹ ಈ ಬಗ್ಗೆ ಒಂದು ಸೊಸೈಟಿ ಪ್ರಾರಂಭವಾಗಿದೆ. ಅದು ಕೆಲಸ ಮಾಡುತ್ತ ಇದೆ. ಅದರಲ್ಲೂ ಸಹ ಅವರಿಗೆ ಬೇಕಾದ ಹಣದ ಸಹಾಯ ಯೋಗ್ಯ ರೀತಿಯಲ್ಲಿ ಸಮಯಕ್ಕೆ ಸರಿಯಾಗಿ ಸಿಕ್ಕುವ ಹಾಗೆ ಆಗಬೇಕು. ಕೆಲವು ಸಲ ಇದು ಯಾರಿಗೆ ಮುಟ್ಟಬೇಕೋ ಅವರಿಗೆ ಮುಟ್ಟದೆ ನಡುವೆ ಅಡ್ಡಿ ಆತಂಕ ಇದ್ದು ಅವರಲ್ಲಿ ಇದ್ದ ಉತ್ಸಾಹ, ಹುರುಪು ಹೊರಟುಹೋಗಿ, ಬೇಸರ ಬಂದು ಈ ಕೆಲಸದಲ್ಲಿ ತಾತ್ಸಾರ ಜಿಗುಪ್ಸೆ ಉಂಟಾಗಿದೆ. ಇದೇ ರೀತಿ ಕುರಿ ಸಾಕಾಣಿಕೆ, ಹಂದಿ ಸಾಕಾಣಿಕೆ ಯೋಜನೆಗಳು ಇವೆ, ಇದಕ್ಕೂ ಕೂಡ ಯೋಗ್ಯ ರೀತಿಯಲ್ಲಿ ಪ್ರಚಾರ ಮಾಡಿ ಇದರಿಂದ ರೈತರಿಗೆ ಸಹಾಯವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ರೆವಿನ್ಯೂ ಡಿಮ್ಯಾಂಡ್‌ಮೇಲೆ ಮಾತನಾಡುವಾಗ ಒಂದು ವಿಷಯ ಹೇಳಬೇಕಾಗಿದೆ. ಹೊಸ ತಾಲ್ಲೂಕುಗಳ ರಚನೆ ನಮ್ಮ ಜಿಲ್ಲೆಯಲ್ಲಿ ಮಾಡಿದ ಹಾಗೆ ಕಾಣುತ್ತಾ ಇಲ್ಲ. ಆರು ತಾಲ್ಲೂಕುಗಳು 9 ತಾಲ್ಲೂಕುಗಳಾಗಬೇಕೆಂದು ಹೇಳುತ್ತಾ ಬಂದಿದ್ದೇನೆ. ಗಡಿ ನಿರ್ಣಯ, ಭೌಗೋಳಿಕ ಆಧಾರ ಹಾಗೂ ಆದಾಯದಮೇಲೆ ಹೊಂದಿಕೊಂಡು 9 ತಾಲ್ಲೂಕುಗಳ ರಚನೆಯಾಗಬೇಕೆಂಬುದನ್ನು ತಮ್ಮ ಮುಂದೆ ಇಟ್ಟಿದ್ದೇವೆ. ತಾವು ಕೇವಲ ಒಂದೇ ಒಂದು ತಾಲ್ಲೂಕನ್ನು ಮಾಡಿದ್ದೀರಿ. ಶ್ರೀಮಾನ್ ಸುಬ್ಬಯ್ಯನಾಯಕ್ ಅವರು ನನ್ನ ಕಡೆಗೆ ನೋಡುತ್ತಾ ಇದ್ದಾರೆ. ಅವರ ಪ್ರಭಾವಕ್ಕೆ ಒಳಗಾಗಿ ಕೇವಲ ಸುಬ್ಬಯ್ಯನಾಯಕ್‌ರವರ ಊರನ್ನೇ ಒಂದು ತಾಲ್ಲೂಕಾಗಿ ರಚನೆ ಮಾಡಿದ್ದೀರಿ. ಮೂಡಬಿದರೆ ತಾಲ್ಲೂಕು ರಚನೆ ಮಾಡಿಲ್ಲ. ಈ ಪ್ರದೇಶ 63 ಗ್ರಾಮಗಳನ್ನು ಒಳಗೊಂಡು ಒಂದು ಲಕ್ಷ ಜನಸಂಖ್ಯೆ ಇರತಕ್ಕ ಸ್ಥಳವಾಗಿದೆ. ಸೂಳ್ಯ ತಾಲ್ಲೂಕು ಕೇವಲ 43 ಗ್ರಾಮಗಳನ್ನೊಳಗೊಂಡು, 50—60 ಸಾವಿರ ಜನಸಂಖ್ಯೆ ಇರತಕ್ಕ ತಾಲ್ಲೂಕು ಆಗಿದೆ. ಅದು ಸೆಲ್ಫ್ ಸಪೋರ್ಟಿಂಗ್ ತಾಲ್ಲೂಕು ಸಹ ಆಗಲಿಲ್ಲ. ಅಲ್ಲದೆ ಅದರ ಉತ್ಪನ್ನ ಬಹಳ ಕಡಿಮೆ ಮಟ್ಟದ್ದಾಗಿದೆ. ಮೂಡಬಿದರೆ ತಾಲ್ಲೂಕು ರಚನೆಯಾಗಬೇಕಾಗಿತ್ತು. ಅದು ಆಗದೇ ಇರುವುದರಿಂದ ತುಂಬಾ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಬರುವ ವರ್ಷವಾದರೂ ರೆವಿನ್ಯೂ ವರ್ಷದಲ್ಲಿ ಸರಿಪಡಿಸಿ ಮೂಡಬಿದರೆ ತಾಲ್ಲೂಕನ್ನು ರಚನೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಭೂ ಸುಧಾರಣೆ ಮಸೂದೆಯ ವಿಷಯ. ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುವುದು ಬಹಳ ಅವಶ್ಯಕವಾಗಿದೆ. ಭೂ ಮಸೂದೆಯನ್ನು ಜಾರಿಗೆ ತಂದಿದ್ದೀರಿ, ರೂಲ್ಸ್ ತಯಾರು ಮಾಡಿದ್ದೀರಿ, ಜಾರಿಯಲ್ಲಿದೆ ಎಂದು ಹೇಳುತ್ತಾ ಇದ್ದೀರಿ. ಅದು ಯಾವ ಹಂತದಲ್ಲಿದೆ, ಹೇಗೆ ಇದೆ ಅಥವಾ ಚಾಲಗೇಣಿ ಒಕ್ಕಲಿಗೆ ಯಾವ ಪ್ರಯೋಜನವಾಗಿದೆ ಏನು ಎಂಬುದು ನಿರ್ದಿಷ್ಟವಾಗಿ ಗೊತ್ತಾಗುತ್ತಾ ಇಲ್ಲ. ಯಾರ ಹತ್ತಿರ ಕೇಳಿದರೂ ಗೊತ್ತಾಗುತ್ತಾ ಇಲ್ಲ. ವಕೀಲರಿಗೆ ಗೊತ್ತಿಲ್ಲ, ಸರ್ಕಾರದವರು ಬಿಲ್ ಪಾಸ್ ಮಾಡಿದ್ದಾರೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ಕಾರದ ಅಧಿಕಾರಿಗಳನ್ನು ಕೇಳಿದರೆ ಆರ್ಡರ್ ಬರುವವರೆಗೂ ನಾವೇನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಿಜವಾದ ಪರಿಸ್ಥಿತಿ ಯಾರಿಗೂ ಗೊತ್ತಾಗುತ್ತಾ ಇಲ್ಲ. ಈಗಾಗಲೇ ಈ ಮಸೂದೆ ಜಾರಿಗೆ ಬಂದಿರುವದರಿಂದ ಕೆಲವರಿಗೆ ಕಳವಳ ಉಂಟಾಗಿದೆ. ಮತ್ತೊಂದು ಕಡೆ ಯಾವ ರೀತಿ ಆಗುತ್ತದೆಯೋ ಅಂತ ಹೇಳಿ ಜನ ಕಂಗಾಲು ಪಡತಕ್ಕ ಪರಿಸ್ಥಿತಿ ಉಂಟಾಗಿದೆ. ಇದು ಬಹಳ ಮುಖ್ಯವಾದ ದೊಡ್ಡ ಪ್ರಶ್ನೆ. ಇದನ್ನು ಯೋಗ್ಯ ರೀತಿಯಲ್ಲಿ ಜಾರಿಗೆ ತರುವಂತೆ ಮಾಡಲು ಕೆಲಸ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ನೇಮಕಮಾಡಿ ಇದನ್ನು ಕ್ರಮಗೊಳಿಸಬೇಕು. ಇಲ್ಲದೇಹೋದರೆ ಇನ್ನು ಕೆಲವೇ ದಿವಸಗಳಲ್ಲಿ ಚುನಾವಣೆ ಬರುತ್ತದೆ. ಆ ಸಂದರ್ಭದಲ್ಲಿ ಶ್ರೀಮಂತರಿಗೆ ನೀವು ಲಾಗು ಆಗುವುದಿಲ್ಲ ಎಂದು ಹೇಳುತ್ತೀರಿ, ಅದೇರೀತಿ ಚಾಲ ಗೇಣಿಯವರಿಗೆ ನಿಮಗೂ ತೊಂದರೆಯಾಗುವುದಿಲ್ಲ ಎಂದು ಹೇಳುತ್ತೀರಿ. ಈ ರೀತಿ ನಿಮಗೆ ಶ್ರೀಮಂತರ ಹಣ ಬೇಕು, ಚಾಲ ಗೇಣಿಯವರ ಓಟು ಬೇಕು ಅಷ್ಟಕ್ಕಾಗಿ ಈ ಮಸೂದೆಯನ್ನು ತಂದು, ಇದು ಒಂದು ಅಂತರ ಪಿಶಾಚಿಯ ರೂಪದಲ್ಲಿ ಇದೆ ಇವತ್ತು ಇದೆ. ಎರಡು ಕಡೆಯವರಿಗೂ ಸಮಾಧಾನ ಹೇಳುವ ರೀತಿ ಇದನ್ನು ತಂದಿಟ್ಟಿದ್ದೀರಿ.

ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ಮಾತನಾಡುವಾಗ ನಮ್ಮ ಜಿಲ್ಲೆಯ ಮಟ್ಟಿಗೆ ಅಪಾರ ಪ್ರೇಮವನ್ನು ವ್ಯಕ್ತಪಡಿಸಿದರು. ನಮಗೆ ಬೇಕಾದ ಸಹಾಯ ಸೌಲತ್ತುಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಒಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಯಜಮಾನ ಇದ್ದ ಅವನಿಗೆ ಕೊನೆ ಮಗಳಮೇಲೆ ಬಹಳ ಪ್ರೀತಿ. ಕೊನೆಯ ಮಗಳು ಎಂದು. ಮಗಳು ದೊಡ್ಡವಳಾದಳು, 20 ವರ್ಷ ಆಯಿತು ಅವಳಮೇಲೆ ಎಷ್ಟೇ ಪ್ರೀತಿ ತೋರಿಸಿ ದರೂ ಅವಳ ಮನಸ್ಸಿನಲ್ಲಿ ಕಷ್ಟ ಏನಿದೆ ಎಂಬುದನ್ನು ತಿಳಿದುಕೊಳ್ಳಲಿಲ್ಲ. ಮನೆಯಲ್ಲಿ ಇಟ್ಟುಕೊಂಡಿದ್ದ, ಅವಳಿಗೆ ಮದುವೆ ಮಾಡಬೇಕು, ಗಂಡನನ್ನು ಹುಡುಕಬೇಕು, ಇದುಯಾವುದನ್ನೂ ಅವನು ಯೋಚನೆ ಮಾಡಲಿಲ್ಲ. 18 ವರ್ಷದ ನಂತರ ಯಾವ ಹೆಣು ಮಕ್ಕಳಿಗೇ ಆದರೂ ಮದುವೆ ಆಗಬೇಕೆಂಬ ಆಶೆ ಇರುವುದು ಸ್ವಾಭಾವಿಕ. ಹಾಗೆ ನಮ್ಮ ಮುಖ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಕೊನೆ ಹೆಣ್ಣು ಮಗಳಂತೆ ಪ್ರೀತಿ ತೋರಿಸುತ್ತಾ ಇದ್ದಾರೆ. ನಮಗೆ ಬೇಕಾದ ಯಾವ ಆಶೋತ್ತರಗಳನ್ನೂ ಈಡೇರಿಸುತ್ತಾ ಇಲ್ಲ, ನಮ್ಮ ಆಶೋತ್ತರ ಏನು ಅದರ ಬಗ್ಗೆ ಅವರಿಗೆ ಯಾವ ಕಳವಳವೂ ಕೂಡ ಇಲ್ಲ. ಆದ್ದರಿಂದ ಪ್ರೀತಿ ಉಂಟು ಅಂದಾಕ್ಷಣಕ್ಕೆ ಸಮಾಧಾನ ವಾಗಲಾರದು, ದಕ್ಷಿಣ ಕನ್ನಡ ಜಿಲ್ಲೆಯಮಟ್ಟಿಗೆ ಬಹಳ ಪ್ರೀತಿ ಇರಬಹುದು ಆದರೆ ಅವರ ಕಷ್ಟ ಏನಿದೆ ? ತಮ್ಮ ಕಾನೂನುಗಳನ್ನು ಯಾವ ರೀತಿ ಪರಿಪಾಲಿಸುತ್ತಾ ಇದ್ದಾರೆ, ಸರ್‌ಚಾರ್ಜ್ ಆಗಲಿ ರೆವಿನ್ಯೂ ಕಂದಾಯ ಆಗಲಿ ಯಾವುದನ್ನೂ ಬಾಕಿ ಇಡದೇ ಕೊನೆಯ ಮಗಳ ಹಾಗೆ ಒಳ್ಳೆಯ ರೀತಿಯಲ್ಲಿ ಕೊಟ್ಟರೂ ಕೂಡ ಅವಳಿಗೆ ಬೇಕಾದ ನೆರವು ಕೊಡದಿದ್ದರೆ ಏನು ಪ್ರಯೋಜನ ? ಯಜಮಾನ ಕೊನೆ ಮಗಳನ್ನು ಯಾವ ರೀತಿ ಪ್ರೀತಿ ಯಿಂದ ನೋಡಿದನೋ ಆ ರೀತಿ ಪ್ರೀತಿಯಿಂದ ನೋಡಿದಂತಾಗಿ ಬೇಕಾದ ಆಶೋತ್ತರಗಳನ್ನು ನೇರವೇರಿಸಿದಂ ತಾಗುವುದಿಲ್ಲ.

ಕ್ಷಾಮದ ವಿಷಯ ಮಾತನಾಡುವುದಾದರೆ ಕೆಲವು ಕಡೆ ಮಳೆ ಬಾರದೆ ಇರಬಹುದು, ಆದರೆ ಕರಾವಳಿ ಪ್ರದೇಶದಲ್ಲಿ ಮತ್ತೊಂದು ತೊಂದರೆ ಇದೆ, ಉಪ್ಪು ನೀರಿನ ಪ್ರಕೋಪದಿಂದ ಎರಡನೆಯ ಮತ್ತು ಮೂರನೆಯ ಬೆಳೆಗೆ ನಷ್ಟವಾಗುತ್ತಿದೆ. ಈ ವರ್ಷ ಸುಮಾರು 30—35 ಲಕ್ಷ ರೂಪಾಯಿಗಳಷ್ಟು ಬೆಳೆ, ಮನೆಗಳು ಮುಂತಾ ದುವುಗಳಿಗೆ ನಷ್ಟವಾಗಿದೆ. ಆದರೆ ಪರಿಹಾರ ಸಿಕ್ಕಿರುವುದೆಷ್ಟು ? ಕೇವಲ 23 ಸಾವಿರ ರೂಪಾಯಿ ದೊರೆ ತಿದೆ. ಇದು ಎಷ್ಟು ಹಾಸ್ಯಾಸ್ಪದವಾಗಿದೆ ? ಇದು ಸರಿಯಲ್ಲ. ಸರಕಾರದವರು ಚಿತ್ರದುರ್ಗ, ರಾಯಚೂರು ಮುಂತಾದ ಕಡೆಗಳಿಗೆ ಲಕ್ಷಗಟ್ಟಲೆ ಪರಿಹಾರ ಕೊಡುತ್ತಿರುವಾಗ ಕರಾವಳಿ ಪ್ರದೇಶಕ್ಕೆ ಈ ವರ್ಷ ಕೊಟ್ಟಿರುವುದು ಕೇವಲ ಕಡಮೆ. ಇದನ್ನು ಗಮನಿಸಿ ಅಲ್ಲಿಗೆ ಕೂಡಲೆ ತಕ್ಕಷ್ಟು ಪರಿಹಾರ ಕೊಡಬೇಕೆಂದು ವಿನಂತಿಮಾಡುತ್ತೇನೆ.

ಶ್ರೀ ಎನ್. ಎ. ಕರಿಲಿಂಗಣ್ಣನವರ್ (ಗೋಕಾಕ್).—ಅಧ್ಯಕ್ಷರೇ, ಕಂದಾಯ ಸಚಿವರೇನು ಈ ಸಭೆಯ ಮುಂದೆ ಡಿಮ್ಯಾಂಡುಗಳನ್ನಿಟ್ಟಿದ್ದಾರೆ ಅದನ್ನು ತ್ರಿಕರಣಪೂರ್ವಕವಾಗಿ ಸ್ವಾಗತಿಸಿ ಕೆಲವೊಂದು ಮಾತುಗಳನ್ನು ಹೇಳುತ್ತೇನೆ. ಮುಖ್ಯವಾಗಿ ಮಾತನಾಡಬೇಕಾಗಿರುವುದು ಅಭಾವ ಪರಿಸ್ಥಿತಿಯ ವಿಚಾರ. ನಮ್ಮ ಪ್ರಾಂತ ದಲ್ಲಿ ಸುಮಾರು 10—15 ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಇದೆ. ಬೆಳಗಾಂ ಜಿಲ್ಲೆಯಲ್ಲಿ ಗೋಕಾಕ್, ಸೌಂದತ್ತಿ, ರಾಮದುರ್ಗ, ಅಥಣಿ—ಈ 4 ತಾಲ್ಲೂಕುಗಳಲ್ಲಿ ಅಭಾವ ಪರಿಸಿತಿಯಿಂದ ತೊಂದರೆ ಅಧಿಕವಾಗಿದೆ. ಗೋಕಾಕ್ ತಾಲ್ಲೂಕಿನಲ್ಲಿ 60 ಹಳ್ಳಿಗಳಲ್ಲಿ 3—4 ವರ್ಷದಿಂದ ಮಳೆ ಬೆಳೆ ಇಲ್ಲ, ಈ ವರ್ಷ ಬಿತ್ತನೆಯೇ ಮಾಡಿಲ್ಲ. ಹೀಗಾಗಿ ಅಲ್ಲಿ ಜನರಿಗೆ ಉದ್ಯೋಗವಿಲ್ಲ, ಭೂಮಿ ಇರುವವರು ತಮ್ಮ ಜಮೀನನ್ನು ಅಥವಾ ಬೇರೆ ಒಡವೆ ವಸ್ತುಗಳನ್ನು ಅಡವಿಟ್ಟು ಜೀವನಮಾಡಬೇಕಾಗಿದೆ. ಜಮೀನಿಲ್ಲದಿರುವವರು ಏನಾದರೂ ಉಪಜೀವನ ಮಾಡುವುದಕ್ಕೆ ಮಾರ್ಗವಿಲ್ಲವಾಗಿದೆ. ಅವರಿಗೆ ಕೂಲಿ ಹೊರತು ಬೇರೆ ಕೆಲಸವಿಲ್ಲ. ಈ ಅಭಾವ ಪರಿಸ್ಥಿತಿ ಯಲ್ಲಿ ಕೂಲಿ ಸಿಕ್ಕುತ್ತಿಲ್ಲ. ಇದರ ಸಲುವಾಗಿ ಸರಕಾರ ಕೂಲಿ ಒದಗಿಸಿದರೆ ಅದರಿಂದ ಏನಾದರೂ ದೊರೆತು ಜೀವನಮಾಡಬಹುದು. ಅದರ ಸಲುವಾಗಿ ಮುಖ್ಯವಾಗಿ ನಮ್ಮ ತಾಲ್ಲೂಕಿನ 60 ಹಳ್ಳಿಗಳಿಗೆ ವಿಶೇಷ ಗಮನ ಕೊಟ್ಟು ಅಲ್ಲಿ ಏನಾದರೂ ಕಾಮಗಾರಿ ತೆಗೆದುಕೊಳ್ಳಬೇಕೆಂದು ವಿನಂತಿಮಾಡುತ್ತೇನೆ. ಸಾಮಾನ್ಯವಾಗಿ ಆ ಭಾಗದಲ್ಲಿ ಮಳೆಯೇ ಆಗುವುದಿಲ್ಲ. ಕೆಲವು ಭಾಗಗಳಲ್ಲಿ ಕೇವಲ 10—12 ಇಂಚು ಮಳೆಯಾಗುವುದು. ನಮ್ಮಲ್ಲಿ ಇರಿಗೇಷನ್ ಮಾಡಬೇಕಾದರೆ ಘಟಪ್ರಭ ಮೊದಲಾದ ದೊಡ್ಡ ಯೋಜನೆ ಬಿಟ್ಟರೆ ಕೆಳಮಟ್ಟದ ಇರಿಗೇಷನ್ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಆ ಕೆಲಸ ಮಾಡುವುದಿಲ್ಲ, ಮಳೆಯಿಲ್ಲದೆ ಭೀಕರ ಪರಿಸ್ಥಿತಿ ಇದೆ. ಇದರ ಸಲುವಾಗಿ ತೀವ್ರವಾಗಿ ಕೆಲಸ ತೆಗೆದುಕೊಂಡು ಕೂಲಿ ಒದಗಿಸಿ ಹೊಟ್ಟೆಗೆ ಅನುಕೂಲ ಮಾಡಬೇಕೆಂದು ಸಲಹೆಮಾಡುತ್ತೇನೆ.

ಇನ್ನೊಂದು ವಿಷಯ ನಮ್ಮ ತಾಲ್ಲೂಕಿನಲ್ಲಿ ಇನಾಂ ಗ್ರಾಮಗಳಿವೆ, ಸುಮಾರು 22 ಇವೆ. ಅವುಗಳ ಮಾಲೀಕತ್ವ ಸರಕಾರಕ್ಕೆ ಬಂದಿದೆ. ಆದರೆ ಆ ಗ್ರಾಮಗಳವರು ಸಾಲ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಕಾರಣ ಪರಗಣ, ವತನ್ ಇದೆ. ಅಲ್ಲಿನವರು 6 ಪಟ್ಟು ತುಂಬಿದ್ದಾರೆ, 20 ಪಟ್ಟು ತುಂಬುವವರೆಗೆ ಸಾಲ ಕೊಡುವುದಿಲ್ಲವೆಂದು ಹೇಳುತ್ತಾರೆ. ಆದರೆ 20 ಪಟ್ಟು ತುಂಬಬೇಕೆಂದು ಹೇಳುವುದು ಯಾವ ನ್ಯಾಯ ? ಈಗ 6 ಪಟ್ಟು ತುಂಬಿ ಮಾಲೀಕರಾಗಿದ್ದಾರೆ. ಇದರ ಸಲುವಾಗಿ ಸರಕಾರದಿಂದ 'ಸಾಲ ತೆಗೆದುಕೊಳ್ಳಲು 20 ಪಟ್ಟು ತುಂಬಬೇಕೆಂಬ ನಿರ್ಬಂಧ ಹಾಕಬಾರದು. ಇದಲ್ಲದೆ ಕೆಲವು ಹಳ್ಳಿಗಳಲ್ಲಿ ಇನಾಂ ಜಮೀನಿಟ್ಟು

(ಶ್ರೀ ಎನ್. ಎ. ಕರಿಲಿಂಗಣ್ಣನವರ್)

ಕೊಂಡಿದ್ದವರು ಸಾರ್ವಜನಿಕರ ಕಟ್ಟಡದ ಸಲುವಾಗಿ 1—2 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಆ ಬಗ್ಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ. ಈಗ ಪುನಃ 20 ಪಟ್ಟು ತುಂಬಬೇಕು. ಅಂತಾ ತಿಳಿಸಿದಲ್ಲಿ ಇದು ಯಾವ ನ್ಯಾಯ ? ಪುಕ್ಕಟ್ಟೆಯಾಗಿ ಜಮೀನು ಕೊಟ್ಟು 20 ಪಟ್ಟು ತುಂಬಿ ಅಂತಾ ಅಂದರೆ ಮಾಲೀಕರು ತುಂಬಲು ಸಾಧ್ಯವಿಲ್ಲ 20 ಪಟ್ಟನ್ನು ಜಮೀನು ಕೊಟ್ಟವರೇಕೆ ತುಂಬಬೇಕು ? ಅವರು ನಾವು ತುಂಬುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಆ ಜಮೀನಿನಮೇಲೆ ಸರಕಾರದ ಸಹಾಯದಿಂದ ಕಟ್ಟಿದ ಇಮಾರತಿ ಆ ಜಮೀನು ಕೊಟ್ಟವನದು ಆಗುವುದು. ಇದರಿಂದ ನಷ್ಟ ಸರಕಾರ ಹಾಗೂ ಸರಕಾರದ್ದು ಆಗುವುದು ಕಾರಣ ಇದನ್ನು ಪರಿಶೀಲಿಸಿ ಸರಿಪಡಿಸಬೇಕಾಗಿ ವಿನಂತಿ. ಇದಲ್ಲದೆ ರೈತರಿಗೂ ಸಹ ತಕಾವಿ ಸಾಲ ಬೇಡಿದಲ್ಲಿ 20 ಪಟ್ಟು ತುಂಬಬೇಕೆಂದು ಇರುವ ನಿರ್ಬಂಧವನ್ನು ತಪ್ಪಿಸಿ ರೈತರಿಗೆ ಸಾಲ ದೊರೆಯಲು ಅವಕಾಶ ಮಾಡಿಕೊಡಬೇಕೆಂದು ಸಲಹೆಮಾಡುತ್ತೇನೆ.

ಮೂರನೆಯದಾಗಿ ಈಗ ಪ್ರತಿಯೊಂದು ತಾಲ್ಲೂಕಿನಲ್ಲೂ ಮೊದಲಿದ್ದುದಕ್ಕಿಂತ ಮೂರು ಪಟ್ಟು ನೌಕರರ ಸಂಖ್ಯೆ ಬೆಳೆದಿದೆ, ಆದರೆ ನಮಗೆ ಸ್ವರಾಜ್ಯ ಸಿಕ್ಕುವ ಮುಂಚೆ ಎಷ್ಟು ತೀವ್ರವಾಗಿ ಉತ್ತರ ಸಿಕ್ಕುತ್ತಿತ್ತೋ ಈಗ ಮೂರು ಪಟ್ಟು ಸಿಬ್ಬಂದಿ ಹೆಚ್ಚಿದರೂ ಅಷ್ಟು ತೀವ್ರವಾಗಿ ಸಿಕ್ಕುತ್ತಿಲ್ಲ. ಕಾರಣ ನಮ್ಮ ಶಿಥಿಲತನವೋ ಅಥವಾ ಇನ್ನೇನೋ ತಿಳಿಯದು. ಅಂತೂ ಯಾವ ಕೆಲಸವೂ ಆಗುತ್ತಿಲ್ಲ. ತಲಾಟಿಯಿಂದ ಒಂದು ಕಮ್ಯಾಂಡ್ ಪಡೆಯಬೇಕಾದರೆ ಬಹಳ ಹಣ ಖರ್ಚುಮಾಡಬೇಕು. ಇದರ ಸಲುವಾಗಿ ಒಂದು ಸಲಹೆಮಾಡುತ್ತೇನೆ. ಪ್ರತಿ ವರ್ಷ ಸರಕಾರ ಫಾಳಿ ಕೊಡುವಾಗ ರೈತರಿಗೆ ಕಮ್ಯಾಂಡ್ ಉತ್ತಾರ್ ಒದಗಿಸಬೇಕು. ಅದಿದ್ದರೆ ಸಾಲ ಪಡೆಯಲು ರಿಕಾರ್ಡು ಸರಿಯಾಗಿದೆಯೇ ಇಲ್ಲವೇ ಎಂದು ನೋಡಲು ಅನುಕೂಲವಾಗಿರುತ್ತದೆ. ಈಗ ತಲಾಟಿ ರಿಕಾರ್ಡಿನಲ್ಲಿ ಏನುಬೇಕಾದರೂ ಮಾಡಿ ರೈತರು ಸರ್ಕಲ್ ಆಫೀಸರಕಡೆ ಹೋಗುವಂತೆಮಾಡಿ ಲಂಚ ಸೆಳೆಯಲು ಅವಕಾಶವಿದೆ. ಇದರ ಸಲುವಾಗಿ ಕಮ್ಯಾಂಡ್ ಉತ್ತಾರ ರೈತರಿಗೆ ಕೊಟ್ಟರೆ ಸರಿಯಾಗುತ್ತದೆ. ಮತ್ತೊಂದು ಈಗ ತಲಾಟಿ ಭೂಮಿ ಇರುವ ಜಾಗಕ್ಕೆ ಹೋಗದೆ ಪೀಕ್ ಪಹಣಿ ತಯಾರುಮಾಡುತ್ತಾನೆ ಮನೆಯಲ್ಲೇ ಕುಳಿತು ಅದನ್ನು ಬರೆಯುತ್ತಾನೆ. 10 ಎಕರೆ ಜೋಳವಿದ್ದರೆ ಎರಡು ಎಕರೆ ಎಂದು ಬರೆಯಬಹುದು. ಇದರಿಂದ ಮುಂದೆ ಗೊಂದಲವಾಗುತ್ತದೆ, ಲೆವಿ ವಿಚಾರದಲ್ಲಿ ಕಷ್ಟವಾಗುತ್ತದೆ. ಇನ್‌ಕಂಟ್ಯಾಕ್ಸು ತಪ್ಪಿಸಲು ಅದಕ್ಕೆ ತಕ್ಕಂತೆ ಬರೆದಿರಬಹುದು ಎಂಬ ಅಭಿಪ್ರಾಯ ಇದರಿಂದ ಬರುವುದಕ್ಕೆ ಕೂಡ ಅವಕಾಶವಿದೆ. ಈ ದೃಷ್ಟಿಯಿಂದ ಪ್ರತಿ ವರ್ಷ ರೈತರಿಗೆ ಕಮ್ಯಾಂಡ್ ಉತ್ತಾರ ಸಿಕ್ಕುವಹಾಗೆ ಏರ್ಪಾಡು ಮಾಡಬೇಕು.

3-30 P. M.

ಇನ್ನು ನಾಲ್ಕನೇಯದಾಗಿ ಹೇಳುವುದೇನೆಂದರೆ, ಈ ಇಲಾಖೆಯಲ್ಲಿ ಕೆಲವು ಪ್ರಕರಣಗಳು ಹತ್ತು ಹದಿನೈದು ವರ್ಷಗಳಿಂದ ನಿರ್ಣಯವಾಗದೇ ಬಿದ್ದುಕೊಂಡಿವೆ. ಇಂಥ ಪ್ರಕರಣಗಳು ತೀವ್ರವಾಗಿ ನಿರ್ಣಯವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ ಅಭಾವ ಪರಿಸ್ಥಿತಿ ಬಗ್ಗೆ ಹೇಳುತ್ತೇನೆ. ಇಂದು ದೇಶದಲ್ಲಿ ಅಭಾವ ಇದೆ. ದೇಶದಲ್ಲಿ ಎಷ್ಟು ಆಹಾರ ಧಾನ್ಯ ಉತ್ಪತ್ತಿಯಾಗುತ್ತದೆ ಎಂಬುದನ್ನು ಲೆಕ್ಕ ಹಾಕುವುದಕ್ಕೆ ಬ್ರಿಟಿಷರ ಕಾಲದಲ್ಲಿ ನಡೆದುಕೊಂಡು ಬಂದಂಥ ಆಣೆವಾರಿ ಪದ್ಧತಿಯನ್ನು ಈಗಲೂ ಸಹ ಅನುಸರಿಸುತ್ತಿದ್ದಾರೆ. ಇಂದಿನ ಹೊಸ ಪರಿಸ್ಥಿತಿಯಲ್ಲಿ ಹಳೇ ಪದ್ಧತಿಯ ಆಣೆವಾರಿ ಅನುಸರಿಸುವುದು ಸರಿಯಲ್ಲ. ಆಣೆವಾರಿ ಮಾಡುವುದಕ್ಕೆ ಹೊಸ ಪದ್ಧತಿ ಇಟ್ಟುಕೊಳ್ಳುವುದು ಯೋಗ್ಯ. ಯೋಗ್ಯ ರೀತಿಯಲ್ಲಿ ಆಣೆವಾರಿ ಮಾಡುವುದಕ್ಕೆ ಹೊಸ ಪದ್ಧತಿ ಪ್ರಾರಂಭ ಮಾಡಬೇಕೆಂದು ಸಲಹೆಮಾಡಿ ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಈ ಭಾಷಣ ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರುವ ಬೇಡಿಕೆಗಳ ಬಗೆ ಒಂದೆರಡು ಸಲಹೆ ಕೊಡಬಯಸುತ್ತೇನೆ. ಮೊದಲು ಪಶು ಸಂಗೋಪನೆ ಬಗ್ಗೆ ಹೇಳುವುದಾದರೆ Sheep Development ಸಂಬಂಧವಾಗಿ ಕುರಿಗಳನ್ನು ಕೊಳ್ಳುವಾಗ್ಗೆ ಸರಿಯಾದ ರೀತಿಯಲ್ಲಿ ತನಿಖೆ ಮಾಡದೇ ರೇಟು ಗೊತ್ತುಮಾಡಿ ಕುರಿಗಳನ್ನು ಕೊಂಡುಕೊಂಡಿರುವ ಪ್ರಸಂಗ ಅನೇಕ ಇವೆ. ಇಂಥ ಕೆಲವು ಕೇಸುಗಳು ಇಂದು ಕೋರ್ಟಿನಲ್ಲಿ ಸಹ ಇವೆ. ಕುರಿ ಕೊಂಡುಕೊಳುವುದಕ್ಕೆ ಎರಡು ಲಕ್ಷ ರೂಪಾಯಿ ಒದಗಿಸಲಾಗಿದೆ. ಯೋಗ್ಯ ರೀತಿಯಲ್ಲಿ ಉಪಯೋಗಿಸದಿದ್ದರೆ ಹಣ ಅಪವ್ಯಯವಾಗುತ್ತದೆ. ಆದುದರಿಂದ ಇನ್ನು ಮುಂದೆ ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗಬೇಕೆಂದು ಸಲಹೆಮಾಡುತ್ತೇನೆ. ಗುತ್ತಲದಲ್ಲಿ ಇರತಕ್ಕ ಬ್ರೀಡಿಂಗ್ ಸೆಂಟರಿನಲ್ಲಿ, ಒಳ್ಳೇ ತಳಿ ಉತ್ತಮ ರೀತಿಯಲ್ಲಿ ಬೆಳೆದದ್ದನ್ನು ನೋಡಿದ್ದೇನೆ. ಒಳ್ಳೇ ತಳಿ ಹೆಚ್ಚಿನ ರೀತಿಯಲ್ಲಿ ಬೆಳಸಬಹುದು. ಯಾಕಂದರೆ, ಇದಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಾ ಬಂದಿದ್ದೇವೆ.

ದನಗಳ ಒಳ್ಳೇ ತಳಿ ಬೆಳೆಯುವುದಕ್ಕೆ ತೇಗೂರು ಚಿಂತಾಪುರದಲ್ಲಿ ಇರತಕ್ಕ ಸಂಟರಿನಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೆ ಒಳ್ಳೇ ತಳಿ ಬೆಳೆಯದೇ ಇದ್ದ ಪರಿಸ್ಥಿತಿ ಇದೆ. ಕೋಳಿಯ ಉತ್ತಮ ತಳಿ ಬೆಳೆಯುವುದಕ್ಕೆ ಸಹ ಒಂದು ಸರಿಯಾದ ಉತ್ತಮ ವ್ಯವಸ್ಥೆ ಇಲ್ಲ. ಆದುದರಿಂದ ಇದಕ್ಕೆ ಆದ್ಯತೆಕೊಟ್ಟು ಸರಿಯಾದ ವ್ಯವಸ್ಥೆಮಾಡಿ ಜನರಿಗೆ ಒಳ್ಳೇ ತಳಿ ಕೊಟ್ಟು ಸುಧಾರಿಸುವಂತೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಈಗ ಇರತಕ್ಕ ವೆಟರಿನರಿ ಹಾಸ್ಪಿಟಲ್‌ಗಳು ಬಹಳ ಕಡಿಮೆಯಾಗಿವೆ, ಇವು ಸಾಲದು. ದನಗಳ ಸಂಖ್ಯೆಯ ಪ್ರಮಾಣದಲ್ಲಿ ಸಾಕಷ್ಟು ದನಗಳ ಆಸ್ಪತ್ರೆಗಳು ಇರಬೇಕು. ಸ್ಟಾಕ್‌ಮೆನ್ ಅವರ ಸಂಖ್ಯೆ ಕೂಡ ಕಡಿಮೆಯಾಗಿದೆ. ತಾಲ್ಲೂಕಿಗೆ ಒಂದು ಆಸ್ಪತ್ರೆ ಸಾಕಾಗುವುದಿಲ್ಲ. ಹತ್ತು ಸಾವಿರ ದನಗಳಿಗೆ ಒಂದು ಆಸ್ಪತ್ರೆ ಇರಬೇಕು. ದನಗಳಿಗೆ ರೋಗ ಬಂದು ದೊಡ್ಡ ಪ್ರಮಾಣದಲ್ಲಿ ದನಗಳು ಸಾಯುತ್ತವೆ. ದನಗಳಿಗೆ ಬರುವ ರೋಗಗಳಲ್ಲಿ ರೆಂಡರ್ ಪೆಸ್ಟ ರೋಗದಿಂದ ಹೆಚ್ಚು ದನಗಳು ಸಾಯುತ್ತವೆ. ಬೆಂಗಳೂರಿನಲ್ಲಿ ಸಾವಿರಾರು ರೂಪಾಯಿ ಬೆಲೆ ಬಾಳುವ ದನಗಳು ಈ ರೋಗದಿಂದ ಸತ್ತುಹೋಗಿವೆ. ಈ ರೆಂಡರ್ ಪೆಸ್ಟ ರೋಗ ತಡೆಗಟ್ಟುವುದಕ್ಕೆ ಸರ್ವ ಪ್ರಯತ್ನ ಮಾಡಬೇಕಾದ ಅಗತ್ಯ ಇದೆ. ಮುಂಜಾಗರೂಕತೆ ವಹಿಸಿ ಈ ಅಪಾಯ ಉಂಟಾಗದಂತೆಮಾಡಿ ಈ ರೋಗ ನಿರ್ಮೂಲನಮಾಡಲು ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಸೀರಂ ಇನ್‌ಸ್ಟಿಟ್ಯೂಟ್‌ನಲ್ಲಿ ಇರತಕ್ಕ ಎಕ್ಸ್‌ಪರ್ಟ್ಸ್‌ರನ್ನು ಅಗ್ರಿಕಲ್ಚರಲ್ ಯುನಿವರ್ಸಿಟಿಗೆ ವರ್ಗಾಯಿಸಿದ್ದಾರೆ ಎಂಬ ಸಂಗತಿ ಕಂಡುಬಂದಿದೆ. ಇದರಿಂದ ಸೀರಂ ಇನ್‌ಸ್ಟಿಟ್ಯೂಟಕ್ಕೆ ಎಕ್ಸ್‌ಪರ್ಟ್ಸ್ ಇಲ್ಲದೆ ತೊಂದರೆಯಾಗಿದೆ. ಅಲ್ಲಿ ಸಾಕಷ್ಟು ಸಿಬ್ಬಂದಿ ಇಟ್ಟು ಸರಿಯಾದ ರೀತಿಯಲ್ಲಿ ನಡೆಯುವಂತೆ ಮುಂಜಾಗರೂಕತೆ ವಹಿಸಬೇಕೆಂದು ಹೇಳುತ್ತೇನೆ. ಯೂನಿವರ್ಸಿಟಿಗೆ ವರ್ಗಾಯಿಸಿದಂಥ ಎಕ್ಸಪರ್ಟ್ಸ್‌ರನ್ನು ಹಿಂತಿರುಗಿ ಕರೆಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಕೋಳಿ ಅಭಿವೃದ್ಧಿಗೆ ಹೆಚ್ಚು ಆದ್ಯತೆಕೊಟ್ಟು ಸಹಾಯಮಾಡಬೇಕು. ಸಹಾಯ ಧನ ಕೊಡುವಾಗ ಸರಿಯಾದ ಮೇಲ್ವಿಚಾರಣೆ ಇರಬೇಕು. ಕೆಲವು ಕಡೆ ಕೋಳಿ ಇಲ್ಲದೆ ಇರತಕ್ಕ ಪೋಲ್ಟ್ರೀ ಫಾರ್ಮುಗಳಿಗೆ ಯಾರದೋ ಹೆಸರಿನಲ್ಲಿ ಧನ ಸಹಾಯ ಕೊಡಲಾಗಿದೆ. ಇದು ಸರಿಯಲ್ಲ. ಕಟ್ಟುನಿಟ್ಟಾದ ಮೇಲ್ವಿಚಾರಣೆ ಮಾಡದೆ ಸಹಾಯ ಮಾಡುವುದು ಅನ್ಯಾಯ ಮತ್ತು ಹಣದ ಅಪವ್ಯಯವಾಗುತ್ತದೆ. ಸರಕಾರ ಕೊಡತಕ್ಕ ಹಣ ಸದುಪಯೋಗವಾಗುವ ಹಾಗೆ ಎಚ್ಚರಿಕೆ ವಹಿಸಬೇಕು.

ಪಶು ಸಂಗೋಪನೆ ಇಲಾಖೆಯಲ್ಲಿ ತೃಪ್ತಿಕರವಾಗಿ ಕೆಲಸ ನಡೆದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಕೆಲವು ಕಡೆ ಹಣ ದುರುಪಯೋಗವಾಗಿದೆ, ಕೆಲವುಕಡೆ ಮೇಲ್ವಿಚಾರಣೆಯ ಅಭಾವ ಕಂಡುಬರುತ್ತದೆ. ಈ ನ್ಯೂನತೆಗಳನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕು.

ಇನ್ನು ಹಾಲಿನ ಕೇಂದ್ರದ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಧಾರವಾಡ ಹುಬ್ಬಳ್ಳಿ ನಗರಗಳು ಬೃಹದಾಕಾರವಾಗಿ ಬೆಳೆದು ಜನಸಂಖ್ಯೆ ಹೆಚ್ಚಾಗುತ್ತಿದೆ. ಈಗಿರುವ ಯೋಜನೆಯ ಪ್ರಕಾರ ಹಸುಗಳನ್ನು ಕೊಂಡುಕೊಳ್ಳುವುದಕ್ಕೆ ಧನ ಸಹಾಯ ಮಾಡಲಾಗುತ್ತದೆ. ಅವರಿಂದ ಹಾಲನ್ನು ಪಡೆದು ಸರಬರಾಜುಮಾಡುವ ವ್ಯವಸ್ಥೆ ಇದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಾಲು ಸರಬರಾಜು ಮಾಡುವುದಕ್ಕೆ ದನಗಳ ಸಂಖ್ಯೆ ಹೆಚ್ಚು ಮಾಡಬೇಕಾಗುತ್ತದೆ. ಧಾರವಾಡ ಮತ್ತು ಹುಬ್ಬಳ್ಳಿ ಹಾಲಿನ ಯೋಜನೆಯು ಇನ್ನೂ ಪ್ರಿಲಿಮಿನರಿ ಸ್ಟೇಜಿನಲ್ಲಿದೆ. ಈ ಯೋಜನೆಗೆ ಹೆಚ್ಚು ಹಣ ಒದಗಿಸಿ ಹಾಲು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಭೂ ಕಂದಾಯದ ವಿಚಾರ ಹೇಳುತ್ತೇನೆ. ಮಾನ್ಯ ಸ್ನೇಹಿತರಾದ ಶ್ರೀಮಾನ್ ಐಕಳ ಅವರು ಮಾತನಾಡುತ್ತಾ ಈ ವಿಚಾರ ವಿಸ್ತಾರವಾಗಿ ಹೇಳಿದ್ದಾರೆ. ಅವರು ಹೇಳಿದ ಹಾಗೆ ದೊಡ್ಡದಾಗಿ ಇರತಕ್ಕ ತಾಲ್ಲೂಕುಗಳನ್ನು ಒಡೆದು ಚಿಕ್ಕ ತಾಲ್ಲೂಕು ಮಾಡಬೇಕು. ನಮ್ಮ ರಾಜ್ಯದಲ್ಲಿ ಧಾರವಾಡ ಜಿಲ್ಲೆಯು ದೊಡ್ಡದಾಗಿದೆ. ಈ ಧಾರವಾಡ ಜಿಲ್ಲೆಯಲ್ಲಿ 16 ತಾಲ್ಲೂಕುಗಳಿವೆ. ಈ ದೊಡ್ಡದಾದ ಜಿಲ್ಲೆಯನ್ನು ಒಡೆದು ಎರಡು ಜಿಲ್ಲೆಗಳನ್ನಾಗಿ ಮಾಡಿದರೆ ಆಡಳಿತವು ಸುಗಮವಾಗಿ ನಡೆಯುತ್ತದೆ ಎಂದು ಹೇಳುತ್ತೇನೆ. ಒಂದು ಲಕ್ಷ ಜನಸಂಖ್ಯೆಗೆ ಒಂದು ತಾಲ್ಲೂಕು ಇರುವಂತೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಎರಡು ತಾಲ್ಲೂಕುಗಳನ್ನು ಬೇರ್ಪಡಿಸಿದ್ದಾರೆ. ಅದೇ ರೀತಿಯಾಗಿ ಬೇರೆಕಡೆ ಸಹ ಮಾಡುವುದು ಒಳ್ಳೆಯದು. ಇದಲ್ಲದೆ ಒಂದು ಜಿಲ್ಲೆಯಲ್ಲಿ ಎಂಟು ಹತ್ತು ತಾಲ್ಲೂಕುಗಳು ಇರುವಹಾಗೆ ಮಾಡುವುದಕ್ಕೆ ರಾಜ್ಯಾದ್ಯಂತ ಸರ್ವೆ ನಡೆಸಬೇಕು. ಈ ರೀತಿ ಮಾಡಿದರೆ ಆಡಳಿತ ಸುಗಮವಾಗಿ ನಡೆಯುತ್ತದೆ.

ಇನ್ನು ಶಾನುಭೋಗರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಕೆಲವು ಕಡೆ ನೇಮಕಮಾಡಿದ ತಲಾಟಿಗಳು ಪೀಕ್ ಪಾಹಣಿ ಸರಿಯಾಗಿ ಬರೆದಿಲ್ಲ. ಈ ತಲಾಟಿಗಳಿಗೆ 80 ರೂಪಾಯಿ ಸಂಬಳ ಅಷ್ಟೇ ದೊರೆಯುತ್ತದೆ. ಅವರು ಏಳು ಹಳ್ಳಿಗಳನ್ನು ಸುತ್ತಿ ಕೆಲಸ ಮಾಡಬೇಕಾಗುತ್ತದೆ. ಇದಲ್ಲದೆ ಅವರು ತಾಲ್ಲೂಕ ಹೆಡ್ ಕ್ವಾರ್ಟರ್ಸಿಗೆ ಬಂದಾಗ್ಗೆ ಅವರಿಗೆ ಟಿ. ಎ. ಡಿ. ಎ. ಯಾವುದೂ ದೊರೆಯುವುದಿಲ್ಲ. ಇದರಿಂದ ಅವರಿಗೆ ಕಷ್ಟವಾಗಿದೆ.

(ಶ್ರೀ ಸಿದ್ದಯ್ಯ ಕಾಶೀಮಠ್)

ಆದುದರಿಂದ ಅವರಿಗೆ ಒಂದು ಪೇ ಸ್ಕೇಲ್ ಕೊಡುವ ಬಗ್ಗೆ ವಿಚಾರಮಾಡಬೇಕು. ಹಾಗು ಟಿ. ಎ., ಡಿ. ಎ. ಕೊಡುವುದಕ್ಕೆ ಅನುಕೂಲಮಾಡಿ ಕೊಡಬೇಕು. ಮತ್ತು ಅವರ ದರ್ಜೆ ಕೂಡ ಗೊತ್ತುಮಾಡಬೇಕು. ಒಬ್ಬ ತಲಾಟಿಗೆ 7 ಹಳ್ಳಿಗಳನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ವಿಚಾರಮಾಡಬೇಕು. ಹಿಂದಿನ ಕಾಲದಲ್ಲಿ ಒಂದು ಹಳ್ಳಿಗೆ ಒಬ್ಬ ಪಟೇಲ ಒಬ್ಬ ಶಾನುಭೋಗ ಇರುತ್ತಿದ್ದರು. ಈಗ 7 ಹಳ್ಳಿಗಳಿಗೆ ಒಬ್ಬ ಪಟೇಲ ಒಬ್ಬ ಶಾನುಭೋಗ ಇದ್ದರೆ ಕೆಲಸಮಾಡಲು ಬಹಳ ಕಷ್ಟವಾಗುತ್ತದೆ. ಇವರಿಗೆ ಕೆಲಸಮಾಡಲು ಸುಗಮವಾಗುವಂತೆ ಸರ್ಕಾರದವರು ಒಂದು ನಿಯಮವನ್ನು ಮಾಡಬೇಕೆಂದು ಹೇಳುತ್ತೇನೆ. ನಮ್ಮ ಬೊಂಬಾಯಿ ಕರ್ನಾಟಕದ ಕಡೆ ಓಲೆಕಾರರು ಎಂದು ಇದ್ದಾರೆ. ಇವರ ಬಗ್ಗೆ ಯಾವರೀತಿಯ ನಿಯಮಗಳನ್ನೂ ಸಹ ಮಾಡದೆ ಪಟೇಲ, ಶಾನುಭೋಗರ ಬಗ್ಗೆ ತೆಗೆದುಕೊಂಡಿರುವ ಹಾಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಪಟೇಲ ಶಾನುಭೋಗರಿಗೆ ಯಾವರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಒಂದು ನಿರ್ಣಯವನ್ನು ಕೈಗೊಂಡಿದ್ದೀರೋ ಅದೇರೀತಿ ಇವರಿಗೂ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಿಕೊಡ ಬೇಕು ಎಂದು ಹೇಳುತ್ತೇನೆ.

ಹಳ್ಳಿಗಳಲ್ಲಿರುವ ಚಾವಡಿಗಳನ್ನು ರೆವಿನ್ಯೂ ಇಲಾಖೆಯವರು ಇಟ್ಟುಕೊಂಡಿದ್ದಾರೆ. ಇವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ಬಿಟ್ಟುಕೊಡದೆ ಇರುವುದರಿಂದ ಇವುಗಳು ಮುರಿದು ಬೀಳುವ ಪರಿಸ್ಥಿತಿಗೆ ಬಂದಿದೆ. ಇದರ ಬಗ್ಗೆ ನಿರ್ದಿಷ್ಟವಾದ ಒಂದು ನಿರ್ಣಯವನ್ನು ಮಾಡಿ, ಎಲ್ಲಾ ಚಾವಡಿಗಳನ್ನೂ ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಬೇಕು ; ಅಥವಾ ರೆವಿನ್ಯೂ ಇಲಾಖೆಯವರೇ ರಿಪೇರಿ ಮಾಡಿಸಲಿಕ್ಕೆ ಮುಂದೆ ಬರಬೇಕು. ಇಲ್ಲ ದಿದ್ದರೆ ಇನ್ನು ಸ್ವಲ್ಪ ದಿವಸಗಳಲ್ಲಿ ಎಲ್ಲಾ ಚಾವಡಿಗಳು ಬಿದ್ದುಹೋಗಬಹುದು. ನಮ್ಮ ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ಈ ಚಾವಡಿಗಳು ಜಾಸ್ತಿ ಇವೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟು ಅವುಗಳ ಮುಖಾಂತರ ಚಾವಡಿಗಳ ರಿಪೇರಿ ಕೆಲಸವನ್ನು ಮಾಡಿಸುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಕ್ಷಾಮ ಪರಿಹಾರದ ಬಗ್ಗೆ ಹೇಳಬೇಕಾದರೆ, ಕೆಲವು ಕಡೆಗಳಲ್ಲಿ ರೈತರುಗಳು 3__4 ವರ್ಷ ಗಳಿಂದಲೂ ಬರಗಾಲಕ್ಕೆ ತುತ್ತಾಗಿರುವುದರಿಂದ, ಬಹಳ ಕಷ್ಟದಲ್ಲಿದ್ದಾರೆ. ಉಳುಮೆ ಕಾಲದಲ್ಲಿ ಅಂದರೆ 6 ತಿಂಗಳು ಹೇಗೋ ಜೀವನಮಾಡುತ್ತಾರೆ ; ಉಳಿದ ಆರು ತಿಂಗಳಲ್ಲಿ ಅನ್ನವಿಲ್ಲದೆ ಸಾಯುವ ಸ್ಥಿತಿಗೆ ಬರುತ್ತಾರೆ. ಆದ್ದರಿಂದ ಈ 6 ತಿಂಗಳ ಮಟ್ಟಿಗಾದರೂ ಇವರಿಗೆ ಕಾಮಗಾರಿಗಳನ್ನು ಒದಗಿಸಿಕೊಡಬೇಕು. ಈಗ ಈ ಕ್ಷಾಮ ಪರಿಹಾರ ಕಾಮಗಾರಿಗಳು ಎಂದರೆ ಕೇವಲ ಕೆರೆ ಕುಂಟೆಗಳು ಇದ್ದರೆ ಅವುಗಳನ್ನು ದುರಸ್ತಿಗಾಗಿ ತೆಗೆದು ಕೊಳ್ಳಬೇಕು ಎಂದು ಮಾಡಿದ್ದೀರಿ. ಆದರೆ ಧಾರವಾಡ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಈ ರೀತಿಯ ಕೆರೆ ಹೆಚ್ಚು ಇಲ್ಲ. ಆದ್ದರಿಂದ ಅಲ್ಲಿರುವ ಜನರಿಗೆ ಕೆಲಸ ಕೊಡುವುದಕ್ಕೆ ರಸ್ತೆಗಳ ಕೆಲಸವನ್ನಾದರೂ ತೆಗೆದು ಕೊಳ್ಳಬೇಕು. ಇದರಿಂದ ಸಾವಿರಾರು ಜನರು ಜೀವನ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳು ತ್ತೇನೆ.

ಅಫಾರೆಸ್ಟೇಷನ್‌ಗೆ ಎಂದರೆ, ಕಾಡು ಬೆಳೆಸುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಹೋದ ಸಾಲಿ ಗಿಂತಲೂ ಈ ಸಾಲಿನಲ್ಲಿ ಬಹಳ ಕಡಿಮೆ ಕೆಲಸ ತೆಗೆದುಕೊಂಡಿದ್ದೀರಿ, ಇದರಿಂದ ಹೆಚ್ಚು ಜನ ಲೇಬರರ್ಸ್‌ಗೆ ಕೆಲಸವಿಲ್ಲದೆ ಸುಮ್ಮನೆ ಕೂಡುವ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಹೆಚ್ಚಿನ ಕೆಲಸವನ್ನು ಸರ್ಕಾರದವರು ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ. ಈಗ ಲೇಬರರ್ಸ್ ಕೆಲಸವಿಲ್ಲದೆ ಅವರು ಸಾಯುವ ಸ್ಥಿತಿಗೆ ಬಂದಿರುವುದರಿಂದ ಅದರಿಗೆ ಸರಿಯಾಗಿ ಕೆಲಸವನ್ನು 6 ತಿಂಗಳ ಮಟ್ಟಿಗಾದರೂಕೊಟ್ಟು ಸಲಹುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).__ಸ್ವಾಮಿ, ಮಾನ್ಯ ಅಧ್ಯಕ್ಷರೆ, ಈ ಮಾನ್ಯ ಸಭೆಯಲ್ಲಿ ಚರ್ಚೆಯಾಗುತ್ತಿರುವ ಈ ರೆವಿನ್ಯೂ ಇಲಾಖೆಯ ಡಿಮ್ಯಾಂಡ್‌ಮೇಲೆ ನನ್ನ ಹಲವು ಸ್ನೇಹಿತರು ಒಳ್ಳೆಯ ಸಲಹೆ ಗಳನ್ನು ಕೊಟ್ಟಿದ್ದಾರೆ. ನಾನು ಈ ಡಿಮ್ಯಾಂಡ್‌ನ್ನು ಅನುಮೋದಿಸುತ್ತಾ, ನನ್ನ ಅಭಿಪ್ರಾಯ ಹೇಳಲು ಇಷ್ಟ ಪಡುತ್ತೇನೆ. ನಮ್ಮ ಬೆಂಗಳೂರು ದಕ್ಷಿಣ ತಾಲ್ಲೋಕ್ ಮತ್ತು ಉತ್ತರ ತಾಲ್ಲೋಕ್‌ನಲ್ಲಿ ಜಮೀನುಗಳನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು, ಮತ್ತು ಫ್ಯಾಕ್ಟರಿ ಯವರು, ತಮಗೆ ಇಷ್ಟಬಂದ ರೇಟನ್ನು ತಿಳುವಳಿಕೆ ಇಲ್ಲದೆ ಇರುವ ರೈತರುಗಳಿಗೆ ಕೊಟ್ಟು ಅವರ ಜಮೀನು ಗಳನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಹೊಸದಾಗಿ ಕಾಲೇಜು ಕಟ್ಟಬೇಕೆಂದು ಸೆಂಟ್ ಜೋಸೆಫ್ ಕಾಲೇಜಿ ನವರು ನೂರಾರು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಬಡವರು ಅಗ್ಗವಾಗಿ ಸಿಕ್ಕಿದ್ದಾರೆ ಎಂದು ತಿಳಿದುಕೊಂಡು, ಹೊರಗಡೆ ಒಂದು ಎಕರೆಗೆ 40__50 ಸಾವಿರ ರೂಪಾಯಿಗಳು ಇದ್ದರೆ, ಇವರಿಗೆ ಎಕರೆಗೆ 4__5 ಸಾವಿರಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ. ತಾವು ಇದನ್ನು ಶೀಘ್ರವಾಗಿ ತಮ್ಮ ಗಮನಕ್ಕೆ ತೆಗೆದು

ಕೊಂಡು ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕು. ಎಚ್‌ಎ.ಎಲ್. ಮತ್ತು ಎಚ್.ಎಂ.ಟಿ. ಕಡೆಯಲ್ಲೂ ಜನರ ಅನುಕೂಲಗಳನ್ನು ಸಹ ನೋಡದೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಈ ರೀತಿಯಾದರೆ ಅವರುಗಳು ಜೀವನ ಮಾಡುವುದಾದರೂ ಹೇಗೆ ? ಈ ವಿಚಾರವಾಗಿ 4 ವರ್ಷದಿಂದಲೂ ಹೇಳುತ್ತಿದ್ದೇನೆ. ಯಾವ ಒಬ್ಬ ಅಧಿಕಾರಿಯೂ ಸಹ ಈ ವಿಚಾರದಲ್ಲಿ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ನಾನು ಬಹಳ ವಿನಯದಿಂದ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಇದಕ್ಕೋಸ್ಕರವಾಗಿ ಒಂದು ರೆವಿನ್ಯೂ ಕಮಿಟಿಯನ್ನು ಮಾಡಿ, ಅದರ ಮೂಲಕ ರೈತರಿಗೆ ಏನು ಅನುಕೂಲಗಳು ಸಿಗಬೇಕೋ ಅದನ್ನು ತಾವು ಮಾಡಿಸಿ ಕೊಡಬೇಕು. ನೀವು ಸಹ ರೈತರಾಗಿದ್ದೀರಿ, ರೈತರ ವಿಷಯ ತಿಳಿಯದೇ ಇರುವವರಲ್ಲ. ದಯವಿಟ್ಟು ಏನಾದರೂ ಪರಿಹಾರ ಮಾಡಿಕೊಡಬೇಕೆಂದು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ. ದರಖಾಸ್ತಿನಲ್ಲಿ ಯಾರಾದರೂ ಒಬ್ಬ ಬಡ ರೈತ ಸ್ವಲ್ಪ ಜಮೀನನ್ನು ಕೇಳಿದರೆ ಯಾವ ಅಧಿಕಾರಿಯೂ ಸಹಾಯ ಮಾಡುವುದಿಲ್ಲ. ಯಾರಾದರೂ ಸಾಹುಕಾರರು ಸಹಾಯ ಮಾಡಿದರೆ ಅವರಿಗೆ ಅನುಕೂಲವಾಗುತ್ತಿದೆಯೇ ಹೊರತು ಸರ್ಕಾರ ದಿಂದ ಸಹಾಯವಾಗುತ್ತಿಲ್ಲ. ತಾವು ಬಡವರಿಗೆ ತಮ್ಮ ಕಾಲದಲ್ಲಿ ಸಹಾಯ ಮಾಡಿದರೆ ತಮಗೆ ಒಳ್ಳೆಯ ಹೆಸರು ಬರುತ್ತದೆ. ತಾಲ್ಲೋಕ್ ಆಫಿಸ್‌ಗೆ ರೈತ ಏನಾದರೂ ಬಂದರೆ ಅಲ್ಲಿಯ ಅಧಿಕಾರಿಗಳು ರೈತನನ್ನು ಮೂಗುಪ್ರಾಣಿಯಂತೆ ಕಾಣುತ್ತಾರೆ. ಪ್ರಜಾ ಸರ್ಕಾರ ಬಂದರೂ ಸಹ ನಮ್ಮ ತಾಲ್ಲೋಕ್ ಆಫೀಸ್‌ಗಳಲ್ಲಿ ಯಾವ ಬದಲಾವಣೆಗಳೂ ಆಗಿಲ್ಲ. ನಮ್ಮ ತಾಲ್ಲೋಕ್ ಆಫೀಸ್‌ನಲ್ಲಿ ಖಾತೆಗಳನ್ನು ಟ್ರಾನ್ಸ್‌ಫರ್ ಮಾಡುವ ಶ್ರೀ ನರಸಪ್ಪ ಎಂಬ ಗುಮಾಸ್ತ ಇದ್ದಾನೆ. ಈತ ಆಫೀಸ್‌ನಲ್ಲಿ ರೈತರ ಹತ್ತಿರ ಮಾತನಾಡುತ್ತಿದ್ದರೆ ರೋಡಿಗೆ ಕೇಳಿಸುತ್ತದೆ, ಅಷ್ಟೊಂದು ಒರಟಾಗಿ, ಜೋರಾಗಿ ಮಾತನಾಡುತ್ತಿರುತ್ತಾನೆ. ಆತನಿಗೆ ಸರಿಯಾದ ತಿಳುವಳಿಕೆ ಕೊಟ್ಟು ಈರೀತಿಯೆಲ್ಲಾ ಆಗದಹಾಗೆ ನೋಡಿಕೊಳ್ಳಬೇಕೆಂದು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಸ್ಕೇರ್‌ಸಿಟಿ ಕಂಡೀಷನ್ಸ್ ಬಗ್ಗೆ ನಮ್ಮ ತಾಲ್ಲೋಕಿನಲ್ಲಿ ಏನೇನು ಕೆಲಸಗಳನ್ನು ಮಾಡಿಸಬೇಕು ಎಂದು ನೋಡಲು ಶ್ರೀಮಾನ್ ಆಲೂರು ಹನುಮಂತಪ್ಪನವರು ಬಂದಿದ್ದರು. ಆದರೆ ಇದುವರೆಗೆ ನಮ್ಮ ತಾಲ್ಲೋಕಿನಲ್ಲಿ ಯಾವ ಕೆಲಸಗಳನ್ನೂ ತೆಗೆದುಕೊಂಡಿಲ್ಲ. ಈಗಿರುವ ತಹಸೀಲ್‌ದಾರರಿಂದ ಈ ಬಗ್ಗೆ ಎಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ಉಳಿದಿದೆ ಎಂದು ಒಂದು ರಿಪೋರ್ಟನ್ನು ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ. ;ನಮ್ಮ ಕಡೆಯಲ್ಲಿ ಬೆಳೆಯೆಲ್ಲಾ ಹಾಳಾಗುತ್ತಿದೆ ಎಂದು ಹೇಳಿದರೆ, ನೋಡೋಣ ಬನ್ನಿ, ನೋಡೋಣ ಬನ್ನಿ ಎಂದು ಹೇಳುತ್ತಾರೆಯೇ ಹೊರತು, ಇದುವರೆಗೆ ಯಾವ ಸಹಾಯವನ್ನೂ ಮಾಡಿಲ್ಲ. ಡೀಸೆಲ್ ಪಂಪ್‌ಸೆಟ್ಟುಗಳು ಎಂದು 25ನ್ನು ತೆಗೆದುಕೊಂಡು ರೈತರಿಗೆ ಕೊಟ್ಟಿದ್ದಾರೆ, ಒಂದೂ ಸಹ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಹಳೆಯವಕ್ಕೆ ಬಣ್ಣ ಹಚ್ಚಿ ಕೊಟ್ಟಿದ್ದಾರೋ ಏನೋ, ಅವುಗಳಿಂದ ರೈತರಿಗೆ ಅನುಕೂಲವಾಗುತ್ತಿಲ್ಲ. ದಯವಿಟ್ಟು ತಾವು ಅವುಗಳನ್ನು ತರಿಸಿ ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ಸೆಂಟ್ ಜೋಸೆಫ್ ಕಾಲೇಜಿನವರು ನೂರಾರು ಎಕರೆ ಜಮೀನನು ಸ್ವಾಧೀನಪಡಿಸಿಕೊಂಡು, ಸಂಬಂಧಪಟ್ಟವರಿಗೆ ಸ್ವಲ್ಪವೂ ಹಣವನ್ನು ಇದುವರೆಗೆ ಕೊಟ್ಟಿಲ್ಲ. ಇದರಿಂದ ಸಂಬಂಧಪಟ್ಟ ರೈತರುಗಳಿಗೆ ಬೆಳೆ ಬೆಳೆಯುವುದಕ್ಕೂ ಆಗುತ್ತಿಲ್ಲ. ಆ ಜಮೀನಿನಲ್ಲಿ ರೈತ ಬೆಳೆಯನ್ನಾದರೂ ಬೆಳೆದುಕೊಳ್ಳಬಹುದಾಗಿತ್ತು. ಆ ರೈತ ಪ್ರತಿದಿನ ಬಂದು ನನ್ನ ಪ್ರಾಣ ತಿನ್ನುತ್ತಾನೆ. ನನ್ನ ಮಾತು ತಾವು ಕೇಳುತ್ತಾ ಇಲ್ಲ. ನಾನು ಏನು ಮಾಡುವುದು ? ರೈತರು ನನ್ನನ್ನು ಸುಮ್ಮನೆ ಬಿಡುತ್ತಾರೆಯೇ. ಅಷ್ಟು ಅನಾದರಣೆ ಮಾಡಿದರೆ ಹೇಗೆ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವುದು ನಿಜ. ಆದರೆ ನಾನು ಬರುವುದಕ್ಕೆ ಮೊದಲೇ ಆ ಜಮೀನನ್ನು ಅಕ್ವೈರ್ ಮಾಡಿ ಸೆಂಟ್ ಜಾನ್ ಕಾಲೇಜಿಗೆ ಅದನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಜೋಡಿದಾರರು ಕೋರ್ಟಿನಲ್ಲಿ ಹೋಗಿ ಕಾಂಪನ್ಸೇಷನ್ ವಿಚಾರ ತೊಂದರೆಗೆ ಇಟ್ಟುಕೊಂಡಿದೆ. ಕೋರ್ಟ್ ನಲ್ಲಿ ಇರುವಾಗ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಅಂಥ ಸಂದರ್ಭದಲ್ಲಿ ಸ್ಟೇ ಮಾಡಿಸಿ ನಿಲ್ಲಿಸಿ. ಅವರಿಗೆ ಬೇರೆ ನೂರಾರು ಎಕರೆ ಜಮೀನು ಇದೆ, ಅದರಲ್ಲಿ ಕಟ್ಟಿಸಬಹುದಾಗಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಟೇ ಮಾಡುವ ಸ್ಟೇಜ್ ಒಂದು ಇದೆ. ಅವಾರ್ಡ್ ಆಗಿ ಜಮೀನನ್ನು ಹ್ಯಾಂಡ್ ಓವರ್ ಮಾಡುವ ಸ್ಟೇಜಿನಲ್ಲಿ ಸ್ಟೇ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಯಾರೇ ಆಗಲಿ ರೂಲ್ಸ್ ತಪ್ಪಿ ನಡೆದರೆ ನಾವು ಏನು ಮಾಡುವುದಕ್ಕಾಗುತ್ತದೆ! ರೈತರ ಕಷ್ಟ ಸುಖ ಹೇಳಿದೆ. ಇನ್ನು ತಮ್ಮ ಇಷ್ಟ. ಫ್ಯಾಕ್ಟರೀಸ್ ಕಡೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ ಒಂದೊಂದು ಮೈಲಿ ದೂರದಿಂದ ನೀರು ತಂದು ಕುಡಿಯುತ್ತಾರೆ ಬೇಸಿಗೆ ಕಾಲದಲ್ಲಿ ಅವರನ್ನು ಕೇಳುವವರೇ ದಿಕ್ಕಿಲ್ಲ. ಅಲ್ಲಿ ಓಡಾಡುವುದಕ್ಕೆ ದಾರಿ ಇಲ್ಲ. ಫ್ಯಾಕ್ಟರಿಯಲ್ಲಿ ಅವರಿಗೆ ಕೆಲಸ ಕೊಡಿಸಿ ಎಂದರೆ ಅದೂ ಕೊಡಿಸುವುದಿಲ್ಲ. ಇದಕ್ಕೆ ಒಂದು ಕಮಿಟಿ ಮಾಡಿಸಿ, ಬೆಂಗಳೂರು ನಾರ್ತ್ ತಾಲ್ಲೂಕು ಮತ್ತು ಸೌತ್ ತಾಲ್ಲೂಕು ಗಳಲ್ಲಿ ಭೂಮಿ ಅಕ್ವಿಸಿಷನ್ ಮಾಡುವಾಗ, ರೈತರಿಗೆ ಅನುಕೂಲ ಆಗುವ ಹಾಗೆ ಮಾಡಬೇಕು. ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡುವಾಗ, ಸರಿಯಾಗಿ ದುಡ್ಡು ಕೊಡಿಸಿ. ಅಲ್ಲಿಯ ಅಜುಬಾಜಿನಲ್ಲಿ ಎಷ್ಟು

(ಶ್ರೀ ಡಿ. ಮುನಿಚಿನ್ನಪ್ಪ)

ದುಡ್ಡು ಬರುತ್ತದೋ ಅಷ್ಟು ಕೊಡಿಸಿ. ಅಲ್ಲಿ ಚದರಗಜಕ್ಕೆ 80—100 ರೂಪಾಯಿಗಳ ಬೆಲೆ ಇದೆ. ಅದನ್ನು ಅವರಿಗೆ ಕೊಡಿಸಿ. ರೈತರು ನಿಮ್ಮನ್ನು ಹರಸುತ್ತಾರೆ. ಮೂರು ವರ್ಷಗಳಿಂದ ಒಂದು ಬಾವಿ ಮಾಡಿಸುವುದಕ್ಕೆ ರಿಕಾರ್ಡ್ ಬಿಲ್ಡ್ ಅಪ್ ಮಾಡಿದೆ. ಅದನ್ನು ಮಾಡಿಸಿ ಕೊಡಬೇಕು. ರೈತರ ಕಷ್ಟಸುಖ ನೋಡಬೇಕು. ಜಮೀನು ತೆಗೆದುಕೊಳ್ಳುವಾಗ ಬಡವರಿಗೆ ಅನುಕೂಲ ಆಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಸ್ವಾಮಿ, ಅಧ್ಯಕ್ಷರೆ, ರೆವಿನ್ಯೂ ಡಿಮ್ಯಾಂಡಿನ ಮೇಲೆ ಒಂದೆರಡು ಮಾತು ಆಡಬೇಕೆಂದಿದ್ದೇನೆ. ಸ್ವಾಮಿ, ನಮ್ಮ ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಎಷ್ಟೋ ಬಡತನದಿಂದ ರೈತರು ಇದ್ದಾರೆ ಕೆಲವರಿಗೆ ಭೂಮಿ ಕೊಟ್ಟಿದ್ದಾರೆ. ಅರ್ಧ ಜನರಿಗೆ ಪಟ್ಟ ಆಗಿದೆ; ಇನ್ನು ಅರ್ಧ ಜನರಿಗೆ ಆಗಿಲ್ಲ. ಏನು ಕಾರಣವೋ ಗೊತ್ತಾಗಲಿಲ್ಲ. ಆ ಜನರು 8—10 ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿದ್ದಾರೆ. ಗಿಡ ಕಡಿದು ಭೂಮಿಯನ್ನು ಚೆನ್ನಾಗಿ ಮಾಡಿದ್ದಾರೆ. ಅವರ ಕಡೆಯಿಂದ ಕಂದಾಯ ತೆಗೆದುಕೊಳ್ಳುತ್ತಿದ್ದಾರೆ. ಆದರೂ ಆ ರೈತರಿಗೆ ಭೂಮಿ ಸಾಗು ಮಾಡಬೇಡಿ ಎಂದು ನೋಟೀಸ್ ಕೊಡುತ್ತಿದ್ದಾರೆ. ಏನು ಕಾರಣವೋ ಗೊತ್ತಾಗುವುದಿಲ್ಲ. ಆದ್ದರಿಂದ ಅದನ್ನು ಸರಿಪಡಿಸಬೇಕು ಎಂದು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಅಲ್ಲಿ ಅಧಿಕಾರಿಗಳು ಒಬ್ಬರಿಗೆ ಒಂದು ತರಹ ಇನ್ನೊಬ್ಬರಿಗೆ ಇನ್ನೊಂದು ತರಹ ಮಾಡುತ್ತಾರೆ. ಜನರು ಹೋದರೆ ಯಾರೂ ಕೇಳುವವರೇ ಇಲ್ಲ. ಅದರ ಸಲುವಾಗಿ ತಾವು ಆರ್ಡರ್ ಮಾಡಿ ಅಲ್ಲಿರುವ ಹರಿಜನರಿಗೂ ಅನುಕೂಲ ಮಾಡಬೇಕು ಎಂದು ಹೇಳುತ್ತೇನೆ. ಕೆಲವರು ಅದು ಫಾರೆಸ್ಟ್ ಲ್ಯಾಂಡ್ ಎಂದು ಹೇಳುತ್ತಾರೆ. ಮತ್ತೆ ಕೆಲವರು ರೆವಿನ್ಯೂ ಲ್ಯಾಂಡ್ ಎಂದು ಹೇಳುತ್ತಾರೆ. ಇವರಲ್ಲಿ ಹೋದರೆ ಅದು ಅವರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ; ಅವರಲ್ಲಿ ಹೋದರೆ ಇವರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ. ಏನು ಕಾರಣವೋ ಗೊತ್ತಾಗುವುದಿಲ್ಲ. ಆದ್ದರಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಾಸೀಲ್ದಾರರಿಗೂ ಆರ್ಡರ್ ಕೊಟ್ಟು, ಇದುವರೆಗೆ ಯಾರು ಹರಿಜನರು 8—10 ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿರುತ್ತಾರೋ ಅವರಿಗೆಜಮೀನು ಕೊಟ್ಟು ಪಟ್ಟ ಮಾಡಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ನಾಲ್ಕು ವರ್ಷಗಳಿಂದ ಈ ವಿಚಾರ ಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ. ಇದುವರೆಗೆ ಏನೂ ಮಾಡಿಲ್ಲ. ರಾಯಚೂರು ಬಹಳ ಬಡತನದ ಪ್ರದೇಶ. ಅದು ಬಹಳ ಹಿಂದುಳಿದಿದೆ. ಅಲ್ಲಿ ಹರಿಜನರಿಗೆ ಭೂಮಿ ಕೊಟ್ಟು ಪಟ್ಟ ಮಾಡಿಸಿ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಹಾಲಿನ ಸೊಸೈಟಿ ಮಾಡಿದ್ದರೆ ಅವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಬಯಸುತ್ತೇನೆ. ಅವರಿಗೆ ಹಸು, ಕರುಗಳು ಎಲ್ಲಾ ನಮ್ಮ ಸರ್ಕಾರದವರು ಒದಗಿಸಿಕೊಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಇದು ರೆವಿನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟದ್ದು. ಅವರು ಮನಸ್ಸು ಮಾಡಿ ಹರಿಜನರಿಗೆ ತ್ವರಿತವಾಗಿ ಎಲ್ಲಾ ಅನುಕೂಲಗಳನ್ನು ಮಾಡಿಸಿಕೊಡಬೇಕು. ಜಿಲ್ಲಾಧಿಕಾರಿಗಳು ಹರಿಜನರಿಗೆ ಪಟ್ಟ ಮಾಡಿಸಿಕೊಡಬೇಕು ಎಂದು ಆರ್ಡರ್ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಕೋ-ಅಪರೇಟಿವ್ ಸೊಸೈಟಿಗೆ ಹೆಚ್ಚಿಗೆ ಸಹಾಯ ಮಾಡಿ ಅಭಿವೃದ್ಧಿ ಪಡಿಸಬೇಕು ಎಂದು ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನಮಸ್ಕಾರಗಳನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಾರಿ ಸಂಸ್ಥಾನದ ನಾನಾ ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ ಒದಗಿದೆ. ಅದಕ್ಕಾಗಿ ಅಲ್ಲಿನ ಜನರಿಗೆ ಸರ್ಕಾರದವರು ಸರಿಯಾದ ಕೆಲಸ ಕಾರ್ಯಗಳನ್ನು ಸಾಕಷ್ಟು ಒದಗಿಸದೇ ಈ ಅಧಿಕಾರಿಗಳು ಕಳಿಸಿದಂಥ ಕೆಲವು ಅಂಕಿ ಸಂಖ್ಯೆಗಳ ಮೇಲೆ ಕೆಲಸ ಕೊಟ್ಟರು. ಕೆಲಸಕ್ಕೆ ಜನ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಆಹಾರ ಮಂತ್ರಿಗಳು ಮಾತನಾಡಿದರು. ಇದು ಸರಿಯಾದಲ್ಲ. ಸಾವಿರಾರು ಜನರು ಕೆಲಸಕ್ಕೆ ಬರುವುದಕ್ಕೆ ಸಿದ್ಧವಾಗಿದ್ದಾರೆ. ಆಹಾರ ಮತ್ತು ಸರಿಯಾದ ಕೂಲಿ ಕೊಡುವ ವ್ಯವಸ್ಥೆ ಮಾಡಿ ಕೆಲಸ ಒದಗಿಸಬೇಕು. ಎಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಂತಹ ತಾಲ್ಲೂಕುಗಳಿಗೆ ಆ ಸೌಲಭ್ಯಗಳನ್ನು ಕೊಡಿ. ಹುಲ್ಲು ಮೇವನ್ನು ಯಾವುದಾದರೂ .ಪಿಡಬ್ಲ್ಯು.ಡಿ. ಇಲಾಖೆಯ ಲಾರಿಯಲ್ಲಿ ರೈತರಿಗೆ ಒದಗಿಸಿ ದನಕರುಗಳು ಸ್ವಲ್ಪ ಪ್ರಾಣ ಉಳಿಸಿಕೊಂಡು ಇರುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಒತ್ತಾಯ ಮಾಡುತ್ತೇನೆ. ಲಾರಿಗಳಲ್ಲಿ ಹುಲ್ಲು ತರಿಸುವಾಗ 300 ರೂಪಾಯಿಗಳು ಖರ್ಚಾಗುತ್ತದೆ. ಅದರ ಬದಲಾಗಿ ಚೆನ್ನಾಗಿ ಪ್ಯಾಕ್ ಮಾಡಿ ರೈಲ್ವೆಯಲ್ಲಿ ಬುಕ್ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ.

ಅನೇಕ ಕಡೆ ಕುಡಿಯುವುದಕ್ಕೆ ನೀರೂ ಇಲ್ಲ. ಅಂತಹ ಕಡೆ ಕೆರೆ ಅಂಗಳಗಳಲ್ಲಿ ಬಾವಿ ತೆಗೆಸಬೇಕು ಎಂದು ಹೇಳಿದ್ದೀರಿ. ಅದು ಕಾರ್ಯಗತ ಆಗುತ್ತಾ ಇಲ್ಲ. ಅದನ್ನು ಆದಷ್ಟು ಜಾಗ್ರತೆ ಕಾರ್ಯಗತಮಾಡಿಸಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಇನ್ನು ಅಮೃತಮಹಲ್ ದನಗಳಿಗೋಸ್ಕರ ಸಾಧಾರಣ 13 ಸಾವಿರ ಎಕರೆಯಷ್ಟು ಜಮೀನನ್ನು ಸರ್ಕಾರದವರ ವಶದಲ್ಲಿಟ್ಟುಕೊಂಡಿದ್ದಾರೆ. ಇದು ತಪ್ಪು. ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಒಂದೆರಡು ಕಡೆ ಉಳಿಸಿಕೊಂಡು ಮಿಕ್ಕದ್ದನ್ನೆಲ್ಲಾ ರೈತರಿಗೆ ವ್ಯವಸಾಯಕ್ಕೆ ಕೊಡುವುದು ಬಹಳ ಉತ್ತಮ. ಕೆಲವು ಕಡೆ ಸರ್ಕಾರಿ ಜಮೀನಿನ ಹೆಸರಿನಲ್ಲಿ ಅಧಿಕಾರಿಗಳು ಹುಲ್ಲು ಮತ್ತು ಮರಗಳನ್ನು ಮಾರಿ ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಉದಾಹರಣೆಗೆ ಲಕ್ಕಹಳ್ಳಿಯಲ್ಲಿ ಒಂದು ಕೆರೆ ಇದೆ. ಅದರಲ್ಲಿ ಅರ್ಧ ಅಮೃತಮಹಲಿಗೆ ಸೇರಿದ್ದು, ಅರ್ಧ ಗ್ರಾಮಕ್ಕೆ ಸೇರಿದ್ದು ಎಂದು ಹೇಳುತ್ತಾರೆ. ದನಗಳು ಎಲ್ಲಿಯಾದರೂ ನೀರು ಕುಡಿಯಲು ಹೋದರೆ ಅದನ್ನು ದೊಡ್ಡಿಗೆ ಹೊಡೆಯುತ್ತಾರೆ ಮತ್ತು ರೈತರಿಗೆ ದಂಡ ವಿಧಿಸುತ್ತಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ಬಂದು ಅದನ್ನು ನೋಡಿ, ಅದನ್ನು ಬಿಟ್ಟು ಕೊಡಬೇಕೆಂದು ಬರೆದಿದ್ದಾರೆ. ಇವತ್ತಿನವರೆಗೂ ಅದು ಏನಾಗಿದೆ ಎಂದು ಗೊತ್ತಿಲ್ಲ. ಇನ್ನು ಶಿವರ ಗ್ರಾಮದಲ್ಲಿ ಸುಮಾರು 300 ಎಕರೆ ಗೋಮಾಳ ಜಮೀನನ್ನು ರಿಲೀಸ್ ಮಾಡಿ ವ್ಯವಸಾಯಕ್ಕೆ ಕೊಡಬೇಕೆಂದು ನಾನು ಹೇಳುತ್ತೇನೆ.

ಇದನ್ನು ದರ್ಖಾಸ್ತುಗಳಿಗೆ ಅರ್ಜಿ ಹಾಕಿದರೆ, ಅದು ಎಕ್ಸ್‌ಕ್ಲೂಡು ಲ್ಯಾಂಡ್, ಫಾರೆಸ್ಟ್ ಲ್ಯಾಂಡ್ ಎಂದು ಹೇಳಿ ಬಿಟ್ಟು ನಿಧಾನ ಮಾಡುತ್ತಾರೆ. ಅವರಿಗೆ ಏನಾದರೂ ದುಡ್ಡು ಕೊಟ್ಟರೆ ಮರ ಇಲ್ಲ ಎಂದು ಬರೆಯುತ್ತಾರೆ, ದುಡ್ಡು ಕೊಡದಿದ್ದರೆ ಮರ ಇದೆ ಎಂದು ಬರೆಯುತ್ತಾರೆ. ಇದಕ್ಕೆಲ್ಲಾ ಏನು ಮಾಡಬೇಕೆಂದರೆ, ಮೇಲಧಿಕಾರಿಗಳು ಸ್ಥಳಕ್ಕೆ ಹೋಗಿ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಮಾನ್ಯ ಕಂದಾಯ ಮಂತ್ರಿಗಳು ಒಂದು ತಿಂಗಳಲ್ಲಿ 20 ದಿನ ಬೆಂಗಳೂರಿನಲ್ಲೇ ಇದ್ದು, ಎರಡು ಗಂಟೆಕಾಲವಾದರೂ ಆಫೀಸಿನಲ್ಲಿ ಇರಬೇಕು. ಏಕೆಂದರೆ, ಬಹಳ ದೂರದಿಂದ ಜನರು ಅವರನ್ನು ಭೇಟಿಯಾಗಲು ಬರುತ್ತಾರೆ. ಅವರು ಜಾಸ್ತಿಯಾಗಿ ಕೋಲಾರಕ್ಕೇ ಹೋಗುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನ ಕ್ಷೇತ್ರ ಈಗ ತುಮಕೂರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ ಈ ಸಾರಿ ಕೋಲಾರಕ್ಕೆ ಕಳುಹಿಸುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನದು ರಿಸರ್ವ್ ಸೀಟ್ ಅದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಹಾಗಾದರೆ ಈಗ ರಿಸರ್ವ್ ಇರಬೇಕಾಗುತ್ತದೆ. ಈಗ ಗ್ರಾಮಪಂಚಾಯಿತಿಗಳ ಕೆಲಸ ಬಹಳ ಸಮರ್ಪಕವಾಗಿ ನಡೆಯುತ್ತಾ ಇಲ್ಲ. ಮತ್ತು ಈಗ ಹಳ್ಳಿಗಾಡಿನಲ್ಲಿ ಕೆಲವು ಕಡೆ ರೆವೆನ್ಯೂ ಲ್ಯಾಂಡಿನಲ್ಲಿ ಅಲ್ಲಲ್ಲಿ ಗೊಬ್ಬರಗಳ ಗುಂಡಿ ಮಾಡಿ, ಆದರಿಂದ ಸೊಳ್ಳೆಗಳು ಬೆಳೆದು ಅಲ್ಲಿ ವಾಸಮಾಡುವುದಕ್ಕೆ ಕಷ್ಟವಾದ ಪರಿಸ್ಥಿತಿ ಬಂದಿದೆ. ಇದರಿಂದ ಇದನ್ನೆಲ್ಲಾ ತಪ್ಪಿಸಬೇಕು.

ಇನ್ನು ಈ ಶಾನುಭೋಗರು ಆರ್.ಆರ್. ಬರೆಯುವುದಕ್ಕೆ, ಪಹಣಿ ಬರೆಯುವುದಕ್ಕೆ ಸರಿಯಾದ ಮಾಮೂಲು ಕೊಡದೆ, ಅವರು ಸರಿಯಾದ ಸಂಗತಿಯನ್ನು ಬರೆಯುವುದಿಲ್ಲ. ಆದ್ದರಿಂದ ಇದನ್ನು ಶಾನುಭೋಗ್ ಮತ್ತು ಪಟೇಲರು ಇಬ್ಬರಿಗೂ ಜವಾಬ್ದಾರಿಗೆ ಕೊಟ್ಟು ಒಂದು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಈ ಬೆಂಗಳೂರು ಡೈರಿ ಪ್ರಾಜೆಕ್ಟಿನ ವಿಚಾರ. ಇದು ಎಷ್ಟು ಹಾಲನ್ನು ಉತ್ಪತ್ತಿ ಮಾಡಿದೆ, ಮತ್ತು ಇದರಲ್ಲಿದ್ದ ಲಾರಿಗಳ ಪೆಟ್ರೋಲಿಗೆ ಎಷ್ಟು ಖರ್ಚಾಯಿತು ? ಅಥವಾ ಪೆಟ್ರೋಲಿಗೆ ಖರ್ಚು ಮಾಡಿದಷ್ಟು ಹಣವಾದರೂ ಇದರಿಂದ ಬರುತ್ತದೆಯೆ ಎಂಬುದು ಯಾವುದೂ ತಿಳಿಯಲಿಲ್ಲ. ಈಗ ಈ ಪ್ರಾಜೆಕ್ಟಿನ ಏರಿಯವನ್ನು 40-50 ಮೈಲಿ ಎಂದು ಮಾಡಿದ್ದಾರೆ. ಇದನ್ನು 90-100 ಮೈಲಿಯವರೆಗೆ ವಿಸ್ತರಣೆ ಮಾಡಿ ಇದರಲ್ಲಿ ತಿಪಟೂರನ್ನೂ ಸೇರಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳನ್ನು ನೇಮಕ ಮಾಡುವುದರಿಂದ, ಈ ಶ್ಯಾನುಭೋಗರೆಲ್ಲಾ ನಾವು ಇನ್ನು ಹೋಗುತ್ತೇವೆ ಎಂದು ತಿಳಿದು, ಕಂದಾಯವನ್ನು ಸರಿಯಾಗಿ ವಸೂಲು ಮಾಡುತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಯಾರಾದರೂ ಏಜನ್ಸಿಯ ಮೂಲಕ ವಸೂಲು ಮಾಡುವುದಕ್ಕೆ ವ್ಯವಸ್ಥೆಮಾಡಬೇಕು.

ಇನ್ನು ಅಕ್ವಿಸಿಶನ್ ವಿಚಾರ. ಹಿಂದೆ ಮಾನ್ಯ ಮಿತ್ರರಾದ ಶ್ರೀ ಕೇಶವ ಮೂರ್ತಿಯವರು ಒಂದು ಪ್ರಶ್ನೆ ಕೇಳಿದಾಗ, ಉತ್ತರವಾಗಿ ಅಕ್ವೈಯರ್ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನೀವು ಈ ಶಾಸನ ಸಭೆಯಲ್ಲಿ ಕೊಟ್ಟ ಆಶ್ವಾಸನೆಗೆ ಏನು ಬೆಲೆ ಇದೆ ಎಂಬುದನ್ನು ತಾವು ಯೋಚಿಸಬೇಕು. ಈಗ ತಿಪಟೂರು ಹೋಬಳಿಯಲ್ಲಿ ಮುದನಹಳ್ಳಿ ಗ್ರಾಮದ ಲ್ಯಾಂಡ್ ಅಕ್ವಿಸಿಶನ್ ರಿಕಾರ್ಡ್ಸ್ ವಿಚಾರದಲ್ಲಿ ಒಬ್ಬ ಲಾಯರ್ ಒಂದು ಅರ್ಜಿಯನ್ನು ಸ್ಟಾಂಪ್ ಹಾಕಿ ನಿಮ್ಮ ಸೆಕ್ರೆಟರಿಯೇಟಿಗೆ ಕೊಟ್ಟರೆ, ಆ ಸ್ಟಾಂಪನ್ನು ಹರಿದು ತೆಗೆದು ವಿಚಾರವಾಗಿ ಹೋದ ಸಾರಿ ಶಾಸನಸಭೆಯಲ್ಲಿ ಹೇಳಿದರೂ ಇವತ್ತಿನವರೆಗೆ ಏನು ಆಗಲಿಲ್ಲ. ಇದರಿಂದ ಇಂಥ ದೊಡ್ಡ ಆಫೀಸುಗಳಲ್ಲೇ ಈ ತರಹ ನಡೆದರೆ, ಇನ್ನು ಸಣ್ಣ ಸಣ್ಣ ಆಫೀಸುಗಳ ವಿಚಾರವೇನಾಗಬಹುದು ?

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ದರಖಾಸ್ತು ವಿಲೇವಾರಿ ಮಾಡುವಾಗ ಬಡ ಜನರು ಅರ್ಜಿ ಹಾಕಿದರೆ ನಾವು ಇದನ್ನು ಕೊ ಆಪರೇಟಿವ್ ಸೊಸೈಟಿಗೆ ಕೊಡುತ್ತೇವೆ, ಹಾಗೂ ಬೇರೆ ಸಂಸ್ಥೆಗಳಿಗೆ ಬೇಕೆಂದು ಹೇಳಿ, ಅದನ್ನು ತಮಗೆ ಬೇಕಾದವರಿಗೆ ಕೊಟ್ಟುಬಿಡುತ್ತಾರೆ. ಅದರ ಬದಲು 4-5 ಎಕರೆ ಜಮೀನನ್ನು ಕೊಟ್ಟರೆ ಅವರ ಜೀವನೋಪಾಯಕ್ಕೆ ಒಂದು ದಾರಿಯಾದರೂ ಆಗುತ್ತದೆ ಎಂದು ನಾನು ಹೇಳುತ್ತೇನೆ. ಕೊನೆಯದಾಗಿ ತಮ್ಮ ಪ್ರಯಾಣದಲ್ಲಿ ತಾವು ಒಂದು ತಿಂಗಳಲ್ಲಿ 20 ದಿವಸವಾದರೂ ಇಲ್ಲೇ ಇರುವಂತೆ ನೋಡಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ನಮ್ಮ ಕಂದಾಯ ಮಂತ್ರಿಗಳು ಮಂಡಿಸಿರತಕ್ಕ ಡಿಮಾಂಡ್ ನಂ. 2, ಡಿಮಾಂಡ್ ನಂ. 22, ಹಾಗೂ ಡಿಮಾಂಡ್ ನಂ. 33, ಇವುಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಬೆಂಗಳೂರು ಉತ್ತರ ತಾಲ್ಲೂಕ್ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಅನೇಕ ಕಾರ್ಖಾನೆಗಳನ್ನು ಮತ್ತು ಕಾಲೇಜು ಇತ್ಯಾದಿಗಳನ್ನು ಕಟ್ಟುವುದಕ್ಕೋಸ್ಕರವಾಗಿ ನೂರಾರು ಎಕರೆಗಳಷ್ಟು ಭೂಮಿಯನ್ನು ಅಕ್ವಯರ್ ಮಾಡಿದ್ದಾರೆ. ಅಲ್ಲಿ ಅಕ್ವಾಯರ್ ಮಾಡಿರತಕ್ಕ ಸ್ಥಳಗಳ ರೈತರಿಗೆ ಕೊಡಬೇಕಾದ ಬೆಲೆಯನ್ನು ಸಹ ಕೊಡದೆ ಮತ್ತು ಕಟ್ಟತಕ್ಕ ಬೆಲೆಯನ್ನೂ ಕಟ್ಟದೆ ಅಲ್ಲಿಯ ಜನರಿಗೆ ತುಂಬಾ ಕಷ್ಟವಾದ ಪರಿಸ್ಥಿತಿಯು ತಲೆದೋರಿದೆ. ಇದರಿಂದ ನಾನಾದರೂ ಹೇಳುವುದೇನೆಂದರೆ, ಈ ಇಲಾಖೆಯವರು ಇದಕ್ಕೆ ಬಹಳ ಜಾಗ್ರತೆ ಗಮನ ಕೊಟ್ಟು ಅಕ್ವಾಯರ್ ಮಾಡಿರತಕ್ಕ ಭೂಮಿಗೆ ಮಾರ್ಕೆಟ್ ರೇಟ್ ಏನಿದೆ, ಅದನ್ನು ಸರಿಯಾಗಿ ಪರಿಶೀಲಿಸಿ, ಆ ಮಾರ್ಕೆಟ್ ಬೆಲೆಯನ್ನು ಕಟ್ಟಿ, ಅದನ್ನು ಯಾವ ರೂಲ್ಸ್‌ಗಳಿವೆಯೋ ಅದನ್ನು ಸರಿಯಾಗಿ ಅನುಸರಿಸಿ, ಸಾಧ್ಯವಾದಷ್ಟು ಜಾಗ್ರತೆ ಅವರಿಗೆ ಹಣವನ್ನು ದಕ್ಕಿಸಿ ಕೊಡಬೇಕೆಂದು ನಾನು ಇಲ್ಲಿ ತಮಗೆ ಸಲಹೆ ಮಾಡುತ್ತೇನೆ.

ಭೂಮಿಯನ್ನು ಅಕ್ವೈರ್ ಮಾಡಿದ ನಂತರ, ವ್ಯವಸಾಯವನ್ನೇ ನಂಬಿಕೊಂಡಿರುವವಂಥ ರೈತರಿಗೆ ಜೀವನಕ್ಕೆ ಹೋರಾಟ ನಡೆಸಬೇಕಾದ ಸ್ಥಿತಿ ಬಂದಿದೆ. ಅವರಿಗೆ ಬೇರೆ ಕಡೆ ಹೋಗಿ ನೆಲೆಸುವುದಕ್ಕೆ ಭೂಮಿಯನ್ನು ಕೊಡುತ್ತಿಲ್ಲ. ಭೂಮಿಯನ್ನು ಸ್ವಾಧೀನ ಮಾಡಿಕೊಂಡಾಗ ಯಾವ ಕಾರ್ಖಾನೆಗಾಗಿ ಮಾಡಿಕೊಂಡರೋ ಅಲ್ಲಿ ಭೂಮಿಯನ್ನು ಕಳೆದುಕೊಂಡಿರುವ ರೈತರಿಗೆ ಕೆಲಸಗಳನ್ನು ಒದಗಿಸುತ್ತಿಲ್ಲ. ಕಾರ್ಖಾನೆಗಳನ್ನು ಕಟ್ಟುವ ಕಾಲದಲ್ಲಿ ಯಾರು ಯಾರು ಭೂಮಿಗಳನ್ನು ಕಳೆದುಕೊಂಡಿದ್ದಾರೋ, ಯಾರು ಕಷ್ಟ ಪರಿಸ್ಥಿತಿಗೆ ಸಿಕ್ಕಿದ್ದಾರೋ ಅಂಥವರಿಗೆಲ್ಲ ಕಾರ್ಖಾನೆಯಲ್ಲಿ ಕೆಲಸವನ್ನು ಕೊಡುವ ಒಂದು ಷರತ್ತನ್ನು ಹಾಕಬೇಕೆಂದು ನಾನು ಸಲಹೆ ಮಾಡುತ್ತೇನೆ.

ವಂಶಾವಳಿ ಅಧಿಕಾರಿಗಳಾದ ಪಟೇಲರು ಮತ್ತು ಶಾನುಭೋಗರನ್ನು ತೆಗೆದು ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ಕೆಲವು ನಿಯಮಗಳನ್ನು ಮಾಡಿದ್ದಾರೆ. ತೋಟಿ ತಳವಾರರು ಇನ್ನೂ ಕೆಳದರ್ಜೆ ನೌಕರರು. ಅವರು ಸಹ ವಂಶಾವಳಿಯಿಂದ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅವರಿಗೆ ನೀರಾವರಿ, ಖುಷ್ಕಿ ಮತ್ತು ಬಾಗಾಯತು ಭೂಮಿಗಳನ್ನು ಮಾನ್ಯಗಳಾಗಿ ಕೊಟ್ಟಿದ್ದಾರೆ. ಪಟೇಲ ಶಾನುಭೋಗರಿಗೆ ಕೊಟ್ಟಹಾಗೆ ಅವರವರ ಭೂಮಿಗಳನ್ನು ತೋಟಿ ತಳವಾರರುಗಳಿಗೆ ಖಾಯಂ ಮಾಡಿಸಿಕೊಡಬೇಕು. ಮತ್ತು ಅವರಿಂದ ಕಂದಾಯವನ್ನು ವಸೂಲ್ಮಾಡಬೇಕೆಂದು ಹೇಳುತ್ತೇನೆ.

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ತೋಟಿ ತಳವಾರರುಗಳಿಗೆ ಸೇರಿದಂಥ ಜಮೀನುಗಳನ್ನು ಸ್ವಾಧೀನ ಮಾಡಿಕೊಂಡು ಅದರ ಹಣವನ್ನು ಬ್ಯಾಂಕಿನಲ್ಲಿಟ್ಟು ಅದರಿಂದ ಬರುವ ಬಹಳ ಕಡಿಮೆ ದರದ ಬಡ್ಡಿಯನ್ನು ಸಂಬಂಧಪಟ್ಟ ತೋಟಿ ತಳವಾರರಿಗೆ ವರ್ಷಕ್ಕೆ ಒಂದು ಸಲ ಕೊಡುತ್ತಿದ್ದಾರೆ. ಭೂಮಿಯಲ್ಲಿ ಬೆಳೆಯತಕ್ಕ ಅವಕಾಶವಿಲ್ಲದೆ, ಹಣ ಕೈಯಲ್ಲಿಲ್ಲದ್ದರೆ ಬೇರೆ ಕಡೆ ಭೂಮಿಯನ್ನು ಕೊಂಡುಕೊಳ್ಳುವುದಾಗಲೀ ಅಥವಾ ಬೇರೆ ಉದ್ಯೋಗವನ್ನು ಮಾಡುವುದಾಗಲೀ ಇಲ್ಲದೆ ಬಹಳ ಕಷ್ಟದಲ್ಲಿದ್ದಾರೆ. ಯಾರ ಭೂಮಿಯನ್ನು ಅಕ್ವೈರ್ ಮಾಡಿ ಬ್ಯಾಂಕಿನಲ್ಲಿ ಅದರ ಬೆಲೆಯನ್ನು ಇಡಲಾಗಿದೆಯೋ ಅಂಥ ತೋಟಿ ತಳವಾರರಿಗೆ ಜಮೀನಿನ ಖರೀದಿಯನ್ನು ಕೊಟ್ಟು ಅವರು ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಿಗೆ ಒಂದೇ ಟ್ರೆಜರಿ ಇದೆ. ಬೆಂಗಳೂರು 16-17 ಲಕ್ಷ ಜನಸಂಖ್ಯೆ ಇರುವ ಪಟ್ಟಣ. ಅನೇಕ ಕಾಲೇಜುಗಳು, ಹೈಸ್ಕೂಲುಗಳು ಮತ್ತು ಇತರ ಸ್ಕೂಲುಗಳೂ ಇವೆ. ವಿದ್ಯಾರ್ಥಿಗಳು ಪರೀಕ್ಷೆಗೆ ಹಣವನ್ನು ಕಟ್ಟಬೇಕಾದರೆ ಬೆಂಗಳೂರು ಉತ್ತರ ತಾಲ್ಲೂಕು ಟ್ರೆಜರಿಯಲ್ಲಿ ಮೂರು ದಿವಸ ಹಿಡಿಯುತ್ತದೆ. ಸುಮಾರು ಒಂದು ಸಾವಿರ ಜನರು ಕ್ಯೂನಲ್ಲಿ ಮಳೆ ಮತ್ತು ಬಿಸಲಿನಲ್ಲಿ ನಿಂತಿರುತ್ತಾರೆ. ಇದನ್ನು ತಪ್ಪಿಸಲು ವಿದ್ಯಾರ್ಥಿಗಳು

ಕಟ್ಟಬೇಕಾಗಿರುವ ಹಣವನ್ನು ಸಂಬಂಧಪಟ್ಟ ಶಾಲೆಗಳಲ್ಲಿ ವಸೂಲ್ಮಾಡುವಂತೆ ಏರ್ಪಾಡು ಮಾಡಬೇಕು ಅಥವಾ ಟ್ರೆಜರಿಯಲ್ಲಿ ಸಿಬ್ಬಂದಿಯನ್ನು ಹೆಚ್ಚುಮಾಡಿ ವಿದ್ಯಾರ್ಥಿಗಳಿಗೆ ಆಗತಕ್ಕ ಕಷ್ಟವನ್ನು ತಪ್ಪಿಸಬೇಕೆಂದು ಸಲಹೆ ಮಾಡುತ್ತೇನೆ.

ಈಗ ತೆಗೆದುಹಾಕಿರತಕ್ಕ ಮತ್ತು ಬದಲಾವಣೆ ಮಾಡಿರತಕ್ಕ ಶಾನುಭೋಗರುಗಳನ್ನು ಗುಮಾಸ್ತರಾಗಿ ನೇಮಕ ಮಾಡಿದ್ದಾರೆ. ಅವರಿಗೆ ಕೊಡುವ ಸಂಬಳ ಸಾಲದು. ಅವರ ಸಂಬಳವನ್ನು ಹೆಚ್ಚಿಸಿ ಕನಿಷ್ಠ ಪಕ್ಷ ಎರಡನೆ ಡಿವಿಜನ್ ಗುಮಾಸ್ತೆಗೆ ಕೊಡುವಷ್ಟು ಸಂಬಳವನ್ನಾದರೂ ಕೊಡಬೇಕೆಂದು ಹೇಳುತ್ತೇನೆ.

ಪಶು ಸಂಗೋಪನ ವಿಷಯದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಬೆಂಗಳೂರಿನಲ್ಲಿ ಅನೇಕ ಬೆಂಗಳೂರು ಬ್ರೀಡ್ ಜಾತಿಯ ದನಗಳನ್ನು ಸಾಕುತ್ತಾರೆ. ಪರದೇಶದ ಹೋರಿ ಮತ್ತು ನಮ್ಮ ದೇಶದ ಹಸುಗಳಿಂದ ಬೆರಕೆಯಾಗಿ ಹುಟ್ಟಿರುವ ದನಗಳೇ ಇವು. ನಮ್ಮ ದೇಶದ ವಾಯು ಗುಣಕ್ಕೆ ಇವು ಒಗ್ಗಿರುವ ದನಗಳಾಗಿವೆ ಮತ್ತು ಹಾಲಿನ ಉತ್ಪತ್ತಿಯೂ ಹೆಚ್ಚಾಗಿದೆ. ಆದರೆ ಏನೋ ಕಾರಣದಿಂದ ಎಂದೂ ಬರದೆ ಇರುವ ರೋಗ ಬಂದು ದನಗಳನ್ನು ಇಟ್ಟುಕೊಂಡಿರುವ ರೈತರು ಬಹಳ ನಷ್ಟಕ್ಕೆ ಸಿಕ್ಕಿರುತ್ತಾರೆ. ವೆಟರ್ನರಿ ಇಲಾಖೆಯವರು ಬಹಳ ಚೆನ್ನಾಗಿ ಪರಿಶೀಲನೆ ಮಾಡಬೇಕು. ಅವರನ್ನು ಕೇಳಿದರೆ ಯಾವುದೋ ವೈರಸ್‌ನಿಂದ ಬಂದಿದೆ ಎಂದು ಹೇಳುತ್ತಾರೆಯೇ ಹೊರತು ಅದು ಏಕೆ ಬಂತು ಎಂದು ಪರಿಶೀಲನೆ ಮಾಡುವುದಿಲ್ಲ. ನಮ್ಮ ವೆಟರ್ನರಿ ಇಲಾಖೆ ಮತ್ತು ವೆಟರ್ನರಿ ಕಾಲೇಜಿನವರು ಬಹಳ ಎಚ್ಚರಿಕೆಯಿಂದ ಇದಕ್ಕೆ ಗಮನಕೊಟ್ಟು ಪಶು ಸಂಪತ್ತನ್ನು ಕಾಪಾಡಬೇಕು ಮತ್ತು ಹಾಲು ಕೊಡತಕ್ಕ ದನಕರುಗಳನ್ನು ಉಳಿಸಿ ರೈತನು ನಷ್ಟಕ್ಕೆ ಸಿಕ್ಕದ ಹಾಗೆ ಮಾಡಬೇಕು ಎಂದ ಕೇಳಿಕೊಳ್ಳುತ್ತೇನೆ.

ಕೋಳಿ ಸಾಕುವುದು. ಮಾನ್ಯ ಮಂತ್ರಿಗಳಾದ ಕೃಷ್ಣಪ್ಪನವರು ಮಂತ್ರಿಗಳಾಗಿ ಬಂದ ಮೇಲೆ ಎಲ್ಲರೂ ಮೊಟ್ಟೆ ಹೆಚ್ಚಾಗಿ ತಿನ್ನುವುದನ್ನು ಕಲಿಯುತ್ತಿದ್ದಾರೆ. ಬ್ರಾಹ್ಮಣರು ಸಹ ಮೊಟ್ಟೆ ತಿನ್ನಿರಿ ಎಂದು ಹೇಳುತ್ತಿದ್ದಾರೆ. ಪರದೇಶದಿಂದ ತರಿಸಿರುವ ಕೋಳಿಗಳಿಗೆ ಒಂದು ತರಹ ನೆಗಡಿ ರೋಗ ಬರುತ್ತಿದೆ. ನಮ್ಮ ವಾಯುಗುಣದಲ್ಲಿ, ಈ ಕಡೆ ಇರುವ ಪ ದೇಶದ ಸನ್ನಿವೇಶದಲ್ಲಿ ನೆಗಡಿ ರೋಗವನ್ನು ಹೇಗೆ ತಡೆಯಬೇಕು ಎನ್ನುವುದನ್ನು ಕಂಡು ಹಿಡಿದಿಲ್ಲ. ಅದಕ್ಕೆ ಒಂದು ವಿಶೇಷ ಹೆಸರನ್ನು ಕೊಡುತ್ತಾರೆ. ಎಷ್ಟೋ ಕಡೆ ಹಳ್ಳಿಗಳಲ್ಲಿ ವೆಟರ್ನರಿ ಡಾಕ್ಟರು ಎಂದು ಕರೆಸಿಕೊಳ್ಳದೆ ಇರುವವರು, ವೆಟರ್ನರಿ ಕಾಲೇಜಿನಲ್ಲಿ ಓದದೆ ಇರುವವರು, ತಮ್ಮ ಅನುಭವದಿಂದ ಕೊಡುವ ಔಷಧಿಗಳಿಂದ ಇಂಥ ರೋಗ ವಾಸಿಯಾಗುವುದನ್ನು ನೋಡಿದ್ದೇವೆ. ರೆವಿನ್ಯೂ ಇಲಾಖೆಯವರಾಗಲೀ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಾಗಲೀ ಇಂಥ ವೈದ್ಯರು ಎಲ್ಲೆಲ್ಲಿದ್ದಾರೆ ಎಂದು ಕಂಡು ಹಿಡಿದು, ಆ ವೈದ್ಯರು ಕೊಡುವ ಔಷಧಿಗಳ ಪಟ್ಟಿಯನ್ನು ತರಿಸಿಕೊಂಡು ವೆಟರ್ನರಿ ಕಾಲೇಜಿನಲ್ಲಿ ಪರಿಶೋಧನೆ ನಡೆಸಿ, ಕೋಳಿಗಳಿಗೆ ಮತ್ತು ದನಗಳಿಗೆ ಬರತಕ್ಕ ಖಾಯಿಲೆಯನ್ನು ತಪ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಸರ್ಕಾರದವರು ಈಗಿನ ಅಭಾವ ಪರಿಸ್ಥಿತಿಯಲ್ಲಿ ಜನಗಳಿಗೇನೋ ಆಹಾರವನ್ನು ಒದಗಿಸುತ್ತಿದ್ದಾರೆ. ಈಗಿನ ಸ್ಥಿತಿಯಲ್ಲಿ ಮಳೆ ಇಲ್ಲದೆ ದನಕರುಗಳಿಗೆ ಮೇವು ಸಿಕ್ಕುವುದು ಕಷ್ಟವಾಗಿದೆ. ಹೆಚ್ಚು ಬೆಳೆಯತಕ್ಕ ರೈತನು ಕೂಡ ಏನೂ ಇಲ್ಲದಂತಾಗಿದ್ದಾನೆ. ಜನರಿಗೆ ಬೇಕಾದ ಆಹಾರವನ್ನು ಒದಗಿಸಲು ಫೇರ್‌ಪ್ರೈಸ್ ಡಿಪೋಗಳು, ಸರ್ವಿಸ್ ಸೊಸೈಟಿಗಳು ಎಂದು ಮಾಡಿದ್ದಾರೆ. ದನಕರುಗಳಿಗೆ ಮೇವನ್ನು ಒದಗಿಸುವುದಕ್ಕೆ ಮಾತ್ರ ಅನುಕೂಲವನ್ನು ಮಾಡಿಲ್ಲ. ಅರಣ್ಯ ಪ್ರದೇಶದಲ್ಲಿರುವ ಮತ್ತು ಹೆಚ್ಚು ಬೆಳೆ ಬೆಳೆದಿರತಕ್ಕ ಪ್ರದೇಶಗಳಿಂದ ಒದಗುವ ಮೇವನ್ನು ಸರ್ಕಾರದವರು ತರಿಸಿ ಒಂದೊಂದು ತಾಲ್ಲೂಕಿಗೆ ಒಂದೊಂದು ಹುಲ್ಲಿನ ಡಿಪೋ ತೆರೆದು ಅದರಿಂದ ದನಕರುಗಳಿಗೆ ಮೇವನ್ನು ಒದಗಿಸಿ ಅವು ನಷ್ಟವಾಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತ ಅನೇಕ ದೊಡ್ಡ ದೊಡ್ಡ ಜಿಲ್ಲೆಗಳನ್ನು ಚಿಕ್ಕ ಚಿಕ್ಕ ಜಿಲ್ಲೆಗಳನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

ದೇವನಹಳ್ಳಿ ತಾಲ್ಲೂಕಿನ ವಿಷಯ ಹೇಳುವುದಾದರೆ ಹಿಂದೆ ಯಾವುದೋ ಆಧಾರದ ಮೇಲೆ ಹೋಬಳಿಗಳನ್ನು ವಿಂಗಡಿಸಿ ಅದಕ್ಕೆ ಹೆಡ್ ಕ್ವಾರ್ಟರುಗಳನ್ನು ಮಾಡಿದ್ದಾರೆ. ಈ ಹೋಬಳಿ ಹೆಡ್‌ಕ್ವಾರ್ಟರುಗಳು ಹೋಬಳಿಯ ಮಧ್ಯ ಪ್ರದೇಶದಲ್ಲಿರದೆ ಕೆಲವು ಗ್ರಾಮಗಳಿಗೆ ಒಂದು ಮೈಲಿ ದೂರವಾದರೆ ಇನ್ನು ಕೆಲವು ಗ್ರಾಮಗಳಿಗೆ 15 ಮೈಲಿ ದೂರವಾಗುತ್ತದೆ. ಆದುದರಿಂದ ಹೋಬಳಿ ಹೆಡ್‌ಕ್ವಾರ್ಟರನ್ನು ಹೋಬಳಿಯ ಕೇಂದ್ರದಲ್ಲಿ ಇರುವ ಹಾಗೆ ಮಾಡಬೇಕು. ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಯ ಹೆಡ್‌ಕ್ವಾರ್ಟರನ್ನು ವಿಶ್ವನಾಥಪುರಕ್ಕೆ ಬದಲಾಯಿಸಬೇಕು ಎಂದು ಬರೆದಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿ ಆ ರೀತಿ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಆರ್. ಮುನಿಸ್ವಾಮಯ್ಯ)

ದೇವನಹಳ್ಳಿಗೆ ಆ ಹೆಸರು ಸರಿಯಾದುದಲ್ಲ. ದೇವನಹಳ್ಳಿ ಎನ್ನುವುದನ್ನು ತೆಗೆದು ಅದಕ್ಕೆ ದೇವನಪುರ ಎಂಬುದಾಗಿ ಬದಲಾಯಿಸಬೇಕು ಎಂದು ತಾಲ್ಲೂಕಿನ ಮುಖಂಡರು ಮತ್ತು ಮುನಿಸಿಪಾಲಿಟಿಯ ಕೌನ್ಸಿಲರುಗಳು ಮಂತ್ರಿಗಳಿಗೆ ಎರಡು ಮೂರು ಸಲ ಅರಿಕೆಮಾಡಿದ್ದಾರೆ. ದೇವನಹಳ್ಳಿ ಎಂದು ಹೇಳಿದರೆ ಅದಕ್ಕೆ ಪ್ರಾಶಸ್ತ್ಯ ಕಡಮೆ ಎಂದು ವ್ಯಾಪಾರ ಮಾಡತಕ್ಕ ಜನ ತಿಳಿದುಕೊಂಡಿದ್ದಾರೆ. ಅದೇ ತಾಲ್ಲೂಕಿನಲ್ಲಿ ವಡಿಗೇನಹಳ್ಳಿ ಎಂಬ ಊರಿಗೆ ವಿಜಯಪುರ ಎಂಬ ಹೆಸರನ್ನು ಬದಲಾಯಿಸಿದ್ದಾರೆ. ಈಗ ಅದರ ಪ್ರಾಶಸ್ತ್ಯ ಹೆಚ್ಚಿದೆ ಎಂದು ಜನ ಅಭಿಪ್ರಾಯಪಡುತ್ತಾರೆ. ಆದುದರಿಂದ ದೇವನಹಳ್ಳಿ ಎನ್ನುವ ಹೆಸರನ್ನು ಬದಲಾವಣೆ ಮಾಡಿ ಅದಕ್ಕೆ ದೇವನಪುರ ಎಂದು ಹೆಸರನ್ನಿಟ್ಟು ಅದರ ಪ್ರಾಶಸ್ತ್ಯವನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ, ಸ್ವಾಮಿ. ಜ್ಯೋತಿಷ್ಯದ ಪ್ರಜ್ಞೆಯಿಂದ ತಿಳಿದ ಹಾಗೆ, ಹೆಸರು ಬದಲಾಯಿಸಿದರೆ ಗ್ರಹಗತಿಗಳ ಪ್ರಭಾವದಿಂದ ಪಟ್ಟಣಗಳು, ಪುರಗಳು ಪ್ರಾಶಸ್ತ್ಯ ಹೊಂದುತ್ತವೆ.

ಅಧ್ಯಕ್ಷರು.—ಶ್ರೀಮಾನ್ ಮುಕ್ಕಣ್ಣಪ್ಪನವರಿಗೆ ಜ್ಯೋತಿಷ್ಯ ಗೊತ್ತಿಲ್ಲವೇ ?

ಶ್ರೀ ಆರ್. ಮುನಿಸ್ವಾಮಯ್ಯ.—ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಕಲಿಯಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಗ್ರಹಗತಿಗಳ ಪ್ರಮಾಣದಿಂದ ಹಾಗೂ ಅವುಗಳ ಪ್ರಭಾವದಿಂದ ಗ್ರಾಮಗಳು ಮತ್ತು ಪಟ್ಟಣಗಳೂ ಪ್ರಾಶಸ್ತ್ಯಕ್ಕೆ ಬರುತ್ತವೆ. ಆದ್ದರಿಂದ ನನ್ನ ತಾಲ್ಲೂಕ್ ದೇವನ ಹಳ್ಳಿಯನ್ನು "ದೇವನಪುರ" ಎಂಬುದಾಗಿ ಬದಲಾಯಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ದೇಶದಲ್ಲಿ ರೈತರ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕ ಇಲಾಖೆ ರೆವಿನ್ಯೂ ಇಲಾಖೆ ಎನ್ನತಕ್ಕದ್ದು ಮೊದಲಿನಿಂದಲೂ ರೂಢಿಗೆ ಬಂದಿದೆ. ರೈತರಿಗೆ ಯಾವುದಾದರೂ ಅನುಕೂಲಗಳಾಗಬೇಕಾದರೆ ರೆವಿನ್ಯೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ರೈತರ ಕಷ್ಟ ಸುಖಗಳನ್ನು ತಿಳಿದು ಅವರ ಒಂದು ಹಿತದೃಷ್ಟಿಯಿಂದ ಕೆಲಸ ಮಾತ್ರ ಅನುಕೂಲವಾಗುತ್ತದೆ. ಎಲ್ಲಾ ಇಲಾಖೆಗಳಿಗಿಂತಲೂ ರೆವಿನ್ಯೂ ಇಲಾಖೆ ರೈತನಿಗೆ ಬಹಳ ಹತ್ತಿರದ್ದು ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಆದರೆ ರೆವಿನ್ಯೂ ಇಲಾಖೆಯಲ್ಲಿ ಕಾಗದ ಪತ್ರಗಳು ಹೇಗೆ ಇತ್ಯರ್ಥವಾಗುತ್ತಿವೆ ಎಂಬುದನ್ನು ಈಗ ನೋಡಬೇಕಾಗಿದೆ. ಮೊದಲಿನಲ್ಲಿ ಮಂತ್ರಿಗಳೂ ಹಾಗೂ ದೊಡ್ಡ ದೊಡ್ಡ ಅಧಿಕಾರಿಗಳು ಕೆಲವು ಸ್ಥಳಗಳನ್ನು ಭೇಟಿ ಮಾಡುತ್ತಿದ್ದರು. ಆದರೆ ಅಂತಹ ಕಡೆಗಳನ್ನು ಇತ್ತೀಚೆಗೆ ಇವರು ಭೇಟಿ ಮಾಡತಕ್ಕ ಪ್ರಸಂಗಗಳು ಬಹಳ ಕಡಿಮೆ. ಅದನ್ನು ನೋಡತಕ್ಕದ್ದು ಬಹಳ ಪ್ರಾಮುಖ್ಯವಾದುದು. ಈ ವಿಷಯವಾಗಿ ಸರ್ಕಾರದವರನ್ನು ನಿಗಾ ತೆಗೆದುಕೊಳ್ಳತಕ್ಕ ಒಂದು ಅವಶ್ಯಕತೆ ಇದೆ. ಡೆಪ್ಯುಟಿ ಕಮಿಷನರ್ ಸಹ ಈ ವಿಚಾರದಲ್ಲಿ ನಿಗಾ ವಹಿಸುವುದೊಳ್ಳೆಯದು. ಇನ್ನು ಚಿಕ್ಕಮಗಳೂರು ತಾಲ್ಲೂಕಿನ ಕರಡಿಹಳ್ಳಿ ಕಾವಲುನಲ್ಲಿ ಸುಮಾರು 50-60 ಎಕರೆ ಜಮೀನು ಇದೆ. 200-300 ಜನರಿಗೆ ಆ ಜಮೀನು ಕೊಟ್ಟಿದ್ದಾರೆ. ಸಾಗುವಳಿ ಚೀಟಿ ಕೊಟ್ಟಿದ್ದಾರೆ. ಕಂದಾಯ ಕಟ್ಟಿಸಿದ್ದಾರೆ. ಆದರೆ ಜಮೀನು ಎಷ್ಟು ಜನರಿಗೆ ಸೇರಿದೆ ಎಂಬುದು ಗೊತ್ತಾಗುವುದಿಲ್ಲ. ಚಿಕ್ಕಮಗಳೂರಿನ ಜನ ಡೆಪ್ಯುಟಿ ಕಮಿಷನರ ಮೇಲೆ ನಿಗಾ ತೆಗೆದುಕೊಂಡಿದ್ದಾರೆ. ಹೀಗೆ ರೈತರನ್ನು ಸುಮ್ಮನೆ ಸತಾಯಿಸುವುದು ಸರ್ಕಾರಕ್ಕೆ ಒಳ್ಳೆಯದಲ್ಲ. ರೈತರ ಹಿತದೃಷ್ಟಿಗೂ ಅರ್ಹವಾದುದಲ್ಲ. ಮುಖ್ಯವಾಗಿ ಗೇಣಿ ಮಾಡತಕ್ಕ ರೈತರಿಗೆ ಅನುಕೂಲ ಮಾಡಿಕೊಡಬೇಕು. ಗೇಣಿದಾರನಾದವನು ದೊರಕದಿದ್ದಂಥ ಸನ್ನಿವೇಶದಲ್ಲಿ ಜಮೀನ್ದಾರನೇ ಗೇಣಿದಾರನಾಗಿರುವಾಗ ಅಲ್ಲಿನ ಅವ್ಯವಸ್ಥೆ ನೋಡಿದರೆ ಈ ವರ್ಷ ಪೂರ್ತಿ ವ್ಯವಸಾಯವಾಗುತ್ತದೆಂದು ಹೇಳುವುದು ಬಹಳ ಕಷ್ಟ. ಕೆಲವು ಜಮೀನುಗಳ ವ್ಯವಹಾರದಲ್ಲಿ ಅನೇಕರು ಕೋರ್ಟು ಕಚೇರಿಗಳಿಗೆ ಹೋಗಿ ಒಬ್ಬರಿಗೊಬ್ಬರು ಹೊಡೆದಾಡಿ ಅವರ ಮನೆ ಮಠಗಳನ್ನು ತೆಗೆದುಕೊಂಡಿದ್ದಾರೆ. ರೈತರಿಗೆ ಮತ್ತು ಜಮೀನ್ದಾರರಿಗೆ ಇರತಕ್ಕ ತೊಂದರೆಗಳನ್ನು ಕೂಡಲೇ ಹೋಗಲಾಡಿಸಬೇಕು.

ಇನ್ನು ಅನುವಂಶಿಕ ಹುದ್ದೆಗಳ ವಿಷಯವಾಗಿ ಹೇಳುವುದಾದರೆ ಈಗ ಪಂಚಾಯತಿ ಕಾರ್ಯದರ್ಶಿಗಳು ಆ ಕೆಲಸವನ್ನು ಮಾಡುತ್ತಾರೆಂದು ಹೇಳುತ್ತಾರೆ. ಆದರೆ ಶ್ಯಾನುಭೋಗರುಗಳು ಸಾವಿರಾರು ವರ್ಷಗಳಿಂದ ಆ ಕೆಲಸ ಮಾಡಿಕೊಂಡು ರೈತರ ಹಿತದೃಷ್ಟಿಯನ್ನೇ ಕಾಪಾಡಿಕೊಂಡು ಬರುತ್ತಾ ಇರುವಂತಹರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವರು ಇರುವುದು ಅನಿವಾರ್ಯ. ಅಂತಹ ಶ್ಯಾನುಭೋಗರುಗಳಿಗೇನಾದರೂ ಪರಿಹಾರ ಕೊಡಬೇಕು. ಅನುವಂಶಿಕ ಹುದ್ದೆಗಳನ್ನು ರದ್ದು ಮಾಡುವಾಗ

ಅವರಿಗೆ ಜಮೀನು ರೂಪದಲ್ಲಾಗಲೀ ಅಥವಾ ಹಣದ ರೂಪದಲ್ಲಾಗಲೀ ಏನೂ ಪರಿಹಾರ ಮಾಡಿಕೊಟ್ಟಿಲ್ಲ. ಅದನ್ನು ಜಾಗ್ರತೆ ಕೊಡುವುದು ಬಹಳ ಆವಶ್ಯಕವೆಂದು ನಾನು ಸರ್ಕಾರಕ್ಕೆ ತಿಳಿಸ ಬಯಸುತ್ತೇನೆ.

ಇನ್ನು ಈ ವರ್ಷ ದೇಶದಲ್ಲಿ ಮಳೆಬಾರದೆ ದುರ್ದೈವದಿಂದ ರೈತಾಪಿ ಜನರಿಗೆ ಬಹಳ ಕಷ್ಟವಾಗುತ್ತಿದೆ. ಇಷ್ಟು ಆಹಾರ ಕೊರತೆ ಮಳೆ ಇಲ್ಲದೇ ಇರುವುದೇ ಕಾರಣವೆಂಬುದಾಗಿ ನಾವೆಲ್ಲರೂ ತಿಳಿದಿದ್ದೇವೆ. ಈ ವರ್ಷ ರೆಮಿಷನ್ ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರದವರು ಒಂದು ವರದಿಯನ್ನು ತಂದಿದ್ದಾರೆ, ವರ್ಷಕ್ಕೆ 200-300 ಇಂಚುಗಳಷ್ಟು ಮಳೆ ಬರುತ್ತಿದ್ದಂಥ ಚಿಕ್ಕಮಗಳೂರಿನಲ್ಲಿ ಈಗ ಬೆಳೆಯೆಲ್ಲಾ ಹಾಳಾಗಿ ಕೇವಲ 4 ಆಣೆ ಬೆಳೆಯೂ ಆಗಿಲ್ಲ. ಆದ್ದರಿಂದ ಕಂದಾಯವನ್ನು ರೆಮಿಷನ್ ಮಾಡುವುದಕ್ಕೆ ಮಾಡುವುದಕ್ಕೆ ಸರ್ಕಾರದವರು ಒಂದು ಆಜ್ಞೆಯನ್ನು ಕಳುಹಿಸಿಕೊಡಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಕಂದಾಯವನ್ನು ರೆಮಿಷನ್ ಮಾಡಿರತಕ್ಕ ಜಿಲ್ಲೆಗಳನ್ನು ಸರ್ಕಾರವರು ಗೊತ್ತುಮಾಡಿದ್ದಾರೆ, ಮಲೆನಾಡು ಪ್ರದೇಶವಾಗಿರತಕ್ಕ ಚಿಕ್ಕಮಗಳೂರು ಜಿಲ್ಲೆ ಸರ್ಕಾರದ ಅಧೀನದಲ್ಲಿಯೇ ಇದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂಥ ಯಾವ ಒಂದು ಆಜ್ಞೆಯೂ ಇದುವರೆಗೆ ಬರಲಿಲ್ಲ. ಸರ್ಕಾರದವರು ತಕಾವಿ ಸಾಲವನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳು ಶಿಫಾರ್ಸು ಮಾಡಿದ್ದಾರೆ. ನಾನೂ ಸಹ ರೆವಿನ್ಯೂ ಮಂತ್ರಿಗಳಿಗೆ ಈ ವರ್ಷ ತಕಾವಿ ಸಾಲವನ್ನು ರೈತರಿಗೆ ಹೆಚ್ಚಿಗೆ ಸಕಾಲದಲ್ಲಿ ಕೊಡಬೇಕು ಎಂದು ಬರೆದಿದ್ದೇನೆ. ವ್ಯವಸಾಯ ಮಾಡತಕ್ಕವರಿಗೆ ಎತ್ತುಗಳನ್ನೂ ಬೀಜಗಳನ್ನೂ ಕೊಟ್ಟರೆ ಒಳ್ಳೆಯದು, ಚಿಕ್ಕಮಗಳೂರಿನ ನಿಡಗಟ್ಟ ಗ್ರಾಮದಲ್ಲಿ ವಾಸಿಸುತ್ತಿರುವವರು ಊರು ಬಿಟ್ಟು ಹೋಗುತ್ತಿದ್ದಾರೆ. ಅನೇಕರು ಮನೆಗಳನ್ನು ಬಿಟ್ಟು ಎಲ್ಲಾದರೂ ಕೂಲಿಯಾದರೂ ಮಾಡೋಣವೆಂದು ಊರೂರು ಅಲೆಯುತ್ತಿದ್ದಾರೆ. ಇಂತಹ ಭಯಂಕರ ಪರಿಸ್ಥಿತಿ ಇದೆ. ಸರ್ಕಾರದವರು ನಿಜವಾಗಿ ಅಲ್ಲಿಂದ ವರದಿಯನ್ನು ತರಿಸಿಕೊಂಡರೆ ಚೆನ್ನಾಗಿ ವಿಷಯ ಮನವರಿಕೆಯಾಗುತ್ತದೆ. ತಕಾವಿ ಸಾಲವನ್ನು ಒಂದು ಜಿಲ್ಲೆಗೆ ಕೇವಲ 50 ಸಾವಿರ ರೂಪಾಯಿಗಳನ್ನು ಕೊಟ್ಟರೆ ಏನು ಪ್ರಯೋಜನ ? ಒಂದು ಗ್ರಾಮದ 100 ಜನ ರೈತರು ಮಾತ್ರ ಎತ್ತುಗಳನ್ನು ಕೊಂಡು ವ್ಯವಸಾಯ ಮಾಡಬಹುದಷ್ಟೆ. ಪ್ರಾಣ ಹೋಗತಕ್ಕ ಪರಿಸ್ಥಿತಿ ಇರತಕ್ಕ ರೈತರಿಗೆ ತಕಾವಿ ಸಾಲವನ್ನು ಹೆಚ್ಚಿಗೆ ಕೊಡಬೇಕು. ಮತ್ತು ರಿಲೀಫ್ ಕಾಮಗಾರಿಗಳನ್ನು ಮಾಡಿಕೊಡಬೇಕು. ಈಗಾಗಲೇ ಸರ್ಕಾರದವರು ಕೆಲವು ರಿಲೀಫ್ ಕಾಮಗಾರಿಗಳನ್ನು ಮಾಡುತ್ತಿದ್ದಾರೆ. ಆದರೆ ಅವು ಏನೇನು ಸಾಲದು. ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಯ ಜನರಿಗೆ ಸರಿಯಾಗಿ ಕೂಲಿ ಸಿಗುವ ಹಾಗೆ ಒಂದೆರಡು ಮೂರು ತಿಂಗಳುಗಳಾದರೂ ಜೀವನ ಮಾಡುವುದಕ್ಕೆ ಅನುಕೂಲವಾಗುವಂತೆ ರಿಲೀಫ್ ಕಾಮಗಾರಿಗಳನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕು.

ಇನ್ನು ಪಶು ಸಂಪತ್ತಿನ ಇಲಾಖೆ ರೈತರಿಗೆ ಬಹಳ ಸಹಕಾರಿಯಾದ ಇಲಾಖೆ. ರೈತರಾದವರು ಇತ್ತೀಚೆಗೆ ಪಶುಗಳನ್ನು ಸಾಕಲಾರದೆ ಕಟುಕರಿಗೆ ಮಾರುತ್ತಿದ್ದಾರೆ. ಅನೇಕ ಪಶುಗಳು ತಿಂಡಿ ಇಲ್ಲದೆಯೇ ಸತ್ತುಹೋಗುತ್ತಿದೆ. ದನಗಳ ತಳಿಯನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸಂಬಂಧಪಟ್ಟ ಇಲಾಖೆಯವರು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ಪಶುಸಂವರ್ಧನ ಇಲಾಖೆಯಲ್ಲಿ ಒಂದು ಮತ್ತು ಎರಡನೆ ದರ್ಜೆಯ ಸ್ಥಾನಗಳು ಖಾಲಿಯಾಗಿವೆ ಎಂದು ಕೇಳಿದೆ. ರಿ-ಆರ್ಗನೈಜೇಷನ್ ಆದ ಮೇಲೆ ಏತಕ್ಕೋಸ್ಕರ ಅವನ್ನು ಇದುವರೆಗೆ ಭರ್ತಿಮಾಡಲಿಲ್ಲ? ಅವರಿಗೆ ಬರತಕ್ಕ ಭಡ್ತಿಗಳನ್ನು ನ್ಯಾಯ ರೀತಿಯಲ್ಲಿ ದೊರಕಿಸಿಕೊಡಬೇಕು. ಹಳ್ಳಿಗಳಿಗೆ ದನಗಳಿಗೆ ಕಾಯಿಲೆ ಬಂದಂಥ ಕಾಲದಲ್ಲಿ ಅವುಗಳ ರೋಗರುಜಿನಗಳಿಗೆ ಉಪಚಾರವಾಗಬೇಕಾದರೆ ಹಳ್ಳಿಗಳಲ್ಲಿ ಇತ್ತೀಚೆಗೆ ಆಸ್ಪತ್ರೆಗಳ ಅಭಾವ ಜಾಸ್ತಿಯಾಗಿವೆ. ಚಿಕ್ಕಮಗಳೂರು ತಾಲ್ಲೂಕಿನ ಹಿರಿಜಾಗೂರು ಪಂಚಾಯತಿಯವರು ಒಂದು ನಿರ್ಣಯವನ್ನು ಮಾಡಿದ್ದಾರೆ. ದನಗಳ ಅಭಿವೃದ್ಧಿಗಾಗಿ ಮತ್ತು ಕುರಿಕೋಳಿಗಳ ಅಭಿವೃದ್ಧಿಗಾಗಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಅನುಭವ ರೈತರನ್ನೂ ತಜ್ಞರನ್ನೂ ಪರದೇಶಗಳಿಗೆ ಕಳುಹಿಸಿ ಅವರ ಮೂಲಕ ಈ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗುವುದಕ್ಕೆ ಸರ್ಕಾರದವರು ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

ಇನ್ನು ಮೈಸೂರು ದೇಶದಲ್ಲಿ ಮೂಕ ಪ್ರಾಣಿಗಳನ್ನು ನೋಡಿಕೊಳ್ಳತಕ್ಕ ವೆಟರಿನರಿ ಡಾಕ್ಟರುಗಳು ಈಗಿನ ಸನ್ನಿವೇಶದಲ್ಲಿ ಬಹಳ ಅವಶ್ಯಕವಾಗಿದ್ದಾರೆ. ಅವರು ಸಾಕಷ್ಟು ಇಲ್ಲದಿದರೆ ತುಂಬಾ ಕಷ್ಟವಾಗುತ್ತದೆ. ಈಗಿನ ಸಿಬ್ಬಂದಿಯಲ್ಲ ಏನು ಮಾಡುವುದಕ್ಕಾಗುವುದಿಲ್ಲ. ಹೆಚ್ಚಿಗೆ ಡಾಕ್ಟರುಗಳನ್ನು ನೇಮಿಸಬೇಕು. ವೆಟರಿನರಿ ಡಾಕ್ಟರುಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಬೇಕು. ಮುಖ್ಯವಾಗಿ ಮೂಕ ಪ್ರಾಣಿಗಳನ್ನು ಚೆನ್ನಾಗಿ ನೋಡಿಕೊಳ್ಳಲು ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಇಷ್ಟು ಹೊತ್ತು ನಾನು ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ದಿನ ಭೂಕಂದಾಯ, ಸ್ಟ್ಯಾಂಪು, ರಿಜಿಸ್ಟ್ರೇಷನ್, ಪಶುಸಂಗೋಪನ, ಕ್ಷಾಮ ಪರಿಹಾರ, ಜಮೀನ್ದಾರಿ ಪದ್ಧತಿ-ಇಷ್ಟೆಲ್ಲದರ ಮೇಲೆ ಕಂದಾಯ ಸಚಿವರು ಸುಮಾರು 7 ಕೋಟಿ ರೂಪಾಯಿಗಳನ್ನು 1966ನೇ ಇಸವಿ ಮಾರ್ಚ್ 31ರೊಳಗೆ ಖರ್ಚು ಮಾಡುತ್ತಾರೆ. ಅವರು ಈ ರೀತಿ ಹಣವನ್ನು ಖರ್ಚು ಮಾಡುವಾಗ ಈ ಎಲ್ಲಾ ಇಲಾಖೆಗಳಿಂದ ಜನತೆಗೆ ಏನೇನು ಅನುಕೂಲವಾಗಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಆದರೆ ಅದನ್ನು ಬಿಟ್ಟು ಸರ್ಕಾರದವರು ಅಧಿಕಾರಿಗಳ ಸಂಬಳಕ್ಕಾಗಿ ಹಣವನ್ನು ಖರ್ಚು ಮಾಡಿದ್ದಾರೆಂದು ಸುಮ್ಮನೆ ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ನಾನು ಅಷ್ಟಾಗಿ ಸಂತೋಷಪಡುವುದಿಲ್ಲ. ಏಕೆಂದರೆ ಈ ರೆವಿನ್ಯೂ ಇಲಾಖೆ ತಾಯಿಯ ಸಮಾನ. ಆದರೆ ಇವತ್ತು ಅದು ತಾಯಿಯಾಗಿದೆಯೋ ತಂದೆ ಯಾಗಿದೆಯೋ ನನಗೇನೂ ಗೊತ್ತಾಗಲಿಲ್ಲ.

4·30 P.M.

ಇವೊತ್ತು ಕಂದಾಯ ಸಚಿವರು ರೈತರ ಮೇಲೆ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಅವರು ರೈತರಿಗೆ ತಮ್ಮ ಕೈಯ್ಯಲ್ಲಿ ಎಷ್ಟು ಸಹಾಯ ಮಾಡಬಹುದೋ ಅಷ್ಟನ್ನೂ ಸಹ ಮಾಡುವಷ್ಟು ಔದಾರ್ಯ ಅವರಿಗೆ ಇದೆ. ಆದರೆ ಅವರಿಗೆ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಕಾರಣ ಏನೆಂಬುದನ್ನು ಅವರೇ ಯೋಚನೆ ಮಾಡಬೇಕು. ರೆವಿನ್ಯೂ ಅಧಿಕಾರಿಗಳು ಇವೊತ್ತು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಮಾನ್ಯ ರೆವಿನ್ಯೂ ಸಚಿವರು ತಮ್ಮ ಅಧಿಕಾರ ವನ್ನು ಸರಿಯಾಗಿ ಚಲಾಯಿಸಬೇಕು ಎಂದು ಮನಸ್ಸು ಮಾಡಿಕೊಂಡಿದ್ದರೆ ಎಲ್ಲಾ ಕಡೆಯಲ್ಲಿಯೂ ಒಂದು ತರಹ ಬೆಳವಣಿಗೆಯನ್ನು ನಿರೀಕ್ಷಣೆ ಮಾಡಬಹುದಾಗಿತ್ತು. ಆದರೆ ಇವೊತ್ತು ಈ ರೆವಿನ್ಯೂ ಇಲಾಖೆ ಕುಂಟುತ್ತಾ ಎಡವುತ್ತಾ ಮುಂದಕ್ಕೆ ಹೋಗುತ್ತಿದೆ. ಈಗಲಾದರೂ ಮಾನ್ಯ ಸಚಿವರು ಇನ್ನೊಂದು ವರ್ಷಾರ್ಧ ಅವಧಿಯಲ್ಲಿ ಧೈರ್ಯವಾಗಿ ಹೆಜ್ಜೆಯನ್ನು ಮುಂದಿಟ್ಟು ಈ ಖಾತೆಯಲ್ಲಿ ಏನೇನು ಮಾಡಬೇಕೆಂದಿದ್ದೀರೋ ಅದೆಲ್ಲವನ್ನೂ ಮಾಡಿಬಿಡಿ. ರೈತನಿಗೆ ಸಂಬಂಧಪಟ್ಟದ್ದು, ಸಾಮಾನ್ಯ ಮನುಷ್ಯನಿಗೆ ಸಂಬಂಧಪಟ್ಟದ್ದು ಇನಾಂ ರದ್ದಿಯಾತಿಗೆ ಸಂಬಂಧಪಟ್ಟದ್ದು, ಪಶು ಸಂಗೋಪನೆಗೆ ಸಂಬಂಧಪಟ್ಟದ್ದು, ಭೂಕಂದಾಯದಲ್ಲಿ ರೈತರಿಗೆ ನೇರವಾಗಿ ಸಂಬಂಧಪಟ್ಟದ್ದು ಇವುಗಳ ವಿಚಾರ ದಲ್ಲಿ ಸಹಾಯ ಮಾಡುವುದಕ್ಕೆ ತಮ್ಮ ಕೈಯ್ಯಲ್ಲಿ ಮಾಡುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟನ್ನೂ ಮಾಡುವುದಕ್ಕೆ ಅವರಿಗೆ ಭಗವಂತನು ಧೈರ್ಯವನ್ನು ಕೊಡಲಿ ಎಂದು ನಾನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಇವರು ಮೈಸೂರಿಗೆ ಬಂದ ಮೇಲೆ 'ಟಿಮಿಡ' ಆಗಿದ್ದಾರೆ. ಇಲ್ಲಿ ಅವರು ಏನೇನು ಸಾಧನೆ ಮಾಡಬೇಕಾಗಿತ್ತೋ ಅದನ್ನು ಸಾಧನ ಮಾಡುವುದಕ್ಕೆ ಆಗಿಲ್ಲ. ಭಗವಂತನು ಅವರಿಗೆ ಧೈರ್ಯವನ್ನು ಕೊಡಲಿ. ಇವರು ಹೊತ್ತಿರತಕ್ಕ ಖಾತೆಯಲ್ಲಿ ಇವರು ಯಶಸ್ಸನ್ನು ಗಳಿಸಲಿ. ಮೊನ್ನೆ ಶ್ರೀಮಾನ್ ಮುನಿಚಿನ್ನಪ್ಪನವರು ಹೇಳಿದ ಹಾಗೆ ಇವೊತ್ತಿನ ದಿವಸ ಜನಗಳು ಅಸಿಸ್ಟೆಂಟ್ ಕಮೀಷನರ ಆಫೀಸಿಗೆ ಹೋದರೆ ಅಲ್ಲಿ ಅವರಿಗೆ ಮರ್ಯಾದೆ ಸಿಕ್ಕುವುದಿಲ್ಲ. ತಮ್ಮ ಕಾಲವಲ್ಲಿಯಾದರೂ ಈ ಮಧ್ಯಸ್ತ ಗಾರರನ್ನು ತೆಗೆಯುವ ಪ್ರಯತ್ನ ಮಾಡಬೇಕು. ಇವೊತ್ತು ತಾವು ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತಾರೆ. ಇವೊತ್ತು ಜನತೆ ರೆವಿನ್ಯೂ ಇಲಾಖೆಯಲ್ಲಿ ತಹಸೀಲ್ದಾರರ ಹತ್ತಿರ, ಅಸಿಸ್ಟೆಂಟ್ ಕಮೀಷನರ ಹತ್ತಿರ, ಡೆಪ್ಯುಟೀ ಕಮೀಷನರ ಹತ್ತಿರ ಆಗತಕ್ಕ ಕೆಲಸಕ್ಕೆ ಅವರು ನೇರವಾಗಿ ಸರ್ಕಾರದ ಹತ್ತಿರ ಬರುತ್ತಾರೆ. ಆ ರೀತಿ ಜನಗಳು ನೇರವಾಗಿ ಸರ್ಕಾರದವರ ಹತ್ತಿರ ಬರುವುದಕ್ಕೆ ಕಾರಣವೇನು ? ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಸರಿಯಾಗಿ ಕೆಲಸಮಾಡದೇ ಇರುವುದರಿಂದ ಅವರು ನೇರವಾಗಿ ಸರ್ಕಾರದ ಹತ್ತಿರ ಬರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ವ್ಯವ ಹಾರವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ನಿಮ್ಮ ಹೃದಯ ಎಷ್ಟು ನಿರ್ಮಲ ಆಗಿದೆಯೋ, ನಿಮ್ಮ ಹಸ್ತ ಎಷ್ಟು ಸ್ವಚ್ಛವಾಗಿದೆಯೋ ಅದೇ ರೀತಿ ಜನತೆಯ ಕೆಲಸಗಳನ್ನು ರೈತರ ಕೆಲಸಗಳನ್ನು ಕಳಕಳಿಯಿಂದ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ದರ್ಖಾಸ್ತು ಅರ್ಜಿಗಳ ವಿಷಯವನ್ನು ಹೇಳುವುದಾದರೆ. ಈ ದರ್ಖಾಸ್ತು ಅರ್ಜಿಗಳು ಸರಿಯಾಗಿ ವಿಲೇವಾರಿ ಆಗಿಲ್ಲ. 3 ಎಕರೆಗಳಷ್ಟು ದರ್ಖಾಸ್ತು ಭೂಮಿಯನ್ನು ಪಡೆಯಲು ಆಶಿಸಿದ ರೈತನು ಒಬ್ಬ ಅರ್ಜಿ ಸಲ್ಲಿಸಿದರೆ ಅದು ವಿಧಾನಸೌಧ ತಾಲ್ಲೂಕು ಕಚೇರಿಗಳೊಳಗೆ ಓಡಾಡುವುದ ರೊಳಗೆ 116 ರೂಪಾಯಿಗಳ ಪೋಸ್ಟೇಜು ಖರ್ಚಾಗಿದೆ. ಆದರೂ ಸಹ ಆತನಿಗೆ ಜಮೀನು ಸಿಕ್ಕಲಿಲ್ಲ ಬಡವನಿಗೆ ಜಮೀನು ಸಿಕ್ಕುತ್ತದೆಯೋ ಎಂಬುದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಈ ದರ್ಖಾಸ್ತು ಭೂಮಿಯನ್ನು ಕೊಡುವುದರಲ್ಲಿ ದುರ್ವ್ಯವಹಾರ ಮಾಡುವುದನ್ನು ತಪ್ಪಿಸಬೇಕಾದರೆ ಅದರಲ್ಲಿ ಏನು ಲೋಪದೋಷಗಳು ಇವೆ ಎಂಬುದನ್ನು ನೋಡಿ ಬಗೆಹರಿಸಬೇಕು. ಇವೊತ್ತಿನ ದಿವಸ ಈ ಚಲುವನದಲ್ಲಿ ಒಂದು ಗಿಡ ಇರುವುದಿಲ್ಲ. ಇವೊತ್ತಿನ ದಿವಸ ಎಕ್ಸ್‌ಪ್ರೆಸ್ ಕರಾಬ್ ಇಟ್ಟಿದ್ದಾರೆ.

ಸಾವಿರ ಎಕರೆಯಲ್ಲಿ ಒಂದು ಕೂಡ ಈಚಲು ಮರ ಇರುವುದಿಲ್ಲ. ಅದನ್ನು ವ್ಯವಸಾಯಕ್ಕೆ ರಿಲೀಸ್ ಮಾಡಬೇಕಾದರೆ ಅದು ಸರ್ಕಾರಕ್ಕೆ ಬರಬೇಕು. ಆ ಭೂಮಿಯನ್ನ ವ್ಯವಸಾಯಕ್ಕೆ ಕೊಡಬಹುದು ಎಂದು ರೆವಿನ್ಯೂ ಇನ್ಸ್‌ಪೆಕ್ಟರು, ತಹಸೀಲ್ದಾರರು ಮತ್ತು ಡೆಪ್ಯುಟೀ ಕಮೀಷನರು ಸರ್ಕಾರಕ್ಕೆ ಬರೆದು, ಅದನ್ನು ಎಕ್ಸೈಸ್ ಮಿನಿಸ್ಟರು ಒಪ್ಪಿದಮೇಲೆ ಅದನ್ನು ಎಕ್ಸೈಸ್ ಕಮೀಷನರು ಗ್ರ್ಯಾಂಟ್ ಮಾಡಬೇಕು. ಹೆಚ್ಚಿಗೆ ಆಹಾರವನ್ನು ಬೆಳೆಯಬೇಕಾದರೆ ಹೆಚ್ಚಿಗೆ ಭೂಮಿ ಇರಬೇಕು. ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕಾಗಿ ಬಡವರಿಗೆ ಜಮೀನನ್ನು ಕೊಡಬೇಕು ಎನ್ನುವ ಇಚ್ಛೆ ನಿಮಗೆ ಇದ್ದರೆ ದರಖಾಸ್ತು ಜಮೀನು ಕೊಡುವುದರಲ್ಲಿ ಏನು ತೊಂದರೆಗಳಿವೆ ಎಂಬುದನ್ನು ನೋಡಿ ಅವುಗಳನ್ನು ನಿವಾರಣೆ ಮಾಡಬೇಕು. ಅದಕ್ಕೆ ಬೇಕಾದ ಉಪಾಯವನ್ನು ಕಂಡುಹಿಡಿಯಬೇಕೆಂದು ನಾನು ರೆವಿನ್ಯೂ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೆವಿನ್ಯೂ ಇಲಾಖೆಯಲ್ಲಿ ರೆಕಾರ್ಡುಗಳನ್ನು ಇತ್ಯರ್ಥ ಮಾಡುವುದರಲ್ಲಿ ವಿಳಂಬವಾಗುತ್ತಿದೆ. ಈಗ ರೀ ಸರ್ವೆ ಸೆಟ್ಲ್‌ಮೆಂಟ್ ಮಾಡಿದ್ದಾರೆ. ಯಾರಾದರೂ ಒಬ್ಬ ರೈತ ಬಂದು ಬಾವಿ ತೆಗೆಯುವುದಕ್ಕೋ ಅಥವಾ ಮನೆ ಕಟ್ಟುವುದಕ್ಕೋ ಸಾಲ ತೆಗೆದುಕೊಳ್ಳಬೇಕಾದರೆ, ತಕಾವಿ ಸಾಲ ತೆಗೆದುಕೊಳ್ಳಬೇಕಾದರೆ ನಾನಾ ತೊಂದರೆಗಳಿವೆ. ಜಮೀನಿನ ಪೋಡು ಆಗಿರುವುದಿಲ್ಲ. ರೆಕಾರ್ಡ್ ಆಫ್ ರೈಟ್ಸನ್ನು ಅವನು ಹೊಂದಿರುವುದಿಲ್ಲ. ಇನ್ನೊಂದು ವರ್ಷದ ಅವಧಿಯಲ್ಲಿ ಮಾನ್ಯ ಸಚಿವರು ರೈತನಿಗೆ ಈ ಸವಲತ್ತುಗಳನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ರೈತ ಸಾಲಕ್ಕೆ ಹಾಕಿದಾಗ ರೆಕಾರ್ಡ್ಸ್ ಆಫ್ ರೈಟ್ಸ್ ಸರಿಯಾಗಿಲ್ಲದೇ ಹೋದರೆ ಅವನ ಕಾಗದ ಪತ್ರಗಳನ್ನು ವಾಪಸ್ಸು ಹಾಕುತ್ತಾರೆ. ಅವನು ಬೇಕಾದಷ್ಟು ಜಮೀನನ್ನು ಇಟ್ಟುಕೊಂಡಿದ್ದರೂ ಸಾಲವನ್ನು ತೆಗೆದುಕೊಂಡು ಅನುಕೂಲ ಮಾಡಿಕೊಳ್ಳುವುದಕ್ಕಾಗುವುದಿಲ್ಲ. 500 ಜನ ಸರ್ವೆಯರುಗಳನ್ನು ಕೂಡಲೇ ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದರು. ಆದರೆ ಈಗ ಅದನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕಳುಹಿಸಿದ್ದಾರೆಂದು ಕೇಳಿದ್ದೇನೆ. ಅವರು ಇಂಟರ್‌ವ್ಯೂ ಕರೆಯಬೇಕಾದರೆ ಇನ್ನೊಂದು ವರ್ಷವಾಗುತ್ತದೆ. ಆಮೇಲೆ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಇನ್ನೆಷ್ಟು ದಿವಸಗಳಾಗುತ್ತದೋ ಗೊತ್ತಿಲ್ಲ. ಅದಕ್ಕೋಸ್ಕರವಾಗಿ ಸರ್ಕಾರದವರು ಏನಾದರೂ ಪಾಡಿ ಇಲಾಖೆಯ ಮುಖ್ಯಾಧಿಕಾರಿಯನ್ನೋ ಅಥವಾ ರೆವಿನ್ಯೂ ಸೆಕ್ರೆಟರಿಯವರನ್ನೋ ಅದಕ್ಕೆ ಚೇರ್ಮನ್ ಮಾಡಿ ಸರ್ವೇಯರುಗಳನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸ್ ಏನಿದೆ ಇದು ಸರಿಯಾಗಿ ಕೆಲಸ ಮಾಡದೇ ಹೋದರೆ ರೈತ ಒಂದು ಕುಂಟೆ ಭೂಮಿಗಾಗಿ ಹೈಕೋರ್ಟ್ ಸುಪ್ರೀಮ್ ಕೋರ್ಟಿನವರೆಗೂ ಹೋಗುತ್ತಾನೆ. ಅದಕ್ಕಾಗಿ ಖೂನಿಯನ್ನು ಕೂಡ ಮಾಡುತ್ತಾನೆ. ಈ ರೀತಿ ಜಮೀನಿಗಾಗಿ ಬೇಕಾದಷ್ಟು ಅನ್ಯಾಯಗಳು ನಡೆಯುತ್ತವೆ. ಅವನಿಗೆ ಸೇರಬೇಕಾದ ಹಕ್ಕನ್ನು ಕಾನೂನು ಪ್ರಕಾರ, ಕಾಯಿದೆ ಪ್ರಕಾರ ಕೊಟ್ಟರೆ ಯಾವ ವ್ಯಾಜ್ಯವೂ ಆಗುವುದಿಲ್ಲ. ಈ ದೃಷ್ಟಿಯಿಂದ ರೆವಿನ್ಯೂ ಸೆಟ್ಲ್‌ಮೆಂಟ್ ಆಫೀಸನ್ನು ರೀ ಓರಿಯೆಂಟ್ ಮಾಡಬೇಕು. ಇದರ ಬಗ್ಗೆ ಸರ್ಕಾರ ಗಮನವನ್ನು ಕೊಡಬೇಕು.

ಇನ್ನು ಈ ರೆವಿನ್ಯೂ ಇಲಾಖೆಯ ಅಧಿಕಾರಿಗಳ ವಿಷಯವನ್ನು ಹೇಳುತ್ತಾ ಹೋದರೆ ಒಂದು ದೊಡ್ಡ ರಾಮಾಯಣವಾಗುತ್ತದೆ. ಆದ್ದರಿಂದ ಈಗ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಹೃತ್ಪೂರ್ವಕವಾಗಿ ಬಡವರಿಗಾಗಿ ಕೆಲಸ ಮಾಡದೇ ಹೋದರೆ ಅವರು ಆ ಜಾಗದಲ್ಲಿ ಇರುವುದಕ್ಕೆ ನಾಲಾಯಕ್. ಈ ಇಲಾಖೆಯಲ್ಲಿ ಕನ್ನಡ ಬಾರದ ಇರತಕ್ಕ ನೌಕರರೂ ಇದ್ದಾರೆ. ಕಾನೂನು ಪುಸ್ತಕದಲ್ಲಿ ಯಾವ ಸೆಕ್ಷನ್ ಅನ್ನೂ ಓದದೇ ಇರುವವರು ಇದ್ದಾರೆ. 27–28 ವರ್ಷದ ಹುಡುಗರು ಆಫೀಸರಾಗಿ ರೆವಿನ್ಯೂ ಸಬ್ ಡಿವಿಜನ್ ಚಾರ್ಜಿನಲ್ಲಿ ಇದ್ದಾರೆ. ಚಿಕ್ಕ ವಯಸ್ಸಿನ ಅನುಭವ ಇಲ್ಲದೆ ಇರತಕ್ಕವರು ತಾಲ್ಲೂಕು ಚಾರ್ಜಿನಲ್ಲಿ, ಸಬ್ ಡಿವಿಜನ್ ಚಾರ್ಜಿನಲ್ಲಿ ಡಿಸ್ಟ್ರಿಕ್ಟ್ ಚಾರ್ಜಿನಲ್ಲಿ ಇದ್ದಾರೆ. ಇವರಿಗೆ ಸರಿಯಾದ ತರಪೇತಿ ಇಲ್ಲ. ಇವರಿಗೆ ಸರಿಯಾದ ಅನುಭವ ಇಲ್ಲ. ಇವರಿಂದ ಜನತೆ ಏನೊಂದು ಸಹಾಯವನ್ನು ನಿರೀಕ್ಷಣೆ ಮಾಡಿದ್ದಾರೋ ಅದು ಅವರಿಗೆ ಸಿಕ್ಕುತ್ತಾ ಇಲ್ಲ. ಅದಕ್ಕೋಸ್ಕರವಾಗಿ ಸರ್ಕಾರದವರು ಇದನ್ನೆಲ್ಲಾ ಸರಿಪಡಿಸಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಸ್ಟಾಂಪಿನ ಇಲಾಖೆಯ ಬಗ್ಗೆ ಹೇಳುವುದಾದರೆ ಇವೊತ್ತು ನಮ್ಮಲ್ಲಿ ಲೋಯರ್ ಡಿನಾಮಿನೇಷನ್ ಸ್ಟಾಂಪು ಸಿಕ್ಕುವುದಿಲ್ಲ. ನಾನು ಮೊನ್ನೆ 4 ಆಣೆ ಸ್ಟಾಂಪಿಗೆ ಒಂದು ರೂಪಾಯಿ ಕೊಟ್ಟು ಕೊಂಡುಕೊಂಡೆ. ಇಂಥಾ ಪರಿಸ್ಥಿತಿ ಬಂದಿದೆ. ಹೀಗಾದರೆ ನಿಮ್ಮ ಸ್ಟಾಂಪ್ ಡಿಪಾರ್ಟ್‌ಮೆಂಟ್ ಇದೆಯೇ ? ಇನ್ಸ್‌ಪೆಕ್ಟರ್ ಆಫ್ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಅವರ ಕೈಯ್ಯಲ್ಲಿ ನೀವು ಅಧಿಕಾರ ಕೊಟ್ಟಿದ್ದೀರಿ, ಅವರು ಸರಿಯಾಗಿ ಸ್ಟಾಂಪ್ಸ್ ಪ್ರಿಂಟ್ ಮಾಡಿಸುವುದಿಲ್ಲ. ನಾಲ್ಕಾಣೆ ಸ್ಟಾಂಪನ್ನು 1 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ ಎಂದರೆ ಸ್ಟಾಂಪಿನ ಇಲಾಖೆ ಏನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುತ್ತಿದೆ ? ರೈತ ತಹಶೀಲ್ದಾರರಿಗೆ ಒಂದು ಅರ್ಜಿ ಕೊಡಬೇಕಾದರೆ 4 ಆಣೆ ಸ್ಟ್ಯಾಂಪಿಗೆ ಒಂದು ರೂಪಾಯಿ ಕೊಟ್ಟು ತರಬೇಕಾದರೆ ಅವನು ಎಷ್ಟು ಕಷ್ಟಪಡುತ್ತಾನೆ ಎಂಬುವನ್ನು ಯೋಚನೆ ಮಾಡಬೇಕು. ಸ್ಟ್ಯಾಂಪು ಡಿಪಾರ್ಟ್‌ಮೆಂಟಿನವರು ಮಲಗಿದ್ದಾರೆಯೋ ಅಥವಾ ಕೆಲಸ ಮಾಡುತ್ತಿದ್ದಾರೆಯೋ ನನಗೆ ಗೊತ್ತಾಗುವುದಿಲ್ಲ. ಲೋಯರ್ ಡಿನಾಮಿನೇಷನ್ನಿನ ಸ್ಟ್ಯಾಂಪುಗಳನ್ನು ಪ್ರಿಂಟ್ ಮಾಡಬಾರದು ಎಂದು ತಾವೇನಾದರೂ ಆದೇಶ ಕೊಟ್ಟಿದ್ದೀರಾ ! ನಿಜವಾಗಿ ನಾನು ಹೇಳುತ್ತೇನೆ, ಸ್ಟ್ಯಾಂಪು ಡಿಪಾರ್ಟ್‌ಮೆಂಟನ್ನು ತಾವು ಸರಿಯಾಗಿ ನೋಡಿಕೊಳ್ಳದೇ ಇದ್ದರೆ, ಇದರಿಂದ ಜನತೆಗೆ ತೊಂದರೆಯಾಗುತ್ತದೆ. ಲೋಯರ್ ಡಿ ನಾಮಿನೇಷನ್ನಿನ ಸ್ಟ್ಯಾಂಪು ಸಿಕ್ಕದೇ ಹೋದರೆ ರೈತ ತಹಶೀಲ್ದಾರರಿಗೆ, ಅಸಿಸ್ಟೆಂಟ್ ಕಮೀಷನರಿಗೆ, ಡೆಪ್ಯುಟೀ ಕಮೀಷನರಿಗೆ ಅರ್ಜಿಯನ್ನು ಹಾಕಬೇಕಾದರೆ ಅವನೇನು ರಬ್ಬರ್ ಸ್ಟ್ಯಾಂಪು ಹಾಕಬೇಕೇ ? ಅದಕ್ಕೋಸ್ಕರವಾಗಿ ನಾನು ಮಾನ್ಯ ರೆವಿನ್ಯೂಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸ್ಟ್ಯಾಂಪು ಇಲಾಖೆಗೆ ಸ್ವಲ್ಪ ಚೇತನವನ್ನು ಕೊಡಬೇಕು ಎಂದು.

ರಿಜಿಸ್ಟ್ರೇಷನ್ ಬಗ್ಗೆ ಹೇಳುವಾಗ ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎಸ್. ಪಾಟೀಲರವರು, ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಕಾಗದ ಪತ್ರಗಳನ್ನು ರಿಜಿಸ್ಟರು ಮಾಡುವಾಗ ಅಲ್ಲಿ ಫೋಟೋಗಳನ್ನು ತೆಗೆಯುವ ಸೌಕರ್ಯಗಳನ್ನು ಮಾಡಿಸಬೇಕು ಎಂದು ಹೇಳಿದ್ದರು. ಹಿಂದೆ ಬೆಳಗಾಂನಲ್ಲಿ ಇದ್ದಂತಹ ಫೋಟೋ ಪದ್ಧತಿ ಸರಿಯಾಗಿಲ್ಲ ಎಂದು ಅಲ್ಲಿ ತೆಗೆದರೋ ಏನೋ ಗೊತ್ತಾಗಲಿಲ್ಲ. ನಮ್ಮಲ್ಲಿ ರಿಜಿಸ್ಟರು ಮಾಡುವಾಗ ಕಾಗದ ಪತ್ರಗಳನ್ನು ಫೋಟೋ ತೆಗೆಯುವ ಸೌಕರ್ಯವನ್ನು ಒದಗಿಸಿದರೆ ಜನತೆಗೆ ಎಷ್ಟೋ ಉಪಕಾರ ಮಾಡಿದಂತೆ ಆಗುತ್ತದೆ. ಈ ದೃಷ್ಟಿಯಿಂದ ನಾನು ಸರಕಾರದಲ್ಲಿ ವಿನಂತಿ ಮಾಡುವುದು ಡಾಕ್ಯುಮೆಂಟುಗಳನ್ನು ಫೋಟೋ ತೆಗೆದು ರಿಜಿಸ್ಟರು ಮಾಡುವ ಪದ್ಧತಿ ಒಳ್ಳೆಯದು. ಬೆಳಗಾಂನಲ್ಲಿ ಅಲ್ಲಿರುವ ಪದ್ಧತಿಗೆ ಸರಿಯಗಿಲ್ಲ ಎಂದು ತೆಗೆದರೋ ಏನೋ ನಮ್ಮಗೆ ಗೊತ್ತಾಗಲಿಲ್ಲ.

ಇನ್ನು ನಮ್ಮ ಸಿವಿಲ್ ಕೋರ್ಟಿನಲ್ಲಿರುವ ಸೆಕೆಂಡ್ ಡಿವಿಜನ್ನು ಕ್ಲಾರ್ಕಿನಿಂದ ಹಿಡಿದು ಹೆಡ್ ಗುಮಾಸ್ತೆ ಶಿರಸ್ತೇದಾರರವರಿಗೆ ಏನಾದರೂ ಶಾಖಾಯ ಲವಣಾಯ ಕೊಟ್ಟರೇನೇ ಅಲಿಂದ ಕಾಗದ ಮುಂದಕ್ಕೆ ಹೋಗುತ್ತದೆ, ಇಲ್ಲದಿದ್ದರೆ ಇಲ್ಲ. ಹಾಗೇನೇ ಇವೊತ್ತು ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಒಂದು ನೂರು ರೂಪಾಯಿಗಳ ಕಾಗದ ರಿಜಿಟರ್ ಆಗಬೇಕಾದರೆ ಅದರ ಜೊತೆಯಲ್ಲಿ ಎರಡು ರೂಪಾಯಿಗಳನ್ನು ಇಟ್ಟರೇನೇ ಆ ಪತ್ರವನ್ನು ರಿಜಿಸ್ಟರು ಮಾಡಿಸಬಹುದು. ಇಲ್ಲದಿದ್ದರೆ ಇಲ್ಲ. ಸಬ್ ರಿಜಿಸ್ಟ್ರಾರ್‌ವರ ಆಫೀಸಿಗೆ ಹೋಗುವವರಿಗೆಲ್ಲಾ ಇದು ಚೆನ್ನಾಗಿ ಗೊತ್ತು. ಸಬ್ ರಿಜಿಸ್ಟ್ರಾರವರ ಆಫೀಸಿನೊಳಗೆ ಲಂಚವನ್ನು ತಪ್ಪಿಸಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ ಅಲ್ಲಿ ಅದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಎರಡು ರೂಪಾಯಗಳ ಲಂಚ ತಿನ್ನುತ್ತಾನೆ ಎಂದು ಹಿಡಿದರೆ ಎರಡು ಸಾವಿರ ರೂಪಾಯಿಗಳಷ್ಟು ಲಂಚ ತಿನ್ನುವವರು ತಪ್ಪಿಸಿಕೊಳ್ಳುತ್ತಿದ್ದಾರೆ. ಇದನ್ನು ಕಂಡು ಹಿಡಿಯುವುದಕ್ಕೆ ಯಾರೂ ಪ್ರಯತ್ನ ಮಾಡುತ್ತಿಲ್ಲ. ನಮ್ಮ ಕಡೆ ಒಬ್ಬರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಒಬ್ಬರು ಗುಮಾಸ್ತರು ಇದ್ದಾರೆ. ಅವರು ಒಂದು ಸಾರಿ ಒಂದು ಕಾಗದವನ್ನು ರಿಜಿಸ್ಟರು ಮಾಡಿದ ಮೇಲೆ ಪೋಸ್ಟು ಆಫೀಸಿಗೆ ಹಾಕಿಯಾಗಿತ್ತು, ಆಮೇಲೆ ಯಾರೋ ಪಾರ್ಟಿಗಳು ಬಂದು ಅದರಲ್ಲಿರುವುದು ಸರಿಯಾಗಿಲ್ಲ ಎಂದು ಹೇಳಿದಾಗ ಅವರು ಪೋಸ್ಟು ಆಫೀಸಿಗೇ ಹೋಗಿ ಅಲ್ಲಿಂದ ಪತ್ರವನ್ನು ತೆಗೆದು ಅದನ್ನು ಪುನಃ ತಿದ್ದಿ ಏನು ಮಾಡಬೇಕೋ ಅದನ್ನೆಲ್ಲಾ ಮಾಡಿ ಮುಗಿಸಿಬಿಟ್ಟರು. ಇದನ್ನು ಪತ್ತೆ ಹಚ್ಚಬೇಕೆಂದು ನಿಮ್ಮ ಇಲಾಖೆಯಲ್ಲಿರುವ ಒಬ್ಬರು ಇಂಟಲಿಜೆನ್ ಆಫೀಸರಿಗೆ ಹೇಳಿದಾಗ ಅವರು ಊರಿನೊಳಗೆ ಇರುವ ಟಿ.ಬಿ.ಗೆ ಬಂದು ಅದಕ್ಕೆ ಸಂಬಂಧಪಟ್ಟ ಪಾರ್ಟಿಗಳನ್ನು ಕರೆಸಿ ಅವರಿಂದ ಬರುವ ಮಾಮೂಲುಗಳನ್ನು ವಸೂಲು ಮಾಡಿಕೊಂಡು ಇಲ್ಲಿ ನಡೆದಿರುವುದೆಲ್ಲಾ ಸುಳ್ಳು ಎಂದು ಹೇಳಿ ಹೊರಟು ಹೋದರು. ಇಲ್ಲಿ ನಡೆದಿರುವುದೆಲ್ಲಾ ಸತ್ಯಕ್ಕೆ ದೂರವಾದುದು ಎಂದು ಯಾರಾದರೂ ಇಲ್ಲಿ ಪ್ರೂವ್ ಮಾಡಿದರೆ ಆಗ ನಾನು ಈ ಸಭೆಯ ಸದಸ್ಯತ್ವಕ್ಕೂ ಕೂಡ ರಾಜಿನಾಮೆ ಕೊಡಲು ಸಿದ್ಧನಾಗಿದ್ದೇನೆ. ಇಂತಹ ಅಧಿಕಾರಿಗಳನ್ನು ರಿಜಿಸ್ಟ್ರೇಷನ್ನು ಇಲಾಖೆಯಲ್ಲಿ ಇಟ್ಟುಕೊಂಡು ಇದ್ದೀರಿ. ಇವರೆಲ್ಲಾ ಸಮಾಜ ಘಾತುಕರು ಮತ್ತು ಸಮಾಜ ದ್ರೋಹಿಗಳು. ಇಂತಹ ಸಮಾಜ ದ್ರೋಹಿಗಳನ್ನು ಇನ್ನೂ ಅಧಿಕಾರದಲ್ಲಿ ಇಟ್ಟುಕೊಂಡಿದ್ದಾರೆ. ಇವರು ಬಸವಣ್ಣನ ಕುಲದವರು, ಇವರು ಗೋಕುಲದವರು, ಇವರು ಆ ಕುಲದವರು ಮತ್ತು ಈ ಕುಲದವರು ಎಂದು ಹೀಗೆ ಮುಂದುವರಿಸಿಕೊಂಡು ಬರುತ್ತಿದ್ದರೆ ಇದರಿಂದ ಸರಕಾರಕ್ಕೆ ಒಳ್ಳೆಯದಾಗುವುದಿಲ್ಲ. ಇಲ್ಲಿರುವ ಒಬ್ಬರು ಇಂಟಲಜೆನ್ಸು ಆಫೀಸರವರಿಗೆ ನಮ್ಮ ಕಡೆ ಬಂದಾಗ ಅವರಿಗೆ ನಾನೇ ಹೇಳಿದೆ. ಇದುವರೆಗೆ ನೀವು ಮಾಡಿರುವಷ್ಟು ಹಣ ಸಾಕು, ಇನ್ನು ಮುಂದಾದರೂ ಸ್ವಲ್ಪ ಒಳ್ಳೆಯ ಬುದ್ಧಿಯಿಂದ ಜನಕ್ಕೆ ಒಳ್ಳೆಯ ಕೆಲಸ ಮಾಡುವ ಕೆಲಸ ಕಲಿತುಕೊಳ್ಳಿ ಎಂದು ಹೇಳಿದೆ. ಹಾಗೆ ಇಲ್ಲಿರುವ ತಾಲ್ಲೂಕು

ಆಫೀಸಿನಲ್ಲಿ ಒಬ್ಬರು ಗುಮಾಸ್ತರು ಮೂರು ವರ್ಷಗಳಿಂದಲೂ ಇದ್ದಾರೆ. ಇವರಿಗೆ ಈ ಊರನಲ್ಲಿ ಸಿಟಿಯಲ್ಲಿ ಒಂದು ಸೈಟು ಹಾಗೂ ರಾಜಾಜಿನಗರದಲ್ಲಿ ಒಂದು ಸೈಟು ಹೀಗೆ ಮಾಡಿಕೊಂಡು ಸೌಖ್ಯವಾಗಿದ್ದಾರೆ. ಇವರು ಬರೀ ಫಸ್ಟ್ ಡಿವಿಜನ್‌ನಲ್ಲಿರುವ ಗುಮಾಸ್ತರು. ಇವರು ಸುಮಾರು ಮೂರು ವರ್ಷಗಳಿಂದಲೂ ಇಲ್ಲದ ತೊಂದರೆಗಳನ್ನು ಜನಕ್ಕೆ ಕೊಡುತ್ತಿದ್ದಾರೆ. ಇವರು ಇಲ್ಲಿಯವರೆಗೆ ಇರುವುದು ಸಾಕು, ಮುಂದೆ ಎಲ್ಲಿಗಾದರೂ ಇವರನ್ನು ವರ್ಗ ಮಾಡಿ ಎಂದು ಮೇಲಿನ ಅಧಿಕಾರಿಗಳಿಗೆ ಹೇಳಿದರೆ ಅವರುಗಳು ಇಲ್ಲಿಗೆ ಬಂದಾಗಲೆಲ್ಲಾ ಇದನ್ನು ವಿಚಾರ ಮಾಡುತ್ತೇವೆ, ಮಾರ್ಚಿ 31 ನೇ ತಾರೀಖು ಬರಲೀ, ಎಪ್ರಿಲ್ ಬರಲಿ ಎಂದು ಹೇಳುತ್ತಲೇ ಬರುತ್ತಿದ್ದಾರೆ. ಇದು ಬಹು ಸಣ್ಣ ವಿಷಯ ಎಂದು ನಾನು ಇಲ್ಲಿ ಹೇಳಲು ತಯಾರಿಲ್ಲ. ಇವರಿಂದ ಸುಮಾರು ಒಂದು ಲಕ್ಷ ಅರವತ್ತು ಸಾವಿರ ಜನಕ್ಕೆ ಬಹಳ ಹಿಂಸೆಯಾಗುತ್ತಿದೆ. ಆದರಿಂದ ಇಲ್ಲಿ ಹೇಳಬೇಕಾಗಿ ಬಂದಿದೆ.

ಇನ್ನು ಪಶುಸಂಗೋಪನೆ ವಿಚಾರದಲ್ಲಿ ಎಷ್ಟುಮಟ್ಟಿಗೆ ಕೆಲಸಗಳು ಆಗುತ್ತಿವೆ ಎಂದು ಇಲ್ಲಿ ಹೇಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿರುವ ಪಶುಗಳನ್ನೆಲ್ಲಾ ಕಾಪಾಡಬೇಕು ಎಂದು ಮಾನ್ಯ ಮಂತ್ರಿಗಳು ಡೆನ್ ಮಾರ್ಕು, ಹಾಲೆಂಡು ಇತ್ಯಾದಿ ದೇಶಗಳಲ್ಲಿ ಹೋಗಿ ನೋಡಿಕೊಂಡು ಬಂದು ಅಲ್ಲಿ ಹಾಲು ಹರಿಯುತ್ತಿರುವಂತೆ ಇಲ್ಲೂ ಕೂಡ ಹಾಲು ಹರಿದು ಕಾಮಧೇನುವಿನಂತೆ ಮಾಡಿದರೂ ಕೂಡ ಹಾಲು ಬರುವುದರೊಳಗೆ ಗಂಗಾ ನದಿ ಬತ್ತಿ ಹೋಯಿತು ಕೃಷ್ಣಾ ನದಿ ಬತ್ತಿ ಹೋಯಿತು ಮತ್ತು ಇತರ ಹಳ್ಳಗಳೂ ಬತ್ತಿ ಹೋದವು. ಮಿಲ್ಕ್ ಪ್ರಾಜೆಕ್ಟು ಸ್ಕೀಮನ್ನು ಇಲ್ಲೂ ಮಾಡಬೇಕೆಂದು ಸುಮಾರು ಒಂದೂವರೆಯಿಂದ ಎರಡು ಕೋಟಿಯಷ್ಟು ವೆಚ್ಚದಲ್ಲಿ ಮಾಡಬೇಕೆಂದು ಇದಕ್ಕಾಗಿ ಒಂದು ದೊಡ್ಡ ಬಿಲ್ಡಿಂಗನ್ನೂ ಕಟ್ಟಿಸಿ ಆದನ್ನು ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮತ್ತು ಅವರ ಕುಟುಂಬದವರಿಂದ ಇದನ್ನು ಓಪನ್ ಮಾಡಿಸಿಬಿಟ್ಟರು. ಆದರೆ ಈ ಖಾತೆಯಿಂದ ಯಿಂದ ಇನ್ನೂ ಏನೂ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇದು ಸರಕಾರದ ತಪ್ಪಲ್ಲ ಮತ್ತು ಮಂತ್ರಿಗಳ ತಪ್ಪೂ ಅಲ್ಲ. ಏಕೆಂದರೆ, ಈಗ ದನಕರುಗಳಿಗೆ ಮೇವೇ ಸಿಗುತ್ತಿಲ್ಲ. ಮೇಯುವ ಹುಲ್ಲೇ ಇಲ್ಲದೇ ಹೋದರೆ ತಾವು ಹಾಲನ್ನು ಕರೆಯುವುದಾದರೂ ಎಲ್ಲಿಂದ ? ಈ ಹಾಲು ಬಿಟ್ಟು ಕಳ್ಳಿ ಹಾಲು ಕರೆಯಬೇಕು ಅಷ್ಟೇ. ಅದೂ ಕೂಡ ಮುಳ್ಳು ಕಲ್ಲುಗಳಿಂದ ಕೂಡಿ ಹಾಳಾಗಿ ಹೋಗಿದೆ. ಹಾಲಿನ ಕೇದ್ರಗಳು ಸರಿಯಾಗಿ ಕೆಲಸ ಮಾಡಲಿಲ್ಲ ಮತ್ತು ಅದರಿಂದ ಈ ಕೇಂದ್ರದ ಕೆಲಸಗಳು ಫೇಲ್ ಆಗಿವೆ. ಇದು ಕಂದಾಯ ಸಚಿವರ ತಪ್ಪಲ್ಲ. ಪ್ರಕೃತಿ ವಿಕೋಪಕ್ಕೆ ತುತ್ತಾಗಿರುವುದರಿಂದ ಇಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಇದಕ್ಕಾಗಿ ಹೆಚ್ಚು ವೆಚ್ಚಮಾಡಿದ್ದೇವೆಂದು ಹೇಳುವುದು ಅಷ್ಟು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸ್ವಲ್ಪ ದೂರದೃಷ್ಟಿಯಿಂದ ಇಲ್ಲಿ ಎಲ್ಲ ವಿಚಾರಗಳನ್ನೂ ಹೇಳಬೇಕು. ಇವೊತ್ತು ಹಸುಗಳನ್ನು ಕೊಂಡುಕೊಳ್ಳಬೇಕೆಂದು ನೂರು ಅಥವಾ ನೂರೈವತ್ತು ಎಂದು ಸಾಲ ಕೊಟ್ಟರೆ ಅವರಿಗೆ ಹಸುಗಳು ಎಲ್ಲಿಂದ ಸಿಗಬೇಕು ? ಇವೊತ್ತು ಇರುವ ಹಸುಗಳು ಮೇವಿಲ್ಲದೆ ಸಾಯುತ್ತಿವೆ. ಅಂತಹ ದನಗಳನ್ನು ನೋಡಬೇಕಾದರೆ ಇವೊತ್ತು ತಾವು ಲಕ್ಕುವಳ್ಳಿ, ಸಾಬರು ದನ ಕುಯ್ಯುತ್ತಿದ್ದಾರೆ. ಅಲ್ಲಿಗೆ ಹೋಗಿ ನೋಡಬಹುದು. ತಾವೇನೋ ಅಲ್ಲಿ ಒಳ್ಳೆಯ ಅಮೃತ ಮಹಲ್ ದನಗಳನ್ನು ಮಾಡಬೇಕು ಹಳ್ಳಿಕಾರ್ ದನಗಳನ್ನು ಮಾಡಬೇಕೆಂದು ಮತ್ತು ಅದರ ತಳಿಗಳ ಅಭಿವೃದ್ಧಿ ಮಾಡಬೇಕೆಂದು ಹೇಳಿದರೂ ಅದರಂತೆ ಅಭಿವೃದ್ಧಿಯಾಗುತ್ತಿಲ್ಲ. ಇದಕ್ಕೆ ಕಾರಣ ದನಕರುಗಳಿಗೆ ಸರಿಯಾದ ಮೇವೇ ಸಿಗುತ್ತಿಲ್ಲ. ಮೈಸೂರು ಸಂಸ್ಥಾನದಲ್ಲೇ ಹಿಂದೆ ಹೆಸರುವಾಸಿಯಾದ ಎತ್ತುಗಳು ಹೋರಿಗಳು ಎಂದು ಇದ್ದವು, ಇವೊತ್ತು ಅಂತಹ ಪಶು ಸಂಗೋಪನೆ ಕ್ಷೇತ್ರದಲ್ಲ ಮೈಸೂರು ಸಂಸ್ಥಾನದಲ್ಲಿ ಇಲ್ಲದೇ ಹೋಗಿದ್ದರೆ ಇಂತಹ ಪ್ರಾಜೆಕ್ಟು ಎಂದು ಮಾಡಿ ಇದನ್ನು ಯಾವರೀತಿ ಉಳಿಸುತ್ತೀರಿ ? ನನಗಂತೂ ಅರ್ಥವಾಗುತ್ತಿಲ್ಲ.

ಇನ್ನು ಕುದುರೆಗಳನ್ನು ಸಾಕಬೇಕೆಂದು ಕುಣಿಗಲ್ಲಿನಲ್ಲಿ ಒಂದು ಸ್ಟಡ್ ಫಾರಂ ಮಾಡಿದ್ದಾರೆ. ಇಲ್ಲಿ ಎಷ್ಟು ತರಹದ ಕುದುರೆಗಳನ್ನು ತಂದು ಅಭಿವೃದ್ಧಿಮಾಡಿದ್ದೀರಿ ? ಇದಕ್ಕೆ ವೆಚ್ಚವೇನು ಮಾಡುತ್ತಿದ್ದೀರಿ ? ಇಲ್ಲಿ ಎಷ್ಟು ಕುದುರೆಮರಿಗಳಾದುವು ಮತ್ತು ಇಲ್ಲಿ ಏನೇನು ನಡೆಯುತ್ತವೆ ಇದನ್ನು ಪರಿಶೀಲನೆ ಮಾಡಲು ಒಂದು ಕಮಿಟಿ ಮಾಡಿ ಎಂದು ಹೇಳಿದರೂ ಅದನ್ನು ಮಾಡಿಲ್ಲ ಮತ್ತು ಇಲ್ಲಿಯವರೆಗೆ ಎಷ್ಟು ಹಣ ವೆಚ್ಚವಾಗಿದೆ ಎನ್ನುವುದೂ ತಿಳಿದಿಲ್ಲ. ಇದನ್ನೆಲ್ಲಾ ಪಶುಸಂಗೋಪನೆ ಇಲಾಖೆಯಲ್ಲಿ ಸೇರಿಸಿ ಇದರಲ್ಲಿ ತರಬೇತಿ ಕೊಡಲು ಎಷ್ಟು ಗೂಳಿಗಳನ್ನು ಸಂಪಾದಿಸಿದ್ದೀರಿ ? ಇದರಲ್ಲಿ ಕೋಳಿ ಸಾಕಾಣಿಕೆ, ಗುಬ್ಬಚ್ಚಿ ಫಾರಂಗಳು ಮಾಡಬೇಕೆಂದು ಮತ್ತು ಕ್ರಾಷ್ ಪ್ರೋಗ್ರಾಂನಂತೆ ಕೆಲಸಗಳನ್ನು ಮಾಡಬೇಕೆಂದು ಇಲ್ಲಿ ಸೇರಿಸಿದ್ದೀರಿ. ಇದೂ ಅಲ್ಲದೆ ಕೇಂದ್ರದ ಮಂತ್ರಿಗಳು ವಾರಕ್ಕೆ ಮೂರು ದಿನ ಅಕ್ಕಿ ತಿನ್ನುವುದನ್ನು ಬಿಡಬೇಕು. ಇದಕ್ಕೆ ಬದಲಾಗಿ ಎಲ್ಲರೂ ಮಾಂಸವನ್ನು ತಿನ್ನಬೇಕು ಎಂದರೆ ಇವೊತ್ತು ನೀವು ಕೋಳಿ ಸಾಕಾಣಿಕೆ ಮಾಡುತ್ತಿರುವ ಕೋಳಿಗಳೆಲ್ಲಾ ಉಳಿಯುವುವೇ ? ಇದನ್ನು ಯಾರೂ ಯೋಚನೆ ಮಾಡಲಿಲ್ಲ. ಒಂದು ಕಡೆ ಗಂಡ ಹೆಂಡತಿ ಒಂದು ಕೋಳಿ ಫಾರಂ ಎಂದು ಮಾಡಿಕೊಂಡರೆ ಅಲ್ಲಿ ಅವರು ಸಾಕಿದ ಕೋಳಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಗಳಿಂದ ಒಂದು ದಿನಕ್ಕೆ ಎರಡು ಮೊಟ್ಟೆಗಳು ಎಂದು ಬಂದರೆ ಅದನ್ನು ತಕ್ಷಣ ಅಲ್ಲೇ ಇರುವ ಅವರ ಮಕ್ಕಳು ತಿಂದುಬಿಡುತ್ತಾರೆ. ಇದರಿಂದ ನಿಮಗೆ ಹೆಚ್ಚು ಮೊಟ್ಟೆಗಳು ಬಂದಂತಾಗುವುದೇ! ಯಾವಾಗಲೂ ಯಾವ ಪ್ರೋಗ್ರಾಂ ಮಾಡಬೇಕಾದರೂ ಅದಕ್ಕೆ ಸರಿಯಾದ ಒಂದು ಇಂಪಟಸ್ ಕೊಟ್ಟು ಅದನ್ನು ಮಾಡಿದರೆ ಅದು ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಅದರಿಂದೇನೂ ಉಪಯೋಗ ವಿಲ್ಲ.

ಇನ್ನು ಪಶುಸಂಗೋಪನೆ ಇಲಾಖೆಯಲ್ಲಿ ದನಕರುಗಳಿಗೆ ಸರಿಯಾಗಿ ಔಷಧಿಗಳನ್ನು ಕೊಡಲು ಡಾಕ್ಟರುಗಳೇ ಇಲ್ಲ. ದನಗಳಂತಹ ಮೂಕ ಪ್ರಾಣಿಗಳ ನಾಡಿಯನ್ನು ಸರಿಯಾಗಿ ಪರೀಕ್ಷೆ ಮಾಡಿ ಕೊಡುವಂತಹ ಡಾಕ್ಟರುಗಳಿಗೆ ತಾವು ಇಲ್ಲ 180 ರಿಂದ 200 ಎಂದು ಸಂಬಳ ಕೊಟ್ಟರೆ ಅದು ಸಾಕಾಗುತ್ತದೆಯೇ? ಇದರ ಬಗ್ಗೆ ಅಲ್ಲಿರುವ ಡಾಕ್ಟರುಗಳು ಸರಕಾರಕ್ಕೆ ಬಂದು ಹೇಳಿಕೊಂಡ ಮೇಲೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನಾಲ್ಕು ಸ್ಟೇಟ್‌ಮೆಂಟುಗಳನ್ನು ಕೊಟ್ಟರು ಮತ್ತು ಅಮೇಲೆ ವಿದ್ಯಾಮಂತ್ರಿಗಳು ಐದು ಸ್ಟೇಟ್‌ಮೆಂಟುಗಳನ್ನು ಕೊಟ್ಟರು ಏನೋ ನಮ್ಮ ರೆವಿನ್ಯೂ ಮಂತ್ರಿಗಳೂ ಕೂಡ ಏನು ಮಾಡುತ್ತಾರೋ ನೋಡಬೇಕಾಗಿದೆ.

ತಮ್ಮಲ್ಲಿ ಇಲ್ಲಿ ಒಂದು ವಿಚಾರ ಅರಿಕೆ ಮಾಡಬೇಕಾಗಿದೆ. ಇವೊತ್ತಿನ ದಿವಸ ವೆಟರ್‌ನರಿ ಇಲಾಖೆಯಲ್ಲಿ ಪದವೀಧರರಾಗಿ ಇರುವ ಯುವಕರುಗಳಿಗೆ ಸರಿಯಾದ ಸಂಬಳ ಸಾರಿಗೆಗಳನ್ನು ಇತರ ಕಡೆಗಳಲ್ಲಿರುವಂತೆ ಕಲ್ಪನೆ ಮಾಡಿಕೊಡದೇ ಹೋದರೆ ಪಶುಸಂಗೋಪನೆ ಇಲಾಖೆಯಲ್ಲಿ ಚೆನ್ನಾಗಿ ಕೆಲಸಮಾಡುವುದಾದರೂ ಹೇಗೆ ಎಂದು ಇಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ಇದನ್ನು ಮಾಡಲು ಆಗದೇಹೋದರೆ ಈಗಿರುವ ಅಗ್ರಿಕಲ್ಚರು ಯೂನಿವರ್ಸಿಟಿಯನ್ನು ಅಬಾಲಿಷ್ ಮಾಡಿಬಿಡಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಿರುವ ಡಾಕ್ಟರುಗಳಿಗೆ ಈಗಾಗಲೇ ಸಂಬಳವನ್ನು ಹೆಚ್ಚಿಸ ರಾಗಿದೆ. ಇದರ ಜೊತೆಗೆ ಮೆಡಿಕಲ್ ಗ್ರಾಜುಯೇಟುಗಳಿಗೆ ಇತರ ಟೆಕ್ನಿಕಲ್ ಗ್ರಾಜುಯೇಟರು ಗಳಿಗೆ ಯಾವ ರೀತಿ ಇರಬೇಕೋ ಅದೇ ರೀತಿ ಅಗ್ರಿಕಲ್ಚರು ಗ್ರಾಜುಯೇಟುಗಳಿಗೂ ಇರಬೇಕೆಂದು ಸರಕಾರ ಈಗಾಗಲೇ ತೀರ್ಮಾನ ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಆ ರೀತಿ ಕಷ್ಟದಿಂದ ಕೆಲಸ ಮಾಡುವ ವೈದ್ಯರುಗಳಿಗೆ ಹೆಚ್ಚು ಸಂಬಳ ಕೊಡಬೇಕಾದುದು ಒಳ್ಳೆಯದು. ಇದಕ್ಕಾಗಿ ರೆವಿನ್ಯೂ ಸಚಿವರಿಗೆ ಈ ಸಭೆಯವರೆಲ್ಲರೂ ಋಣಿಯಾಗಿದ್ದಾರೆ ಎಂದು ನಾನಾದರೂ ಹೇಳುತ್ತೇನೆ. ಅಲ್ಲದೆ ಇಂತಹ ವೆಟರ್‌ನರಿ ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸ್ಟಾಕ್‌ಮನ್‌ಗಳು ಇರುವುದಿಲ್ಲ. ಇವರಿಗೆಲ್ಲಾ 30, 40 ಅಥವಾ 50 ಎಂದು ಸಂಬಳ ಕೊಡುತ್ತಿದ್ದಾರೆ. ನಮ್ಮ ಡಾಕ್ಟರ್ ಆಳ್ವರವರು 12 ಸೀಸೆಗಳಲ್ಲಿ ಕೆಂಪು ನೀರು ತುಂಬಿ ಔಷಧಿ ಎಂದು ಬಂದವರಿಗೆಲ್ಲಾ ಕೊಡುತ್ತಿರುತ್ತಾರೆ. ಯಾರು ಬೇಕಾದರೂ ಕುಡಿಯಬಹುದು, ಇಲ್ಲದಿದ್ದರೆ ಬಿಡಬಹುದು. ಇಂತಹ ವೆಟರ್ನರಿ ಆಸ್ಪತ್ರೆಗಳಲ್ಲಿ ಸರಿಯಾಗಿ ಸ್ಟಾಕುಮೆನ್‌ಗಳು, ಸಾಲಸ್ತ್ರಿಗಳು ಹಾಗೂ ಡಾಕ್ಟರುಗಳು ಇರಬೇಕು. ಈಗ ಮೈಸೂರು ರಾಜ್ಯದಲ್ಲಿ ಎಲ್ಲಿ ನೋಡಿ ದರೂ ಆಸ್ಪತ್ರೆಗಳನ್ನು ಮಾಡುತ್ತಾ ಬಂದಿದ್ದೇವೆಂದು ಇಲ್ಲಿ ಹೇಳುತ್ತಾರೆ ಅವರು 8, 10, 12, 30 ಆಸ್ಪತ್ರೆಗಳನ್ನು ಮಾಡುತ್ತಿದ್ದೇವೆ ಎಂದು ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ಇಲ್ಲಿರುವ 45 ಆಸ್ಪತ್ರೆಗಳಲ್ಲಿ 10 ಆಸ್ಪತ್ರೆಗೆ ಒಬ್ಬರು ಡಾಕ್ಟರಂತೆ ಕೂಡ ಇಲ್ಲ. ಡಾಕ್ಟರು ಇದ್ದರೆ ಕಾಂಪೌಂಡರು ಇಲ್ಲ, ಸಾಲಸ್ತ್ರಿಗಳು ಇರುವುದಿಲ್ಲ. ಸುಮ್ಮನೆ 550 ಆಸ್ಪತ್ರೆಗಳನ್ನು ಮಾಡಿದ್ದೇವೆ ಎಂದು ಹೇಳಿ ಅಲ್ಲಿ ಸರಿಯಾಗಿ ಇರಬೇಕಾದಂತೆ ಮೂರು ಮೂರು ಜನ ಕೆಲಸ ಮಾಡಲು ಅಧಿಕಾರಿ ಗಳು ಇಲ್ಲದೇ ಹೋದರೆ ಅವರಿಂದೇನು ಒಳ್ಳೆಯ ಕೆಲಸಗಳನ್ನು ನಾವು ನಿರೀಕ್ಷೆ ಮಾಡಬಹುದು! ತಾವೇ ಯೋಚನೆ ಮಾಡಬೇಕು. ಆದುದರಿಂದ ಸಾಕಷ್ಟು ಸಂಖ್ಯೆಯಲ್ಲಿ ಕಾಂಪೌಂಡರುಗಳಿಗೆ ಹಾಗೂ ಡಾಕ್ಟರುಗಳಿಗೆ ಟ್ರೇನಿಂಗು ಕೊಡುವ ವ್ಯವಸ್ಥೆ ಮಾಡಿ ಇಲ್ಲಿ ಸರಿಯಾದ ರೀತಿಯಲ್ಲಿ ಎಲ್ಲ ಸಿಬ್ಬಂದಿಗಳೂ ಇರುವಂತೆ ಮಾಡಿದರೆ ಪಶುಸಂಗೋಪನ್ ಇಲಾಖೆಯೂ ಒಳ್ಳೆಯ ಮಟ್ಟದಲ್ಲಿ ಇರಲು ಅನುಕೂಲವಾಗುತ್ತದೆ.

ಕ್ಷಾಮ ಇದ್ದಂಥ ಚಿತ್ರದುರ್ಗವನ್ನೂ ಒಂದೇ ಮಾಡುತ್ತೀರಿ, ತುಮಕೂರನ್ನೂ ಒಂದೇ ಮಾಡು ತ್ತೀರಿ, ಗುಂಡ್ಲುಪೇಟೆಯನ್ನೂ ಒಂದೇ ಮಾಡುತ್ತೀರಿ, ಬಿಜಾಪುರವನ್ನೂ ಒಂದೇ ಮಾಡುತ್ತೀರಿ. ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಎರಡು ಮೂರು ಜನ ತಿನ್ನು ವುದಕ್ಕೆ ಗತಿ ಇಲ್ಲದೇ ತಮ್ಮ ಹೆಂಡರುಮಕ್ಕಳನ್ನು ಮನೆಯಿಂದ ಆಚೆಗೆ ಕಳುಹಿಸಿದ್ದರೆ. ಇಂತಹ ಒಂದು ಪಟ್ಟಿಯೇ ನನ್ನಲ್ಲಿ ಇದೆ, ಅದನ್ನು ಓದು ಎಂದರೆ ಓದುತ್ತೇನೆ. ನಮ್ಮ ಪಕ್ಕದಲ್ಲಿ ಇರತಕ್ಕ ವರು ಮೂರು ತಿಂಗಳು ಎರಡು ತಿಂಗಳು ಮಕ್ಕಳನ್ನು ಕಂಕುಳಿನಲ್ಲಿಟ್ಟುಕೊಂಡು ನಮ್ಮ ಗಂಡಂದಿರು ನಮ್ಮನ್ನ ಸಾಕುವುದಿಲ್ಲ ಅಂತ ಹೇಳಿ ಆಚೆಗೆ ತಳ್ಳಿದ್ದಾರೆ, ನಮಗೆ ಸಹಾಯ ಮಾಡುವುದಿಲ್ಲವೇ ಎಂದು

ಕೇಳುತ್ತಾ ಇರುವಾಗ, ಇಂತಹ ಕಠಿಣ ಪ್ರಸಂಗ ಇರುವಾಗಲೂ ಜತ್ತಿಯವರು ಕಲ್ಯಾಣಕ್ಕೆ ನಡೆದುಕೊಂಡು ಹೋಗಿ, ಪ್ರೋಗ್ರಾಂ ಹಾಕಿಕೊಂಡು ಸುತ್ತಾಡಿ ಪರಿಸ್ಥಿತಿಯನ್ನು ತಿಳಿದುಕೊಂಡು ಬರುತ್ತಾ ಇದ್ದಾರೆ ಯಾರು ಎಲ್ಲಿ ಸತ್ತರೂ ಚಿಂತೆ ಇಲ್ಲ ಎಂದು ಹೇಳಿದರೆ when Rome was burning Nero was fiddling ಅಂತ ಹೇಳುತ್ತಾರಲ್ಲಾ ಆ ರೀತಿ ಆಯಿತು. ಜನರು ಅನ್ನ ಇಲ್ಲದೇ ಕೂಲಿ ಮಾಡುತ್ತಾ ಇದ್ದಾರೆ, ಒಂದು ಸಾವಿರ ಜನ ಕೂಲಿ ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾ ಇದ್ದರೂ ಕೂಡ, ಪರಿಹಾರ ಕಮಿಟಿಯ ಕಮಿಷನರು, ಮತ್ತು ಇಂಡಿಯಾ ಸರ್ಕಾರದಿಂದ ಬಂದಿದ್ದ ಯಾರ್ಡಿಯವರು ಅಷ್ಟು ಜನ ಕೆಲಸ ಮಾಡುತ್ತಿಲ್ಲ ಎಂದು ಹೇಳಬೇಕಾದರೆ ಸರ್ಕಾರದ ವತಿಯಿಂದ ಹೇಳುವಾಗ ಸತ್ಯಕ್ಕೆ ದೂರವಾದ ಅಂಕಿಸಂಖ್ಯೆಗಳನ್ನು ಹೇಳಬೇಡಿ. ಇವತ್ತು 3-4 ಸಾವಿರ ಜನ ಕೆಲಸ ಮಾಡುತ್ತಾ ಇದ್ದಾರೆ. ಈಚಲು ಗೆಡ್ಡೆ ತಿನ್ನುತ್ತಾ ಇದ್ದಾರೆ. ಎರಡು ದಿನ ತಿನ್ನಬಹುದು, ಮೂರನೆಯ ದಿನ ತಿಂದರೆ ಭೇದಿ ಆಗುತ್ತದೆ. ಕತ್ತಾಳೆ ಗೆಡ್ಡೆ ತಿನ್ನುತ್ತಾ ಇದ್ದಾರೆ, ಒಂದು ಎರಡು ದಿನ ತಿಂದರೂ ತಿನ್ನಬಹುದು. ಮೂರನೆಯ ದಿನ ತಿಂದರೆ ಉಳಿಯುವುದಿಲ್ಲ, ಅದು ಮಹಾ ಉಷ್ಣ, ಮೈ ಎಲ್ಲಾ ತೀಟೆಯಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಅದರಲ್ಲೂ ನಿಕೃಷ್ಟವಾದ ತಾಲ್ಲೂಕು ಎಂದರೆ ಸಿರಾ ತಾಲ್ಲೂಕು. ದುರದೃಷ್ಟವ, ಅಲ್ಲಿ ಒಂದು ಲಕ್ಷ ಅರವತ್ತು ಸಾವಿರ ಜನ ಜೀವನ ಮಾಡಬೇಕಾಗಿದೆ. 5 ಸಾವಿರ ರೂಪಾಯಿ ಕೊಟ್ಟಿದ್ದೀರಿ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದೀರಿ, ಹೊಳಲ್ಕೆರೆಗೆ ಒಂದು ಲಕ್ಷ ರೂಪಾಯಿ, ಕೊಟ್ಟಿದ್ದೀರಿ, ಮೊಳಕಾಲ್ಮೂರು ತಾಲ್ಲೂಕಿಗೆ ಎರಡು ಲಕ್ಷ ರೂಪಾಯಿ ಕೊಟ್ಟಿದ್ದೀರಿ. ರಾಜ್ಯದಲ್ಲಿ ಹೀಗೆ ವ್ಯತ್ಯಾಸ ಮಾಡಬೇಡಿ. ಸಿರಾದವರೂ ನಿಮ್ಮವರೇ. ಮುಖ್ಯ ಮಂತ್ರಿಗಳು ಚಿತ್ರದುರ್ಗದಿಂದ ಬರುತ್ತಾರೆ ಅಂತ ಹೇಳಿ ಅವರ ಪ್ರೀತಿ ಗಳಿಸುವುದಕ್ಕೆ ಈ ರೀತಿ ಮಾಡುವುದಾದರೆ ಇದಕ್ಕಿಂತ ದ್ರೋಹ ಮತ್ತೊಂದು ಇಲ್ಲ. ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ, ಇವತ್ತು ನಮ್ಮಲ್ಲಿ ದನಗಳಿಗೆ ಹುಲ್ಲು ಇಲ್ಲ, ಜನಗಳು ಕೆಲಸ ಮಾಡುವುದಕ್ಕೆ ಕೂಲಿ ಪಡೆಯಲಿಕ್ಕೆ ಕೆಲಸ ಇಲ್ಲ ಇವತ್ತಿನ ದಿವಸ ನಿರ್ದಿಷ್ಟವಾಗಿ ಹೇಳುತ್ತೇನೆ ನಮ್ಮ ತಾಲ್ಲೂಕಿನಲ್ಲಿ ಕೆಲಸ ಪ್ರಾರಂಭ ಮಾಡಿದರೆ ಕೊನೆಯ ಪಕ್ಷ 20 ಸಾವಿರ ಜನರನ್ನು ಕೆಲಸಕ್ಕೆ ಕರೆದುಕೊಂಡು ಬರುವುದಕ್ಕೆ ನಾನು ತಯಾರಾಗಿದ್ದೇನೆ. ಹೃದಯ ವೈಶಾಲ್ಯತೆ ಇರತಕ್ಕ ಮಾನ್ಯ ಸಚಿವರು ತುಮಕೂರು ಜಿಲ್ಲೆಯಲ್ಲಿ ನತದೃಷ್ಟ ತಾಲ್ಲೂಕಾದ ಸಿರಾ ತಾಲ್ಲೂಕು, ಪಾವಗಡ ತಾಲ್ಲೂಕಿನ ಅರ್ಧಭಾಗ, ಗುಬ್ಬಿ ತಾಲ್ಲೂಕಿನ ಹೆಚ್ಚಿನ ಭಾಗಗಳಿಗೆ ಹೆಚ್ಚಿನ ನೆರವು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಭೂ ಸುಧಾರಣೆಯನ್ನು ಹಂತ ಹಂತವಾಗಿ ತಂದಿದ್ದೀರಿ, ಇದನ್ನು ಜಾರಿಗೆ ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ 2, 7, 8, 22, 33, 42 ಈ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತೇನೆ. ರೆವಿನ್ಯೂ ಸಂಬಂಧದಲ್ಲಿ ಈಗಾಗಲೇ ನಮ್ಮ ಸ್ನೇಹಿತರು ಚರ್ಚೆ ಮಾಡಿದ್ದಾರೆ. ಇದು ಬಹಳ ಮುಖ್ಯವಾದಂತಹ ಇಲಾಖೆಯಾಗಿ ಕೆಲಸ ಮಾಡುತ್ತಾ ಬಂದಿದೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ವಗೈರೆ ಬಂದಮೇಲೆ ಬಹುಶಃ ರೆವಿನ್ಯೂ ಖಾತೆಗೆ ಕಡಮೆ ಕೆಲಸವಾಗಿರುವುದರಲ್ಲಿ ಅನುಮಾನವಿಲ್ಲ. ಆದರೂ ಇಷ್ಟು ಜನಗಳನ್ನು ಇಟ್ಟುಕೊಂಡು ಈ ಇಲಾಖೆ ನಡೆಯುತ್ತಾ ಇದೆ. ಹಿಂದೆ ನೇಮಕವಾಗಿದ್ದ ರಾಮಚಂದ್ರರಾಯರ ಸಮಿತಿ ವರದಿಯಲ್ಲಿ ಇದರಲ್ಲಿ ಸಾಕಾದಷ್ಟು ಖೋತಾ ಮಾಡಬಹುದು ಎಂದು ಅವರು ಪ್ರಸ್ತಾಪ ಮಾಡಿದ್ದರು. ಈಗಲೂ ಸಹ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡತಕ್ಕ ಕಾರ್ಯದಲ್ಲಿ ಎಷ್ಟು ಸಾಧ್ಯವಿದೆಯೋ ಅಷ್ಟು ಮಾಡಿ ಅಭಿವೃದ್ಧಿ ಆಗಬೇಕಾಗಿರತಕ್ಕ ಪಶು ಸಂಗೋಪನೆ, ವ್ಯವಸಾಯ ವಗೈರೆ ಖಾತೆಗಳಿಗೆ ಕೊಟ್ಟರೆ ದೇಶಕ್ಕೆ ಉತ್ತಮವಾದೀತು ಎಂದು ಕಾಣುತ್ತದೆ. ಹಿಂದೆ ಭಾಷಣ ಮಾಡಿದ ನಮ್ಮ ಸ್ನೇಹಿತರು 19 ಜನ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ ಎಂದು ಹೇಳುತ್ತಾ ಇದ್ದರು. ಇಷ್ಟು ಜನ ಏಕೆ ಇರಬೇಕೆಂಬುದು ಅರ್ಥವಾಗುವುದಿಲ್ಲ. ಇದುವರೆಗೂ ನಾವು ಎಷ್ಟೇ ಪ್ರಯತ್ನ ಪಡುತ್ತಾ ಇದ್ದರೂ ಸಹ ರೈತನಿಗೆ ನೇರ ಸಂಪರ್ಕ ಇಟ್ಟುಕೊಂಡಿರತಕ್ಕ ತಾಲ್ಲೂಕು ಆಫೀಸು, ಸಬ್ ಡಿವಿಜನ್ ಆಫೀಸು ಮತ್ತು ಜಿಲ್ಲಾ ಕಚೇರಿಗಳಲ್ಲಿ ಆಯಾ ಕಾಲಕ್ಕೆ ಆಯಾ ಕೆಲಸಗಳು ಮುಗಿದು ರೈತನ ಕೆಲಸಕಾರ್ಯಗಳು ಯಾವ ಪ್ರಕಾರ ಉತ್ತಮ ರೀತಿಯಲ್ಲಿ ಆಗಬೇಕೋ ಅದು ಆಗುತ್ತಿಲ್ಲ. ಅಷ್ಟೇ ಅಲ್ಲದೆ ಜಮೀನಿಗೆ ಸಂಬಂಧಪಟ್ಟ ಪಹಣಿ, ಖಾತೆ, ಪಟ್ಟೆ ಇತ್ಯಾದಿ ಪ್ರತಿಯೊಂದು ವಿಷಯದಲ್ಲೂ ಇವತ್ತು ತಾಲ್ಲೂಕು ಆಫೀಸಿನಲ್ಲಿರತಕ್ಕ ಅಧಿಕಾರಿಗಳು, ತಹಸೀಲ್ದಾರರು ಬಹಳ ನಿಧಾನ ಪ್ರವೃತ್ತಿಯನ್ನು ಅನುಸರಿಸುತ್ತಾ ಇರುವುದರಿಂದ ಕೆಲಸಗಳು ಜಾಗ್ರತೆ ಆಗುವುದಕ್ಕೆ ಇವತ್ತು ಅವಕಾಶವಾಗುತ್ತಾ ಇಲ್ಲ. ಒಂದು ವಿಷಯ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ದಿವಾನ್ ಮಾಧವರಾಯರು ನಮ್ಮ ಹಳ್ಳಿಗೆ ಒಂದು ಸಾರಿ ಬಂದಿದ್ದರು. ಆಗ ಅವರು ಅಲ್ಲಿನ ಡೆಪ್ಯೂಟಿ ಕಮಿಷನರಿಗೆ ತಾವು ಅಧಿಕಾರದಲ್ಲಿ ಶಾಶ್ವತವಾಗಿ

(ಶ್ರೀ ಕೆ. ವಿ. ಬೈರೇಗೌಡ)

ಇರುವುದಿಲ್ಲ, ನಿಮಗೆ ಇದ್ದಂತಹ ಅವಕಾಶದಲ್ಲಿ 3-4 ವರ್ಷ ಇರುತ್ತೀರಿ ಪ್ರತಿಯೊಂದು ಡಿವಿಜನ್‌ನಲ್ಲಿ ಗ್ರಾಮಾಂತರದಲ್ಲಿ ಪ್ರವಾಸ ಮಾಡುವಾಗ ಪ್ರತಿಯೊಂದು ಕಡೆಯೂ ಅಲ್ಲಿರತಕ್ಕ ವ್ಯವಹಾರ ಏನಿದೆಯೋ ಅದೆಲ್ಲವನ್ನೂ ಪೂರ್ಣವಾಗಿ ಪರಿಹಾರ ಮಾಡಿಕೊಡಿ, ಅದೇ ರೀತಿ ರೆವಿನ್ಯೂ ಅಧಿಕಾರಿಗಳೂ ಕೂಡ ಟೂರ್ ಮಾಡಿ ಜನಗಳಿಗೆ ಇರತಕ್ಕ ತೊಂದರೆಗಳನ್ನು ಸಾಧ್ಯವಾದಷ್ಟು ಜಾಗ್ರತೆ ಪರಿಹಾರ ಮಾಡಿಕೊಡಬೇಕು. ಇದೇ ಪ್ರವಾಸ ಮಾಡುವುದರ ಉದ್ದೇಶ ಎಂದು ಹೇಳಿದರು. ಹೀಗ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡತಕ್ಕ ರೀತಿಯನ್ನು ತಿಳಿಸಿದರು. ಬಹುಶಃ ಅದೇ ರೀತಿ ಇವತ್ತು ನಮ್ಮ ಅಧಿಕಾರಿಗಳು ಗ್ರಾಮಾಂತರದ ಕಡೆ ಟೂರ್ ಹೋದಾಗ 90 ಭಾಗದ ಕೆಲಸಗಳನ್ನು ಅಲ್ಲಿಯೇ ಫೈಸಲು ಮಾಡಬೇಕು. ಆದರೆ ನಮ್ಮ ದುರ್ದೈವದಿಂದ ಇವತ್ತಿನ ದಿವಸ ನಮ್ಮ ಅಧಿಕಾರಿಗಳಿಗೆ ಆ ಒಂದು ರೀತಿಯ ಮನೋಭಾವ ಹೋಗಿದೆ ಎಂದು ಕಾಣುತ್ತದೆ. ಜಮಾಬಂದಿ ಮಾಡುತ್ತಾ ಇದ್ದರು, ಎಷ್ಟು ಉತ್ತಮವಾದ ಸನ್ನಿವೇಶದಲ್ಲಿ ಆ ಕೆಲಸ ಮಾಡತಕ್ಕ ವಾತಾವರಣ ಇರುತ್ತಾ ಇತ್ತು ಎಂಬುದು ನಮಗೆ ಗೊತ್ತಿದೆ. ಒಂದು ಕರ್ತವ್ಯ ಎಂಬ ದೃಷ್ಟಿಯಿಂದ ಅದನ್ನು ಮಾಡುತ್ತಾ ಇದ್ದರು, ಜಮಾಬಂದಿ ಬಂದಕೂಡಲೇ, ಎಲ್ಲಾ ಗ್ರಾಮಗಳಿಗೂ ಒಂದು ತಿಳುವಳಿಕೆಯನ್ನು ಕೊಟ್ಟು ನ್ಯೂನತೆ ಏನಿದೆ ಅದನ್ನು ಅಲ್ಲಿಗೆ ತಂದು ಇತ್ಯರ್ಥ ಮಾಡಿಕೊಳ್ಳಬಹುದು ಎಂದು ಹೇಳುತ್ತಾ ಇದ್ದರು. ಇವತ್ತಿನ ದಿವಸ ಬಹುಶಃ ನಾಲ್ಕು ನಾಲ್ಕೂವರೆ ಗಂಟೆಗೆ ಜಮಾ ಬಂದಿಗೆ ಬಂದರೆ ಅರ್ಧಗಂಟೆಯಲ್ಲಿ ಎಲ್ಲಾ ಮುಗಿಸಿಕೊಂಡು ಹೊರಟು ಹೋಗುತ್ತಾರೆ, ಈ ರೀತಿ ಆಗಿದೆ. ನಮ್ಮ ರೈತವರ್ಗಕ್ಕೆ ಈ ಜಮಾಬಂದಿಯಿಂದ ಏನು ಅನುಕೂಲ ಕಲ್ಪನೆ ಮಾಡಿಕೊಡಬೇಕೆಂದು ಇತ್ತೋ, ಯಾವ ನಿಯಮಾವಳಿಗಳನ್ನು ಮಾಡಿದ್ದಾರೋ ಅದು ಪೂರ್ಣವಾಗಿ ಆಗುವ ಪರಿಸ್ಥಿತಿ ಇಲ್ಲ. ಹಿಂದೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಡೆಪ್ಯೂಟಿ ಕಮಿಷನರ ಮೀಟಿಂಗ್ ಕರೆದು ಈ ರೀತಿ ರೆವಿನ್ಯೂ ಖಾತೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು, ರೆವಿನ್ಯೂ ಖಾತೆಯಿಂದ ರೈತಾಪಿ ಜನರಿಗೆ ಯಾವ ವಿಧವಾದ ತೊಂದರೆಯೂ ಆಗಬಾರದು ಅಂತ ಹೇಳಿ ಅವರಿಗೆ ಮನವರಿಕೆ ಮಾಡಿಕೊಟ್ಟರು. ಅವರು ಹೇಳಿದ ರೀತಿಯಲ್ಲಿ ಕೆಲಸ ಮಾಡಿದರೆ 80 ಭಾಗದ ಕೆಲಸಕಾರ್ಯಗಳು ಇತ್ಯರ್ಥವಾಗುತ್ತದೆ. ಆದರೆ ಆ ರೀತಿ ಈ ದಿವಸ ಆಗುತ್ತಾ ಇಲ್ಲ. ಬಹುಶಃ ಒಂದು ನನಗೆ ಅನಿಸುತ್ತದೆ, ಈ ಜಿಲ್ಲಾಧಿಕಾರಿಗಳನ್ನು ಜಿಲ್ಲೆಗಳಿಗೆ ಹಾಕುವಾಗ ರೈತಾಪಿಜನರ ಕಷ್ಟಸುಖವನ್ನು ಯಾವ ರೀತಿ ಪರ್ಯಾಲೋಚನೆ ಮಾಡಬೇಕು, ಯಾವ ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ಎಂಬ ಮನೋಭಾವ ಇರತಕ್ಕ ಅಧಿಕಾರಿಗಳನ್ನು ಜಿಲ್ಲಾ ಕಚೇರಿಗಳಿಗೆ ಕಳುಹಿಸಿದರೆ ಒಳ್ಳೆಯದಾಗುತ್ತದೆ. ನಿಮ್ಮ ಐ.ಎ.ಎಸ್. ಫಸ್ಟ್‌ಕ್ಲಾಸ್ ಪಾಸ್ ಮಾಡಿರುವವರಿಗೆ ನಿಮ್ಮ ಸೆಕ್ರೆಟೇರಿಯಟ್ ಇದೆ. ರೆಕಾರ್ಡ್ ಬಿಲ್ಡ್‌ಅಪ್ ಮಾಡಿ ಕೆಲಸ ಮಾಡುವುದಕ್ಕೆ ಅವರನ್ನು ಇಲ್ಲಿ ಇಟ್ಟುಕೊಳ್ಳಿ. ಇದನ್ನು ತಾವು ಆಲೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ರೆವಿನ್ಯೂ ಬಾಬಿನಲ್ಲಿ ಜನ ಬಹಳ ನಿರೀಕ್ಷಣೆ ಮಾಡುತ್ತಾರೆ, ಅಲ್ಲಿ ಬಹಳ ಕೆಲಸ ಆಗಬೇಕಾಗಿದೆ. ಇದಕ್ಕೆ ಇರತಕ್ಕ ಆತಂಕ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ, ಇದುವರೆಗೂ ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಇದ್ದ ಪಟೇಲ್ ಶ್ಯಾನುಭೋಗರನ್ನು ಕಾರಣಾಂತರದಿಂದ ತೆಗೆದುಹಾಕಿದ್ದೇವೆ. ಪುನಃ ಅವರನ್ನು ನೇಮಕ ಮಾಡಲಿಲ್ಲ. ಇದರಿಂದಾಗಿ ತತ್ರಾಪಿ ಯಾವ ಕೆಲಸಗಳನ್ನು ಶ್ಯಾನುಭೋಗರು ಮಾಡಬೇಕೋ, ಎಂದರೆ ಲೆಕ್ಕ ಬರೆಯುವುದು, ಅದನ್ನು ಇವತ್ತು ಅವರು ಯಾರೂ ಮಾಡುತ್ತಾ ಇಲ್ಲ. ಒಂದು ವೇಳೆ ಯಾರಾದರೂ ಮಾಡುತ್ತಾ ಇದ್ದರೆ ಮನಸ್ಸು ಇಲ್ಲದೇ ಮಾಡುತ್ತಾ ಇದ್ದಾರೆ. ಸರ್ಕಾರದವರು ಕಡ್ಡಾಯವಾಗಿ ಅವರನ್ನು ಪುನರ್‌ನೇಮಕ ಮಾಡಿ ಆ ಕೆಲಸಕಾರ್ಯಗಳನ್ನು ಪೂರ್ತಿ ಮಾಡದಿದ್ದರೆ ಬಹುಶಃ ಅವರಿಂದ ರೈತಾಪಿಜನರಿಗೆ ಆಗಬೇಕಾದ ಸೌಕರ್ಯ ಅನುಕೂಲ ನಿಧಾನವಾಗಿ, ಅವರಿಗೆ ತೊಂದರೆ ಕೊಟ್ಟಹಾಗೆ ಆಗುತ್ತದೆ. ಸುಪ್ರೀಂ ಕೋರ್ಟಿನ ತೀರ್ಮಾನವೂ ಕೂಡ ಆಗಿದೆ. ಯಾವ ಕಾರಣದಿಂದ ಅವರನ್ನು ಭರ್ತಿ ಮಾಡಿಲ್ಲವೋ ತಿಳಿಯದು. ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳನ್ನು ನೇಮಕ ಮಾಡದಿದ್ದರೆ ಯಾರು ಖಾಸಗಿ ಜನರು ಚೇರ್ಮನ್‌ರಾಗಿ ಉತ್ಸಾಹದಿಂದ ಕೆಲಸ ಮಾಡುತ್ತಾ ಇದ್ದಾರೋ ಅವರಿಗೆ ನಿರುತ್ಸಾಹವಾಗುತ್ತದೆ. ಲೆಕ್ಕಪತ್ರಗಳನ್ನು ನೋಡಿಕೊಳ್ಳುವುದು ಬಹಳ ಕಷ್ಟಕ್ಕೆ ಬರುತ್ತದೆ. ಸರ್ಕಾರದವರು ಕೋಟಿಗಟ್ಟಲೆ ಸಾಲ ಕೊಡುತ್ತಾ ಇರತಕ್ಕ ಸಮಯದಲ್ಲಿ ಈ ಲೆಕ್ಕಪತ್ರಗಳ ಜವಾಬ್ದಾರಿ ಬಹಳ ಅವಶ್ಯಕವಾಗಿದೆ, ಪಹಣಿ ಬರೆಯುವುದು ಮೊದಲಾದ ಕೆಲಸಗಳನ್ನು ಅವರು ಮಾಡಬೇಕಾಗಿದೆ. ಅವರು ಲೆಕ್ಕ ಬರೆಯದಿದ್ದರೆ ನಮಗೆ ಸರಿಯಾದ ಅಂಕಿಅಂಶಗಳು ಸಿಕ್ಕದೆ ಸಾಲ ದೊರೆಯುವುದಿಲ್ಲ. ಇವತ್ತು ಕೋಟಿಗಟ್ಟಲೆ ರೂಪಾಯಿಗಳನ್ನು ದೇಶದಲ್ಲಿ ಹಂಚಬೇಕು ಅದು ರೈತನಿಗೆ ಸಿಕ್ಕಬೇಕು ಎಂದು ಹೇಳಿ ನಾವು ಯಾವ

ಒಂದು ಪ್ರಯತ್ನವನ್ನು ಮಾಡುತ್ತಾ ಇದ್ದೇವೆಯೋ ಅದು ಸಫಲವಾಗುವುದಿಲ್ಲ. ಆದ್ದರಿಂದ ಈ ತೊಂದರೆಯನ್ನು ಬೇಗ ನಿವಾರಣೆ ಮಾಡಬೇಕು, ನಿಧಾನ ಮಾಡಬಾರದು ಎಂದು ತಮ್ಮ ಮುಖೇನ ಪ್ರಾರ್ಥನೆ ಮಾಡುತ್ತೇನೆ.

5-00 P.M.

ಹಣವನ್ನು ನಾನಾ ಅಭಿವೃದ್ಧಿ ಖಾತೆಗಳಿಗೆ ಪ್ರತಿ ವರ್ಷ ಹಂಚುತ್ತಾರೆ. ಆದರೆ ಅದರ ಹಂಚಿಕೆ ಹೇಗೆ ಯಾವಾಗ ಆಗುತ್ತದೆ ಎಂಬುದನ್ನು ನೋಡಬೇಕು. ಹತ್ತಾರು ವರ್ಷಗಳಿಂದ ನೋಡುತ್ತಿರು ವಂತೆ ಪ್ರತಿ ವರ್ಷ ಮಾರ್ಚಿ ಆಖೈರಿನಲ್ಲಿ ಖರ್ಚುಮಾಡಬೇಕೆಂದು 10-15 ದಿವಸಗಳ ಅವಕಾಶ ವಿರುವಾಗ ಹಣ ಒದಗಿಸಿದರೆ ಲಕ್ಷಗಟ್ಟಲೆ ಖರ್ಚುಮಾಡಲು ಸಾಧ್ಯವೇ ! ಈ ಮನೆಯಲ್ಲಿ ಬಜೆಟ್ ಮಂಜೂರಾದಮೇಲೆ ಸೆಕ್ರೆಟೇರಿಯೆಟ್ ಖಾತೆಗಳಿಗೆ ಹಂಚಬಹುದು. ಹಾಗೆ ಜಾಗ್ರತೆ ಹಂಚದೆ 8-10 ತಿಂಗಳಾದಮೇಲೆ ಮಾರ್ಚಿ ತಿಂಗಳಲ್ಲಿ ವರ್ಷಾಖೈರಿನೊಳಗಾಗಿ ಖರ್ಚುಮಾಡಬೇಕೆಂದು ಹಣ ಕೊಟ್ಟರೆ ಹೇಗೆ ಅದನ್ನು ಖರ್ಚುಮಾಡಲು ಸಾಧ್ಯ? ಇಂಥ ಅವ್ಯವಸ್ಥೆ ಹೋಗಬೇಕು. ವರ್ಷ ಮುಗಿಯಲು ಇನ್ನೂ 4-5 ತಿಂಗಳಿರುವಾಗಲಾದರೂ ಕೊಡಲು ಪ್ರಯತ್ನಮಾಡಬೇಕು. ಇಲ್ಲದಿದ್ದರೆ ಅಧಿಕಾರಿಗಳು ರಿಕಾರ್ಡ್ ಬಿಲ್ಡಪ್ ಮಾಡಿ ಬೇಗ ಕೆಲಸ ಮುಗಿಸುವುದು ಕಷ್ಟವಾಗುತ್ತದೆ. ಹೀಗಾಗಿ ವರ್ಷಾಖೈರಿನಲ್ಲಿ ಹಣ ಕೊಟ್ಟರೆ ಲ್ಯಾಪ್ಸ್‌ಮಾಡಿ ಮುಂದಿನ ವರ್ಷಕ್ಕೆ ಹಾಕುತ್ತಾರೆ. ಹತ್ತಾರು ವರ್ಷಗಳಿಂದ ಇದೊಂದು ಜಾಡ್ಯವಾಗಿದೆ. ರೈತರಿಗೆ ಹಣ ಸಿಕ್ಕಿ ಸರಿಯಾಗಿ ಸಹಾಯ ವಾಗಬೇಕಾದರೆ ಬಜೆಟ್ ಅಧಿವೇಶನ ಮುಗಿದ ಕೂಡಲೆ ಬೇಗ ಆರೇಳು ತಿಂಗಳಲ್ಲಿ ಹಣ ಒದಗಿಸಿ ಖರ್ಚುಮಾಡುವುದಕ್ಕೆ ಅವಕಾಶ ಕೊಡಬೇಕು.

ಕೆಲವರು ಅಕ್ವಿಜಿಷನ್ ವಿಚಾರದಲ್ಲಿ ಪ್ರಸ್ತಾಪಮಾಡಿದ್ದಾರೆ. ಬೇರೆ ಕಡೆ ಹೇಗಿದೆ ಎಂಬುದು ನನಗೆ ಗೊತ್ತಿಲ್ಲ, ಬೆಂಗಳೂರಿನಲ್ಲಿ ಮತ್ತು ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಸಹಸ್ರಾರು ಎಕರೆ ಜಮೀನು ಎಲ್ಲಾ ಬಾಬುಗಳಿಗೂ ಅಕ್ವೈರ್ ಮಾಡಿಕೊಂಡಿದ್ದಾರೆ. ಕೈಗಾರಿಕೆ ಗಳಿಗೆ, ನಿವೇಶನ ಮುಂತಾದುವುಗಳಿಗೆ ಹೀಗೆ ಸ್ವಾಧೀನಪಡಿಸಿಕೊಂಡಿದ್ದಾರೆ. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಬೆಂಗಳೂರು ನಗರದಲ್ಲಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿರುವುದರಿಂದ ವ್ಯವಸಾಯಕ್ಕೆ ಉತ್ತಮವಾಗಿದ್ದ ಒಳ್ಳೆಯ ಭೂಮಿಯೆಲ್ಲಾ ಕೈಬಿಟ್ಟುಹೋಗಿದೆ. ಆದುದರಿಂದ ಮುಂದೆ ಬೆಂಗಳೂರು ನಗರದ ಸುತ್ತಮುತ್ತ ಅಕ್ವಿಜಿಷನ್ ಮಾಡುವುದನ್ನು ತಡೆಗಟ್ಟಬೇಕಾದ್ದು ಅವಶ್ಯಕವಾಗಿದೆ. ಈ ಬಗ್ಗೆ ಆಶ್ವಾಸನೆ ಕೊಡಬೇಕು.

ಬೆಂಗಳೂರು ನಗರದ ಸರ್ವೆ ಕಾರ್ಯ ಬಹಳ ವರ್ಷಗಳಿಂದ ಆಗುವುದರಲ್ಲೇ ಇದೆ, ಹಿಂದೆ ಕಡಿದಾಳ್ ಮಂಜಪ್ಪನವರು ಇದಕ್ಕೆ ಮಾನ್ಯತೆ ಕೊಟ್ಟಿದ್ದರು, ಇದಕ್ಕೆ ಹೆಚ್ಚು ಸಿಬ್ಬಂದಿ ಸಹ ನೇಮಕ ವಾಗಿದೆ. ಆದರೆ ಹತ್ತಾರು ವರ್ಷಗಳ ಹಿಂದೆಯೇ ಆಗಬೇಕಾಗಿದ್ದ ಕೆಲಸ ಇನ್ನೂ ಆಗಿಲ್ಲ. ಈಗ ಲಾದರೂ ತ್ವರಿತಗೊಳಿಸಿ ಈ ಕಾರ್ಯ ಮಾಡಬೇಕು. ಹಾಗೆ ಮಾಡದೆ ನಿಧಾನ ಮಾಡಿದಷ್ಟೂ ಸಿಬ್ಬಂದಿ ಸಂಬಳಕ್ಕಾಗಿ ಹೆಚ್ಚು ಖರ್ಚಾಗುತ್ತದೆ. ಎಷ್ಟೋ ಕಡೆ ಕೆಲಸ ಪ್ರಾರಂಭಿಸಲು ಆಗಬೇಕಾದ ಫಾರ್ಮಾಲಿಟೀಸ್ ಆಗದೆ ಕೆಲಸ ತೆಗೆದುಕೊಳ್ಳದೆ ಬಹಳ ಕಾಲದವರೆಗೆ ಸಿಬ್ಬಂದಿ ಸಂಬಳ ಮಾತ್ರ ಪಡೆಯುತ್ತಿರುತ್ತಾರೆ. ಮೇಲಿನ ಅಧಿಕಾರಿಗಳು ಸಿಬ್ಬಂದಿಗೆ ಸರಿಯಾದ ಕೆಲಸ ಕೊಡಬೇಕು. ಹಾಗೆ ಮಾಡದಿದ್ದರೆ ಅಭಾವವಿರುವಾಗ ವ್ಯಥಾ ಹಣ ಖರ್ಚು ಮಾಡಬೇಕಾಗುತ್ತದೆ. ಈ ರೀತಿ ಮಾಡುವುದು ಸರಿಯಲ್ಲ, ವಹಿಸಿರುವ ಕೆಲಸ ಬೇಗ ಮಾಡಿಸಲು ಪ್ರಯತ್ನ ಮಾಡಬೇಕು.

ರೆವಿನ್ಯೂ ಇಲಾಖೆಯಲ್ಲಿ ಕೆಲವು ಫಾರಂಗಳು ಬೇಕಾಗುತ್ತವೆ. ಅವು ಒಂದೊಂದು ಸಲ ಸಿಕ್ಕದೆ ತೊಂದರೆಯಾಗುತ್ತಿದೆ. ಅವನ್ನು ಒದಗಿಸಬೇಕು. ರೈತರಿಗೆ ಪಟ್ಟೆಗಳು ಅವಶ್ಯಕವಾಗಿ ಬೇಕು, ಅವು ಬೇಗ ಸಿಕ್ಕುವುದಿಲ್ಲ. ಬೇಕಾದ ಫಾರಂಗಳು ಎಷ್ಟೋ ಸಲ ತಾಲ್ಲೂಕು ಆಫೀಸುಗಳಲ್ಲಿ ದೊರೆಯದೆ ಅದಕ್ಕಾಗಿ ಒಂದೆರಡು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ಅವಕಾಶವಿಲ್ಲದಂತೆ ಬೇಕಾದ ಫಾರಂಗಳನ್ನು ಬೇಗ ಒದಗಿಸಿ ತೊಂದರೆ ತಪ್ಪಿಸಬೇಕು.

ವೆಟರ್ನರಿ ಖಾತೆ ಮುಖ್ಯವಾದುದು, ಇದಕ್ಕೆಷ್ಟು ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಅದನ್ನು ಕೊಡಲಾಗಿದೆ. ಇದರ ಅಂಗವಾಗಿ, ಕಾಲೇಜು, ಡೈರಿ ಪ್ರಾಜೆಕ್ಟು ಮುಂತಾದುವನ್ನು ಮಾಡಿ ದ್ದಾರೆ. ಈ ದಿವಸ ಕಾಲೇಜು ಮುಖ್ಯವಾಗಿ ಬೇಕಾಗಿತ್ತು. ಅಮೃತಮಹಲ್ ದನಗಳು ಇಡೀ ದಕ್ಷಿಣ ದೇಶದಲ್ಲಿ ಹೆಸರುವಾಸಿಯಾಗಿದೆ. ಆದರೆ ಆ ರಾಸುಗಳು ಕಡಮೆಯಾಗುತ್ತಿವೆ. ಇದಕ್ಕೆ ಸರಕಾರ ಎಷ್ಟೋ ಪ್ರೋತ್ಸಾಹ ಕೊಟ್ಟರೂ ಕೂಡ ಅದರ ತಳಿಗಳು ಬರಬರುತ್ತಾ ಕಡಮೆಯಾಗು ತ್ತಿವೆ. ಉತ್ತಮವಾದ ಹಾಲು ದೊರೆಯಬೇಕಾದರೆ ತಳಿ ಅಭಿವೃದ್ಧಿ ಮಾಡುವುದಕ್ಕೆ ಹೆಚ್ಚು ಗಮನ ಕೊಡಬೇಕು. ಈಗ ಜರ್ಸಿ ಮುಂತಾದ ತಳಿ ಅಭಿವೃದ್ಧಿ ಮಾಡಲಾಗುತ್ತಿದೆ, ಹಿಂದೆ ದನಗಳಿಗೆ ರೋಗ

(ಶ್ರೀ ಕೆ. ವಿ. ಬೈರೇಗೌಡ)

ಬಂದಾಗ ಅನೇಕ ರಾಸುಗಳು ಸತ್ತವು. ಅವುಗಳಲ್ಲಿ ಒಂದೊಂದು ಒಂದು ಸಾವಿರ ರೂಪಾಯಿ ಬೆಲೆ ಬಾಳುತ್ತಿದ್ದವು. ಆ ರೋಗವನ್ನು ತಡೆಗಟ್ಟಿದ್ದರೆ ರೈತರಿಗೆ ಲಕ್ಷಾಂತರ ರೂಪಾಯಿ ಮಿಗುತ್ತಿತ್ತು. ಮುಂದಾದರೂ ಸರಿಯಾದ ಗಮನ ಕೊಡಬೇಕು. ಎಮ್ಮೆಗಳ ಬಗ್ಗೆ ಇಲಾಖೆಯವರು ಮುರಜಾತಿಯವು, ಉತ್ತರ ಇಂಡಿಯಾ, ಪಂಜಾಬು ಮುಂತಾದ ಕಡೆಗಳಲ್ಲಿರುವ ತಳಿ ತರಬೇಕೆಂದಿದ್ದಾರೆ. ಬೆಂಗಳೂರಿನ ಸುತ್ತಮುತ್ತ ಈ ರಾಸುಗಳನ್ನು ಸಾಕಿ ರೈತರು ಚೇತರಿಸಿಕೊಳ್ಳುವುದು ಕಷ್ಟವಾಗಿದೆ. ಇದಕ್ಕೆ ಬದಲಾಗಿ ಬಾಗಲಕೋಟೆ ಪ್ರಾಂತದಲ್ಲಿ ದೊರೆಯುವ ಮಧ್ಯವರ್ತಿ ಎಮ್ಮೆ ತಳಿ ಉತ್ತಮವಾದುದೆಂದು ತೋರುತ್ತದೆ. ಅದನ್ನು ಸಾಕುವುದಕ್ಕೆ ನಮ್ಮ ರೈತರಿಗೆ ಕಷ್ಟವಾಗುವುದಿಲ್ಲ. ಹಾಲಿನ ವಿಚಾರ ನೋಡಿದರೂ ಸಹಾ ಮುರಾ ಜಾತಿಗಿಂತ ಬಾಗಲಕೋಟೆ ಕಡೆ ದೊರೆಯುವ ಮಧ್ಯವರ್ತಿ ಎಮ್ಮೆಗಳು ಹೆಚ್ಚು ಹಾಲು ಕೊಡುತ್ತವೆ. ಆ ತಳಿಯನ್ನು ಉತ್ತಮಗೊಳಿಸಿ ಹಾಲಿನ ಕೊರತೆಯನ್ನು ಸರಿದೂಗಿಸಬಹುದು.

ಹೆಸರಘಟ್ಟ ಕಾಂಪೋಸಿಟ್ ಲೈವ್‌ಸ್ಟಾಕ್ ಫಾರಂ ಏನಿದೆ ಅದನ್ನು ಇನ್ನೂ ಚೆನ್ನಾಗಿ ಬೆಳೆಸಲು ಸಾಧ್ಯವಿದೆ. ಈ ದಿವಸ ಒಂದು ಸಾವಿರ ಪೌಲ್ಟ್ರಿ ಫಾರಂ ಹೆಚ್ಚು ಮಾಡಿದ್ದಾರೆ. ಆದರೆ ಮೊಟ್ಟೆ ಮಾರಾಟಕ್ಕೆ ತೊಂದರೆ ಇದೆ. ಅದಕ್ಕೆ ಮುಖ್ಯವಾಗಿ ವ್ಯವಸ್ಥೆ ಮಾಡಬೇಕು. ಈಗ ಮಾಡಿರುವುದು ಸಾಲದು. ಮಿಲಿಟರಿಗೆ ಮತ್ತು ಇತರ ಕಡೆಗಳಿಗೆ ಒಳ್ಳೆಯ ಮೊಟ್ಟೆ ಕಳಿಸಲು ಏರ್ಪಾಡು ಮಾಡಿ ವಿದ್ಯಾವಂತ ತರುಣರಿಗೆ ನಿರುತ್ಸಾಹವಾಗದಂತೆ ನೋಡಿಕೊಳ್ಳಬೇಕು. ಈಗ ಪೌಲ್ಟ್ರಿ ಕೋ ಆಪರೇಟೀವ್ ಅಸೋಸಿಯೇಷನ್ ಇದೆ, ಅಲ್ಲಿಗೆ ಆಹಾರ ಸಾಲದೆ ತೊಂದರೆಯಾಗಿರುವುದರಿಂದ ಬೇರೆ ಕಡೆಗಳಿಂದ ಆಹಾರ ಒದಗಿಸಿ ಅದು ಕುಸಿಯದ ಹಾಗೆ ನೋಡಿಕೊಳ್ಳಬೇಕು.

ಕಾಲೇಜಿನ ವಿದ್ಯಾರ್ಥಿಗಳಿಗೆ ಸಂಬಳ ಸಾರಿಗೆ ಹೆಚ್ಚಿಸಿರುವುದಾಗಿ ಹೇಳಿದರು. ಮೆಡಿಕಲ್, ಅಗ್ರಿಕಲ್ಚರ್ ಮತ್ತು ವೆಟೆರನರಿ ಗ್ರಾಜುಯೇಟುಗಳಿಗೆ ಒಂದೇ ರೀತಿಯಲ್ಲಿ ಸಂಬಳ ಕೊಟ್ಟು ಅವರಿಗೆ ನಿರುತ್ಸಾಹವಾಗದಂತೆ ನೋಡಿಕೊಳ್ಳಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಲ್ಯಾಂಡ್ ಅಕ್ವಿಜೆಷನ್ ವಿಚಾರವಾಗಿ ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಬೈರೇಗೌಡರು ಸವಿಸ್ತಾರವಾಗಿ ಹೇಳಿದ್ದಾರೆ. ಒಂದು ವಿಷಯ ಮಾತ್ರ ನಾನು ಹೇಳುತ್ತೇನೆ. ಲ್ಯಾಂಡ್ ಅಕ್ವಿಜಿಷನ್ ವಿಚಾರದಲ್ಲಿ ನಮ್ಮಲ್ಲಿ 10—15 ವರ್ಷಗಳಿಂದ ಜಮೀನು ಕಳೆದುಕೊಂಡು ಪರಿಹಾರವಿಲ್ಲದೆ ಅನೇಕ ರೈತರಿಗೆ ತೊಂದರೆಯಾಗಿದೆ. ಲ್ಯಾಂಡ್ ಅಕ್ವಿಜಿಷನ್ ಕೆಲಸ ತುಂಬಾ ನಿಧಾನದಿಂದ ಆಗುತ್ತಿದೆ. ಅಸಿಸ್ಟೆಂಟ್ ಕಮಿಷನರ್ ಅವರು ಇನ್‌ಕ್ವಾಯರಿ ಮಾಡಿದ ಮೇಲೆ ಡೀ.ಸೀ. ಅವರು ನೋಟಿಫಿಕೇಷನ್ ಮಾಡಬೇಕಾಗಿರುವುದರಿಂದ ಕಾಲ ವಿಳಂಬವಾಗುತ್ತದೆ. ರೈತರು ಜಮೀನು ಕಳೆದುಕೊಂಡು ಪರಿಹಾರವಿಲ್ಲದೆ ಇದ್ದರೂ ಕೂಡ ಇನ್ನೂ ಕಂದಾಯ ಕೊಡುತ್ತಿದ್ದಾರೆ. ಆದುದರಿಂದ ಈ ಕೆಲಸ ಆದಷ್ಟು ಬೇಗನೆ ಮಾಡಿ ಅವರ ತೊಂದರೆ ತಪ್ಪಿಸುವುದಕ್ಕೆ ಪೂರ್ವಭಾವಿಯಾಗಿ ಶೇಕಡ 75ರಷ್ಟು ಹಣ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಸೂಚಿಸುತ್ತೇನೆ. ನೋಟಿಫಿಕೇಷನ್ ಹೊರಡಿಸುವ ಹೊಸ ಪದ್ಧತಿಯನ್ನು ತೆಗೆದುಹಾಕಿ ಮೊದಲು ಹೇಗೆ ಇತ್ತೋ ಹಾಗೆ ಮಾಡಬೇಕು. ದಯವಿಟ್ಟು ಇದನ್ನು ಪರ್ಯಾಲೋಚಿಸಿ ಮೊದಲಿನಂತೆ ಮಾಡುವುದು ಅಗತ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನು ಜಮಾಬಂದಿ ವಿಚಾರ. ಇದು ಬಹಳ ತಡವಾಗುತ್ತಿದೆ. ಇದುವರೆಗೆ ತಾತನ ಹೆಸರಿನಲ್ಲಿರುವುದು ಮಕ್ಕಳು ಮೊಮ್ಮಕ್ಕಳ ಹೆಸರಿಗೆ ಪಟ್ಟಾ ಆಗಿಲ್ಲ. ಕಾಗದ ಪತ್ರಗಳು ಹೇಗೆ ಇದ್ದವೋ ಹಾಗೆಯೇ ಇವೆ. ಇದು ವಿಳಂಬವಾಗುವುದರಿಂದ ಅನೇಕರಿಗೆ ತೊಂದರೆಯಾಗಿದೆ. ಒಂದು ಬಾವಿ ತೆಗೆಯಲು ಸಾಲ ಪಡೆಯಲು ಬರುವುದಿಲ್ಲ. ಅವರವರ ಹೆಸರಿನಲ್ಲಿ ಪಟ್ಟಾ ಇದ್ದರೆ ರೈತನಿಗೆ ಅನುಕೂಲವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಸರಕಾರ ಗಮನಕೊಡಬೇಕು ಎಂದು ಹೇಳುತ್ತೇನೆ.

ಎರಡು ತಿಂಗಳ ಹಿಂದೆ ರಾಯಚೂರು ಜಿಲ್ಲೆಯಲ್ಲಿ ಆಲಿಕಲ್ಲು ಮಳೆಯಾಗಿ ರೈತರಿಗೆ ಬಹಳ ನಷ್ಟ ಉಂಟಾಗಿದೆ. ರಾಯಚೂರು ಮತ್ತು ಮಾನವಿ ತಾಲ್ಲೂಕುಗಳಲ್ಲಿ ಒಂದೂವರೆ ಲಕ್ಷ ರೂಪಾಯಿ ಹಾನಿಯಾಗಿದೆ ಎಂದು ಅಂದಾಜು ಮಾಡಲಾಗಿದೆ. ಇದು ವೃತ್ತಪತ್ರಿಕೆಯಲ್ಲಿ ವರದಿಯಾಗಿದೆ. ಈ ಆಲಿಕಲ್ಲು ಮಳೆಯಿಂದ ಜೋಳದ ತೆನೆಗಳಲ್ಲಿಯ ಕಾಳು ಉದುರಿ ಬಹಳ ನಷ್ಟ ಉಂಟಾಗಿದೆ. ಹತ್ತಿ ಬೆಳೆಯಂತೂ ಸಂಪೂರ್ಣವಾಗಿ ನಾಶವಾಗಿದೆ. ರೈತರು ಬಹಳ ಕಷ್ಟದಲ್ಲಿದ್ದಾರೆ. ಜಕ್ಕಲದಿನ್ನಿ ಗ್ರಾಮದಲ್ಲಿ ಹೆಚ್ಚು ಹಾನಿಯಾಗಿದೆ. ಇದನ್ನು ಸರಕಾರದ ಗಮನಕ್ಕೆ ನಾನು ತಂದಿದ್ದೇನೆ. ಈಗ

ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಈ ಪ್ರದೇಶದಲ್ಲಿಯ ರೈತರಿಗೆ ಕಂದಾಯ ಮಾಫೀ ಮಾಡುವುದಕ್ಕೆ ರೆಮಿಶನ್ ಕೊಡುವುದಕ್ಕೆ ನಿರ್ಣಯ ಮಾಡಬೇಕು. ತಕ್ಕಾವಿ ಸಾಲ ತೆಗೆದುಕೊಂಡ ರೈತರಿಂದ ಹಣ ವಸೂಲ್ಮಾಡಬಾರದು. ಇದಲ್ಲದೆ ಈ ವರ್ಷ ಅವರಿಂದ ಲೆವಿ ತೆಗೆದುಕೊಳ್ಳಬಾರದು. ಹೆಚ್ಚು ತಗಾವಿ ಸಾಲ ರೈತರಿಗೆ ಕೊಡುವ ಅನುಕೂಲತೆ ಮಾಡಿಕೊಡಬೇಕು. ಇದಲ್ಲದೆ ಬಡ ಜನರಿಗೆ 200-300 ರೂಪಾಯಿ ರಿಲೀಫ್ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಇನ್ನು ರೆವಿನ್ಯೂ ಇಲಾಖೆಯಲ್ಲಿ ತಹಶೀಲದಾರರ ಕಚೇರಿಯಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ, ಇವತ್ತಿನ ದಿವಸ 1955 ನೇ ಇಸವಿಯಿಂದ 1965 ರವರೆಗೆ ಅಂದರೆ ಹತ್ತು ವರ್ಷದ ಕಂದಾಯ ಕೊಡಬೇಕೆಂದು ರೈತರಿಗೆ ನೋಟೀಸ್ ಕೊಟ್ಟಿದ್ದಾರೆ. ಹತ್ತು ವರ್ಷದ ಕಂದಾಯ ಒಂದೇ ಸಲ ಕೊಡುವುದಕ್ಕೆ ಸಾಧ್ಯವೇ? ಇದನ್ನು ವಿಚಾರ ಮಾಡಬೇಕು. ಇದಲ್ಲದೆ 1955 ನೇ ಇಸವಿಯಿಂದ 1960 ನೇ ಇಸವಿಯವರೆಗೆ ಅಲ್ಲಿ ನೀರು ಬಂದಿರಲಿಲ್ಲ. ಇದು ಬರಗಾಲ ಪೀಡಿತ ಪ್ರದೇಶ ಎಂದು 1955 ರಿಂದ 1959 ವರೆಗೆ ಲ್ಯಾಂಡ್ ರೆವಿನ್ಯೂ ಸಸ್ಪೆನ್‌ಷನ್ ಮಾಡಿತ್ತು. ಒಂದೇ ಸಮನೆ 3 ವರ್ಷ ಕಂದಾಯ ಸಸ್ಪೆನ್‌ಷನ್ ಮಾಡುತ್ತಾ ಬಂದಿದ್ದರೆ ಅದಕ್ಕೆ ರೆಮಿಷನ್ ಕೊಡ ಬೇಕಾದುದು ಸರಕಾರದ ಕರ್ತವ್ಯ. ಈ ರೀತಿ ಅಲ್ಲಿ ಪರಿಸ್ಥಿತಿ ಇದ್ದರೂ ಕೂಡ ಒಂದೇ ಸಲ ಹತ್ತು ವರ್ಷದ ಕಂದಾಯ ಕೊಡಬೇಕು ಎಂದು ಹೇಳುವುದು ನ್ಯಾಯವಲ್ಲ. ಯಾವ ರೈತನಿಗೂ ಕೊಡುವುದು ಸಾಧ್ಯವಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತೇನೆ ಮತ್ತು ಇದನ್ನು ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಸೋಜಿಗದ ಸಂಗತಿ ಅಂದರೆ, ಕೆಲವು ರೈತರು ಕಂದಾಯ ಕೊಟ್ಟು ರಸೀದಿ ಪಡೆದಿದ್ದರೂ ಕೂಡ ಅಂಥ ರೈತರು ಕಂದಾಯ ಕೊಡಬೇಕೆಂದು ಅವರಿಗೆ ನೋಟೀಸ್ ಮೂಲಕ ನೋಟೀಸ್ ಜಾರಿ ಮಾಡಿದ್ದಾರೆ. ನಿರ್ದಿಷ್ಟ ನಿದರ್ಶನ ಬೇಕಾದರೆ ಕೊಡಬಹುದು. 1963-64 ಮತ್ತು 1964-65 ರಲ್ಲಿ ಕಂದಾಯ ಕೊಟ್ಟ ರಸೀದಿ ಇದ್ದಾಗ್ಯೂ ಬಾಕಿ ಕೊಡಬೇಕು ಎಂದು ನೋಟೀಸ್ ಜಾರಿ ಮಾಡಿದ ಸಂದರ್ಭಗಳು ಇವೆ. ಈ ರೀತಿ ಕೆಲಸ ಮಾಡುವ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಇದು ಮರ್ಯಾದೆಯ ಪ್ರಶ್ನೆ. ಕಂದಾಯ ಕೊಟ್ಟಂಥವರು ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ. ಕಂದಾಯ ಜಮಾ ಯಾಕೆ ಆಗಿಲ್ಲ ಎಂಬುದನ್ನು ಪರಿಶೀಲಿಸಬೇಕು. ಇಂಥ ಮನೋಭಾವ ಇರತಕ್ಕ ಅಧಿಕಾರಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಯಾಕೆಂದರೆ, ಇದರಿಂದ ರೈತಾಪಿ ಜನರಿಗೆ ಬಹಳ ತೊಂದರೆಯಾಗಿದೆ. ಶ್ಯಾನುಭೋಗರು ಬರೆದ ಲೆಕ್ಕ, ರೆವೆನ್ಯೂ ಇನ್‌ಸ್ಪೆಕ್ಟರ್ ಬರೆಯುವ ಲೆಕ್ಕ ತಹಶೀಲದಾರರ ಲೆಕ್ಕ ಇವು ಒಂದಕ್ಕೊಂದು ಸಂಬಂಧವಿಲ್ಲ. ನೀರಾವರಿ ಬಂದ ಮೇಲೆ ಕಂದಾಯದ ಮೇಲೆ ಸರಚಾರ್ಜ್ ಹಾಕುತ್ತಾರೆ. ಲ್ಯಾಂಡ್ ರೆವೆನ್ಯೂ ಮತ್ತು ವಾಟರ್‌ರೇಟ್ ಎರಡೂ ಕೂಡಿಸಿ ಅದರ ಮೇಲೆ ಸರಚಾರ್ಜ್ ಹಾಕಿ ವಸೂಲ್ಮಾಡುವುದು ಇದು ಯಾವ ಊರಿನಿಂದ ಬಂದ ಪದ್ಧತಿ? ಈ ರೀತಿ ಮಾಡಿರುವುದು ಸರಿಯಲ್ಲ. ಏಕರೂಪವಾದ ಪದ್ಧತಿಯಿಂದ ವಸೂಲ್ಮಾಡಬೇಕು. ಈ ವಿಚಾರವಲ್ಲಿ ಆಫೀಸರರು ತಪ್ಪು ಮಾಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ.

ಇನ್ನು ಪಶು ಸಂಗೋಪನೆ ಬಗ್ಗೆ ಹೇಳುವುದಾದರೆ, ರೂರಲ್ ವೆಟರಿನರಿ ಡಿಸ್ಪೆನ್ಸರೀಸ್ ನಾಲ್ಕಾರು ಕಡೆ ಪ್ರಾರಂಭ ಮಾಡಿದ್ದಾರೆ. ಆದರೆ ಅಲ್ಲಿ ಔಷಧಗಳ ಕೊರತೆ ಇದೆ. ಸಿಬ್ಬಂದಿ ಕೊರತೆಯಂತೂ ತುಂಬಾ ಇದೆ. ಶಿರವಾರ, ಕವತಾಳ, ಗೆಜ್ಜಲಗಟ್ಟಾ ಈ ಸ್ಥಳಗಳಲ್ಲಿ ಸ್ಟಾಕ್‌ಮೆನ್ ಇದ್ದರೂ ಡಾಕ್ಟರ್ ಇಲ್ಲ. ಇದೊಂದು ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಿರುವುದರಿಂದ ಕೊನೆಯ ಪಕ್ಷ ಆಯಾಯ ಹೋಬಳಿ ಹೆಡ್ ಕ್ವಾರ್ಟರ್ಸಿನಲ್ಲಿ ಒಬ್ಬ ಡಾಕ್ಟರ್ ಇಡಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಸಾಕಷ್ಟು ಔಷಧಿ ಸಂಗ್ರಹ ಇರುವ ವ್ಯವಸ್ಥೆ ಮಾಡಬೇಕು ಎಂದು ಸಹ ಹೇಳಬೇಕಾಗಿದೆ.

ಇನ್ನು 'ಆರ್ಟಿಫೀಶಿಯಲ್ ಇನ್‌ಸೆಮಿನೇಶನ್ ಸೆಂಟರ್ಸ್' ತೆರೆಯಬೇಕು ಎಂಬ ಒಂದು ಯೋಜನೆ ಇದೆ. ಇದರಿಂದ ದನಗಳ ಸಂಪತ್ತು ಹೆಚ್ಚು ಹೆಚ್ಚು ಬೆಳೆಸಲು ತುಂಬಾ ಅನುಕೂಲ ನಮ್ಮ ಜಿಲ್ಲೆಯಲ್ಲಿ ಇದೆ. ವಿದ್ಯುತ್ ಶಕ್ತಿ ಪೂರೈಕೆ ಇದೆ. ತುಂಗಭದ್ರಾ ನದಿಯಿಂದ ಐದೂವರೆ ಲಕ್ಷ ಎಕರೆ ಜಮೀನು ನೀರಾವರಿಯಾಗುತ್ತದೆ. ಹುಲ್ಲು ಬೆಳೆಸುವುದಕ್ಕೆ ಅನುಕೂಲವಿದೆ. ಹೈಬ್ರಿಡ್ ಹುಲ್ಲು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ದನಗಳನ್ನು ಬೆಳೆಸುವುದು ಎಷ್ಟು ಮುಖ್ಯವೋ ಅವುಗಳಿಗೆ ಆಹಾರವಾದ ಒಳ್ಳೆಯ ಜಾತಿಯ ಹುಲ್ಲು ಬೆಳೆಸುವುದು ಸಹ ಅಷ್ಟೇ ಮುಖ್ಯವಾದುದು. ಆದುದರಿಂದ ಹೈ ಬ್ರಿಡ್ ಹುಲ್ಲು ಗಡ್ಡೆಗಳನ್ನು ಸುಲಭ ದರದಲ್ಲಿ ಸಾಧ್ಯವಾದರೆ ಉಚಿತವಾಗಿ ಕೊಟ್ಟು ಹುಲ್ಲು ಬೆಳೆಸುವ ಕಾರ್ಯಕ್ರಮವನ್ನು ಯೋಜನೆ

(ಶ್ರೀಮತಿ ಬಸವರಾಜೇಶ್ವರಿ)

ಯಲ್ಲಿ ಅಳವಡಿಸಿ ಕೊಳ್ಳಬೇಕೆಂದು ಹೇಳುತ್ತೇನೆ. ಇದು ಬಹು ಜನ ರೈತರಿಗೆ ವಿಷಯ ಗೊತ್ತಿಲ್ಲ. ಈ ವಿಷಯ ಕೆಲವೇ ಜನಕ್ಕೆ ಮಾತ್ರ ಗೊತ್ತಿದೆ. ಆದರೆ ಅವರು ಬೇರೆ ಜನರಿಗೆ ಇದುವರೆಗೆ ತಿಳಿಸಿಲ್ಲ. ಈ ಸೈ ಬ್ರಿಡ್ ಜೋಳದಲ್ಲಿ ತುಂಬ ರಸವಿದ್ದು, ದನಗಳಿಗೆ ಅತಿ ಅಮುಖ್ಯವಾದ ಮೇವಾಗಿರುತ್ತದೆಯೆಂದು ಹೇಳುತ್ತಾರೆ. ಹಸಿರು ಎಲ್ಲಿ ಹೆಚ್ಚು ಹೆಚ್ಚು ಇರುತ್ತದೋ ಅಲ್ಲೆಲ್ಲಾ ಸ್ಟೋರೇಜ್ ಮಾಡುವುದಕ್ಕೆ ತುಂಬಾ ಅನುಕೂಲವಾಗುತ್ತದೆ ಎಂದು ಕೇಳಿದ್ದೇನೆ. ಈ ರೀತಿ ಮಾಡುವ ಪದ್ಧತಿ ಬಹಳ ಜನರಿಗೆ ಗೊತ್ತಿಲ್ಲ. ಇದನ್ನು ತಾವು ಎಲ್ಲಾ ರೈತರಿಗೂ ತಿಳಿಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಕೊನೆಯದಾಗಿ, ಪೌಲ್ಟ್ರಿ ವಿಚಾರದಲ್ಲಿ 'ಡೀಪ್ ಲೀಟರ್ ಸಿಸ್ಟಮ್ ಇನ್‌ಟ್ರಡ್ಯೂಸ್' ಮಾಡಿದಮೇಲೆ ರೈತಾಪಿ ಜನರು ಹೆಚ್ಚಾಗಿ ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ. ಇದಕ್ಕಾ 200—300 ರೂಪಾಯಿಗಳವರೆಗೆ ಸಾಲ ಕೊಡುತ್ತಿದ್ದೀರಿ. ತಾವು ಒಂದು ಪ್ರೋಗ್ರಾಮ್ ಹಾಕಿಕೊಂಡು ಒಬ್ಬರಿಗೆ ಒಂದು ಸಾವಿರದವರೆಗೆ ಸಾಲ ಕೊಡುತ್ತೀರೆಂದು ಗೊತ್ತಾಗಿದೆ. ಈ ಪ್ರೋಗ್ರಾಮ್ ಇಡೀ ದೇಶಕ್ಕೆ ಅನ್ವಯಿಸುವಂತೆ ಮಾಡಬೇಕು. ಆಗ ಮಾತ್ರ ಕೇವಲ ಸಣ್ಣ ರೈತರು ಸಹ ಪೌಲ್ಟ್ರಿ ಅಭಿವೃದ್ಧಿ ಮಾಡುವುದಕ್ಕೆ ತುಂಬ ಅನುಕೂಲವಾಗುತ್ತದೆ. ಅದರ ಗೊಬ್ಬರ ಸಹ ಅತೀ ಮುಖ್ಯವಾದ ಉತ್ತಮವಾದ ಗೊಬ್ಬರವೆಂದು ತಿಳಿದುಬಂದಿದೆ. ಆದ್ದರಿಂದ ಈ ಪೌಲ್ಟ್ರಿ ಅಭಿವೃದ್ಧಿ ಇಡೀ ಮೈಸೂರು ರಾಜ್ಯದ ಎಲ್ಲಾ ಭಾಗಗಳಲ್ಲೂ ಆಗುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅಲ್ಲದೆ ಯಾರು ಮುಂದೆ ಬರುತ್ತಾರೋ ಅವರಿಗೆ ಸಾಲದ ರೂಪವಾಗಿ ಹಣದ ಜೊತೆಗೆ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಸಹ ಕೊಡುವುದಕ್ಕೆ ತಾವು ಏರ್ಪಾಡು ಮಾಡಬೇಕು. ಈ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯ ಸಚಿವರು ಸಭೆಯ ಮುಂದೆ ಮಂಡಿಸಿರುವ ಈ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಭೂಸುಧಾರಣೆ ವಿಷಯದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು, ಅಕ್ಟೋಬರ್ ನೊಳಗೆ ಪರಿಹಾರ ಕೊಡುವುದಕ್ಕೆ ಕೆಲಸ ಮಾಡುವುದು ಸಾಧ್ಯವಿಲ್ಲವೆಂದು, ಅದಕ್ಕೆ ಇನ್ನೂ ಕಾಲ ಹಿಡಿಯುತ್ತದೆಂದು ಹೇಳಿದರು. ಈ ದೇಶದಲ್ಲಿ ಅದಷ್ಟು ಪ್ರಗತಿಯನ್ನು ಸಾಧಿಸುವುದಕ್ಕೆ ತನ್ನ ಮಾತನ್ನು ಉಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅದೇ ಸಂದರ್ಭದಲ್ಲಿ ಹೊಸದಾಗಿ ಸರ್ವೆ ಸೆಟಲ್‌ಮೆಂಟ್ ಆಗುತ್ತಿದೆ. ಹೆಚ್ಚು ಜನ ಸರ್ವೆಯರ್‌ಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಒಂದು ಅಭಿಪ್ರಾಯ ಇಟ್ಟುಕೊಂಡಿದ್ದು, ಅದು ಇನ್ನೂ ಪೂರೈಸಲಿಲ್ಲ. ಅವರಿಗೆ ತರಪೇತು ಕೊಡುವ ಕೆಲಸವನ್ನು ಇನ್ನೂ ಪೂರ್ತಿಯಾಗಲಿಲ್ಲ. ಭೂಕಂದಾಯದ ಮೇಲೆ ಅಧಿಭಾರವನ್ನು ಸರ್ಕಾರ ಹೇರಿದೆ. ಭೂಕಂದಾಯದ ಪುನರ್ ವಿಮರ್ಶೆಯಾಗುತ್ತಿದೆ, ಕಂದಾಯ ಮತ್ತು ತೆರಿಗೆ ವಸೂಲಾತಿ ಈ ಎರಡು ಈ ಜೂಲೈನಿಂದ ಆರಂಭವಾಗುವುದಿದೆ. ಈ ವಿಷಯದಲ್ಲಿ, ಈ ವರ್ಷ ಕೆಟ್ಟ ಕ್ಷಾಮದ ಪರಿಸ್ಥಿತಿ ದೇಶದಲ್ಲಿರುವುದರಿಂದ ಈ ಭೂಕಂದಾಯ ಮತ್ತು ಅಧಿಭಾರ ತೆರಿಗೆಯನ್ನು ವಸೂಲ ಮಾಡುವ ವಿಷಯದಲ್ಲಿ ತೀವ್ರವಾಗಿ ಮಂತ್ರಿಮಂಡಲ ಪುನರ್ವಿಮರ್ಶೆ ಮಾಡಿ ಈಗ ಏನು ತಮ್ಮ ಜಿಲ್ಲಾಧಿಕಾರಿಗಳಿಗೆ ಡಿಸ್‌ಕ್ರಿಷನ್ ಕೊಟ್ಟಿದ್ದೀರೋ, ಆ ಬಗ್ಗೆ ಸರ್ಕಾರದವರು ಒಂದು ತೀರ್ಮಾನಕ್ಕೆ ಬರುವುದು ಯೋಗ್ಯ. ಈಗಾಗಲೆ ನಾಲ್ಕನೆ ಬೆಳೆಯಾಗಿದೆ, ಇತ್ಯಾದಿ, ಇತ್ಯಾದಿ, ಲ್ಯಾಂಡ್ ರೆವಿನ್ಯೂ ಕೋಡ್‌ನಲ್ಲಿ ಏನಿತ್ತು, ಭೂಕಂದಾಯದ ಮಸೂದೆಯಲ್ಲಿ ಹೊಸದಾಗಿ ಏನು ಬರೆದಿದ್ದಾರೆ ಆ ವಿಷಯದಲ್ಲಿ ಕೂಡ ತೀವ್ರ ಪರಿಸ್ಥಿಯನ್ನು ಗಮನದಲ್ಲಿಟ್ಟುಕೊಂಡು ನೇರವಾಗಿ ಮಂತ್ರಿಮಂಡಲ ಒಂದು ತೀರ್ಮಾನ ತೆಗೆದುಕೊಂಡು, ಆ ತೀರ್ಮಾನ ಕಟ್ಟಕಡೆಯದಾಗಿ ಪಂಚಾಯತಿಯ ಮಟ್ಟದಲ್ಲಿ ಕಾರ್ಯಗತವಾಗುವಂತೆ, ಮತ್ತು ಜುಲೈನೊಳಗೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಮಾನ್ಯ ಸಚಿವರು ಒಂದು ಭರವಸೆ ಕೊಟ್ಟಿದ್ದಾರೆ. ಈ ದೇವಾದಾಯ ಮತ್ತು ಧರ್ಮಾದಾಯ ಇವುಗಳಿಗೆ ಸಂಬಂಧಪಟ್ಟ ಇನಾಂಗಳು ಮತ್ತು ಭೂಹಿಡುವಳಿಗಳ ವಿಷಯವಾಗಿ, ಟೆನೆಂಟಿಗೆ ಸಂಬಂಧಪಟ್ಟ ಹಾಗೆ ಸೂಕ್ತ ಕಾನೂನನ್ನು ಈ ಸಭೆಯ ಮುಂದೆ ಮಂಡಿಸುತ್ತೇವೆಂದು ತಿಳಿದಿದ್ದೇವೆ. ಏಕೆಂದರೆ, ನಮ್ಮ ಕಡೆ ತಮಗೆ ಗೊತ್ತಿರುವ ಹಾಗೆ ಬಹಳ ಗೇಣಿದಾರರು ಇಂಥ ಜಮೀನುಗಳನ್ನು ಗೇಣಿಗೆ ಪಡೆಯುತ್ತಿದ್ದಾರೆ. ಈ ರೀತಿಯ ಗೇಣಿದಾರರು ಏತಕ್ಕೆ ಮುಂದುವರಿಯಬೇಕು ಎಂಬ ಪ್ರಶ್ನೆಯನ್ನು ಕೂಡ ಸರ್ಕಾರದವರು ಪರಿಶೀಲಿಸಬೇಕು. ಅದನ್ನು ಸಹ ಈ ಗೇಣಿ ಪದ್ಧತಿಯಿಂದ ಮುಕ್ತಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಈ ಭೂಕಂದಾಯದ ಬಗ್ಗೆ ಒಂದು ಮಾತನ್ನು ನಾನು ಹೇಳುತ್ತೇನೆ. ತೀರ್ಥಹಳ್ಳಿ ತಾಲ್ಲೋಕಿನ ಹಡಗಲಿ ಮತ್ತು ಕುಡಗಲಿ ಗ್ರಾಮಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಅಲ್ಲಿ ಕೆಲವು ಇನಾಂ ಜಮೀನುಗಳು ಎನ್ನತಕ್ಕಂಥದ್ದು ಇದ್ದು, ಅದನ್ನು ಕೇರಳದವರು ಕ್ರಯಕ್ಕೆ ತೆಗೆದುಕೊಂಡ ಹಾಗೆ, ಮೊದಲು ಅಲ್ಲಿ ವಾಸ ಮಾಡುವುದಕ್ಕೆ ಆರಂಭ ಮಾಡಿದ ಹಾಗೆ, ಸರ್ಕಾರದ ಅರಣ್ಯ ಇಲಾಖೆಗೆ ಸೇರಿದ ಸಹಸ್ರಾರು ಎಕರೆ ಕಾಡನ್ನು ಕಡಿದು, ಎರಡು ಮೂರು ಕೋಟಿ ರೂಪಾಯಿಗಳ ಅರಣ್ಯವನ್ನು ನಾಶ ಮಾಡಿರುವುದಲ್ಲದೆ, ಸಹಸ್ರಾರು ಎಕರೆಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ, ಅಕ್ರಮವಾದ ರೀತಿಯಲ್ಲಿ ವ್ಯವಹಾರ ನಡೆಯುತ್ತಿದ್ದರೂ ಸಹ, ಇದರ ಬಗ್ಗೆ ಅರಣ್ಯಾಧಿಕಾರಿಗಳಾಗಲಿ, ಜಿಲ್ಲಾಧಿಕಾರಿಗಳಾಗಲಿ, ರಾಜ್ಯದ ಒಂದು ಭಾಗದಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ವಿಚಾರ ಮಾಡಲು ಅಸಮರ್ಥರಾಗಿದ್ದಾರೆ. ಪ್ರತಿ ವರ್ಷವೂ ಸಹ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ, ಅವರು ಯಾವ ಕ್ರಮವನ್ನೂ ತೆಗೆದುಕೊಳ್ಳದೆ, 5-6 ವರ್ಷದಿಂದ ಬೆಳೆ ಬೆಳೆಯುತ್ತಿದ್ದಾರೆ. ಆ ಭಾಗವನ್ನು ನೋಡುವುದಕ್ಕೆ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ. ಈಗಲೂ ಸಹ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಸಂಶಯ ಕಾಣುತ್ತದೆ. ಇದರ ಬಗ್ಗೆ ಸರ್ಕಾರದ ಕ್ರಮ ಯಾವುದೂ ನಡೆಯುತ್ತಿಲ್ಲ. ಮೊನ್ನೆ ಸರ್ಕಾರದ ಪರವಾಗಿ ಕೆಲವು ಅಧಿಕಾರಿಗಳು ಅಲ್ಲಿ ತನಿಖೆ ನಡೆಸಲು ಹೋಗಿದ್ದಾರೆಂದು ತಿಳಿದುಬಂದಿದೆ. ಇದು ಒಂದು ದೊಡ್ಡ ಉದಾಹರಣೆ. ಇದನ್ನು ಸರ್ಕಾರ ತೀರ್ಮಾನ ಮಾಡಬೇಕು. ಕೇರಳ ಸರ್ಕಾರದವರು ಅಥವಾ ಮೈಸೂರು ಸರ್ಕಾರದವರು ಕುಳಿತು ಇದನ್ನು ತೀರ್ಮಾನ ಮಾಡಬೇಕು. ಅದರಲ್ಲಿ ಧೋರಣೆ ಏನಿರಬೇಕು ? ಒಂದು ರಾಜ್ಯದ ಪ್ರಜೆ ಇನ್ನೊಂದು ರಾಜ್ಯಕ್ಕೆ ಹೋಗಿ ವಾಸಮಾಡುವುದಕ್ಕೆ ಒಂದು ರಾಜ್ಯಾಂಗದತ್ತವಾದ ಹಕ್ಕು ಇದೆ. ಆದರೆ ಆ ರಾಜ್ಯದಲ್ಲಿ ಏನು ಒಂದು ಕಾಯಿದೆ ಇದೆಯೋ ಅದನ್ನು ಉಲ್ಲಂಘಿಸಬಹುದೇ ಎನ್ನುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಈ ಸಮಸ್ಯೆ ಶಿವಮೊಗ್ಗಾ ಜಿಲ್ಲೆಯಲ್ಲಿ ಜ್ವಲಂತ ಸಮಸ್ಯೆಯಾಗಿ, ಬಹಳ ಜನರ ಗಮನವನ್ನು ಸೆಳೆದಿದೆ. ಬಹುಶಃ ಇದು ಕೇಂದ್ರ ಸರ್ಕಾರದ ಗಮನಕ್ಕೂ ಬಂದಿರಬಹುದು. ಇದಕ್ಕೆ ಸೂಕ್ತವಾದ ಶೀಘ್ರವಾದ ಪರಿಹಾರ ಮಾಡುವುದರ ಬಗ್ಗೆ ಮಂತ್ರಿಮಂಡಲ ಸ್ವಲ್ಪ ಜಾಗ್ರತೆ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ಮಾತನ್ನು ಮುಂದುವರೆಸುತ್ತಾ, ಹಳೆಯ ಮೈಸೂರಿನಲ್ಲಿ ಒಂದು ರೋಗ ಇದೆ. ಟಿ. ಟಿ. ಅಂದರೆ ತಕರಾರು ತಃಖ್ತೆ ಬಾಬಿನಿಂದ ಹೊಸನಗರದ ಒಂದೇ ತಾಲ್ಲೋಕಿನಲ್ಲಿ ಪ್ರತಿವರ್ಷ 30 ಸಾವಿರ ರೂಪಾಯಿ ವಸೂಲಾಗುತ್ತಿದೆಯೆಂದು ಕೇಳಿದ್ದೇನೆ. 10–15 ವರ್ಷಗಳವರೆಗೆ ಜನರು ತಕರಾರು ತಖ್ತೆಗೆ 100 ರೂಪಾಯಿಗಳನ್ನು ಕೊಟ್ಟರೆ, ಶಾನುಭೋಗ ಮತ್ತು ಇನ್ಸ್‌ಪೆಕ್ಟರ್‌ಗೂ ಸಹ 100 ರೂಪಾಯಿ ಕೊಡುತ್ತಾರೆ. ಕೆಲವು ಜಮೀನುಗಳು ಖಾತೆಯೇ ಆಗಿರುವುದಿಲ್ಲ. ಹೀಗಾದರೆ ಸರ್ಕಾರ ಇದೆಯೆಂದು ಭಾವಿಸೋಣವೇ, ಇಲ್ಲವೆಂದು ಭಾವಿಸೋಣವೇ? ಬೇರೆಯವರ ಜಮೀನಿಗೆ 8—10 ವರ್ಷ ಕಂದಾಯವನ್ನು ಕಟ್ಟಿದರೆ, ನಂತರ ಆ ಜಮೀನು ತನಗೆ ಆಗುತ್ತದೆಂದು, ಒಬ್ಬ ಖದೀಮ 50 ಎಕರೆ ಜಮೀನನ್ನು ಗುತ್ತಿಗೆಗೆ ಕೊಟ್ಟಿದ್ದಾರೆ, ಬೇರೆಬೇರೆಯವರಿಗೆ ಮಾರುತ್ತಿದ್ದಾನೆ. ರೆವಿನ್ಯೂ ಇಲಾಖೆಯವರು ಗೇಣಿಯನ್ನು ವಸೂಲು ಮಾಡುತ್ತಿದ್ದಾರೆ, ಆದರೆ ಈ 50 ಎಕರೆಗೆ ಖಾತೆಯೇ ಇಲ್ಲ. ಯಾವ ಸರ್ವೆ ನಂಬರ್ ಸಹ ಇಲ್ಲ. ಈ ಜಮೀನು ಏನು ರೆವಿನ್ಯೂ ಇಲಾಖೆಗೆ ಸೇರಿದ್ದೆ, ಅಥವಾ ಫಾರೆಸ್ಟ್ ಇಲಾಖೆಗೆ ಸೇರಿದ್ದೆ ಎಂಬುದು ಗೊತ್ತಿಲ್ಲ. ಇದು ಒಂದು ಹೊಸ ನಗರದ ತಾಲ್ಲೋಕಿನ ಕಥೆ. ಇದರಿಂದ ನಿಮ್ಮ ಸರ್ಕಾರ ಎಷ್ಟರಮಟ್ಟಿಗೆ ಜಾಗ್ರತವಾಗಿದೆ, ಕಾನೂನು ಕಾಯಿದೆಯನ್ನು ನೀವು ಎಷ್ಟರಮಟ್ಟಿಗೆ ಪರಿಪಾಲನೆ ಮಾಡಿದ್ದೀರಿ ಎಂದು ತಿಳಿಯುತ್ತದೆ. ಈ ತಕರಾರು ತಖ್ತೆ ಪದ್ಧತಿಯನ್ನು ತೊಡೆದು ಹಾಕಬೇಕು. ಸರ್ಕಾರಿ ಜಮೀನಿನಲ್ಲಿ ಯಾರಾದರೂ ಪ್ರವೇಶ ಮಾಡಿದರೆ, ಅಕ್ರಮವಾಗಿ ಸಾಗುವಾಡಿದರೆ, ಅವರ ಮೇಲೆ ತೀವ್ರ ಕ್ರಮ ತೆಗೆದುಕೊಂಡು, ಹೇಗೆ ಅಕ್ರಮ ಪ್ರವೇಶಗಳಿಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೋ, ಅಂಥ ಕ್ರಮವನ್ನು ಇದಕ್ಕೂ ತೆಗೆದುಕೊಳ್ಳಬೇಕು.

5-30 P.M.

ದರಖಾಸ್ತುಗಳನ್ನು ಅಲ್ಲಿ ಆ ಕ್ಷಣದಲ್ಲಿಯೇ ಮಂಜೂರು ಮಾಡಬೇಕು. ಒಂದು ಸಲ ದರಖಾಸ್ತು ದಾನಕ್ಕಾಗಿ ಹೊರಟಿರಿ. ಆದ ಅಪಹಾಸ್ಯದಲ್ಲಿ ಪರಿಣಾಮವಾಯಿತು. ದಾನ ಎಲ್ಲಿ ಹೋಯಿತು ? ಹಾಲಿ ಇರುವ ದರಖಾಸ್ತುಗಳ ವಿಲೇವಾರಿ ಮಾಡುತ್ತಾ ಇಲ್ಲ. ಶ್ಯಾನುಭೋಗರಿಗೆ ಜಮೀನು ಕೊಡತಕ್ಕದ್ದು ಮಹಾರಾಜರಿಗೆ ಜಹಗೀರು ಕೊಡುವ ಹಕ್ಕು ಇದ್ದ ಹಾಗೆ ಎಂದು ತಿಳಿದುಕೊಂಡಿದ್ದಾರೆ. ಎರಡು ಎಕರೆ ಜಮೀನು ಕೊಡಬೇಕಾದರೆ ಎರಡು ಸಾವಿರ ರೂಪಾಯಿ ಕೊಡದೆ ಏತಕ್ಕೆ ಕೊಡಬೇಕು ಎನ್ನುವ ಅಭಿಪ್ರಾಯ ಇದೆ. ಈ ಭೂಮಿ ಕೊಡುವ ವಿಷಯದಲ್ಲಿ ಕಾನೂನು

(ಶ್ರೀ ಎಸ್. ಗೋಪಾಲ ಗೌಡ)

ಮಾಡಿದ್ದಾರೆ. ಈ ಕಾನೂನನ್ನು ಅನುಸರಿಸಿ ಸಾಗುವಳಿಗೆ ಯೋಗ್ಯವಾದ ಭೂಮಿ ಅರಣ್ಯ ಇಲಾಖೆಯಲ್ಲಿದ್ದರೆ, ಅರಣ್ಯ ಖಾತೆಯಿಂದ ಹಾಗೆ ಸಾಗುವಳಿಗೆ ಬರತಕ್ಕ ಜಮೀನನ್ನು ಸಾಗುವಳಿಗೆ ಬಿಡುಗಡೆ ಮಾಡಿಕೊಡುತ್ತಾರೆ. ಮೂರು ಜನ ಕಮಿಟಿಯವರು ನೋಡಿ ಮಾಡಿ ಎಲ್ಲಾ ಆಯಿತು. ರೆವಿನ್ಯೂ ಇಲಾಖೆಗೆ ಅರಣ್ಯ ಇಲಾಖೆಯವರು ಬಿಡುಗಡೆ ಮಾಡಿ ಕೊಟ್ಟಿಲ್ಲ. ಅದಕ್ಕೆ ಮತ್ತೆ ಸಮಿತಿ ಮಾಡಬೇಕು ಎಂದರೆ ಬಹಳ ವಿಳಂಬವಾಗುತ್ತದೆ. ಇಂತಹ ಕೆಲಸವನ್ನು ಸರ್ಕಾರದವರು ಸಂಬಂಧಪಟ್ಟ ಇಲಾಖೆಗಳ ಮೂಲಕ ಮಾಡಿಸುವುದರಲ್ಲಿ ಬಹಳ ವಿಳಂಬ ಮಾಡುತ್ತಾರೆ. ಈ ಕಡೆ ಗಮನ ಕೊಡುತ್ತಾ ಇಲ್ಲ. ಇದು ವಿಷಾದಕರವಾದ ಸಂಗತಿ. ಈ ಕಡೆ ಗಮನ ಕೊಟ್ಟು ಪ್ರಯತ್ನ ಮಾಡುತ್ತಾ ಇದ್ದರೆ ನನಗೆ ದುಃಖ ಇಲ್ಲ, ಆ ಕಡೆ ಗಮನ ಕೊಡಬೇಕು. ಮಾನ್ಯ ಮುಖ್ಯ ಸಚಿವರು ಸೆಕ್ರೆಟೇರಿಯೇಟ್‌ನಲ್ಲಿ ಮೂರು ಗಂಟೆಯ ಸಮಯ ಕೆಲಸ ಹೇಗೆ ನಡೆಯುತ್ತದೆ ಎಂದು ಹೇಳಿದರು. ಮಂತ್ರಿ ಮಂಡಲ ಇದೆ, ಲೆಜಿಸ್ಲೇಚರ್ ಇದೆ, ಎದುರುಗಡೆ ಹೈಕೋರ್ಟ್ ಇದೆ, ಇಲ್ಲಿ ಈ ತರಹ ಕೆಲಸ ನಡೆಯುತ್ತಾ ಇದ್ದರೆ, ನಿಮ್ಮ ಮೂಗಿನ ಕೆಳಗೆ ವಿಳಂಬಗಳು ಅಕೃತ್ಯಗಳು ನಡೆಯುತ್ತಾ ಇರುವುದಾದರೆ, ಹೊಸನಗರದ ಕೊಡಚಾದ್ರಿ ಪರ್ವತದ ಬುಡದಲ್ಲಿ ಆರು ತಿಂಗಳು ಬಿಸಿಲು ಕಾಣದೆ ಇರುವ ಸನ್ನಿವೇಶ ಇರುವ ಕಡೆ ಒಬ್ಬ ಶ್ಯಾನುಭೋಗರು ಒಬ್ಬ ಪಟೇಲರು, ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ಅವರೇ ಸರ್ಕಾರ, ಅವರಿಗೆ ಅಧಿದೇವತೆಗಳು, ಅಲ್ಲಿ ಎಷ್ಟರಮಟ್ಟಿಗೆ ನಿಮ್ಮ ಕಾನೂನನ್ನು ಜನರ ಹಿತಕ್ಕೆ ಚಲಾಯಿಸಬಹುದು, ಆ ಬಡ ಮುಗ್ಧ ಅಸಹಾಯಕ ಜನತೆಯನ್ನು ಯಾವರೀತಿ ಶೋಷಣೆ ಮಾಡುತ್ತಾ ಇರಬಹುದು ಎನ್ನುವ ಅಭಿಪ್ರಾಯ ತಮಗೆ ಮನವರಿಕೆ ಆಗಿದೆಯೋ ಇಲ್ಲವೋ ನಮಗಂತೂ ಅದು ಅಸಹನೀಯವಾಗಿದೆ. ಈ ಆಡಳಿತ ಹೇಗೆ ಕೊನೆಗಾಣಿಸಬೇಕು ಎಂದು ನಮಗೆ ತೋಚುತ್ತಾ ಇಲ್ಲ. ಅರ್ಜಿಗಳು ಬರೆದದ್ದು ಆಯಿತು, ಅದನ್ನು ತೋರಿಸಿ ಹೇಳಿದ್ದು ಆಯಿತು, ಅಲ್ಲಿ ಲಾ ಅಂಡ್ ಆರ್ಡರ್ ಇಲ್ಲವೇ ಇಲ್ಲ. ಕಾನೂನು ಆಡಳಿತ ಇಲ್ಲವೇ ಇಲ್ಲ. ಅಲ್ಲಿ ಸಬ್ ಇನ್‌ಸ್ಪೆಕ್ಟರೇ ಅಧಿಪತಿ. ಇದನ್ನು ಸರಿಪಡಿಸದೇ ಹೋದರೆ ಹಳ್ಳಿಮಟ್ಟದಲ್ಲಿ ಅಧಿಕಾರ ಕುಸಿದುಬಿದ್ದು ಹೋಗುವುದಲ್ಲದೆ, ಯಾರು ಬೇಕಾದರೂ ಅಧಿಕಾರವನ್ನು ಚಲಾಯಿಸುವ ಸ್ಥಿತಿಗೆ ತಂದುಬಿಟ್ಟಿದ್ದೀರಿ. ಅಧಿಕಾರ ಹಿಡಿದಿರತಕ್ಕ ಯಂತ್ರ ಮೂರೆಯಲ್ಲಿ ಘೋರವಾದ ನಿದ್ರೆ ಮಾಡುತ್ತಾ ಇದೆ. ಇದನ್ನು ಸರಿಯಾಗಿ ಬಗೆಹರಿಸಬೇಕು.

ಇನ್ನು ಭೂ ಕಂದಾಯಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚಿಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಂದು ಮಾತಿನಲ್ಲಿ ಮುಗಿಸುತ್ತೇನೆ. ಕ್ಷಾಮ ಪರಿಹಾರದ ಸಂಬಂಧವಾಗಿ ರಾಜ್ಯ ಸರ್ಕಾರದವರ ಮಾತಿನಲ್ಲಿ ನಂಬಿಕೆ ಇಲ್ಲದೆ, ಕೇಂದ್ರ ಸರ್ಕಾರದವರೇ ಖುದ್ದಾಗಿ ಬಂದು ನೋಡಿಕೊಂಡು ಹೋದರು. ಅವರ ವರದಿ ಚೆನ್ನಾಗಿದೆ ಎಂದು ಹೇಳಿದಿರಿ. ದಯವಿಟ್ಟು ಅದನ್ನು ಈ ಮನೆಯ ಮುಂದೆ ಇಡಬೇಕು. ಇಂತಹ ಹೇಳಿಕೆಗಳನ್ನು ಮಾನ್ಯ ಸಭೆಯ ಮುಂದೆ ಇಡದೇ ಇರತಕ್ಕದ್ದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಅದನ್ನು ಮಂಡಿಸಿ ಅದು ನಾವು ಎಷ್ಟುಮಟಿಗೆ ವಾಸ್ತವ ಆಗಿದೆ, ಎಷ್ಟು ಮಟ್ಟಿಗೆ ರಾಜ್ಯಕ್ಕೆ ಸಹಾಯವಾಗಿದೆ ಎನ್ನುವುದನ್ನು ನಾವು ನೋಡುತ್ತೇವೆ. ಕ್ಷಾಮ ಪರಿಹಾರ ಎನ್ನುವ ಕೆಲಸ ಏನು ಹಳೇ ಕಾಲದ ರೀತಿಯಲ್ಲಿ ನಡೆದಿದೆ ಇದನ್ನು ಬದಲಾವಣೆ ಮಾಡಬೇಕು. ಪಂಚಾಯಿತಿಗಳ ಮೂಲಕ ಉಚಿತವಾಗಿ ಅನ್ನ ಕೊಡುತ್ತೇವೆ ಎಂದು ಕೂಡ ಆಹಾರ ಸಚಿವರು ಡಂಗುರ ಸಾರಿದ್ದಾರೆ. ಉಚಿತ ಅನ್ನ ಒಂದು ಸಾವಿರ ಟನ್ ಎಲ್ಲೆಲ್ಲಿ ಹೋಗುತ್ತದೆ, ಹೇಗೆ ವಿಲೇವಾರಿ ಆಗುತ್ತದೆ ಎನ್ನುವುದನ್ನು ನೋಡಲು ಬೇಕಾದರೆ, ಪ್ರತಿಯೊಬ್ಬ ಮಾನ್ಯ ಸಭೆಯ ಸದಸ್ಯನ ಸಹಾಯ ತೆಗೆದುಕೊಳ್ಳಿ, ಗ್ರಾಮಗಳಲ್ಲಿ ಎಷ್ಟು ಜನ ನಿಜವಾಗಿ ದರಿದ್ರರು ಇದ್ದಾರೆ, ವಿಷ ತೆಗೆದುಕೊಂಡು ಬಾವಿಗೆ ಹಾರುವ ಸ್ಥಿತಿಗೆ ಎಷ್ಟು ಜನ ಇದ್ದಾರೆ, ಅವರ ಲೆಕ್ಕ ತಗೆದುಕೊಂಡು ಅವರಿಗೆ ಊಟ ಹಾಕುವ ವ್ಯವಸ್ಥೆ ಮಾಡಿ. ಒಂದು ಸಾವಿರ ಟನ್ ಅಕ್ಕಿ ಪುಸ್ತಕದಲ್ಲಿ ಇರುವ ಬದಲು ಸರ್ಕಾರದ ಅಕ್ಕಿ ತಿಂದು ಸಾಯಲಿ. ಇಷ್ಟು ಮಾಡಿಸಬೇಕು ಶ್ಯಾನುಭೋಗರು, ಪಟೇಲರು ವಂಶಪಾರಂಪರ್ಯವಾದ ಹಕ್ಕನ್ನು ತೊಡೆದು ಹಾಕಬೇಕೆಂದು ಉಚ್ಚ ನ್ಯಾಯಾಲಯ ಅನುಮತಿ ಕೊಟ್ಟಿದೆ ಅವರಿಗೆ ಪರಿಹಾರವನ್ನು ಏಕಗಂಟಾಗಿ ಕೊಡುವುದು ಒಳ್ಳೆಯದು. ಎರಡು ಕೋಟಿ ರೂಪಾಯಿ ಆದರೂ ಚಿಂತೆ ಇಲ್ಲ. ಅದನ್ನು ಒದಗಿಸಿ ಅವರನ್ನು ಮುಕ್ತರನ್ನಾಗಿ ಮಾಡಿ, ಅವರ ಕೈಯ್ಯಲ್ಲಿನ ಕಾಗದ ಪತ್ರಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ಎರಡು ಕೋಟಿ ಖರ್ಚಾದರೂ ಚಿಂತೆ ಇಲ್ಲ. ನಿಮ್ಮ ಪರಿಹಾರವನ್ನು ನೀವು ತೆಗೆದುಕೊಂಡು ಹೋಗಬೇಕು ಎಂದು ಹೇಳಿ. 10 ಸಾವಿರ ರೂಪಾಯಿ ಮೇಲ್ಪಟ್ಟು ಆಗುವುದಾದರೆ ಕಂತಿನಲ್ಲಿ ಕೊಡಿ. ಒಂದು, ಎರಡು, ಮೂರು, ನಾಲ್ಕು ಸಾವಿರ ಬರುವವರಿಗೆ ಕಂತು ಬೇಡ. ಪುನಃ ನೇಮಕ ಮಾಡುವ ಪ್ರಶ್ನೆ ಏನು ಇದೆ ಅದನ್ನು ವಿಚಾರ ಮಾಡಬೇಕು. ನಿಜವಾಗಿ ಚಿಕ್ಕವಯಸ್ಸಿನವರಾಗಿದು

ಸಾಕಷ್ಟು ವಿದ್ಯೆ, ಬುದ್ಧಿ ಇದ್ದು ಎಸ್. ಎಸ್. ಎಲ್. ಸಿ. ಪಾಸ್ ಆಗಿದ್ದರೆ, ಅಂಥವರನ್ನು ಅಧಿಕಾರದಲ್ಲಿ ಇಟ್ಟುಕೊಳ್ಳುವುದಕ್ಕೆ ತೀರ್ಮಾನ ಮಾಡುವ ಹಾಗಿದ್ದರೆ, ತಕ್ಷಣ 100 ಮೈಲಿ ಆಚೆಗಾದರೂ ಅವರನ್ನು ವರ್ಗ ಮಾಡಬೇಕು. ಅದಕ್ಕೆ ಒಪ್ಪಿಕೊಂಡರೆ ಮಾತ್ರ ಅವರನ್ನು ಅಧಿಕಾರದಲ್ಲಿ ಇಟ್ಟುಕೊಳ್ಳಬಹುದು. ಇಲ್ಲದಿದ್ದರೆ ನಾನಂತೂ ಹೇಳುತ್ತೇನೆ, ಅವರನ್ನು ಮನೆಯಲ್ಲಿ ಇಟ್ಟು ಪುನಃ ನೇಮಕ ಮಾಡುವುದು ಖಂಡಿತ ಬೇಡ. ನಮ್ಮಲ್ಲಿ ಪಹಣಿ ಬರೆಯುವುದರಲ್ಲಿ, ಲೆವಿ ಬರೆಯುವುದರಲ್ಲಿ ಅಸಹನೀಯ ಪರಿಸ್ಥಿತಿ ಉಂಟಾಗಿದೆ. ಈ ಪರಿಸ್ಥಿತಿಯನ್ನೇ ಮುಂದುವರಿಸಿಕೊಂಡು ಹೋಗುವುದರಿಂದ ರಕ್ತಪಾತ ಹೊಡೆದಾಟಗಳು ತಲೆಮಂಡೆ ಒಡೆದುಕೊಳ್ಳುವುದು ಇವಕ್ಕೆ ಅವಕಾಶ ಮಾಡಿಕೊಟ್ಟಾಂತಾಗುತ್ತದೆ. ಅವರು ಒಂದು ಕಾಗದ ಬರೆಯುತ್ತಾ ಇಲ್ಲ. ಡೆಪ್ಯೂಟಿ ಕಮೀಷನರ್ ಬಂದು ಅಂಗಲಾಚಿ ಬರವಣಿಗೆಯಲ್ಲಿ ಬರೆದುಕೊಡಿ ಎಂದು ಹೇಳುವ ಸ್ಥಿತಿಗೆ ಬಂಧಿದೆ. ಹಿಂದೆ ಮಿರ್ಜಾ ಸಾಹೇಬರ ಜಮಾಬಂದಿ ಹೋಯಿತು, 10 ವರ್ಷದಿಂದ ಟಿ.ಟಿ. ಏತಕ್ಕೆ ಕೊಟ್ಟಿಲ್ಲ, ದರಖಾಸ್ತು ಏತಕ್ಕೆ ಮಂಜೂರು ಆಗಿಲ್ಲ ಎಂದು ಕೇಳುವುದು ಹೋಯಿತು. ಬರೆದದ್ದಕ್ಕೆ ಸೈನ್ ಮಾಡುವುದು, ಒಡೆ ಸಾಂಬಾರು ತಿಂದು ಹೊರಡುವುದು ಹೀಗೆ ಆಗಿದೆ. ಇದು ಏನು ಜಮಾಬಂದಿ ? ಇದನ್ನು ಸರಿಪಡಿಸಬೇಕು. ಶ್ಯಾನುಭೋಗರು, ಪಟೇಲರು, ಕಾರ್ಯದರ್ಶಿಗಳು ಇವರನ್ನು ಸರಿಯಾಗಿ ತರಬೇತು ಮಾಡಬೇಕು. ಅವರಿಗೆ ಸೂಕ್ತ ಸಂಬಳ ಕೊಡಬೇಕು. ಇಲ್ಲದಿದ್ದರೆ ಎರಡು ಸಾವಿರ ಆದಾಯ ಬರುವ ಪಂಚಾಯಿತಿಗಳು ಇವೆ. ಒಬ್ಬ ಕಾರ್ಯದರ್ಶಿಗೆ 100 ರೂಪಾಯಿ ಸಂಬಳ ಕೊಟ್ಟರೆ ಅವನ ಸಂಬಳಕ್ಕೆ ಎರಡು ಸಾವಿರ ಆಗುತ್ತದೆ. ಆದ್ದರಿಂದ ಕಾರ್ಯದರ್ಶಿಗಳನ್ನು ನೀವೇ ನೇಮಕ ಮಾಡಿ ಶ್ಯಾನುಭೋಗರಿಂದ ಏನೇನು ಕಾಗದ ಪತ್ರಗಳು ಬರಬೇಕು ಎಂದು ನೋಡಿ ತೆಗೆದುಕೊಂಡು ಗ್ರಾಮ ಮಟ್ಟದಲ್ಲಿ ಪೂರ್ಣವಾದ ಎಲ್ಲಾ ರಿಕಾರ್ಡುಗಳನ್ನೂ ಇಡುವುದಕ್ಕೆ ಏರ್ಪಾಡು ಮಾಡಿ. ಇವೊತ್ತು, ಸಾಲಕ್ಕೆ ಕಾಗದ ತರಬೇಕು ಎಂದರೆ, ಸ್ಕಾಲರ್‌ಷಿಪ್ ತರಬೇಕು ಎಂದರೆ, ಇನ್‌ಕಂ ಸರ್ಟಿಫಿಕೇಟ್ ತರಬೇಕೆಂದರೆ, ಕೋ-ಆಪರೇಟೀವ್ ಸೊಸೈಟಿಗೆ ಸರ್ಟಿಫಿಕೇಟ್ ತರಬೇಕೆಂದರೆ, ರೈತ ತೀರ್ಥಹಳ್ಳಿ ತಾಲ್ಲೂಕು ಆಫೀಸಿಗೆ ಓಡಾಡಿ ಸುಸ್ತಾಗುತ್ತಾನೆ. ಸಾಲ ಬೇಡ ನನ್ನ ಕೈಬಿಟ್ಟರೆ ಸಾಕು ಎನ್ನುವ ಸ್ಥಿತಿಗೆ ಬಂದಿದೆ. ಇದನ್ನು ಹೋಗಲಾಡಿಸಬೇಕು. ಗ್ರಾಮ ಮಟ್ಟದಲ್ಲಿ ಚಾವಡಿಯಲ್ಲಿ ಬೇಕಾದ ಎಲ್ಲಾ ರಿಕಾರ್ಡುಗಳೂ ಸಿಕ್ಕುವಂತೆ ಮಾಡಿ. ಬೇಕಾದರೆ 3-4 ಆಣೆ ಫೀ ಹಾಕಿ. ಇನ್ನೊಂದು ವಿಷಯ ಹೇಳಿ ಮುಗಿಸುತ್ತೇನೆ. ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ಸರ್ಕಾರದ ಯಾವ ಕಾಗದವೂ ಹೋಗಬಾರದು. ಹೋದರೆ ನಮ್ಮಲ್ಲಿ ಆ ಕಾಗದವನ್ನು ಸುಡಿಸಬೇಕಾಗುತ್ತದೆ. ನೀವು ಬೇಕಾದರೆ, ಜಿಲ್ಲಾಧಿಕಾರಿಗಳಿಗೆ, ಮಂತ್ರಿಗಳಿಗೆ, ಕೇಂದ್ರ ಸರ್ಕಾರಕ್ಕೆ, ಅಥವಾ ಮಹಾರಾಷ್ಟ್ರಕ್ಕೆ ಬರೆಯುವ ಹಾಗಿದ್ದರೆ ಇಂಗ್ಲಿಷ್‌ನಲ್ಲಿ ಬರೆಯಿರಿ. ಆದರೆ ರೈತರಿಗೆ ವ್ಯವಹಾರ ಮಾಡುವಾಗ ಕನ್ನಡ ಹೊರತು ಬೇರೆ ಯಾವ ಭಾಷೆಯಲ್ಲಿಯೂ ಬರೆಯಬೇಡಿರಿ. ಉದಾಹರಣೆಗೆ, ನಿಮ್ಮ ದರಖಾಸ್ತು ರಿಜೆಕ್ಟ್ ಮಾಡಿದ್ದೇವೆ, ಅಥವಾ ಇನ್ನಿತರ ವಿಚಾರಗಳಲ್ಲಿ ಬರೆಯುವಾಗ ಕನ್ನಡದಲ್ಲೇ ಬರೆಯಬೇಕು. ಫಾರಮ್ಸ್ ಇಂಗ್ಲಿಷ್‌ನಲ್ಲಿ ಅಚ್ಚು ಹಾಕಿಸಿದರೆ, ಅದರ ಹಣ ಕೂಡ ಯಾರು ಜವಾಬ್ದಾರರೋ ಅವರು ಕೊಡಬೇಕಾಗುತ್ತದೆ. ಆದ್ದರಿಂದ ಪತ್ರ ವ್ಯವಹಾರ ಕನ್ನಡದಲ್ಲೇ ಸ್ವಚ್ಛವಾಗಿ ಗ್ರಾಮ ಗ್ರಾಮಗಳಲ್ಲಿ ಜಾರಿಗೆ ತರಬೇಕು.

ಇನ್ನು ಪಶುಸಂಗೋಪನೆ ಬಗ್ಗೆ ವೆಟರಿನರಿ ಡಾಕ್ಟರರಿಗೆ ಹೆಚ್ಚಿಗೆ ಸಂಬಳ ಕೊಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ ಎಂದು ಹೇಳಿದರು. ಅವರು ತಮ್ಮ ಮಾತನ್ನು ಉಳಿಸಿಕೊಂಡು ಹೆಚ್ಚು ಮಾಡಿದ್ದರ ಬಗ್ಗೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ಅನೇಕ ಸದಸ್ಯರು ಹೇಳಿದರು, ಪಶುಸಂಗೋಪನೆಗೆ ಎಷ್ಟು ಖರ್ಚು ಮಾಡಬೇಕಾಗಿತ್ತೋ ಅಷ್ಟು ಖರ್ಚು ಮಾಡುತ್ತಾ ಇಲ್ಲ ಎಂದು. ಈ ವಿಷಯದಲ್ಲಿ ಅಷ್ಟು ಪ್ರಗತಿಯನ್ನು ಸಾಧಿಸಿಲ್ಲ. ಈಗ ಒಬ್ಬ ರೈತನು ಒಂದು ಸಾವಿರ ರೂಪಾಯಿ ಕೊಟ್ಟು ಒಂದು ಜೊತೆ ಎತ್ತುಗಳನ್ನು ತಂದು, ಅದು ಎಲ್ಲಿಯಾದರೂ ಸತ್ತು ಹೋದರೆ, ಅವನ ಸಂಪೂರ್ಣ ವಂಶವೇ ನಾಶವಾಗುವ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಹೆಚ್ಚು ಹೆಚ್ಚು ವೆಟರಿನರಿ ಸೌಲಭ್ಯಗಳನ್ನು ಒದಗಿಸುವಂತೆ ಮಾಡಬೇಕು. ಮತ್ತು ಮಲೆನಾಡು ಪ್ರದೇಶಗಳಲ್ಲಿ ವ್ಯವಸಾಯಕ್ಕೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸತಕ್ಕ ಕೆಲಸಗಳನ್ನು ಸರ್ಕಾರದವರು ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಹೆಚ್ಚು ಅವಕಾಶ ತೆಗೆದುಕೊಂಡಿದ್ದಕ್ಕೆ ಅಧ್ಯಕ್ಷರು ಕ್ಷಮಿಸುತ್ತಾರೆ ಎಂದು ನಂಬಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರುಗಳು ಕಂದಾಯ ಇಲಾಖೆಗೆ ಸಂಬಂಧಪಟ್ಟ ಉಪಯೋಗವಾಗುವಂತಹ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಕೊಟ್ಟ ಎಲ್ಲಾ ಸಲಹೆಗಳನ್ನೂ ಎಲ್ಲೆಲ್ಲಿ ಸಾಧ್ಯವೋ,

(ಶ್ರೀ ಎಂ. ವಿ. ಕೃಷ್ಣಪ್ಪ)

ಅಲ್ಲಲ್ಲಿ ಸರ್ವ ಪ್ರಯತ್ನ ಪಟ್ಟು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿ ಮಾನ್ಯ ಸದಸ್ಯರುಗಳು ಈ ಇಲಾಖೆಯಿಂದ ಏನೇನೂ ಅಪೇಕ್ಷಿಸುತ್ತಾರೋ ಅದನ್ನು ನೆರವೇರಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ. ಈ ಕಂದಾಯ ಇಲಾಖೆಯು ಬಹಳ ಪುರಾತನ ವಾದುದು, ಮತ್ತು ರೈತನಿಗೆ ಬಹಳ ಅವಶ್ಯವಾದುದು. ಈ ಇಲಾಖೆಯು 7-8 ವರ್ಷಗಳಿಂದ ಸಮರ್ಪಕವಾದ ಕೆಲಸಮಾಡುತ್ತಾ ಇಲ್ಲ. ಇದಕ್ಕೆ ಕಾರಣಗಳು ಅನೇಕ ಇವೆ. ಈಗ ಮೈಸೂರು ಸಂಸ್ಥಾನದ ಚರಿತ್ರೆಯಲ್ಲೇ ಇದೊಂದು ಪರ್ವ ಕಾಲ. 5-6 ಸಂಸ್ಥಾನದ ಬೇರೆ ಬೇರೆ ಭಾಗಗಳು ಬಂದು ಒಂದು ಸಂಸ್ಥಾನಕ್ಕೆ ಸೇರಿವೆ. ಒಂದೊಂದು ಭಾಗದ ಕಾನೂನು ಒಂದೊಂದು ತರಹ ಇದೆ. ಇದನ್ನೆಲ್ಲಾ ಏಕರೂಪವಾಗಿ ಮಾಡಿ ಸಂಬಂಧಪಟ್ಟ ಎಲ್ಲಾ ಕಾನೂನುಗಳನ್ನೂ ಬದಲಾವಣೆ ಮಾಡಿ ಒಂದು ಯೂನಿಫಾರ್ಮ್ ಲೆಜಿಸ್ಲೇಶನ್ ತರಬೇಕಾದರೆ ಬಹುಶಃ 4-5 ವರ್ಷವಾದರೂ ಹಿಡಿಯಿತು. ಇನ್ನೂ ಅದರ ಜೊತೆಗೆ ಈ ಕಂದಾಯ ಇಲಾಖೆಗೆ ಅನೇಕ ಬೇರೆ ವಿಧವಾದ ಕೆಲಸಗಳು ಇವೆ. ಭೂಮಿಗೆ ಸಂಬಂಧಪಟ್ಟ ಕಾನೂನುಗಳು ಬದಲಾವಣೆಯಾಗುವ ಕಾಲ ಇದು, ಲ್ಯಾಂಡ್ ರೆವೆನ್ಯೂವಿನಿಂದ ಹಿಡಿದು, ಟೆನೆನ್ಸಿ ಲೆಜಿಸ್ಲೇಶನ್ ಮತ್ತು ಈ ಸರ್ವೆ ಸೆಟ್ಲ್‌ಮೆಂಟ್. ಈ ಸರ್ವೆ ಸೆಟ್ಲ್‌ಮೆಂಟ್ 40 ವರ್ಷಕ್ಕೊಮ್ಮೆ ಬರುವುದು ಇದೇ ಕಾಲಕ್ಕೆ ಬಂತು. ಇವೆಲ್ಲಾ ಒಟ್ಟಿಗೆ ಸೇರಿ ಕೊಂಡು ತಾಲೂಕ್ ಮಟ್ಟದಲ್ಲಾಗಲೀ, ಜಿಲ್ಲಾ ಮಟ್ಟದಲ್ಲಾಗಲೀ, ಹಿಂದೆ ಹತ್ತಾರು ವರ್ಷಗಳ ಹಿಂದೆ ಏನು ಕೆಲಸ ಇತ್ತೊ, ಅದರ 10-12 ಪಾಲಷ್ಟು ಕೆಲಸ ಜಾಸ್ತಿಯಾಗಿದೆ. ಇದರಿಂದ ಏನಾಗಿದೆ ಎಂದರೆ, ಒಬ್ಬ ಸಾವಿರ ರೂಪಾಯಿಯ ಸಾಲಗಾರನು ಅದನ್ನು ಮರುಪಾವತಿ ಮಾಡ ಬಹುದು ಎಂದು ಯೋಚಿಸಬಹುದು, ಆದರೆ ಅದೇ 10-6 ಸಾವಿರಕ್ಕೆ ಏರಿ ಹೋದರೆ, ಅವನಿಗೆ ಅಲ್ಲಿಯೇ ಒಂದು ಅಲಸ್ಯ ಹಿಡಿದುಬಿಡುತ್ತದೆ. ಅದೇ ರೀತಿಯಾದ ಮನೋಭಾವ ಈ ಇಲಾಖೆಯಲ್ಲೂ ಬಂದಿದೆಯೋ ಎಂದು ನನಗನಿಸುತ್ತದೆ. ಈ ಇಲಾಖೆಯಲ್ಲಿ ಅನೇಕ ಪೆಂಡಿಂಗ್ ಕೆಲಸಗಳು ಜಾಸ್ತಿ ಯಾಗಿವೆ. ಇದು ಜಾಸ್ತಿಯಾಗಿಡುವುದರಿಂದ ಈ ಇಲಾಖೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡ ಬೇಕಾದ ಪರಿಸ್ಥಿತಿ ಇತ್ತು. ಈ ದೃಷ್ಟಿಯಿಂದ ಕಂದಾಯ ಇಲಾಖೆಯಲ್ಲಿ ಬುನಾದಿ ರೂಪದಲ್ಲಿದ್ದಂತಹ ವಿಲೇಜ್ ಆಫೀಸರ್ಸ್‌ರಾದ ಶ್ಯಾನುಭೋಗ, ಪಟೇಲ, ತೋಟಿ, ತಳವಾರ, ನೀರಗಂಟಿ ಮೊದಲಾ ದವರು ರೈತನಿಗೆ ನ್ಯಾಯವನ್ನು ಕಂದಾಯ ಇಲಾಖೆಯಿಂದ ಕೊಡತಕ್ಕಂತವರು. ಅಂಥವರನ್ನು ಬದಲಾವಣೆ ಮಾಡಬೇಕೆಂದು ಸರ್ಕಾರ ನಾಲ್ಕು ವರ್ಷದ ಕಾಲ ಯೋಚನೆ ಮಾಡಿ ಒಂದು ಕಾನು ನನ್ನು ತಂದಿದೆ. ತಮಗೆಲ್ಲಾ ಗೊತ್ತಿದ್ದ ಹಾಗೆ ಅದು ಆಗಿದ್ದರೆ ಬಹಳ ಕೆಲಸ ಕಡಿಮೆಯಾಗುತ್ತಿತ್ತು. ಅದು ಕೋರ್ಟಿನಲ್ಲಿ ಹೋದುದರಿಂದ ಬಹಳ ತೊಂದರೆಯಾಗಿದೆ. ಇದರ ಉದ್ದೇಶ ಈ ಅನಾದಿಕಾಲ ದಲ್ಲಿದ್ದಂತಹ ಹೆರಿಡಿಟರಿ ಹಕ್ಕನ್ನು ತೆಗೆದುಹಾಕಿ ನೇರವಾದ ನೇಮಕಯಾಡುವುದು. ಮಾನ್ಯ ಶ್ರೀ ಗೋಪಾಲ ಗೌಡರು ಹೇಳಿದುದರಲ್ಲಿ ಸತ್ಯಾಂಶವಿದೆ. ಈ ವಿಲೇಜ್ ಆಫೀಸರ್ಸ್ ಹಳ್ಳಿಗಳಲ್ಲಿ ಸರಿಯಾಗಿ ಕಂದಾಯವನ್ನು ವಸೂಲು ಮಾಡುತ್ತಾ ಇಲ್ಲ, ಸರಿಯಾಗಿ ಪಹಣಿ ರಿಕಾರ್ಡ್ ಬರೆಯುತ್ತಾ ಇಲ್ಲ, ಕೆಲವು ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಹೋಗಿ ಶಾನುಭೋಗನ ಹತ್ತಿರ ಲೆಕ್ಕಪತ್ರಗಳೇ ಮೊದಲಾದುವುಗಳನ್ನು ಬರೆದು ಮುಗಿಸಿ ತಂದು ಕೊಡಿ ಎಂದು ಹೇಳಿದ್ದು ಉಂಟು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅದು ಹಳೆಯದು ಸ್ವಾಮಿ, ಹೊಸದು ಹೇಳಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸದು ಪಬ್ಲಿಕ್ ಮೀಟಿಂಗಿಗೆ ಬಂದರೆ ಅಲ್ಲಿ ಹೇಳುತ್ತೇನೆ.

ಇದರಿಂದ ಈ ವಿಲೇಜ್ ಆಫೀಸರ್ಸ್ ಒಂದು ತ್ರಿಶಂಕು ಸ್ವರ್ಗದಲ್ಲಿದ್ದರು. ಇನ್ನು ಇದು ಸರಿ ಹೋಗುತ್ತದೆ. ಈಗ ಸುಪ್ರೀಮ್ ಕೋರ್ಟಿನ ಜಜ್‌ಮೆಂಟ್ ಆಗಿದೆ. ಇನ್ನು ಅವರನ್ನೆಲ್ಲಾ ತೆಗೆದು ಹೊಸಬರನ್ನು ನೇಮಕ ಮಾಡುತ್ತೇವೆ. ಅವರು ಮುಂದೆ ಯಾವ ತರಹ ಇರುತ್ತಾರೆ, ಕೆಲಸ ಮಾಡುತ್ತಾರೆ ಎಂಬುದು ಬೇರೆ ಮಾತು. ಆದರೆ ಅವರ ಮೇಲೆ ಒಂದು ಹತೋಟಿ ಸರ್ಕಾರಕ್ಕೆ ಇರುತ್ತದೆ. ಇದರಿಂದ ಇನ್ನು ಮುಂದೆ ರೆವೆನ್ಯೂ ಇಲಾಖೆಯಲ್ಲಿ ಲೆಕ್ಕಪತ್ರಗಳನ್ನು ಸಮರ್ಪಕವಾದ ರೀತಿಯಲ್ಲಿ ಇಡಬಹುದು ಎಂಬುದನ್ನು ನಾನು ಇಲ್ಲಿ ಹೇಳುತ್ತೇನೆ. ಇದನ್ನು ವಾಗ್ದಾನ ಮಾಡಿ ಉಳಿಸಿಕೊಳ್ಳುವ ಶಕ್ತಿ ಸರ್ಕಾರಕ್ಕೆ ಬರುತ್ತದೆ. ಮತ್ತು ಈಗ ಏಕರೀತಿಯ ಯುನಿಫಾರ್ಮ್ ಲೆಜಿಸ್ಲೇಶನ್ ಆಗಿ ಈ ರೆವೆನ್ಯೂ ಇಲಾಖೆಯ ಜೊತೆಗೆ ಬರುವುದು ಸರ್ವೆ ಇಲಾಖೆ. ಈ ಸರ್ವೆ ಇಲಾಖೆಯಲ್ಲಿ 10-12 ವರ್ಷಗಳ ರೆವೆನ್ಯೂ ಸೆಟ್ಲ್‌ಮೆಂಟ್ ನಡೆದು ಈಗ ಮುಗಿಯುತ್ತಾ ಇದೆ. ಈಗ ಸರ್ವೇಯರ್ಸ್ ಆಗಿ 500 ಜನರನ್ನು ತೆಗೆದುಕೊಳ್ಳಬೇಕೆಂದು ಪಿ. ಎಸ್. ಸಿ. ಗೆ ಬರೆದಿದ್ದೇವೆ. ಬಹುಶಃ ಸರ್ಕಾರದವರು ನೇರವಾಗಿ ತೆಗೆದುಕೊಳ್ಳಬೇಕೆಂಬ ಯೋಚನೆ ಮಾಡುತ್ತಿದೆ. ಅವರು

ಅದನ್ನು ಪಬ್ಲಿಷ್ ಮಾಡಬೇಕು, ಅವರಿಗೆ ಸಮಯ ಕೊಡಬೇಕು. 500 ನೇಮಕ ಮಾಡಬೇಕಾದರೆ, ಅದಕ್ಕೆ 5,000 ಅರ್ಜಿಗಳು ಬರುತ್ತವೆ. ಒಬ್ಬೊಬ್ಬನಿಗೆ ಇಂಟರ್‌ವ್ಯೂಗೆ ಕಡಿಮೆ ಪಕ್ಷ 6 ನಿಮಿಷವಾದರೂ ತೆಗೆದರೆ, ಪಿ. ಎಸ್. ಸಿ. ಗೆ ಆರು ತಿಂಗಳು ಆದರೂ ಆಗಬಹುದು. ಅವರೆಲ್ಲರೂ ಒಂದೇ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅನೇಕ ಇಲಾಖೆಗಳ ಕೆಲಸಗಳು ಅವರಿಗೆ ಇರುತ್ತವೆ. ಫೋಡಿ ಕೆಲಸ ಪೂರ್ತಿಯಾಗುತ್ತಿದೆ. ರೈತನಿಗೆ ಇರುವ ಕಿರುಕುಳವನ್ನು ತಪ್ಪಿಸಬೇಕಾದರೆ ಸಾಧ್ಯವಾದಷ್ಟುಮಟ್ಟಿಗೂ ಸರ್ವೆ ಕೆಲಸ ನಡೆಯಬೇಕು. ಅದಾಗಬೇಕಾದರೆ 500 ಸರ್ವೇಯರುಗಳಿಗೆ ಸಾಧ್ಯವಾದಷ್ಟು ಬೇಗ ತರಬೇತಿಯನ್ನು ಕೊಟ್ಟು ಸರ್ವೆ ಕೆಲಸಕ್ಕೆ ಹಾಕಬೇಕಾಗುತ್ತದೆ. ಆ ಕೆಲಸ ಆಗುವವರೆಗೂ ರೈತರಿಗೆ ಕಿರುಕುಳ ಇದ್ದೇ ಇರುತ್ತದೆ. ರೈತನಿಗೆ ಭೂಮಿಯ ಮೇಲೆ ಸಾಲ ಸೋಲವನ್ನು ಸರ್ಕಾರ ಕೊಡುತ್ತದೆ. ಹಾಗೆ ಕೊಡುವಾಗ ಪ್ರತಿಯೊಂದಕ್ಕೂ ಖಾತೆ ಅವನ ಹೆಸರಿನಲ್ಲಿರಬೇಕು. ಇಲ್ಲದೆ ಇದ್ದರೆ ಅವನಿಗೆ ಸರ್ಕಾರದಲ್ಲಿ ಸಾಲ ಸಿಕ್ಕುವುದಿಲ್ಲ. ಇಂಥ ನೂರಾರು ಕಿರುಕುಳಗಳಿಗೆ ರೈತ ಸಿಕ್ಕಿದ್ದಾನೆ. ಒಟ್ಟಿನಲ್ಲಿ ನಾವು ಪ್ರಜಾಪ್ರಭುತ್ವವನ್ನೇ ಇದಕ್ಕಾಗಿ ಟೀಕಿಸಬೇಕು ಎಂದು ನನಗನ್ನಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಕೆಲವು ಮೂಲಭೂತವಾದ ಹಕ್ಕುಗಳಿವೆ. ಯಾರಿಗಾದರೂ ಅನಾನುಕೂಲವಾಗಿದೆ ಎಂದು ಭಾವನೆ ಬಂದರೆ ಅವನು ಕೋರ್ಟಿಗೆ ಹೋಗುತ್ತಾನೆ. ಅದು ತೀರ್ಮಾನವಾಗಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಹೀಗೆ ನಾನಾ ಕಾರಣಗಳಿಂದ ರೈತನಿಗೆ ಸಂಬಂಧಪಟ್ಟ ಕಾರ್ಯಗಳೂ ನಿಧಾನವಾಗುತ್ತವೆ. ಆದರೆ ಈಗ ಅಂಥ ಸ್ಥಿತಿ ಇಲ್ಲ. ಸರ್ವೆ ಇಲಾಖೆಯಲ್ಲಿ ಮುಂಚೆ ಸರಿಯಾದ ಪ್ರೋತ್ಸಾಹ ಇರಲಿಲ್ಲ. ಈಗ ಅನೇಕ ತರಹ ಪ್ರಮೋಷನ್ ಕೊಡುವುದಕ್ಕೆ ಅವಕಾಶವಾಗಿರುವುದರಿಂದ ಅಲ್ಲಿ ಕೆಲಸ ಮಾಡುವವರಿಗೂ ಉತ್ಸಾಹ ಬಂದಿದೆ. ಇನ್ನು ಮುಂದೆ ಕೆಲಸ ಸುಗಮವಾಗಿ ನೆರವೇರುತ್ತದೆ ಎನ್ನುವ ಭಾವನೆ ಇದೆ.

ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಲಂಚರುಷುವತ್ತುಗಳು ಪೂರ್ವದಿಂದಲೂ ಇರುವುದನ್ನು ಕೇಳುತ್ತಿದ್ದೇವೆ. ಅದಕ್ಕೆ ಮುಖ್ಯವಾದ ಒಂದು ಕಾರಣವೇನಿತ್ತು ಎಂದರೆ ಸಬ್ ರಿಜಿಸ್ಟ್ರಾರ್ ಆಗಿ ಕೆಲಸಕ್ಕೆ ಸೇರಿದವನು ಸಬ್‌ರಿಜಿಸ್ಟ್ರಾರ್ ಆಗಿಯೇ ರಿಟೈರ್ ಆಗುತ್ತಿದ್ದ. ಅವರಿಗೆ ಯಾವ ಪ್ರಮೋಷನ್‌ಗಳೂ ಸಿಕ್ಕುವುದಕ್ಕೆ ಅವಕಾಶ ಇರಲಿಲ್ಲ. ಒಂದೇ ಹುದ್ದೆಯಲ್ಲಿಯೇ ಅವರು ಇರಬೇಕಾಗಿದ್ದುದರಿಂದ ನಮಗೆ ಪ್ರಮೋಷನ್ ಬೇಡವೇ ಬೇಡ ಎನ್ನುವ ರೀತಿಯಲ್ಲಿ ಅವರ ಮನಸ್ಸು ಬಂದು ಲಂಚ ರುಷುವತ್ತುಗಳಿಗೆ ಅವಕಾಶವಾಗಲು ಇದು ಒಂದು ಕಾರಣ ಎಂದು ತಜ್ಞರು ಹೇಳುತ್ತಾರೆ. ಅದನ್ನು ತಪ್ಪಿಸಬೇಕು ಎನ್ನುವ ಉದ್ದೇಶದಿಂದ ಪ್ರಮೋಷನ್‌ಗಳನ್ನು ಕೊಡುವುದಕ್ಕೆ ಅವಕಾಶ ಮಾಡಿ 119 ಗೆಜೆಟೆಡ್ ಹುದ್ದೆಗಳನ್ನು ಮಾಡಿ ಏಳೆಂಟು ಅಸಿಸ್ಟೆಂಟ್ ಕಮಿಷನರುಗಳ ಹುದ್ದೆಗಳನ್ನೂ, ಇನ್‌ಸ್ಪೆಕ್ಟರ್ ಆಫ್ ಸ್ಟಾಂಪ್ಸ್ ಎಂದು ಕೆಲವು ಹುದ್ದೆಗಳನ್ನೂ ನಾಲ್ಕೈದು ತಿಂಗಳ ಹಿಂದೆ ಮಾಡಿದ್ದೇವೆ. ಒಟ್ಟಿನಲ್ಲಿ ಆ ಇಲಾಖೆಯಲ್ಲಿ ಉತ್ಸಾಹ ಬಂದಿದೆ. ಅವರೂ ಕೂಡ ಉತ್ಸಾಹದಿಂದ ಕೆಲಸ ಮಾಡುವ ಭರವಸೆಯನ್ನು ಕೊಟ್ಟಿದ್ದಾರೆ.

ನಮಗೆ ಕೆಲವು ಡಿನಾಮಿನೇಷನ್ ಸ್ಟಾಂಪುಗಳು ಬೇಕಾಗಿವೆ, ಅವುಗಳ ಅಭಾವವಿದೆ. ಇವು ನಾಸಿಕದಲ್ಲಿ ಅಚ್ಚಾಗಿ ಬರಬೇಕು. ನಾವು ಇವುಗಳನ್ನು ಮಾಡುವುದಕ್ಕಾಗುವುದಿಲ್ಲ. ಸ್ಟಾಂಪುಗಳ ಅಭಾವ ಜಾಸ್ತಿಯಾಗಿರುವುದಕ್ಕೆ ನಮ್ಮಲ್ಲಿ ಜನಸಂಖ್ಯೆ ಹೆಚ್ಚಾಗಿರುವುದೂ ಒಂದು ಕಾರಣ. ಜನಸಂಖ್ಯೆ ಜಾಸ್ತಿ ಆದಷ್ಟೂ ಇರುವ ಭೂಮಿಯನ್ನು ಹಂಚಿಕೊಳ್ಳಬೇಕು. ಇದರಿಂದ ಕೆಲವು ಜಗಳಗಳು ಬರುತ್ತವೆ. ಆಗ ಟ್ರಾನ್ಸ್‌ಫರ್ಸ್ ಇವೆಲ್ಲ ಜಾಸ್ತಿಯಾಗಿ ಸ್ಟಾಂಪ್ ಪೇಪರುಗಳ ಅಭಾವ ಹೆಚ್ಚಾಗಲು ಒಂದು ಕಾರಣವಾಗಿದೆ. ಸ್ಟಾಂಪ್ ಪೇಪರುಗಳ ಅಭಾವವನ್ನು ಆದಷ್ಟು ಬೇಗ ಪರಿಹಾರ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ರೆವಿನ್ಯೂ, ಸರ್ವೆ, ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಸಾಧ್ಯವಾದಷ್ಟೂ ರೈತರಿಗೆ ಕಿರುಕುಳವನ್ನು ಕಡಮೆ ಮಾಡಿ ಆಡಳಿತ ಸುಗಮವಾಗಿ ನಡೆಯುವುದಕ್ಕೆ ಏನು ಮಾಡಬೇಕೋ ಆ ಪ್ರಯತ್ನಗಳನ್ನು ನಾವು ಈಗ ಪ್ರಾರಂಭ ಮಾಡಿದ್ದೇವೆ. ನಾವು ಆಡಳಿತ ದೃಷ್ಟಿಯಿಂದ ಕೆಲವು ತಿದ್ದುಪಾಟುಗಳನ್ನು ಮಾಡಿ ಸಾಧ್ಯವಾದಷ್ಟೂ ಸರಿಪಡಿಸುತ್ತಿದ್ದೇವೆ. People will get the Government they deserve ಎನ್ನುವ ನಾಣ್ನುಡಿ ಸತ್ಯವಾಗುತ್ತದೆ. ನನ್ನ ಒಂದು ಇಲಾಖೆಯನ್ನು ನಾನು ಸರಿಮಾಡುತ್ತೇನೆ, ಹೆದರಿಸಿ, ಬೆದರಿಸಿ ಸರಿ ಮಾಡುತ್ತೇನೆ ಎಂದು ಹೋದರೆ ಎಷ್ಟು ದಿವಸ ಹಾಗೆ ಇರುತ್ತದೆ? ಪತ್ರಿಕೆಗಳಲ್ಲಿ ಬರುವ ವರದಿಗಳನ್ನು ನೋಡಿ ಸಂತೋಷಪಡಬೇಕಾಗುತ್ತದೆ. ಆ ಒಂದೇ ಇಲಾಖೆಯನ್ನು ಸರಿಪಡಿಸುವುದು ಎಂದರೆ ಆಗುವುದಿಲ್ಲ. ಜನರೂ ಸರಿಹೋಗಬೇಕು.

ಈಚೆಗೆ ಭೂಮಿ ಭಾಗ ಇಟ್ಟುಕೊಳ್ಳುವುದು ಜಾಸ್ತಿಯಾಗಿದೆ. ಹಂಚುವುದಕ್ಕೆ ಇದ್ದ ಭೂಮಿ ಎಲ್ಲ ಮುಗಿದುಹೋಯಿತು. ಕೆಲವು ಜಿಲ್ಲೆಗಳಲ್ಲಿ ಹಂಚುವುದಕ್ಕೆ ಭೂಮಿ ಇಲ್ಲ. ಶಿವಮೊಗ್ಗ, ಹಾಸನ ಮೊದಲಾದ ಮಲೆನಾಡು ಜಿಲ್ಲೆಗಳ ಹೊರತು ಉಳಿದ ಜಿಲ್ಲೆಗಳಲ್ಲಿ ಹಂಚುವುದಕ್ಕೆ ಭೂಮಿ ಇಲ್ಲ. ಇರುವ ಭೂಮಿಯನ್ನೇ ಎಲ್ಲರೂ ಹಂಚಿಕೊಂಡು ಹೊಡೆದಾಟ ಮಾಡುತ್ತಿದ್ದಾರೆ. ಜನಗಳಲ್ಲಿ ಮೋಸ, ದಗಾಬಾಜಿ ಬಂದು ಬೇರೆಯವರ ಜಮೀನನ್ನು ಉತ್ತುಕೊಳ್ಳುವುದಕ್ಕೆ ಬರುತ್ತಾರೆ. ಆಗ ಅಧಿಕಾರಿಗಳೂ ತಪ್ಪು ದಾರಿಗೆ ಹೋಗುತ್ತಾರೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಟಿ. ಟಿ. ಕೇಸುಗಳ ಸಂಬಂಧವಲ್ಲಿ ಸರ್ಕಾರ ಒಂದು ತೀರ್ಮಾನ ಮಾಡಿದೆ. ಅಂಥದ್ದನ್ನೆಲ್ಲ ರೆಗ್ಯುಲರೈಸ್ ಮಾಡಬೇಕೆಂದು ಮಂತ್ರಿಮಂಡಲ ತೀರ್ಮಾನ ತೆಗೆದುಕೊಂಡಿದೆ. ಆದರೆ ಅದನ್ನೇ ಫೈನಲ್ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಒಂದು ಸಲ ರೆಗ್ಯುಲರೈಸ್ ಮಾಡಿದರೆ ಅದೇ ಅಂತಿಮವಾಗುವುದಿಲ್ಲ. ಅವಾವ ಮಾರನೆಯ ದಿನವೇ ಸರ್ಕಾರಿ ಜಮೀನು ಎಲ್ಲಿದೆಯೋ ಅಲ್ಲಿ ಮತ್ತೆ ಬಗರ್ ಹುಕುಂ ಸಾಗುವಳಿಗೆ ಪ್ರಾರಂಭ ಮಾಡುತ್ತಾರೆ. ಟಿ. ಟಿ. ಇದ್ದೇ ಇರುತ್ತದೆ, ಅದನ್ನು ತಪ್ಪಿಸುವುದು ಕಷ್ಟ. ಮೈಸೂರು ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆ ಒಂದರಲ್ಲೇ ಆರು ಸಾವಿರ ಟಿ. ಟಿ. ಕೇಸುಗಳಿವೆ. ಅವನ್ನು ರೆಗ್ಯುಲರೈಸ್ ಮಾಡುತ್ತೇವೆಂದರೆ ಮಾರನೇ ದಿವಸವೇ ಸರ್ಕಾರಿ ಜಮೀನನ್ನು ಉತ್ತುಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ರೈತರು ತಮ್ಮ ಭೂಮಿ ಎಷ್ಟಿದೆ, ಸರ್ಕಾರ ನ್ಯಾಯವಾಗಿ ಎಷ್ಟು ಮಂಜೂರು ಮಾಡಿದೆ ಅಷ್ಟನ್ನು ಉತ್ತುಕೊಳ್ಳುವುದು ಅಗತ್ಯ, ಅದು ಅವನ ಹಕ್ಕು. ಆದರೆ ಸಾಕಾದಷ್ಟು ಉತ್ತುಕೊಳ್ಳೋಣ ಎನ್ನುವ ಮನೋಭಾವನೆ ಜನರಲ್ಲಿ ಬೆಳೆದು ಬರುತ್ತಿದೆ. ಆದುದರಿಂದ ಟಿ. ಟಿ. ಇಲ್ಲದಂತೆ ಅದನ್ನು ಕೊನೆ ಮಾಡುತ್ತೇವೆಂದು ಧೈರ್ಯವಾಗಿ ಹೇಳುವುದಕ್ಕಾಗುವುದಿಲ್ಲ. ಇದನ್ನು ಹೇಗೆ ಬಗೆಹರಿಸಬೇಕು ಎನ್ನುವ ವಿಚಾರದಲ್ಲಿ, ಮಂತ್ರಿಮಂಡಲದಲ್ಲಿ ತೀರ್ಮಾನವಾಗಿದ್ದರೂ ಕೂಡ, ನಾನು ರೆವಿನ್ಯೂ ಸೆಕ್ರೆಟರಿಯವರಲ್ಲಿ ಚರ್ಚೆ ಮಾಡಿ ಯಾವ ಯಾವ ಸಂದರ್ಭಗಳಲ್ಲಿ ರೆಗ್ಯುಲರೈಸ್ ಮಾಡುವುದಕ್ಕಾಗುತ್ತದೆ, ಎನ್ನುವ ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ. ಅನಧಿಕೃತವಾಗಿ ಉತ್ತುಕೊಂಡಿರುವ ರೈತರಿಗೆಲ್ಲ ಅವರು ಉತ್ತುಕೊಂಡಿರುವ ಜಮೀನನ್ನು ಕೊಟ್ಟು, ಅವರಿಗೆ ಖಾಯಂ ಮಾಡುವುದಾದರೆ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾನೆ ಎನ್ನುವುದರ ಬಗ್ಗೆ ರಿಕಾರ್ಡುಗಳನ್ನು ಸೃಷ್ಟಿಮಾಡಬಲ್ಲ ಕದೀಮರು ನಮ್ಮಲ್ಲಿದ್ದಾರೆ. ಎರಡು ವರ್ಷಗಳ ಹಿಂದಿನಿಂದ ರಿಕಾರ್ಡುಗಳನ್ನು ಕಲ್ಪನೆ ಮಾಡಿ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸ್ಮಶಾನಗಳನ್ನೆಲ್ಲ ಉತ್ತುಕೊಂಡು, ರಸ್ತೆಗಳನ್ನೆಲ್ಲ ಉತ್ತುಕೊಂಡು, ಬೆಟ್ಟದ ಮೇಲೆ ಕೂಡ ಸ್ವಲ್ಪವೂ ಜಮೀನನ್ನು ಬಿಡದೆ ಉತ್ತುಕೊಂಡಿದ್ದಾರೆ. ಕೆಲವು ಕಡೆ ದೇವಸ್ಥಾನದ ಅಂಗಳವನ್ನು ಕೂಡ ಉತ್ತುಕೊಂಡಿದ್ದಾರೆ. ನಾವು ಪ್ರವಾಸ ಹೋದಾಗ ಇಂಥ ಅರ್ಜಿಗಳು ಬರುತ್ತವೆ, ಅದನ್ನೆಲ್ಲ ನೋಡಿ ನನಗೆ ಆಶ್ಚರ್ಯವಾಗುತ್ತದೆ.

ಒಂದು ದಿವಸಕ್ಕೆ ನನಗೆ 300-400 ಅರ್ಜಿಗಳು ಬರುತ್ತವೆ. ನಾನು ಆಫೀಸಿನಲ್ಲಿರುವಾಗ ಅರ್ಜಿಗಳನ್ನು ತಂದು ಕೊಡುತ್ತಾರೆ, ಬೇರೆ ಮಂತ್ರಿಗಳು ಪ್ರವಾಸ ಹೋದಾಗ ನನಗೆ ಸಂಬಂಧಪಟ್ಟ ಅರ್ಜಿಗಳನ್ನು ಕೊಡುತ್ತಾರೆ, ಪೋಸ್ಟ್ ಮೂಲಕ ಅರ್ಜಗಳು ಬರುತ್ತವ. ಹೀಗೆ ಸುಮಾರು 300-400 ಅರ್ಜಿಗಳು ಬರುತ್ತವೆ. ಇವುಗಳನ್ನೆಲ್ಲ ನೋಡಿ ಸೈನ್ ಮಾಡಲಿಕ್ಕೆ ಒಂದೆರಡು ಗಂಟೆಗಳ ಕಾಲ ಹಿಡಿಯುತ್ತದೆ. ಒಂದೊಂದಕ್ಕೂ ಒಂದೊಂದು ಫೈಲ್ ಬಿಲ್ಡ್ ಅಪ್ ಮಾಡಬೇಕು. ಅವುಗಳಲ್ಲಿ ಬಹುಮಟ್ಟಿಗೆ ರಿಜೆಕ್ಟ್ ಆಗುತ್ತವೆ. ಹೀಗೆ ರಿಜೆಕ್ಟ್ ಆಗಿರುವುದಕ್ಕೆ ಮತ್ತೆ ಅರ್ಜಿಯನ್ನು ಕೊಡುತ್ತಾರೆ. ಆಗ ಅದಕ್ಕೆ ಸಂಬಂಧಪಟ್ಟ ಫೈಲನ್ನು ತೆಗೆದು ಪುನಃ ಮೊದಲಿನಂತೆ ಅದರ ಕೆಲಸ ಮಾಡಬೇಕು. ಒಟ್ಟಿನಲ್ಲಿ ಈ ಇಲಾಖೆಯಲ್ಲಿ ಕೆಲಸ ವಿಳಂಬವಾಗುವುದಕ್ಕೆ ಅರ್ಜಿಗಳನ್ನು ಗುಜರಾಯಿಸಿಕೊಳ್ಳುವ ಪದ್ಧತಿ ಎಂದರೆ ತಪ್ಪಾಗಲಾರದು. ಈ ರೀತಿ ಅರ್ಜಿ ಗುಜರಾಯಿಸುವ ಪದ್ಧತಿ ಎಷ್ಟು ಬೇಗ ಹೋದರೆ ಅಷ್ಟು ಬೇಗ ಇಲಾಖೆಯಲ್ಲಿ ದಕ್ಷತೆಯನ್ನು ತರಬಹುದು. ವಿಧಾನ ಸಭೆ ನಡೆಯುವಾಗ ರೈತರ ಒತ್ತಾಯಕ್ಕೆ ಕಟ್ಟು ಬಿದ್ದು ಅನೇಕ ಸದಸ್ಯರು ನನ್ನಲ್ಲಿ ಅರ್ಜಿಗಳನ್ನು ಕೊಡುತ್ತಾರೆ. ಅವು ನನ್ನ ಆಫೀಸು ಬಿಟ್ಟು ಹೋಗಬೇಕಾದರೆ ಏಳೆಂಟು ದಿನಗಳಾಗುತ್ತವೆ. ಹಿಂದಿನಿಂದ ಉಳಿದಿರುವುದನ್ನು ಮುಗಿಸಿ ಆ ಮೇಲೆ ಹೊಸದಾಗಿ ಕೊಟ್ಟ ಅರ್ಜಿಗಳನ್ನು ತೆಗೆದುಕೊಂಡು ಅವುಗಳ ವಿಲೇವಾರಿ ಮಾಡಬೇಕಾದರೆ ಎಷ್ಟು ದಿನಗಳಾಗುತ್ತವೆ ಎನ್ನುವುದನ್ನು ಮಾನ್ಯ ಸದಸ್ಯರು ಊಹೆ ಮಾಡಬಹುದು. ನನ್ನ ಆಫೀಸಿನಲ್ಲಿಯೇ ಈ ರೀತಿ ಆಗುವಾಗ ಡಿವಿಜನಲ್ ಕಮಿಷನರ ಆಫೀಸಿನಲ್ಲಿ ಹೇಗೆ ನಡೆಯುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಅರ್ಜಿಗಳು ಕಡಮೆಯಾದರೆ ಅದರಿಂದ ಇಲಾಖೆಯಲ್ಲಿ ದಕ್ಷತೆ ಹೆಚ್ಚಾಗುತ್ತದೆ ಎಂದು ನಾನು ಮಾನ್ಯ ರೇವಣ್ಣಸಿದ್ದಪ್ಪನವರಿಗೆ ಹೇಳಬಯಸುತ್ತೇನೆ.

ಶ್ರೀಮಾನ್ ಅಣ್ಣಾರಾಯರು ಮಾತನಾಡುವಾಗ ಹೇಳಿದರು, ಕಂದಾಯದ ಇಲಾಖೆಗೆ ಬಹಳ ಖರ್ಚಾಗುತ್ತಿದೆ, ವಸೂಲು ಮಾಡುವುದು ನಾಲ್ಕೂವರೆ ಕೋಟಿ ರೂಪಾಯಿ, ಖರ್ಚು ಮಾಡುವುದು ಎರಡೂವರೆ ಕೋಟಿ ರೂಪಾಯಿ ಎಂದು. ಇದನ್ನು ಬೇರೆ ಇಲಾಖೆಗಳಿಗೂ ಹೋಲಿಸಬೇಕು. ರೆವಿನ್ಯೂ ಇಲಾಖೆಯಲ್ಲಿ ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರು, ತಹಸೀಲ್ದಾರರು, ಇವರ ಸಿಬ್ಬಂದಿ, ಶಾನುಭೋಗರು, ಪಟೇಲರು, ತೋಟಿ ತಳವಾರರು ಇವರ ಸಂಬಳವೆಲ್ಲ ಸೇರಿ ಎರಡೂವರೆ ಕೋಟಿ ರೂಪಾಯಿ ಆಗುತ್ತದೆ. ಇವರೆಲ್ಲ ಕಂದಾಯವನ್ನು ವಸೂಲಿ ಮಾಡುವ ಅಧಿಕಾರಿಗಳು ಮಾತ್ರವಲ್ಲ. ಅವರು ಎಲ್ಲ ಕೆಲಸಗಳನ್ನೂ ಮಾಡುತ್ತಾರೆ.

6-00 P.M.

ರೆವಿನ್ಯೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ರೆವಿನ್ಯೂ ಇಲಾಖೆ ಕೆಲಸವನ್ನು ಮಾತ್ರ ಮಾಡುತ್ತಿಲ್ಲ. ಎಲ್ಲಾ ಇಲಾಖೆಗಳ ಕೆಲಸವನ್ನೂ ಮಾಡುತ್ತಿದ್ದಾರೆ. 4-5 ಕೋಟಿ ರೂಪಾಯಿಗಳ ಕಂದಾಯ ಜೊತೆಗೆ ಕೋಟ್ಯಾಂತರ ರೂಪಾಯಿಗಳಷ್ಟು ರೆವಿನ್ಯೂ ಬರತಕ್ಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಶ್ರೀ ಕೇಶವ ಮೂರ್ತಿಗಳು ಇರತಕ್ಕ ಊರಿನಲ್ಲಿ ಯಾರಾದರೂ ಸತ್ತರೆ ತಹಸೀಲ್ದಾರರನ್ನು ಕರೆಯಿರಿ ಎಂದು ಹೇಳುತ್ತಾರೆ. ಈರೀತಿ ರೆವೆನ್ಯೂ ಇಲಾಖೆ ಅನೇಕ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಅದಕ್ಕೋಸ್ಕರ ಹಣಕಾಸಿನ ರೆಕ್ಕದಲ್ಲಿ ವಸೂಲಿ ಮಾಡತಕ್ಕ ಸಿಬ್ಬಂದಿಗೆ ಬಹಳ ಪರ್ಸೆಂಟ್ ಖರ್ಚು ಮಾಡುತ್ತಿದ್ದಾರೆಂದು ಶ್ರೀಮಾನ್ ಅಣ್ಣಾರಾವ್ ಅವರು ಹೇಳಿದ ಒಂದು ಭಾವನೆ ಸರಿಯಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಇನ್ನು ಅನಿಮಲ್ ಹಸ್ಬೆಂಡ್ರಿ ವಿಷಯವಾಗಿ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಕೆಲಸಗಳನ್ನು ಆ ಇಲಾಖೆ ಮಾಡುತ್ತಿದೆ. ಬೆಂಗಳೂರು ಡೈರಿ ಕಾಮಧೇನು ಕಲ್ಪವೃಕ್ಷ ಇದ್ದ ಹಾಗೆ ಇದೆ. ತಿಪಟೂರು ತಾಲ್ಲೂಕಿನಲ್ಲಿ ಬೆಳೆಯುವ ತೆಂಗಿನ ಮರದಿಂದ 8 ವರ್ಷಗಳಾದರೂ ಏನೂ ಪ್ರತಿಫಲ ಬರುವುದಿಲ್ಲ. ಪ್ರತಿಫಲ ಬರಲಿಲ್ಲವೆಂದು ಸುಮ್ಮನಿರಬಾರದು. ತೆಂಗಿನ ಗಿಡ ನೆಟ್ಟಮೇಲೆ ಒಂದನೇ ವರ್ಷ ಏನೂಬರುವುದಿಲ್ಲ. ಎರಡು-ಮೂರು-ನಾಲ್ಕು-ಐದು-ಆರನೇ ವರ್ಷಕ್ಕೆ ಕಾಯಿ ಬರುತ್ತದೆ. ಆ ಮೇಲೆ ಕಲ್ಪತರುವಾಗಿ ಆಗುತ್ತದೆ. ಹಾಗೆಯೇ ಮಿಲ್ಕ್ ಡೈರಿಯೂ ಸಹ ಪ್ರಪಂಚದಲ್ಲಿ ಎಲ್ಲೇ ನೋಡಲಿ ಯಾವ ಡೈರಿಯೂ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಮಿಲ್ಕ್ ಡೈರಿಯೇನೋ ಅಲ್ಲಲ್ಲಿ ಆಗುತ್ತಲೇ ಇದೆ. ಆದರೆ ಈ ಬೆಂಗಳೂರು ಡೈರಿ ಲಾಭದಾಯಕವಾಗಿ ಕೆಲಸ ಮಾಡಬೇಕಾದರೆ ಖಂಡಿತವಾಗಿ ಲಕ್ಷ ಪೌಂಡುಗಳಷ್ಟು ಹಾಲು ಬರಬೇಕು. ಅಷ್ಟು ಹಾಲು ಈಗ ಎಲ್ಲಿದೆ ? ಹಾಲು ಉತ್ಪಾದನೆಯಾಗಬೇಕಾದರೆ ಡೈರಿಗಳಾಗಬೇಕು. ಡೈರಿಗಳನ್ನು ಚಿಕ್ಕದಾಗಿ ಕೊಡುವುದಕ್ಕಾಗುವುದಿಲ್ಲ. ಇಲ್ಲಿ 1¼ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿಲ್ಲ. ಯೂನಿಸೆಫ್‌ನವರು 40 ಲಕ್ಷ ರೂಪಾಯಿಗಳಷ್ಟು ಮೆಷಿನರಿಗಳನ್ನು ಕೊಟ್ಟಿದ್ದಾರೆ. ಮಿಕ್ಕಿದ್ದನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇನ್ನು 5-6 ವರ್ಷಗಳಲ್ಲಿ ಒಂದು ದೊಡ್ಡ ಡೈರಿಯನ್ನು ಮಾಡಬೇಕೆಂದಿದ್ದೇವೆ. ಸುತ್ತಲೂ ಹಾಲಿನ ಡೈರಿಯನ್ನು ಮಾಡಬೇಕೆಂದಿದ್ದೇವೆ. ಮದ್ರಾಸ್ ಮಾಧವರಾಂ ಡೈರಿಗೆ ನಮ್ಮ ಡೈರಿಯನ್ನು ಹೋಲಿಸಿದರೂ ನಮ್ಮ ಡೈರಿಯೇ ಅದಕ್ಕಿಂತ ಚೆನ್ನಾಗಿ ನಡೆಯುತ್ತಿದೆ. ಇವತ್ತು ಆ ಮದ್ರಾಸ್ ಡೈರಿಯಲ್ಲಿ ಹಾಲು ನಮ್ಮಷ್ಟು ಉತ್ಪಾದನೆಯಾಗುತ್ತಾ ಇಲ್ಲ. ಈ ವರ್ಷ ಮಳೆ ಇಲ್ಲದ ಕಾರಣ ದನಗಳಿಗೆ ಸಾಕಷ್ಟು ಮೇವು ಇಲ್ಲ. ಹುಲ್ಲು ಇಲ್ಲ, ಹಸೀ ಹುಲ್ಲು ಎಲ್ಲಿ ಸಿಗುತ್ತದೆಂಬುದೇ ಗೊತ್ತಿಲ್ಲ. ನೀರಿಗೆ ತೊಂದರೆ ಬಂದಿರುವಾಗ ಇನ್ನು ಹುಲ್ಲು ಎಲ್ಲಿ ಸಿಗುತ್ತದೆ? ಹುಲ್ಲಿಗೆ ತುಂಬಾ ಅಭಾವ ಈಗ ಬಂದಿರುವಾಗಲೂ ನಮ್ಮ ಡೈರಿಯಲ್ಲಿ ಈಗ 20 ಸಾವಿರ ಲೀಟರ್ ಹಾಲು ದೊರೆಯುತ್ತಿದೆ. ಅದರಲ್ಲಿ 16 ಸಾವಿರ ಲೀಟರನ್ನು ಬೆಂಗಳೂರಿನಲ್ಲಿ ಹಂಚುತ್ತಿದ್ದೇವೆ. ಇದಕ್ಕಾಗಿ 16 ಅಥವಾ 18 ಬೂತ್‌ಗಳನ್ನು ನಿರ್ಮಾಣ ಮಾಡಿದ್ದೇವೆ. ಆದ್ದರಿಂದ ಬೆಂಗಳೂರು ಡೈರಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದೇ ರೀತಿ ಮಂಗಳೂರಿನಲ್ಲಿಯೂ ಹಾಲಿನ ಕೇಂದ್ರಗಳು ಜಾಸ್ತಿಯಾಗುತ್ತಿವೆ. ಅಲ್ಲಿ ಮುನಿಸಿಪಾಲಿಟಿಯೂ ಸಹ ಈ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ರಸ್ತೆ ಕೆಲಸ ಬಹಳ ಚೆನ್ನಾಗಿ ಅಲ್ಲಿ ನಡೆಯುತ್ತಿರುವುದರಿಂದ ಮಂಗಳೂರಿನಲ್ಲಿ ಒಳ್ಳೆಯ ಭವಿಷ್ಯ ಇದೆಯೆಂದು ಹೇಳುತ್ತೇನೆ. ಡೈರಿ ಯೋಜನೆಗಳು ಈಗ ಕಾರ್ಯಗತವಾಗುತ್ತಿವೆ, ಶಿವಮೊಗ್ಗಾ--ಭದ್ರಾವತಿ, ಹುಬ್ಬಳ್ಳಿ-ಧಾರವಾಡ-ಈ ಪ್ರಾಂತಗಳಲ್ಲಿ ಒಳ್ಳೆಯ ಡೈರಿಗಳು ಪ್ರಾರಂಭವಾಗಲಿವೆ. ಇದು ಇನ್ನುಮುಂದೆ ಮೈಸೂರು ಸಂಸ್ಥಾನದಲ್ಲಿ ಚೆನ್ನಾಗಿ ನಡೆಯುತ್ತದೆ. ಇನ್ನು ಈ ಇಲಾಖೆಯಲ್ಲಿ ಕೆಲವು ರಿಟ್ ಅರ್ಜಿಗಳು ಇದ್ದ ಕಾರಣ ಕೆಲವು ಪ್ರೊಮೋಷನ್‌ಗಳನ್ನು ಮಾಡಲಿಕ್ಕೆ ಆಗಲಿಲ್ಲ. ಈ ಇಲಾಖೆಯಲ್ಲಿ ಕೆಲಸಮಾಡಲು ನೌಕರರಿಗೆ ಒಂದು ಉತ್ಸಾಹ ಬರುವಂತೆ ಸಂಬಳ ಸಾರಿಗೆ ಇರಬೇಕೆಂದು ಹೇಳಿದ್ದಾರೆ. ವೆಟರಿನರಿ ಗ್ರ್ಯಾಜುಯೇಟ್ಸ್ ಇತ್ತೀಚೆಗೆ ಸ್ಟ್ರೈಕ್ ಮಾಡಿದರು ಎಂಬುದಾಗಿ ಒಬ್ಬ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಅವರು ಆ ರೀತಿ ಮುಷ್ಕರ ಹೂಡಿದ್ದರಿಂದ ಅವರ ಸಂಬಳ ಸಾರಿಗೆ ಪ್ರಶ್ನೆಯೊಂದೇ ಅಲ್ಲ, ಇನ್ನೂ ಇತರ ಎಲ್ಲಾ ಟೆಕ್ನಿಕಲ್ ಸಬ್ಜೆಕ್ಟ್ಸ್ ಸಹ ಸರ್ಕಾರ ತೀರ್ಮಾನ ಮಾಡಿದೆ. ಈಗ ಅವರುಗಳಿಗೆ 50 ರೂಪಾಯಿಗಳಷ್ಟು ಸಂಬಳ ಜಾಸ್ತಿ ಬರುತ್ತದೆ. ವೆಟರಿನರಿ ಡಾಕ್ಟರುಗಳಿಗೆ 170 ರೂಪಾಯಿಗಳ ಬೇಸಿಕ್ ಸಂಬಳದಿಂದ 225 ರೂಪಾಯಿಗಳ ಬೇಸಿಕ್ ಸಂಬಳವಾಗಿದೆ. ಈ ರೀತಿ ಸಂಬಳವನ್ನು ಜಾಸ್ತಿ ಮಾಡಿರುವುದರ ಜೊತೆಗೆ ವೆಟರಿನರಿ ಡಾಕ್ಟರುಗಳ ಹೆಸರನ್ನು ಬದಲಾಯಿಸಿ ಈಗ ಅವರಿಗೆ ವೆಟರಿನರಿ ಸರ್ಜನ್ ಎಂಬುದಾಗಿ ಒಂದು ಹೊಸದಾಗಿ ಒಳ್ಳೆಯ ಹೆಸರನ್ನು ಕೊಟ್ಟಿದ್ದೇವೆ. ಇದರಿಂದ ಸರ್ಕಾರಕ್ಕೆ 20-22 ಲಕ್ಷ ರೂಪಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಗಳು ಜಾಸ್ತಿ ಖರ್ಚಾಗುತ್ತದೆ. ಬೇರೆ ಗ್ರ್ಯಾಜುಯೇಟುಗಳ ಹಾಗೆ ಈ ವೆಟರಿನರಿ ಗ್ರ್ಯಾಜುಯೇಟ್‌ಗಳೂ ಸಹ ಉತ್ಸಾಹದಿಂದ ಇರಬೇಕೆಂದು ಸರ್ಕಾರ ಈ ತೀರ್ಮಾನವನ್ನು ತೆಗೆದುಕೊಂಡಿದೆ. ಮಾನ್ಯ ಆರೋಗ್ಯ ಮಂತ್ರಿಗಳೂ ಸಹ ಟೆಕ್ನಿಕಲ್ ಗ್ರ್ಯಾಜುಯೇಟುಗಳಿಗೂ ಸಹ ಅಕ್ಕಪಕ್ಕದಲ್ಲಿರುವ ಮದ್ರಾಸ್ ಮತ್ತು ಇತರ ಪ್ರಾಂತಗಳಲ್ಲಿರುವಂತೆ ಸಂಬಳ ಸಾರಿಗೆ ಇರಬೇಕೆಂದು ಹೇಳಿದ್ದರು. ಆ ವಿಚಾರ ಸರ್ಕಾರದ ಗಮನದಲ್ಲಿತ್ತು. ಅದನ್ನು ಈಗ ಸರ್ಕಾರದವರು ಜಾರಿಗೆ ತಂದಿದ್ದಾರೆ.

ಕಡೆಯದಾಗಿ ಫ್ಯಾಮಿನ್‌ರಿಲೀಫ್ ವಿಷಯವಾಗಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಶ್ರೀ ರೇವಣ್ಣಸಿದ್ಧಪ್ಪನವರು ಬಹಳ ಕಾತುರವಾಗಿ ಆ ವಿಚಾರವನ್ನು ಕೇಳುವುದಕ್ಕೆ ಇಷ್ಟಪಟ್ಟಿದ್ದಾರೆ. ಆಹಾರ ಮಂತ್ರಿಗಳು ಆಹಾರ ಚರ್ಚೆಯ ಕಾಲದಲ್ಲಿ ಫ್ಯಾಮಿನ್ ವಿಷಯವಾಗಿ ಸರ್ಕಾರದವರು ಕೈಗೊಂಡಿರತಕ್ಕ ಅನೇಕ ಕೆಲಸಗಳನ್ನು ಹೇಳಿದ್ದಾರೆ. ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಅಭಾವ ಪರಿಸ್ಥಿತಿ ಬಂದಿದ್ದರಿಂದ ಈಗ ಫ್ಯಾಮಿನ್ ಹೆಡ್ಡಿನಲ್ಲಿ ಸುಮಾರು 50 ಲಕ್ಷ ರೂಪಾಯಿಗಳು ಖರ್ಚಾಗಿದೆ. ಮಾನ್ಯ ಸದಸ್ಯರಲ್ಲಿ ಒಂದು ಅರಿಕೆ. ಹಣ ಖರ್ಚಾಗಿರುವುದು ಹಿಂದಿನ ರೀತಿಯಲ್ಲಿ ಅಲ್ಲ. ಬಹಳ ಬದಲಾವಣೆಗಳಾಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಫ್ಯಾಮಿನ್ ರಿಲೀಫ್‌ಗೆ ಕೊಟ್ಟಿರುವುದು 5 ಅಥವಾ 6 ಲಕ್ಷ ರೂಪಾಯಿಗಳು. ಬೇರೆ ರೂಪದಲ್ಲಿ ಸುಮಾರು 20-30 ಲಕ್ಷ ರೂಪಾಯಿಗಳು ಅದೇ ಜಿಲ್ಲೆಗೆ ಹೋಗಿದೆ. ಅಲ್ಲಿ ಕಾಂಟೂರ್‌ಬಂಡಿಂಗ್ ಕೆಲಸ ಬಹಳ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಬಾವಿಗಳನ್ನು ಅಗೆಯುವುದಕ್ಕೆ ಇರಿಗೇಷನ್ ವೆಲ್ಸ್‌ಗಾಗಿ ಒಂದೊಂದು ಜಿಲ್ಲೆಗೆ 15-20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪಿ.ಡಬ್ಲ್ಯು.ಡಿ. ಮೈನರ್ ಇರಿಗೇಷನ್ ವರ್ಕ್ಸ್‌ಗೆ, ಕೆರೆಗಳ ನಿರ್ಮಾಣ ಕಾರ್ಯಗಳಿಗೆ, ಅರಣ್ಯಗಳನ್ನು ಬೆಳೆಸುವುದಕ್ಕೋಸ್ಕರ ಹೆಚ್ಚಿನ ಮೊಬಲಗನ್ನು ಈ ವರ್ಷದಲ್ಲಿ ಕೊಟ್ಟಿದ್ದಾರೆ. ಪಂಪುಸೆಟ್ಟುಗಳನ್ನೂ ಕೊಟ್ಟಿದ್ದಾರೆ. ಡಿ-ಸಿಲ್ಟ್ ಮಾಡಲು ಫೀಡರ್ ಚಾನಲ್ಲಿಗಾಗಿ ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ. ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ. ಆದರೆ ಹಿಂದಿನ ಫ್ಯಾಮಿನ್ ಕೋಡನ್ನೂ ಏಕೆ ನೋಡಲಿಲ್ಲವೆಂದು ಒಬ್ಬ ಮಾನ್ಯ ಸದಸ್ಯರು ಕೇಳಿದರು. I have not seen the Famine Code.

Sri C. J. MUCKANNAPPA.—The Government have come forward and said that the Famine Could be maintained.

Sri M. V. KRISHNAPPA.—We have never followed nor it is possible to follow the Famine Code.

ಹಿಂದಿನ ಫ್ಯಾಮಿನ್ ಕೋಡಿನಲ್ಲಿ ಕೊಟ್ಟಿರುವಹಾಗೆ ರಿಲೀಫ್‌ಕೊಟ್ಟರೆ ಅನೇಕರು ಸತ್ತುಹೋಗುತ್ತಾರೆ. ಎಲ್ಲಾ ಕಡೆಯೂ ಗಂಜೀಕೇಂದ್ರಗಳನ್ನು ತೆರೆಯಬೇಕಾಗಿತ್ತು. ಅದನ್ನುಬಿಟ್ಟು ಈಗ ಸರ್ಕಾರದವರು ಒಂದು ಪಾಲಿಸಿ ಮೇಲೆ ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡು ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಲ್ಲಿ ಪರಿಹಾರಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಇದುವರೆಗೆ ಈ ಬಾಬಿಗೆ ಹೆಚ್ಚಿಗೆ ಖರ್ಚುಮಾಡುತ್ತಾ ಇರಲಿಲ್ಲ. ಮುಂದಿನ ನಾಲ್ಕು ತಿಂಗಳುಗಳು ಬಹಳ ಕಷ್ಟಕರವಾದುವು; ಆದ್ದರಿಂದ ಎಲ್ಲೆಲ್ಲಿ ಏನೇನು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನೂ ತೆಗೆದುಕೊಳ್ಳುತ್ತಿದ್ದೇವೆ. ಈ ಬಾಬಿಗೆ ಕೇಂದ್ರ ಸರ್ಕಾರದವರು 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ನಮಗೆ ಇನ್ನೂ ಕೊಟ್ಟಿಲ್ಲ. ಶ್ರೀ ಯಾರ್ಡಿಯವರು ಇಲ್ಲಿನ ಪರಿಸ್ಥಿತಿಯನ್ನು ನೋಡಿ ಬಹಳ ಚೆನ್ನಾಗಿ ವರದಿಯನ್ನು ಕೊಟ್ಟಿದ್ದಾರೆ. ಬಹಳ ಸಮರ್ಪಕವಾಗಿ ಮೈಸೂರಿನ ಪರಿಸ್ಥಿತಿಯನ್ನು ಶಿಫಾರ್ಸುಮಾಡಿದ್ದಾರೆ. 3 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಮೈಸೂರಿನ ಹಣಕಾಸಿನ ಪರಿಸ್ಥಿತಿ ಸಮರ್ಪಕವಾಗಿಲ್ಲ. ಆದ್ದರಿಂದ ಕೇಂದ್ರಸರ್ಕಾರದವರು ಹೆಚ್ಚಿಗೆ ಮೈಸೂರಿಗೆ ಹಣ ಸಹಾಯಮಾಡಿದರೆ ಒಳ್ಳೆಯದು ಎಂಬುದಾಗಿ ಸೂಚನೆಕೊಟ್ಟಿದ್ದಾರೆ. ಅವರು ಆ ಸಹಾಯವನ್ನು ಇನ್ನೂ ಕೊಟ್ಟಿಲ್ಲ, ಕೊಡುತ್ತಾರೆ. ನಾವೂ ಕೂಡ ಸರ್ವಪ್ರಯತ್ನಗಳನ್ನು ಮಾಡಿ ಮುಂದೆ ಬರುವ 4-5 ತಿಂಗಳುಗಳಲ್ಲಿ ನಮ್ಮ ಜನಗಳು ಅಭಾವಕ್ಕೊಳಗಾಗದ ಹಾಗೆ ಮಾಡಲು ಯತ್ನಿಸುತ್ತಿದ್ದೇವೆ. ಪ್ರಾಣಹಾನಿ ಯಾವುದೂ ಆಗದ ಹಾಗೆ ಸರ್ಕಾರದವರು ಬಹಳ ಎಚ್ಚರಿಕೆಯಿಂದ ತ್ವರಿತವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ತಾಲ್ಲೂಕು ಲೆವೆಲ್ಲಿನಲ್ಲಿ ರಿಲೀಫ್ ಕಂಡಿಷನ್ಸ್ ಎಂದು ಹೊಸದಾಗಿ ಮಾಡಿದೆ. ಬಹುಶಃ ಮಾನ್ಯ ಸದಸ್ಯರುಗಳು ಈ ಅಧಿವೇಶನದ ನಂತರ ಮನೆಗೆ ವಾಪಸ್ಸು ಹೋಗುವಾಗ ತಂತಮ್ಮ ತಾಲ್ಲೂಕುಗಳಲ್ಲಿ ಏನೇನು ರಿಲೀಫ್ ಕಾಮಗಾರಿಗಳಾಗುತ್ತಿವೆಯೆಂಬುದನ್ನು ನೋಡಬಹುದು. ಈಗಾಗಲೇ ತಾಲ್ಲೂಕು ಲೆವೆಲ್ಲಿನಲ್ಲಿ ತಹಸೀಲ್‌ದಾರ್ ಬಿ. ಡಿ. ಒ. ಅಸೆಂಬ್ಲಿ ಸದಸ್ಯರು, ತಾಲ್ಲೂಕು ಬೋರ್ಡ್ ಚೇರ್‌ಮನ್, ಅವರ ಅಸಿಸ್ಟೆಂಟ್ ಇಂಜಿ

ನಿಯರ್, ಜೊತೆಗೆ ಅಸಿಸ್ಟೆಂಟ್ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಇವರೆಲ್ಲರೂ ತಿಂಗಳಿಗೆ ಒಂದುಸಾರಿ ಸೇರಿ ಈ ಸಂಧರ್ಭದಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಳ್ಳಬೇಕು, ಯಾವ್ಯಾವ ಕೆಲಸಗಳನ್ನು ಪ್ರತ್ಯೇಕವಾಗಿ ಕೂಡಲೇ ಪ್ರಾರಂಭಮಾಡಬೇಕೆಂದು ಕಮಿಟಿಯಲ್ಲಿ ತೀರ್ಮಾನ ಮಾಡಿದ್ದಾರೆ.

ಆ ವಿಚಾರದಲ್ಲಿ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಏನೇನು ಕೆಲಸವನ್ನು ತೆಗೆದುಕೊಳ್ಳಬೇಕು, ಯಾವ ಯಾವ ಕೆಲಸವನ್ನು ಇಂಡಿವಿಜುಯಲ್ ಆಗಿ ಪ್ರಾರಂಭ ಮಾಡಬೇಕೆಂಬ ವಿಷಯ ಕಮಿಟಿಯಲ್ಲಿ ತೀರ್ಮಾನವಾದಮೇಲೆ ಅದನ್ನು ಟಾಂಟಾಂ ಹೊಡೆಸುತ್ತೇವೆ. by beat of tom tom they must inform the people where they are going to start work and the nature of work, ಯಾವ ಯಾವ ಕೆಲಸ ಎಂಬುದನ್ನು ಪಟ್ಟಿ ಮಾಡಿ ಅದನ್ನು ತಾಲ್ಲೂಕು ಲೆವೆಲ್ಲಿನ ಕಮಿಟಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇಲ್ಲಿಂದ ಅಸೆಂಬ್ಲಿ ಮೀಟಿಂಗ್ ಮುಗಿಸಿಕೊಂಡು ಊರಿಗೆ ವಾಪಸ್ಸು ಹೋಗುವುದರೊಳಗಾಗಿ ಸಾಕಷ್ಟು ಕೆಲಸ ಸಿಕ್ಕುತ್ತದೆ. ಇದಲ್ಲದೆ ಬೇರೆ ಬೇರೆ ಇಲಾಖೆಗಳಲ್ಲಿ ಕೂಡ ಬೇರೆ ರೀತಿಯಲ್ಲಿ ಕೆಲಸಗಳನ್ನು ಮಾಡಿಸುವುದಕ್ಕಾಗಿ ಹಣವನ್ನು ಕೊಡುತ್ತಾರೆ.

ಇನ್ನು ನಾವು ಹೇಗಾದರೂ ಆಗಲೀ ಮಕ್ಕಳ ಆರೋಗ್ಯ ಕೆಡಬಾರದು ಎನ್ನುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಮಕ್ಕಳಿಗಾಗಿ 1,200 ಟನ್ ಮಿಲ್ಕ್ ಪೌಡರನ್ನು ನಮ್ಮ ರಾಜ್ಯಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ದಿರ್ಗತಿಕರು ಮತ್ತು ಮಕ್ಕಳಿಗೆ ಆಹಾರವನ್ನು ಹಂಚುವುದಕ್ಕಾಗಿ ಕೇಂದ್ರ ಸರ್ಕಾರ ದವರು ವಿದೇಶಗಳಿಂದ ಬಂದ ನೆರವಿನಿಂದ ನಮ್ಮ ಮೈಸೂರು ರಾಜ್ಯಕ್ಕೆ 4 ಸಾವಿರ ಟನ್ ಆಹಾರ ಧಾನ್ಯ ಮತ್ತು 1,200 ಟನ್ ಮಿಲ್ಕ್ ಪೌಡರನ್ನು ಒದಗಿಸಿದ್ದಾರೆ. ನಾವು ಇದನ್ನು ಉಪಯೋಗಿಸಿ ಕೊಂಡು ರಿಲೀಫ್ ಸೆಂಟರನ್ನು ಮಾಡಿ ಅದರ ಮೂಲಕ ನಿರ್ಗತಿಕರು, ಮಕ್ಕಳು ಮತ್ತು ಇಳಿವಯಸ್ಸಿನವರ ತಕ್ಕವರಿಗೆ ಹಂಚಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಅದು ದುರ್ವಿನಿಯೋಗ ಆಗದ ಹಾಗೆ, ಈಗ ನಮ್ಮ ರಾಜ್ಯದಲ್ಲಿ ಯಾರು ಜಮೀನಿಲ್ಲದೆ ಕಷ್ಟಪಡುತ್ತಿದ್ದಾರೆ, ಯಾರು ತೀರ ಕೇವಲ ಬಡವರಾಗಿದ್ದಾರೆ, ಮತ್ತು 60, 70 ವರ್ಷ ವಯಸ್ಸಾಗಿ ಅವರನ್ನು ಯಾರೂ ನೋಡಿಕೊಳ್ಳದೆ ಇರುವಂಥವರನ್ನು ಒಂದು ಲಿಸ್ಟು ಮಾಡಿ, ಅವರಿಗೆ ರೇಷನ್‌ಕಾರ್ಡ್ ಪ್ರಿಂಟ್ ಮಾಡಿಸಿಕೊಟ್ಟು, ಒಂದು ಲಕ್ಷ ಜನಗಳಿಗೆ ಆಹಾರಧಾನ್ಯವನ್ನು ಒದಗಿಸಬೇಕೆಂದೂ, ಮತ್ತು 6 ಲಕ್ಷ ಮಕ್ಕಳಿಗೆ ಹಾಲು ಮತ್ತು ಕೇಂದ್ರ ಸರ್ಕಾರದ ಹಾಗೂ ಕೇರ್ ಸಂಸ್ಥೆಯವರ ಸಹಾಯದಿಂದ ಮಧ್ಯಾಹ್ನದ ಉಪಹಾರ ವನ್ನೂ ಒದಗಿಸಬೇಕೆಂದೂ ನಾವು ತೀರ್ಮಾನವಾಡಿದ್ದೇವೆ. ಅದಕ್ಕಾಗಿ ಒಬ್ಬರು ಐ. ಎ. ಎಸ್. ಆಫೀಸರನ್ನು ನೇಮಕ ಮಾಡಿದ್ದೇವೆ.

ಇನ್ನು ಈಗ ಒಟ್ಟಿನಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಅಭಾವ ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಆ ಕೆಲಸಗಳನ್ನು ರೆವಿನ್ಯೂ ಇಲಾಖೆಯ ತಹಶೀಲ್ದಾರರು ಮಾಡಿಸಬೇಕೇ ಅಥವಾ ಬಿ. ಡಿ. ಓ. ಮಾಡಿಸಬೇಕೇ ಎನ್ನುವ ಒಂದು ತೊಂದರೆ ಬಂದು ಮೈಸೂರು ಜಿಲ್ಲೆಯಲ್ಲಿ ಅದಕ್ಕೆ ಒದಗಿಸಿದ್ದ ಹಣದಲ್ಲಿ ಹೆಚ್ಚಿಗೆ ಖರ್ಚಾಗಿಲ್ಲ. ಎಲ್ಲಾ ಕಡೆಗಳಲ್ಲೂ ತೊಂದರೆ ಬಾರದಹಾಗೆ ಎಷ್ಟೆಷ್ಟು ಕೆಲಸಗಳನ್ನು ಮಾಡಿಸಬೇಕೋ ಅಷ್ಟು ಮಾಡಿಸುವುದಕ್ಕೆ ಪ್ರಯತ್ನ ಮಾಡು ತ್ತೇವೆ. ಅದಕ್ಕೆ ಮಾನ್ಯ ಸದಸ್ಯರೆಲ್ಲರೂ ತಮ್ಮ ಸಹಕಾರವನ್ನು ನೀಡಬೇಕು. ಮುಂದೆ ಬರುವ ಪರಾಭವ ಸಂವತ್ಸರವು ಹಿಂದಿನ ಸಂವತ್ಸರವು ಬಿಟ್ಟುಹೋದ ಆಹಾರದ ಅಭಾವವನ್ನು ಪೂರ್ಣವಾಗಿ ಪರಾಭವಗೊಳಿಸುವುದು. ರಾಜ್ಯಕ್ಕೆ ಕಷ್ಟದ ಕಾಲವು ಹೋಗಿ ಸುಖ ಸಮೃದ್ಧಿಯ ದಿನಗಳು ಬರಲಿವೆ. ಈ ವರ್ಷ ಬುಧನು ರಾಜನಾಗಿದ್ದಾನೆ. ಮಂತ್ರಿಸ್ಥಾನದಲ್ಲಿಯೂ ಬುಧನೇ ಇದ್ದಾನೆ. ಸೈನ್ಯಾಧಿ ಪತಿಯೂ ಬುಧನೇ ಆಗಿದ್ದಾನೆ. ಆದ್ದರಿಂದ 12 ಕೊಳಗ ಮಳೆ ಬಂದು 10 ಕೊಳಗ ಬೆಳೆ ಆಗುತ್ತದೆ. ಮುಂದಿನವರ್ಷ ಬಹಳ ಒಳ್ಳೆಯ ವರ್ಷ ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ಯಾರೂ ಚಿಂತಿಸಬೇಕಾ ಗಿಲ್ಲ. ಮಾನ್ಯ ಸದಸ್ಯರು ನನ್ನ ಬೇಡಿಕೆಗಳಲ್ಲಿ ಒಂದು ಕಾಸನ್ನೂ ಕಟ್ ಮಾಡುವುದಕ್ಕೆ ಪ್ರಯತ್ನ ಮಾಡದೆ ಅವನ್ನು ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—The question is :

"That the respective sums not exceeding the amounts mentioned in Demands Nos. 2, 7, 8, 22, 33 and 42 moved by the Minister for Revenue be granted to defray the charges which will come in course of payment during the financial year ending 31st March 1967."

(*The motion was adopted.*)

(As directed by the Chair the motion for Demands for Grants voted by the House are reproduced below.)

DEMAND NO. 2.—LAND REVENUE.

9. *Land Revenue.*

"That a sum not exceeding Rs. 2,31,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Land Revenue ."

DEMAND NO. 7.—STAMPS.

14. STAMPS.

"That a sum not exceeding Rs. 11,49,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stamps'."

DEMAND NO. 8.—REGISTRATION.

15. *Registration Fees.*

"That a sum not exceeding Rs. 23,96,000 be granted to the Government to defray the charges which will come in course of payment during the financial year for the period ending 31st day of March 1967, in respect of 'Registration Fees'."

DEMAND NO. 22.—ANIMAL HUSBANDRY.

33. *Animal Husbandry.*

"That sum not exceeding Rs. 2,95,67,000 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

DEMAND NO. 33.—FAMINE.

64. *Famine Relief.*

"That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

DEMAND NO. 42.—COMPENSATION TO ZAMINDARS.

92. *Payment of Compensation to Land-holders, etc., on the abolition of Zamindari System.*

"That a sum not exceeding Rs. 36,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payment of Compensation to Land holders, etc., on the Abolition of Zamindari System'."

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಕಂದಾಯವನ್ನು ಮಾಫೀ ಮಾಡುವ ವಿಷಯವನ್ನು ಹೇಳಲಿಲ್ಲ.

ಅಧ್ಯಕ್ಷರು.—ಕಂದಾಯ ಮಾಫಿ ಮಾಡುವುದನ್ನು ಬರೆದುಕೊಡಿ. ನಾಳೆ ಅಪ್ರೊಪ್ರಿಯೇಷನ್ ಬಿಲ್ ಬಂದ ಸಮಯದಲ್ಲಿ ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

The House will now adjourn to reassemble tomorrow at 1 P.M.

The House adjourned at Fifteen Minutes past Six of the Clock to meet again at One of the Clock on Wednesday, the 30th March 1966.

WD 6715—GPB—500—4-7-66

MYSORE LEGISLATIVE ASSEMBLY

Wednesday, 30th March 1966.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

S. M. P. Centres in Ex-Bombay Karnatak Area.

*Q.—52. SRI SIDDAIAH KASHIMATH (Shirahatti).—

Will the Government be pleased to state :—

(a) the number of subsidised Medical Practitioners centres in the ex-Bombay Karnatak area at present ;

(b) what are the facilities given to them ?

A.—SRI K. NAGAPPA ALVA (Minister for Health).—

(a) *Ayurvedic*	*Unani*	*Allopathic*
105	1	36

(b) *Ayurvedic and Unani*:

1 Honorarium Rs. 130 p. m. for qualified S. M. Ps. and Rs. 80 for unqualified S. M. Ps.
2 Fixed Travelling Allowance of Rs. 37-50 P.M.
3 Contingencies of Rs. 5 p m.
4 Medicine Rs. 300 p a.
5 Dispensary Building by Village Panchayat.
6 They are allowed private practice.
7 They get 15 days C. L.
8 Furniture is supplied to all S. M. Ps. by the Panchayats or Taluk Boards.

Allopathic:

1 Honorarium at Rs. 150 p.m.
2 T. A. (fixed) at Rs. 37-50 p.m.
3 Grant for medicines and instruments at Rs. 500 p.a., and
4 Contingencies at Rs. 5 p.m.

ಶ್ರೀ ಸಿದ್ದಯ್ಯ ಕಾಶೀಮಠ.—ಇದರಲ್ಲಿ ಆಯುರ್ವೇದ ವಿದ್ಯಾರ್ಹತೆಯನ್ನು ಪಡೆದಿರುವವರಿಗೆ ಒಂದು ತಿಂಗಳಿಗೆ 120 ರೂಪಾಯಿಗಳ ಗೌರವ ಧನವನ್ನೂ ಹಾಗೂ ಅಲೋಪತಿಕ್ ವಿದ್ಯಾರ್ಹತೆಯನ್ನು ಪಡೆದಿರುವವರಿಗೆ ಒಂದು ತಿಂಗಳಿಗೆ 150 ರೂಪಾಯಿಗಳ ಗೌರವಧನವನ್ನೂ ಕೊಡುತ್ತಿದ್ದಾರೆ. ಆಯುರ್ವೇದದವರಿಗೆ ಒಂದು ವರ್ಷಕ್ಕೆ ಔಷಧಿ ಖರ್ಚಿಗಾಗಿ 300 ರೂಪಾಯಿಗಳನ್ನು ಕೊಡುತ್ತಿದ್ದಾರೆ ಅಲೋಪತಿಕ್ ಅವರಿಗೆ ಒಂದು ವರ್ಷಕ್ಕೆ ಔಷಧಿ ಖರ್ಚಿಗಾಗಿ 500 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ರೀತಿ ವ್ಯತ್ಯಾಸ ಮಾಡುವುದಕ್ಕೆ ಕಾರಣವೇನು ?

ಶ್ರೀ ನಾಗಪ್ಪ ಆಳ್ವ.—ಆ ವ್ಯತ್ಯಾಸ ಮೊದಲೇ ಇದ್ದದ್ದು, ಅದನ್ನು ಸರಿಪಡಿಸಬೇಕು.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಮೊನ್ನೆ ತಾನೆ ವೆಟರ್‌ನರಿ ಡಾಕ್ಟರುಗಳಿಗೆ ಸಂಬಳವನ್ನು ಜಾಸ್ತಿ ಮಾಡಿದ್ದಾರೆ. ಅದೇ ರೀತಿ ಎಸ್. ಎಂ. ಪಿ. ಸೆಂಟರುಗಳಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೂ ಕೂಡ ಅದೇ ರೀತಿಯಲ್ಲಿ ಅನರರಿಯಮ್ ಹೆಚ್ಚು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಎಸ್. ಎಂ. ಡಿ. ಸೆಂಟರುಗಳು ಬೊಂಬಾಯಿ ಕರ್ನಾಟಕದಲ್ಲಿ ಮಾತ್ರ ಇರುವುದು. ಸರ್ಕಾರದವರು ಈಗ ಅವರಿಗೆ ಸಂಬಳವನ್ನು ಕೊಡುತ್ತಿಲ್ಲ ಅವರಿಗೆ ಅನರರಿಯಮ್ ಮಾತ್ರ ಕೊಡುತ್ತಿದೆ. ಇದರ ವಿಷಯವನ್ನ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್ ಎಂ. ಗುರೆಡ್ಡಿ.—ಈಗ ಹಳ್ಳಿಗಳಲ್ಲಿರತಕ್ಕ ಎಸ್. ಎಂ. ಪಿ. ಕೇಂದ್ರಗಳಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳು ಬೇರೆ ಕಡೆ ಹೋಗಿ ಪ್ರೈವೇಟಾಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಆದ ಕಾರಣ ಅವರಿಗೆ ಹೆಚ್ಚಿನ ಅನುಕೂಲತೆಯನ್ನು ಮಾಡಿಕೊಟ್ಟು ಅವರು ಅಲ್ಲಿಯೇ ಉಳಿಯುವಂತೆ ಮಾಡಲು ಅವರಿಗೆ ಹೆಚ್ಚಿನ ಸಂಬಳವನ್ನ ಕೊಡುವುದನ್ನು ಸರ್ಕಾರ ವಿಚಾರ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಎಸ್. ಎಂ. ಪಿ. ಸೆಂಟರುಗಳಲ್ಲಿ ಕೆಲಸ ಮಾಡುವ ಡಾಕ್ಟರುಗಳಿಗೆ ಸ್ವಲ್ಪಮಟ್ಟಿಗೆ ಅನುಕೂಲ ಮಾಡಬೇಕೆನ್ನುವ ವಿಷಯ ಸರ್ಕಾರದ ಆಲೋಚನೆಯಲ್ಲಿದೆ ಅವರು ಮೊದಲು ಎಸ್. ಎಂ. ಪಿ. ಕೇಂದ್ರಗಳಲ್ಲಿ ಕೆಲಸ ಮಾಡಿ ಜನಗಳ ಸೇವೆ ಮಾಡಿ ಆಮೇಲೆ ಅವರು ಅದನ್ನು ಬಿಟ್ಟು ಹೋಗಿ ಬೇರೆ ಕಡೆಯಲ್ಲಿ ಎಲ್ಲಿ ಬೇಕಾದರೂ ಪ್ರೈವೇಟಾಗಿ ಪ್ರಾಕ್ಟೀಸ್ ಮಾಡಬಹುದು.

Sri R. S. HEGDE.—Are they not considered as Government Servants.

Sri K. NAGAPPA ALVA.—They are not regular Government servants.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಸದ್ಯದಲ್ಲಿ ಎಸ್. ಎಂ. ಪಿ. ಕೇಂದ್ರಗಳಲ್ಲಿ ಹೆಚ್ಚಿನ ಆರೋಗ್ಯ ಸವಲತ್ತುಗಳು ಸಿಕ್ಕುತ್ತಾ ಇರುವುದರಿಂದ ಅವುಗಳಿಗೆ ಹೆಚ್ಚಿನ ರೀತಿಯ ಪ್ರೋತ್ಸಾಹ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಎಸ್. ಎಂ. ಪಿ. ಕೇಂದ್ರಗಳನ್ನು ನಿಧಾನವಾಗಿ ಸ್ವಲ್ಪ ಕಡಿಮೆ ಮಾಡಬೇಕೆಂಬುದು ಸರ್ಕಾರದ ಅಭಿಪ್ರಾಯ ಇದೆ. ತಾಲ್ಲೂಕು ಬೋರ್ಡು ಮತ್ತು ಇತರ ಸಂಸ್ಥೆಗಳ ಮೂಲಕ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಮಾಡಿ ಅವುಗಳ ಮುಖಾಂತರ ಜನಗಳಿಗೆ ಸರಿಯಾದಂತಹ ಅನುಕೂಲತೆಗಳನ್ನು ಒದಗಿಸಬೇಕೆಂಬುದು ಸರ್ಕಾರದ ಯೋಚನೆಯಲ್ಲಿ ಇದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ರೈಮರಿ ಹೆಲ್ತ್ ಯೂನಿಟ್‌ಗಳು ಎಷ್ಟು ಬೇಕೋ ಅಷ್ಟನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದ ರಿಂದ ಎಸ್. ಎಂ. ಪಿ. ಕೇಂದ್ರಗಳಿಗೆ ಪ್ರೋತ್ಸಾಹ ಕೊಡುವುದು ಉಚಿತವಲ್ಲದೆ ? ಒಂದು ವೇಳೆ ತಾವು ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ತೆರೆಯುವುದಾದರೆ ತೀವ್ರವಾಗಿ ಎಲ್ಲಾ ಕಡೆಗಳಲ್ಲಿಯೂ ಅವುಗಳನ್ನು ತೆರೆಯುವ ಅಭಿಪ್ರಾಯ ಇದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಎಲ್ಲಾ ಕಡೆಗಳಲ್ಲೂ ತೆರೆಯುವುದಕ್ಕೆ ಆಗುವುದಿಲ್ಲ. ನಮ್ಮ ಸಂಸ್ಥಾನದಲ್ಲಿ 265 ಬ್ಲಾಕುಗಳಿವೆ. ಆದ್ದರಿಂದ 265 ಬ್ಲಾಕುಗಳಿಗೂ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಎಸ್. ಪಿ. ಫಾಯದೆ.—ಈಗ ಸಂಸ್ಥಾನದಲ್ಲಿ ಎಲ್ಲಾ ಕಡೆಗಳಲ್ಲೂ ಸಾಕಷ್ಟು ಪ್ರೈಮರಿ ಹೆಲ್ತ್ ಯೂನಿಟ್‌ಗಳು ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ಕಡೆಗಳಲ್ಲಿ ಕಡಿಮೆ ಇದೆ. ಎಲ್ಲಿ ಕಡಿಮೆ ಇದೆಯೋ ಅಲ್ಲಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಆಯುರ್ವೇದ ಮತ್ತು ಅಲೋಪತಿಕ್ ಬೇರೆ ಬೇರೆ ಇದೆ. ಆಯುರ್ವೇದ ಡಾಕ್ಟರಾಗಿರುವವರು ಅಲೋಪತಿಕ್‌ನಲ್ಲಿಯೂ ತರಪೇತಿಯನ್ನು ಪಡೆದಿರುತ್ತಾರೆ. ಆದ್ದರಿಂದ ಅಂಥವರು ಆಯುರ್ವೇದ ಮತ್ತು ಅಲೋಪತಿಕ್ ಎರಡರಲ್ಲಿಯೂ ಔಷಧಿಯನ್ನು ಕೊಡುವಂತ ಎರಡನ್ನೂ ಸೇರಿಸಿ ಅವರಿಗೆ ಹೆಚ್ಚಿನ ಸಹಾಯ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಎರಡನ್ನೂ ಒಂದೇ ಕೇಡರ್‌ನಲ್ಲಿ ತರುವುದಕ್ಕೆ ಸಾಧ್ಯವಿಲ್ಲ. ಆಯುರ್ವೇದ ಕ್ವಾಲಿಫಿಕೇಷನ್ ಇರತಕ್ಕವರು ಆಯುರ್ವೇದ ಸೆಂಟರಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಅಲೋಪತಿಕ್‌ನಲ್ಲಿ ಕ್ವಾಲಿಫಿಕೇಷನ್ ಇರುವವರು ಅಲೋಪತಿಕ್ ಸೆಂಟರಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಯಾರು ಯಾರಿಗೆ ಅಲೋಪತಿಕ್ ಕ್ವಾಲಿಫಿಕೇಷನ್ ಇದೆಯೋ ಅವರು ಬೇಕಾದರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ.

Sri R. S. HEGDE.—Now the S. M. Ps. have outlived their utility in view of the fact that so many Health centres and Primary Health units have been established. Will the Government try to improve their conditions ?

Sri K. NAGAPPA ALVA.—Where requests come from the Taluk Boards and the people we are prepared to convert them and even improve those centres.

ಶ್ರೀ ಸಿದ್ದಯ್ಯ ಕಾಶೀಮಠ.—ಇದರಲ್ಲಿ Furniture is supplied to all S. M. Ps. by the Panchayats or Taluk Boards ಎಂದು ಇದೆ. ಆದರಿಂದ ಈಗಲಾದರೂ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಫರ್ನಿಚರ್ ಸಪ್ಲೈ ಮಾಡುವುದಕ್ಕಾಗಿ ಪ್ರತ್ಯೇಕವಾಗಿ ಗ್ರಾಂಟ್ ಕೊಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಪ್ರತ್ಯೇಕವಾಗಿ ಕೊಡುವುದಿಲ್ಲ. ಅವರಿಗೆ ಎಷ್ಟೆಷ್ಟು ಫರ್ನಿಚರ್‌ಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡುವುದು ಅವರ ಜವಾಬ್ದಾರಿ.

Sanctioning of a Hospital to Doddebemmathi

*Q.—312. **Sri G. A. THIMMAPPA GOWDA** (Arakalgud).—

Will the Government be pleased to state :—

(*a*) whether the people of Doddebemmathi, Mallipatna Hobli, Arakalgud Taluk have requested the Government to sanction a hospital to their place ;

(*b*) if so, the action taken by them in this regard ?

A.—**Sri K. NAGAPPA ALVA** (Minister for Health).—

(*a*) Yes.

(*b*) It is under consideration.

Sri G. A. THIMMAPPA GOWDA.—The matter is pending for a long time. Since all the conditions required are satisfied, will the Government be pleased to accord sanction and may I know why it is pending ?

Sri K. NAGAPPA ALVA.—Sir, the pending question is the sanction of that unit. We wanted the Resolution of the Taluk Board, and according to the information that I have received, the Taluk Board have sent the Resolution, but it has not come up to the Government level. As soon as we get that Resolution, we will sanction that unit.

Sri C. R. RANGE GOWDA.—Sir, I have been authorised to put the Question.

Mr. SPEAKER.—Yes.

Benefits of Pension, etc., to Sweepers and Scavangers.

* *Q.*—101. Sri C. R. RANGE GOWDA (Magadi) [on behalf of SRI R. N. LAKSHMI PATHI (Gauribidanur)].—

Will the Government be pleased to state :—

(*a*) whether sweepers and scavangers working in Municipalities and Village Panchayats in the State or getting all the benefits of pension, etc., as in the case of Government Servants ;

(*b*) if not, the steps Government propose to take to extend these benefits to the said menials ?

A.—Sri R. M. PATIL (Minister for Development, Panchayat Raj and Municipal Administration).—

(*a*) Yes, in some Municipalities only.

(*b*) The question is under consideration in respect of Municipalities.

Sri C. R. RANGE GOWDA.—May I know how many Municipalities have given this benefit to Sweepers and Scavangers ?

Sri R. M. PATIL.—The following Municipalities have given the benefits of pension to Sweepers and Scavangers :

1 Municipalities in Gulbarga Division,
2 Belgaum City Municipal Council,
3 Vijayapura Municipality,
4 Bagalkot Municipality,
5 Karwar Municipality,
6 Kumta Municipality,
7 Honnavar Municipality,
8 Hubli and Dharwar Corporation.

The menials working in other Municipalities are not getting these benefits.

Sri C. R. RANGE GOWDA.—Are there any recruitment rules to these Scavangers and Sweepers ?

